“ನೀತಿಗಾಗಿ ಎಚ್ಚರಗೊಳ್ಳಿರಿ, ಪಾಪ ಮಾಡಬೇಡಿರಿ ; ಯಾಕೆಂದರೆ
ಕೆಲವರಿಗೆ ದೇವರ ವಿಷಯವಾದ ಜ್ಞಾನವೇ ಇಲ್ಲ...”

1 ಕೊರಿಂಥದವರಿಗೆ 15 : 34

# ದೇವರ ಪುತ್ರರೇ
# ಪಾಪ ಮಾಡಬೇಡಿರಿ

ಬರೆದವರು :

ಅಲೆಕ್ಸ್ ಸ್ವಾರ್ಟ್ಸ್ ಮತ್ತು ಬೆಂಜಮಿನ್ ಸ್ವಾರ್ಟ್ಸ್

ಕ್ರಿಸ್ತನು

“...ಕ್ರಿಸ್ತ ಯೇಸುವಿನಲ್ಲಿ ಪ್ರತಿಯೊಬ್ಬನನ್ನು ಪರಿಪೂರ್ಣನನ್ನಾಗಿ ಮಾಡುವಂತೆ ಎಚ್ಚರಿಸುತ್ತಾ ಎಲ್ಲಾ ಜ್ಞಾನದಲ್ಲಿ
ಪ್ರತಿಯೊಬ್ಬನಿಗೂ ಬೋಧಿಸುತ್ತಾ ನಾವು ಆತನನ್ನು ಸಾರುವವರಾಗಿದ್ದೇವೆ.”

ಕೊಲೋಸ್ಸೆಯವರಿಗೆ 1 : 28

# ದೇವರ ಪುತ್ರರೇ

# ಪಾಪ ಮಾಡಬೇಡಿರಿ

ಬರೆದವರು :
ಅಲೆಕ್ಸ್ ಸ್ವಾರ್ಟ್ಸ್ ಮತ್ತು ಬೆಂಜಮಿನ್ ಸ್ವಾರ್ಟ್ಸ್

infosinnot@gmail.com
www.sinnot.org

**ದೇವರ ಪುತ್ರರೇ ಪಾಪ ಮಾಡಬೇಡಿರಿ**

ಗ್ರಂಥಕರ್ತನ ಹಕ್ಕು © : ಅಲೆಕ್ಸ್ ಸ್ವಾರ್ಟ್ಸ್

ಗ್ರಂಥಕಾರನ ಹಕ್ಕನ್ನು ಭದ್ರಪಡಿಸಿದೆ. ಈ ಗ್ರಂಥದ ಯಾವುದೇ ಭಾಗವನ್ನು ಪುನರುತ್ಪತ್ತಿಯೇ ಆಗಲೀ ಅಥವಾ ಸ್ಥಳಾಂತರ ಮಾಡುವಿಕೆಯೇ ಆಗಲಿ ಅಥವಾ ಯಾವುದೇ ಉದ್ದೇಶಪೂರ್ವಕವಾಗಿ, ವಿದ್ಯುತ್ ಉಪಕರಣಗಳನ್ನಾಗಲೀ, ಯಂತ್ರಗಳನ್ನಾಗಲೀ ಬಳಸಕೂಡದು ; ಫೋಟೋ ಪ್ರತಿಗಳನ್ನೂ ಕೂಡಾ ಮಾಡಬಾರದು ; ದಾಖಲೆ ಮಾಡುವುದಾಗಲೀ, ಅಥವಾ ಯಾವುದೇ ಮಾಹಿತಿಯ ಸಂಗ್ರಹಣ ಮತ್ತು ಉದ್ಧಾರ ಮಾಡುವುದೇ ಆಗಲಿ, ಪ್ರಕಟನಾಕಾರನ ಅನುಮತಿ ಲಿಖಿತ ರೂಪದಲ್ಲಿ ಇಲ್ಲದೆ ಹೋದರೆ ಮಾಡಬಾರದು.

ಪ್ರಕಟನಕಾರ : ಅಲೆಕ್ಸ್ ಸ್ವಾರ್ಟ್ಸ್

Alex Swarts
Email: infosinnot@gmail.com
www.sinnot.org

First Print: December 2019

ಐ.ಎಸ್.ಬಿ.ಎನ್.ಆರ್. 978-0-6399901-0-1

ಎಲ್ಲಾ ಪ್ರಾಮುಖ್ಯತೆ (ಮತ್ತು ಆವರಣ ಚಿನ್ಹೆಗಳು) ಗ್ರಂಥಕರ್ತನಿಂದಾಗಿವೆ.

Cover design: Mariaan Lock (South Africa)
ಭಾಷಾಂತರ : ಸುಂದರ್ ಬಿ. ದಿವಾಕರ್, ಕರ್ನಾಟಕ, ಭಾರತ
ಸಂಪಾದಕರು : ಜಾನ್, ಕರ್ನಾಟಕ, ಭಾರತ
ಅಚ್ಚಕ್ಷರಗಳನ್ನು ಬರೆದವರು : ಅಲೆಕ್ಸ್ ಸ್ವಾರ್ಟ್ಸ್
ವಿತರಿಸುವವರು : ಜಾನ್, ಕರ್ನಾಟಕ, ಭಾರತ

## ಭಾಗ –1

**1.ಪ್ರಥಮ ಪುರುಷ ಆದಾಮನು** **1**
ಒಳ ಮನುಷ್ಯನು
ಪ್ರಾಣದ ನಿಯಮ
ಆತ್ಮನ ನಿಯಮ
ಹೊರ–ಮನುಷ್ಯ
ಪ್ರಾಕೃತಿಕ ದೇಹದ ನಿಯಮ
ಪ್ರಾಣವು ಆಯ್ಕೆ ಮಾಡಬೇಕಾಗಿತ್ತು
ಸೈತಾನನು ಮನುಷ್ಯನನ್ನು ತನಗೆ ವಿದೇಯನಾಗಲು ಶೋಧಿಸಿದನು
ಒಳ–ಮನುಷ್ಯನು ಕೂಡಾ ಕೆಟ್ಟವನಾದನು
ಪಾಪ ಮತ್ತು ಮರಣದ ನಿಯಮ
ಪಾಪವು ಮನುಷ್ಯರನ್ನು ಭ್ರಷ್ಟರನ್ನಾಗಿಸುತ್ತದೆ
ಆದಾಮನ ಸಂತತಿ
ಜಾತಿಗಳು ಮತು ಮಾನವತ್ವಗಳು
ಸಾರಂಶ

**2. ಎರಡನೇ ಮನುಷ್ಯ ಕ್ರಿಸ್ತನು** **11**
ದೇವರ ನಿಯಮ ಪಾಪವನ್ನು ಪ್ರಕಟಪಡಿಸುತ್ತದೆ
ಯೇಸು "ಮಾಂಸದಾರಿ"ಯಾಗಿ ಬಂದನು
ಯೇಸು ಆಯ್ಕೆ ಮಾಡಬೇಕಾಗಿತ್ತು
ಮೊದಲನೇ ದೇಹವನ್ನು ನಾಶಗೊಳಿಸಬೇಕಾಯಿತು
ಪಾಪಕ್ಕೆ ತೀರ್ಪಾಯಿತು ಮತ್ತು ದೇಹ ನಾಶವಾಯಿತು
ಎರಡನೇ ದೇಹದ ಸೃಷ್ಟಿ
ಪಾಪದಿಂದ ಬಿಡುಗಡೆ
ಯೇಸು–ಕರ್ತನು ಮತ್ತು ಕ್ರಿಸ್ತನು
ವಿಧೇಯತೆ
ಸಾರಾಂಶ

**3.ಕ್ರಿಸ್ತನ ವಾಸ್ತವೀಕತೆ** **17**
ಯೇಸು ದೇವರಿಗಾಗಿ ಮತ್ತು ತನಗಾಗಿ ಏನು ಮಾಡಿದನು
ಶಿಲುಬೆ
ದೇಹ
ಒಳ–ಮನುಷ್ಯ
ದೇವರು ಮಾನವ ಕುಲಕ್ಕಾಗಿ ಏನು ಮಾಡಿದನು
ಕೃಪೆ
ಪರಿಶುದ್ದಾತ್ಮ
ಕುರಿಮರಿ
ಯೇಸುವಿನ ದೇಹ ಪಾಪದಿಂದ ಸ್ವತಂತ್ರತೆಯನ್ನು ಉಂಟುಮಾಡುತ್ತದೆ.
ಯೇಸುವಿನ ರಕ್ತ ಕ್ಷಮಾಪಣೆಯನ್ನುಂಟು ಮಾಡುತ್ತದೆ
ಸಾರಾಂಶ

**ಸಮಾಪ್ತಿ**

**ತಿರುಗಿ ಹುಟ್ಟುವ ತತ್ವ** **25**
ಯೇಸು ತಿರುಗಿ–ಹುಟ್ಟಬೇಕಾಯಿತು
ನೀನು ತಿರುಗಿ–ಹುಟ್ಟಬೇಕು
ನಿನ್ನನ್ನು ನೀನು ಪರಿಕ್ಷಿಸಿಕೊ
ನೀನು ಪವಿತ್ರಾತ್ಮನನ್ನು ಸ್ವೀಕರಿಸಿದ್ದೀಯ ?
ನೀನು ಪಾಪ ಮಾಡುವುದನ್ನು ನಿಲ್ಲಿಸಿದ್ದೀಯಾ ?

## ಭಾಗ–2

**4. ರಕ್ಷಣೆಯ ಮಾರ್ಗ** **31**
ಈ ಲೋಕ
ಜಾತಿಯ ನಿಷ್ಪ್ರಯೋಜಕತೆ
ಸೈತನಾನಿಂದಲೂ ಮತ್ತು ಪಾಪದಿಂದಲೂ ಬಿಡುಗಡೆ– ಯಾಗುವುದು ವಾಸ್ತವ, ಒಂದು ಜಾತಿಯಲ್ಲ
ಹೊಸದಾಗಿ ಹುಟ್ಟುವಿಕೆ
ಪರಿಶುದ್ದನಾಗುವಿಕೆ
ನಿತ್ಯ ಜೀವ
ಸಾರಂಶ

**5. ರಕ್ಷಣೆಯ ಮಾದರಿ** **39**
ಐಗುಪ್ತದಲ್ಲಿ ದಾಸತ್ವ
ರಕ್ಷಣೆಯ ಹಂತಗಳು
ಮೊದಲನೇ ಹಂತ: ಐಗುಪ್ತದಿಂದ ಬಿಡುಗಡೆ
ಎರಡನೇ ಹಂತ: ಅರಣ್ಯದಲ್ಲಿ ಶುದ್ದಿಕರಣ
ಮೂರನೇ ಹಂತ: ಪರಿಶುದ್ದ ದೇಶ
ಸಾರಂಶ

**6. ನಂಬಿಕೆ ಮತ್ತು ವಿದೇಯತೆ** **47**
ಪಾಪದ ದೇಹದಲ್ಲಿ
ನಂಬಿಕೆ
ಆತ್ಮನಲ್ಲಿ
ವಿಧೇಯತೆ
ಕ್ರಿಸ್ತನ ದೇಹದಲ್ಲಿ
ಒಬ್ಬ ದೇವಪುತ್ರನು ಪಾಪ ಮಾಡುವುದಿಲ್ಲ
ಸಾರಂಶ

**ಸಾಮಾಪ್ತಿ**

**ಸಭೆ** **55**
ಸಭೆ (ಕಾನಾನ್)
ಸಭೆಯ ಕ್ರಿಸ್ತನ ದೇಹ
ನಿನ್ನನ್ನು ನೀನು ಪರಿಕ್ಷಿಸಿಕೊ

## ಭಾಗ –3


**7 ದೇವರು ಮನುಷ್ಯನಲ್ಲಿ ಪ್ರಕಟವಾದನು** **59**
ದೇವರು ತನ್ನನ್ನು ತಾನು ಮೂರು ವ್ಯಕ್ತಿಗಳಲ್ಲಿ ತೋರಿಸಿಕೊಂಡನು
ತಂದೆ
ಪವಿತ್ರಾತ್ಮನು
ವಾಕ್ಯವು
ಮನುಷ್ಯನ ಸೃಷ್ಟಿ
ಒಂದು ಕುಟುಂಬದ ಘಟಕವನ್ನುಂಟುಮಾಡಿದ್ದು
ಗಂಡನಿಗೂ, ಹೆಂಡತಿಗೂ ಮತ್ತು ಮಗನಿಗೂ ಇರುವ ಸಂಬಂಧ
ಮಾನವನ ಸೃಷ್ಟಿಯ ಕ್ರಮ
ಮನುಷ್ಯನ ಪ್ರಾಣ (ಗಂಡನು)
ಮನುಷ್ಯನ ಆತ್ಮ (ಹೆಂಡತಿ)
ಮನುಷ್ಯನ ಪ್ರಾಕೃತಿಕ ದೇಹ (ಮಗು)
ಮನುಷ್ಯನು ಪರಿಪೂರ್ಣನಾಗಿ ಉಂಟುಮಾಡಲ್ಪಟ್ಟನು
ಸಾರಂಶ

**8 ಮನುಷ್ಯನು ಬಿದ್ದುಹೋದದ್ದು** **67**
ಆತ್ಮ ಮತ್ತು ಪ್ರಾಣಗಳು ಬಿದ್ದದ್ದು
ದೇಹವು ಬಿದ್ದುಹೋದದ್ದು
ಮನುಷ್ಯನ ಸಂತತಿ
ಬೀಳುವುದರಿಂದಾದ ಪರಿಣಾಮಗಳು
ಒಳ್ಳೆ ಕೆಟ್ಟದರ ತಿಳುವಳಿಕೆ
ಅನೀತಿಯ ಧನ
ಸಾರಂಶ

**9 ಲೋಕ ರಕ್ಷಕ** **75**
ಪ್ರಪಂಚ
ಯೇಸು ಸೈತಾನನನ್ನು ಸೋಲಿಸಿದನು
ಯೇಸು ಪಾಪದ ದೇಹವನ್ನು ನಾಶಪಡಿಸಿದನು
ಯೇಸು ಮಾನವ ಕುಲದ ರಕ್ಷಕ
ಸಾರಂಶ

**ಸಮಾಪ್ತಿ**

**ಹೆಸರುಗೊಂಡವರೆಲ್ಲರ ಮೇಲಿನ ಹೆಸರು** **81**
ಯೇಸು ಈ ಲೋಕದ ಕರ್ತನು
ಮನುಷ್ಯನಿಗಾಗಿ ದೇವರ ಏರ್ಪಾಟಿನ ಹಂಚಿಕೆ
ಶಾಶ್ವತವಾಗಿ ಜೀವಿಸಲು ಮೊದಲೇ ಗೊತ್ತುಮಾಡಿದ್ದು
ದೈವೀಕ ಸಮಾಜವಾಗಬೇಕೆಂದು ಮೊದಲೇ ಗೊತ್ತು ಮಾಡಿದ್ದು
ಮನುಷ್ಯನು ಬಿದ್ದುಹೋದದ್ದು
ಸಾಯುವದನ್ನು ಮುಂದಾಗಿ ಗೊತ್ತು ಮಾಡಿತ್ತು
ಭಕ್ತಿ ಹೀನ ಸಮಾಜ ಆಗುವುದಕ್ಕೆ ಮುಂದಾಗಿ ಗೊತ್ತು ಮಾಡಿದ್ದು
ಮನುಷ್ಯನ ಪುನಃ ಸ್ಥಾಪನೆ
ನಿನ್ನನ್ನು ನೀನು ಪರೀಕ್ಷಿಸಿಕೊ


## ಭಾಗ –4


**10 ದೇಹ, ಪ್ರಾಣ ಮತ್ತು ಆತ್ಮಗಳ ರಕ್ಷಣೆ** **89**
ದೇಹ
ಪ್ರಾಣ
ಆತ್ಮನು
'ಶರೀರಭಾವದಲ್ಲಿ' (ಐಗುಪ್ತಕ್ಕೆ ಅನುಗುಣವಾಗಿದೆ)
ದೇಹದ ರಕ್ಷಣೆ
ಆತ್ಮನಲ್ಲಿ (ಸಿನ್ ಅರಣ್ಯಕ್ಕೆ ಅನುಗುಣವಾಗಿದೆ)
ನೂತನ ಮನಸ್ಸು
ಆತ್ಮನ ರಕ್ಷಣೆ
ಕ್ರಿಸ್ತನಲ್ಲಿ
ಜೀವನದಲ್ಲಿ ಆಳ್ವಿಕೆ ಮಾಡಿರಿ
ಪಾಪಿಗಳು ಮತ್ತು ಐಶ್ವರ್ಯವು
ಸಾರಂಶ

**11 ವಿಶ್ವಾಸದಿಂದ ವಿಶ್ವಾಸಕ್ಕೆ** **99**
ವಿಶ್ವಾಸದ ಹಂತಗಳು
ವಿಶ್ವಾಸದ ಮೊದಲನೇ ಹಂತದಲ್ಲಿ
ನಂಬಿಕೆಯ ಎರಡನೇ ಹಂತದಲ್ಲಿ
ಒಳ ಮನುಷ್ಯನನ್ನು ಪರಿಶುದ್ಧಾನನ್ನಾಗಿಸುವಿಕೆ
ಮನಸ್ಸನ್ನು ನೂತನ ಪಡಿಸುವಿಕೆ
ಆತ್ಮನು ರೂಪಾಂತರಗೊಳ್ಳುವಿಕೆ
ದೇಹದ ವಿಮೋಚನೆ
ಧನ
ಲೋಕ
ಮಾನವನ ಹಕ್ಕುಗಳು
ದೆವ್ವಗಳ ಕಾರ್ಯಗಳು
ಸಾರಂಶ

**12 ಹಕ್ಕಲು ಆಯುವುದು** **115**
ತಿರಿಗಿ ಹುಟ್ಟಿದ ವಿಶ್ವಾಸಿಗಳು ಪಾಪ ಮಾಡುವುದೇಕೆ ?
ಕ್ಷಮಾಪಣೆ ಯಾಗಿದೆ ಎಂಬದಕ್ಕೆ ನಿದರ್ಶನವೇನು?
ಕ್ರಿಸ್ತನಲ್ಲಿರುವ ಉನ್ನತವಾದ ಕರೆ
ದೇವರ ನಿಯಮಕ್ಕೆ ಪ್ರತಿಯಾಗಿ ಸ್ವಾತಂತ್ರ್ಯದ ನಿಯಮ
ಕ್ರಿಸ್ತನ ವಿಷಯವಾದ ಬೋಧನೆ
ಬೇರೊಂದು ನಿಯಮ
ಮನಸ್ಸಿನ ನಿಯಮ
ದೇವರ ವಾಕ್ಯದಲ್ಲಿ ನಂಬಿಕೆ
ಸಾರಂಶ

**ಸಮಾಪ್ತಿ :**

**ಜಯಪ್ರದ ಜೀವನ ನಡೆಸಿರಿ** **137**
ಶುದ್ಧೀಕರಣವಾಗುವಾಗ ನೀನು ನಿರೀಕ್ಷಿಸಬಹುದಾದ ಅನುಭವಗಳು

**ಯೇಸು ಕ್ರಿಸ್ತನು ಅಸ್ತಿವಾರವಾಗಿದ್ದಾನೆ** **143**
ಕರಪತ್ರವು ಇದನ್ನೂ ಕೂಡ ವಿವರಿಸುವುದು
ಎರಡು ಕರಪತ್ರಗಳಿವೆ, ಅವುಗಳನ್ನು ನೀನು ಕತ್ತರಿಸಿ ಮಡಚಿಡು,

# ಮುನ್ನುಡಿ :

'ದೇವರ ಪುತ್ರರೇ ಪಾಪ ಮಾಡಬೇಡಿರಿ' ಎಂಬ ಈ ಪುಸ್ತಕ ವೈಯುಕ್ತಿಕ ಅಧ್ಯಯನದ ಮಾರ್ಗದರ್ಶಿ. ಅದು ಕ್ರೈಸ್ತರಿಗೆ ಮಾರ್ಗ ನಿರ್ದೇಶ ಮಾಡುವಂಥದ್ದಾಗಿದೆ. ದೇವರ ಪ್ರತಿಯೊಬ್ಬ ಮಗನೂ ಪಾಪ ಮಾಡದ ದೇವರ ಮಗನಾಗಲು ಕರೆಯಲ್ಪಟ್ಟಿದ್ದಾನೆ. ಈ ಪುಸ್ತಕದಲ್ಲಿ ಕ್ರಿಸ್ತನಲ್ಲಿ ಇನ್ನೂ ಮಗುವಾಗಿರುವಂತವನು ಅರ್ಥ ಮಾಡಿಕೊಳ್ಳಬೇಕಾಗಿರುವಂತ ಮೂಲಭೂತವಾದ ಸತ್ಯಾಂಶಗಳನ್ನು ವಿವರಿಸಲಾಗಿದೆ ; ಅವನು ಅಥವಾ ಅವಳು ಒಳಗೆ ಜೀವಿಸುವ ಪವಿತ್ರಾತ್ಮನೊಂದಿಗೆ ಪೂರ್ತಿಯಾಗಿ ಬೆಳೆಯಬೇಕಾದರೆ ನಂಬತಕ್ಕಂತ ಮತ್ತು ಅನ್ವಯಿಸಿಕೊಳ್ಳಬೇಕಾದಂತವುಗಳೇ.

ಈ ಅಧ್ಯಯನ ಮಾರ್ಗದರ್ಶಿಯ ಅನುಕ್ರಮಣಿಕೆಯು ಸಭೆಗಾಗಿ ದೇವರ ಚಿತ್ತವನ್ನೂ ಪ್ರಕಟಪಡಿಸುತ್ತದೆ. ದೇವರ ಸುವಾರ್ತೆ, ಕ್ರಿಸ್ತನ ಸುವಾರ್ತೆ ಮತ್ತು ಪರಿಶುದ್ಧಗೊಳಿಸುವ ವಿಧಾನ ರೇಖಾಚಿತ್ರಗಳ ವ್ಯಾಖ್ಯಾನ ವಿವರಗಳ ಮೂಲಕ ಮತ್ತು ಸತ್ಯವೇದದ ಮೂಲಕ ದೇವರಿಗೆ ತನ್ನ ಮಕ್ಕಳ ಮೂಲಕ ಏನು ಬೇಕೋ ಅದನ್ನು ವಿವರಿಸುವುದಾಗಿದೆ.

ಒಬ್ಬ ವಿದ್ಯಾರ್ಥಿ ಈ ಸತ್ಯಾಂಶಗಳನ್ನು ಅಧ್ಯಯನ ಮಾಡುವುದರಿಂದ ಮತ್ತು ತನ್ನ ದೈನಂದಿನ ಜೀವನಕ್ಕೆ ಅನ್ವಯಿಸಿಕೊಳ್ಳುವುದರಿಂದ ದೇವರ ವಾಕ್ಯದಲ್ಲಿರುವ ನಂಬಿಕೆಯನ್ನು ಅನುಭವದಿಂದ ತಿಳಿದುಕೊಳ್ಳುವನು ಮತ್ತು ಕ್ರಿಸ್ತನಲ್ಲಿ ಬೆಳೆಯುವನು. ತಂದೆಯೊಂದಿಗೆ ವೈಯುಕ್ತಿಕ ಅನುಬಂಧ ಬೆಳೆದಂತೆಲ್ಲಾ ಪವಿತ್ರಾತ್ಮನ ಮೂಲಕ ಅವನು ಅಥವಾ ಅವಳು ಮಗನಲ್ಲಿರುವ ದೇವರ ಸ್ವಭಾವದೊಂದಿಗೆ ಪಾಲು ತೆಗೆದುಕೊಳ್ಳುತ್ತಾರೆ.

ದೇವರು ನಿಮಗೆ ತಿಳಿವಳಿಕೆಯನ್ನು ಕೊಡಲಿ ಮತ್ತು ನಿಮ್ಮನ್ನು ಪೂರ್ತಿಯಾಗಿ ಪರಿಶುದ್ಧಗೊಳಿಸಲಿ ಮತ್ತು ನಿಮ್ಮ ಸಂಪೂರ್ಣ ಆತ್ಮ, ಪ್ರಾಣ ಮತ್ತು ದೇಹಗಳನ್ನು ನಿರ್ದೋಷಿಗಳಾಗಿ ನಮ್ಮ ಕರ್ತನಾದ ಯೇಸುಕ್ರಿಸ್ತನು ಬರುವವರೆಗೆ ಕಾಪಾಡಲಿ.

<u>ಈ ಪುಸ್ತಕವನ್ನು ಓದುಗರಿಗೆ ಅರ್ಥವಾಗುವಂತೆ ಸುಲಭ ರೀತಿಯಲ್ಲಿ ಬರೆಯಲಾಗಿದೆ.</u>

ಪ್ರತಿಯೊಂದು ಪುಟದಲ್ಲಿ ಎರಡು ಭಾಗಗಳಿವೆ :
ಎಡಭಾಗದಲ್ಲಿ ಪುಸ್ತಕದ ಮಹತ್ವದ ಭಾಗ ಇದೆ, ಬಲಭಾಗದಲ್ಲಿ ವಾಕ್ಯಗಳು ಮತ್ತು ವ್ಯಾಖ್ಯಾನಗಳು ಇವೆ. ಅವು ಎಡಭಾಗದಲ್ಲಿರುವ ವಾಕ್ಯ ವೃಂದಕ್ಕೆ ಹೊಂದಿಕೊಂಡು ಅವುಗಳನ್ನು ದೃಢಪಡಿಸುತ್ತವೆ ಮತ್ತು ವಿವರಿಸುತ್ತವೆ.

ನಮ್ಮ ಹೃತ್ಪೂರ್ವಕವಾದ ಅಭಿಲಾಷೆಯೇನೆಂದರೆ, ನೀವು ಕಾರ್ಯತತ್ಪರತೆಯಿಂದ ಬೈಬಲನ್ನು ಓದಬೇಕು. ಇದಕ್ಕಾಗಿ ಈ ಪುಸ್ತಕದಲ್ಲಿರುವ ತತ್ವಗಳನ್ನು ತಿಳುವಳಿಕೆಯಲ್ಲಿ ಇಡಬೇಕು. ದೇವರ ವಾಕ್ಯ ನಿಮ್ಮ ಮೇಲೆ ಇನ್ನೂ ಹೆಚ್ಚಾಗಿ ಪರಿಣಾಮ ಬೀರುತ್ತದೆ. – ನೀವು ಪ್ರಪಂಚದ ಯಾವ ಭಾಗದಲ್ಲಿದ್ದರೂ ನಿಮ್ಮನ್ನು ಉತ್ತಮಗೊಳಿಸುತ್ತದೆ.

ಈ ಪುಸ್ತಕದ ಪ್ರತಿಯೊಂದು ಭಾಗ ಒಂದು ಆತ್ಮೀಯ ಪ್ರಾರ್ಥನೆಯೊಂದಿಗೆ ಶುರುವಾಗುತ್ತದೆ. ಇದು ನೀವು ಮಾಡುವ ಪ್ರಾರ್ಥನೆಯಾಗಿರಬೇಕು.

# ಭಾಗ 1

## ಕ್ರಿಸ್ತನ ಸುವಾರ್ತೆ

**ಈ ಭಾಗದಲ್ಲಿ ನಾವು ನಿಮಗೆ ತೋರಿಸಲಿರುವುದು :**

• ಪಾಪವು ಆದಮನ ಮೂಲಕ ಮನುಷ್ಯನ ದೇಹವನ್ನು ಪ್ರವೇಶಿಸಿತು ;
• ಯೇಸು ಪಾಪದ ದೇಹದಲ್ಲಿ ಬಂದನು ಮತ್ತು ಸೈತಾನನ್ನು ಮತ್ತು ಪಾಪವನ್ನು ಜಯಿಸಿದನು ;
• ದೇವರು ಸೈತಾನನಿಗೆ ತೀರ್ಪು ಮಾಡಿದನು ಮತ್ತು ಪಾಪದ ದೇಹವನ್ನು ನಾಶಗೊಳಿಸಿದನು ;
• ದೇವರು ಪಾಪವಿಲ್ಲದ ಒಂದು ಹೊಸ ದೇಹವನ್ನು ಯೇಸು ನಿವಸಿಸುವುದಕ್ಕಾಗಿ ಉಂಟುಮಾಡಿದನು ;
• ದೇವರು ಪವಿತ್ರಾತ್ಮನನ್ನು ಎಲ್ಲರಿಗೂ ಲಭ್ಯವಾಗ ಮಾಡಿ ಕ್ರಿಸ್ತನ ಸುವಾರ್ತೆಯನ್ನು ನಂಬುವ ಪ್ರತಿಯೊಬ್ಬನ ದೇಹದಲ್ಲಿ ನಿವಸಿಸುವಂತೆ ಮಾಡಿದನು.

**ಈ ಪ್ರಾರ್ಥನೆಯನ್ನು ಮತ್ತೆ ಮತ್ತೆ ಮಾಡಿರಿ, ಇದು ಎಫೆಸದವರಿಗೆ 1 : 17–23 ಇಂದ ತೆಗೆದುಕೊಳ್ಳಲ್ಪಟ್ಟಿದೆ ;**

ಪ್ರಭಾವ ಪೂರ್ಣನಾದ ತಂದೆಯೇ ನಿನ್ನ ವಿಷಯವಾದ ತಿಳಿವಳಿಕೆಗೆ ಅನುಸಾರವಾಗಿ ಜ್ಞಾನ ಪ್ರಕಟಣೆಗಳ ಆತ್ಮವನ್ನು ನನಗೆ ಅನುಗ್ರಹಿಸು. ನನ್ನ ..........................................
(ದಯವಿಟ್ಟು ನಿನ್ನ ಹೆಸರನ್ನು ಇಲ್ಲಿ ಬರೆ)

ಮನೋ ನೇತ್ರಗಳನ್ನು ಬೆಳಗಿಸಿ, ನಿನ್ನ ಕರೆಯುವಿಕೆಯು ಎಂಥದೆಂಬುದನ್ನೂ ಪರಿಶುದ್ಧರಲ್ಲಿರುವ ನಿನ್ನ ಸ್ವಾಸ್ತ್ಯದ ಮಹಿಮಾತಿಶಯವೂ ಎಂಥದೆಂಬುದನ್ನೂ ನಂಬುವವನಾದ ನನ್ನಲ್ಲಿ ನೀನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದದ್ದೆಂಬುದನ್ನೂ, ನಿನ್ನಯ ಬಲಾತಿಶಯವು ಎಷ್ಟು ಮಹತ್ತಾದ್ದದ್ದೆಂಬುದನ್ನೂ ನಾನು ತಿಳಿದುಕೊಳ್ಳುವಂತೆ ಅನುಗ್ರಹಿಸು. ಬಲಾತಿಷಯವು ಕ್ರಿಸ್ತನಲ್ಲಿ ಕಂಡುಬಂದಿದೆ ; ಹೇಗೆಂದರೆ ನೀನು ಕ್ರಿಸ್ತನನ್ನು ಸತ್ತವರೊಳಗಿನಿಂದ ಎಬ್ಬಿಸಿ, ಸಕಲ ರಾಜತ್ವ, ಅಧಿಕಾರ ಮಹತ್ವ, ಪ್ರಭುತ್ವಾದಿಗಳ ಮೇಲೆಯೂ ಈ ಲೋಕದಲ್ಲಿ ಮಾತ್ರವಲ್ಲದೇ ಬರುವ ಲೋಕದಲ್ಲಿಯೂ ಸಹಾ ಹೆಸರುಗೊಂಡವರಮೇಲೆಯೂ, ಎಷ್ಟೋ ಹೆಚ್ಚಾಗಿ ಸ್ವರ್ಗದೊಳಗೆ ನಿನ್ನ ಸ್ವಂತ ಬಲಪಾರ್ಶ್ವದಲ್ಲಿ ಆತನನ್ನು ಕುಳ್ಳಿರಿಸಿಕೊಂಡಿದ್ದೀ. ನೀನು ಸಮಸ್ತವನ್ನು ಆತನ ಪಾದಗಳ ಕೆಳಗೆ ಹಾಕಿದ್ದೀ. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದಿ, ಸಭೆಯು ಆತನ ದೇಹವಾಗಿದೆ ; ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ.


**ಆಮೆನ್**

## ಅಧ್ಯಾಯ–1

## ಪ್ರಥಮ ಪುರುಷ ಆದಾಮನು

ಆದಾಮನನ್ನು ದೇವರು ತನ್ನ ರೂಪದಲ್ಲಿ ತನ್ನ ಹೋಲಿಕೆಗೆ ತಕ್ಕಂತೆ ಉಂಟುಮಾಡಿದನು. ದೇವರು ಮನುಷ್ಯನ ದೇಹವನ್ನು ತನ್ನ ರೂಪದಲ್ಲಿ ಭೂಮಿಯ ಮಣ್ಣಿನಿಂದ ಉಂಟುಮಾಡಿದನು. ಪ್ರಾಕೃತಿಕವಾದ ದೇಹ ಮನುಷ್ಯನ ಹೊರಗಣ ರೂಪ ಮತ್ತು ಅದು ದೇವರ ಆಕಾರದಲ್ಲಿದೆ. ದೇವರು ಪ್ರಾಣವನ್ನು ದೇಹದಲ್ಲಿ ಉಸಿರಿದಾಗ ದೇಹಕ್ಕೆ ಪ್ರಾಣಬಂದು ಮನುಷ್ಯನು ಬದುಕುವ ಪ್ರಾಣಿಯಾದನು. ಪ್ರಾಣವು ಮನುಷ್ಯನ ಆಂತರ್ಯ. ಅದು ದೇವರ ಹೋಲಿಕೆಯಲ್ಲಿ ಉಂಟುಮಾಡಲಾಗಿದೆ. ಮಾನವನ ಆಂತರ್ಯದಲ್ಲಿ ಪ್ರಾಣ ಮತ್ತು ಆತ್ಮಗಿಳಿವೆ. ಆದುದರಿಂದ ರಕ್ತ ಮಾಂಸಗಳನ್ನೊಳಗೊಂಡ ಸ್ವಭಾವಿಕ ದೇಹದಲ್ಲಿ ನೆಲೆಗೊಂಡಿವೆ.

ನೋಡಿ ಕಲಿಯಿರಿ !




ಒಳ ಮನುಷ್ಯನಿಗೆ ಒಂದು ಪ್ರಾಣ ಇದೆ. ಅದು ಅವನ ತಲೆ ಮತ್ತು ಒಂದು ಆತ್ಮವಿದೆ, ಅದು ಅವನ ದೇಹ. ಒಳ ಮನುಷ್ಯನನ್ನು ಪ್ರಾಣ ಮತ್ತು ದೇಹಗಳೆಂದು ವಿಭಜಿಸುವುದು ಅವಶ್ಯ, ಯಾಕೆಂದರೆ ಅದು ನಮಗೆ ಮಾನವನ ಮೂರು ಅಂಗಗಳನ್ನು ವಿವರಿಸಲಾಗಿರುತ್ತದೆ.

**ಒಳ ಮನುಷ್ಯ**

ಒಳ ಮನುಷ್ಯನು ಆತ್ಮೀಯ ಜೀವಿ, ಅವನು ಸಾವಿಲ್ಲದವನು ಮತ್ತು ನಿರಂತರವಾಗಿ ಇರುವನು. ಅವನ ಪ್ರಾಕೃತಿಕ ದೇಹದ ಒಳಗಾಗಿರಬಹುದು ಅಥವಾ ಹೊರಗಾಗಿರಬಹುದು. ಪ್ರಾಣ ಮತ್ತು ಆತ್ಮಗಳನ್ನು ಬೇರ್ಪಡಿಸಲು ಅಸಾಧ್ಯ, ಹೇಗಾದರು ಘಟಕದ ಒಂದೊಂದು ಅವಯವ ತನ್ನದೇ ಆದ ನ್ಯಾಯ ಪ್ರಮಾಣಕ್ಕೆ ಅಧೀನವಾಗಿರುತ್ತದೆ.

### ಅನ್ವಯಗಳು ಮತ್ತು ವ್ಯಾಖ್ಯಾನಗಳು

ಆದಿ 1:26 "ತರುವಾಯ ದೇವರು ನಮ್ಮ **ರೂಪದಲ್ಲಿ** ನಮ್ಮ **ಹೋಲಿಕೆಗೆ** ಸರಿಯಾಗಿ ಮನುಷ್ಯರನ್ನು ಮಾಡೋಣ."

ಆದಿ 2:7 "ಮತ್ತು ದೇವರಾದ ಕರ್ತನು **ಮಣ್ಣಿನಿಂದ** ಮನುಷ್ಯನನ್ನು **ರೂಪಿಸಿ** ಅವನ ಮೂಗಿನಲ್ಲಿ ಜೀವದ ಉಸಿರನ್ನು ಊದಿದನು, ಆಗ ಮನುಷ್ಯನು ಜೀವಾತ್ಮಾನಾದನು."

ಯೋಹಾ 4:24 "ದೇವರು **ಆತ್ಮ** ಸ್ವರೂಪಿ"

ಮತ್ತಾ 27:50 "ಯೇಸು ತಿರುಗಿ ಮಹಾ ಶಬ್ದದಿಂದ ಕೂಗಿ ಆತ್ಮವನ್ನು ಒಪ್ಪಿಸಿಕೊಟ್ಟನು." (ಅಪೋ 12:23)

2ಕೊರಿ 4:16 "...ಆದರೆ ನಮ್ಮ **ಹೊರ ಮನುಷ್ಯನು**(ದೇಹ) ನಾಶವಾಗುತ್ತ ಇದ್ದರೂ ನಮ್ಮ **ಒಳ ಮನುಷ್ಯನು** (ಪ್ರಾಣ) ದಿನೇದಿನೆ ನೂತನವಾಗುತ್ತ ಇರುವನು."

ಆದಿ 1:27 "ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಸೃಷ್ಟಿಸಿದನು. **ದೇವರ ರೂಪದಲ್ಲಿ ಆತನು ಅವನನ್ನು ಸೃಷ್ಟಿಸಿದನು ಮತ್ತು ಆತನು** ಅವರನ್ನು **ಗಂಡು ಹೆಣ್ಣಾಗಿ ಸೃಷ್ಟಿಸಿದನು**".

ದೇವರುಒಂದೇ ದೇಹದಿಂದ ಮಾನವನನ್ನು – ಸೃಷ್ಟಿಸಿದನು, ಒಬ್ಬ ಪುರುಷನನ್ನಾಗಿಯೂ ಒಬ್ಬ ಸ್ತ್ರೀಯಾನ್ನಾಗಿಯೂ, ಯಾಕೆಂದರೆ ಅವರು ಅಭಿವೃದ್ಧಿಯಾಗಬೇಕೆಂದು. (ಮಲಾಕಿ 2:15)

ಯಾಕೆಂದರೆ ಒಳ ಮನುಷ್ಯನು ದೇವರಿಂದ ಬಂದುದರಿಂದ ಸಂಪೂರ್ಣನಾಗಿದ್ದನು. ದೇವರು ಅವನಿಗಾಗಿ ಸೃಷ್ಟಿಸಿದ ದೇಹಕ್ಕೆ ನ್ಯಾಯಪ್ರಮಾಣವಿರಲಿಲ್ಲ. ಮಾನವಸ್ವಭಾವ ಮಾತ್ರ ಇತ್ತು. ಆದುದರಿಂದ ಒಳ ಮನುಷ್ಯನು ಸ್ವತಂತ್ರ ಜೀವಿಯಾಗಿದ್ದನು.

ಹೊರ ಮನುಷ್ಯನ ಬಗ್ಗೆ ಏನು ನಿಜವೋ, ಒಳ ಮನುಷ್ಯನ ಬಗ್ಗೆಯೂ ಅದೇ ನಿಜ. ಹೊರ ಮನುಷ್ಯನು ತಲೆಯುಳ್ಳ ಒಂದು ದೇಹ ಹೇಗೋ, ಹಾಗೆಯೇ ಒಳ ಮನುಷ್ಯನು ಕೂಡ ಪ್ರಾಣ ಇರುವ ಒಂದು ಆತ್ಮ. ಪ್ರಾಣವು ತಲೆಯಿದ್ದಂತೆ, ಪ್ರಾಣಕ್ಕೆ ಮನಸ್ಸಿದೆ, ಅಂತಯೇ ಆತ್ಮಕ್ಕೆ ಮನೋಭಾವಗಳೂ, ಉದ್ರೇಕಗಳೂ ಇವೆ. ಈ ಒಂದು ತೀರ್ಮಾನಕ್ಕೆ ಬಂದುದು ಯಾಕೆಂದರೆ ಮೆದುಳಿಗೆ ಮನೋಭಾವನೆಗಳಿಲ್ಲ. ಆದರೆ ದೇಹಕ್ಕೆ ಎಲ್ಲಾ ಮನೋಭಾವಗಳಿವೆ.

1 ಥೆಸ 5:23 "... ನಾನು ದೇವರಿಗೆ ಪ್ರಾರ್ಥಿಸುವುದು ನಿಮ್ಮ **ಆತ್ಮ, ಪ್ರಾಣ ಮತ್ತು ಶರೀರಗಳು** ದೋಷವಿಲ್ಲದೇ ಸಂಪೂರ್ಣವಾಗಿ ಕಾಣಿಸುವಂತೆ ಮಾಡಲಿ..."

ಹೊರ ಮನುಷ್ಯನ ತಲೆ ಮತ್ತು ದೇಹವನ್ನು ಹೇಗೆ ಬೇರ್ಪಪಡಿಸಲಾಗದೋ ಅಂತೆಯೇ ಒಳ ಮನುಷ್ಯನ ಆತ್ಮ ಮತ್ತು ಪ್ರಾಣಗಳನ್ನು ಬೇರ್ಪಪಡಿಸಲಾಗದು.

1 ಪೇತ್ರ 3:4 "ಆದರೆ, ಸಾತ್ವಿಕವಾದ ಶಾಂತ ಮನಸ್ಸು ಎಂಬ ಹೃದಯದ **ಮರೆಯಾದ ಮನುಷ್ಯನ** ಅಲಂಕಾರವೇ ನಿಮಗಿರಲಿ.**"**

**ಪ್ರಾಣದ ನಿಯಮ**

ಪ್ರಾಣವು ಪ್ರಜ್ಞೆ ಇರುವ ಮನಸ್ಸು ಮತ್ತು ಒಳ ಮನುಷ್ಯನ ಬುದ್ದಿ ಶಕ್ತಿ. ಅದಕ್ಕೆ ತರ್ಕ ಮಾಡುವ ಸಾಮರ್ಥ್ಯವಿದೆ. ಮತ್ತು ಅದು ತಿಳುವಳಿಕೆಯನ್ನು ಹೊಂದಿದಂತೆಲ್ಲಾ ಆಯ್ಕೆಗಳನ್ನು ಮಾಡುತ್ತದೆ. ಪ್ರಾಣಕ್ಕೆ ತನ್ನದೇ ಆದ ಒಂದು ಚಿತ್ತವಿದೆ. ಅದಕ್ಕೆ ಆಯ್ಕೆಗಳನ್ನು ಮಾಡುವ ಸ್ವತಂತ್ರತೆ ಇದೆ. ಆತ್ಮಕ್ಕೆ ಶಿರಸ್ಸಾಗಿದ್ದು, ಒಳ ಮನುಷ್ಯನ ಕೃತ್ಯಗಳಿಗೆ ಅದು ಜವಬ್ದಾರಿಕೆ ವಹಿಸಿದೆ.

ಪ್ರಾಣವು ತನ್ನ ಬುದ್ದಿಯನ್ನು, ತಾನುಗಳಿಸಿದ ತಿಳುವಳಿಕೆಗೆ ಅನುಸಾರವಾಗಿ ಬದಲಾಯಿಸಬಹುದು. ಅದು ದೇವರಿಗೇ ಆಗಾಲಿ ಸೈತಾನನಿಗೇ ಆಗಲೀ ವಿಧೆಯನಾಗಿರುಲು ನಿಶ್ಚಯಿಸಬಹುದು;ಬೇರೆ ಆಯ್ಕೆ ಇಲ್ಲ. ಅದು ವಿಧೇಯನಾಗಿರಲು ಯಾರನ್ನು ಇಚ್ಛಿಸಿತದೋ ಅವರೆ ಅದಕ್ಕೆ ದಣಿ–ಅವನ್ನನ್ನೇ ಅದು ಸೇವೆ ಮಾಡುವುದು.

**ಆತ್ಮನ ನಿಯಮಗಳು**

ಒಳ ಮನುಷ್ಯನ ಸ್ವಭಾವ ಆತ್ಮನಲ್ಲಿ ಕೂತುಕೊಂಡಿದೆ. ಆತ್ಮನು ಇಷ್ಟಪಡುವದು ಮತ್ತು ಕೃತ್ಯ ನಡೆಸುವದು ಅದರ ಸ್ವಭಾವಕ್ಕೆ ಅನುಗುಣವಾಗಿದ್ದು ಮತ್ತು ಪ್ರಾಣದಂತೆ ಯೋಚಿಸುವುದಾಗಲೀ ಆಯ್ಕೆ ಮಾಡುವದಾಗಲೀ ಇರುವುದಿಲ್ಲ. ಆತ್ಮನ ಸ್ವಭಾವ ಅದರ ಚಿತ್ತ ಮತ್ತು ಈ ಚಿತ್ತವು ಒಳ ಮನುಷ್ಯನ ಅರ್ಧಸ್ಮೃತಿಯ ಮನಸ್ಸು.

ಆತ್ಮನಿಗೆ ನಂಬಲಿಕ್ಕೆ ಸಾಮರ್ಥ್ಯ ಇರುವುದರಿಂದ ಆತ್ಮನಸ್ವಭಾವ ಅದರ ನಂಬಿಕೆಗೆ ಅನುಗುಣವಾಗಿ ಬದಲಾಗುತ್ತದೆ. ಈ ಸ್ವಭಾವ ಕೆಟ್ಟದಾಗಿ ಅಥವಾ ದೈವೀಕವಾಗಿ ಆಗುತ್ತದೆ.ಇದು ಮನಸ್ಸಿನ ಅರ್ಧಸ್ಮೃತಿಗೆ ಅನುಗುಣವಾಗಿ ಇರುತ್ತದೆ.ಸ್ವಭಾವದಲ್ಲಿ ಬದಲಾವಣೆ ಆಗುವುದು ಯಾವಾಗ ಅಂದರೆ ಆತ್ಮನು ಪ್ರಾಣದ ಅರ್ಧಸ್ಮೃತಿಯ ಮನಸ್ಸುನ್ನು ನಂಬಿದಾಗಲೇ. ಆತ್ಮನ ಚಿತ್ತ ಅದಕ್ಕೆ ಅನುಗುಣವಾಗಿ ಬದಲಾಗುತ್ತದೆ.

ಒಳ ಮನುಷ್ಯನ ಆತ್ಮವೂ ಮತ್ತು ಪ್ರಾಣವೂ–ಗಂಡ ಹೆಂಡತಿಯರನ್ನು ಮದುವೆಯಲ್ಲಿ ಜೋಡಿಸಿದಾಗ ಒಂದು ಘಟಕದಂತೆ ಕೆಲಸ ಮಾಡುತ್ತದೆ. ಪ್ರತಿ ಸದಸ್ಯ ಪರಸ್ಪರವಾಗಿ ವರ್ತಿಸುವುದೂ ಮತ್ತು ಇನ್ನೊಬ್ಬರ ಮೇಲೆ ಪ್ರಭಾವ ಬೀರಿ ತನ್ನ ಸ್ವಂತ ಚಿತ್ತವನ್ನು ತೋರಿಸಿಕೊಳ್ಳುತ್ತದೆ. ಆದರೆ ಆತ್ಮನು ತನ್ನ ಸ್ವಭಾವಕ್ಕನುಗುಣವಾಗಿ ಕೆಲಸ ಮಾಡುವುದರಿಂದ, ಅದರ ಚಿತ್ತ ಪ್ರಾಣದ ಚಿತ್ತಕ್ಕಿಂತಲೂ ಬಲವಾಗಿರುತ್ತದೆ. ಪ್ರಾಣವು ತಿಳುವಳಿಕೆಗೆ ಅನುಗುಣವಾಗಿ ವರ್ತಿಸುತ್ತದೆ.

ಈ ತತ್ವವನ್ನು ನಾವು ಆದಾಮ್ ಹವ್ವರ ಸಂಬಂಧದ ಮೂಲಕ

ಒಳ ಮನುಷ್ಯನು ಹೊರ ಮನುಷ್ಯನ ಜೀವ.
ಯಾಕೋ 2:26 "...ಯಾಕೆಂದರೆ ಆತ್ಮನಿಲ್ಲದ **ದೇಹವು ಸತ್ತದ್ದಾಗಿದೆ...**"

ಶಿರಸಿನಲ್ಲಿ ಹೊರ ಮನುಷ್ಯನ ದೇಹವು ಹೇಗಿದೆಯೋ, ಹಾಗೆಯೇ ಪ್ರಾಣದಲ್ಲಿ ಮನಸ್ಸು ಮತ್ತು ವಿವೇಚನ ಶಕ್ತಿ ಒಳ ಮನುಷ್ಯದಾಗಿವೆ. ಪ್ರಾಣವು ತಿಳುವಳಿಕೆಗೆ ಅನುಸಾರವಾಗಿ ಕೆಲಸ ಮಾಡುವುದರಿಂದ ನಂಬಿಕೆ, ಆತ್ಮನಿಂದಾದದ್ದೆಂದು ಅದು ನಂಬಲಸಾದ್ಯ.

ಶಿರಸ್ಸಾಗಿರುವುದರಿಂದ ಪ್ರಾಣವು ಅದರ ತಿಳುವಳಿಕೆಗೆ ಅನೂಸಾರವಾಗಿ ನ್ಯಾಯತೀರಿಸುತ್ತದೆ. ಯಾಕೆಂದರೆ ಅದಕ್ಕೆ ಮನೋಭಾವಗಳಿಲ್ಲ ; ಮನೋಭಾವಗಳು ಆತ್ಮನದ್ದಾಗಿವೆ.

ಪ್ರಾಣಕ್ಕೆ ಒಂದು ಸ್ವಭಾವವಿಲ್ಲ. ಯಾಕೆಂದರೆ ಅದು ತಿಳುವಳಿಕೆಗೆ ಅನುಸಾರವಾಗಿ ಕೆಲಸಮಾಡುತ್ತದೆ. ಸ್ವಭಾವ ಆತ್ಮನದ್ದು.

ರೋಮಾ 6:16 "**ನೀವು ಯಾರಿಗೆ ದಾಸರಂತೆ ವಿಧೇಯರಾಗಿರುವಿರೆಂದು ನಿಮ್ಮನ್ನು ಒಪ್ಪಿಸಿಕೊಡುತ್ತಿರೋ ಅವರಿಗೆ ದಾಸರಾಗಿಯೇ ವಿಧೇಯರಾಗಿರುವಿರೆಂಬುದು ನಿಮಗೆ ಗೊತ್ತಿಲ್ಲವೋ ...**"

ಒಳ ಮನುಷ್ಯನ ಸ್ವಭಾವ ಅವನ ಆತ್ಮನಲ್ಲಿಕೂತುಕೊಂಡಿದೆ. ಇದು ನಮಗೆ ಗೊತ್ತು ಯಾಕೆಂದರೆ ದೇವರು ಪರಿಶುದ್ಧನು ಆತನ ಆತ್ಮ ಪರಿಶುದ್ಧಾತ್ಮ ಆಗಿದೆ. ಆದುದರಿಂದ ನಾವು ತೀರ್ಮಾನಿಸುವುದೇನೆಂದರೆ ಒಳಮನುಷ್ಯನ ಸ್ವಭಾವ ಕೂಡಾ ತನ್ನ ಆತ್ಮನಲ್ಲಿ ಕೂತುಕೊಂಡಿದೆ. ಮನೋಭಾವ ಮತ್ತು ಆಶೆಅಂತೆಯೇ ಆತ್ಮನಲ್ಲಿ ನೆಲಸಿವೆ.

ಮನಸ್ಸಿನ ಬದಲಾವಣೆಯ ಪರಿಣಾಮವಾಗಿ ಸ್ವಭಾವದಲ್ಲಿ ಬದಲಾವಣೆಯಾಗುತ್ತದೆ ಆತ್ಮನ ಸ್ವಭಾವ ಪ್ರಾಣದ ಅರ್ಧಸ್ಮೃತಿಯ ಸ್ಥಿತಿಯಿಂದ ನಿಶ್ಚಿತವಾಗುತ್ತದೆ.

1 ಪೇತ್ರ 2:11 "... ನೀವು ನಿಮ್ಮ ಆತ್ಮಕ್ಕೆ (ಆತ್ಮ)**ವಿರೋಧವಾಗಿ ಯುದ್ಧಮಾಡುವ ಶಾರೀರಿಕ** (ಪ್ರಾಣ ಮನಸ್ಸು) **ದೂರಾಶೆಗಳಿಗೆ ದೂರವಗಿರಬೇಕೆಂದು** ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ.

ಎ.ಫ.ಸಿ 5:23 "ಯಾಕೆಂದರೆ ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ **ಗಂಡನು ಹೆಂಡತಿಗೆ ತಲೆಯಾಗಿದ್ದಾನೆ.**ಆತ್ಮನ ಚಿತ್ತ, ಪ್ರಾಣದಚಿತ್ತಕ್ಕಿಂತ ಬಲವಾಗಿದ್ದಾಗ್ಯೂ ಆತ್ಮನೂ ಪ್ರಾಣಕ್ಕೆ ಅಧೀನವಾಗಿರಬೇಕು, ಪ್ರಾಣವು ಘಟಕದ ತಲೆ,

ಸೃಷ್ಟಿಕಾರ್ಯದಲ್ಲಿ ದೇವರ ಕ್ರಮ ಅಡಗಿದೆ. ನಮ್ಮ ದಿನಗಳಲ್ಲಿ ಕೂಡಾ ನಾವು ಗಮನಿಸುತ್ತಾ ಇರುವುದು ಹೆಂಡಿತಿಯ ಚಿತ್ತ ಗಂಡನ ಚಿತ್ತಕ್ಕಿಂತ ಬಲವಾಗಿದೆ. ದೇವರು ಹೆಂಡತಿ ಹೊಣೆಯನ್ನು ಗಂಡನ ಮೇಲೆ ಹೊರಿಸಿರುವುದರಿಂದ ಆಕೆಯು ಅವನಿಗೆ ಘಟಕದ ತಲೆ ಎಂದು ಭಾವಿಸಿ ಅಧೀನಳಾಗಿರಬೇಕು. ಪ್ರಾಣದ ಮೇಲೆ ಆತ್ಮನ ಅಧಿಕಾರವನ್ನು ತಿರುಗಿಸುವುದರಿಂದ ಮಾನವನ ಅವನತಿಗೆ ಕಾರಣವಾಗಿದೆ. ಗಮನಿಸು: ಇಲ್ಲಿ ಗಂಡನ ಅವನತಿಯಲ್ಲ ಆದರೆ ಪ್ರಾಣದ ಅವನತಿ. ಅದಕ್ಕೆ ಆತ್ಮನ ಮೇಲೆ ಇನ್ನು ಹತೋಟಿ ಇಲ್ಲ. ಈ ಪರಿಸ್ಥಿತಿ ಪುರುಷರಲ್ಲಿ ಮತ್ತು ಸ್ತ್ರೀಯರಲ್ಲಿ ಕೂಡಾ ನಿಜವಾಗಿದೆ.

ವಿವರಿಸಬಹುದು. ಹವ್ವಳು (ಆತ್ಮ) ಆದಮನನ್ನು (ಪ್ರಾಣ) ನಂಬಬೇಕಾಗಿತ್ತು, ಆದರೆ ಸೈತಾನನನ್ನು ಅವನು ಅವಳ ತಲೆಯಲ್ಲದಿದ್ದರೂ ನಂಬಿದಳು. ಸ್ವಾಭವ ತಿಳುವಳಿಕೆಗಿಂತಾ ಬಲವಾಗಿರುವುದರಿಂದ ಹವ್ವಳು ಆದಮನನ್ನು ಬಂಧಿಯಾಗಿಸಿ, ತನ್ನ ಚಿತ್ತಕ್ಕೆ ವಿಧೇಯನಾಗುವಂತೆ ಮಾಡಿದಳು ; ಆದುದರಿಂದ ಅವನೂ ಕೂಡ ಸೈತಾನನಿಗೆ ವಿಧೇಯನಾದನು.

**ಹೊರ ಮನುಷ್ಯ :**

ಪ್ರಾಕೃತಿಕ ದೇಹವೇ ಹೊರಮನುಷ್ಯ : ಹೊರಮನುಷ್ಯನು ಎರಡು ಭಾಗಗಳಿಂದ ಮಾಡಲ್ಪಟ್ಟಿದ್ದಾನೆ ; 1) ಅದಕ್ಕೆ ಮನಸ್ಸಿದೆ – ತಲೆ. 2) ಅದಕ್ಕೆ ದೇಹವಿದೆ – ಈ ಪ್ರಾಕೃತಿಕ ದೇಹಕ್ಕೆ ಮನುಷ್ಯ ಸ್ವಭಾವವಿದೆ. ದೇಹವು ಮನುಷ್ಯನ ಪ್ರಾಣನಾಶಕ ಭಾಗ ಮತ್ತು ಒಳ ಮನುಷ್ಯ ಈ ಪ್ರಪಂಚದಲ್ಲಿ ಕ್ರಿಯೆ ಮತ್ತು ಪ್ರತಿಕ್ರಿಯೆ ಮಾಡುವುದಕ್ಕೆ ಸಾಧನವಾಗಿದೆ.

**ಸ್ವಾಭಾವಿಕ ದೇಹದ ನಿಯಮ :**

ದೇವರು ಮನುಷ್ಯನಿಗೆ ಕೊಟ್ಟಂತಹ ದೇಹ ಅವನನ್ನು ಮಾನವನನ್ನಾಗಿಸಿದೆ. ಈ ದೇಹದಿಂದಾಗಿ ಒಳಮನುಷ್ಯ ಮಾನವನಾಗಿದ್ದಾನೆ, ಅಂತೆಯೇ ಮನುಷ್ಯನ ಗುಣ ಲಕ್ಷಣಗಳನ್ನು ಹೊಂದಿದ್ದಾನೆ. ದೇವರು ದೇಹವನ್ನುಂಟು ಮಾಡಿದ್ದರಿಂದ, ನಂತರ ಒಳಮನುಷ್ಯನನ್ನು ಅದರೊಳಗೆ ಉಸಿರಿದ್ದರಿಂದ ದೇಹದ ಸ್ವಭಾವ ಒಳಮನುಷ್ಯನ ಸ್ವಭಾವವನ್ನು ತೀರ್ಮಾನಿಸುತ್ತದೆ.

ಸ್ವಾಭಾವಿಕ ದೇಹವನ್ನು ಒಂದು ದೇಶಕ್ಕೆ ಹೋಲಿಸಬಹುದು. ಅಥವಾ ಒಳಮನುಷ್ಯನು ಜೀವಿಸುವ ಒಂದು ಮನೆಗೆ ಹೋಲಿಸಬಹುದು. ಮನುಷ್ಯನ ದೇಹ ದೇವರಿಗಾದರೂ ಸೇರುತ್ತದೆ. ಅಥವಾ ಸೈತಾನನನಿಗೆ ಸೇರುತ್ತದೆ. ದೇಹವು ಸೈತಾನನ ಸ್ವತ್ತಾದಾಗ ಒಳ ಮನುಷ್ಯನು ಸೈತಾನನ ರಾಜ್ಯದಲ್ಲಿರುತ್ತಾನೆ ; ದೇಹವು ದೇವರ ಸ್ವತ್ತಾದಾಗ ಒಳ ಮನುಷ್ಯುನು ದೇವರ ರಾಜ್ಯದಲ್ಲಿರುತ್ತಾ.

ಮಾನವ ದೇಹವನ್ನಾಳುವ ನಿಯಮ ಮನಸ್ಸಿನ (ಪ್ರಾಣ) ಮೇಲೆ ಪ್ರಭಾವ ಬೀರುತ್ತದೆ. ಮತ್ತು ಒಳಮನುಷ್ಯನ ಸ್ವಭಾವ (ಆತ್ಮ) ದ ಮೇಲೆ

**ಪ್ರಾಣ ಆಯ್ಕೆ ಮಾಡಬೇಕಾಗಿತ್ತು :**

ಶಿರಸ್ಸಾಗಿದ್ದ ಆದಾಮನು ಯಾರಿಗೆ ವಿಧೇಯನಾಗುವನೋ ಅದನ್ನು ಆಯ್ಕೆ ಮಾಡಿಕೊಂಡು ಬರಬೇಕಾಗಿತ್ತು ; ದೇವರೋ ಸೈತಾನನೋ.

1 ಕೊರಿ 11:9 "ಇದಲ್ಲದೆಪುರುಷನು ಸ್ತ್ರೀಯ ನಿಮಿತ್ತವಾಗಿ ನಿರ್ಮಾಣವಾಗಲಿಲ್ಲ. ಆದರೆ **ಸ್ತ್ರೀಯು ಪುರಷನ ನಿಮಿತ್ತವಾಗಿ** ನಿರ್ಮಾಣವಾದಳು"

ಎಫೆಸ 5:24 "ಆದ್ದರಿಂದ ಸಭೆಯು ಕ್ರಿಸ್ತನಿಗೆ ಹೇಗೆ **ಅಧೀನವಾಗಿದೆಯೋ** ಹಾಗೆಯೇ ಸ್ತ್ರೀಯರು **ತಮ್ಮತಮ್ಮ ಗಂಡಂದಿರಿಗೆ** ಎಲ್ಲಾ ವಿಷಯದಲ್ಲಿ ಅಧೀನರಾಗಿರಬೇಕು.

ಮನುಷ್ಯನ ದೇಹಕ್ಕೆ ಅಮರತ್ವವಿರಲಿಲ್ಲ, ಯಾಕೆಂದರೆ ಅವರು ನಿತ್ಯವಾಗಿ ಜೀವಿಸಬೇಕಾಗಿದ್ದರೆ ಜೀವದ ಮರದಿಂದ ತಿನ್ನಬೇಕಾಗಿತ್ತು.
ಆದಿ 3:22 "..... ಈಗ ಅವನ ಕೈ ಚಾಚಿ **ಜೀವವೃಕ್ಷದ** ಫಲವನ್ನು ತೆಗೆದು **ತಿಂದು** ಅವನು **ಎಂದೆಂದಿಗೂ ಬದುಕಬಾರದು** ಎಂದನು."

ದೇಹದ ಸ್ವಭಾವ ಒಳ ಮನುಷ್ಯನ ಸ್ವಾಭಾವದ ಮೇಲೆ ಪರಿಣಾಮ ಬೀರುತ್ತದೆ. ಒಳಮನುಷ್ಯನ ಮನಸ್ಸು ಮತ್ತು ಸ್ವಭಾವ ಮನುಷ್ಯನಿಗೆ ಸಂಬಂಧಿಸಿದ್ದು. ಯಾಕೆಂದರೆ ಅವನು ಮನುಷ್ಯನ ದೇಹದಲ್ಲಿ ಜನಿಸಿದನು. ಮನುಷ್ಯನಲ್ಲದೆ ಅವನು ಬೇರೇನೂ ಆಗಲಿಕ್ಕಿಲ್ಲ. ಒಳ ಮನುಷ್ಯನು ತನ್ನ ದೇಹದ ಸ್ವಭಾವವನ್ನು ಬದಲಾಯಿಸಲಾಗದು. ಆದುದರಿಂದ ಒಳ ಮನುಷ್ಯನು ಒಬ್ಬ ದೇವದೂತನ ಸ್ವಭಾವವೋ ಅಥವಾ ಒಂದು ನಾಯಿಯ ಸ್ವಭಾವವನ್ನು ಹೊಂದಲು ಸಾಧ್ಯವಿಲ್ಲ. ಯಾಕೆಂದರೆ ಅವನು ಅಂತಹ ಸ್ನೇಹವನ್ನು ಹೊಂದಿಲ್ಲ. ಲಿಂಗವು ಹೊರಮನುಷ್ಯನಿಗೆ ಸೇರುತ್ತದೆ. ಯಾಕೆಂದರೆ, ಸಂತಾನಾಭಿವೃದ್ಧಿಗಾಗಿ. ಒಳ ಮನುಷ್ಯನಿಗೆ ಲಿಂಗವಿಲ್ಲ. ಪುರುಷನ ದೇಹ ಒಳ ಮನುಷ್ಯನನ್ನು ಪ್ರಾಧಾನ್ಯವಾಗಿ ಪ್ರಾಣವಾಗಿ ಮಾಡುತ್ತದೆ. ಮತ್ತು ಸ್ತ್ರೀಯದೇಹ ಒಳಮನುಷ್ಯನನ್ನು ಪ್ರಾಧಾನ್ಯವಾಗಿ ಆತ್ಮನನ್ನಾಗಿಸುತ್ತದೆ.

ಪ್ರತಿ ರಾಜ್ಯದಲ್ಲಿ ಆಳುವುದಕ್ಕಾಗಿ ಒಂದ ಪ್ರಾತ್ರಂವಿರುತ್ತದೆ. ಸೈತಾನನ ರಾಜ್ಯ ಅಥವಾ ದೇವರ ರಾಜ್ಯ ಮನುಷ್ಯನ ಪ್ರಾಕೃತಿಕ ದೇಹವನ್ನು ಆಳುತ್ತದೆ. ಅದೇ ಒಳ ಮನುಷ್ಯನು ನಿವಸಿಸುವ ದೇಶ ಅಥವಾ ಮನೆ.

ಒಳ ಮನುಷ್ಯ ತನ್ನನ್ನಾಳುವ ನಿಯಮದ ಪ್ರಭಾವಕ್ಕೊಳಗಾಗುತ್ತಾನೆ. ದಕ್ಷಿಣ ಆಫ್ರಿಕವು ದೇಶೀಯ ಪಕ್ಷದಿಂದ ಆಳಲ್ಪಟ್ಟಾಗ ದೇಶವು ಪ್ರತ್ಯೇಕವಾದ ಅಭಿವೃದ್ಧಿ ಕೇಂದ್ರದ ನಿಯಮದ ಕೆಳಗಿತ್ತು, ಮತ್ತು ಈ ನಿಯಮ ಪ್ರಜೆಗಳ ಮೇಲೆ ಪ್ರಭಾವ ಬೀರಿತ್ತು. ಅವರು ಜನಾಂಗಗಳ ಪದ್ದತಿಯನ್ನು ಒಪ್ಪಿದರು. ಈಗ ದಕ್ಷಿಣ ಆಫ್ರಿಕಾ ಎ.ಎನ್.ಸಿ. ಅವರಿಂದ ಆಳಲ್ಪಟ್ಟಿರುವುದರಿಂದ, ದೇಶವು ಸಮಾನತೆಯಕೆಳಗಿದೆ ; ಮತ್ತು ಈ ನಿಯಮ ಪ್ರಜೆಗಳ ಮೇಲೆ ಪ್ರಭಾವ ಬೀರಿದೆ ; ಜನಾಂಗಗಳ ಪದ್ದತಿಯನ್ನು ಅವರು ತಿರಸ್ಕರಿಸಿದರು.

ಎರಡು ರಾಜ್ಯಗಳು ಏಕ ಕಾಲದಲ್ಲಿ ಆಳಲಾರವು. ಪರಮಾಧಿಕಾರ ಉಳ್ಳ ಒಂದೇ ಆಡಳಿತ ಸಾಧ್ಯ.


ಮತ್ತಾ 12:29 : "ಇದಲ್ಲದೇ ಯಾವನಾದರೂ ಮೊದಲು ಬಲವುಳ್ಳ ಮನುಷ್ಯನನ್ನು ಕಟ್ಟಿಹಾಕದ ಹೊರತು ಅವನ ಮನೆಯ ಸ್ವತ್ತನ್ನು ಸುಲಕೊಳ್ಳುವುದಕ್ಕಾದೀತೇ...?"

ಆದಮನು ಹವ್ವಳ ಪ್ರಭಾವಕ್ಕೀಡಾದುದರಿಂದ ಸೈತಾನನಿಗೆ ವಿಧೇಯನಾಗಿ ಅವರು ನ್ಯಾಯ ಪ್ರಮಾಣದ ಕೆಳಗೆ ಬಂದರು. ಆದಾಮ್ ಹವ್ವಳು ಸೈತಾನನಿಗೆ

ಪ್ರಾಣವು ಯಾರಿಗೆ ವಿಧೇಯನಾಗಿರಲು ತೀರ್ಮಾನಿಸಿತೋ, ಅದರ ನಿಯಮವು ಒಳ ಮನುಷ್ಯನ ಮೇಲೆ ಆಳ್ವಿಕೆ ಮಾಡುವುದಿತ್ತು. ಇದರ ಅರ್ಥ ಒಳ ಮನುಷ್ಯನು ಸೋತವರಿಗೆ ಆಳಾಗುವುದಿತ್ತು.

**ಸೈತಾನನು ತನಗೆ ವಿಧೇಯನಾಗೆಂದು ಮನುಷ್ಯನನ್ನು ಶೋಧನೆಗೀಡುಮಾಡಿದನು.**

ದೇವರು ಆದಮನಿಗೆ (ಪ್ರಾಣ) ಹೇಳಿದ್ದು, ಮೇಲು ಕೇಡುಗಳ ತಿಳುವಳಿಕೆಯ ಮರದ ಹಣ್ಣನ್ನು ತಿನ್ನಬಾರದೆಂದು. ಆದರೆ ಸೈತಾನನು ಹವ್ವಳನ್ನು (ಆತ್ಮ) ಶೋಧನೆಗೀಡು ಮಾಡಿದ್ದರಿಂದ ಅವಳು ಸೈತಾತನನ್ನು ನಂಬಿದಳು. ತಲೆಯಾಗಿರುವಂತಹ ಪ್ರಾಣವು (ಆದಮನು) ತನ್ನ ಆತ್ಮಕ್ಕೆ (ಹವ್ವಳು) ಅಧೀನನಾದಾಗ ಅವನು ಹೀಗೆ ಸೈತಾನನಿಗೆ ವಿಧೇಯನಾದನು. ಸ್ವಾಭಾವಿಕ ದೇಹ ಆಗ ಸೈತಾನನ ಸ್ವತ್ತಾಯಿತು.




ಆದಮನು ಸೈತಾನನಿಗೆ ವಿಧೇಯನಾದುದರಿಂದ, ಸ್ವಭಾವಿಕ ದೇಹ ಪಾಪದ ದೇಹವಾಯಿತು. ಇದರ ಮೂಲಕ ಸೈತಾನನು ಒಳ ಮನುಷ್ಯನ ಮೇಲೆ ದೊರೆತನ ಮಾಡುತ್ತಾನೆ. ಆಗಿನಿಂದ ಒಳ ಮನುಷ್ಯನು ಪಾಪದ ಬಂಧನದಲ್ಲಿ ಬಿದ್ದಿದ್ದಾನೆ, ಮತ್ತು ಸೈತಾನನಿಗೆ ಗುಲಾಮನಾಗಿ ಸೈತಾನನ ರಾಜ್ಯದಲ್ಲಿದ್ದಾನೆ. ಸೈತಾನನು ಈಗ  ಒಳ ಮನುಷ್ಯನನ್ನು ತನ್ನ ಸೇವೆ ಮಾಡಲು ಸ್ವಾಭಾವಿಕ ದೇಹವನ್ನು ಉಪಯೋಗಿಸುತ್ತಾನೆ.

ಆದಾಮ್, ಹವ್ವಳು ದೇವರಿಗೆ ವಿಧೇಯರಾಗಿರುವಾಗ ಮನಸ್ಸಾಕ್ಷಿ ಇಲ್ಲದವರಾಗಿದ್ದರು, ಆದರೆ ಮೇಲು ಕೆಟ್ಟದ್ದರ ಅರಿವು ಅವರಿಗಾದಾಗ ಅವರೊಂದು  ಮನಸ್ಸಾಕ್ಷಿಯನ್ನು ಬೆಳಸತೊಡಗಿದರು. ಅದರಲ್ಲಿ ಅವರ ಯೋಚನೆಗಳು ತಪ್ಪಿಲ್ಲದವರೆನ್ನುತ್ತಾ ಅಥವಾ ನಿಂದಿಸುತ್ತಾ ಇರುತ್ತದೆ. ಅವರು ದೇವರಿಂದ ಬಚ್ಚಿಟ್ಟುಕೊಂಡರೆಂದು ನಾವು ನೋಡುತ್ತೇವೆ ಮತ್ತು ತಾವು ಒಬ್ಬರನೊಬ್ಬರು ನಿಂದಿಸಿಕೊಂಡರು.

**ಒಳ ಮನುಷ್ಯನು ಕೂಡ ಕೆಟ್ಟವನಾದನು**

ಪಾಪವು ಒಂದು ಆತ್ಮ ವ್ಯಕ್ತಿ ಅದಕ್ಕೆ ಒಳ್ಳೆಯದು ಮತ್ತು ಕೆಟ್ಟದರ

ಅಧೀನರಾದಾಗ, ದೇಹವು ಪಾಪದ ನಿಯಮದ ಕೆಳಗೆ ಬಂತು. ಅವರು ತಮ್ಮ ಸ್ವತಂತ್ರತೆಯನ್ನು ಕಳಕೊಂಡು ಪಾಪಕ್ಕೆ ಗುಲಾಮರಾದರು. ಇದು ನಮಗೆ ಗೊತ್ತು, ಯಾಕೆಂದರೆ, ಇಸ್ರಾಯೇಲ್ ಒಂದು ಕಾಲದಲ್ಲಿ ಸ್ವತಂತ್ರವಾಗಿತ್ತು. ನಂತರ ಐಗುಪ್ತಕ್ಕೆ ಗುಲಾಮರಾದರು.

ದೇಹವು ಸೈತಾನನ ಸ್ವತ್ತಾದ ಕೂಡಲೇ ಪಾಪವು ದೇಹದಲ್ಲಿ ನಿವಸಿಸಿತು, ಪಾಪಕ್ಕೆ ಮನುಷ್ಯನ ದೇಹವನ್ನು ಪ್ರವೇಶಿಸುವುದು ಸಾಧ್ಯವಾದರೆ, ಆಗ ಪಾಪವನ್ನು ದೇಹದಿಂದ ತೆಗೆದುಹಾಕಲು ಕೂಡ ಅದು ಸಾಧ್ಯ ! ; ಇದು ದೇವರ ಸ್ವತ್ತಾದಾಗ ಸಾಧ್ಯ.

ರೋಮಾ 5:12 "ಈ ವಿಷಯ ಹೇಗೆಂದರೆ ಒಬ್ಬ ಮನುಷ್ಯನಿಂದಲೇ **ಪಾಪವೂ** ಪಾಪದಿಂದ **ಮರಣವು ಲೋಕದೊಳಗೆ ಸೇರಿದವು;** ಎಲ್ಲರೂ ಪಾಪ ಮಾಡಿದ್ದಾರೆ."

ರೋಮಾ 7:20 "ಇಚ್ಚಿಸದಿರುವುದನ್ನು ನಾನು ಮಾಡಿದರೆ, ಅದನ್ನು ಮಾಡಿದವನು ಇನ್ನು **ನಾನಲ್ಲ, ನನ್ನಲ್ಲಿ ನೆಲೆಗೊಂಡಿರುವ ಪಾಪವೇ** ಅದನ್ನು ಮಾಡಿತು."

ರೋಮಾ 6:12 "ಹೀಗಿರುವುದರಿಂದ **ಸಾಯತಕ್ಕ ನಿಮ್ಮ ದೇಹದ ಮೇಲೆ, ಪಾಪವನ್ನು** ಅಳಗೊಡಿಸಿ ನೀವು ಅದರ ದುರಾಸೆಗಳಿಗೆ ಒಳ ಪಡಬೇಡಿರಿ."

ರೋಮಾ 7:17 "ಹೀಗಿರಲಾಗಿ ವಿರೋಧವಾದುದ್ದನ್ನು ಮಾಡುವವನು **ಇನ್ನು ನಾನಲ್ಲ; ನನ್ನಲ್ಲಿ ನೆಲೆಗೊಮಡಿರುವ ಪಾಪವೇ.**"

ಐಗುಪ್ತದಲ್ಲಿ ಗುಲಾಮರಾದ ಇಸ್ರಾಯೇಲರು ತಮ್ಮ ಚಿತ್ತಕ್ಕೆ ವಿರುದ್ಧವಾದ ಕಾರ್ಯಗಳನ್ನು ಮಾಡಬೇಕಾಯಿತು.


ಆದಿ3:10,11 "ಅದಕ್ಕೆ ಅವನು **ನಿನ್ನ ಶಬ್ದವನ್ನು ತೋಟದಲ್ಲಿ ಕೇಳಿ ನಾನು ಬೆತ್ತಲೆ ಆಗಿರುವುದರಿಂದ ಭಯಪಟ್ಟು ಅಡಗಿಕೊಂಡೆನು** ಅಂದನು. ಅದಕ್ಕೆ ಆತನು (ದೇವರು) ನೀನು ಬೆತ್ತಲೆ ಆಗಿದ್ದೀ ಎಂದು ತಿಳಿಸಿದವರು ಯಾರು? ತಿನ್ನಬಾರದೆಂದು ನಾನು ನಿನಗೆ ಆಜ್ಞಾಪಿಸಿದ **ಮರದ ಫಲವನ್ನು ತಿಂದಿದ್ದೀಯೋ?**"

ಆದಿ 4:7 "ನೀನು ಒಳ್ಳೆಯದನ್ನು ಮಾಡಿದರೆ ನೀನು ಅಂಗೀಕರಿಸಲ್ಪಡುವುದಿಲ್ಲವೇ? ನೀನು ಒಳ್ಳೆಯದನ್ನು ಮಾಡದೆ ಹೋದರೆ ಬಾಗಿಲಲ್ಲಿ ಪಾಪವು ಮಲಗಿದೆ; ಮತ್ತು ನಿನ್ನ ಮೇಲೆ ಅವನ ಆಸೆ ಇರುವುದು, ನೀನು ಅವನನ್ನು ಆಳಬೇಕು ಎಂದು ಹೇಳಿದನು."

ಎ.ಫೆ.ಸ 2:2 "ನೀವು ಪೂರ್ವದಲ್ಲಿ ಅಪರಾದಗಳನ್ನೂ ಪಾಪಗಳನ್ನೂ ಮಾಡುವವರಾಗಿದ್ದು ಇಹ ಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ; ವಾಯು ಮಂಡಲದಲಿ ಅಧಿಕಾರ ನಡೆಸುವ ಅಧಿಪತಿಗೆ ಅಂದರೆ ಅವಿಧೇಯತೆಯ ಮಕ್ಕಳಲ್ಲಿ ಈಗ ಕೆಲಸ ನಡೆಸುವ ಆತ್ಮನಿಗನುಸಾರವಾಗಿ ನಡೆದುಕೊಂಡಿರಿ.

ಮನಸ್ಸಿದೆ ಮತ್ತು ಕಾಮಶಕ್ತಿ ಮತ್ತು ದುರಾಸೆಗಳನುಳ್ಳ ಸ್ವಭಾವ ರಕ್ತ ಮಾಂಸಗಳುಳ್ಳ ದೇಹದೊಳಗೆ ಅವು ನಿವಾಸಿಸುವಾಗ, ಆ ಪಾಪದ ಬುದ್ದಿಗೆ 'ಮಾಂಸಾಭಿಲಾಶೆ' ಎಂದು ಕರೆಯುತ್ತಾರೆ. ಇದೆ ಒಳ ಮನುಷ್ಯ ಮಾಂಸಾಬಿಲಾಶೆಯಲ್ಲಿದ್ದಾನೆ. ಯಾಕೆಂದರೆ ಪಾಪದ ನಿಯಮ ಅವನ ಮೇಲೆ ಆಳ್ವಿಕೆ ನಡೆಸುತ್ತದೆ.

ನೋಡಿ ಕಲಿಯಿರಿ !



ಪ್ರಾಕೃತಿಕ ದೇಹದಲ್ಲಿ ಪಾಪ ಮತ್ತು ಮರಣದ ನಿಯಮ

**ಗಮನಿಸಿ:**
ಈ ಅಧ್ಯಯನದ ಉದ್ದೇಶದಿಂದ ಅವ್ಯವಸ್ಥೆಯನ್ನು ತಡೆಗಟ್ಟ ಬೇಕಾಗಿರುವುದರಿಂದ ನಾವು 'ಮಾಂಸ' ದ ಬಗ್ಗೆ ಮಾತನಾಡುವಾಗ, ಪಾಪದ ಕಡೆ ಗಮನ ಸೆಳೆಯುತ್ತಾ ಇದ್ದೇವೆ. ಪ್ರಾಕೃತಿಕ ದೇಹದ ಕಡೆ ಅಲ್ಲ ; ಸ್ವಭಾವಿಕ ದೇಹಕ್ಕೆ ಈಗಲು ಮೂಲ ಮಾನವನ ಸ್ವಭಾವವಿದೆ.

ಮಾಂಸಭಿಲಾಶೆಯೇ (ದೇಹದಲ್ಲಿರುವ ಪಾಪ) ಒಳ ಮನುಷ್ಯನು ಕೆಟ್ಟವನಾಗುವುದಕ್ಕೆ ಕಾರಣವಾಗುತ್ತದೆ. ದೇಹವು ಒಂದು ಸಾಧನ ಮಾತ್ರ. ಮಾಂಸಭಿಲಾಶೆಯು ಸೈತಾನನ ಕೆಟ್ಟಗುಣ. ಮಾನವನ ದೇಹದಲ್ಲಿ ಈ ಸ್ವಭಾವ ಒಂದು ಕಣ್ಣಿಗೆ ಕಾಣದ ಶಕ್ತಿ, ಅಥವಾ ಒಳ ಮನುಷ್ಯನ ಮೇಲೆ ಇರುವ ಬಲ. ಇದು ದೇವರಿಗೆ ವಿರುದ್ದವಾಗಿದೆ. 'ಮಾಂಸಭಿಲಾಶೆಗೆ' ಒಳ್ಳೆ ಮತ್ತು ಕೆಟ್ಟದರ ಮನಸ್ಸು ಇದೆ, ಕಾಮಭಿಲಾಶೆ ಮತ್ತು ದುರಾಸೆಗಳ ಕೆಟ್ಟ ಸ್ವಭಾವವೂ ಇದೆ, ಒಳ ಮನುಷ್ಯ ಮಾಂಸಭಿಲಶೆಗಳಿಗೆ ಒಳಪಟ್ಟರೆ ಅವನು ಅವುಗಳೊಂದಿಗೆ ಒಂದಾಗುತ್ತಾನೆ.

ಆಗ ಅವನ ಪ್ರಾಣಕ್ಕೆ ಒಳ್ಳೆ ಕೆಟ್ಟದರ ಬುದ್ದಿ ಇರುತ್ತದೆ. ಮತ್ತು ಅವನ ಆತ್ಮ ಕಾಮಭಿಲಾಶೆಗಳಿಗೂ, ದುರಾಸೆಗಳಿಗೂ ಒಳಗಾಗುತ್ತದೆ.

ಒಳ ಮನುಷ್ಯ ಆಗ ತನ್ನ ದೇಹವನ್ನು 'ಮಾಂಸಭಿಲಾಶೆಗೆ' ಭಾಗಿಯಾಗುವುದರಿಂದ ಅವನು ಅದರೊಂದಿಗೆ ಒಂದಾಗುತ್ತಾನೆ. ಆಗ ಅವನ ಪ್ರಾಣಕ್ಕೆ ಒಳ್ಳೇದರ ಮತ್ತು ಕೆಟ್ಟದರ ಅರಿವು ಇರುತ್ತದೆ, ಮತ್ತು ಅವನ ಆತ್ಮಾಭಿಲಾಶೆ, ಕಾಮಾಭಿಲಾಶೆ ಮತ್ತು ದುರಾಸೆಗಳಿಗೆ

'ಒಳ್ಳೆದು ಮತ್ತು ಕೆಟ್ಟದರ' ಅರಿವಿಗೆ ಮುಂಚೆ ಪಾಪವು ಮಾನವನ ದೇಹದಲ್ಲಿ ನೆಲಸಿರುವುದಿಲ್ಲ. ಆದುದರಿಂದ 'ಮಾಂಸ' ಎಂದರೆ ಮಾನವನ ಮಾಂಸದ ಮತ್ತು ರಕ್ತದ ದೇಹಕ್ಕೆ ಅನ್ವಯಿಸುವುದಿಲ್ಲ. ಆದರೆ ಸೈತಾನನ ಬುದ್ದಿ ಮತ್ತು ಸ್ವಭಾವಕ್ಕೆ ಅನ್ವಯಿಸುತ್ತದೆ.

ರೋಮಾ 7:24 **"...ಅಯ್ಯೋ ನಾನು ಎಂಥ ನಿರ್ಗತಿಕನಾದ ಮನುಷ್ಯ ! ಇಂಥಃ ಮರಣಕ್ಕೆ ಒಳಗಾದ ಈ ದೇಹದಿಂದ** ಬಿಡಿಸುವವನು ಯಾರು?**"**

ಆದುದರಿಂದ ಮಾಂಸದಲ್ಲಿರುವ ಒಳ ಮುನುಷ್ಯ ಸೈತಾನನ ಕೆಟ್ಟ ಸ್ವಭಾವದಲ್ಲಿ ಭಾಗಿಯಾಗುತ್ತಾನೆ.

ಮಾನವನ ಮೇಲೆ 'ಮಾಂಸ'ವು ಪ್ರಭಾವ ಬೀರುವುದೇಕೆಂದರೆ ಅವನಿಗೆ ಮೇಲು ಮತ್ತು ಕೆಟ್ಟದರ ಅರಿವಿದೆ. ಅದು ಕಾಮಭಿಲಾಶೆ ಮತ್ತು ದುರಾಸೆಗಳನ್ನು ಹುರಿದುಂಬಿಸುತ್ತದೆ. ಆದುದರಿಂದ ಮಾಂಸವು ಒಳ ಮನುಷ್ಯನ ಮಿತಿಗಳನ್ನು ಮೀರಿ ಒತ್ತಾಯ ಮಾಡುವುದಾಗಲಿ, ಪ್ರಭಾವ ಬೀರುವುದಾಗಲಿ ಮಾಡುವುದಿಲ್ಲ.
ಕೊರಿ 10:13 **"ಮನುಷ್ಯನಿಗೆ ಸಾಮಾನ್ಯವಾಗಿ ಬರುವ ಶೋಧನೆಯೇ** ಹೊರೆತು, ಬೇರೆ ಯಾವುದು ನಿಮಗೆ ಸಂಭವಿಸಲಿಲ್ಲ;**"**

**ನೆನಪಿನಲ್ಲಿಡಿ;** ದೇಹವು ಒಂದು ದೇಶವೆಂದೋ ಅಥವಾ ಮನೆಯೆಂದಾದರೋ ತಿಳಿಯಿರಿ, ಅದು ಮಾಂಸದ ಕಾರಣದಿಂದ ಬಂದ ಶೋಧನೆಗೆ ಜವಾಬ್ದಾರಿಯಲ್ಲ. ಮಾಂಸವು ಒಂದು ಕಣ್ಣಿಗೆ ಕಾಣದ ಶಕ್ತಿ, ಅಥವಾ ನಿಯಮ: ಅದು ಒಳ ಮನುಷ್ಯನ ಮೇಲೆ ಸತತವಾಗಿ ಒತ್ತಡವನ್ನು ಹಾಕುತ್ತದೆ. ಇದು ಗುರುತ್ವಾಕರ್ಷಣ ಹೇಗೆ ಹೊರ ಮನುಷ್ಯನ ಮೇಲೆ ಒತ್ತಡ ಹಾಕುತ್ತದೊ ಹಾಗೆಯೇ.

ಆದಿ 4:7 "ನೀನು ಒಳ್ಳಯದನ್ನು ಮಾಡಿದರೆ ನೀನು ಅಂಗಿಕರಿಸಲ್ಪಡುವುದಿಲ್ಲವೋ? ನೀನು ಒಳ್ಳೆಯದನ್ನು ಮಾಡದೆ ಹೋದರೆ ಬಾಗಿಲಲ್ಲಿ ಪಾಪವು ಮಲಗಿದೆ, ಮತ್ತು **ನಿನ್ನ ಮೇಲೆ ಅವನ ಆಸೆ ಇರುವುದು, ನೀನು ಅವನನ್ನು ಆಳಬೇಕೆಂದು ಹೇಳಿದನು"**

ಕಾಯೀನನ ದೇಹ ಅವನ ಒಳ ಮನುಷ್ಯನ ಮೇಲೆ ಪ್ರಭಾವ ಬಿರುವುದು ಅಲ್ಲ ; ಇದರಿಂದ ಅವನ ಸಹೋದರನನ್ನು ಅವನು ದ್ವೇಶಿಸಿದ್ದೂ ಅಲ್ಲ. ಆದರೆ ಪಾಪದ ಬುದ್ದಿಯಾದ 'ಮಾಂಸಾಭಿಲಾಶೆ' ಅವನ ದೇಹದಲ್ಲಿ ನೆಲಸಿತು.

ಆದಿ 6:3, 5 "ಆಗ ಕರ್ತನು–ನನ್ನ ಆತ್ಮನು ಮನುಷ್ಯನ ಸಂಗಡ ಯಾವಗಲೂ ವಿವಾದ ಮಾಡುವುದಿಲ್ಲ; **ಅವನು ಮನುಷ್ಯನಷ್ಟೇ...** ಮತ್ತು ಮನುಷ್ಯನ ದುಷ್ಟತ್ವವು ಭೂಮಿಯಲ್ಲಿ ಹಚ್ಚಿದ್ದನ್ನೂ ಅವನ ಹೃದಯದ ಆಲೋಚನೆಗಳ ಕಲ್ಪನೆಗಳೆಲ್ಲವೂ **ಯಾವಾಗಲೂ ಕೆಟ್ಟದ್ದೆಂದು** ದೇವರು ನೋಡಿದನು."

ಸೈತಾನನ ಅವನತಿ ಮನುಷ್ಯನ ಸೃಷ್ಟಿಗೆ ಬಹಳ ಕಾಲಕ್ಕೆ ಮುಂಚೆಯೇ ಆಗಿತ್ತು. ದೇವದೂತನಾದ ಲೂಸೀಫರನು ಮೊದಲನೇಯ ಪರಲೋಕವಾಸಿ, ಅವನಲ್ಲಿ ಮೇಲು ಮತ್ತು ಕೆಟ್ಟದರ ಅರಿವು ಮೊದಲು ಉಂಟಾಯಿತು. ಅವನು ಕೆಟ್ಟ ಸ್ವಭಾವವುಳ್ಳವನಾದನು, ಮತ್ತು ಈಗ ಸೈತಾನನೆಂದು ಕರೆಯಲ್ಪಡುತ್ತಾನೆ, ಒಳ್ಳೆದು ಮತ್ತು ಕೆಟ್ಟದರ ಅರಿವು ಸೈತಾನನ ರಾಜ್ಯದ ನಿಯಮವಾಗಿದೆ. ಅವನ ರಾಜ್ಯದಲ್ಲಿ ಅವರು ಒಳ್ಳೆಯದನ್ನು ಮತ್ತು ಕೆಟ್ಟದ್ದನ್ನು ಸಹಾ ಮಾಡುತ್ತಾರೆ.


ಆದಿ 3:22 "ಇದಲ್ಲದೇ ದೇವರಾದ ಕರ್ತನು – ಇಗೋ, ಮನುಷ್ಯನು ಮೇಲು ಕೀಳು ತಿಳಿಯುವುದಕ್ಕೆ **ನಮ್ಮಲ್ಲಿ ಒಬ್ಬನಂತಾದನು..."**

ಒಳಗಾಗುತ್ತದೆ. ಒಳ ಮನುಷ್ಯನು ಆಗ ತನ್ನ ದೇಹವನ್ನು ಮಾಂಸಭಿಲಾಶೆಗಳಿಗೆ ಭಾಗಿಯಾದಂತೆಲಾ ಉಪಯೋಗಿಸುತ್ತಾನೆ. ಅವನು 'ಮಾಂಸಭಿಲಾಶೆಗಳಿಗ' ಬಹಿರಂಗವಾಗಿ ಇರುವುದರಿಂದ ಒಳ ಮನುಷ್ಯನ ಗುಣ ಲಕ್ಷಣಗಳು ಬದಲಾಗುತ್ತವೆ. ಅವನ ಪಾಪದ ಸ್ವಭಾವಗಳಲ್ಲಿ ಪಾಲು ತೆಗೆದುಕೊಂಡತೆಲ್ಲಾ ಅವನು ಕ್ರಮೇಣ ಕೆಟ್ಟವನಾಗುತ್ತಾನೆ ಅಥವಾ ಮಾಂಸಾಭಿಲಾಶೆಗಳಿಗೆ ಒಳಗಾಗುತ್ತಾನೆ ಮತ್ತು ಒಳ್ಳೆ ಮತ್ತು ಕೆಟ್ಟದರ ಅರಿವು ಸೈತಾನನಿಂದ ಶುರುವಾಯಿತು ಮತ್ತು ಈ ತಿಳುವಳಿಕೆಯೇ ಪಾಪದ ನಿಯಮವಾಗಿದೆ. ಈ ತಿಳುವಳಿಕೆಗೆ ಅನುಸಾರವಾಗಿ ಕೆಲಸ ಮಾಡುವ ಬುದ್ಧಿ ಕಾಮಾಭೀಲಾಶೆ ಮತ್ತು ದುರಾಸೆಗಳನ್ನು ಆತ್ಮನಲ್ಲಿ ಹುರಿದುಂಬಿಸುತ್ತದೆ. ಆತ್ಮನು ಒಂದು ಬಾರಿ ಕೆಟ್ಟಸ್ವಭಾವಿಯಾದನೋ ಅದು ಪ್ರಾಣದ ಮೇಲೆ ಪ್ರಭುತ್ವ ಬೀರಿ ಸೈತಾನನಿಗೆ ವಿಧೇಯನಾಗುತ್ತದೆ.

**ಪಾಪ ಮತ್ತು ಮರಣಗಳ ನಿಯಮ**

ಎಲ್ಲಾ ಮಾನವರೂ ಆದಮನ ದೇಹದಲ್ಲಿ ಪಾಲುಗೊಳ್ಳುತ್ತಾರೆ. ಮತ್ತು ಅದೇ ಕಾರಣದಿಂದ ಪಾಪ ಮತ್ತು ಮರಣದ ನಿಯಮದ ಕೆಳಗೆ ಬಂದಿದ್ದಾರೆ. ಮನುಷ್ಯನು ಪಾಪದಲ್ಲಿ ಜನಿಸಿರುವುದರಿಂದ, ಮಾಂಸವು ಒಳ್ಳೇ ಮತ್ತು ಕೆಟ್ಟದರ ತಿಳುವಳಿಕೆಯನ್ನು ಪ್ರಾಣಕ್ಕೆ ಮುಟ್ಟಿಸುತ್ತದೆ. ಮತ್ತು ಅದರಿಂದಾಗಿ ಕಾಮಾಭಿಲಾಶೆ ಮತ್ತು ದುರಾಶೆಗಳನ್ನು ಕೂಡಾ ಒಳಮನುಷ್ಯನ ಆತ್ಮಕ್ಕೆ ಮುಟ್ಟಿಸುತ್ತದೆ. ಒಳ ಮನುಷ್ಯನು ಮಾಂಸದಲ್ಲಿ ಭಾಗವಹಿಸುವುದರಿಂದ ಪಾಪಿಯೂ ಆಗುತ್ತಾನೆ.

ನೋಡಿ ಕಲಿಯಿರಿ!



ಆದಮನ ಸಂತತಿ

**<u>ಪಾಪವು ಮಾನುಷ್ಯರನ್ನು ಭ್ರಷ್ಟರನ್ನಾಗಿ ಮಾಡುತ್ತದೆ :</u>**

ಆದಮನ ದೇಹದಿಂದ ಹುಟ್ಟಿದ ಪ್ರತಿಯೊಂದು ಮಗು ಮಾಂಸಾಭಿಲಾಶೆಯಲ್ಲಿದ್ದು, ಆದಾಮ ಹವ್ವರಂತೆ ತನ್ನ ವೈಯಕ್ತಿಕ ಅವನಿತಿಯನ್ನು ಅನುಭವಿಸುತ್ತಾನೆ. ಒಂದು ಮಗು ತಾನು ಬೆತ್ತಲೆಯಾಗಿರುವಾಗ ಹೇಗೆ ತನನ್ನು ತಾನು ಮುಚ್ಚಿಕೊಳ್ಳುತ್ತದೋ ನಾವು ನೋಡಿದ್ದೆವೆ, ಯಾಕೆಂದರೆ ಆ ದಿವಸದಲ್ಲಿ ಒಳ್ಳೇ ಮತ್ತು ಕೆಟ್ಟದ್ದನ್ನು ತಿಳಿಯುವ ಅವನ ಕಣ್ಣುಗಳು ತೇರೆಯಲ್ಪಟ್ಟವು. ಆಗ ಮಗು ತನ್ನಷ್ಟಕ್ಕೆ

**ಗಮನಿಸಿ: "ನಮ್ಮಲ್ಲಿ ಒಬ್ಬನು"**, ಲೂಸಿಫರನಿಗೆ ಅನ್ವಯಿಸುತ್ತದೆ ಮತ್ತು ತ್ರಿತ್ವದಲ್ಲಿ ಒಬ್ಬರಿಗೆ ಅಲ್ಲ.

ಯೋಬ 1:6 "ಮತ್ತು ಒಂದು ದಿನ ಏನಾಯಿತೆಂದರೆ **ದೇವರ ಪುತ್ರರು** ಕರ್ತನ ಮುಂದೆ ನಿಂತುಕೊಳ್ಳುವುದಕ್ಕೆ ಬಂದಾಗ **ಸೈತಾನನು ಸಹಾ ಅವರೊಂದಿಗೆ ಬಂದನು.**

ಯೆಶಾ 14:12–15 "ಓ ಸೈತಾನನೆ (ಲೂಸಿಫರ್), ಉದಯದ ಮಗನೇ! ಆಕಾಶದಿಂದ ಹೇಗೆ ಬಿದ್ದಿ; ಜನಾಂಗಗಳನ್ನು ಬಲಹೀನ ಮಾಡಿದ ನೀನು ಭೂಮಿಗೆ ಹೇಗೆ ಕಡಿಯಲ್ಪಟ್ಟಿದ್ದೀ! ಯಾಕೆಂದರೆ ನೀನು ನಿನ್ನ ಹೃದಯದಲ್ಲಿ **ಆಕಾಶಕ್ಕೆ ಏರಿ, ದೇವರ ನಕ್ಷತ್ರಗಳ ಮೇಲೆ** ನನ್ನ ಸಿಂಹಾಸನವನ್ನು ಘನತೆಗೇರಿಸುವೆನು; ಉತ್ತರ ದಿಕ್ಕಿನ ಕಡೆಗಿರುವ ಸಮೂಹ ಪರ್ವತದ ಮೇಲೆಯೂ ಸಹಾ ನಾನು ಆಸೀನನಾಗವೆನು. ಉನ್ನತವಾದ ಮೇಘಮಂಡಲದ ಮೇಲೆ ಏರಿ **ಮಹೋನ್ನತನಿಗೆ ಸಮನಾಗುತ್ತೇನೆ** ಎಂದು ಅಂದುಕೊಡೆಯಲ್ಲಾ ; ಆದಾಗ್ಯೂ ಪಾತಾಳದ ಕುಣಿ ಪಾರ್ಶ್ವಗಳಿಗೆ ಇಳಿಸಲ್ಪಡುವಿ.

ರೋಮ 5:19"ಯಾಕೆಂದರೆ **ಒಬ್ಬ ಮನುಷ್ಯನ ಅವಿಧೇಯತೆಯಿಂದ ಅನೇಕರು ಪಾಪಿಗಳಾದರು..."**

ಯೋಹಾ 3:6 "ದೇಹದಿಂದ ಹುಟ್ಟಿದ್ದು ದೇಹವೇ",

ಮಾಂಸದಿಂದ ಹುಟ್ಟಿದ್ದು ಪೈಶಾಚಿಕ... ಮಾಂಸವು ಒಳ ಮನುಷ್ಯನನ್ನು ಕೆಟ್ಟವನಾಗುವಂತೆ ಮಾಡುತ್ತದೆ.

ಯೋಹಾ2:24,25 "ಆದರೆ ಯೇಸು ತನನ್ನು ಅವರಿಗೆ ವಶಪಡಿಸಿಕೊಳ್ಳಲಿಲ್ಲ; ಯಾಕೆಂದರೆ ಅತನು ಎಲ್ಲರನ್ನೂ ಅರಿತಿದ್ದನು ಮತ್ತು **ಆತನು ಮನುಷ್ಯರ ಆತರಂಗವನ್ನು ತಿಳಿದವನಾದ** ಕಾರಣ ಯಾರು ಯಾವ ಮನುಷ್ಯನ ವಿಷಯದಲ್ಲಿಯೂ ಆತನಿಗೆ ಸಾಕ್ಷಿ ಕೊಡಬೇಕಾದ ಅವಶ್ಯಕತೆಯಿರಲಿಲ್ಲ,"

ಎಫೆ 2:1 "**ಇದಲ್ಲದೆ ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು** ಆತನು ಬದುಕಿಸಿದನು."

ಒಳ ಮನುಷ್ಯನು ಒಬ್ಬ ಅಮರನಾದ ಆತ್ಮೀಯ ಜೀವಿಯಾಗಿದ್ದರೂ ಅವನು ಪಾಪ ಮಾಡುವದರಿಂದ ಸತ್ತವನಾಗಿದ್ದಾನೆ.

ರೋಮ 5:12 "ಈ ವಿಷಯ ಹೇಗೆಂದರೆ ಒಬ್ಬ ಮನುಷ್ಯನಿಂದಲೇ **ಪಾಪವೂ** ಪಾಪದಿಂದ ಮರಣವೂ **ಲೋಕದೊಳಗೆ ಸೇರಿದವು;** ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯ ವ್ಯಾಪಿಸಿತು"

ರೋಮಾ 3:23 "ಯಾಕೆಂದರೆ ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ"

ಕೀರ್ತ 51:5 "ಇಗೋ, **ಅಕ್ರಮದಲ್ಲಿ** ರೂಪಿಸಲ್ಪಟ್ಟೆನು ;**ಪಾಪದಲ್ಲಿ** ನನ್ನ ತಾಯಿ ನನ್ನನ್ನು ಗರ್ಭಧರಿಸಿದಳು,"


ತಾನೇ ಪಾಪಿಯಾಗಿರುತ್ತಾನೆ.

ಪ್ರಾಣದ ಒಳ್ಳೆ ಮತ್ತು ಕೆಟ್ಟದ್ದರ ಅರಿವು ಆತ್ಮನನ್ನು ಕೆಡಿಸುತ್ತದೆ. ಇದರಿಂದಾಗಿ ಮಾಂಸಾಭಿಲಾಶೆಗಳನ್ನು ತೋರ್ಪಡಿಸುತ್ತದೆ.

**ಆದಮನ ಸಂತತಿ**

ಆದಮನ ಸಂತತಿಯವರು ಸೈತಾನನ ಸೇವಕರು. ಒಟ್ಟಾಗಿ ಅವರು ಈ ಪ್ರಪಂಚವನ್ನಾಗಿಸಿದ್ದಾರೆ. ಈ ಪ್ರಪಂಚವು ಸೈತಾನನನ್ನೂ ಅವನ ರಾಜ್ಯವನ್ನೂ ವ್ಯಕ್ತಪಡಿಸಿದೆ,

ನೋಡಿ ಕಲಿಯಿರಿ!




ಪ್ರತಿ ವ್ಯಕ್ತಿಯ ಮಾಂಸಾಭೀಲಾಶೆ ಒಳ ಮನುಷ್ಯನ ಮೇಲೆ ಒತ್ತಡ ಹಾಕಿ 'ಮಾಂಸಾ' ಅಭೀಲಾಶೆಗಳನ್ನು ಈಡೇರಿಸುವಂತೆ ಮಾಡುತ್ತದೆ.

**<u>ಮಾಂಸದ ಕೆಲಸಗಳು ಹೀಗೆ ತೋರ್ಪಡಿಸಿಕೊಳ್ಳುತ್ತವೆ ;</u>**

ದೈವೀಕವಲ್ಲದಿರುವುದು, ದೇವರನ್ನು ಅಲ್ಲಗಳೆಯುವುದು, ಕೃತಘ್ನತೆ,ದಡ್ಡತನ,ವಿಗ್ರಹಾರಾದಾನೆ, ಅಪವಿತ್ರತೆ, ಸೃಷ್ಠಿಯನ್ನು ಆರಾಧಿಸಿ ಸೇವಿಸುವುದು, ಸೃಷ್ಠಿಕರ್ತನನ್ನು ಅಲ್ಲಗಳಯುವುದು, ಕೆಟ್ಟದರ ಮೇಲೆ ಪ್ರೀತಿ, ತುಚ್ಛವಾದ ಮನೋಭಾವ, ಹಾದರ, ಕೆಟ್ಟತನ, ಆಶೇಬುರುಕುತನ, ಮತ್ಸರ, ಹೊಟ್ಟೇಕಿಚ್ಚು, ಕೊಲೆಮಾಡುವುದು, ವಾದಮಾಡುವುದು,ಮೋಸಮಾಡುವುದು, ವೈರತ್ವ, ಚಾಡಿಚುಚ್ಚುವುದು, ದೇವರನ್ನು ಹಗೆಮಾಡುವುದು, ಮತ್ಸರ, ಗರ್ವ ಕೊಚ್ಚಿಕೊಳ್ಳುವುದ್ದು. ಕೆಟ್ಟ ಕಾರ್ಯಗಳನ್ನು ಕಂಡುಹಿಡಿಯುವುದು, ತಂದೆ ತಾಯಿಗಳಿಗೆ ಅವಿಧೇಯತೆ, ಲೆಕ್ಕಿಸದೆ ಇರುವುದು, ವಾಗ್ದಾನ ಮುರಿಯುವುದು ಸ್ವಾಭಾವಿಕವಾದ ಪ್ರೀತಿ ಇಲ್ಲದೇ ಇರುವುದು, ಕ್ರೂರತನ, ದಯೆಯಿಲ್ಲದ್ದು, ವ್ಯಭಿಚಾರ, ಮನುಷ್ಯರೊಂದಿಗೆ ತಮ್ಮನ್ನು ತಾವು ಕೆಡಿಸಿಕೊಳ್ಳುವುದು, ಕಳ್ಳತನ, ಸುಳ್ಳು, ಮದ್ಯಪಾನ, ಸಿಟ್ಟಿಗೆ ಏಳುವುದು, ದೋಚುವುದು, ಮಂತ್ರಮಾಡುವುದು, ಹಗೆ ಭಿನ್ನಮತ, ಕೋಪ, ಜಗಳ, ಕೆಡಿಸುವಿಕೆ, ಸುಳ್ಳು ಭೋಧನೆ ಇತ್ಯಾದಿ.

ಪ್ರಪಂಚವು ಈ ಭೂಮಿಯಲ್ಲ, ಆದರೆ ಅದರಲ್ಲಿ ನೆಲೆಸಿರುವ ಜನ,

ಯಾಕೋ 3:15–16 "ಅದು ಮೇಲಿನಿಂದ ಬಂದ **ಜ್ಞಾನವಲ್ಲ;** ಅದು **ಭೂಸಂಬಂಧವಾದದ್ದು, ಪ್ರಾಕೃತಭಾವವಾದದ್ದು,ದೆವ್ವಗಳಿಗೆ ಸಂಬಂಧಪಟ್ಟದ್ದು.** ಯಾಕೆಂದರೆ ಹೊಟ್ಟೆಕಿಚ್ಚು, ಜಗಳವು ಇರುವ ಕಡೆ, ಗಲಿಬಿಲಿಯು ಸಕಲ ವಿಧವಾದ ಕೆಟ್ಟ ಕೃತ್ಯವೂ ಇರುವವು."

ಭೂಮಿಯು ಅನೀತಿಗೆ ಜವಾಬ್ದಾರಿಯಲ್ಲ, ಅದರೆ ಅದರ ಮೇಲೆ ನೆಲೆಸಿರುವ ಜನ ಅನೀತಿವಂತರಾಗಿದ್ದಾರೆ; ಅದೇ ರೀತಿಯಾಗಿ ಒಳ ಮನುಷ್ಯನು ಅನೀತಿಗೆ ಜವಾಬ್ದಾರಿ, ದೇಹವಲ್ಲ,

ಯೋಹಾ 8:44 "ನೀವು **ನಿಮ್ಮ ತಂದೆಯಾದ ಸೈತಾನನಿಗೆ ಸಂಬಂಧ ಪಟ್ಟವರಾಗಿದ್ದೀರಿ** ಮತ್ತು ನಿಮ್ಮ ತಂದೆಯ ದುರಾಶೆಗಳನ್ನೇ ನೀವು ಮಾಡಲು ಇಚ್ಛಿಸುತ್ತೀರಿ ..."

ಎಫೆ 2:2 "ನೀವು ಪೂರ್ವದಲ್ಲಿ ಅಪರಾಧಗಳನ್ನು ಪಾಪಗಳನ್ನು ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ ; ವಾಯು ಮಂಡಲದಲ್ಲಿ ಅಧಿಕಾರ ನೆಡೆಸುವ ಅಧಿಪತಿಗೆ ಅಂದರೆ **ಅವಿಧೇಯತೆಯ ಮಕ್ಕಳಲ್ಲಿ ಈಗ ಕೆಲಸ ನೆಡೆಸುವ ಆತ್ಮಕ್ಕೆ ಅನುಸಾರವಾಗಿ ನೆಡೆದುಕೊಂಡಿರಿ."**

ಪಾಪ ಹೇಗದರೂ ಮನುಷ್ಯನನ್ನು ಓಡಿಸತಕ್ಕ ದೆವ್ವವಲ್ಲ, ಯಾಕೆಂದರೆ ಅದು ಕತ್ತಲೆಯ ರಾಜ್ಯದ ನಿಯಮ. ಸೈತಾನನು ಒಳ ಮನುಷ್ಯನ ಮೇಲೆ ಪಾಪದ ನಿಯಮದ ಮೂಲಕ ಆಳ್ವಿಕೆ ನಡೆಸುತ್ತಾನೆ.

ಮತ್ತಾ 12:34 "ಓ, ಸರ್ಪಸಂತತಿಯವರೇ, **ಕೆಟ್ಟವರಾಗಿರುವ ನೀವು ಒಳೆಯದನ್ನು ಹೇಗೆ ಮಾತನಾಡೀರಿ?** ಯಾಕೆಂದರೆ ಹೃದಯದಲ್ಲಿ ಸಮೃದ್ಧಿಯಾಗುವುದನ್ನೇ ಬಾಯಿ ಮಾತನಾಡುತ್ತದೆ."

ಯೋಹಾ 8:44 "ನೀವು ನಿಮ್ಮ ತಂದೆಯಾದ ಸೈತಾನನಿಗೆ ಸಂಬಂಧಪಟ್ಟವರಾಗಿದ್ದೀರಿ. **ಮತ್ತು ನಿಮ್ಮ ತಂದೆಯ ದುರಶೆಗಳನ್ನೇ ನೀವು ಮಾಡುವುದಕ್ಕೆ ಇಚ್ಛಿಸುತ್ತೀರಿ** ಅವನು ಆದಿಯಿಂದಲೂ ಕೊಲೆಗಾರನಾಗಿದ್ದು ಸತ್ಯದಲ್ಲಿ ನಿಲ್ಲಲಿಲ್ಲ,"

**ಅನ್ವಯಿಸುವ ವಚನಗಳು :**

ರೋಮ 1:24 – 32 ; 1 ಕೊರಿ 6:9,10 ; ಗಲಾತ್ಯ 5:19–21 ; ಎಫೆ 5:3–5 ; 2 ತಿಮೋ 3:1–5.

1 ಕೊರಿ 6:10 ; ಗಲಾ 5:21 ; ಮತ್ತು ಎಫೆ 5 : 5. ದೇವರು ಇಲ್ಲಿ ಹೇಳಿರುವುದು : ಇಂಥ ಕೆಲಸ ಮಾಡುವವರು ಪರಲೋಕ ರಾಜ್ಯವನ್ನು ಸೇರಲಾರರು.

ಪ್ರಾಕೃತಿಕ ದೇಹದ ಮರಣ ಒಳ ಮನುಷ್ಯನನ್ನು ಅವನ ಪಾಪ ಸ್ವಾಭಾವದಿಂದ ರಕ್ಷಿಸಲಾರದು. ಒಳ ಮನುಷ್ಯನು ಕೆಟ್ಟವನಾದುದರಿಂದ ಅವನನ್ನು ಅವನು ಸೇವಿಸಿದ

ಪಾಪದ ನಿಮಿತ್ತ ಪ್ರಾಕೃತಿಕ ದೇಹ ಮುಪ್ಪಾಗಿ ಸಾಯುತ್ತದೆ, ಯಾಕೆಂದರೆ ಪಾಪಿಯಾದ ಮನುಷ್ಯ ಸದಾ ಜೀವಿಸಲು ದೇವರು ಅನುಮತಿಸುವುದಿಲ್ಲ. ಆದುದರಿಂದ ಸೈತಾನನ ಸೇವಕನಿಗೆ ನಿತ್ಯಜೀವ ಇಲ್ಲ.

ಸೈತಾನನೊಂದಿಗೆ ನರಕದಲ್ಲಿ ಇಡತಕ್ಕದ್ದು.

ಆದಿ3:22 "...ಈಗ ಅವನು ಕೈಚಾಚಿ, ಜೀವವೃಕ್ಷದ ಫಲವನ್ನು ತೆಗೆದು **ತಿಂದು ಅವನು ಎಂದೆಂದಿಗೂ ಬದುಕಬಾರದು ಅಂದನು.**"

**ಜಾತಿಗಳು ಮತ್ತು ಮನುಷ್ಯನ ಪ್ರಾಧಾನ್ಯತೆ**

ರೋಮ 8:8 “ಹೀಗಿರಲಾಗಿ **ಶರೀರಾಧೀನರು ದೇವರನ್ನು ಮೆಚ್ಚಿಸಲಾರು.”**

ಯಾವುದೇ ವಿಧವಾದ ಜಾತಿ ಅಥವ ಆರಾಧನ ಕ್ರಮ ಇಂದ್ರಿಯ ಶಾಸನಗಳಿದ್ದರೂ ಅಥವಾ ಯಾವುದೇ ಒಳ್ಳೆ ಕಾರ್ಯಗಳು ದೇಹವನ್ನು 'ಮಾಂಸ' ದಿಂದ ಬಿಡುಗಡೆ ಮಾಡಲಾರವು. ಮಾನವನ ಎಲ್ಲಾ ಆಚರಣೆಗಳಿದ್ದರೂ ಮತ್ತು ತನ್ನನ್ನು ತಾನು ಉತ್ತಮ ಗೋಳಿಸುವ ಮಾನವನ ಪ್ರಯತ್ನಗಳೆಲ್ಲವೂ ಇದ್ದರೂ, ಅವನು ಪಾಪ ಮತ್ತು ಮರಣದ ಕೆಳಗೆ ಸೈತಾನನ ರಾಜ್ಯದಲ್ಲಿ ಉಳಿಯುವನು.


ಯೋಹಾ 8:34 “ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ,**ಪಾಪ ಮಾಡುವವನು ಪಾಪಕ್ಕೆ ಗುಲಾಮನಾಗಿದ್ದಾನೆ.”**

ಅವರು ಒಳ್ಳೇದು ಮಾಡುವುದರಿಂದ ದೇವರನ್ನು ಸೇವಿಸುವೆವೆಂದು ತಿಳಿದುಕೊಂಡಿದ್ದಾರೆ. ಆದರೆ, ಇದು ನಿಜವಲ್ಲ. ಅವರಿಗೆ ಎಲ್ಲಾ ಒಳ್ಳೆ ಉದ್ದೇಶಗಳಿದ್ದರೂ ಮತ್ತು ಒಳ್ಳೆ ಕಾರ್ಯಗಳಿದ್ದರೂ ಶರೀರ ಭಾವಗಳು ನಿಲ್ಲುವುದಿಲ್ಲ.ಒಳ್ಳೆ ಕಾರ್ಯಗಳು ಅವರು ಮಾಡಿದ ಪಾಪಗಳನ್ನು ಅಳಿಸುವುದಿಲ್ಲ.


ಒಳ ಮನುಷ್ಯನು ಪಾಪ ಮಾಡುವುದನ್ನು ನಿಲ್ಲಿಸದೇ ಹೋದರೆ ಅವನ ಜಾತಿ ಇದ್ದೂ ಏನು ಪ್ರಯೋಜನ? ಅವನ ಜಾತಿ ಸತ್ತದ್ದಾಗಿದ್ದು ಅವನ ದೇಹದಲ್ಲಿ ಇರುವ ಪಾಪದಿಂದ ಅದು ಬಿಡಿಸಲಾರದು. ಒಳ ಮನುಷ್ಯನು ಸೈತಾನನ್ನು ಸೇವಿಸುತ್ತಾನೆ. ಅವನು ಮಾಂಸದಿಂದ ಬಂಧಿಸಲ್ಪಟ್ಟಿದ್ದಾನೆ. ಮನುಷ್ಯನನ್ನು ಮಾಂಸದಿಂದ ರಕ್ಷಿಸಲು ದೇವರು ಪಾಪವನ್ನು ಪ್ರಾಕೃತಿಕ ದೇಹದಿಂದ ತಗೆದು ಹಾಕಬೇಕಾಯಿತು. ಹೀಗೆ ಸೈತಾನನ ಆಳ್ವಿಕೆ ಕೊನೆಗಾಣಿಸಬೇಕಾಗಿತ್ತು.

ರೋಮ 6:22 “ಈಗಲಾದರೂ ನೀವು **ಪಾಪದಿಂದ ಬಿಡುಗಡೆಯನ್ನು ಹೊಂದಿ,** ದೇವರಿಗೆ ದಾಸರಾದ್ದರಿಂದ **ಪರಿಶುದ್ಧತೆಯೇ ನಿಮಗೆ ಫಲ;** ಆದರ ಅಂತ್ಯವು ನಿತ್ಯ ಜೀವ.”


# ಸಾರಂಶ




**ಸ್ವತಂತ್ರತೆ :**
ದೇವರು ಮನುಷ್ಯನನ್ನು ಉಂಟು ಮಾಡಿದನು. ಮನುಷ್ಯನಿಗೆ ವಿವೇಚನಾ ಶಕ್ತಿ ಇತ್ತು, ಮತ್ತು ತಿಳುವಳಿಕೆಗೆ ಅನುಸಾರವಾಗಿ ಆಯ್ಕೆ ಮಾಡುವ ಶಕ್ತಿ ಇತ್ತು. ಆತನು ತನ್ನ ಸೃಷ್ಟಿಕರ್ತನಿಗೆ ವಿಧೇಯನಾಗಿರಲೊಲ್ಲದೆ, ಸೈತಾನನಿಗಿ ವಿಧೇಯನಾದನು





**ಪಾಪಕ್ಕೆ ಗುಲಾಮತನ :**
ಮನುಷ್ಯನು ಸೈತಾನನಿಗೆ ವಿಧೇಯನಾದುದರಿಂದ ಪಾಪವು ಅವನ ದೇಹವನ್ನು ಪ್ರವೇಶಿಸಿತು, ಮತ್ತು ಅವನ ಒಳ ಮನುಷ್ಯ ಪಾಪದ ನ್ಯಾಯಪ್ರಮಾಣದ ಕೆಳಗೆ ಬಂದನು. ಆಗ ಅವನು ಸೈತಾನನ ರಾಜ್ಯದಲ್ಲಿದ್ದನು ಮತ್ತು ಪಾಪಕ್ಕೆ ಗುಲಾಮನಾದನು




ಪ್ರಾಕೃತಿಕ ದೇಹದಲ್ಲಿ ಪಾಪ ಮತ್ತು ಮರಣದ ನಿಯಮ

**ಅಶುದ್ಧತೆ :**
ಪಾಪವು ಒಳ ಮನುಷ್ಯನನ್ನು ಅಶುದ್ಧ ಮಾಡಿದ ಹಾಗೆ ಅವನು ಅದರ ಪಾಪಸ್ವಭಾವದೊಂದಿಗೆ ಪಾಲುತೆಗೆದುಕೊಂಡನು ಮತ್ತು ಅದೇ ಕಾರಣಕ್ಕಾಗಿ ಕೆಟ್ಟವನಾದನು



ಆದಮನ ಸಂತತಿ

**ಪಾಪಿಗಳು :**
ಆದಮನ ಸಂತತಿಗಳೆಲ್ಲರೂ ಪಾಪಿಗಳೇ : ಯಾಕೆಂದರೆ ಅವರು ಶರೀರಭಾವದಲ್ಲಿ ಹುಟ್ಟಿದವರಾದುದರಿಂದ.




**ದುಷ್ಟತನ :**
ಇಡೀ ಪ್ರಪಂಚ ದುಷ್ಟನ ಪ್ರಭಾವದಲ್ಲಿ ಇದೆ. ಅವರು ಪಾಪಕ್ಕೆ ದಾಸರು, ಯಾಕೆಂದರೆ ಪಾಪದ ಮತ್ತು ಮರಣದ ನ್ಯಾಯಪ್ರಮಾಣವು ಅವರ ದೇಹದಲ್ಲಿ ಆಳ್ವಿಕೆ ನಡೆಸುತ್ತದೆ.

## ಅಧ್ಯಾಯ 2


### ಎರಡನೇ ಮನುಷ್ಯ – ಕ್ರಿಸ್ತನು

**ದೇವರ ನ್ಯಾಯಪ್ರಮಾಣ ಪಾಪವನ್ನು ಪ್ರಕಟ ಪಡಿಸುತ್ತದೆ.**

ಮನುಷ್ಯನ ದುಷ್ಟತನ ಭೂಮಿಯ ಮೇಲೆ ಹೆಚ್ಚಾಗಿದ್ದರೂ, ದೇವರು ಮನುಷ್ಯನನ್ನು ನ್ಯಾಯತೀರಿಸಲು ಆಗಲಿಲ್ಲ, ಯಾಕಂದರೆ ನ್ಯಾಯ ಪ್ರಮಾಣ ಇಲ್ಲದೇ ಇರುವಲ್ಲಿ ಆಜ್ಞಾತಿಕ್ರಮಣವೂ ಇರುವುದಿಲ್ಲ. ಮನುಷ್ಯನ ಅನೀತಿಯನ್ನು ತೀರ್ಪು ಮಾಡುವದಕ್ಕೋಸ್ಕರ ದೇವರು ನ್ಯಾಯ ಪ್ರಮಾಣವನ್ನು ಕೊಟ್ಟನು. ದೇವರ ನ್ಯಾಯ ಪ್ರಮಾಣ ಪಾಪವನ್ನು ಪ್ರಕಟಿಸಿತು, ಮತ್ತು ಎಲ್ಲರೂ ಪಾಪಿಗಳೇ.

ಇಸ್ರಯೇಲ್ ಮೂಲಕ ಮನುಷ್ಯನು ಪಾಪಿ ಎಂದು ದೇವರು ಸಮರ್ಥಿಸಿದನು; ಮತ್ತು ಅವನು ನ್ಯಾಯ ಪ್ರಮಾಣಕ್ಕೆ ವಿಧೇಯನಾಗಲು ಸಾದ್ಯವಿಲ್ಲ.

ನೋಡಿ ಕಲಿಯಿರಿ !




ಇಸ್ರಯೋಲ್ಯರು ದೇವಜನರಾಗಿದ್ದರು, ಆದರೆ ಅವರು ನ್ಯಾಯ ಪ್ರಮಾಣಕ್ಕೆ ವಿಧೇಯರಾಗಲು ಸಾದ್ಯ ಆಗಲಿಲ್ಲ, ಯಾಕೆಂದರೆ ದೇಹದಲ್ಲಿದ್ದ ಪಾಪದಿಂದ, ಅವರಿಗೆ ನ್ಯಾಯ ಪ್ರಮಾಣ ಇದ್ದರೂ, ಶರೀರದ ಕೆಲಸಗಳನ್ನು ಲೋಕದವರಂತೆಯೇ ಮಾಡುತ್ತಿದ್ದರು; ಅವರ ಅವಿಧೇಯತೆಗೆ ಕಾರಣ ಏನೆಂದರೆ ನ್ಯಾಯ ಪ್ರಮಾಣದ ಅರಿವಿಗಿಂತ ಪಾಪವು ಬಲವುಳ್ಳದ್ದು,

ಆದ್ದರಿಂದ ದೇವರ ನ್ಯಾಯಪ್ರಮಾಣ ಪಾಪವನ್ನು ದೇಹದಿಂದ ತೆಗೆದು ಹಾಕಲಾಗುವುದಿಲ್ಲ, ಆದರೆ ಕೆರಳಿಸುತ್ತದೆ, ಮತ್ತು ಬಲಗೊಳಿಸುತ್ತದೆ, ಯಾಕೆಂದರೆ ಶರೀರ (ಪಾಪ) ದೇವರಿಗೆ ವಿರೋಧವಾದದ್ದು ಅದು ನ್ಯಾಯ ಪ್ರಮಾಣಕ್ಕೆ ವಿಧೇಯನೂ ಆಗುವುದಿಲ್ಲ, ಮತ್ತು ಅಧೀನವೂ ಆಗುವುದಿಲ್ಲ.

### ಅನ್ವಯಗಳು ಮತ್ತು ವ್ಯಾಖ್ಯಾನಗಳು

ಆದಿ 6:5 "ಮತ್ತು ಮನುಷ್ಯನ ದಷ್ಟತನವು ಭೂಮಿಯಲ್ಲಿ ಹೆಚ್ಚಿದ್ದನ್ನೂ ಅವನ ಹೃದಯದ ಆಲೋಚನೆಗಳ ಕಲ್ಪನೆಗಳೆಲ್ಲವೂ ಯಾವಾಗಲೂ ಬರೀ ಕೆಟ್ಟದೆಂದೂ ದೇವರು ನೋಡಿದನು

ರೋಮಾ 4:15 "ಯಾಕೆಂದರೆ  ನ್ಯಾಯಪ್ರಮಾಣವು ದೇವರ ಕೋಪಕ್ಕೆ ಗುರಿ ಮಾಡುವಂಥದ್ದು. ನ್ಯಾಯ ಪ್ರಮಾಣವಿಲ್ಲದ ಪಕ್ಷದಲ್ಲಿ ಆಜ್ಞಾತಿಕ್ರಮಣವೂ ಇಲ್ಲ."

ರೋಮ3:19,20 **"ಪ್ರತಿಯೊಂದು ಬಾಯಿ ಮುಚ್ಚಿ ಹೋಗುವಂತೆಯೂ ಲೋಕವೆಲ್ಲಾ ದೇವರ ಮುಂದೆ ದೋಷಿಯಾಗಿರುವಂತೆಯೂ, ನ್ಯಾಯ ಪ್ರಮಾಣವು** ಹೇಳುವವುಗಳನ್ನು, ನ್ಯಾಯ ಪ್ರಮಾಣಕ್ಕೆ ಒಳಗಾದವರಿಗೆ ಹೇಳುತ್ತದೆ ಎಂದು ನಾವು ಬಲ್ಲೆವು. ಆದ್ದರಿಂದ ನ್ಯಾಯ ಪ್ರಮಾಣದ ಕ್ರಿಯೇಗಳಿಂದ ಯಾವನೂ ಆತನ ದೃಷ್ಟಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲ. ಯಾಕೆಂದರೆ ನ್ಯಾಯ ಪ್ರಮಾಣದಿಂದಲೇ ಪಾಪದ ಅರುಹು ಉಂಟಾಗುತ್ತದೆ."

ದೇವರ ನ್ಯಾಯ ಪ್ರಮಾಣ ಮತ್ತು ಪಾಪದ ನಿಯಮ, ಇವೆರಡೂ ಒಂದೇ ನಾಣ್ಯದ ಎರಡು ಮುಖಗಳು. ಪಾಪವಿರುವಲ್ಲಿ ದೇವರ ನ್ಯಾಯ ಪ್ರಮಾಣವಿರುತ್ತದೆ.

ಮತ್ತಾ 12:34 "ಓ ಸರ್ಪ ಸಂತತಿಯವರೇ, ಕೆಟ್ಟವರಾಗಿರುವ ನೀವು ಒಳ್ಳೆಯವುಗಳನ್ನು ಹೇಗೆ ಮಾತನಾಡೀರಿ? ಯಾಕೆಂದರೆ ಹೃದಯದಲ್ಲಿ ಸಮೃದ್ಧಿಯಾಗಿರುವುದನ್ನೇ ಬಾಯಿ ಮಾತನಾಡುತ್ತದೆ."

ಯೋಹಾ 8:44 "ನೀವು ನಿಮ್ಮ ತಂದೆಯಾದ ಸೈತಾನಿಗೆ ಸಂಬಂಧ ಪಟ್ಟವರಾಗಿದ್ದೀರಿ. ಮತ್ತು ನಿಮ್ಮ ತಂದೆಯ ದುರಾಶೆಗಳನ್ನೇ ನೀವು ಮಾಡುವದಕ್ಕೆ ಇಚ್ಛೆಸುತ್ತೀರಿ."

ಮನುಷ್ಯನು ದೇವರಿಗೆ ವಿಧೇಯನಾಗಿರಲು ಸಾದ್ಯವಿಲ್ಲ ಎಂಬದಕ್ಕೆ ಇಸ್ರಯೇಲ್ ಒಂದು ದೃಷ್ಟಾಂತ,

**ಉಪಮಾನ:** ಒಂದು ನಾಯಿಗೆ ನೀನು ಬೆಕ್ಕಿನಂತೆ ಮಾಡು ಎಂದು ಹೇಳಲಾಗದು. ಯಾಕೆಂದರೆ, ಅದು ಅದರ ಸ್ವಾಭಾವ. ಇದೇ ಕಾರಣದಿಂದ ಒಬ್ಬ ಪಾಪಿಗೆ ಸಂತನಂತೆ ಜೀವಿಸೆಂದು ಹೇಳಲಾಗದು. ಯಾಕೆಂದರೆ ಅದು ಅವನ ಸ್ವಾಭಾವಕ್ಕೆ ವಿರುದ್ಧ.

ರೋಮಾ 8:3 "ನ್ಯಾಯ ಪ್ರಮಾಣವು ಶರೀರದ ಮೂಲಕ ನಿರ್ಬಲವಾಗಿ ಯಾವುದನ್ನು ಮಾಡಲಾರದೆ  ಇತ್ತೋ ಅದನ್ನು ದೇವರೇ ಮಾಡಿದನು; ಹೇಗೆಂದರೆ ಆತನು ತನ್ನ  ಸ್ವಂತ  ಮಗನನ್ನು ಪಾಪ ಶರೀರದ ಹೋಲಿಕೆಯಲ್ಲಿ ಕಳುಹಿಸಿ, ಪಾಪಕ್ಕಾಗಿ ಆ ಶರೀರದಲ್ಲಿಯೇ ಪಾಪವನ್ನು ದಂಡಿಸಿದನು."

ಗಲಾ 4:4,5 "ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಸ್ತ್ರೀಯಿಂದ ಹುಟ್ಟಿದವನನ್ನಾಗಿಯೂನ್ಯಾಯ –ಪ್ರಮಾಣಕ್ಕೆ ಒಳಗಾದವನನ್ನಾಗಿಯೂ ಮಾಡಿ ಕಳುಹಿಸಿದ್ದಲ್ಲದೆ, ನ್ಯಾಯ ಪ್ರಮಾಣಾಧೀನರನ್ನು (ಪಾಪಕ್ಕೆ) ವಿಮೋಚಿಸುವುದಕ್ಕೂ ನಾವು ದತ್ತು ಪುತ್ರರ ಸ್ವೀಕಾರವನ್ನು ಹೊಂದುವಂತೆಯೂ ಕಳುಹಿಸಿಕೊಟ್ಟನು."


ವಿಧೇಯತೆಯನ್ನು. ಮನುಷ್ಯನಿಂದ ತೆಗೆದು ಕೊಳ್ಳುವದಕ್ಕಾಗಿ ದೇವರು ದೇಹದಿಂದ ಪಾಪವನ್ನು ತೆಗೆಯಬೇಕಾಯಿತು, ಈ ಉದ್ದೇಶದಿಂದ, ದೇವರು ತನ್ನ ಮಗನಾದ ಯೇಸುವನ್ನು ಈ ಪ್ರಪಂಚದಲ್ಲಿ ಪಾಪದ ದೇಹದಲ್ಲಿ ಕಳುಹಿಸಿ ಪಾಪದ ದೇಹವನ್ನು ನಾಶಗೊಳಿಸಿದನು. ಇದರಿಂದ ದೇವರು ಒಂದು ಹೊಸ ದೇಹವನ್ನು ಉಂಟುಮಾಡಿ, ಪಾಪ ರಹಿತವಾದ ಆ ದೇಹದಲ್ಲಿ ಒಳ ಮನುಷ್ಯನು ನೆಲಸುವಂತಾಯಿತು, ಯೇಸು ಶರೀರ ಭಾವದಲ್ಲಿ ಬಂದನು.

**ಯೇಸು ಶರೀರಾ ಭಾವದಲ್ಲಿ ಬಂದನು.**

ಮೊದಲನೇ ಆದಾಮನು ದೇವರಿಗೆ ಅವಿಧೇಯ ನಾಗಿದ್ದುದರಿಂದ ಪಾಪ ಮತ್ತು ಮರಣ ಆದಾಮನ ದೇಹವನ್ನು ಹೊಕ್ಕವು. ಕಾಲವು ಪರಿಪೂರ್ಣವಾದಂತೆ ದೇವರು ಪಾಪದ ದೈವನೇಮವನ್ನು ಕೊನೆಗಾಣಿಸಲು ನಿಶ್ಚಯಿಸಿದನು. ಮತ್ತು ಒಂದು ಹೊಸ ನೀತಿಯ ದೈವನೇಮವನ್ನು ಆರಂಭಿಸಲು ತೀರ್ಮಾನಿಸಿದನು.

ಈ ಕಾರಣದಿಂದಾಗಿ ದೈವಕುಮಾರನು ಆದಮನ ದೇಹದಲ್ಲಿ ಪ್ರಕಟವಾದನು,

ನೋಡಿ ಕಲಿಯಿರಿ !




ದೇವ ಕುಮಾರನು ಮನುಷ್ಯ ಕುಮಾರನಾದನು, ಅದು ಯಾವಾಗ ಅಂದರೆ ಒಳ ಮನುಷ್ಯನಾದ ಯೇಸು ಪಾಪದ ದೇಹದಲ್ಲಿ ಹುಟ್ಟಿದಾಗ. ಸಂಪೂರ್ಣನಾದ ಒಳ ಮನುಷ್ಯನು ಆಗ ಸೈತಾನನ ರಾಜ್ಯದಲ್ಲಿ ಪಾಪ ಮತ್ತು ಮರಣಗಳ ನಿಯಮದ ಕೆಳಗೆ ಇರಬೇಕಾಯಿತು. ಇದು ಯೇಸುವನ್ನು ಪಾಪದ ದೇಹದಲ್ಲಿ ಇರುವ ಏಕೈಕ ನೀತಿವಂತ ಒಳ ಮನುಷ್ಯನನ್ನಾಗಿ ಮಾಡಿತು. ಆತನು ಸೈತಾನನ ಸೇವಕನು ಆಗಿರಲಿಲ್ಲ ಮತ್ತು ಇತರರಂತೆ ಪಾಪಿಯೂ ಆಗಿರಲಿಲ್ಲ .

ಮತ್ತಾ 1:21 "ಆಕೆಯು ಒಬ್ಬ ಮಗನನ್ನು ಹೆರುವಳು; ನೀನು ಆತನಿಗೆ ಯೇಸು ಎಂದು ಕರೆಯಬೇಕು;ಯಾಕಂದರೆ ಆತನು ತನ್ನ ಜನರನ್ನು ಅವರ ಪಾಪಗಳಿಂದ ರಕ್ಷಿಸುವನು ಅಂದನು,"

ರೋಮ 5:12 "ಈ ವಿಷಯ ಹೇಗೆಂದರೆ ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದಲ್ಲಿ ಸೇರಿದವು; ಎಲ್ಲಾರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು,"

ರೋಮ 5:17 "ಯಾಕೆಂದರೆ ಒಬ್ಬನ ಅಪರಾಧದಿಂದ ಮರಣ ಉಂಟಾಗಿ, ಆ ಒಬ್ಬನ ದೆಸೆಯಿಂದಲೇ ಆಳಿದ್ದರೆ, ಕೃಪೆಯನ್ನು ನೀತಿಯ ದಾನವನ್ನು ಹೇರಳವಾಗಿ ಹೊಂದಿದವರು ಯೇಸುಕ್ರಿಸ್ತನೆಂಬ ಈ ಒಬ್ಬನ ಮೂಲಕ ಜೀವದಲ್ಲಿ ಆಳುವುದು ಮತ್ತೂ ನಿಶ್ಚಯವಲ್ಲವೇ.

ಗಲಾ 3:22 "ಅದರೆ ಎಲ್ಲರೂ (ಯಹೂದ್ಯರೂ ಮತ್ತು ಅನ್ಯ ಜನರು) **ಪಾಪಕ್ಕೊಳಗಾಗಿದ್ದಾರೆಂದು ಬರಹವು** (ದೇವರ ನ್ಯಾಯ ಪ್ರಮಾಣ) **ತಿರ್ಮಾನಿಸಿತು,"**

ಇಬ್ರಿ 2:17 "ಆದ್ದರಿಂದ ಆತನು **ಎಲ್ಲವುಗಳಲ್ಲಿಯೂ** ತನ್ನ **ಸಹೋದರರಿಗೆ ಸಮಾನವಾಗಿ ಮಾಡಲ್ಪಟ್ಟನು,**ಹೀಗೆ ಆತನು ಜನರ ಪಾಪಗಳಿಗೋಸ್ಕರ ಶಾಂತಿ ಮಾಡುವುದಕ್ಕೆ ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾಯಾಜಕನಾದನು."

ಮೋಶೆಯು ಐಗುಪ್ತವನ್ನು ಪ್ರವೇಶ ಮಾಡಬೇಕಾಗಿ ಬಂದದ್ದು ಹೇಗೋ, ಫರೋಹನನಿಗೆ ತೀರ್ಪುಮಾಡಿ ಇಸ್ರೆಯೇಲನ್ನು ಐಗುಪ್ತದಿಂದ ಬಿಡುಗಡೆ ಮಾಡಿದಂತೆ ಯೇಸುವಿಗೆ ಕೂಡ ಪಾಪದ ಶರೀರವನ್ನು ಪ್ರವೇಶಿಸುವ ಅವಶ್ಯಕತೆ ಬಂತು; ಮತ್ತು ಸೈತಾನನಿಗೆ ತೀರ್ಪುಮಾಡಿ ಒಳ ಮನುಷ್ಯನನ್ನು ಪಾಪದ ದೇಹದಿಂದ ಬಿಡುಗಡೆ ಮಾಡಬೇಕಾಗಿತ್ತು.

ಅಪೋ 3:22 "ಯಾಕೆಂದರೆ ಪಿತೃಗಳಿಗೆ ಮೋಶೆಯು ನಿಜವಾಗಿಯು ಹೇಳಿದ್ದೇನೆಂದರೆ **ನನ್ನ ಹಾಗೆ ಒಬ್ಬ ಪ್ರಾವದಿಯನ್ನು**ನಿಮ್ಮ ಸಹೋದರರಲ್ಲಿ ನಿಮ್ಮ ದೇವರಾದ ಕರ್ತನು ನಿಮಗಾಗಿ ಎಬ್ಬಿಸುವನು; ಆತನು ನಿಮಗೆ ಹೇಳುವ ಎಲ್ಲಾ ವಿಷಯಗಳಿಗೆ ನೀವು ಕಿವಿಗೊಡತಕ್ಕದ್ದು;"


ಮೋಶೆಯು ಒಬ್ಬ ಯಹೂದ್ಯನಾಗಿ ಐಗುಪ್ತದಲ್ಲಿ ಹುಟ್ಟಿದ್ದರೂ ಅವನು ಅವನ ಸಹೋದರ ಯಹೂದ್ಯರಂತೆ ಫರೋಹಿಗೂ ಮತ್ತು ಐಗುಪ್ತಕ್ಕೂ ಗುಲಾಮನಾಗಿರಲ್ಲಿಲ.

ಆದೆ ರೀತಿಯಲ್ಲಿ ಯೇಸು (ಶರೀರಧಾರಿಯಾಗಿ ಹುಟ್ಟಿದ್ದರೂ) ಸೈತಾನನ ಗುಲಾಮನೆಂದೂ ಆಗಿರಲಿಲ್ಲ. ಮತ್ತು ಪಾಪದ ನಿಯಮಕ್ಕೆ ಒಳಪಡಲಿಲ್ಲ.

**ಯೇಸು ಆಯ್ಕೆ ಮಾಡಬೇಕಾಯಿತು:**

ಒಳ ಮನುಷ್ಯನಾದ ಯೇಸು ಸಂಪೂರ್ಣನಾಗಿದ್ದನು. ಒಳ ಮನುಷ್ಯ ಆದಾಮನು ಅವಿಧೇಯನಾಗುವುದಕ್ಕೆ ಮುಂಚೆ ಹೇಗಿದ್ದನೋ ಹಾಗೆಯೇ. ಯೇಸು ಪಾಪದ ದೇಹದಲ್ಲಿ ಹುಟ್ಟಿದ್ದರಿಂದ, ಆತನೂ ಕೂಡ ಎಲ್ಲಾ ಮನುಷ್ಯರಂತೆ ಶರೀರ ಭಾವದಲ್ಲಿ ಇದ್ದನು.

ನೋಡಿ ಕಲಿಯಿರಿ !




ಆದಮನ ದೇಹದಲ್ಲಿ ಇದ್ದುಕೊಂಡು ಯೇಸು, ಈಗ ಸೈತಾನನಿಂದ ಶೋಧಿಸಲ್ಪಡಬಹುದಿತ್ತು ಮತ್ತು ಪಾಪದ ಒತ್ತಡ ಸಹಿಸದೆ ದೇವರಿಗೆ ಅವಿಧೇನಾಗಬಹುದಿತ್ತು. ಶರೀರಭಾವದಲ್ಲಿ ಇರುವಾಗ ಯೇಸು ತನ್ನ ದೇಹದಲ್ಲಿ ಸೈತಾನನ್ನು ಮತ್ತು ಪಾಪವನ್ನು ತಡೆಗಟ್ಟಿದನು. ಆತನು ಶರೀರ ಭಾವಗಳಾದ ಕಾಮಾಭಿಲಾಶೆ ಮತ್ತು ದುರಾಸೆಗಳಿಗೆ ಈಡಾಗಿದ್ದರೆ ದೇವರಿಗೆ ಅವಿಧೇಯನಾಗಿ ಆದಮನಂತೆ ಪಾಪಿಯಾಗುತ್ತಿದ್ದನು.

ಯೇಸು ಕಡೇ ಆದಮನು, ಯಾಕೆಂದರೆ ಆತನು ದೇವರಿಂದ ಬಂದನು. ಮೊದಲನೇಯ ಆದಮನಿಗೆ ಕೂಡ ಮೂಲ, ದೇವರಾಗಿದ್ದನು. ಆತನು ದೇವರಿಗೆ ನಂಬಿಗಸ್ತನಾಗಿರಬೇಕಾಗಿತ್ತು, ಯಾಕೆಂದರೆ ಆತನು ಒಂದುಸಾರ್ತಿ ಪಾಪ ಮಾಡಿದ್ದರೆ ಆತನು ಸೈತಾನನಿಗೆ ದಾಸನಾಗಿಬಿಡುತ್ತಾ ಇದ್ದನು, ಮತ್ತು ಆದಮನಂತೆ ತನ್ನ ದೇಹದಲ್ಲಿ ಗುಲಾಮನಾಗಿಬಿಡುತ್ತಾ ಇದ್ದನು.

**ಮೊದಲ ದೇಹವನ್ನು ತೆಗೆದು ಹಾಕಿದ್ದು**

**ಪಾಪಕ್ಕೆ ತಿರ್ಪಾಯಿತು, ಮತ್ತು ದೇಹನಾಶವಾಯಿತು**

ಯೇಸುವು ದೇವರಿಗೆ ವಿಧೇಯನಾಗಿರಬೇಕಾಯಿತು, ಕಷ್ಟಗಳ ಮಧ್ಯೆ ಶೋಧನೆಗಳ ಮಧ್ಯೆ ದೇವರು ಆತನನ್ನು ತಿರ್ಪುಮಾಡಿ ಆತನು ಸೈತಾನನ್ನೂ ಪಾಪವನ್ನೂ ಜೈಸಿದೆನೆಂದು ಹೇಳುವವರಿಗೆ. ಯೇಸು

ಯೋಹಾ 1:14 "ಇದಲ್ಲದೇ ಆ **ವಾಕ್ಯವಾಗಿರುವಾತನು ಶರೀರಧಾರಿಯಾಗಿ** ನಮ್ಮ ಮದ್ಯದಲ್ಲಿ ವಾಸಿಸಿದನು..."

ಗಲಾ 4:4 "ಆದರೆ ಕಾಲವು ಪರಿಪೂರ್ಣವಾದಗ ದೇವರು ತನ್ನ ಮಗನನ್ನು **ಸ್ತ್ರೀಯಿಂದ ಹುಟ್ಟಿದ್ದವನನ್ನಾಗಿಯೂ ನ್ಯಾಯ ಪ್ರಮಾಣಕ್ಕೆ ಒಳಗಾದವನನ್ನಾಗಿಯೂ** ಮಾಡಿದನು. (ಪಾಪ ನಿಯಮಕ್ಕೆ.) "

ಯೋಹಾ 10:1–2 "ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ, **ಬಾಗಿಲಿನಿಂದ ಕುರಿ ಹಟ್ಟಿಯೊಳಗೆ ಬಾರದೇ** ಮತ್ತೆಲ್ಲಿಂದಾದರು ಹತ್ತಿ ಬರುವವನೇ **ಕಳ್ಳನೂ, ಸುಲುಕೊಳ್ಳುವವನೂ** ಆಗಿದ್ದಾನೆ. ಆದರೆಬಾಗಿಲಿನಿಂದ **ಒಳಗೆ ಬರುವವನು ಆ ಕುರಿಗಳ ಕುರುಬನಾಗಿದ್ದಾನೆ"**

ಒಳ ಮನುಷ್ಯನನ್ನು ಕೆಡಿಸಲು ಸರ್ಪದ ದೇಹದಲ್ಲಿ ಕಾಣಿಸಿಕೊಂಡ ಸೈತಾನನಂತಲ್ಲದೆ, ಯೇಸು ಒಳ ಮನುಷ್ಯನನ್ನು ಬಿಡುಗಡೆ ಮಾಡಲು ಮಾನವ ರೂಪವನ್ನು ತಾಳಿದನು. ಮಾನವನ ದೇಹ ಪಾಪ ಮತ್ತು ಮರಣಗಳ ನಿಯಮಗಳ ಕೆಳಗಿರುವುದರಿಂದ, ದೇವರ ಕುಮಾರನು ಕೂಡ ಮುಪ್ಪು ಸಾವುಗಳನ್ನು ನೋಡುವ ಪಾಪದ ದೇಹದಲ್ಲಿ ಕಾಣಿಸಿಕೊಂಡನು.

ಮಾರ್ಕ 3:27 "ಇದಲ್ಲದೇ ಒಬ್ಬ ಮನುಷ್ಯನು ಮೊದಲು **ಬಲಿಷ್ಠನನ್ನು** (ಸೈತಾನನ್ನು) ಕಟ್ಟದ ಹೊರತು, ಅವರ **ಮನೆಯೊಳಗೆ** ಪ್ರವೇಶಿಸಿ ಅವರ ಸ್ವತ್ತನ್ನು ಸುಲುಕೊಳ್ಳಲಾರನು; ಕಟ್ಟಿದ ಮೇಲೆ ಅವನ ಮನೆಯನ್ನು ಸುಲುಕೊಳ್ಳುವನು ಅಂದನು.

ಇಬ್ರಿ 4;15"...**ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ** ಶೋಧನೆಯೊಳಗೆ ಗುರಿಯಾದರೂ ಪಾಪರಹೀತನಾಗಿದನು."

ಇಬ್ರಿ 5:8 "ಹೀಗೆ ಆತನು ಮಗನಾಗಿದ್ದರೂ, ತಾನು ಅನುಭವಿಸಿದ ಬಾಧೆಗಳಿಂದಲೇ **ವಿಧೇಯತೆಯನ್ನು ಕಲಿತುಕೊಂಡನು."**

ಇಬ್ರಿ 5:7 "ಆತನು **ತನ್ನ ಶರೀರದ ದಿನಗಳಲ್ಲಿ ಮರಣದಿಂದ ತಪ್ಪಿಸಲು** ಶಕ್ತನಾಗಿರುವಾತನಿಗೆ ಬಲವಾಗಿ **ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ** ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ಭಯಪಟ್ಟದ್ದರಲ್ಲಿ ಕೇಳಲ್ಪಟ್ಟನು,"


1 ಕೊರಿ 15:45 "... ಮೊದಲನೆಯ ಮನುಷ್ಯನಾದ ಆದಾಮನು ಜೀವಾತ್ಮನಾದನು ;**ಮತ್ತು ಕಡೇ ಆದಮನು** ಬದುಕಿಸುವ ಆತ್ಮನಾದನು."

ಫಿಲಿ 2:8 "ಹೀಗೆ ಆತನು **ಆಕಾರದಲ್ಲಿ ಮನುಷ್ಯನಾಗಿ** ಕಾಣಿಸಿಕೊಂಡಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ **ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು"**.

ಯೋಹಾ 16: 11 "...ಇಹ ಲೋಕಾಧಿಪತಿಯು ನ್ಯಾಯ ತೀರ್ಪನ್ನು ಹೊಂದಿರುವುದರಿಂದ ನ್ಯಾಯತೀರ್ವಿಕೆಯ ವಿಷಯವಾಗಿಯೂ ಲೋಕವನ್ನು ಗದರಿಸುವನು,"

ಸೈತಾನನ್ನು ಜೈಸಿದ್ದರಿಂದ ಪಾಪದ ದೇಹ ತನ್ನ ಸ್ವತ್ತಾಯಿತು. ಹೇಗಾದರೂ ಯೇಸು ಆ ಪಾಪದ ದೇಹದಲ್ಲಿ ನಿರಂತರವಾಗಿ ಜೀವಿಸಲಾಗಲಿಲ್ಲ, ಆಗಿದ್ದರೆ ಆತನು ತನ್ನ ಮರ್ತ್ಯ ದೇಹದಲ್ಲಿ ಪಾಪದ ಒತ್ತಡದಲ್ಲಿ ಮೃತ್ಯು ಮತ್ತು ಮರಣವನ್ನು ನೋಡಬೇಕಾಗಿತ್ತು, ಆದುದರಿಂದಲೇ ಅತನ ದೇಹ ಶಿಲುಬೇಗೆ ಹಾಕಲ್ಪಟ್ಟಿತು.(ನಾಶನ), ಇದರಿಂದಾಗಿ ದೇವರು ಆತನಿಗೆ ಪಾಪವಿಲ್ಲದ ಹೊಸ ದೇಹವನ್ನು ಆತನ ನೆಲೆಗಾಗಿ ಉಂಟು ಮಾಡಬೇಕಾಯಿತು.

ನೋಡಿ ಕಲಿಯಿರಿ !




ಪಾಪಕ್ಕೆ ತೀರ್ಪು

ಶಿಲುಬೆಯ ಮೇಲೆ ಪಾಪದ ದೇಹವನ್ನು ನಾಶ ಮಾಡಲಾಗಿತ್ತು. ಆದುರಿಂದ ಒಳ ಮನುಷ್ಯನ ಪಾಪದ ಸತತ ಒತ್ತಡ ಕೊನೆಗೊಂಡಿತು, ಯೇಸುವಿನ ದೇಹ ಮೃತಪಟ್ಟಾಗ ಪಾಪದ ನ್ಯಾಯ ಪ್ರಮಾಣವು ನಿರ್ಬಲವೂ, ವ್ಯರ್ಥವೂಆಗಿಹೋಯಿತು. ದೇಹದ ಪುನರುಥಾನದ ಹೊಸದೇಹದಲ್ಲಿ ಮರಣಕ್ಕೆ ಕೂಡ ಜಯವಾಯಿತು,

**ಎರಡನೇಯ ದೇಹವನ್ನು ಉಂಟುಮಾಡಿದ್ದು :**

**ಪಾಪದಿಂದ ಬಿಡುಗಡೆ :**

ಯಾಕೆಂದರೆ ಒಳ ಮನುಷ್ಯನಾದ ಯೇಸು ಪಾಪಮಾಡಲ್ಲಿಲ,ದೇವರು ಆತನಿಗೆ ಪಾಪವಿಲ್ಲದ ಒಂದು ಹೊಸದೇಹವನ್ನು ಕೊಟ್ಟನು. ಹೊಸದೇಹ ಪಾಪ ಮತ್ತು ಮರಣದಿಂದ ಸ್ವತಂತ್ರವಾಗಿರುವುದರಿಂದ, ಒಳ ಮನುಷ್ಯನಾದ ಯೇಸು ಬಿಡುಗಡೆಯಲ್ಲಿ ಜೀವಿಸುತ್ತಾನೆ.

ಹೊಸದೇಹ ಕ್ರಿಸ್ತನ ದೇಹ ; ಹೇಗೆಂದರೆ ಹಳೆಯ ದೇಹ ಆದಮಾನ ದೇಹದಂತೆಯೇ, ಹಳೆ ದೇಹ ಸೈತಾನನ ಮನೆ ಹೇಗೆ ಆಗಿತ್ತೋ, ಹಾಗಯೇ ಈಗ ಹೊಸದೇಹ ದೇವರ ಮನೆಯಾಗಿರುತ್ತದೆ, ಯೇಸುವು ಕ್ರಿಸ್ತನೇ,ಎರಡನೇ ಮನುಷ್ಯ ಮತ್ತು ದೇವರ

ರೋಮ 6:6 "...ಪಾಪದ ಶರೀರವು ನಾಶವಾಯಿತು"

2 ಕೊರಿ 5:21 "ಯಾಕೆಂದರೆ ನಾವು ಆತನಲ್ಲಿ ದೇವರ ನೀತಿಯಾಗುವಂತೆ ದೇವರು ಪಾಪವನ್ನರಿಯದ ಆತನನ್ನು ನಮ್ಮಗೋಸ್ಕರ ಪಾಪವಾಗಮಾಡಿದನು".

ರೋಮ 8:3 "ನ್ಯಾಯ ಪ್ರಮಾಣವು ಶರೀರದ ಮೂಲಕ ನಿರ್ಬಲವಾಗಿ ಯಾವುದನ್ನು ಮಾಡಲಾರದೆ ಇತ್ತೋ ಆದನ್ನು ದೇವರೇ ಮಾಡಿದನು; ಹೇಗೆಂದರೇ ಆತನು ತನ್ನ ಸ್ವಂತ ಮಗನನ್ನು ಪಾಪ ಶರೀರದ ಹೋಲಿಕೆಯಲ್ಲಿ ಕಳುಹಿಸಿ ಪಾಪಕ್ಕಾಗಿ ಆ ಶರೀರದಲ್ಲಿಯೇ ಪಾಪವನ್ನು ದಂಡಿಸಿದನು."

ಎಫೆಸ 2:15–16 "ಆತನು ಇದ್ದ ದ್ವೇಶವನ್ನು ಅಂದರೆ,ಶಾಸನಗಳ ಆಜ್ಞೆಗಳುಳ್ಳ ನ್ಯಾಯ ಪ್ರಮಾಣವನ್ನು ತನ್ನ ಶರೀರದ ಮೂಲಕ ರದ್ದುಗೊಳಿಸಿ, ಸಾಮಾಧಾನ ಮಾಡುವವನಾಗಿ, ಉಭಯರನ್ನು (ಅನ್ಯರು ಮತ್ತು ಯಹೋದ್ಯರು) ತನಲ್ಲಿ ಒಬ್ಬ ನೂತನ ಪುರುಷನನ್ನಾಗಿ ಮಾಡಿದನು. ಮತ್ತು ಇದ್ದ ದ್ವೇಶವನ್ನು ತನ್ನ ಶಿಲುಬೆಯ ಮೇಲೆ ಕೊಂದು, ಅದರಿಂದ ಉಭಯರನ್ನು ಒಂದೇ ದೇಹದಂತಾಗಮಾಡಿ, ದೇವರೊಂದಿಗೆ ಸಮಾಧಾನ ಪಡಿಸಿದ್ದಾನೆ.

1 ಯೋಹಾ 3:8 "...ಆದ್ದರಿಂದ ದೈವ ಕುಮಾರನು ಸೈತಾನನ ಕೆಲಸಗಳನ್ನು ಲಯ ಮಾಡುವುದಕೋಸ್ಕರವೇ ಪ್ರತ್ಯಕ್ಷನಾದನು."

ಪಾಪದ ದೇಹ ಸತ್ತಾಗ ಪಾಪದ ನ್ಯಾಯ ಪ್ರಮಾಣ ಕೊನೆಗೊಂಡಿತು. ಮತ್ತು ಈ ರೀತಿಯಾಗಿ ದೇವರ ನ್ಯಾಯ ಪ್ರಮಾಣವು ನೇರವೆರಿತು, ಹೊಸದೇಹ ಅಸ್ತಿತ್ವಕ್ಕೆ ಬಂದಾಗ, ಒಂದು ಹೊಸ ನ್ಯಾಯ ಪ್ರಮಾಣ, ಅಂದರೆ, ಸ್ವತಂತ್ರದ ನ್ಯಾಯ ಪ್ರಮಾಣ ಜಾರಿಗೆ ಬಂತು,

ಇಬ್ರಿ 10:20"ಹೇಗೆಂದರೆ, ಆತನು ನಮ್ಮಗೋಸ್ಕರ ಪ್ರತಿಷ್ಠಿಸಿದ ಮತ್ತು ಹೊಸಜೀವವುಳ್ಳ ದಾರಿಯಲ್ಲಿ ಆತನ ಶರೀರವೆಂಬ ತೆರೆಯ ಮುಖಾಂತರವೇ ಇದಾಯಿತು"

ಶರೀರ ಭಾವವೇ (ಪಾಪ) ದೇವರಿಂದ ನಮ್ಮನ್ನು ಬೇರ್ಪಡಿಸುವುದು.


ರೋಮ 5:10"ವೈರಿಗಳಾಗಿದ್ದ ನಾವು ದೇವರ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಾಗಿದ್ದರೇ, ಸಮಧಾನವಾದ ನಮಗೆ ಆತನ ಜೀವದಿಂದ ರಕ್ಷಣೆಯಾಗುವುದು ಮತ್ತೂ ನಿಶ್ಚಯವಲ್ಲವೇ".

ಯೇಸು ಕ್ರಿಸ್ತನು ಸತ್ತವರೊಳಗಿನಿಂದ ಬಂದ ಜ್ಯೆಷ್ಠನೂ ಆಗಿದ್ದಾನೆ, (ಕೊಲೆಸಿ1:18) ಮತ್ತು ದೇವರ ಹೊಸಸೃಷ್ಠಿಯ ಶೀರಸ್ಸು. ಆದಮನು ಹೇಗೆ ಹಳೆಯ ಸೃಷ್ಠಿಯ ಜ್ಯೇಷ್ಠನೋ ಶೀರಸ್ಸೋ ಹಾಗೆಯೇ. ಹೊಸದೇಹದಲ್ಲಿ ಪಾಪವಿಲ್ಲ ಆದ್ದರಿಂದ ಮರಣವಿಲ್ಲ. ಆದಿಯಲ್ಲಿ ಆದಮನನ್ನು ಹೇಗೆ ಪ್ರಾಕೃತಿಕ ದೇಹದಲ್ಲಿ ಇರಿಸಿದ್ದರೋ, ಹಾಗಯೇ ಈಗ ದೇವ ಕುಮಾರನಾದ ಕ್ರಿಸ್ತನು ಆತ್ಮದ ದೇಹದಲ್ಲಿ ಹೊದಿಸಲ್ಪಟ್ಟಿದ್ದಾನೆ, ಈ ಹೊಸದೇಹ ಜೀವನದ ಮತ್ತು ನಿತ್ಯಜೀವದ ಕಿರೀಟ,

ರೋಮ 5:21"ಹೀಗೆಪಾಪವು ಮರಣವನ್ನು ಉಂಟು ಮಾಡುವುದಕ್ಕಾಗಿ ಪ್ರಭುತ್ವವನ್ನು ನಡಿಸಿದ ಹಾಗಯೇ ಕೃಪೆಯು ನೀತಿಯ ಮೂಲಕ ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದಾದ ನಿತ್ಯ ಜೀವವನ್ನು ಉಂಟು ಮಾಡುವುದಕ್ಕೆ, ಪ್ರಭುತ್ವ ನಡಿಸುವುದು."

ಹೊಸಸೃಷ್ಟಿಯ ಪ್ರಥಮ ಪುರುಷ. ಹೊಸ ದೇಹವು ಪಿತ್ರಾರ್ಜಿತ ಬಾಧ್ಯತೆ ಮತ್ತು ದೇವರು ವಾಗ್ದಾನ ಮಾಡಿದ ನಿತ್ಯ ಜೀವ.

ನೋಡಿ ಕಲಿಯಿರಿ !




ಮೊದಲನೆಯ ದೇಹದಲ್ಲಿ ಆದ ತಪ್ಪನ್ನು ದೇವರು ಎರಡನೇ ದೇಹವನ್ನುಂಟು ಮಾಡುವುದರಿಂದ ಅದನ್ನು ಎಥಾಸ್ಥಾಪನೆ ಮಾಡಿದನು. ಹಳೆಯ ದೇಹ ಪಾಪಮಯ, ಮತ್ತು ಹೊಸ ದೇಹ, ಪಾಪವಿಲ್ಲದ್ದು. ಕಡೆಯ ಆದಾಮನಾದ ಯೇಸುವಿಗೂ ಮತ್ತು ಯೇಸು ಕ್ರಿಸ್ತನಿಗೂ – ಹೊಸಮನುಷ್ಯ – ಇರುವ ವ್ಯತ್ಯಾಸ ದೇಹವೇ.

**ಯೇಸು – ಕರ್ತನೂ ಮತ್ತು ಕ್ರಿಸ್ತನೂ ಆಗಿದ್ದಾನೆ.**

**ವಿಧೇಯತೆ :**

ದೇವರಕಾರ್ಯ ಆತನ ಎರಡೂ ಮಕ್ಕಳೊಂದಿಗೆ ಆಗಿತ್ತು, ಅಂದರೆ ಆದಮನು ಮತ್ತ ಯೇಸು. ಅವಿಧೇಯತೆಯ ಮೂಲಕ ಆದಮನು ತನ್ನ ದೇಹವನ್ನು ಅನೀತಿಯ ಸಾಧನವನ್ನಾಗಿ ಮಾಡಿಕೊಂಡನು. ಯೇಸು ತನ್ನ ವಿಧೇಯತೆಯ ಮೂಲಕ ತನ್ನ ದೇಹವನ್ನು ನೀತಿಯ ಸಾಧನವನ್ನಾಗಿ ಮಾಡಿಕೊಂಡನು. ಆದಮನ ದೇಹದಲ್ಲಿ ನೆಲೆಸಿರುವ ಎಲ್ಲಾ ಪಾಪಿಗಳನ್ನು ದೇವರು ಈಗ ಕರೆಯುತ್ತಾನೆ ; ಯೇಸು ಕ್ರಿಸ್ತನ ದೇಹದಲ್ಲಿ ತಿರುಗಿ ಹುಟ್ಟಲು ಮತ್ತು ಕ್ರಿಸ್ತನಲ್ಲಿ ನಂಬಿಕೆ ಇಡುವುದರ ಮೂಲಕ ವಿಧೇಯತೆಯ ಮಕ್ಕಳಾಗಲು ಸಾಧ್ಯ.

ಇಬ್ರಿ 9:28 "ಹಾಗೆಯೇ ಕ್ರಿಸ್ತನು ಬಹುಜನರ ಪಾಪಗಳನ್ನು ಹೊತ್ತುಕೊಳ್ಳುವುದಕ್ಕೋಸ್ಕರ ಒಂದೇ ಸಾರಿ ಸಮರ್ಪಿತನಾದನು ; ಮತ್ತು ತನ್ನನ್ನು ನಿರೀಕ್ಷಿಸಿಕೊಂಡಿರುವವರಿಗೆ ರಕ್ಷಣೆಯನ್ನುಂಟು ಮಾಡುವುದಕ್ಕೋಸ್ಕರ ಪಾಪವಿಲ್ಲದವನಾಗಿ **ಎರಡನೆಯ ಸಾರಿ ಕಾಣಿಸಿಕೊಳ್ಳುವನು.**

ಯೋಹ 11:25 "ಯೇಸು ಆಕೆಗೆ ನಾನೇ **ಪುನರುಥಾನವೂ ಜೀವವೂ** ಆಗಿದ್ದೇನೆ....."


ಎಫೆ 4:24 "ಆ ಸ್ವಭಾವವೂ ದೇವರ ಹೋಲಿಕೆಯ ಮೇರೆಗೆ **ನೀತಿಯಲ್ಲಿಯೂ ನಿಜವಾದ ಪರಿಶುದ್ಧತೆಯಲ್ಲಿಯೂ ನಿರ್ಮಿಸಲ್ಪಟ್ಟಿದೆ.**"

ಅಪೋ 2:36 "...ಆದ್ದರಿಂದ ನೀವು ಶಿಲುಬೆಗೆ ಹಾಕಿದ ಈ **ಯೇಸುವನ್ನೇ ದೇವರು ಕರ್ತನ್ನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂದು...**"


ರೋಮ 6:13 "**ನೀವು ನಿಮ್ಮ ಅಂಗಗಳನ್ನು (ದೇಹಗಳನ್ನು) ಪಾಪಕ್ಕೆ ಒಳಪಡಿಸುವವರಾಗಿದ್ದು, ಅನೀತಿಯನ್ನು ನಡೆಸುವ ಸಾಧನಗಳಾಗಿ ಮಾಡಬೇಡಿರಿ. ಆದರೆ ಸತ್ತವರೊಳಗೇನಿಂದ ಜೀವಿಸುವವರೋ ಎಂಬಂತೆ ನಿಮ್ಮ ಅಂಗಗಳನ್ನು (ದೇಹಗಳನ್ನು) ನೀತಿ ಕಾರ್ಯ ನಡೆಸುವ ಸಾಧನಗಳನ್ನಾಗಿ ದೇವರಿಗೆ ಒಳಪಡಿಸಿರಿ.**"

ಎಲ್ಲಾ ಮಾನವರಿಗೆ ಕ್ರಿಸ್ತನಲ್ಲಿ ಇದು ದೇವರ ಕರೆ.


## ಸಾರಂಶ





**ಪಾಪವು ಪ್ರಕಟವಾದದ್ದು :**
ಪಾಪವನ್ನು ಪ್ರಕಟ ಮಾಡಲು ದೇವರ ನ್ಯಾಯಪ್ರಮಾಣವು ಕೊಡಲ್ಪಟ್ಟಿತು. ನ್ಯಾಯ ಪ್ರಮಾಣವು ಎಲ್ಲಾ ಮನುಷ್ಯರು ಪಾಪಿಗಳೆಂದು ಸಾಬೀತು ಪಡಿಸುತದೆ ಮತ್ತು ಎಲ್ಲರಿಗೂ ರಕ್ಷಣೆ ಅವಶ್ಯ. ನ್ಯಾಯ ಪ್ರಮಾಣವನ್ನು ಅನುಸರಿಸುವುದರಿಂದ ಅದು ಮನುಷ್ಯನನ್ನು ಶರೀರಭಾವದಿಂದ ಬಿಡುಗಡೆ ಮಾಡಲಾರದು.





**ಯೇಸು ಶರೀರ ಭಾವದಲ್ಲಿ ಬಂದನು :**
ಯೇಸು, ದೇವರ ವಾಕ್ಯ, ಎಲ್ಲಾ ಮನುಷ್ಯರಂತೇ ಆದಮನ ದೇಹದಲ್ಲಿ ಜನಿಸಿದನು. ಆಗ ಆತನು ಸೈತಾನನ ರಾಜ್ಯದಲ್ಲಿದ್ದನು ಮತ್ತು ಪಾಪ ಮತ್ತು ಮರಣದ ನ್ಯಾಯ ಪ್ರಮಾಣದ ಕೆಳಗಿದ್ದನು. ಆತನು ಪಾಪದ ದೇಹದಲ್ಲಿದ್ದಾಗ್ಯೂ ಸೈತಾನನಿಗೂ ಮತ್ತು ಪಾಪಕ್ಕೂ ಅಧೀನನಾಗಲಿಲ್ಲ.




**ಯೇಸು ಸೈತಾನನ ಮನೆಯಲ್ಲಿ :**
ದೇವರ ಆತ್ಮನು ಯೇಸುವಿನ ಮೇಲೆ ಬಂದಾಗ ಆತನು ಸೈತಾನನಿಗೂ ಮತ್ತು ಪಾಪಕ್ಕೂ ವಿರುದ್ಧವಾಗಿ ಎದ್ದನು. ಆತನು ಅರಣ್ಯದಲ್ಲಿ ಸೈತಾನನನ್ನು ಗೆದ್ದನು ಮತ್ತು ತನ್ನ ಮೂರು ವರ್ಷದ ಸೇವೆಯಲ್ಲಿ ಎಲ್ಲಾ ಪಾಪವನ್ನು ಗೆದ್ದನು. ದೇವರಿಗೆ ವಿಧೇಯತ್ವದ ಮೂಲಕ, ಯೇಸು ಸೈತಾನನನ್ನು ಗೆದ್ದನು ಮತ್ತು ತನ್ನ ದೇಹದಲ್ಲಿ ಪಾಪದ ಶಕ್ತಿಯನ್ನು ಮುರಿದನು.




**ಪಾಪದ ದೇಹ ನಾಶವಾಯಿತು :**
ಯೇಸುವನ್ನು ಶಿಲುಬೆಗೆ ಏರಿಸಿದಾಗ, ಪಾಪವನ್ನು ಅಲ್ಲಗಳೆಯಲಾಯಿತು ಮತ್ತು ಸೈತಾನನ ಮನೆ ನಾಶವಾಯಿತು




**ಪಾಪವಿಲ್ಲದ ದೇಹವನ್ನು ಉಂಟುಮಾಡಿದ್ದು :**
ಮೊದಲನೇ ಮನುಷ್ಯನಾದ ಆದಮನ ದೇಹವನ್ನು ನಾಶಪಡಿಸಿದ ನಂತರ, ದೇವರು ಯೇಸುವಿಗೆ ಪಾಪವಿಲ್ಲದ ಒಂದು ಹೊಸದೇಹವನ್ನು ಕೊಟ್ಟನು. ಈ ಹೊಸ ದೇಹವೇ ಯೇಸುವನ್ನು ಎರಡನೇ ಮನುಷ್ಯನನ್ನಾಗಿ (ಕ್ರಿಸ್ತನು) ಮಾಡಿತು.

## ಅಧ್ಯಾಯ – 3

### ಕ್ರಿಸ್ತನ ವಾಸ್ತವೀಕತೆ :


ಯೇಸು ಕ್ರಿಸ್ತನ ಮೂಲಕ ದೇವರು ನೀತಿಯ ದೈವ ನೇಮವನ್ನು ಶುರು ಮಾಡಿದನು. ವಾಸ್ತವವೇನೆಂದರೆ, ಆದಮನ ದೇಹದಲ್ಲಿ ದೇವರು ಸೈತಾನನ ಆಳ್ವಿಕೆಯನ್ನು ಕೊನೆಗಾಣಿಸಿದನು, ಮತ್ತು ದೇವರ ಆಳ್ವಿಕೆಯನ್ನು ಕ್ರಿಸ್ತನ ದೇಹದಲ್ಲಿ ಶುರು ಮಾಡಿದನು.

ಪಾಪವನ್ನು ಅನುಭವಿಸುವ ಆದಮನ ಸಂತತಿಯವರೆಲ್ಲರೂ ಈಗ ನೀತಿಯನ್ನು ಅನುಭವಿಸ ಬಹುದು. ಒಳ ಮನುಷ್ಯನು ಆದಮನ ದೇಹದಲ್ಲಿರುವಾಗ ಅವನು 'ಶರೀರ' ಭಾವವನ್ನು ಅನುಭವಿಸುತ್ತಾನೆ. ಅವನು ಕ್ರಿಸ್ತನ ದೇಹದಲ್ಲಿರುವಾಗ ಆತ್ಮನ ಪ್ರಭಾವವನ್ನು ಅನುಭವಿಸುತ್ತಾನೆ.

**ಯೇಸು ದೇವರಿಗಾಗಿ ಮತ್ತು ತನಗಾಗಿ ಏನು ಮಾಡಿದನು**

ಪಾಪವು ಆದಮನ ಪ್ರಾಕೃತಿಕ ದೇಹದಲ್ಲಿ ನೆಲಸುವುದರಿಂದ, ಮತ್ತು ಪಾಪವು ಒಳ ಮನುಷ್ಯನನ್ನು ಕೆಡಿಸುವುದರಿಂದ, ಸೈತಾನನನ್ನು ಜಯಿಸಲು ಮತ್ತು ಪಾಪದ ದೇಹವನ್ನು ನಾಶ ಮಾಡಲು ಯೇಸು ಪಾಪದ ದೇಹದಲ್ಲಿ ಕಳುಹಿಸಲ್ಪಟ್ಟನು.

ನೋಡಿ ಕಲಿಯಿರಿ !




**ಅನ್ವಯಗಳು ಮತ್ತು ವ್ಯಾಖ್ಯಾನಗಳು**

ರೋಮ 5:19 "ಯಾಕೆಂದರೆ ಒಬ್ಬ ಮನುಷ್ಯನ **ಅವಿಧೇಯತ್ವದಿಂದ,** ಅನೇಕರು ಹೇಗೆ ಪಾಪಿಗಳಾದರೋ ಹಾಗೆಯೇ ಒಬ್ಬನ **ವಿಧೇಯತೆಯಿಂದ,** ಅನೇಕರು ನೀತಿವಂತರಾಗುವರು

1 ಯೋಹ 3:8 "**ಪಾಪ ಮಾಡುವವನು ಸೈತಾನನಿಗೆ ಸಂಬಂಧಪಟ್ಟವನಾಗಿದ್ದಾನೆ ;** ಯಾಕೆಂದರೆ ಆದಿಯಿಂದಲೂ ಸೈತಾನನು ಪಾಪ ಮಾಡುವವನಾಗಿದ್ದಾನೆ. ಆದ್ದರಿಂದ ದೈವ ಕುಮಾರನು **ಸೈತಾನನ ಕೆಲಸಗಳನ್ನು ಲಯ ಮಾಡುವುದಕ್ಕೋಸ್ಕರವೇ ಪ್ರತ್ಯಕ್ಷನಾದನು.**

ಇಬ್ರಿ 2:14 "ಇದಲ್ಲದೆ, ಮಕ್ಕಳು ರಕ್ತ ಮಾಂಸಗಳಲ್ಲಿ ಪಾಲುಗಾರರಾದ್ದರಿಂದ ಆತನೂ ಸಹ ಅವರಂತೆಯೇ ಆದನು ;**ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನ್ನು ನಾಶ ಮಾಡುವುದಕ್ಕಾಯಿತು.**

ಇಬ್ರಿ 10:9, 10 "ತರುವಾಯ – ಇಗೋ, ಓ ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವುದಕ್ಕೆ ಬಂದಿದ್ದೇನೆ ಎಂತಲೂ ಹೇಳಿದ್ದಾನೆ. **ಆತನು ಎರಡನೆಯದನ್ನು (ಕ್ರಿಸ್ತನ ದೇಹ) ಸ್ಥಾಪಿಸುವುದಕ್ಕಾಗಿಯೇ ಮೊದಲನೆಯದನ್ನು (ಆದಮನ ದೇಹ) ತೆಗೆದು ಹಾಕುತ್ತಾನೆ.** ಯೇಸು ಕ್ರಿಸ್ತನು ಒಂದೇ ಸಾರಿ ಎಂದೆಂದಿಗೂ ಅರ್ಪಿಸಿದ ತನ್ನ ದೇಹದ ಮೂಲಕ ಆತನ ಚಿತ್ತದಿಂದ ನಾವು ಶುದ್ಧರಾದೆವು."

ರೋಮ 6:6, 7 "**ಪಾಪದ ಶರೀರವು ನಾಶವಾಗಿ** ನಾವು ಇನ್ನೂ ಪಾಪಕ್ಕೆ ದಾಸರಾಗಿರದಂತೆ, ನಮ್ಮ **ಹಳೇ ಮನುಷ್ಯನು** ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟನೆಂದು ತಿಳಿದಿದ್ದೇವೆ. ಯಾಕೆಂದರೆ ಸತ್ತವನು ಪಾಪದಿಂದ ಬಿಡುಗಡೆ ಹೊಂದಿದ್ದಾನೆ."

1 ಕೊರಿ 15:53 "**ಲಯವಾಗುವಂಥ** (ಈ ದೇಹವು) **ನಿರ್ಲಯತ್ವವನ್ನು ಧರಿಸಿಕೊಳ್ಳುವುದೂ,** ಮರಣಾಧೀನವಾಗುವಂತಹ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವುದೂ ಅಗತ್ಯ."
1 ಕೊರಿ 15:44 "...**ಪ್ರಾಕೃತ ದೇಹವು** ಇರುವುದಾದರೆ, **ಆತ್ಮಿಕ ದೇಹವೂ** ಇರುವುದು."

ರೋಮ 8:3 "ನ್ಯಾಯ ಪ್ರಮಾಣವು ಶರೀರದ ಮೂಲಕ ನಿರ್ಬಲವಾಗಿ ಯಾವುದನ್ನು ಮಾಡದೇ ಇತ್ತೋ, ಅದನ್ನು ದೇವರೇ ಮಾಡಿದನು ; ಹೇಗೆಂದರೆ, ಆತನು ತನ್ನ ಸ್ವಂತ ಮಗನನ್ನು ಪಾಪ ಶರೀರದ ಹೋಲಿಕೆಯಲ್ಲಿ ಕಳುಹಿಸಿ, ಪಾಪಕ್ಕಾಗಿ ಆ **ಶರೀರದಲ್ಲಿಯೇ ಪಾಪವನ್ನು ದಂಡಿಸಿದನು."**

ಇಬ್ರಿ 9:28 "ಹಾಗೆಯೇ ಕ್ರಿಸ್ತನು ಬಹುಜನರ ಪಾಪಗಳನ್ನು ಹೊತ್ತುಕೊಳ್ಳುವುದಕ್ಕೋಸ್ಕರ ಒಂದುಸಾರಿ ಸಮರ್ಪಿತನಾದನು ; ಮತ್ತು ತನ್ನನ್ನು ನಿರೀಕ್ಷಿಸಿಕೊಂಡಿರುವವರಿಗೆ ರಕ್ಷಣಯನ್ನುಂಟು ಮಾಡುವುದಕ್ಕೋಸ್ಕರ ಪಾಪವಿಲ್ಲದವನಾಗಿ **ಎರಡನೆಯ ಸಾರಿ ಕಾಣಿಸಿಕೊಳ್ಳುವನು."**

ಆದಮನಂತಲ್ಲದೇ, ಒಳಮನುಷ್ಯ ಯೇಸು, ದೇವರೆಡೆಗಿರುವ ತನ್ನ ವಿಧೇಯತೆಯಿಂದಾಗಿ ಪಾಪದಿಂದ ಕೆಟ್ಟು ಹೋಗಲಿಲ್ಲ. ಆತನು ನೆಲಸುವುದಕ್ಕಾಗಿ ದೇವರು ಒಂದು ಹೊಸ ದೇಹವನ್ನುಂಟು ಮಾಡಿದ್ದರಿಂದ ದೇವರು ನೀತಿವಂತನಾದನು ; ಯೇಸುವಿನ ಪ್ರಾಕೃತಿಕ ದೇಹ ಮರ್ತ್ಯವಾದದ್ದು, ಆದರೆ ಆತನ ಪುನರುತ್ಥಾನದ ನಂತರ ಆತನ ದೇಹ ಅಮರವಾಯಿತು. ಆದುದರಿಂದ ಹೊಸ ದೇಹಕ್ಕೆ ನಿತ್ಯ ಜೀವ ಇದೆ.

**ಶಿಲುಬೆ**

**ದೇಹ**

ಮಾನವನ ದೇಹ ಪಾಪದ ಮತ್ತು ಮರಣದ ನ್ಯಾಯ ಪ್ರಮಾಣದ ಕೆಳಗೆ ಇದ್ದದ್ದರಿಂದ ಸೈತಾನನು ಪಾಪದ ಮೂಲಕ ಒಳ ಮನುಷ್ಯನನ್ನು ಆಳಿದನು. ಆದುದರಿಂದ ದೇವರು ಪ್ರಾಕೃತಿಕ ದೇಹಕ್ಕೂ, ಮತ್ತು ದೇಹದಲ್ಲಿ ನೆಲೆಸಿರುವ ಪಾಪಕ್ಕೂ ಬೇಧವನ್ನುಂಟು ಮಾಡುತ್ತಾನೆ. ಈ ಕಾರಣದಿಂದಾಗಿ ಚಿತ್ರದಲ್ಲಿ ಕೂಡ ಪಾಪ ಮತ್ತು ದೇಹವನ್ನು ಶಿಲುಬೆಯ ಮೇಲೆ ಬೇರೆ ಬೇರೆಯಾಗಿ ತೋರಿಸಲಾಗಿದೆ. ಪಾಪದ ದೇಹವು ಶಿಲುಬೆಯ ಮೇಲೆ ನಾಶವಾದಾಗ ಎರಡು ಸಂಗತಿಗಳು ಒಂದೇ ಕಾಲದಲ್ಲಿ ನಡೆದವು. ಮೊದಲನೆಯದಾಗಿ ಪಾಪಕ್ಕೆ ತೀರ್ಪಾಯಿತು, ಎರಡನೆಯದಾಗಿ ಯೇಸುವಿನ ದೇಹ ಪಾಪದಿಂದ ಪರಿಶುದ್ಧವಾಯಿತು. ಯೇಸುವಿನ ಪ್ರಾಕೃತಿಕ ದೇಹವನ್ನು ಅಮರವಾಗಿ ಎಬ್ಬಿಸುವಲ್ಲಿ, ಆಗ ದೇವರು ನೀತಿವಂತನಾದನು, ಮತ್ತು ಇದರಿಂದ ಮರಣವನ್ನು ಜಯಿಸಲಾಯಿತು.

**ಒಳ ಮನುಷ್ಯ**

ಒಳ ಮನುಷ್ಯನು ಯಾರೆಂದರೆ ದೇವರ ವಾಕ್ಯವೆಂದು, ಪಾಪದ ದೇಹದಲ್ಲಿ ತನ್ನನ್ನು ತಾನು ತೋರಿಸಿಕೊಂಡ ಯೇಸುವೇ. ಒಳ ಮನುಷ್ಯನಾದ ಯೇಸು, ದೇವರಿಗೆ ವಿಧೇಯನಾಗಿ ಉಳಿಯಬೇಕಾಯಿತು, ಮತ್ತು ಪಾಪ ಮಾಡದೇ ಇರಬೇಕಾಯಿತು. ಆತನು ಅನೇಕ ಕಷ್ಟ ಮತ್ತು ಹಿಂಸೆಗಳನ್ನು ತಾಳಬೇಕಾಗಿ ಬಂದರೂ, ಶಿಲುಬೆಯ ಮರಣದ ಮಟ್ಟಿಗೂ ತಾನು ವಿಧೇಯನಾಗಿದ್ದನು.

ಪಾಪವನ್ನು ದಂಡಿಸಿದಾಗ ದೇಹವೂ ಶುದ್ಧವಾಯಿತು. ಯೇಸು ಆತ್ಮದಲ್ಲಿಯೂ, ದೇಹದಲ್ಲಿಯೂ ಪರಿಶುದ್ಧನಾಗಿ ಕಂಡು ಬಂದುದರಿಂದ, ದೇವರು ಯೇಸುವನ್ನು ಕರ್ತನನ್ನಾಗಿಯೂ ಮತ್ತು ಕ್ರಿಸ್ತನನ್ನಾಗಿಯೂ ಮಾಡಿದನು.

ಇಬ್ರಿ 2:10 " ಸಮಸ್ತವು ಯಾವಾತನಿಗೋಸ್ಕರವೂ ಯಾವಾತನಿಂದಲೂ ಉಂಟಾಯಿತೋ ಆತನು ಬಹು ಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವಲ್ಲಿ, ಅವರ ರಕ್ಷಣಾ ನಾಯಕನನ್ನು **ಬಾಧೆಗಳ ಮೂಲಕ ಸಿದ್ಧಿಗೆ**ತರುವುದು ಆತನಿಗೆ ಯುಕ್ತವಾಗಿತ್ತು."

ಇಬ್ರಿ 5:8, 9 "ಹೀಗೆ ಆತನು **ಮಗನಾಗಿದ್ದರೂ** ತಾನು ಅನುಭವಿಸಿದ ಬಾಧೆಗಳಿಂದಲೇ **ವಿಧೇಯತ್ವವನ್ನು ಕಲಿತುಕೊಂಡನು.** ಇದಲ್ಲದೇ ಸಿದ್ಧಿಗೆ ಬಂದು ತನಗೆ ವಿಧೇಯವಾಗುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಆತನು ಕರ್ತನಾದನು.

ಇಬ್ರಿ 10:5 "ಆದ್ದರಿಂದ ಆತನು ಭೂಲೋಕದೊಳಗೆ ಬರುವಾಗ (ದೇವರೇ) ಯಜ್ಞವೂ, ಅರ್ಪಣೇಯೂ ನಿನಗೆ ಇಷ್ಟವಾಗಿರಲಿಲ್ಲ. ಆದರೆ, **ನನಗೆ ದೇಹವನ್ನು ಸಿದ್ಧ ಮಾಡಿಕೊಟ್ಟೆ.**"

ಇಬ್ರಿ 10:10 "ಯೇಸು ಕ್ರಿಸ್ತನು ಒಂದೇ ಸಾರಿ ಎಂದೆಂದಿಗೂ ಅರ್ಪಿಸಿದ ತನ್ನ ದೇಹದ ಮೂಲಕ ಆತನ ಚಿತ್ತದಿಂದ ನಾವು ಶುದ್ಧರಾದೆವು."

ರೋಮ 8:3 "ನ್ಯಾಯ ಪ್ರಮಾಣವು ಶರೀರದ ಮೂಲಕ ನಿರ್ಬಲವಾಗಿ ಯಾವುದನ್ನು ಮಾಡಲಾರದೇ ಇತ್ತೋ, ಅದನ್ನು ದೇವರೇ ಮಾಡಿದನು ; ಹೇಗೆಂದರೆ ಆತನು ತನ್ನ ಸ್ವಂತ ಮಗನನ್ನು ಪಾಪ ಶರೀರದ ಹೋಲಿಕೆಯಲ್ಲಿ ಕಳುಹಿಸಿ, ಪಾಪಕ್ಕಾಗಿ ಆ ಶರೀರದಲ್ಲಿಯೇ ಪಾಪವನ್ನು ದಂಡಿಸಿದನು."

ಲೇವಿ 16:8–10 ಮತ್ತು 21, 22 ನೋಡಿ : "ಇಲ್ಲಿ ನಾವು ಎರಡು ಆಡುಗಳ ಬಗ್ಗೆ ಓದುತ್ತೇವೆ ; ಒಂದು ಆಡು ಪಾಪವನ್ನು ಪ್ರತಿನಿಧಿಸುತ್ತದೆ. (ಅದನ್ನು ಬಲಿಯಾಗಿ ಸಮರ್ಪಿಸಬೇಕು.) ಮತ್ತು ಇನ್ನೊಂದು ಆಡು ದೇವರಿಗೆ ಪವಿತ್ರವಾದ ಯಜ್ಞ, ಅರಣ್ಯದೊಳಗೆ ಕಳುಹಿಸಿದಂಥ ಆಡು, ಜನರ ಎಲ್ಲಾ ಪಾಪಗಳನ್ನು ಹೊರುತ್ತದೆ. ಅದೇ ರೀತಿಯಲ್ಲಿ ಯೇಸುವಿನ ಶಿಲುಬೆಯ ಮರಣ ದೇವರಿಗೆ ಸಲ್ಲಿಸುವ ಕಾಣಿಕೆಯಾಗಿಯೂ ಮತ್ತು ಪಾಪಕ್ಕೆ ಯಜ್ಞವಾಗಿಯೂ ಸಾಕಾಗುತ್ತದೆ."

ಲೇವಿ 14:5–7 ನೋಡಿ. :"ಇಲ್ಲಿ ನಾವು ಎರಡು ಪಕ್ಷಿಗಳ ಬಗ್ಗೆ ಓದುತ್ತೇವೆ. ಒಂದು ಪಕ್ಷಿ ಮನುಷ್ಯ ಕುಮಾರನಾಗಿ ಸಾಯಬೇಕಾಗಿದ್ದಂತಹ ಯೇಸುವನ್ನು ವರ್ಣಿಸುತ್ತದೆ. ಇನ್ನೊಂದು ಪಕ್ಷಿ ದೇವಕುಮಾರನಾದ ಯೇಸು ಸ್ವತಂತ್ರನಾಗಿ ಹೋಗುವುದನ್ನು ಚಿತ್ರಿಸುತ್ತದೆ."

ಯೋಹ 1:14 "ಇದಲ್ಲದೇ ಆ ವಾಕ್ಯವಾಗಿರುವಾತನೂ (ಒಳ ಮನುಷ್ಯನು) ಶರೀರಧಾರಿಯಾಗಿ ನಮ್ಮ ಮಧ್ಯದಲ್ಲಿ ವಾಸಮಾಡಿದನು."

ಅಪೋ 2:36 "ಆದ್ದರಿಂದ ನೀವು ಶಿಲುಬೆಗೆ ಹಾಕಿದ ಈ ಯೇಸುವನ್ನೇ ದೇವರು ಕರ್ತನನ್ನಾಗಿಯೂ. ಕ್ರಿಸ್ತನನ್ನಾಗಿಯೂ, ಮಾಡಿದ್ದಾನೆಂದು, ಇಸ್ರಾಯೇಲ್ ಮನೆತನದವರೆಲ್ಲರಿಗೂ ನಿಶ್ಚಯವಾಗಿ ತಿಳಿದಿರಲಿ ಎಂದು ಹೇಳಿದನು."

ಯೋಹ 1:13 "ಇವರು ರಕ್ತದಿಂದಾಗಲೀ ಇಲ್ಲವೇ ಶರೀರದ ಇಚ್ಛೆಯಿಂದಾಗಲಿ, ಇಲ್ಲವೇ ಮನುಷ್ಯನ ಇಚ್ಛೆಯಿಂದಾಗಲಿ ಹುಟ್ಟಿದವರಲ್ಲ, ದೇವರಿಂದಲೇ ಹುಟ್ಟಿದವರು.

ಹೊಸ ಮನುಷ್ಯನನ್ನು ಉಂಟುಮಾಡುವುದಕ್ಕಾಗಿ ದೇವರ ಏರ್ಪಾಟಿನ ಹಂಚಿಕೆಯಲ್ಲಿ ಯಾವ ಮನುಷ್ಯನ ಕೈವಾಡವೂ ಇರಲಿಲ್ಲ. ಈ ಒಂದು ದೇವರ ಕಾರ್ಯ ತಂದೆಗೂ ಮಗನಿಗೂ ಮಧ್ಯೆ ಪವಿತ್ರಾತ್ಮನ ಶಕ್ತಿಯಿಂದಾದದ್ದು. ಆದುದರಿಂದ ಆದಮಾನು ದೇವರ ಹಳೆಯ ಸೃಷ್ಟಿಯ ಪ್ರಥಮ ಪುರುಷನು ಹೇಗೋ ಹಾಗೆಯೇ ಯೇಸು ಕ್ರಿಸ್ತನು ದೇವರ ಹೊಸ ಸೃಷ್ಟಿಯ ಪ್ರಥಮ ಪುರುಷನಾಗಿದ್ದಾನೆ.

ಇಬ್ರಿ 10:9, 10 "ತರುವಾಯ – ಇಗೋ **ಓ ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವುದಕ್ಕೆ** ಬಂದಿದ್ದೇನೆ ಎಂಥಲೂ ಹೇಳಿದ್ದಾನೆ. ಆತನು ಎರಡನೆಯದನ್ನು ಸ್ಥಾಪಿಸುವುದಕ್ಕಾಗಿ ಮೊದಲನೆಯದನ್ನು ತೆಗೆದುಹಾಕುತ್ತಾನೆ. ಯೇಸು ಕ್ರಿಸ್ತನು ಒಂದೇ ಸಾರಿ ಎಂದೆಂದಿಗೂ ಅರ್ಪಿಸಿದ ತನ್ನ ದೇಹದ ಮೂಲಕ ಆತನ ಚಿತ್ತದಿಂದ ನಾವು ಶುದ್ಧರಾದೆವು."

**ಮಾನವ ಕುಲಕ್ಕೆ ದೇವರು ಏನು ಮಾಡಿದನು ?**

ಯೇಸು ದೇವರ ಬಲಪಾರ್ಶ್ವಕ್ಕೆ ಕುರಿಮರಿಯಂತೆ ಕೂತುಕೊಳ್ಳಲು ಪರಲೋಕಕ್ಕೆ ಆರೋಹಣನಾದಾಗ ಮನುಷ್ಯನ ದೇಹದಲ್ಲಿ ಪಾಪವನ್ನು ಬದಲಾಗಿಸಲು ಪವಿತ್ರಾತ್ಮನು ಲಭ್ಯವಾದನು.

ಅಪೋ 2:33 "**ದೇವರ ಬಲಗೈಯಿಂದ** ಆತನು ಉನ್ನತ ಸ್ಥಾನಕ್ಕೆ **ಏರಿಸಲ್ಪಟ್ಟು,** ತಂದೆಯಿಂದ ಪವಿತ್ರಾತ್ಮನ ವಾಗ್ದಾನವನ್ನು ಹೊಂದಿ, **ನೀವು ಈಗ ನೋಡಿ ಕೇಳುವುದನ್ನು ಆತನು ಸುರಿಸಿದ್ದಾನೆ.**"
ರೋಮ 8:2 "ಯಾಕೆಂದರೆ, ಜೀವವನ್ನುಂಟು ಮಾಡುವ **ಆತ್ಮನ** ನಿಯಮವು ಕ್ರಿಸ್ತ ಯೇಸುವಿನಲ್ಲಿ ನನ್ನನ್ನು **ಪಾಪ** ಮತ್ತು ಮರಣದ ನಿಯಮದಿಂದ ಬಿಡಿಸಿತು."

ಪಾಪವು ಮರಣದ ಕಡೆಗೆ ಆಳುವಂತೆ, ಈಗ ಕೃಪೆಯು ನಿತ್ಯ ಜೀವದ ಕಡೆಗೆ ಆಳುತ್ತದೆ. ಕೃಪೆಯನ್ನು ಯೇಸುವಿನ ಮೇಲಿನ ನಂಬಿಕೆಯಿಂದ ಸ್ವೀಕರಿಸಬಹುದು, ಮತ್ತು ನ್ಯಾಯ ಪ್ರಮಾಣ ವನ್ನಾಚರಿಸುವುದರಿಂದಾಗಲೀ, ಮಾನವನು ಮಾಡುವ ಯಾವುದೇ ಒಳ್ಳೇ ಕಾರ್ಯಗಳಿಂದಾಗಲೀ ಅಲ್ಲ.

ರೋಮ 5:21 "ಹೀಗೆ **ಪಾಪವು** ಮರಣವನ್ನುಂಟು ಮಾಡುವುದಕ್ಕಾಗಿ **ಪ್ರಭುತ್ವವನ್ನು ನಡೆಸಿದ** ಹಾಗೆಯೇ **ಕೃಪೆಯು** ನೀತಿಯ ಮೂಲಕ, ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದಾದ ನಿತ್ಯ ಜೀವವನ್ನುಂಟು ಮಾಡುವುದಕ್ಕೆ **ಪ್ರಭುತ್ವ ನಡೆಸುವುದು**".


**ಕೃಪೆ**

**ಪವಿತ್ರಾತ್ಮ**

ಒಬ್ಬ ವಿಶ್ವಾಸಿಯ ದೇಹದಲ್ಲಿರವ ಪವಿತ್ರಾತ್ಮನ ಪ್ರಸನ್ನತೆಯು, ಒಳ ಮನುಷ್ಯನು ಪ್ರಾಣದೊಂದಿಗೆ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿಸುತ್ತದೆ ಮತ್ತು ಕ್ರಿಸ್ತನ ದೇಹದ ಸತ್ಯಸ್ಥಿತಿಯನ್ನು ತನ್ನ ಆತ್ಮ ನೊಂದಿಗೆ ಅನುಭವಿಸುವಂತೆ ಸಾಧ್ಯ ಮಾಡುತ್ತದೆ.

ಅಪೋ 2:38 "....ನೀವು ಮಾನಸಾಂತರ ಪಟ್ಟು ಪಾಪಗಳ ಪರಿಹಾರಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನೂ ಯೇಸು ಕ್ರಿಸ್ತನ ಹೆಸರಿನಲ್ಲಿ, ಬಾಪ್ತಿಸ್ಮ ಮಾಡಿಸಿಕೊಳ್ಳಿರಿ ;**ಆಗ ನೀವು ಪವಿತ್ರಾತ್ಮನ ದಾನವನ್ನು ಹೊಂದುವಿರಿ.**"

ನೋಡಿ ಕಲಿಯಿರಿ !




ಇಬ್ರಿ 10:10 "ಯೇಸು ಕ್ರಿಸ್ತನು ಒಂದೇ ಸಾರಿ ಎಂದೆಂದಿಗೂ ಅರ್ಪಿಸಿದ ತನ್ನ **ದೇಹದ** ಮೂಲಕ ಆತನ ಚಿತ್ತದಿಂದ ನಾವು **ಶುದ್ಧರಾದೆವು.**"

ಇಬ್ರಿ 10:4 "ಯಾಕೆಂದರೆ **ಹೋರಿಗಳ ಮತ್ತು ಹೋತಗಳ ರಕ್ತವು ಪಾಪಗಳನ್ನು ತೆಗೆಯುವುದು ಅಸಾಧ್ಯವಾಗಿದೆ.**"

ಯೇಸುವಿನ ರಕ್ತವು ಪಾಪಕ್ಷಮಾಪಣೆ ಮಾಡುತ್ತದೆ, ಆದರೆ ಯೇಸುವಿನ ದೇಹ ಪಾಪವನ್ನು ತೆಗೆದುಹಾಕುತ್ತದೆ.

ಕೊಲೊ 1:27 "....ನಿಮ್ಮಲ್ಲಿರುವ ಕ್ರಿಸ್ತನು **ಮಹಿಮೆಯ ನಿರೀಕ್ಷೆಯಾಗಿದ್ದಾನೆ. ....**"

ಪಾಪವು ದೇಹದಲ್ಲಿ ನೆಲೆಸಿದಾಗ, ಮನುಷ್ಯನ ದೇಹವು ಸೈತಾನನ ರಾಜ್ಯವಾಗುತ್ತದೆ ಮತ್ತು ಪವಿತ್ರಾತ್ಮನು ದೇಹದಲ್ಲಿ ನೆಲೆಸಿದಾಗ, ಮನುಷ್ಯನ ದೇಹವು ದೇವರ ರಾಜ್ಯವಾಗುತ್ತದೆ. ಹೇಗಾದರೂ ಪ್ರಾಕೃತಿಕ ದೇಹದ ಮಾನವ ಸ್ವಭಾವ ಬದಲಾಗದೇ ಉಳಿಯುತ್ತದೆ.

ದೇಹದಲ್ಲಿರುವ ಪಾಪವನ್ನು 'ಶರೀರಭಾವ' ಎಂದು ಕರೆಯುತ್ತೇವೆ ಮತ್ತು ದೇಹದಲ್ಲಿರುವ ಪವಿತ್ರಾತ್ಮನನ್ನು 'ಆತ್ಮ'ನೆಂದು ಕರೆಯುತ್ತೇವೆ 'ಮಾಂಸವು' ದೇಹದಲ್ಲಿನ ಒಂದು ಕೆಟ್ಟ ಸ್ವಭಾವ ಮತ್ತು ಆತ್ಮವು ದೇಹದಲ್ಲಿನ ಒಂದು ದೈವೀಕ ಸ್ವಭಾವ. ದೇಹದಲ್ಲಿರುವ ಪವಿತ್ರಾತ್ಮನ ಪ್ರಸನ್ನತೆಯೇ ಕ್ರಿಸ್ತನ ದೇಹವನ್ನು ಒಳಮನುಷ್ಯನಿಗೆ ಒಂದು ಸತ್ಯಸ್ಥಿತಿಯನ್ನು ಮಾಡುತ್ತದೆ.

ಮೇಲೆ ಹೇಳಿದ್ದನ್ನು ಒಂದು ಮುಳ್ಳಿನ ಗಿಡಕ್ಕೆ ಹೋಲಿಸಬಹುದು. ಅದನ್ನು ದೇವರು ಒಂದು ಹಣ್ಣಿನ ಮರವಾಗಿ ಮಾರ್ಪಡಿಸಬಹುದು. ಮುಳ್ಳಿನ ಗಿಡ ಹಣ್ಣನ್ನಾಗಲೀ ಹಣ್ಣಿನ ಗಿಡ ಮುಳ್ಳನ್ನಾಗಲೀ ಬಿಡುವುದಿಲ್ಲ. ಅದೇ ರೀತಿಯಲ್ಲಿ ಪಾಪದ ದೇಹದಲ್ಲಿರುವ ಒಳ ಮನುಷ್ಯನು ಪಾಪ ಮಾಡುತ್ತಾನೆ. ಮತ್ತು ಕ್ರಿಸ್ತನ ದೇಹದಲ್ಲಿರುವ ಒಳ ಮನುಷ್ಯನು ಪಾಪ ಮಾಡುವುದಿಲ್ಲ.

ಪವಿತ್ರಾತ್ಮನು ಪಾಪದ ದೇಹವನ್ನು ಕ್ರಿಸ್ತನ ದೇಹಕ್ಕೆ ಮಾರ್ಪಡಿಸಿದಾಗ್ಯೂ ಒಳ ಮನುಷ್ಯನಿಗೆ ಪೂರ್ವದ ಪಾಪಗಳ ಕ್ಷಮಾಪಣೆ ಅವಶ್ಯ. ಪಾಪ ಮನ್ನಣೆಗಾಗಿ ಮರಣ ಮತ್ತು ರಕ್ತ ಅವಶ್ಯಕ.

**ಕುರಿಮರಿಯಾದಾತನು**

ಪಾಪದ ದೇಹವನ್ನು ತೆಗೆದು ಹಾಕುವುದಕ್ಕೋಸ್ಕರ ದೇವರಿಗೆ ಒಂದು ಸಾವು ಅವಶ್ಯ. ಮತ್ತು ಒಳ ಮನುಷ್ಯನ ಪಾಪ ಪರಿಹಾರಕ್ಕಾಗಿ ಒಂದು ರಕ್ತದ ಕಾಣಿಕೆ ಅವಶ್ಯ ; ಯೇಸುವೇ ಈ ಎರಡೂ ವಿಧವಾದ ಯಜ್ಞ, ಪಾಪದ ದೇಹವನ್ನು ತಿರುಗಿ ದೇವರಿಗೆ ರಾಜಿ ಮಾಡುವುದಕ್ಕೋಸ್ಕರ ಆತನು ದೇವರ ಕುರಿಮರಿಯಂತೆ ಯಜ್ಞ ಅರ್ಪಿಸಲ್ಪಟ್ಟನು ಮತ್ತು ತನ್ನ ರಕ್ತದ ಮೂಲಕ ಒಳ ಮನುಷ್ಯನ ಪಾಪಗಳಿಗಾಗಿ ಪ್ರಾಯಶ್ಚಿತ್ತ ಮಾಡುವುದಕ್ಕೋಸ್ಕರ. ಆದುದರಿಂದ ಒಳಮನುಷ್ಯನಿಗೆ ಎರಡನೆಯ ಅವಕಾಶ ಸಿಕ್ಕಂತಾಯಿತು ಮತ್ತು ಒಂದು ಹೊಸ ಆರಂಭ ಸಿಕ್ಕುತ್ತದೆ. 'ಶರೀರಭಾವದ' ಸ್ವಭಾವ ಮತ್ತು ಆತ್ಮನ ಸ್ವಭಾವ ಒಳ ಮನುಷ್ಯನ ಸ್ವಭಾವದ ಮೇಲೆ ಮಾತ್ರ. ಪ್ರಭಾವ ಬೀರುತ್ತವೆ. ಮತ್ತು ದೇಹದ ಸ್ವಭಾವದ ಮೇಲೆ ಅಲ್ಲ.

ಎಫೆಸಾ 1:13, 14 "ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯ ವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವೂ ಸಹ **ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು** ಹೊಂದಿದಿರಿ. ಆತನ ಮಹಿಮೆಯ ಸ್ತುತಿಗೋಸ್ಕರ **ಕೊಂಡುಕೊಂಡ ಸ್ವಾಸ್ಥ್ಯದವರಿಗೆ** (ಹಳೇ ದೇಹ) ವಿಮೋಚನೆಯಾಗುವ ತನಕ ಆತನು (ಪವಿತ್ರಾತ್ಮನು) **ನಮ್ಮ ಬಾಧ್ಯತೆಗೆ ಸಂಚಕಾರನಾಗಿದ್ದಾನೆ.** (ಹೊಸ ದೇಹ)"

1 ಕೊರಿ 6:19 "ಏನು ? **ದೇವರಿಂದ ದೊರಕಿ** ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ **ನಿಮ್ಮ ದೇಹವು** ಆಲಯವಾಗಿದೆ ಎಂಬುದು ನಿಮಗೆ ತಿಳಿಯದೋ? **ನೀವು ನಿಮ್ಮ ಸ್ವಂತ ಸೊತ್ತಲ್ಲ ;**

ಎರಡು ದೇಹಗಳನ್ನು ಐಗುಪ್ತಕ್ಕೂ, ಕಾನಾನಿಗೂ, ಹೋಲಿಸಬಹುದು. ಐಗುಪ್ತದಲ್ಲಿ ಫರೋಹನನ ನಿಯಮ ಪ್ರಭುತ್ವ ಮಾಡುತ್ತದೆ, ಮತ್ತು ಕಾನಾನಿನಲ್ಲಿ ದೇವರ ನಿಯಮ ಪ್ರಭುತ್ವ ಮಾಡುತ್ತದೆ.

ರೋಮ 8:9 "ನೀವಾದರೋ **ನಿಮ್ಮಲ್ಲಿ ದೇವರಾತ್ಮನು ವಾಸವಾಗಿರುವುದಾದರೇ ಶರೀರಾಧೀನರಲ್ಲ. ಆತ್ಮನಿಗೆ ಅಧೀನರಾಗಿದ್ದೀರಿ.**"

ಲೂಕ 6:43, 44 "ಯಾಕೆಂದರೆ **ಒಳ್ಳೆ ಮರವು ಕೆಟ್ಟ ಫಲವನ್ನು ಫಲಿಸುವುದಿಲ್ಲ.** ಇಲ್ಲವೇ ಕೆಟ್ಟಮರವು ಒಳ್ಳೇ ಫಲವನ್ನು ಫಲಿಸುವುದಿಲ್ಲ."

ಮತ್ತಾ 7:17, 18 "ಅದರಂತೆಯೇ ಪ್ರತಿಯೊಂದು **ಒಳ್ಳೇ ಮರವು ಒಳ್ಳೇ ಮರವನ್ನುಕೊಡುತ್ತದೆ** ; ಮತ್ತು ಕೆಟ್ಟ ಮರವು ಕೆಟ್ಟ ಫಲವನ್ನು ಕೊಡುತ್ತದೆ. ಒಳ್ಳೆ ಮರವು ಕೆಟ್ಟ ಫಲವನ್ನು ಕೊಡಲಾರದು ; ಇಲ್ಲವೇ ಕೆಟ್ಟ ಮರವು ಒಳ್ಳೆ ಫಲವನ್ನು ಕೊಡಲಾರದು.

2 ಕೊರಿ 5:17 "ಹೀಗಿರಲಾಗಿ ಯಾವನಾದರೂ **ಕ್ರಿಸ್ತನಲ್ಲಿದ್ದರೇ,** ಅವನು **ನೂತನ ಸೃಷ್ಟಿಯಾಗಿದ್ದಾನೆ.** ಹಳೆಯವು ಅಳಿದುಹೋದವು ; ಇಗೋ, **ಎಲ್ಲವೂ ನೂತನವಾದವು.**"


ಯೋಹ 1:29 "ಮರುದಿನ ಯೋಹಾನನು ತನ್ನ ಕಡೆಗೆ ಬರುತ್ತಿದ್ದ ಯೇಸುವನ್ನು ನೋಡಿ – ಇಗೋ, ಲೋಕದ **ಪಾಪವನ್ನು ತೆಗೆದುಹಾಕುವ ದೇವರ ಕುರಿಮರಿ** ಎಂದು ಹೇಳಿದನು."

ಇಬ್ರಿ 9:12 "ಹೋತಗಳ ಮತ್ತು ಕರುಗಳ ರಕ್ತವನ್ನು ತೆಗೆದುಕೊಳ್ಳದೆ **ತನ್ನ ಸ್ವಂತ ರಕ್ತವನ್ನೇ** ತೆಗೆದುಕೊಂಡು ನಮಗೋಸ್ಕರ **ನಿತ್ಯವಿಮೋಚನೆಯನ್ನು ಸಂಪಾದಿಸಿಕೊಂಡವನಾಗಿ** ಒಂದೇ ಸಾರಿ ಪರಿಶುದ್ಧ ಸ್ಥಳದೊಳಗೆ ಪ್ರವೇಶಿಸಿದನು."

ರೋಮ 5:11 "ಇಷ್ಟು ಮಾತ್ರವಲ್ಲದೆ ನಮ್ಮ **ಕರ್ತನಾದ ಯೇಸು ಕ್ರಿಸ್ತನ ಮೂಲಕ,** ಈಗ ಪ್ರಾಯಶ್ಚಿತ್ತ ಹೊಂದಿದವರಾಗಿ ಆತನ ಮುಖಾಂತರ ನಾವೂ ಸಹಾ ದೇವರಲ್ಲಿ ಹರ್ಷಗೊಳ್ಳುತ್ತೇವೆ."

1 ಪೇತ್ರ 1:19 "ಆದರೆ **ಪೂರ್ಣಾಂಗವಾದ ನಿಶ್ಕಳಂಕ ಕುರಿಮರಿಯ ರಕ್ತದಿಂದಲೋ** ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ಎಂದು ನೀವು ಬಲ್ಲಿರಲ್ಲವೇ."

ನೋಡಿ ಕಲಿಯಿರಿ !




**ಯೇಸುವಿನ ದೇಹ ಪಾಪದಿಂದ ಸ್ವತಂತ್ರನಾಗುವಂತೆ ಮಾಡುತ್ತದೆ.**

ಯೇಸುವಿನ ದೇಹದಲ್ಲಿ ದೇವರು ಪಾಪವನ್ನು ತೀರ್ಪು ಮಾಡಿದ ನಂತರ, ಒಂದು ಪಾಪರಹಿತ ದೇಹವು ಯಜ್ಞವಾಗಿ ಅರ್ಪಿಸಲ್ಪಟ್ಟಿತು. ಈ ಯಜ್ಞ ಒಬ್ಬ ವಿಶ್ವಾಸಿಯ ದೇಹದಿಂದ ಪಾಪವನ್ನು ತೆಗೆದು ಹಾಕುವಲ್ಲಿ ಮತ್ತು ಅದಕ್ಕೆ ಬದಲಾಗಿ ಪವಿತ್ರಾತ್ಮನನ್ನು ಕೊಡುವುದರಲ್ಲಿ ದೇವರು ನ್ಯಾಯವಂತನೆಂದು ಸಮರ್ಥಿಸುತ್ತದೆ. ಪವಿತ್ರಾತ್ಮನು ದೇಹದಲ್ಲಿ ವಾಸಿಸುವಾಗ ದೇಹವು ಪಾಪ ಮತ್ತು ಮರಣಗಳ ನ್ಯಾಯ ಪ್ರಮಾಣದಿಂದ ಸ್ವತಂತ್ರವಾಗಿರುತ್ತದೆ, ಯಾಕೆಂದರೆ ಜೀವದ ಆತ್ಮದ ನ್ಯಾಯಪ್ರಮಾಣವು ಅದರಲ್ಲಿ ಪ್ರಭುತ್ವ ನಡೆಸುತ್ತದೆ. ಈ ನಿಜಾಂಶದಿಂದಾಗಿ ಒಳಮನುಷ್ಯನು ತಿರುಗಿ ಹುಟ್ಟುವಿಕೆಯನ್ನು ಅನುಭವಿಸುತ್ತಾನೆ. ತಿರುಗಿ ಹುಟ್ಟುವುದೆಂದರೆ ಒಳ ಮನುಷ್ಯನು ಹೊಸ ನ್ಯಾಯ ಪ್ರಮಾಣದ ಕೆಳಗಿರುವ ದೇಹದಲ್ಲಿದ್ದಾನೆ."

**ಯೇಸುವಿನ ರಕ್ತದ ಪರಿಣಾಮವಾಗಿ ಪಾಪ ಪರಿಹಾರವಾಗುತ್ತದೆ.**

ಯೇಸವಿನ ರಕ್ತವು ತಾನು ಯಜ್ಞವನ್ನರ್ಪಿಸಿದ ತನ್ನ ಜೀವವಾಗಿರುತ್ತದೆ. ಯೇಸುವನ್ನು ಶಿಲುಬೆಗೇರಿಸಿದಾಗ, ಒಬ್ಬ ನೀತಿವಂತ ಒಳ ಮನುಷ್ಯನು ಅನೀತಿವಂತನ ಪಾಪಗಳಿಗಾಗಿ ಶ್ರಮೆ ಹೊಂದಿದನು, ನೀತಿವಂತನು ಅನೀತಿವಂತನಿಗಾಗಿ ಶ್ರಮೆ ಪಟ್ಟಿದ್ದರಿಂದ ಯೇಸುವಿನ ರಕ್ತವು ಪಾಪದ ಒಳ ಮನುಷ್ಯನ ಪೂರ್ವಪಾಪಗಳನ್ನು ಕ್ಷಮಿಸುವುದರಲ್ಲಿ ದೇವರು ನ್ಯಾಯಸ್ಥನೆಂದು ಸಮರ್ಥಿಸುತ್ತದೆ. ಆತನ ರಕ್ತ ಸುರಿಸುವಿಕೆಯು ಒಳ ಮನುಷ್ಯನ

**ಅನ್ಯೂನ್ಯ ಸಹವಾಸ :**
1 ಕೊರಿ 11:23–26 "ಹುಳಿಯಿಲ್ಲದ ರೊಟ್ಟಿಯು ಯೇಸು ಯಜ್ಞವಾಗಿ ಅರ್ಪಿಸಿದ ಪಾಪ ರಹಿತ ದೇಹವನ್ನು ಸೂಚಿಸುತ್ತದೆ. ಮತ್ತು ದ್ರಾಕ್ಷಾರಸವು ಯೇಸು ಸುರಿಸಿದ ರಕ್ತ (ಜೀವ) ವನ್ನು ಸೂಚಿಸುತ್ತದೆ.

1 ಪೇತ್ರ : 3, 4 "…. ದೇವರು ಯೇಸು ಕ್ರಿಸ್ತನನ್ನು ಸತ್ತವರೊಳಗಿನಿಂದ ಎಬ್ಬಿಸಿದ್ದರಲ್ಲಿ, ತನ್ನ ಮಹಾ ಕರುಣಾನುಸಾರವಾಗಿ ಜೀವಕರವಾದ ನಿರೀಕ್ಷೆಗೂ **ಲಯ, ಕಳಂಕ, ಕ್ಷಯಗಳಿಲ್ಲದ ಬಾಧ್ಯತೆಗೂ** (ದೇಹ) ನಮ್ಮನ್ನು ತಿರುಗಿ ಹುಟ್ಟಿಸಿದ್ದಾನೆ."

ಎಫೆಸ 1:13, 14 "ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆ ಎಂಬ ಸತ್ಯವಾಕ್ಯವನ್ನು ಕೇಳಿ, ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹಾ **ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ.** ಆತನ ಮಹಿಮೆಯ ಸ್ತುತಿಗೋಸ್ಕರ **ಕೊಂಡು ಕೊಂಡ ಸ್ವಾಸ್ಥ್ಯದವರಿಗೆ ವಿಮೋಚನೆಯಾಗುವತನಕ** ಆತನು (ಪವಿತ್ರಾತ್ಮನು) **ನಮ್ಮ ಬಾಧ್ಯತೆಗೆ ಸಂಚಕಾರನಾಗಿದ್ದಾನೆ.**"

ಕೊಂಡುಕೊಂಡ ಸ್ವಾಸ್ಥ್ಯವು ವಿಶ್ವಾಸಿಯು ಹೊಂದುವ ಶಾಶ್ವತ ಸ್ವಾಸ್ಥ್ಯವಾದ ದೇಹ. ಪವಿತ್ರಾತ್ಮನು ವಿಶ್ವಾಸಿಯ ದೇಹವನ್ನು ಕ್ರಿಸ್ತನ ದೇಹವನ್ನಾಗಿ ಇಲ್ಲಿ ಮತ್ತು ಈಗ ಮಾಡುತ್ತಾನೆ – ಇದು ನಿಜವಾದ ಸಂಗತಿ.

2 ಕೊರಿ 3:17 "ಕರ್ತನು ಆ ಆತ್ಮನೇ ಆಗಿದ್ದಾನೆ ;**ಕರ್ತನ ಆತ್ಮನು ಯಾರಲ್ಲಿದ್ದಾನೋ ಅವರಿಗೆ ಬಿಡುಗಡೆ ಉಂಟು.**"

ರೋಮ 6:6, 7 "ಪಾಪದ ಶರೀರವು ನಾಶವಾಗಿ ನಾವು ಇನ್ನೂ **ಪಾಪಕ್ಕೆ ದಾಸರಾಗಿರದಂತೆ,** ನಮ್ಮ ಹಳೇ ಮನುಷ್ಯನು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟನೆಂದು ತಿಳಿದಿದ್ದೇವೆ. ಯಾಕೆಂದರೆ ಸತ್ತವನು **ಪಾಪದಿಂದ ಬಿಡುಗಡೆ ಹೊಂದಿದ್ದಾನೆ.**"

1 ಪೇತ್ರ 2:24 "**ನಾವು** ಪಾಪದ ಪಾಲಿಗೆ ಸತ್ತು, **ನೀತಿವಂತರಾಗಿ ಜೀವಿಸುವಂತೆ,** ಆತನು ಮರದ ಮೇಲೆ ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತನು ; ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು."

ಕೊಲೋ 1:21,22 "ಇದಲ್ಲದೇ ನೀವು ಹಿಂದಿನ ಕಾಲದಲ್ಲಿ ಅನ್ಯರೂ ದುಷ್ಕೃತ್ಯಗಳಿಂದ ದ್ವೇಶ ಮನಸ್ಸುಳವರು ಆಗಿದ್ದೀರಿ ಆದಾಗ್ಯೂ ಈಗ ಆತನು ನಿಮ್ಮನ್ನು ಸಂಧಾನ ಪಡಿಸಿಕೊಂಡಿದ್ದಾನೆ. ಮತ್ತು ತನ್ನ ಮಾಂಸ ಶರೀರದಲ್ಲಿ ಉಂಟಾದ ಮರಣದ ಮೂಲಕ ನಿಮ್ಮನ್ನು ಪರಿಶುದ್ಧರನ್ನಾಗಿಯೂ ನಿರ್ದೋಶಿಗಳನ್ನಾಗಿಯೂ ನಿರಪರಾಧಿಗಳನ್ನಾಗಿಯೂ ತನ್ನ ಸನ್ನಿಧಿಯಲ್ಲಿ ನಿಲ್ಲಿಸಬೇಕೆಂದಿದ್ದಾನೆ."

ಎಫೆಸ 2:1 "ಇದಲ್ಲದೆ ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು **ಆತನು ಬದುಕಿಸಿದನು.**"

ರೋಮ 3:25 "ಈತನು **ತನ್ನ ರಕ್ತದ ಮೂಲಕ** ನಂಬಿಕೆ ಇದ್ದವರಿಗಾಗಿ, **ಪಾಪದ ಪ್ರಾಯಶ್ಚಿತ್ತ**ವಾಗಿರಬೇಕೆಂದು ದೇವರು ಈತನನ್ನು ಮುಂದಿಟ್ಟನು. **ದೇವರು ಹಿಂದಿನ ಕಾಲದ ಪಾಪಗಳನ್ನು ಸಹಿಸಿಕೊಂಡಿರಲಾಗಿ ….**"

ಪಾಪಗಳಿಗೆ ಪ್ರಾಯಶ್ಚಿತ್ತ ಮಾಡುತ್ತದೆ.

ಮೇಲ್ಕಂಡ ವಿಷಯಗಳಿಂದ ನಾವು ಹೀಗೆ ತೀರ್ಮಾನಿಸಬಹುದು, ಪವಿತ್ರಾತ್ಮನ ಮೂಲಕ ಹೊರಮನುಷ್ಯನು ಪಾಪ ಸ್ವಭಾವದಿಂದ ಶುದ್ಧನಾದಕೂಡಲೇ ಮತ್ತು ಒಳ ಮನುಷ್ಯನ ಪಾಪಗಳು ಕ್ಷಮಿಸಲ್ಪಟ್ಟ ಕೂಡಲೇ, ಅವನಿಗೆ ಇನ್ನು ಮೇಲೆ ಪಾಪದ ಮನಸ್ಸಾಕ್ಷಿ ಇರಕೂಡದು.


ತಿರಿಗಿ ಹುಟ್ಟಿದ ಮನುಷ್ಯನು ಒಬ್ಬ ಪರಿಶುದ್ಧನು, ಮತ್ತು ಒಬ್ಬ ಪರಿಶುದ್ಧನು ಪಾಪಮಾಡುವುದಿಲ್ಲ. ಸತ್ಯವನ್ನು ನಂಬುವುದರಿಂದ ಇದರ ವಾಸ್ತವಿಕತೆಯನ್ನು ನೀನು ಅನುಭವಿಸಬಹುದು.

ಅಪೋ 3:19 "ಆದ್ದರಿಂದ **ನಿಮ್ಮ ಪಾಪಗಳು ಅಳಿಸಲ್ಪಡುವಂತೆ ನೀವು ಮಾನಸಾಂತರಪಟ್ಟುತಿರುಗಿಕೊಳ್ಳಿರಿ** ; ಆಗ **ಕರ್ತನ** (ಪವಿತ್ರಾತ್ಮನ) **ಸನ್ನಿಧಾನದಿಂದ** ನಿಮಗೆ ವಿಶ್ರಾಂತಿ ಕಾಲಗಳು ಒದಗುವವು."


ಇಬ್ರಿ 10:2 "...ಯಾಕೆಂದರೆ ಆರಾಧನೆ ಮಾಡುವವರು ಒಂದು ಸಾರಿ ಶುದ್ಧೀಕರಿಸಲ್ಪಟ್ಟ ಮೇಲೆ ಅವರಿಗೆ **ಎಂದಿಗೂ ಪಾಪಗಳ ಮನಸ್ಸಾಕ್ಷಿ** ಇರುತ್ತಿರಲಿಲ್ಲ."

ಅಪೋ 20:21 "ಯಹೋದ್ಯರು, ಗ್ರೀಕರು **ದೇವರ ಕಡೆಗೆ ಮಾನಸಾಂತರ ಪಟ್ಟು, ನಮ್ಮ ಕರ್ತನಾದ ಯೇಸುವಿನ ಮೇಲೆ ನಂಬಿಕೆ ಇಡಬೇಕೆಂದು ಸಾಕ್ಷೀಕರಿಸುವವನಾಗಿದ್ದೆನು**"


## ಸಾರಂಶ




**ಎರಡನೇ ದೇಹವನ್ನುಂಟುಮಾಡಿದ್ದು :**
ಯೇಸು ಮೊದಲ ಮಾನವನಾದ ಆದಮನ ದೇಹದಲ್ಲಿ ಹುಟ್ಟಿದನು. ಆತನು ಶಿಲುಬೆಯ ಮೇಲೆ ಸತ್ತನು ಮತ್ತು ಹೊಸದೇಹದಲ್ಲಿ ಎಬ್ಬಿಸಲ್ಪಟ್ಟನು. ಇದು 2ನೇ ಮನುಷ್ಯ ಕ್ರಿಸ್ತನೇ. ಮೊದಲನೆಯ ದೇಹ ಪಾಪದ ಕಾರಣದಿಂದ ಮೃತಪಟ್ಟಿತು, ಆದರೆ, ನೂತನ (ಎರಡನೇ) ದೇಹ ನಿತ್ಯ ಜೀವ ಹೊಂದಿದೆ. ಯಾಕೆಂದರೆ, ಅದರಲ್ಲಿ ಪಾಪವಿಲ್ಲ.
**ಗಮನಿಸು :** ಆದಮನ ದೇಹದಲ್ಲಿ ಹುಟ್ಟಿದ ಒಳ ಮನುಷ್ಯ ಯೇಸುವೇ ಕ್ರಿಸ್ತನ ದೇಹದಲ್ಲಿ ಎಬ್ಬಿಸಲ್ಪಟ್ಟನು




**ಜೀವದ ಆತ್ಮ :**
ಜೀವದ ಆತ್ಮದ ನ್ಯಾಯ ಪ್ರಮಾಣವೇ ಪಾಪ ಮತ್ತು ಮರಣದ ನ್ಯಾಯ ಪ್ರಮಾಣದಿಂದ ದೇಹವನ್ನು ಸ್ವತಂತ್ರವನ್ನಾಗಿ ಮಾಡುವುದು. ಪವಿತ್ರಾತ್ಮನು ಒಳಗೆ ನೆಲೆಸುವುದರಿಂದ ಪಾಪದ ದೇಹವು ಕ್ರಿಸ್ತನ ದೇಹವಾಗುತ್ತದೆ.





**ತಿರಿಗಿ ಹುಟ್ಟುವುದರ ಅನುಭವ :**
ಪಾಪದ ಕಾರಣದಿಂದ ದೇವರಕಡೆಗೆ ಸತ್ತು ಹೋದ ಒಳ ಮನುಷ್ಯ, ಈಗ ನೀತಿಯ ಕಾರಣದಿಂದ ಜೀವಂತನಾಗಿದ್ದಾನೆ.
**ಗಮನಿಸು :**
ಒಬ್ಬ ಪಾಪಿಯು ಸತ್ತವನಾಗಿದ್ದಾನೆ ಯಾಕೆಂದರೆ ಅವನು ಪಾಪ ಮಾಡುತ್ತಾನೆ, ಮತ್ತು ಒಬ್ಬ ಪರಿಶುದ್ಧನು ಜೀವಂತನಾಗಿದ್ದಾನೆ, ಯಾಕೆಂದರೆ ಅವನು ಪಾಪಮಾಡುವುದಿಲ್ಲ.

## ಸಮಾಪ್ತಿ :
## ತಿರುಗಿ ಹುಟ್ಟುವುದರ ತತ್ವ

ಮೊದಲ ಮಾನವನಾದ ಆದಾಮನು ಪಾಪ ಮಾಡಿದನು. ಎರಡನೇ ಮಾನವನಾದ ಯೇಸು ಕ್ರಿಸ್ತನು ಪಾಪ ಮಾಡಲಿಲ್ಲ. ದೇವರ ಸಂದೇಶ ಮಾನವನಿಗೆ ಏನೆಂದರೆ ಆತನು ಒಬ್ಬ ನೂತನ ಮಾನವನನ್ನು ಉಂಟುಮಾಡಿದನು .


**ಯೇಸು ತಿರುಗಿ ಹುಟ್ಟಬೇಕಾಯಿತು**


ನೋಡಿ ಕಲಿಯಿರಿ !




ಯೇಸು ಒಂದು ನೂತನ ದೇಹದಲ್ಲಿ ತಿರುಗಿ ಹುಟ್ಟಬೇಕಾಯಿತು. ಒಳ ಮನುಷ್ಯ, ಯೇಸು, ಆದಾಮನ ದೇಹದಲ್ಲಿ ಈ ಪ್ರಪಂಚದೊಳಗೆ ಬಂದನು ಮತ್ತು ಆತನ ದೇಹ ಸತ್ತಾಗ ದೇವರು ಆತನನ್ನು ಸಮಾಧಿಯಿಂದ ಕ್ರಿಸ್ತನ ದೇಹದಲ್ಲಿ ಎಬ್ಬಿಸಿದನು. ಯೇಸು ಆಗ ಒಂದು ನೂತನ ದೇಹದಲ್ಲಿದ್ದನು. ಮತ್ತು ದೇವರ ಹೊಸ ಸೃಷ್ಠಿಯ ಪ್ರಥಮ ಫಲವಾಗಿದ್ದನು.

**ನೀನು ತಿರುಗಿ ಹುಟ್ಟಬೇಕು**




ಪವಿತ್ರಾತ್ಮನು ನಮಗೆ ತಿರುಗಿ ಹುಟ್ಟುವುದರ ಅನುಭವವನ್ನು ಸತ್ಯ

**ಅನ್ವಯಗಳು ಮತ್ತು ವ್ಯಾಖ್ಯಾನಗಳು**

ಅಪೋ 2:36 ... ಈ ಯೇಸುವನ್ನೇ ದೇವರು ಕರ್ತನನಾಗಿಯೂ (ಒಳ ಮನುಷ್ಯ) ಕ್ರೀಸ್ತನನಾಗಿಯೂ (ದೇಹ)

**ಗಮನಿಸು :**
ಇದು ಅದೇ ನೀತೀವಂತನು ಒಳಮನುಷ್ಯನು ಅದ ಯೇಸು ಅತನು ಹೊಸದೇಹದಲ್ಲಿ ಎಬ್ಬಿಸಲ್ಪಟನು. ಯೇಸು ಸೈತಾನನ. ಪಾಪ ಮತ್ತು ಮರಣಗಳನ್ನು ಜಯಿಸಿದರಿಂದ ದೇವರು ಆತನನ್ನು ಎಲ್ಲರ ಮೇಲೆ ಕರ್ತನನ್ನಾಗಿಯೂ ಮತ್ತು ಕ್ರೀಸ್ತನನ್ನಾಗಿಯೂ ಮಾಡಿದನು.

ಕೊಲೊ 1:13 "ಆತನ್ನು ನಮ್ಮನ್ನು **ಅಂಧಕಾರದ ಶಕ್ತಿಯಿಂದ** ಬಿಡಿಸಿ **ತನ್ನ ಪ್ರೀಯಕುಮಾರನ ರಾಜ್ಯದೊಳಗೆ ಸೇರಿಸಿದನು.**

**ಗಮನಿಸು:**
"ಪರಿಶುಧಾತ್ಮನು ನಿಮ್ಮ ದೆಹದಲ್ಲಿ ನೆಲೆಸಿರುವುದರಿಂದ ನಿಮ್ಮ ಒಳ ಮನುಷ್ಯನು ದೇವರ ರಾಜ್ಯದಲ್ಲಿ ಆತ್ಮದ ನಿಯಮದ ಕೇಳಗಿದ್ದಾನೆ, ಮತ್ತು ಸೈತ್ತಾನನ ರಾಜ್ಯದಲ್ಲಿ ಪಾಪದ ಮತ್ತು ಮರಣದ ನಿಯಮದ ಕೇಳಗೆ ಇನ್ನೂ ಮುಂದೆ ಇಲ್ಲ, ದೇವರ ರಾಜ್ಯದಲ್ಲಿ ನೀವು ಪಾಪ ಮಡುವುದಿಲ್ಲ"

ರೋಮ 6:22,23 "ಈಗಲಾದಾರೂ ನೀವು ಪಾಪದಿಂದ ಬಿಡುಗಡೆಯನ್ನು ಹೂಂದಿ,..,ಯಾಕೆಂದರೇ ಪಾಪದ ಸಂಬಳ ಮರಣ, ಆದರೆ ದೇವರ ದಾನವು ನಮ್ಮ ಕರ್ತನಾದ ಯೇಸು ಕ್ರೀಸ್ತನ ಮುಖಾಂತರ ನಿತ್ಯ ಜೀವವು."

**ಗಮನಿಸು:**
ತೀರುಗಿ ಹುಟ್ಟಿದ ಮೇಲೆ ನೀವು ಪಾಪ ರಹಿತ ಜೀವನವನ್ನು ಜೀವಿಸಬೇಕು

ರೋಮ 6:6 "ಪಾಪದ ಶರೀರವು ನಾಶವಾಗಿ ನಾವು (ಒಳ ಮನುಷ್ಯ) ಇನ್ನು ಪಾಪಕ್ಕೆ ದಾಸರಾಗಿರದಂತೆ, ನಮ್ಮ ಹಳೇ ಮನುಷ್ಯನು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟನೆಂದು ತಿಳಿದಿದ್ದೇವೆ.

ಸ್ಥಿತಿಯನ್ನಾಗಿ ಮಾಡುತ್ತದೆ. ಪವಿತ್ರಾತ್ಮನು ನಿನ್ನ ದೇಹವನ್ನು ಪ್ರವೇಶಿಸಿದಾಗ ನಿನ್ನ ದೇಹವು ಕ್ರಿಸ್ತನ ದೇಹವಾಗುತ್ತದೆ. ಕ್ರಿಸ್ತ ಯೇಸುವಿನಲ್ಲಿನ ಜೀವದ ಆತ್ಮನ ನ್ಯಾಯ ಪ್ರಮಾಣ ನಿನ್ನ ದೇಹವನ್ನು ಪಾಪ ಮತ್ತು ಮರಣಗಳ ನಿಯಮದಿಂದ ಸ್ವತಂತ್ರನನ್ನಾಗಿ ಮಾಡುತ್ತದೆ.

**ನಿನ್ನನ್ನು ನೀನು ಪರೀಕ್ಷಿಸಿಕೋ**

**ನೀನು ಪವಿತ್ರಾತ್ಮನನ್ನು ಹೊಂದಿದ್ದೀಯೂ** ?

ನೋಡಿ ಕಲಿಯಿರಿ !




ನಿನ್ನ ಉತ್ತರ "ಇಲ್ಲಾ" ಎನ್ನುವುದಾದರೆ, ಆಗ ನೀನು ಪಶ್ಚಾತ್ತಾಪ ಪಡಬೇಕಾಗುತ್ತದೆ. ದೇವರನ್ನು ನಂಬು ಮತ್ತು ಯೇಸುವನ್ನು ನಿನ್ನ ಸ್ವಂತ ರಕ್ಷಕನನ್ನಾಗಿಯೂ, ಒಡೆಯನ್ನನ್ನಾಗಿಯೂ ಸ್ವೀಕರಿಸು. ಯಾಕೆಂದರೆ, ಹಾಗೆ ಮಾಡಿದಾಗ ಮಾತ್ರ ದೇವರು ನಿನ್ನ ಪೂರ್ವದ ಪಾಪಗಳನ್ನು ಕ್ಷಮಿಸುತ್ತಾನೆ. ಮತ್ತು ಪವಿತ್ರಾತ್ಮನನ್ನು ನಿನಗೆ ಕೊಡುತ್ತಾನೆ. ಪವಿತ್ರಾತ್ಮನಿಲ್ಲದಿದ್ದರೆ ನೀನು ತಿರುಗಿ ಹುಟ್ಟಲಿಲ್ಲ.

ನಿನ್ನ ಉತ್ತರವು "ಹೌದು ನಾನು ಪವಿತ್ರಾತ್ಮನನ್ನು ಹೊಂದಿದ್ದೇನೆ," ಅನ್ನುವುದಾದರೆ, ಕೆಳಗಿನ ಪ್ರಶ್ನೆಗೆ ಉತ್ತರ ಕೊಡು :

**ನೀನು ಪಾಪ ಮಾಡುವುದನ್ನು ನಿಲ್ಲಿಸಿದ್ದೀಯೋ** ?



ಒಬ್ಬ ಪಾಪಿ ಪಾಪ ಮಾಡುತ್ತಾನೆ    ಒಬ್ಬ ಭಕ್ತ ಪಾಪ ಮಾಡುವುದಿಲ್ಲ

ನಿನ್ನ ಉತ್ತರ "ಇಲ್ಲಾ" ಎಂದರೆ ನೀನು ಪಶ್ಚಾತ್ತಾಪ ಪಟ್ಟು ದೇವರಲ್ಲಿ

ರೋಮ 8:2 "ಯಾಕೆಂದರೆ ಜೀವವನ್ನುಂಟು ಮಾಡುವ ಆತ್ಮನ ನಿಯಮವು ಕ್ರಿಸ್ತ ಯೇಸುವಿನಲ್ಲಿ **ನನ್ನನ್ನು** ಪಾಪ ಮತ್ತು ಮರಣದ ನಿಯಮದಿಂದ **ಬಿಡಿಸಿತು.**

ಅಪೋ 19:2 "**ಮತ್ತು ಅವರಿಗೆ ನೀವು ನಂಬಿದಾಗ ಪವಿತ್ರಾತ್ಮನನ್ನು ಹೊಂದಿದಿರೋ** ಎಂದು ಕೇಳಿದ್ದಕ್ಕೆ, ಅವರು ಅವನಿಗೆ ಪವಿತ್ರಾತ್ಮನು ಇದ್ದಾನೆಂಬುದು ನಾವು ಕೇಳಲೇ ಇಲ್ಲ ಅಂದರು.

ಅನೇಕರು ತಾವು ಕ್ರೈಸ್ತರೆಂದು ಭಾವಿಸುತ್ತಾರೆ, ಯಾಕಂದರೆ ಅವರು ಕ್ರೈಸ್ತ ಮತದಲ್ಲಿ ಹುಟ್ಟಿ ಬೆಳೆದರು, ಆದರೆ ಅವರು ತಿರುಗಿ ಹುಟ್ಟಬೇಕಾಗಿದ್ದರೆ ಪವಿತ್ರಾತ್ಮನನ್ನು ಸ್ವೀಕರಿಸಬೇಕೆಂಬುದರ ಬಗ್ಗೆ ಅವರು ಅರಿವಿಲ್ಲದವರಾಗಿದ್ದಾರೆ.

ಯೋಹ 3:3 ರಲ್ಲಿ ಯೇಸು ನಿಕೋದೇಮನಿಗೆ ಹೇಳಿದ್ದು, "**ಒಬ್ಬನು ತಿರುಗಿ ಹುಟ್ಟದಿದ್ದರೆ, ಅವನು ದೇವರ ರಾಜ್ಯವನ್ನು ನೋಡಲಾರನು.**" ನೀನು ತಿರುಗಿ ಹುಟ್ಟಿದ್ದರೆ ಪವಿತ್ರಾತ್ಮನು ನಿನ್ನನ್ನು ಪಾಪದಿಂದ ಬಿಡುಗಡೆ ಮಾಡುತ್ತಾನೆ, ಮತ್ತು ನೀನು ಮರಳಿ ಪಾಪ ಮಾಡದಂತೆ ನಿನ್ನನ್ನು ಶಕ್ತಿಗೊಳಿಸುತ್ತಾನೆ.

2 ಥೆಸಾ 2:13, 14 "...ನೀವು ಆತ್ಮನಿಂದ ಶುದ್ಧೀಕರಿಸಲ್ಪಟ್ಟವರಾಗಿ, ಸತ್ಯದ ಮೇಲೆ ನಂಬಿಕೆಯನ್ನಿಟ್ಟು, ರಕ್ಷಣೆಯನ್ನು ಪಡೆಯುವುದಕ್ಕಾಗಿ, **ದೇವರು ನಿಮ್ಮನ್ನು** ಆದಿಯಿಂದ **ಆರಿಸಿಕೊಂಡದ್ದರಿಂದ** ನಾವು ನಿಮ್ಮ ವಿಷಯದಲ್ಲಿ ಯಾವಾಗಲೂ ಕೃತಜ್ಞತಾ ಸ್ತುತಿ ಮಾಡುವುದಕ್ಕೆ ಬದ್ಧರಾಗಿದ್ದೇವೆ.

1 ಯೋಹಾ 3:3 "ಆತನಲ್ಲಿ ಈ ನಿರೀಕ್ಷೆಯನ್ನು ಇಟ್ಟಿರುವ **ಪ್ರತಿಯೊಬ್ಬನೂ ಆತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧ ಮಾಡಿಕೊಳ್ಳುತ್ತಾನೆ.**"

1 ಯೋಹಾ 3:5, 6 "ಪಾಪಗಳನ್ನು ನಿವಾರಣೆ ಮಾಡುವುದಕ್ಕಾಗಿ ಆತನು ಪ್ರತ್ಯಕ್ಷನಾದನೆಂಬುದು ನಿಮಗೆ ಗೊತ್ತಾಗಿದೆ ; ಆತನಲ್ಲಿ ಪಾಪವಿಲ್ಲ. **ಆತನಲ್ಲಿ ನೆಲೆಗೊಂಡಿರುವವನು ಪಾಪ ಮಾಡನು** ; ಪಾಪ ಮಾಡುವವನು ಆತನನ್ನು ಕಂಡವನೂ ಅಲ್ಲ. ತಿಳಿದವನು ಅಲ್ಲ."

ನಂಬಿಕೆಯಿಡುವುದು ಅವಶ್ಯ. ದೇವರು ಹೇಳುವುದೇನೆಂದರೆ, ದೇವರಿಂದ ಹುಟ್ಟಿದವನು ಪಾಪ ಮಾಡುವವನಾಗಿರಲಾರನು, (1 ಯೋಹ 3:9) ಪಾಪ ಮಾಡಬೇಕಾದರೆ ಒಂದೇ ಕಾರಣವೇನೆಂದರೆ ಒಳ ಮನುಷ್ಯನಿಗೆ ಸತ್ಯದ ಅರಿವಾಗಲೀ, ನಂಬಿಕೆಯಾಗಲೀ ಇಲ್ಲ.

ನಿನ್ನ ಉತ್ತರವು, **"ಹೌದು"**, ನಾನು ಪಾಪಮಾಡುವುದನ್ನು ನಿಲ್ಲಿಸಿದ್ದೇನೆ," ಆಗ ನೀನು ಬೇಕೆಂದೇ ಪಾಪ ಮಾಡಲಿಕ್ಕಿಲ್ಲ.

ಒಂದು ವೇಳೆ ನೀನು ತಿರುಗಿ ಹುಟ್ಟುವುದರ ಬಗ್ಗೆ ನಿಶ್ಚಯವಿಲ್ಲದವನಾಗಿದ್ದರೆ, ನೀನು ದೇವರೊಂದಿಗೆ ಮಾತನಾಡಿ ಹೊಸ ಆರಂಭವನನು ಮಾಡೆಂದು ಮತ್ತು ನಿನ್ನ ಜೀವನವನ್ನು ಆತನಿಗೆ ಒಪ್ಪಿಸಿಕೊಡೆಂದು ನಾವು ನಿನಗೆ ಸಲಹೆ ನೀಡುತ್ತೇವೆ.

**ನೆನಪಿನಲ್ಲಿಡು** :ದೇವರು ಸುಳ್ಳು ಹೇಳಲಾರನು ನೀನು ನಂಬುತ್ತಾ ಪ್ರಾರ್ಥನೆಯಲ್ಲಿ ಆತನನ್ನು ಏನು ಕೇಳಿದರೂ, ಹೊಂದುತ್ತೀ.

**ಪಾಪದಿಂದ ರಕ್ಷಣೆಗಾಗಿ ಪ್ರಾರ್ಥನೆ**

ಪರಲೋಕದಲ್ಲಿರುವ ನಮ್ಮ ತಂದೆಯೇ,
ಯೇಸು ಕ್ರಿಸ್ತನು ನಮ್ಮ ಪಾಪಗಳಿಗಾಗಿ ಶಿಲುಬೆಯ ಮೇಲೆ ಸತ್ತದೇವಕುಮಾರನೆಂದು ನಾನು ನಂಬುತ್ತೇನೆ. ನೀನು ಆತನನ್ನು ಮರಣದಿಂದ ಎಬ್ಬಿಸಿದಿ ಎಂದು ನಾನು ನಂಬುತ್ತೇನೆ. ಮತ್ತು ಆತನು ನಿನ್ನ ಬಲಪಾರ್ಶ್ವದಲ್ಲಿ ಕೂತಿರುವನೆಂದು ನಂಬುತ್ತೇನೆ.

ತಂದೆಯೇ, ನನ್ನ ಎಲ್ಲಾ ಪಾಪಗಳನ್ನು ಕ್ಷಮಿಸು ಮತ್ತು ನನ್ನನ್ನು ಪಾಪದಿಂದ ಬಿಡುಗಡೆ ಮಾಡುವುದಕ್ಕೋಸ್ಕರ ನಿನ್ನ ಪವಿತ್ರಾತ್ಮನನ್ನು ನನಗೆ ಕೊಡು.

ಕರ್ತನಾದ ಯೇಸುವೇ
ನನ್ನ ಜೀವನದಲ್ಲಿ ನನ್ನ ಇಚ್ಛೆಯಂತೆ ನಾನು ನಡೆದಿರುವುದರಿಂದ ವಿಶಾಧಿಸುತ್ತೇನೆ. ನಾನು ನಿನಗೆ ಮರ್ಯಾದೆ ಕೊಡಲಿಲ್ಲ. ಈಗ ನೀನು ನನ್ನ ಒಡೆಯನಾಗಿರು ಎಂದು ಬೇಡಿಕೊಳ್ಳುತ್ತೇನೆ. ಮತ್ತು ನಿನ್ನ ವಾಕ್ಯದ ಮೂಲಕ ನಡೆಸೆಂದು ಕೇಳಿಕೊಳ್ಳುತ್ತೇನೆ.

ದೇವರ ಪವಿತ್ರಾತ್ಮನೇ
ನೀನು ಜೀವಿಸುವ ದೇವರ ಮಹಿಮೆಯೂ ಮತ್ತು ಪ್ರಭಾವವೂ ಆಗಿದ್ದೀ, ಆಗಮಿಸು. ಮತ್ತು ನನ್ನ ಜೀವನವನ್ನು ನಿನ್ನ ಸಾನಿಧ್ಯದಿಂದ ತುಂಬಿಸು. ನಿನ್ನ ಜ್ಞಾನವನ್ನು ನನಗೆ ಬೋಧಿಸು. ಮತ್ತು ನಾನು

ನೀನು ತಿರುಗಿ ಹುಟ್ಟಿದವನಾಗಿದ್ದೂ ಶರೀರಾಭಿಲಾಷೆಗಳನ್ನು ಈಡೇರಿಸುವವನಾಗಿದ್ದರೆ, ನೀನು ನಿನ್ನನ್ನು ಪರೀಕ್ಷಿಸಿಕೊಳ್ಳಬೇಕು, ಯಾಕೆಂದರೆ ದೇವರ ವಾಕ್ಯ ಬೋಧಿಸುವುದೇನೆಂದರೆ ಕ್ರಿಸ್ತನಲ್ಲಿರುವವರೂ ಶರೀರದ ಕೃತ್ಯಗಳನ್ನು ನಿಲ್ಲಿಸಿದ್ದಾರೆ. (ಗಲಾ 5:24)

1 ಯೋಹ 3:10 "ಇವರು ದೇವರ ಮಕ್ಕಳೆಂಬುದೂ, ಅವರು ಸೈತಾನನ ಮಕ್ಕಳೆಂಬುದೂ, ಇದರಿಂದ ವ್ಯಕ್ತವಾಗತ್ತದೆ.**ನೀತಿಯನ್ನು ಅನುಸರಿಸದವನೂ,** ತನ್ನ ಸಹೋದರನನ್ನು ಪ್ರೀತಿಸದವನೂ, **ದೇವರಿಗೆ ಸಂಬಂಧಪಟ್ಟವನಲ್ಲ**."

ಇಬ್ರಿ 10:26, 27 "ಯಾಕೆಂದರೆ ನಾವು **ಸತ್ಯದ ಪರಿಜ್ಞಾನವನ್ನು ಹೊಂದಿದ ಮೇಲೆ ಬೇಕೆಂದು ಪಾಪ ಮಾಡಿದರೆ, ಪಾಪಗಳಿಗಾಗಿ** ಇನ್ನಾವ **ಯಜ್ಞವೂ ಉಳಿದಿರುವುದಿಲ್ಲ.** ಆದರೆ ಭಯದಿಂದ ಖಂಡಿತವಾಗಿ ಎದುರುನೋಡತಕ್ಕ ತೀರ್ಪೂ ವಿರೋಧಿಗಳನ್ನು ಧಹಿಸುವ ಕೋಪಾಗ್ನಿಯು ಇರುವವು."

ಯೋಹಾ:3:3 "ಯೇಸು ಪ್ರತ್ಯುತ್ತರವಾಗಿ ಅವನಿಗೆ ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, **ಒಬ್ಬನು ತಿರುಗಿ ಹುಟ್ಟದಿದ್ದರೆ, ಅವನು ದೇವರ ರಾಜ್ಯವನ್ನು ಕಾಣಲಾರನು ಎಂದನು.**"

ಎಫೆಸ 2:8 – 10 "ಯಾಕೆಂದರೆ ಕೃಪೆಯಿಂದಲೇ ನಂಬಿಕೆಯ ಮೂಲಕ ನೀವು ರಕ್ಷಣೆಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದುದಲ್ಲ. ಅದು ದೇವರ ದಾನವೇ. ಅದು ಕ್ರಿಯೆಗಳಿಂದುಂಟಾದುದಲ್ಲ. ಆದ್ದರಿಂದ ಹೊಗಳಿಕೊಳ್ಳುವುದಕ್ಕೆ ಯಾರಿಗೂ ಆಸ್ಪದವಿಲ್ಲ, ಯಾಕೆಂದರೆ ದೇವರು ಮುಂದಾಗಿ ನೇಮಿಸಿದ ಸತ್ಕ್ರಿಯೆಗಳಲ್ಲಿ ನಾವು ನಡೆಯುವಂತೆ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟವರಾದ ನಾವು ಆತನ ಕೆಲಸವಾಗಿದ್ದೇವೆ.

ರೋಮ 10:11, 13 "ಯಾಕೆಂದರೆ – ಆತನ ಮೇಲೆ ನಂಬಿಕೆ ಇಡುವ ಯಾವನಾದರೂ ನಾಚಿಕೆ ಪಡುವುದಿಲ್ಲ. ಎಂದು ಬರಹವು ಹೇಳುತ್ತದೆ. ಯಾಕೆಂದರೆ ಕರ್ತನ ನಾಮದಲ್ಲಿ ಬೇಡಿಕೊಳ್ಳುವ ಯಾರಿಗಾದರೂ ರಕ್ಷಣೆಯಾಗುವುದು."

ದೇವರಿಗೆ ವಿಧೇಯನಾಗಿರಲು ಸಹಾಯ ಮಾಡು.

2 ಕೊರಿ 3:17 "ಕರ್ತನು ಆ ಆತ್ಮನೇ ಆಗಿದ್ದಾನೆ :ಕರ್ತನ ಆತ್ಮನು ಯಾರಲ್ಲಿದ್ದಾನೋ ಅವರಿಗೆ ಬಿಡುಗಡೆಯುಂಟು."

ತಂದೆಯೇ,
ನಂಬಿಕೆಯಿಂದ ಈಗ ನಾನು ನಿನ್ನ ದಯೆಯನ್ನೂ, ಮತ್ತು ಕೃಪೆಯನ್ನೂ ಸ್ವೀಕರಿಸುತ್ತೇನೆ, ಯೇಸುವಿನ ನಾಮದಲ್ಲಿ, ಆಮೆನ್.

**ದೇವರು ಸುಳ್ಳು ಹೇಳಲಾರನು**

ನೀನು ಏನು ಕೇಳಿದ್ದೀಯೋ ಅದನ್ನು ಹೊಂದಿದ್ದೀ. ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ. ಮತ್ತು ಪವಿತ್ರಾತ್ಮನು ನಿನ್ನ ದೇಹದಲ್ಲಿ ವಾಸಿಸುತ್ತಾನೆ !

ಲೂಕ 11:13 "...ಸ್ವರ್ಗದಲ್ಲಿರುವ ನಿಮ್ಮ ತಂದೆಯು ಎಷ್ಟೋ ಹೆಚ್ಚಾಗಿ ತನ್ನನ್ನು ಬೇಡಿಕೊಳ್ಳುವವರಿಗೆ ಪವಿತ್ರಾತ್ಮನನ್ನು ದಯಪಾಲಿಸುವನಲ್ಲವೆ ?"

ನೀನು ಹೋಗಿ ಇಬ್ಬರಿಗಾಗಲೀ ಮೂವರಿಗಾಗಲೀ ಯೇಸುವನ್ನು ನಿನ್ನ ಕರ್ತನನ್ನಾಗಿಯೂ, ರಕ್ಷಕನನ್ನಾಗಿಯೂ, ಸ್ವೀಕರಿಸಿದ್ದೇನೆಂದು ಹೇಳು. ನೀನು ಪವಿತ್ರಾತ್ಮನಿಂದ ತಿರುಗಿ ಹುಟ್ಟಿದ್ದೇನೆಂದು ಅವರಿಗೆ ಹೇಳು.

ಧರ್ಮೋ 19:15 "...ಇಬ್ಬರು ಸಾಕ್ಷಿಗಳ ಅಥವಾ ಮೂವರು ಸಾಕ್ಷಿಗಳ ಮಾತಿನಿಂದ ಕಾರ್ಯವೆಲ್ಲಾ ಸ್ಥಿರವಾಗವುದು."

**ನೀನು ನಂಬಿದರೆ, ನೀನು ಪ್ರತಿಯೊಬ್ಬರಿಗೆ ಹೇಳುವಿ.**

2 ಕೊರಿ 5:7 "ಯಾಕೆಂದರೆ ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವೆ."

"ಯಾಕೆಂದರೆ ಹೃದಯದಿಂದ ನಂಬುವುದರ ಮೂಲಕ ನೀತಿಯು ದೊರೆಯುತ್ತದೆ,
ಮತ್ತು
ಬಾಯಿಂದ ಅರಿಕೆ ಮಾಡುವುದರ ಮೂಲಕ ರಕ್ಷಣೆಯಾಗುತ್ತದೆ."
(ರೋಮ 10:10)

ಯಶಾ 7:9 "ನೀವು ನಂಬದೇ ಹೋದರೆ ನೀವು ನಿಜವಾಗಿಯೂ ನೆಲೆಗೊಳ್ಳುವುದಿಲ್ಲ.

ಅರ್ಥ ಮಾಡಿಕೊಳ್ಳುವುದು ಬಹಳ ಸರಳ, ಯಾಕೆಂದರೆ ಕ್ರಿಯೆಗಳಿಲ್ಲದ ನಂಬಿಕೆ ಸತ್ತದ್ದಾಗಿದೆ.

ಕರ್ತನಾದ ಯೇಸು ನಿಮ್ಮನ್ನು ಆಶೀರ್ವದಿಸಲಿ ಮತ್ತು ಕಾಪಾಡಲಿ!!!

# ಭಾಗ 2

## ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆ

**ಈ ಭಾಗದಲ್ಲಿ ನಾವು ನಿಮಗೆ ತೋರಿಸಲಿರುವುದು :**

- ಒಬ್ಬ ಪಾಪಿಯನ್ನು ದೇವರ ಮಗನಾಗಿ ಬದಲಾಯಿಸಲು ಅವಶ್ಯವಾದ ಹೆಜ್ಜೆಗಳು ;
- ಮಾನವನ ರಕ್ಷಣೆ ಒಂದು ಖಚಿತವಾದ ಮಾದರಿಯ ಮೇಲೆ ಆಧಾರವಾಗಿರುತ್ತದೆ ;
- ಒಳ ಮನುಷ್ಯನು ಪಾಪ ಮಾಡುವುದರಿಂದ ವಿಶ್ರಾಂತಿ ಅನುಭವಿಸಬೇಕಾದರೆ ಸುವಾರ್ತೆಯಲ್ಲಿ ನಂಬಿಕೆ ಮತ್ತು ಸುವಾರ್ತೆಗೆ ವಿಧೇಯತೆ ಅವಶ್ಯ.

**ಎಫೆಸದವರಿಗೆ 3:14 – 21 ರಿಂದ ತೆಗೆದುಕೊಂಡಂತಹ ಈ ಪ್ರಾರ್ಥನೆಯನ್ನು ಪದೇ ಪದೇ ಮಾಡಿರಿ ;**

"ಈ ಕಾರಣದಿಂದ ನಾನು ......................................................
(ನಿನ್ನ ಹೆಸರನ್ನು ಮಧ್ಯದಲ್ಲಿ ಸೇರಿಸು)
ಕರ್ತನಾದ ಯೇಸು ಕ್ರಿಸ್ತನ ತಂದೆಯ ಮುಂದೆ ನನ್ನ ಮೊಣಕಾಲೂರಿ, ಯಾವ ತಂದೆಯ
ಹೆಸರನ್ನು ಸ್ವರ್ಗ ಭೂಲೋಕಗಳಲ್ಲಿರುವ ಕುಟುಂಬವೆಲ್ಲಾ ತೆಗೆದುಕೊಳ್ಳುತ್ತದೋ,
ಆ ತಂದೆಯು ನನಗೆ ತನ್ನ ಮಹಿಮೆಯ ಐಶ್ವರ್ಯಕ್ಕನುಸಾರವಾಗಿ ತನ್ನ ಆತ್ಮನ ಮೂಲಕ ನನ್ನ
ಆಂತರ್ಯದಲ್ಲಿ ;ಕ್ರಿಸ್ತನು ನನ್ನ ಹೃದಯದಲ್ಲಿ ನಂಬಿಕೆಯ ಮೂಲಕ ವಾಸಿಸುವಂತೆಯೂ,
ನಾನು ಪ್ರೀತಿಯಲ್ಲಿ ಬೇರೂರಿ, ನೆಲೆಗೊಂಡು ನಿಂತು, ಪರಿಶುದ್ಧರೆಲ್ಲರೊಂದಿಗೆ ಅದರ ಅಗಲ,
ಉದ್ದ, ಆಳ ಮತ್ತು ಎತ್ತರವನ್ನು ಗ್ರಹಿಸುವಂತೆಯೂ
(ಆತನು ಒಳಗೆ ವಾಸಿಸುವ ಅಳತೆ) ;
ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳಿದುಕೊಂಡು ದೇವರ ಸಂಪೂರ್ಣತೆಯ
ಮಟ್ಟಿಗೂ ಪರಿಪೂರ್ಣನಾಗುವ ಹಾಗೆಯೂ ನನಗೆ ದಯಪಾಲಿಸು ಎಂದು ನಿನ್ನನ್ನು
ಬೇಡಿಕೊಳ್ಳುತ್ತೇನೆ. ನನ್ನಲ್ಲಿ ಕಾರ್ಯ ಸಾಧಿಸುವ ನಿನ್ನ ಶಕ್ತಿಯ ಪ್ರಕಾರ ನಾನು
ಹೇಳುವುದಕ್ಕಿಂತಲೂ ಯೋಚಿಸುವುದಕ್ಕಿಂತಲೂ ಅತ್ಯಧಿಕವಾದುದನ್ನು ಮಾಡಲು
ಶಕ್ತನಾದ ನಿನಗೆ ಸಭೆಯಲ್ಲಿ ಕ್ರಿಸ್ತ ಯೇಸುವಿನ ಮೂಲಕ ತಲಾಂತರಕ್ಕೂ
ಯುಗಯುಗಾಂತರಕ್ಕೂ ಮಹಿಮೆಯುಂಟಾಗಲಿ."
**ಆಮೆನ್.**

## ಅಧ್ಯಾಯ 4


## ರಕ್ಷಣೆಯ ಮಾರ್ಗ

ಮನುಷ್ಯನ ರಕ್ಷಣೆಯು ದೇವರು ಸ್ಥಾಪಿಸಿದ ಮಾದರಿಯ ಮೇಲೆ ಆಧಾರವಾಗಿರುತ್ತದೆ. ಅದು ಯಾವಾಗ ಎಂದರೆ ಇಸ್ರಾಯೇಲ್ಯರನ್ನು ಐಗುಪ್ತದಿಂದ ಬಿಡುಗಡೆ ಮಾಡಿ ಸಿನ್ ಅರಣ್ಯದ ಮೂಲಕ ಅವರನ್ನು ಕಾನಾನ್ ಒಳಕ್ಕೆ ತಂದಾಗ. ಇದೇ ಹೆಜ್ಜೆಗಳು ಒಬ್ಬ ಪಾಪಿಯನ್ನು ಬದಲಾಯಿಸಲು ಅವಶ್ಯ, ಯಾಕೆಂದರೆ ಅವನು ಸೈತಾನನ ಮಗನಾಗಿದ್ದು, ದೇವರ ಮಗನಾಗಬೇಕಾಗುತ್ತದೆ. ಈ ಮಾದರಿಯಿಂದ ದೇವರು ಕ್ರಮ ತಪ್ಪಲಾರ ಮತ್ತು ತಪ್ಪುವುದಿಲ್ಲ.

### ಪ್ರಪಂಚ

ಪಾಪದ ದೇಹದಿಂದ ಹುಟ್ಟಿದ ಪ್ರತಿ ಒಳಮನುಷ್ಯನೂ 'ಶರೀರ ಭಾವ'ದಲ್ಲಿದ್ದಾನೆ. ಮತ್ತು ಸೈತಾನನ ಮತ್ತು ಪಾಪದ ಬಂಧನದಲ್ಲಿದ್ದಾನೆ. ಮಗುತನದಿಂದ ಒಳ ಮನುಷ್ಯನು ಪಾಪಿಯಾಗಿ ಬೆಳೆಯುತ್ತಾನೆ. ಯಾಕೆಂದರೆ ಪಾಪದ ನಿಯಮವು ಅವನ ಮೇಲೆ ಪ್ರಭುತ್ವ ನಡೆಸುತ್ತದೆ. ಹುಟ್ಟಿದಾಗಿನಿಂದಲೂ ಸೈತಾನನ ಮನೆಯಲ್ಲಿದ್ದುಕೊಂಡು ಪಾಪಿಯಾದ ಮನುಷ್ಯ ಪಾಪದ ಸ್ವಭಾವಕ್ಕೆ ಒಳಗಾಗಿದ್ದಾನೆ. ಈ ರೀತಿಯಾಗಿ ಒಳಮನಷ್ಯನೂ ಕೂಡಾ ಪಾಪ ಸ್ವಭಾವ ಉಳ್ಳವನಾಗುತ್ತಾನೆ. 'ಶರೀರ ಭಾವ'ದೊಂದಿಗೆ ಭಾಗಿಯಾಗುತ್ತಾನೆ.

ನೋಡಿ ಕಲಿಯಿರಿ!




'ಶರೀರ ಭಾವ'ದಲ್ಲಿರುವ ಒಳ ಮನುಷ್ಯನು ಶರೀರದ (ಮಾಂಸದ) ಕ್ರಿಯೆಗಳನ್ನು ಮಾಡುವ ಒಬ್ಬ ಪಾಪಿಯಾಗಿದ್ದಾನೆ. ಅವನು ಪಾಪದ ದೇಹದಲ್ಲಿ ಇರುವ ವರೆಗೂ, ಬಂಧಿಯೂ, ಸೈತಾನನ ಗುಲಾಮನೂ ಆಗಿರುತ್ತಾನೆ. ಒಳ ಮನುಷ್ಯನಿಗೆ ಒಳ್ಳೆ ಮತ್ತು ಕೆಟ್ಟದರ ತಿಳುವಳಿಕೆ

**ವಚನಗಳು ಮತ್ತು ವ್ಯಾಖ್ಯಾನಗಳು**

1 ಕೊರಿ 10:11 "ಅವರಿಗೆ (ಇಸ್ರಾಯೇಲರಿಗೆ) **ಸಂಭವಿಸಿದ ಈ ಎಲ್ಲಾ ಸಂಗತಿಗಳು ನಿದರ್ಶನಗಳಾಗಿವೆ ;** ಮತ್ತು ಲೋಕದ ಅಂತ್ಯಕ್ಕೆ ಬಂದಿರುವವರಾದ ನಮಗೆ ಅವು **ಬುದ್ಧಿವಾದಗಳಾಗಿ ಬರೆದಿವೆ.**"

1 ತಿಮೋ 1:16 "ಹೇಗಿದ್ದರೂ **ಇನ್ನು ಮುಂದೆ ನಿತ್ಯ ಜೀವಕ್ಕಾಗಿ ತನ್ನ ಮೇಲೆ ನಂಬಿಕೆ ಇಡುವವರಿಗೆ ದೃಷ್ಟಾಂತವಿರಬೇಕೆಂದು** ಯೇಸು ಕ್ರಿಸ್ತನು ಮೊದಲು ನನ್ನನ್ನು ಕರುಣಿಸಿ ನನ್ನಲ್ಲಿ ತನ್ನ ಪೂರ್ಣ ದೀರ್ಘ ಶಾಂತಿಯನ್ನು ತೋರ್ಪಡಿಸಿದನು."

ರೋಮ 1:18 "ಯಾಕೆಂದರೆ **ಸತ್ಯವನ್ನು ಅನೀತಿಯಲ್ಲಿ ತಡೆಹಿಡಿದ** ಮನುಷ್ಯರ ಎಲ್ಲಾ **ಭಕ್ತಿಹೀನತೆಗೆ ಮತ್ತು ಅನೀತಿಗೆ ವಿರೋಧವಾಗಿ ದೇವರ ಕೋಪವು** ಸ್ವರ್ಗದಿಂದ ತೋರಿಬರುತ್ತದೆ."

**ಗಮನಿಸು :** ಮೂರನೆಯ ಅಧ್ಯಾಯದಲ್ಲಿ ಸತ್ಯವು ಪ್ರಕಟವಾಯಿತು. ಆದರೆ ಪ್ರಪಂಚವು ದೇವರನ್ನು ನಂಬುವುದಿಲ್ಲ ಮತ್ತು ಸತ್ಯವನ್ನು ಸ್ವೀಕರಿಸುವುದಿಲ್ಲ.

ಒಳ್ಳೆದು ಮತ್ತು ಕೆಟ್ಟದರ ತಿಳುವಳಿಕೆಯಿಂದಾಗಿ ಸೈತಾನನ ಪ್ರಭುತ್ವದಲ್ಲಿ ನೆಲೆಸಿದೆ. ಅವರು ಒಳ್ಳೇದನ್ನೇ ಮಾಡಲಿ, ಕೆಟ್ಟದ್ದನ್ನೇ ಮಾಡಲಿ, ಅವರು ಸೈತಾನನ ಸೇವಕರೇ. ಅವರ ಒಳ್ಳೇತನ ದೇವರಿಗೆ ಸಮಾಧಾನವಲ್ಲ ಯಾಕೆಂದರೆ ಅವರು ಅವನ ರಾಜ್ಯದಲ್ಲಿಲ್ಲ, ಅವರು ಕೆಟ್ಟದ್ದನ್ನೇ ಮಾಡುವವರಾಗಿದ್ದಿದ್ದರೆ ಒಳ್ಳೆಯದಿತ್ತು, ಆದರೆ ಒಳ್ಳೇದನ್ನು ಮತ್ತು ಕೆಟ್ಟದನ್ನೂ ಮಾಡಲು ಸಮರ್ಥರಾಗಿರುವುದರಿಂದ ಅವರು ಕೆಟ್ಟವರೇ.

ಮಾನವ ಪ್ರಭುತ್ವ ಮತ್ತು ಮಾನವ ಹಕ್ಕುಗಳು ಒಳ್ಳೆದು ಮತ್ತು ಕೆಟ್ಟದರ ತಿಳುವಳಿಕೆಯ ಮೇಲೆ ಆಧಾರವಾಗಿವೆ. ಸೈತಾನನ ರಾಜ್ಯ ಈ ಮಾರ್ಗದಲ್ಲಿ ಕ್ರಿಯೆ ನಡೆಸುತ್ತದೆ. ಈ ಜ್ಞಾನವು ಪ್ರಾಪಂಚಿಕ, ಇಂದ್ರೀಯ ಸುಖದ ಪೈಶಾಚಿಕ; ಮತ್ತು ಹೊಟ್ಟೆಕಿಚ್ಚು, ಜಗಳ, ತಾರು ಮಾರು, ಸ್ವಾರ್ಥತೆ, ಮತ್ತು ಎಲ್ಲಾ ಕೆಟ್ಟ ಕೆಲಸಗಳಿಗೆ ನಡೆಸುತ್ತದೆ. ಸೈತಾನನ ರಾಜ್ಯದಲ್ಲಿ ಜನಗಳ ಒಳಗೆ ಒಪ್ಪಂದವಿಲ್ಲ. ಮತ್ತು ಅದರ ಪರಿಣಾಮ ನಾಶನವನ್ನುಂಟು ಮಾಡುತ್ತದೆ.

ಒಳ್ಳೇ ಕಾರ್ಯಗಳು ಪಾಪಗಳನ್ನು ತೆಗೆದುಹಾಕಲಾರವು. ಬಡವರಿಗೆ ದಾನ ಮಾಡುವುದರಿಂದ ಪಾಪ ಪರಿಹಾರವಾಗುತ್ತದೆಯೋ, ಅಥವಾ ಖಾಯಿಲೆಯವರನ್ನು ನೋಡಿಕೊಳ್ಳುವುದರಿಂದ ಪಾಪಿಗಳನ್ನು ಪಾಪ ಸ್ವಾಭವದಿಂದ ಬಿಡುಗಡೆ ಮಾಡುತ್ತದೆಯೋ ? ಅವರು ಸುಳ್ಳು ಹೇಳುವುದನ್ನು ಸಾಕು ಮಾಡಿದರೆ ಅದು ಬೇರೆಪಾಪಗಳನ್ನು ರದ್ದು ಮಾಡಬಲ್ಲದೋ ? ಅವರು ಮಾಡುವ ಎಲ್ಲಾ ಒಳ್ಳೆಯದು ಸೈತಾನನಿಗಾಗಿಯೇ ಮತ್ತು ಅವರು ಮಾಡುವ ಎಲ್ಲಾ ಕೆಟ್ಟದ್ದು, ಸೈತಾನನಿಗಾಗಿಯೇ. ಅವರು ಸೈತಾನನಿಗೆ ಗುಲಾಮರಾಗಿರುವುದರಿಂದ ಅವನ ರಾಜ್ಯವನ್ನು ಕಟ್ಟುತ್ತಾರೆ, ಮತ್ತು ಪಾಪಿಗಳು ಏನು ಮಾಡಿದರೂ, ದೇಹದಲ್ಲಿನ ಪಾಪವನ್ನು ಅವರು ಬಿಡುಗಡೆ ಮಾಡಲಾರರು.

ರೋಮ 8:7, 8 "ಯಾಕೆಂದರೆ **ಶರೀರ ಸಂಬಂಧವಾದ ಮನಸ್ಸು** (ಒಳ್ಳೇ ಕೆಟ್ಟದರ ಅರಿವು) ದೇವರಿಗೆ ಶತೃತ್ವ : ಕಾರಣ ವೇನೆಂದರೆ, ಅಂತ ಮನಸ್ಸು ದೇವರ ನಿಯಮಕ್ಕೆ **ಒಳಪಡುವುದಿಲ್ಲ ; ಒಳ ಪಡುವುದಕ್ಕಾಗುವುದೂ ಇಲ್ಲ.** ಹೀಗಿರಲಾಗಿ **ಶರೀರಾಧೀನರು ದೇವರನ್ನು ಮೆಚ್ಚಿಸಲಾರರು.**"

ಇರುವುದರಿಂದ, ಅವನು ಒಳ್ಳೇದನ್ನೇ ಆಗಲಿ ಕೆಟ್ಟದನ್ನೇ ಆಗಲಿ ಮಾಡಲು ಶಕ್ತನಾಗಿದ್ದಾನೆ. ಹೇಗಿದ್ದರೂ, ಅವನು ಮಾಡುವ ಒಳ್ಳೇತನ ಕೆಟ್ಟದ್ದನ್ನೂ ಕೂಡ ಮಾಡುವುದರಿಂದ ತಪ್ಪಿಸುವುದಿಲ್ಲ. ಇದು ಅವನನ್ನು ಮೋಸಗಾರನನ್ನಾಗಿಯೂ, ಅಪನಂಬಿಕಸ್ತನನ್ನಾಗಿಯೂ ಮಾಡುತ್ತದೆ. ಅವನು ಸೈತಾನಂತೆಯೇ ಪಾಪಿಯಾಗಿದ್ದಾನೆ, ಯಾಕೆಂದರೆ ಅವನು ಸೈತಾನನ ರಾಜ್ಯದಲ್ಲಿ ಬೇರೇನೂ ಆಗಲು ಸಾಧ್ಯವಿಲ್ಲ.

**ಮತದ ನಿಷ್ಪ್ರಯೋಜಕತೆ**

ಒಳ ಮನುಷ್ಯನಿಗೆ ಒಳ್ಳೇ ಮತ್ತು – ಕೆಟ್ಟದರ ಅರಿವಿರುವುದರಿಂದ ಅವನ ಆಶೆ ಒಳ್ಳೆಯದರ ಕಡೆಗಿರತ್ತದೆ, ಆದರೆ ಅವನು ಕೆಟ್ಟದನ್ನು ತಪ್ಪಿಸಿಕೊಳ್ಳಲು ಅಸಮರ್ಥನಾದುದರಿಂದ, ಅವನು ರಕ್ಷಣೆಯನ್ನು ಪಡೆಯಲು ಮತ ಮತ್ತು ಒಳ್ಳೆಯ ಕಾರ್ಯಗಳ ಕಡೆಗೆ ಗಮನ ತಿರುಗಿಸುತ್ತಾನೆ.

ಪಾಪಿಯೂ ತಾನು ನ್ಯಾಯ ಪ್ರಮಾಣವನ್ನನುಸರಿಸುವುದರಿಂದ, ಒಳ್ಳೇ ಕಾರ್ಯಗಳಿಂದ ನಿರ್ದಿಷ್ಠವಾದ ಮನಸ್ಸುಳ್ಳವನಾಗಿದ್ದರೆ ಮತ್ತು ಉಪವಾಸಗಳಿಂದ ತನ್ನನ್ನು ತಾನು ಉತ್ತಮಗೊಳಿಸಿಕೊಳ್ಳ ಬಹುದೆಂದು ನಂಬುತ್ತಾನೆ. ತನ್ನನ್ನು ತಾನು ಉತ್ತಮಗೊಳಿಸಿ ಕೊಂಡರೂ ಒಳ ಮನುಷ್ಯನು ಪಾಪಿಯಾಗಿಯೇ, ಸೈತಾನನ ರಾಜ್ಯದಲ್ಲಿ ಉಳಿಯುತ್ತಾನೆ. ಒಳ ಮನುಷ್ಯನ ಎಲ್ಲಾ ಉದ್ಧಾರ ಕ್ರಮಗಳು ಸತ್ತ ಕ್ರಿಯೆಗಳಾಗಿವೆ, ಯಾಕೆಂದರೆ, ಅವುಗಳು ಅವನ ದೇಹದಲ್ಲಿರುವ ಪಾಪದಿಂದ ಅವನನ್ನು ಬಿಡುಗಡೆ ಮಾಡಲಾರವು . ಇದು ಯೂದಾಯ ಮತ್ತು ಕ್ರೈಸ್ತಮತಗಳಿಗೂ ಅನ್ವಯಿಸುತ್ತದೆ., ಯಾಕೆಂದರೆ ಅವುಗಳಿಗೆ ದೇವರ ನ್ಯಾಯ ತೀರ್ಪಿನಬಗ್ಗೆ ಗೊತ್ತಿದ್ದರೂ, ಅವರು 'ಶರೀರ ಭಾವದ' ಕೆಲಸಗಳನ್ನು ಮುಂದುವರೆಸುತ್ತಾರೆ. ಇದು ಅವರು ಪಾಪಕ್ಕೆ ಗುಲಾಮರಾಗಿದ್ದಾರೆ ಎಂದು ಸಾಬೀತು ಪಡಿಸುತ್ತದೆ.

**ಸೈತಾನನಿಂದ ಮತ್ತು ಪಾಪದಿಂದ ಸ್ವತಂತ್ರತೆ, ಅದೊಂದು ವಾಸ್ತವೀಕತೆ, ಒಂದು ಮತವಲ್ಲ**

ಹಿಂದಿನ ಅಧ್ಯಾಯದಲ್ಲಿ ನಾವು ನೋಡಿರುವುದೇನೆಂದರೆ, ದೇವರು ಆವಾಗಲೇ ಮನುಷ್ಯನನ್ನು ಬಿಡುಗಡೆ ಮಾಡಿರುವ ವಿಷಯ. ಅದರಲ್ಲಿ ದೇವರು ಯೇಸುವಿನಲ್ಲಿ ಪಾಪದ ದೇಹವನ್ನು ಲಯ ಮಾಡಿದನು ಮತ್ತು ಪಾಪವಿಲ್ಲದ ಒಂದು ನೂತನ ದೇಹವನ್ನು ಸೃಷ್ಟಿಸಿದನು.  ಈಗ ಬೇಕಾಗಿರುವುದು ಒಂದು ಮಾತ್ರ ; ಒಬ್ಬ ವ್ಯಕ್ತಿಯು ಈ ಸತ್ಯಾಂಶವನ್ನು ಒಪ್ಪಿಕೊಳ್ಳುವುದೇ, ಯಾಕೆಂದರೆ

ಯೋಹ 8:44 "**ನೀವು ನಿಮ್ಮ ತಂದೆಯಾದ ಸೈತಾನನಿಗೆ ಸಂಬಂಧಪಟ್ಟವರಾಗಿದ್ದೀರಿ, ಮತ್ತು ನಿಮ್ಮ ತಂದೆಯ ದುರಾಸೆಗಳನ್ನೇ ನೀವು ಮಾಡಲು ಇಚ್ಛಿಸುತ್ತೀರಿ...**"

1 ಯೋಹ 3:8 "**ಪಾಪಮಾಡುವವನು ಸೈತಾನನಿಗೆ ಸಂಬಂಧಪಟ್ಟವನಾಗಿದ್ದಾನೆ ;** ಯಾಕೆಂದರೆ ಆದಿಯಿಂದಲೂ **ಸೈತಾನನು ಪಾಪ ಮಾಡುವವನಾಗಿದ್ದಾನೆ.** ಆದುದರಿಂದ ದೇವ ಕುಮಾರನು ಸೈತಾನನ ಕೆಲಸಗಳನ್ನು ಲಯ ಮಾಡುವುದಕ್ಕೋಸ್ಕರವೇ ಪ್ರತ್ಯಕ್ಷನಾದನು."

ರೋಮ 3:19 "ಪ್ರತಿಯೊಂದು ಬಾಯಿ ಮುಚ್ಚಿಹೋಗುವಂತೆಯೂ **ಲೋಕವೆಲ್ಲಾ** ದೇವರಮುಂದೆ **ದೋಷಿಯಾಗಿರುವಂತೆಯೂ** ನ್ಯಾಯ ಪ್ರಮಾಣವು ಹೇಳುವವುಗಳನ್ನು ನ್ಯಾಯ ಪ್ರಮಾಣಕ್ಕೆ ಒಳಗಾದವರಿಗೆ ಹೇಳುತ್ತದೆ ಎಂದು ನಾವು ಬಲ್ಲೆವು."

ರೋಮ 1:32 "ಇಂಥವುಗಳನ್ನು ಮಾಡುವವರು **ಮರಣಕ್ಕೆ ಯೋಗ್ಯರೆಂಬ ದೇವರ ನ್ಯಾಯ ತೀರ್ಪನ್ನು ಅವರು ತಿಳಿದವರಾಗಿದ್ದರೂ....**"

ತಿರುಗಿ ಹುಟ್ಟದೆ ಇರುವಂತಹ ಕ್ರೈಸ್ತರು ತಮ್ಮ ಮತದಲ್ಲಿ ನಿರತರಾಗಿರುತ್ತಾರೆ, ಮತ್ತು ಕ್ರಿಸ್ತನ ವಾಸ್ತವೀಕತೆಯಲ್ಲಿ ಅಲ್ಲ. ಈ ವಿಶ್ವಾಸಿಗಳು ಕ್ರೈಸ್ತರಾಗಿ ಬೆಳೆಯುತ್ತಾರೆ. ಆದರೆ ದೇವರ ಆತ್ಮ ಅವರಲ್ಲಿಲ್ಲ. ಆದುದರಿಂದ ಅವರು ತಿರುಗಿ ಹುಟ್ಟಲಿಲ್ಲ. ಅವರು ಮತಾಸಕ್ತಿ ಉಳ್ಳವರಾಗಿರಬಹುದು, ಮತ್ತು ಒಳ್ಳೇ ಕ್ರಿಯೆಗಳನ್ನು ಮಾಡುತ್ತಾ ಇರಬಹುದು, ಆದರೂ ಅವರು ಶರೀರಭಾವದಲ್ಲಿದ್ದಾರೆ. ಹೊರಗಣ ಪ್ರಪಂಚವೂ ಅವರಂತೆಯೇ.

ಮನುಷ್ಯನನ್ನು ಪಾಪದಿಂದ ಬಿಡುಗಡೆ ಮಾಡಲು ದೇವರು ತನ್ನ ಮಗನನ್ನು ಕೊಟ್ಟದ್ದರಿಂದ ಯಾರೂ ಪಾಪದಿಂದ ಬಿಡುಗಡೆ ಹೊಂದಲಿಕ್ಕಲ್ಲದೆ, ಬೇರಾವ ಕಾರಣಕ್ಕೂ ಯೇಸುವಿನ ಬಳಿಗೆ ಬರುವ ಅಗತ್ಯವಿಲ್ಲ. ಯಾರೇ ಆಗಲಿ ಯೇಸುವನ್ನು ಯಶಸ್ಸಿಗೇ ಆಗಲಿ, ಐಶ್ವರ್ಯಕ್ಕೋಸ್ಕರವಾಗಿಯೇ ಆಗಲಿ ಒಪ್ಪಿಸಿಕೊಳ್ಳುವುದಾದರೆ, ದೇವರನ್ನು ತಪ್ಪು ಕಾರಣದಿಂದ ಹುಡುಕುತಿದ್ದಾರೆ.

ಮತ್ತ 1:21 "ಆಕೆಯು ಒಬ್ಬ ಮಗನನ್ನು ಹೆರುವಳು ; ನೀನು ಆತನಿಗೆ **ಯೇಸೂ ಎಂದು ಕರೆಯಬೇಕು ; ಯಾಕೆಂದರೆ ತನ್ನ ಜನರನ್ನು ಅವರ ಪಾಪಗಳಿಂದ ರಕ್ಷಿಸುವನು** ಅಂದನು."

1 ಯೋಹ 2:2 "**ಆತನು ನಮ್ಮ ಪಾಪಗಳಿಗಾಗಿ ಪ್ರಾಯಶ್ಚಿತ್ತನಾಗಿದ್ದಾನೆ** ;ನಮ್ಮ ಪಾಪಗಳಿಗೆ ಮಾತ್ರವಲ್ಲದೇ, ಸಮಸ್ತ **ಲೋಕದ ಪಾಪಗಳಿಗಾಗಿಯೂ** ಪ್ರಾಯಶ್ಚಿತ್ತವಾಗಿದ್ದಾನೆ."

1 ತಿಮೋ 1:15 "**ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವುದಕ್ಕೋಸ್ಕರಾ ಈ ಲೋಕಕ್ಕೆ ಬಂದನು** ಎಂದು ಹೇಳುವುದು ನಂಬತಕ್ಕದ್ದಾಗಿಯೂ ಸರ್ವಾಂಗೀಕಾರಕ್ಕೆ ಯಾಗ್ಯವಾದದ್ದಾಗಿಯೂ ಇದೆ."
ಅಪೋ 4:12 "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಇಲ್ಲ ;**ಯಾಕೆಂದರೆ ಆಕಾಶದ ಕೆಳಗೆ ಮನುಷ್ಯರಲ್ಲಿ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ ಎಂದು ಹೇಳಿದನು.**"

ಅಪೋ 20:21 "ಯಹೂದ್ಯರೂ, ಗ್ರೀಕರೂ (ಪ್ರಪಂಚ) **ದೇವರ ಕಡೆಗೆ ಮಾನಸಾಂತರ ಪಟ್ಟು ನಮ್ಮ ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡ ಬೇಕೆಂದು,** ಸಾಕ್ಷೀಕರಿಸುವವನಾಗಿದ್ದನು."


ಯೇಸು ಕ್ರಿಸ್ತನ ಹೊರೆತು ಪಾಪದಿಂದ ರಕ್ಷಣೆಯು ಉಂಟಾಗುವುದಿಲ್ಲ. ಆದುದರಿಂದಲೇ ಯೇಸುವಿನ ಸುವಾರ್ತೆಯನ್ನು ಎಲ್ಲಾ ಜನಗಳಿಗೂ ಬೋಧಿಸಬೇಕು.

ಯಾವನಾದರೂ ದೇವರ ಸಂದೇಶವನ್ನು ನಂಬುವುದಾದರೆ, ತನ್ನ ಪಾಪಕ್ಕಾಗಿ ಪಶ್ಚಾತ್ತಾಪ ಪಟ್ಟು, ಯೇಸು ಕ್ರಿಸ್ತನನ್ನು ತನ್ನ ರಕ್ಷಕನನ್ನಾಗಿ ಸ್ವೀಕರಿಸಿದರೆ ಹೊಸದಾಗಿ ಹುಟ್ಟುವುದರ ವಾಸ್ತವೀಕತೆಯನ್ನು ತನ್ನ ಹೊರ ಮನುಷ್ಯನಲ್ಲಿ ಮತ್ತು ಪರಿಶುದ್ಧತೆಯನ್ನು ತನ್ನ ಒಳ ಮನುಷ್ಯನಲ್ಲಿ ಅನುಭವಿಸುತ್ತಾನೆ.

**ಹೊಸದಾಗಿ ಹುಟ್ಟುವುದು**

ಒಳ ಮನುಷ್ಯನು ಹೊಸದಾಗಿ ಹುಟ್ಟುವುದನ್ನು ಯಾವಾಗ ಅನುಭವಿಸುತ್ತಾನೆಂದರೆ, ಪವಿತ್ರಾತ್ಮನು ತನ್ನ ದೇಹವನ್ನು ಪ್ರವೇಶಿಸಿದಾಗಿ ಮತ್ತು ತನ್ನ ಹೊರಮನುಷ್ಯನಲ್ಲಿ ಪಾಪವನ್ನು ಬದಲಾಯಿಸಿದಾಗ.

ನೋಡಿ ಕಲಿಯಿರಿ!




ಪಾಪಿಯು ಯೇಸುವನ್ನು ತನ್ನ ಸ್ವಂತ ಒಡೆಯನ್ನನ್ನಾಗಿಯೂ ರಕ್ಷಕನನ್ನಾಗಿಯೂ ಸ್ವೀಕರಿಸಿದಾಗ, ದೇವರು ಒಳ ಮನುಷ್ಯನ ಪೂರ್ವದ ಪಾಪಗಳನ್ನು ಕ್ಷಮಿಸುತ್ತಾನೆ, ಮತ್ತು ಅವನಿಗೆ ಪವಿತ್ರಾತ್ಮನನ್ನು ಕೊಡುತ್ತಾನೆ. ಆಗ ಪವಿತ್ರಾತ್ಮನು ಪಾಪದ ಆತ್ಮನನ್ನು ಬದಲಾಯಿಸುತ್ತಾನೆ. ಆದುದರಿಂದ ಪಾಪದ ದೇಹ ಕರ್ತನ ದೇಹವಾಗಿ ಬಿಡುತ್ತದೆ. ಪವಿತ್ರಾತ್ಮನು ನೂತನ ದೇಹದ ದೇವರ ವಾಗ್ದಾನ. ಅದು ಪರಲೋಕದಲ್ಲಿಡಲ್ಪಟ್ಟಿದೆ. ಆದುದರಿಂದ ಒಳ ಮನುಷ್ಯನು ಇನ್ನು ಮೇಲೆ ಪಾಪ ಮತ್ತು ಮರಣಗಳ ನಿಯಮದ ಕೆಳಗೆ ಇಲ್ಲ. ಆದರೆ ಜೀವದ ಆತ್ಮದ ಕೆಳಗೆ. ಈ ಮಾನವನ ವಿಮೋಚನೆ ಸರ್ವ ಸ್ವತಂತ್ರನಾದ ದೇವರ ಕ್ರಿಯೆ, ಮತ್ತು ಮಾನವನ ಸ್ವಪ್ರಯತ್ನದಿಂದಾಗಲೀ ಅಥವಾ ಮತದಿಂದಾಗಲಿ ಸಾಧಿಸಲು ಆಗುವುದಿಲ್ಲ.

ಯೊಹಾ 3:3 "ಯೇಸು ಪ್ರತ್ಯತ್ತರವಾಗಿ ಅವನಿಗೆ – ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, **ಒಬ್ಬನು ತಿರುಗಿ ಹುಟ್ಟದಿದ್ದರೆ, ಅವನು ದೇವರ ರಾಜ್ಯವನ್ನು ನೋಡಲಾರನು ಅಂದನು.**"

ಯೋಹ 3:6 "**....ದೇಹದಿಂದ ಹುಟ್ಟಿದ್ದು ದೇಹವೇ ; ಮತ್ತು ಆತ್ಮನಿಂದ ಹುಟ್ಟಿದ್ದು ಆತ್ಮವೇ....**"

ಅಪೋ 2:38 "....ನೀವು **ಮಾನಸಾಂತರ ಪಟ್ಟು,** ಪಾಪಗಳ ಪರಿಹಾರಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನೂ ಯೇಸುಕ್ರಿಸ್ತನ ಹೆಸರಿನಲ್ಲಿ **ಬಾಪ್ತಿಸ್ಮ ಮಾಡಿಸಿಕೊಳ್ಳಿರಿ.**"

ಲೂಕ 17:21 "....ಇಗೋ, **ದೇವರ ರಾಜ್ಯವು ನಿಮ್ಮೊಳಗೆ ಇದೆ....**"
ದೇವರ ಆತ್ಮನನ್ನು ನೀವು ಸ್ವೀಕರಿಸಿದಾಗ ಈ ಮಾತುಗಳು ನೆರವೇರಿದವು

ಕೊಲೊ 1:13, 14 "ಆತನು ನಮ್ಮನ್ನು **ಅಂಧಕಾರದ ಶಕ್ತಿಯಿಂದ** ಬಿಡಿಸಿ **ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು.** ಆ ಕುಮಾರನಲ್ಲಿ ಆತನ ರಕ್ತದ ಮೂಲಕ ನಮಗೆ ವಿಮೋಚನೆಯು ಅಂದರೆ, ಪಾಪ ಪರಿಹಾರವೂ ಉಂಟಾಯಿತು."

ಕೊಲೊ 2:11 "ನೀವು ಆತನಲ್ಲಿ ಸುನ್ನತಿಯನ್ನು ಹೊಂದಿದ್ದೀರಿ ;**ಆ ಸುನ್ನತಿಯು ಕೈಯಿಂದ ಮಾಡಿದ್ದಲ್ಲ,** ಇದು ಕ್ರಿಸ್ತನಿಂದಾದ ಸುನ್ನತಿಯಾಗಿದ್ದು **ಪಾಪದ ಶರೀರವನ್ನು ವಿಸರ್ಜಿಸುವುದೇ.**"

ಕೊಲೊ 2:13 "**ನಿಮ್ಮ ಪಾಪಗಳಲ್ಲಿಯೂಸುನ್ನತಿಯಿಲ್ಲದ ಶರೀರಭಾವದಿಂದಲೂ ಸತ್ತವರಾಗಿದ್ದ** ನಿಮ್ಮನ್ನು ದೇವರು ಆತನೊಂದಿಗೆ **ಬದುಕಿಸಿ, ನಿಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಿದ್ದಾನೆ.**"

ರೋಮ 7:6 "ಈಗಲಾದರೋ **ನಮ್ಮನ್ನು ಹಿಡಿದುಕೊಂಡಿದ್ದ ನ್ಯಾಯಪ್ರಮಾಣದ** (ಪಾಪ) ಪಾಲಿಗೆ ನಾವು ಸತ್ತ ಕಾರಣ, ಅದರಿಂದ ವಿಮುಕ್ತರಾಗಿದ್ದೇವೆ ; ಹೀಗೆ ನಾವು ಅಕ್ಷರದ ಹಳೇ ರೀತಿಯಲ್ಲಿ ಆತನನ್ನು ಸೇವಿಸದೆ ಆತ್ಮನಿಂದ ಹೊಸ ರೀತಿಯಲ್ಲಿಯೇ ಸೇವಿಸುತ್ತೇವೆ."

**ಗಮನಿಸು** : ನಂಬಿಕೆ, ಹೊಸದಾಗಿ ಹುಟ್ಟುವಿಕೆ ಮತ್ತು ಪರಿಶುದ್ಧನಾಗುವ ವಿಧಾನ, ಇವುಗಳನ್ನು ದೇವರು ಮೊದಲೇ ಅಬ್ರಹಾಮ, ಇಸಾಕ ಮತ್ತು ಯಾಕೋಬರ ಜೀವನಗಳಲ್ಲಿ ತೋರಿಸಿದ್ದಾನೆ.

**ಎ.** ಅಬ್ರಹಾಮನು ದೇವರ ಕರೆಯಲ್ಲಿ **ನಂಬಿಕೆಯನ್ನು** ಪ್ರದರ್ಶಿಸುತ್ತಾನೆ, ಅಂದರೆ ತಾನು **ಹುಟ್ಟಿದ ಊರಿನಿಂದ ಹೊರಗೆ ಬಂದು** ದೇವರು ತೋರಿಸುವ **ಮತ್ತೊಂದು ಊರಿಗೆ** ಹೋಗುವುದರಲ್ಲಿ.
**ಬಿ.** ಇಸಾಕನು **ತಿರುಗಿ ಹುಟ್ಟುವಿಕೆಯನ್ನು** ಪ್ರದರ್ಶಿಸುತ್ತಾನೆ, ಯಾವಾಗ ಎಂದರೆ ಹಳೆಯ ಇಸಾಕನು ನೂತನ ಇಸಾಕನಾದಾಗ :ಯಾಕೆಂದರೆ ಅವನಿಗೆ ಬದಲಾಗಿ ಒಂದು ಟಗರನ್ನು ದೇವರು ಬಲಿಯಾಗಿ ಅರ್ಪಿಸಿದನು.
**ಸಿ.** ಹೊಸ ಇಸಾಕನಿಗೆ ಅವಳಿ ಮಕ್ಕಳು ಹುಟ್ಟಿದ್ದರಿಂದ ಅದು **ಪರಿಶುದ್ಧತೆಯನ್ನು** ಸೂಚಿಸುತ್ತದೆ, **ಒಂದು ಬೀಜ ಎರಡು ಗಂಡು ಮಕ್ಕಳಿಗೆ ಜನ್ಮಕೊಟ್ಟಿತು.** ಮೊದಲು ಹುಟ್ಟಿದ ಏಸಾವನು ತನ್ನ ಚೊಚ್ಚಲ ಹಕ್ಕನ್ನು ಮಾರಿಬಿಟ್ಟನು, ಆದರೆ ಎರಡನೆಯವನಾದ ಯಾಕೋಬನು ಚೊಚ್ಚಲ ಹಕ್ಕನ್ನು ಆಶಿಸಿದನು. **ಕಡೆಯಲ್ಲಿ ಆಶೀರ್ವಾದ ಹೊಂದಿದವನು ಮೊದಲು ಹುಟ್ಟಿದವನಲ್ಲ, ಎರಡನೆಯದಾಗಿ ಹುಟ್ಟಿದವನು** ; ಇದು ಅವನ ತಾಯಿಯ ಸಹಾಯದಿಂದಾಯಿತು. ಆಕೆಯು ಅಪವಿತ್ರಾತ್ಮನನ್ನು ಸೂಚಿಸುತ್ತಾಳೆ. ಆದುದರಿಂದ ಪವಿತ್ರ ದೇಶವನ್ನು ಸ್ವಾಸ್ಥ್ಯವಾಗಿ

'

ಶರೀರ ಭಾವ'ದಲ್ಲಿದ್ದ ಒಳ ಮನುಷ್ಯನು ಈಗ 'ಆತ್ಮನಲ್ಲಿದ್ದಾನೆ'. ದೇಹದಲ್ಲಿರುವ ಪಾಪವನ್ನು ಈ ರೀತಿ ತೆಗೆದು ಹಾಕುವುದೇ ಹೊರ ಮನುಷ್ಯನ ಸುನ್ನತಿ. ಆಗ ಹೊರ ಮನುಷ್ಯನು ಒಂದು ಪವಿತ್ರ ದೇಹ ಯಾಕೆಂದರೆ, ಪವಿತ್ರಾತ್ಮನು ಅದರಲ್ಲಿ ವಾಸಿಸುತ್ತಾನೆ. ಈಗ ದೇಹಕ್ಕೆ ಒಂದು ಪವಿತ್ರ ಸ್ವಭಾವ ಇರುವುದರಿಂದ ಒಳ ಮನುಷ್ಯನೂ ಕೂಡಾ ಪವಿತ್ರನಾಗಲು ಸಾಧ್ಯವಾಗುತ್ತದೆ.

ಪಾಪ ಕ್ಷಮಾಪಣೆಯಿಂದ ವಿಮೋಚನೆ ಹೊಂದಿದ ಒಳ ಮನುಷ್ಯನು ಬದುಕಿಕೊಂಡನು, ಆದರೆ ತನ್ನದೇ ಆದ ಶರೀರ ಭಾವವು ಈಗಲೂ ಶರೀರದ ಕ್ರಿಯೆಗಳನ್ನು ಮಾಡುತ್ತದೆಂದು ಕಂಡುಹಿಡಿಯುತ್ತಾನೆ. ಒಳ ಮನುಷ್ಯನು ಈಗ ತಾನು ಎರಡು ಭಾವನೆಗಳುಳ್ಳವನೆಂದು ತಿಳಿದುಕೊಳ್ಳುತ್ತಾನೆ. ಅವನು ತಿರುಗಿ ಹುಟ್ಟಿದ್ದರಿಂದ ದೇವರ ಮಗನು, ಆದರೆ ಅವನ ನಡತೆ ಈಗಲೂ ಪಾಪಿಯ ನಡತೆಯಂತೆಯೇ ಇರುತ್ತದೆ.

ಒಳ ಮನುಷ್ಯನ ಸ್ವಭಾವವನ್ನು ಶರೀರ ಭಾವದ್ದಾಗಿ ಉಂಟು ಮಾಡಿದ್ದರಿಂದ ಅವನ ಹಳೆಯ ಸ್ವಭಾವ ಆತ್ಮನಲ್ಲಿ ಅವನು ಅನುಭವಿಸುವ ಸ್ವಭಾವಕ್ಕಿಂತ ಬಲವಾಗಿರುತ್ತದೆ. ಇದೇ ಮೂಲ ತತ್ವವನ್ನು ನಾವು ಹಳೇ ಒಡಂಬಡಿಕೆಯಲ್ಲಿ ಇಶ್ಮಯೇಲ್ ಮತ್ತು ಇಸಾಕರ ಮಧ್ಯದಲ್ಲಿ ನೋಡುತ್ತೇವೆ. ದಾಸತ್ವದ ಸ್ತ್ರೀಯಾದ ಹಾಗರಳ (ಶರೀರ ಭಾವ) ಮಗನಾದ ಇಶ್ಮಯೇಲನು, ಸ್ವತಂತ್ರಳಾದ ಸ್ತ್ರೀ ಸಾರಳ (ವಾಗ್ದಾನದ) ಮಗನಾದ ಈಸಾಕನನ್ನು ಹಿಂಸಿಸಿದನು. ಅವಳೀ ಮಕ್ಕಳಾದ ಯೇಸಾವ್ ಮತ್ತು ಯಾಕೋಬರ ನಡುವೆ ನಡೆದ ಸಂಗತಿ ಕೂಡಾ ಇದೇ. ಮೊದಲು ಹುಟ್ಟಿದ ಯೇಸಾವನು, ಶರೀರಭಾವದವನು ; ಎರಡನೆಯದಾಗಿ ಹುಟ್ಟಿದ ಯಾಕೋಬನು ಆತ್ಮೀಯನು ಯಾಕೆಂದರೆ, ಅವನು ದೇವರ ಸಂಗತಿಗಳನ್ನು ಹುಡುಕಿದನು.

ಒಳ ಮನುಷ್ಯನು ಒಂದು ಪವಿತ್ರ ದೇಹದಲ್ಲಿದ್ದುಕೊಂಡು, ಬದುಕುವವನಾಗಿದ್ದಾಗ್ಯೂ, ಅವನಿಗೆ ಈಗಲೂ ಪವಿತ್ರತೆಯ ಕೊರತೆ ಇದೆ. ಆದುದರಿಂದಲೇ ದೇವರು ಅವನನ್ನು ಸಂಪೂರ್ಣ ಪರಿಶುದ್ಧತೆಯ ಕಡೆಗೆ ಆಜ್ಞಾಪಿಸುತ್ತಾನೆ.

**ಪರಿಶುದ್ಧನನ್ನಾಗಿ ಮಾಡುವಿಕೆ :**

ಪರಿಶುದ್ಧತೆ ಮಾಡುವುದೆಂದರೆ, ಅದು ಒಳ ಮನುಷ್ಯನಿಗೆ ಸುನ್ನತಿ ಮಾಡುವುದು. ಇದರಿಂದ ಅವನ ಹಳೆಯ ಶರೀರ ಭಾವವು ತೆಗೆದು ಹಾಕಲ್ಪಡುತ್ತದೆ.

ಪಡೆದದ್ದು ಏಸಾವನಲ್ಲ, ಯಾಕೋಬನು.

ಮೇಲ್ಕಂಡವು ಉಪಮಾನಗಳು ಮತ್ತು ಅವು ಪ್ರಕಟ ಪಡಿಸುವುದು ಎ) ನಂಬಿಕೆ ಬಿ) ತಿರುಗಿ ಹುಟ್ಟುವಿಕೆ ಸಿ) ಪರಿಶುದ್ಧನಾಗುವಿಕೆ. (ಮೊದಲು ಹುಟ್ಟಿದವನ ತಿರಸ್ಕಾರ, ಎರಡನೆಯವನಾಗಿ ಹುಟ್ಟಿದವನ ಸ್ವೀಕಾರ).

**ಎ.** ಪಾಪದ ದೇಹದಲ್ಲಿರುವ ಪ್ರತಿಯೊಬ್ಬನನ್ನು ದೇವರು ಪಾಪವಿಲ್ಲದ ಮತ್ತೊಂದು ದೇಹಕ್ಕೆ ಕರೆಯುತ್ತಾನೆ. ದೇವರ ಕರೆಗೆ ಒಬ್ಬ ವ್ಯಕ್ತಿ **ನಂಬಿಕೆಯ** ಮೂಲಕ ಮಾತ್ರ ಕೆಲಸ ಮಾಡಬಹುದು.
**ಬಿ.** ದೇವರ ಕುರಿಮರಿಯಾದ ಯೇಸುವಿನಲ್ಲಿ ನಂಬಿಕೆ ಇಡುವುದರ ಮೂಲಕ, ಒಬ್ಬ ವ್ಯಕ್ತಿ ವಾಗ್ದಾನವನ್ನು ಹೊಂದಿ **ತಿರುಗಿ ಹುಟ್ಟುತ್ತಾನೆ.** ಆಗ ಅವನು ಕ್ರಿಸ್ತನ ದೇಹದಲ್ಲಿರುತ್ತಾನೆ, ಮತ್ತು ಇನ್ನು ಮೇಲೆ ಪಾಪದ ದೇಹದಲ್ಲಿ ಅಲ್ಲ.
**ಸಿ.** ಬದುಕಿಬಂದ ಒಳ ಮನುಷ್ಯನು ತನ್ನಲ್ಲಿ ತಾನು ವಿಭಿನ್ನವಾಗಿರುವುದನ್ನು ಕಂಡು ಹಿಡಿಯುತ್ತಾನೆ ಮತ್ತು **ಪರಿಶುದ್ಧನಾಗುವ** ಅವಶ್ಯಕತೆ ಅವನಿಗಿದೆ. ಅವಳಿಯಾಗಿದ್ದ ಈಸಾವ್ ಯಾಕೋಬರಂತೆ, ಒಳ ಮನುಷ್ಯನು ತನ್ನಲ್ಲಿ ತಾನು ಒಂದು ದ್ವಿಗುಣವನ್ನು ಅನುಭವಿಸುತ್ತಾನೆ. ಶರೀರ ಭಾವದಲ್ಲಿ ಹುಟ್ಟಿದ ಹಳೆಯ ಸ್ವೇಚ್ಛೆಯನ್ನು ತಿರಸ್ಕರಿಸಲಾಗಿದೆ ಮತ್ತು ಸಾಯಿಸಲೇ ಬೇಕು. ಹೊಸದಾಗಿ ಆತ್ಮನಲ್ಲಿ ಹುಟ್ಟಿದ ಸ್ವೇಚ್ಛೆಯನ್ನು ಸ್ವೀಕರಿಸಲಾಗಿದೆ.

1 ಕೊರಿ. 6:19,20 "ಏನು, ದೇವರಿಂದ ದೊರಕಿ ನಿಮ್ಮೊಳಗ ನೆಲೆಗೊಂಡಿರುವ **ಪವಿತ್ರಾತ್ಮನಿಗೆ ನಿಮ್ಮ ದೇಹವು ಆಲಯವಾಗಿದೆ ಎಂಬುದು** ನಿಮಗೆ ತಿಳಿಯದೋ ? **ನೀವು ನಿಮ್ಮ ಸ್ವಂತ ಸ್ವತ್ತಲ್ಲ** ;ಯಾಕೆಂದರೆ ನೀವು ಕ್ರಯಕ್ಕೆ ಕೊಂಡುಕೊಳ್ಳಲ್ಪಟ್ಟಿದ್ದೀರಿ; ಆದ್ದರಿಂದ ದೇವರ ಸ್ವತ್ತಾಗಿರುವ **ನಿಮ್ಮ ದೇಹದಲ್ಲಿಯೂ ನಿಮ್ಮ ಆತ್ಮದಲ್ಲಿಯೂ (ಒಳ ಮನುಷ್ಯ) ದೇವರನ್ನು ಮಹಿಮೆ ಪಡಿಸಿರಿ.**"

ಮೊದಲು ಹುಟ್ಟಿದ ಒಳ ಮನುಷ್ಯನು ಶರೀರಾಧೀನನು ಯೇಸಾವನಂತೆ ; ಮತ್ತು ದೇವರ ರಾಜ್ಯವನ್ನು ಸೇರಲಾರನು, ಯಾಕೆಂದರೆ ಆ ರಾಜ್ಯವು ಎರಡನೆಯದಾಗಿ ಹುಟ್ಟಿದ ಒಳ ಮನುಷ್ಯನಿಗೆ ಸೇರಿದ್ದು. ಅವನು ಯಾಕೋಬನಂತೆ ಆತ್ಮೀಯನು. ಆದುದರಿಂದ ಒಳ ಮನುಷ್ಯನು ತನ್ನ ಸ್ವೇಚ್ಛೆಯನ್ನು ನಿರಾಕರಿಸುವುದು ಅಗತ್ಯ. ಹೀಗೆ ಅವನು ನೂತನ ಸ್ವೇಚ್ಛೆಯಲ್ಲಿ ಬೆಳೆಯಹುದು. ಇದು ನಂಬಿಕೆಯ ಕ್ರಿಯೆ. ಶರೀರದ ಕ್ರಿಯೆಗಳನ್ನು ಕೊನೆಗಾಣಿಸಲು ಅವನು ಮಾಡಬೇಕಾಗಿರುವುದು ಇದೇ. ಇಬ್ರಿ 12:14,16 "ಎಲ್ಲರ ಸಂಗಡ ಸಮಾಧಾನದಿಂದಿರುವುದನ್ನು **ಪರಿಶುದ್ಧತೆಯನ್ನು** ಅನುಸರಿಸಿರಿ ; **ಪರಿಶುದ್ಧತೆ ಇಲ್ಲದೆ ಯಾವನೂ ಕರ್ತನನ್ನು ಕಾಣುವುದಿಲ್ಲ.** ಯಾವ ಜಾರನಾಗಲೀ, ಯೇಸಾವನಂತ ಪ್ರಾಪಂಚಿಕನಾಗಲೀ, ನಿಮ್ಮಲ್ಲಿ ಇರದಂತೆಯೂ ಜಾಗೃತೆಯಿಂದ ನೋಡಿಕೊಳ್ಳಿರಿ. ಆ ಯೇಸಾವನು ಒಂದು ತುತ್ತು ಆಹಾರಕ್ಕಾಗಿ ತನ್ನ ಚೊಚ್ಚಲತನದ ಹಕ್ಕನ್ನು ಮಾರಿಬಿಟ್ಟನು;"

ರೋಮ 6:22 "ಈಗಲಾದರೂ **ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ, ದೇವರಿಗೆ ದಾಸರಾದ್ದರಿಂದ** ಪರಿಶುದ್ಧತೆಯೇ ನಿಮಗೆ ಫಲ; ಅದರ ಅಂತ್ಯವು ನಿತ್ಯ ಜೀವವೇ (ಹೊಸ ದೇಹ)."

1 ಥೆಸ 4:7,8 "ಯಾಕೆಂದರೆ **ದೇವರು ನಮ್ಮನ್ನು ಅಶುದ್ಧತೆಗೆ ಕರೆಯದೆ ಶುದ್ಧತೆಗೆ ಕರೆದನು. ಹೀಗಿರಲು ತಾತ್ಸಾರ ಮಾಡುವವನು ಮನುಷ್ಯನಲ್ಲ,** ತನ್ನ ಪರಿಶುದ್ಧಾತ್ಮವನ್ನು ನಮಗೆ ದಯಪಾಲಿಸಿರುವ **ದೇವರನ್ನೇ** ತಾತ್ಸಾರ ಮಾಡುತ್ತಾನೆ."

ಎಫೆ 4:30 "ದೇವರ **ಪವಿತ್ರಾತ್ಮನನ್ನು ದುಃಖ ಪಡಿಸಬೇಡಿರಿ.** ಆತನಲ್ಲಿಯೇ **ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ.**"

ಆತ್ಮನಲ್ಲಿರುವ ಒಳ ಮನುಷ್ಯನು ಪವಿತ್ರಾತ್ಮನ ಪವಿತ್ರ ಸ್ವಭಾವದೊಂದಿಗೆ ಭಾಗಿಯಾಗಲು ಶಕ್ತಿ ಹೊಂದಿದ್ದಾನೆ, ಮತ್ತು ಆತ್ಮದ ಸ್ವಭಾವವನ್ನು ಹೊಂದಲೂ ಕೂಡಾ ದೈವೀಕವಾಗಬೇಕಾಗಿದ್ದರೆ, ಒಳ ಮನುಷ್ಯನು ತನ್ನ ಹಳೆಯ ಶರೀರಾಧೀನ ಸ್ವಭಾವವನ್ನು ನಿರಾಕರಿಸಬೇಕು. ಅದು ಈಗಲೂ ಅವರ ಗಮನವನ್ನು ಶರೀರಾಭಿಲಾಷೆಗಳ ಕಡೆಗೆ ಸೆಳೆಯುತ್ತದೆ

ನೋಡಿ ಕಲಿಯಿರಿ !

ಪರಿಶುದ್ಧನಾಗುವಿಕೆ




ಒಳ ಮನುಷ್ಯನ ಸುನ್ನತಿ

ದೇವರು ಒಳಮನುಷ್ಯನಿಗೆ ಸಂಪೂರ್ಣ ಪರಿಶುದ್ಧನಾಗಲು ಆಜ್ಞಾಪಿಸುತ್ತಾನೆ. ಮತ್ತು ಪಾಪ ಮಾಡದೆ ಇರಲು. ಅವನು "ನಾನು ಅಸಮರ್ಥನು" ಎಂದು ಹೇಳಿದರೆ ಅವನು ದೇವರಿಗೆ ಮತ್ತು ನಂಬಿಕೆಗೆ ಅವಿಧೇಯನಾಗಿದ್ದಾನೆ. ಯಾವನಾದರೂ, "ನಾನು ನನ್ನ ಜೀವನದಲ್ಲಿ ಶರೀರದ ಕ್ರಿಯೆಗಳನ್ನು ನಿಲ್ಲಿಸಿಬಿಡಲು ಅಸಮರ್ಥನು" ಎಂದು ಹೇಳಿದರೆ ಅವನು ತನ್ನ ಜೀವನದಲ್ಲಿ ಪಾಪಕ್ಕೆ ಸ್ಥಳ ಕೊಟ್ಟು ಕೃಪೆಯ ಆತ್ಮನನ್ನು ತಡೆಗಟ್ಟುವವನಾಗಿದ್ದಾನೆ. ಇಂಥಹ ಒಳ ಮನುಷ್ಯನು, ಅವನು ಆತ್ಮನಲ್ಲಿದ್ದಾಗ್ಯೂ ನೂತನ ದೇಹಕ್ಕೆ ಬಾಧ್ಯನಾಗಲಾರನು, ಯಾಕೆಂದರೆ ಅವನು ದೇವರಿಗೆ ಅವಿಧೇಯನಾಗಿದ್ದಾನೆ.

ಒಳ ಮನುಷ್ಯನು ದೇವರ ವಿಶ್ರಾಂತಿಯಲ್ಲಿ ಸೇರಿಕೊಳ್ಳುವುದು ಆತನ ಚಿತ್ತ. ದೇವರಲ್ಲಿ ನಂಬಿಕೆಯಿಟ್ಟು "ನಾನು ಸಮರ್ಥನು" ಎಂದು ಹೇಳುವವನು ತನ್ನನ್ನು ತಾನು ನಿರಾಕರಿಸಲು ಆರಂಭಿಸಬೇಕು. ಮತ್ತು ಶರೀರಾನುಸಾರವಾದ ಕ್ರಿಯೆಗಳನ್ನು ಸಾಯಿಸಬೇಕು. ಇದನ್ನು ಮಾಡುವಾಗ ಅವನು ಹೆಚ್ಚು ಶ್ರಮೆಯನ್ನನುಭವಿಸ ಬೇಕಾಗುತ್ತದೆ, ಹೀಗೆ ಅವನ ಹಳೆಯ ಶರೀರ ಭಾವ ಶಿಲುಬೆಗೇರಿಸಲ್ಪಡುತ್ತದೆ. ತನ್ನ ಹಳೆಯ ಸ್ವಭಾವವನ್ನು ನಿರಾಕರಿಸುವುದರಿಂದಲೇ ಅವನು ಪವಿತ್ರಾತ್ಮನಿಂದ ಸಂಪೂರ್ಣನಾಗುತ್ತಾನೆ. ಒಳ ಮನುಷ್ಯನ ಶರೀರ ಭಾವವು ಸಾಯುವ ತನಕ ಶ್ರಮೆಯು ಮುಂದುವರೆಯಲಾಗುತ್ತದೆ. ಒಳ ಮನುಷ್ಯನ ಮಾರ್ಪಟ್ಟ ಸ್ವಭಾವವೇ ದೇವರು ತನಗೆ ವಿಧೇಯರಾಗುವವರೆಲ್ಲರಿಗೆ ವಾಗ್ದಾನ ಮಾಡಿದ್ದು.

ಮತ್ತಾ 16:24 ".....ತರುವಾಯ ಯೇಸು ತನ್ನ ಶಿಷ್ಯರಿಗೆ ಯಾವನಾದರೂ ನನ್ನ ಹಿಂದೆ ಬರುವುದಕ್ಕೆ ಅಪೇಕ್ಷಿಸಿದರೆ **ಅವನು ತನ್ನನ್ನು ತಾನೇ ನಿರಾಕರಿಸಿ, ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನನ್ನು ಹಿಂಬಾಲಿಸಲಿ.**"

ತೀತ 2:12 "ನಾವು **ಭಕ್ತಿಹೀನತೆಯನ್ನೂ ಲೋಕದ ಆಶೆಗಳನ್ನೂ ತೊರೆದು,** ಈಗಿನ ಲೋಕದಲ್ಲಿ ಸ್ವಸ್ಥಚಿತ್ತರಾಗಿಯೂ ನೀತಿವಂತರಾಗಿಯೂ ಭಕ್ತಿಯುಳ್ಳವರಾಗಿಯೂ ಬದುಕಬೇಕೆಂದು (ಆ ಕೃಪೆಯು) ನಮಗೆ ಬೋಧಿಸುತ್ತದೆ."

ಎಫೆ 5:5 "ಯಾಕೆಂದರೆ **ಯಾವ ಜಾರನಾಗಲಿ, ಅಶುದ್ಧನಾಗಲಿ,** ವಿಗ್ರಹಾರಾಧಕನಂತಿರುವ **ಲೋಭಿಯಾಗಲಿ ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಬಾಧ್ಯನಾಗುವುದಿಲ್ಲ**ವೆಂದು ನೀವು ಬಲ್ಲಿರಲ್ಲವೇ."

2 ಥೆಸ 2:13, 14 "....ನೀವು ಆತನಿಂದ ಶುದ್ಧೀಕರಿಸಲ್ಪಟ್ಟವನಾಗಿ **ಸತ್ಯದ ಮೇಲೆ ನಂಬಿಕೆಯನ್ನಿಟ್ಟು, ರಕ್ಷಣೆಯನ್ನು ಪಡೆದುಕೊಳ್ಳುವುದಕ್ಕಾಗಿ** ದೇವರು ನಿಮ್ಮನ್ನು ಆದಿಯಿಂದ **ಆರಿಸಿಕೊಂಡದದ್ದರಿಂದ, ....ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರಾಭಾವವನ್ನು ಹೊಂದಿಕೊಳ್ಳಬೇಕೆಂದು ದೇವರು** ನಮ್ಮ ಸುವಾರ್ತೆಯ ಮೂಲಕವಾಗಿ ನಿಮ್ಮನ್ನು ಅದಕ್ಕೆ ಕರೆದನು."

ರೋಮ 5:10 "ವೈರಿಗಳಾಗಿದ್ದ ನಾವು ದೇವರ (ತಂದೆ) **ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಾಗಿದ್ದರೆ,** ಸಮಾಧಾನವಾದ ನಮಗೆ ಆತನ ಜೀವದಿಂದ (ಪವಿತ್ರಾತ್ಮ) **ರಕ್ಷಣೆಯಾಗುವುದೂ ಮತ್ತೂ ನಿಶ್ಚಯವಲ್ಲವೇ.**"

ಇಬ್ರಿ 3:17 – 19 "ಆದರೆ **40 ವರ್ಷ ಆತನು ಯಾರ ಮೇಲೆ ಸಂತಾಪಗೊಂಡನು ? ಪಾಪ ಮಾಡಿದವರಮೇಲೆ ಅಲ್ಲವೇ** ? ಅವರ ಶವಗಳು ಅರಣ್ಯದಲ್ಲಿ ಬಿದ್ದವಲ್ಲಾ ತನ್ನ ವಿಶ್ರಾಂತಿಯಲ್ಲಿ ಅವರು ಸೇರುವುದೇ ಇಲ್ಲವೆಂದು ಯಾರನ್ನು ಕುರಿತು ಆತನು ಪ್ರಮಾಣ ಮಾಡಿದನು **? ನಂಬದವರ ವಿಷಯವಾಗಿಯೇ ಅಲ್ಲವೇ ?ಅವರು ಸೇರಲಾರದೆ ಹೋದದ್ದು ಅಪನಂಬಿಕೆಯಿಂದಲೇ** ಎಂದು ತಿಳಿದುಕೊಳ್ಳುತ್ತೇವೆ."

1 ಕೊರಿ 10:11 "**ಅವರಿಗೆ** (ಯಹೂಧ್ಯರಿಗೆ) **ಸಂಭವಿಸಿದ ಈ ಎಲ್ಲಾ ಸಂಗತಿಗಳು** ನಿದರ್ಶನಗಳಾಗಿವೆ ; ಮತ್ತು ಲೋಕದ ಅಂತ್ಯಕ್ಕೆ ಬಂದಿರುವವರಾದ **ನಮಗೆ** (ವಿಶ್ವಾಸಿಗಳಿಗೆ) **ಅವು ಬುದ್ಧಿವಾದಗಳಾಗಿ ಬರೆದಿವೆ.**"

1 ತಿಮೋ 6:12 "ನಂಬಿಕೆಯ ಶ್ರೇಷ್ಠ ಹೋರಾಟವನ್ನು ಮಾಡು ನಿತ್ಯ ಜೀವವನ್ನು (ನೂತನ ದೇಹ) ಹಿಡಿದುಕೋ ; ಅದಕ್ಕಾಗಿಯೇ ನೀನು ಕರೆಯಲ್ಪಟ್ಟಿದ್ದೀ..."

**ಗಮನಿಸು :** ನೀನು ಸಾಯಿಸುವ ಪ್ರತಿಯೊಂದು ಪಾಪವೂ ನಿನ್ನ ನಿತ್ಯ ಜೀವದ ಹಿಡಿಯನ್ನು ಬಲಪಡಿಸುತ್ತದೆ.


ಇಬ್ರಿ 4:10, 11 "ಹೇಗೆಂದರೆ **ದೇವರು ತನ್ನ ಕೆಲಸಗಳನ್ನು ಮುಗಿಸಿ ಹೇಗೆ ವಿಶ್ರಮಿಸಿಕೊಂಡನೋ** ಹಾಗೆಯೇ ಆತನ ವಿಶ್ರಾಂತಿಯಲ್ಲಿ ಸೇರಿರುವವನು ಸಹಾ ತನ್ನ ಕೆಲಸಗಳನ್ನು ಮುಗಿಸಿ ವಿಶ್ರಮಿಸಿಕೊಂಡಿದ್ದಾನೆ. ಆದ್ದರಿಂದ ನಾವು ಅವರ (ಇಸ್ರಯೇಲ್ಯರ) ಅಪನಂಬಿಕೆಯನ್ನು ಅನುಸರಿಸುವವರಾಗದಂತೆ **ಆ ವಿಶ್ರಾಂತಿಯಲ್ಲಿ ಸೇರುವುದಕ್ಕೆ ಪ್ರಯಾಸ ಪಡೋಣ.**"

ಯೇಸುವಿನಲ್ಲಿಡುವ ನಂಬಿಕೆಯಿಂದಲೇ ಪವಿತ್ರಾತ್ಮನು ಹೊರ ಮನುಷ್ಯನನ್ನು ಪಾಪದಿಂದ ಬಿಡಿಸಲು ಸಾಧ್ಯ, ಮತ್ತು ಸತ್ಯಕ್ಕೆ ವಿಧೇಯತೆಯ ಮೂಲಕ ಪವಿತ್ರಾತ್ಮನು ಒಳಮನುಷ್ಯನನ್ನು ಅವನ ಪಾಪಗಳಿಂದ ರಕ್ಷಿಸುತ್ತಾನೆ. ಒಳ ಮನುಷ್ಯನು ಆಗ ತನ್ನ ಪಾಪದ ಸ್ವಭಾವದಿಂದ ವಿಶ್ರಾಂತಿಯನ್ನು ಅನುಭವಿಸುತ್ತಾನೆ, ಯಾಕೆಂದರೆ ಅವನು ಪವಿತ್ರಾತ್ಮನ ದಿವ್ಯ ಸ್ವಭಾವದಲ್ಲಿ ಭಾಗಿಯಾಗಿದ್ದಾನೆ. ಒಳ ಮನುಷ್ಯನ ಬದಲಾವಣೆಯಾದ ಸ್ವಭಾವವೇ ದೇವರು ಆತನಿಗೆ ವಿಧೇಯರಾಗಿರುವ ಎಲ್ಲರಿಗೂ ಮಾಡಿರುವ ವಿಶ್ರಾಂತಿಯ ವಾಗ್ದಾನ.

**ನಿತ್ಯ ಜೀವ**

ಇನ್ನು ಮುಪ್ಪಾಗಿ ಸಾಯಲಿರುವ ಪ್ರಾಕೃತಿಕ ದೇಹ, ಕ್ರಿಸ್ತನು ಎರಡನೇ ಬರೋಣಿಕೆಯಲ್ಲಿ ನಿತ್ಯವಾದ ಆತ್ಮೀಯ ದೇಹವಾಗಿ ಬದಲಾಗುತ್ತದೆ. ತನ್ನ ಪ್ರಾಕೃತಿಕ ದೇಹ ಸಾಯುವವರೆಗೆ ಅದರೆ ಕ್ರಿಸ್ತನ ಬರೋಣಿಕೆಯಲ್ಲಿ ನೂತನ ದೇಹವಾಗಿ ಬದಲಾವಣೆ ಹೊಂದುವವರೆಗೆ ಒಳ ಮನುಷ್ಯನು ವಾಗ್ದಾನದ ಆತ್ಮನಲ್ಲಿ ಇರುತ್ತಾನೆ. ಆದಿನದಲ್ಲಿ ಪವಿತ್ರಾತ್ಮನು ಹೊರಟು ಹೋಗುತ್ತಾನೆ. ಯಾಕೆಂದರೆ ಒಳ ಮನುಷ್ಯನು ಕ್ರಿಸ್ತ ಯೇಸುವಿನಲ್ಲಿರುವ ಮಹಿಮಾ ಶರೀರದಲ್ಲಿರುತ್ತಾನೆ.

ನೋಡಿ ಕಲಿಯಿರಿ !




ದೇವರಲ್ಲಿನ ವಿಧೇಯತೆಯಿಂದ ಪರಿಶುದ್ಧತೆಯಲ್ಲಿ ಪರಿಪೂರ್ಣಗೊಂಡ ಒಳ ಮನುಷ್ಯನು, ಆತ್ಮೀಯ ದೇಹವನ್ನು ಹೊಂದಲು ಅರ್ಹನು. ಆವಾಗ ಮಾತ್ರ ಅವನಿಗೆ ನಿತ್ಯ ಜೀವ ಶಾಶ್ವತವಾಗಿ ದೊರೆಯುತ್ತದೆ. ಮಹಿಮಾ ಶರೀರವು ದೇವರು ವಾಗ್ದಾನ ಮಾಡಿದ ಸ್ವಾಸ್ಥ್ಯ. ಇದು ಈ ಜೀವನದಲ್ಲಿ ಪರಿಶುದ್ಧತೆಯನ್ನು ಪರಿಪೂರ್ಣಮಾಡಿದವರಿಗೆ ದೇವರು ಕೊಡುವ ಜೀವದ ಕಿರೀಟ.

ನಾವು ಮುಖ್ಯವಾಗಿ ಗಮನಿಸಬೇಕಾದ ಒಂದು ವಿಷಯವೇನೆಂದರೆ, "ವಿಶ್ರಾಂತಿ" ಎನ್ನುವುದು ದೇಹವಲ್ಲ ಯಾಕೆಂದರೆ ಒಳಮನುಷ್ಯನು ಆಗಲೇ ಒಂದು ಪರಿಶುದ್ಧ ದೇಹದಲ್ಲಿ ಇದ್ದಾನೆ. ವಿಶ್ರಾಂತಿ ಅಂದರೆ ಸ್ವಭಾವ ಬದಲಾದ ಒಳಮನುಷ್ಯನ ಸ್ಥಿತಿ. ನಂಬಿಕೆಯ ಕಾರ್ಯವನ್ನು ಅವನು ಪೂರ್ತಿಗೊಳಿಸಿದ ಮೇಲೆ ಅವನಿಗೆ ಅವನ ಪಾಪಗಳಿಂದ ವಿಶ್ರಾಂತಿ ಸಿಕ್ಕುತ್ತದೆ.

ಗಲಾ 5:24 "**ಕ್ರಿಸ್ತನವರು ತಮ್ಮ ಶರೀರವನ್ನು ಅದರ ಇಚ್ಛೆ ದುರಾಶೆಗಳ ಸಹಿತವಾಗಿ ಶಿಲಬೆಗೆ ಹಾಕಿದ್ದಾರೆ.**"

ರೋಮ 2:29 "ಆದರೆ ಒಳಗೆ ಯಹೂದ್ಯನಾಗಿರುವವನೇ ಯಹೂದ್ಯನು ; **ಸುನ್ನತಿಯು ಹೃದಯಕ್ಕೆ** (ಒಳಮನುಷ್ಯ) **ಸಂಬಂಧಪಟ್ಟದ್ದಾಗಿ** ಅಕ್ಷರೀಕವಾಗಿರದೆ, **ಆತ್ಮೀಕವಾದದ್ದೇ** ಆಗಿದೆ. ಹೀಗೆ ಅವನ ಹೊಗಳಿಕೆಯು ಮನುಷ್ಯರಿಂದಾಗಿರದೇ ದೇವರಿಂದಲೇ ಆಗಿರವುದು."

ಎಫೆ 1:13,14 "ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆ ಎಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆ ಇಟ್ಟವರಾದ ನೀವು ಸಹ **ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು** (ಖಚಿತ) **ಹೊಂದಿದಿರಿ.** ಆತನ ಮಹಿಮೆಯ ಸ್ತುತಿಗೋಸ್ಕರ ಕೊಂಡುಕೊಂಡ ಸ್ವಾಸ್ಥ್ಯ (ಹಳೇ ದೇಹ) ದವರಿಗೆ ವಿಮೋಚನೆಯಾಗುವ ತನಕ ಆತನು (ಪವಿತ್ರಾತ್ಮನು) ನಮ್ಮ ಬಾಧ್ಯತೆಗೆ (ಹೊಸ ದೇಹ) ಸಂಚಕಾರವಾಗಿದ್ದಾನೆ."

ಫಿಲಿ 3:20,21"**ನಾವಾದರೋ ಸ್ವರ್ಗ ನಿವಾಸಿಗಳು** ; ಅಲ್ಲಿಂದಲೇ ರಕ್ಷಕನು ಬರುವುದನ್ನು ಎದುರಿನೋಡುತ್ತಾ ಇದ್ದೇವೆ ; ಆತನೇ ಕರ್ತನಾದ ಯೇಸು ಕ್ರಿಸ್ತನು..... **ನೀಚಾವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರ ಪಡಿಸುವುದಕ್ಕೆ ಶಕ್ತನಾಗಿದ್ದೂ, ಪ್ರಭಾವವುಳ್ಳ ತನ್ನ ದೇಹಕ್ಕೆ ಸಾರೂಪ್ಯವಾಗುವಂತೆ ಮಾಡುವನು.**"


1 ಪೇತ್ರ 1:3,4 "ದೇವರು ಯೇಸು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ, ತನ್ನ ಮಹಾಕರುಣಾನುಸಾರವಾಗಿ ಜೀವಕರವಾದ ನಿರೀಕ್ಷೆಗೂ **ಲಯ, ಕಳಂಕ, ಕ್ಷಯಗಳಿಲ್ಲದ ಬಾಧ್ಯತೆಗೂ ನಮ್ಮನ್ನು ತಿರುಗಿ ಹುಟ್ಟಿಸಿದ್ದಾನೆ. ಈ ಬಾಧ್ಯತೆಗೂ** (ಮಹಿಮಾ ಶರೀರವು) **ನಿಮಗೋಸ್ಕರ ಸ್ವರ್ಗದಲ್ಲಿ ಇಟ್ಟಿದೆ.**"

ಪ್ರಕ 3:21 "ನಾನು ಜಯಹೊಂದಿ ನನ್ನ ತಂದೆಯೊಡನೆ ಆತನ ಸಿಂಹಾಸನದಲ್ಲಿ ಕುಳಿತುಕೊಂಡ ಹಾಗೆಯೇ **ಜಯ ಹೊಂದುವವನನ್ನು ನನ್ನೊಡನೆ ನನ್ನ ಸಿಂಹಾಸನದಲ್ಲಿ ನನ್ನ ಕೂಡ ಕುಳಿತುಕೊಳ್ಳುವಂತೆ ಅನುಗ್ರಹಿಸುವೆನು.**"

ಯೊಕೋ 1:12 "**ಕಷ್ಟಗಳನ್ನು ಸಹಿಸಿಕೊಳ್ಳುವವನು ಧನ್ಯನು ;ಅವನು ಪರಿಶೋಧಿತನಾದ ಮೇಲೆ ಕರ್ತನು ತನ್ನನ್ನು ಪ್ರೀತಿಸುವವರಿಗೆ ವಾಗ್ದಾನ ಮಾಡಿದ ಜೀವದ ಕಿರೀಟವನ್ನು ಹೊಂದುವನು.**"


# ಸಾರಂಶ

## ಶರೀರ ಭಾವ




**ಮಾನವನು ಪಾಪಿಯಾಗಿದ್ದಾನೆ :**
ಪಾಪಿಯ ದೇಹವು ಸೈತಾನನಿಗೆ ಸೇರುತ್ತದೆ. ಸೈತಾನನ ಮನೆಯಲ್ಲಿ ಜೀವಿಸುವ ಒಳ ಮನುಷ್ಯನು ತಪ್ಪಿಸಿಕೊಳ್ಳಲಾರನು. ಯಾವುದೇ ವಿಧವಾದ ಮತವಾಗಲೀ ಸ್ವಯಂ ಶಿಸು ಅಥವಾ ಒಳ್ಳೆಯ ಕಾರ್ಯಗಳು ಒಳ ಮನುಷ್ಯನನ್ನು ಸೈತಾನನ ಹಿಡಿಯಿಂದ ಬಿಡುಗಡೆ ಮಾಡಲು ಅಸಾಧ್ಯ.

## ತಿರುಗಿ ಹುಟ್ಟುವುದು




ಹೊರ ಮನುಷ್ಯನ ಸುನ್ನತಿ

**ಯೇಸುವಿನಲ್ಲಿ ನಂಬಿಕೆ :**
ಒಬ್ಬ ಪಾಪಿಯು ದೇವರಲ್ಲಿ ನಂಬಿಕೆ ಇಟ್ಟಾಗ, ತನ್ನ ಪಾಪಕ್ಕಾಗಿ ಪಶ್ಚಾತಾಪ ಪಟ್ಟು ಯೇಸುವನ್ನು, ತನ್ನ ಕರ್ತನೂ ಮತ್ತು ರಕ್ಷಕನನ್ನಾಗಿ ಸ್ವೀಕರಿಸಿದಾಗ ಪವಿತ್ರಾತ್ಮನನ್ನು ಹೊಂದುತ್ತಾನೆ. ಪವಿತ್ರಾತ್ಮನು ಅವನನ್ನು ಪಾಪದಿಂದ ಬಿಡುಗಡೆ ಮಾಡುತ್ತಾನೆ. ದೇಹವು ಆಗ ದೇವರ ಮನೆಯಾಗುತ್ತದೆ.

## ಪರಿಶುದ್ಧನಾಗುವಿಕೆ




ಒಳ ಮನುಷ್ಯನ ಸುನ್ನತಿ

**ಪವಿತ್ರಾತ್ಮನಲ್ಲಿ :**
ಪಾಪದ ಆತ್ಮನಿಂದ ಬಿಡುಗಡೆಯಾದ ಒಳ ಮನುಷ್ಯನು ದೇವರಿಗೆ ವಿಧೇಯನಾಗುವುದನ್ನ ಕಲಿಯಬೇಕು. ಪವಿತ್ರಾತ್ಮನ ಪ್ರಭಾವದ ಮೂಲಕ ಅವನು ಇನ್ನೂ ಮಾಡುತ್ತಿರುವ 'ಶರೀರ ಭಾವದ ಕ್ರಿಯೆಗಳನ್ನು' ಸಾಯಿಸಬೇಕು.




**ವಿಧೇಯತೆ :**
ದೇವರಲ್ಲಿನ ನಂಬಿಕೆಯಿಂದ, ಪವಿತ್ರತೆಯನ್ನು ಸಂಪೂರ್ಣಗೊಳಿಸಿದ ಒಳ ಮನುಷ್ಯನು ತನ್ನನ್ನು ತಾನು ಪರಿಶುದ್ಧನಾಗಿರಿಸಬೇಕು ಮತು ಮತ್ತೊಂದು ಸಾರ್ತಿ ಪ್ರಪಂಚವನ್ನು ಅನುಸರಿಸಬಾರೆದು. ಇಂತಹ ಒಬ್ಬ ವಿಶ್ವಾಸಿಯು ಕ್ರಿಸ್ತನ ಹೊಸದೇಹಕ್ಕೆ ಅರ್ಹನು, ಅದು ದೇವರೊಂದಿಗೆ ಇರುವ ನಿತ್ಯ ಜೀವ.

# ಅಧ್ಯಾಯ –5

## ರಕ್ಷಣೆಯ ಮಾದರಿ :

ಐಗುಪ್ತದಲ್ಲಿದ್ದ ದಾಸತ್ವದಿಂದ ಇಸ್ರಯೇಲ್ಯರ ಬಿಡುಗಡೆ, ಸಿನ್ ಅರಣ್ಯದ ಮೂಲಕ ಅವರ ಪ್ರಯಾಣ, ಮತ್ತು ವಾಗ್ದಾನದ ದೇಶ ಪಡೆದುಕೊಂಡದ್ದು, ಇದೆಲ್ಲವೂ ದೇವರ ಸುವಾರ್ತೆಯಾಗಿದೆ. ಯೆಹೂದ್ಯರೊಂದಿಗೆ ದೇವರ ಬಳಕೆ ಒಂದು ಉಪಮಾನವಾಗಿದೆ ಅಥವಾ ದೃಷ್ಟಾಂತ. ಅದು ದೇವರ ರಕ್ಷಣೆಯ ಮಾರ್ಗವನ್ನು ಪ್ರಕಟಪಡಿಸುತ್ತದೆ. ಐಗುಪ್ತದಿಂದ ಕಾನಾನಿಗೆ ಇಸ್ರಯೇಲ್ಯರ ಬಿಡುಗಡೆಯ ಇತಿಹಾಸ ನಮ್ಮ ರಕ್ಷಣೆಗೆ ಒಂದು ಮಾದರಿಯನ್ನು ಸೂಚಿಸುತ್ತದೆ.

ಒಳಮನುಷ್ಯನಾದ ಯೇಸು ಕೂಡ ಪಾಪದ ದೇಹದಿಂದ ಬಿಡುಗಡೆ ಮಾಡಿ ಕ್ರಿಸ್ತನ ದೇಹದೊಳಗೆ ನಡೆಸುವ ಮಾದರಿಯ ಒಂದೊಂದು ಹೆಜ್ಜೆಯನ್ನು ಅನುಸರಿಸಬೇಕಾಯಿತು. ದೇವರ ಕರೆಯನ್ನು ಯೇಸು ಅರ್ಥ ಮಾಡಿಕೊಂಡಿದ್ದರಿಂದ ಮತ್ತು ಮಾದರಿಯಲ್ಲಿ ತೋರಿಸಿದ ಹೆಜ್ಜೆಗಳನ್ನು ನಂಬಿಗಸ್ತನಾಗಿ ಅನುಸರಿಸಿದ್ದರಿಂದ ದೇವರು ಆತನನ್ನು ಒಂದು ನೂತನ ದೇಹದಲ್ಲಿ ಎಬ್ಬಿಸಿದನು.

ಯೇಸುಕ್ರಿಸ್ತನು ನೂತನ ದೇಹದಲ್ಲಿ ಪುನರುತ್ಥಾನದಂದಿನಿಂದ ದೇವರ ಸುವಾರ್ತೆಯು ಕ್ರಿಸ್ತನ ಸುವಾರ್ತೆಯೆಂದು ಕರೆಯಲ್ಪಟ್ಟಿದೆ. ಕ್ರಿಸ್ತನ ಸುವಾರ್ತೆಯು ಲೋಕಕ್ಕೆ ದೇವರ ಸಂದೇಶವಾಗಿದೆ. ಹೇಗೆಂದರೆ, ಆತನು(ದೇವರು) ಕ್ರಿಸ್ತ ಯೇಸುವಿನಲ್ಲಿ ಪಾಪದ ಶರೀರವನ್ನು ನಾಶಗೊಳಿಸಿದ್ದಾನೆ ಮತ್ತು ಮಾನವನು ನೆಲೆಸುವುದಕ್ಕಾಗಿ ಪಾಪವಿಲ್ಲದ ನೂತನ ದೇಹವನ್ನುಂಟು ಮಾಡಿದ್ದಾನೆ. ಕಾನನ ದೇಶವು ಹೇಗೆ ಯೆಹೂದ್ಯರಿಗೆ ವಾಗ್ದಾನ ಮಾಡಲ್ಪಟ್ಟಿತ್ತೋ ಹಾಗೆಯೇ, ಹೊಸ ದೇಹವು ಮಾನವನ ಕುಲಕ್ಕೆ ವಾಗ್ದಾನ ಮಾಡಲ್ಪಟ್ಟಿದೆ. ಪಾಪದ ದೇಹದಿಂದ ರಕ್ಷಣೆಯು ಹೊರಗೆ ಹೊರಟು ಕ್ರಿಸ್ತನ ದೇಹದಲ್ಲಿ ಸೇರುವ ಹಾಗೆ–ಇದೇ ಮಾದರಿಯನ್ನು ಯಹೂದ್ಯರು ಐಗುಪ್ತದಿಂದ ಹೊರಹೊರಟು ಕಾನಾನ್ ಒಳಗೆ ಸೇರಿದ ಮಾದರಿಯಲ್ಲಿ ಅನುಸರಿಸಿದೆ.

ದೇವರ ಕರೆಯನ್ನು ನಂಬಿ ಸ್ವೀಕರಿಸಿದ ಯಾವನೇ ಒಬ್ಬ ವ್ಯಕ್ತಿಯು ದೇವರು ಸ್ಥಾಪಿಸಿದ ಮಾದರಿಯಿಂದ, ಅಂದರೆ ಯಹೂದ್ಯರನ್ನು ಐಗುಪ್ತದಿಂದ ಹೊರಗೆ ತಂದು ಕಾನಾನನ್ನು ಸೇರಿಸಿದ ಮಾದರಿಯಿಂದ ಅಗಲಬಾರದು. ಇದೇ ಮಾದರಿಯನ್ನು ಒಳಮನುಷ್ಯ ಯೇಸುವಿನ ಬಿಡುಗಡೆಯಲ್ಲಿ ಅನುಸರಿಸಲಾಗಿದೆ ಮತ್ತು ಖಚಿತಪಡಿಸಲಾಗಿದೆ; ; ಆತನ ಹಳೆಯ ದೇಹದಿಂದ –

### ವಚನಗಳು ಮತ್ತು ವ್ಯಾಖ್ಯಾನಗಳು

1 ಕೊರಿ 10:11 "ಅವರಿಗೆ (ಯೆಹೂದ್ಯರಿಗೆ) ಸಂಭವಿಸಿದ ಈ ಎಲ್ಲಾ ಸಂಗತಿಗಳು ನಿದರ್ಶನಗಳಾಗಿವೆ. (ಮಾದರಿ) ; ಮತ್ತು ಲೋಕದ ಅಂತ್ಯಕ್ಕೆ ಬಂದಿರುವವರಾದ ನಮಗೆ ಅವು ಬುದ್ದಿವಾದಗಳಾಗಿ ಬರೆದಿವೆ."

ಇಬ್ರಿ 4:2 "ಯಕೆಂದರೆ, ಅವರಿಗೆ (ಯೆಹೂದ್ಯರಿಗೆ) ಸುವಾರ್ತೆಯು ಸಾರೋಣವಾದಂತೆಯೇ ನಮಗೂ ಸಾರೋಣವಾಯಿತು, ಆದರೆ ಕೇಳಿದವರು ನಂಬಲಿಲ್ಲವಾದ ಕಾರಣ ಸಾರಿದ ಆ ವಾಕ್ಯದಿಂದ ಅವರಿಗೆ ಪ್ರಯೋಜನವಾಗಲಿಲ್ಲ."

ಯೇಸು ತಾನು ಪಾಪದ ದೇಹದಲ್ಲಿ ಹುಟ್ಟಿದ್ದಾನೆಂದು (ಐಗುಪ್ತ) ಅರ್ಥ ಮಾಡಿಕೊಂಡಿದ್ದನು. ಅರಣ್ಯದಲ್ಲಿ (ಸಿನ್ ಅರಣ್ಯ) ಪವಿತ್ರಾತ್ಮನ ಮೂಲಕ ನಡೆಸಲ್ಪಟ್ಟವನಾಗಿ ಆತನು ಸೈತಾನನಿಂದ ಶೋಧಿಸಲ್ಪಟ್ಟವನಾಗಿ ಜಯ ಹೊಂದಿದನು. ಈಗ ಆತನು ದೆವ್ವಗಳ ಮೇಲೆ ಮಹತ್ವ ಹೊಂದಿದ್ದವನಾಗಿದ್ದರಿಂದ, ಆತನು ಒಂದು ಪಾಪ ರಹಿತ ಜೀವನವನ್ನು ಜೀವಿಸಬೇಕಾಯಿತು. (ಕಾನಾನಿನಲ್ಲಿ) ಶೋಧಿಸಲ್ಪಟ್ಟು, ಪರಿಹಾಸ್ಯ ಮಾಡಲ್ಪಟ್ಟವನಾಗಿದ್ದರೂ ಒಂದು ಸಾರ್ತಿಯಾದರೂ ಅತನು ಪಾಪ ಮಾಡಲಿಲ್ಲ ಮತ್ತು ನಿತ್ಯವಾದ ಭಾದ್ಯತೆಯುಳ್ಳ ಹೊಸ ದೇಹಕ್ಕೆ ಅರ್ಹನಾಗಿ ಕಂಡುಬಂದನು.

ಶಿಲುಬೆಯ ಮೇಲೆ ತಾನು ಹೊಂದಿದ ಮರಣದಲ್ಲಿ, ಕ್ರಿಸ್ತನ ಸುವಾರ್ತೆಯನ್ನು ನಂಬುವವರಿಗೆಲ್ಲಾ ಮತ್ತು ಆತನ ಹೆಜ್ಜೆಗಳಲ್ಲಿ ಹಿಂಬಾಲಿಸುವವರಿಗೂ ಯೇಸುವು ಕುರಿಮರಿಯೂ ಮತ್ತು ಮಹಾಯಾಜಕನೂ ಆದನು.

ದೇವರ ರಕ್ಷಣೆಯ ಮಾರ್ಗದಲ್ಲಿ ಯೇಸುವು ಆತನ ಹೆಜ್ಜೆಗಳನ್ನು ಜಾಗರೂಕನಾಗಿ ಹಿಂಬಾಲಿಸಿದ್ದರಿಂದ ಆತನು ಹೊಸದೇಹದಲ್ಲಿ ತಿರುಗಿ ಹುಟ್ಟಿದನು. ಆಗಿನಿಂದ ಕ್ರಿಸ್ತನ ದೇಹ ಅಸ್ತಿತ್ವದಲ್ಲಿದೆ ಮತ್ತು ಪಾಪದ ಶರೀರದಲ್ಲಿರುವ (ಉಪಮಾನ ಐಗುಪ್ತದ್ದು) ಪಾಪಿಯನ್ನು ಕರ್ತನ ದೇಹದಲ್ಲಿ (ಉಪಮಾನ ಕಾನಾನ ದೇಶದ್ದು) ತಿರಿಗಿ ಹುಟ್ಟಬೇಕೆಂದು ಮತ್ತು ಇನ್ನು ಮೇಲೆ ಪಾಪ ಮಾಡಕೂಡದೆಂದು ಕರೆಯುತ್ತಾನೆ.

ಯೇಸು ನಿಕೋದೇಮನಿಗೆ ಉತ್ತರಿಸುತ್ತಾ, ಯೋಹಾನ 3:3 "ಒಬ್ಬನು ತಿರುಗಿ ಹುಟ್ಟದಿದ್ದರೆ ದೇವರ ರಾಜ್ಯವನ್ನು ಕಾಣಲಾರನು (ಅರ್ಥ ಮಾಡಿಕೊಳ್ಳುವುದು)"

ಯಾಕೆಂದರೆ ಎಲ್ಲಾ ಮಾನವ ಕುಲವು ಪಾಪದ ನ್ಯಾಯಪ್ರಮಾಣದ ಕೆಳಗೆ ಇರುವುದರಿಂದ, ಅವರು ಆತ್ಮದ ನ್ಯಾಯ ಪ್ರಮಾಣದ ಕೆಳಗೆ ಹೊಸದೇಹದಲ್ಲಿ ತಿರಿಗಿ ಹುಟ್ಟಬೇಕು. ಪಾಪದಿಂದ ನಾವು ಬಿಡುಗಡೆ ಹೊಂದಬೇಕಾದರೆ, ಇದೇ ದೇವರು ತೋರಿಸಿರುವ ಮಾರ್ಗ !

ರಕ್ಷಣೆಯ ಮಾದರಿಗೆ ಮೂರು ಹೆಜ್ಜೆಗಳಿವೆ :

1. ಐಗುಪ್ತದಿಂದ ಬಿಡುಗಡೆ ;
2. ಅರಣ್ಯದಲ್ಲಿ ದೇವರಿಗೆ ವಿಧೇಯತೆ ಕಲಿಯುವುದು ; ಮತ್ತು
3. ನಂತರ ಕಾನಾನಿನಲ್ಲಿ ಪ್ರಭುತ್ವ ಮಾಡುವುದು.

ಗಲಾ 1:8,9 "ಆದರೂ ನಾವು ನಿಮಗೆ ಸಾರಿದ ಸುವಾರ್ತೆಯಲ್ಲದೇ ಬೇರೆಯಾವ ಸುವಾರ್ತೆಯನ್ನು ನಾವೇ ಆಗಲೀ ಸ್ವರ್ಗದಿಂದ ಬಂದ ದೂತನೇ ಆಗಲೀ ನಿಮಗೆ ಸಾರಿದರೆ ಅವನು ಶಾಪಗ್ರಸ್ತನಾಗಲಿ. ನೀವು ಸ್ವೀಕರಿಸಿದ ಸುವಾರ್ತೆಯನ್ನಲ್ಲದೇ

ಪಾಪದೊಂದಿಗೆ – ಆತನ ಹೊಸದೇಹದೊಳಗೆ – ಪಾಪವಿಲ್ಲದೆ.

ಒಳ ಮನುಷ್ಯನನ್ನು ಪಾಪದ ದೇಹದಿಂದ ಹೊರಗೆ ತಂದು ಕ್ರಿಸ್ತನ ದೇಹದೊಳಗೆ ಮರು ಸ್ಥಾಪನೆ ಮಾಡದ ಹೊರತು, ಪಾಪದಿಂದ ಬಿಡುಗಡೆ ಮಾಡಲು ಅಸಾಧ್ಯ. ಬೇರೆ ಯಾವ ಬೋಧನೆಯಿಂದಾಗಲೀ, ಮಾರ್ಗದಿಂದಾಗಲೀ ಬೇರಾವ ವ್ಯಕ್ತಿಯನ್ನು ರಕ್ಷಿಸಲು ಅಸಾಧ್ಯ.

**ಐಗುಪ್ತದಲ್ಲಿ ಬಂಧನ :**

ಯೋಸೇಫನಿಂದಾಗಿ, ಯಾಕೋಬನು ಮತ್ತು ಅವನ ಮಕ್ಕಳು ಐಗುಪ್ತದಲ್ಲಿ ವಾಸಿಸಲು ಹೋದರು. ಆಗ ಫರೋಹನನು ಪ್ರಭುತ್ವ ಮಾಡುತ್ತಾ ಇದ್ದನು. ಅಂದರೆ ಯಾಕೋಬನ ಸಂತತಿಯವರೆಲ್ಲರೂ ಐಗುಪ್ತದಲ್ಲಿ ಹುಟ್ಟಿದರು. ಅವರೆಲ್ಲರೂ ಐಗುಪ್ತದ ಯೆಹೂದ್ಯರು. ಆದರೆ ಫರೋಹನನು ಅವರ ಮೇಲೆ ಪ್ರಭುತ್ವ ಮಾಡಿದನು.

ನೋಡಿ ತಿಳಿಯಿರಿ !

ಐಗುಪ್ತ




ಐಗುಪ್ತದಲ್ಲಿ 430 ವರ್ಷಗಳಿದ್ದ ನಂತರ ಅವರಿಗೆ ವಿಗ್ರಹ ಆರಾಧನೆಯೊಂದೇ ತಿಳಿದಿತ್ತು, ಐಗುಪ್ತರ ಮಾದರಿಯಲ್ಲಯೇ ಐಗುಪ್ತರಂತೆಯೇ ಯಹೂದ್ಯರು ತಿಳಿಯದೆ ಅವರ ದೇವರುಗಳನ್ನು ಆರಾಧಿಸಿದರು. ಅವರು ವಿಗ್ರಹಾರಾಧಿಗಳಾಗಿದ್ದರು ; ಅವರು ಐಗುಪ್ತದಿಂದ ಬಿಡುಗಡೆ ಹೊಂದಿದ ಮೇಲೆ ಅವರ ದೇವರ ಗೌರವಾರ್ಥವಾಗಿ ತಕ್ಷಣವೇ ಒಂದು ಬಂಗಾರದ ಬಸವನನ್ನು ಮಾಡಿಕೊಂಡರು.

ಯಹೂದ್ಯರು ಬಲವಿಲ್ಲದವರಾದರು ಮತ್ತು ಐಗುಪ್ತದ ದಾಸತ್ವದಿಂದ ತಮ್ಮನ್ನ ತಾವು ಬಿಡಿಸಿಕೊಳ್ಳಲಾರದೇ ಹೋದರು. ಫರೋಹನನ ಬಂಧನದಿಂದ ಅವರು ತಪ್ಪಿಸಿಕೊಳ್ಳಬೇಕಾದರೆ ದೇವರು ಮಧ್ಯಸ್ಥಿಕೆ ವಹಿಸಬೇಕಾಯಿತು. ಮೋಷೆಯು ದೇವರಿಂದ ಕರೆಯಲ್ಪಟ್ಟನು ಮತ್ತು

ಯಾವನಾದರೂ ಬೇರೆ ಸುವಾರ್ತೆಯನ್ನು ನಿಮಗೆ ಸಾರಿದರೆ, ಅವನು ಶಾಪಗ್ರಸ್ತನಾಗಲಿ ಎಂದು ನಾವು ಮೊದಲು ಹೇಳಿದಂತೆಯೇ ಈಗಲೂ ನಾನು ತಿರಿಗಿ ಹೇಳುತ್ತೇನೆ."

ವಿಮೋ 2:23 "ಹೀಗಾಗಿ ಬಹಳ ದಿನಗಳಾದ ಮೇಲೆ ಐಗುಪ್ತದ ಅರಸನು (ಯೋಸೇಫನ ಅರಿವಿಲ್ಲದವನು) ಸತ್ತನು. ಇಸ್ರಯೇಲ್ ಮಕ್ಕಳು ದಾಸತ್ವದ ಕಾರಣದಿಂದ ನಿಟ್ಟುಸಿರು ಬಿಟ್ಟು ಕೂಗುತ್ತಿದ್ದರು. (ಮತ್ತೊಂದ ಫರೋಹನನ ಕೆಳಗೆ), ದಾಸತ್ವದ ನಿಮಿತ್ತವಾಗಿ ಅವರ ಕೂಗು ದೇವರ ಬಳಿಗೆ ಏರಿ ಬಂತು. (ಐಗುಪ್ತದಲ್ಲಿ)

ಯೇಸುವು ಪಾಪದ ನಿಯಮದ ಕೆಳಗೆ ಇರುವ ದೇಹದಲ್ಲಿ ಹುಟ್ಟಬೇಕಾಗಿ ಬಂತು, ಯಾಕೆಂದರೆ ಐಗುಪ್ತದ ಕೆಳಗಿರುವ ಒಬ್ಬ ಯಹೂದ್ಯನೊಂದಿಗೆ ಪರಸ್ಪರ ಸಂಬಂಧ ತೋರಿಸಿಕೊಳ್ಳಬೇಕಾಯಿತು.

ಇಬ್ರಿ 2:14,17 "ಇದಲ್ಲದೇ ಮಕ್ಕಳು (ಯಹೂದ್ಯರು) ರಕ್ತ ಮಾಂಸಗಳಲ್ಲಿ ಪಾಲುದಾರಾದ್ದರಿಂದ ಆತನು ಸಹ ಅವನಂತೆಯೇ ಆದನು ; ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ನಾಶ ಮಾಡುವುದಕ್ಕೂ...; ಆದ್ದರಿಂದ ಆತನು ಎಲ್ಲವುಗಳಲ್ಲಿ ತನ್ನ ಸಹೋದರರಿಗೆ ಸಮನಾಗಿ ಮಾಡಲ್ಪಟ್ಟನು"

ಐಗುಪ್ತದಲ್ಲಿದ್ದ ಫರೋಹನನಿಗೆ ಗುಲಾಮರಾಗಿದ್ದ ಯಹೂದ್ಯರು ಸೈತಾನನಿಗೆ ಪಾಪದ ದೇಹದಲ್ಲಿ ಗುಲಾಮನಾಗಿರುವ ಒಳ ಮನುಷ್ಯನಿಗೆ ಪರಸ್ಪರ ಹೋಲಿಕೆಯಿದೆ. ಯೇಸು ಕೂಡ ಪಾಪದ ದೇಹದಲ್ಲಿರುವ ಒಬ್ಬ ಯಹೂದ್ಯನಾಗಿದ್ದನು, ಆದರೆ ಮೋಷೆಯು ಐಗುಪ್ತದಲ್ಲಿ ಹೇಗೆ ಫರೋಹನನಿಗೆ ಗುಲಾಮನಾಗಿರಲಿಲ್ಲವೋ ಅಂತೆಯೆ ಯೇಸು ತಾನು ಪಾಪದ ದೇಹದಲ್ಲಿದ್ದರೂ ಸೈತಾನನ ಗುಲಾಮನು ಎಂದಿಗೂ ಆಗಿರಲಿಲ್ಲ.

ಅಪೋ 7:39–41 "ಆದರೆ ನಮ್ಮ ಪಿತೃಗಳು ಅವನ ಮಾತುಗಳಿಗೆ ವಿಧೇಯರಾಗದೆ ಅವನನ್ನು (ದೇವರನ್ನು) ತಳ್ಳಿಬಿಟ್ಟರು. ತಮ್ಮ ಹೃದಯಗಳಲ್ಲಿ (ಆತ್ಮ) ಹಿಂದಕ್ಕೆ ಐಗುಪ್ತದಕಡೆಗೆ ತಿರುಗಿಕೊಂಡು, ಅವರು ಆರೋನನಿಗೆ – ಐಗುಪ್ತದೇಶದಿಂದ ನಮ್ಮನ್ನು ಕರೆದುಕೊಂಡು ಬಂದ ಆ ಮೋಷೆಯು ಏನಾದನೋ ಗೊತ್ತಿಲ್ಲ ; ಆದ್ದರಿಂದ ನಮ್ಮ ಮುಂದೆ ಹೋಗುವುದಕ್ಕೆ ದೇವರುಗಳನ್ನು ನಮಗೆ ಮಾಡಿಕೊಡು ಎಂದು ಹೇಳಿದರು. ಆ ದಿನಗಳಲ್ಲಿ ಅವರು ಒಂದು ಬಸವನನ್ನು ಮಾಡಿ ಆ ವಿಗ್ರಹಕ್ಕೆ ಬಲಿಯನ್ನರ್ಪಿಸಿ, ತಮ್ಮ ಸ್ವಂತ ಕೈಗಳಿಂದ ಮಾಡಿದ ಕೆಲಸಗಳಲ್ಲಿ ಉಲ್ಲಾಸಪಟ್ಟರು (ವಿಮೋ 32:1–8 ನೋಡಿ)"

ಒಳ ಮನುಷ್ಯನ ವಿಷಯವಾಗಿಯೂ ಕೂಡ ಇದು ನಿಜ, ಯಾಕೆಂದರೆ ಅವನು ತನ್ನನ್ನು ತಾನು ಪಾಪದ ದೇಹದಿಂದ ಬಿಡಿಸಿಕೊಳ್ಳಲಾರನು. ಯೇಸು ದೇವರಿಂದ ಕರೆಯಲ್ಪಟ್ಟು ಸೈತಾನನ್ನು ಜಯಿಸಲು ಕಳುಹಿಸಲ್ಪಟ್ಟನು ಮತ್ತು ಒಳ ಮನುಷ್ಯನನ್ನು ಪಾಪದ ದೇಹದಿಂದ ಬಿಡಿಸುವುದಕ್ಕೋಸ್ಕರ, ಅದೇ ರೀತಿಯಲ್ಲಿ ಮೋಷೆಯು ಯೆಹೂದ್ಯರನ್ನು ಐಗುಪ್ತದಿಂದ ಬಿಡಿಸಿದನು.

ಅಪೋ 2:22 "ಇಸ್ರಯೇಲ್ ಜನರೇ ಈ ಮಾತುಗಳನ್ನು ಕೇಳಿರಿ ; ನಿಮಗೂ ತಿಳಿದಿರುವಂತೆ ನಜರೇತಿನ ಯೇಸುವು ದೇವರಿಗೆ ಮೆಚ್ಚಿಕೆಯಾದನೆಂಬುದಕ್ಕೆ ದೇವರು ಆತ್ಮನಿಂದ ಮಹತ್ಕಾರ್ಯಗಳನ್ನೂ ಅದ್ಭುತ ಕಾರ್ಯಗಳನ್ನೂ ಸೂಚಕ ಕಾರ್ಯಗಳನ್ನೂ ನಿಮ್ಮ ಮಧ್ಯದಲ್ಲಿ ನಡೆಸಿದನು..."

ಫರೋಹನನನ್ನು ಜಯಿಸಲು ಕಳುಹಿಸಲ್ಪಟ್ಟನು. ಐಗುಪ್ತದಿಂದ ಅವರನ್ನು ಬಿಡಿಸಲು ದೇವರು ಮೋಷೆಯನ್ನು ಕಳುಹಿಸಿದನು.

ಮೋಷೆಯು ಒಬ್ಬ ಯಹೂದ್ಯನಾಗಿದ್ದಾಗ್ಯೂ, ಅವನನ್ನು ಫರೋಹನನ ಮನೆಯಲ್ಲಿ ಬೆಳೆಸಿದರು. ಅವನ ಸಹ ಯಹೂದ್ಯರಂತೆ ಅವನು ಫರೋಹನನ ಗುಲಾಮನು ಎಂದೂ ಆಗಿರಲಿಲ್ಲ. ಈ ಕಾರಣಗಳಿಂದಾಗಿ ಯಹೂದ್ಯರನ್ನು ಐಗುಪ್ತದಿಂದ ಬಿಡಿಸುವುದಕ್ಕಾಗಿ ಫರೋಹನನಿಗೆ ವಿರುದ್ಧವಾಗಿ ಹೋಗಲು ಕರೆಯಲ್ಪಟ್ಟನು.


**ರಕ್ಷಣೆಯ ಹಂತಗಳು**

**ಮೊದಲನೇ ಹಂತ : ಐಗುಪ್ತದಿಂದ ಬಿಡುಗಡೆ**

ಮೋಷೆಯ ಮೂಲಕ ಮಾಡಿದ ಅನೇಕ ಸೂಚಕ ಕಾರ್ಯಗಳಿಂದ ಮತ್ತು ಅದ್ಭುತ ಕಾರ್ಯಗಳಿಂದ ದೇವರು ಐಗುಪ್ತವನ್ನು ತೀರ್ಪು ಮಾಡಿದನು ಮತ್ತು ಫರೋಹನನ ಚೊಚ್ಚಲ ಮಗನನ್ನು ಕರ್ತನ ದೂತನಿಂದ ಸಂಹರಿಸುವುದರ ಮೂಲಕ ದೇವರು ಅವನ ಪ್ರಭುತ್ವವನ್ನು ಕೊನೆಗಾಣಿಸಿದನು. ಫರೋಹನನನ್ನು ಸೋಲಿಸಿದ ನಂತರ ಮೋಷೆಯು ಯಹೂದ್ಯರನ್ನು ಹೊರದಾಟಿಸಿದನು. ಇಸ್ರಾಯೇಲ್ಯರು ಒಂದೇ ಒಂದು ಮಾಡಬೇಕಾಗಿತ್ತು. ಅದೇನೆಂದರೆ, ಅವರನ್ನು ಬಿಡಿಸುವುದಕ್ಕಾಗಿ ದೇವರು ಮೋಷೆಯನ್ನು ಆರಿಸಿದ್ದನು.

ಎಲ್ಲಾ ಯಹೂದ್ಯರು ಐಗುಪ್ತದಲ್ಲಿ ಹುಟ್ಟಿದ್ದರಿಂದ ಅವರ ಚೊಚ್ಚಲು ಗಂಡು ಮಕ್ಕಳು ಕೂಡ ಸಾಯಬೇಕಿತ್ತು ; ಆದರೆ ಅವರಿಗೆ ಒಂದು ಕುರಿಮರಿಯ ರಕ್ತವು ದೇವರ ಉಗ್ರ ಕೋಪವನ್ನು ತಡೆಯಿತು.

ನೋಡಿ ಕಲಿಯಿರಿ !




ಯಹೂದ್ಯರು ಕೆಂಪು ಸಮುದ್ರವನ್ನು ದಾಟಿದಾಗ, ಅವರು ಐಗುಪ್ತದಿಂದ ಸ್ವತಂತ್ರ್ಯರಾದರು. ಐಗುಪ್ತದಿಂದ ಬೇರ್ಪಡಿಸಿದ

ಇದು ಮೋಷೆಯೊಂದಿಗೆ ಪರಸ್ಪರ ಸಂಬಂಧ ಸೂಚಿಸುತ್ತದೆ. ಅವನಿಂದ ಐಗುಪ್ತದಲ್ಲಿ ಸೂಚಕ ಕಾರ್ಯಗಳೂ ಮತ್ತು ಅದ್ಭುತ ಕಾರ್ಯಗಳೂ ನಡೆದವು.

ಅಪೋ 7:37 "ಮತ್ತು ನಿಮ್ಮ ದೇವರಾದ ಕರ್ತನು ನನ್ನನ್ನು (ಮೋಷೆ) ಎಬ್ಬಿಸಿದಂತೆ ನಿಮ್ಮ ಸಹೋದರರಲ್ಲಿ ಒಬ್ಬ ಪ್ರವಾದಿಯನ್ನು (ಯೇಸು) ನಿಮಗಾಗಿ ಎಬ್ಬಿಸುವನು ; ನೀವು ಆತನ ಮಾತಿಗೆ ಕಿವಿಗೊಡಬೇಕೆಂದು..."

ಯಹೂದ್ಯರ ಮೇಲಿದ್ದ ಫರೋಹನನ ಪ್ರಭುತ್ವವು ಅವನ ಚೊಚ್ಚಲ ಮಗನ ನಾಶದೊಂದಿಗೆ ಕೊನೆಗೊಂಡಿತು. ಅದೇ ರೀತಿಯಾಗಿ ಮೊದಲ ಮಾನವನಾದ ಆದಮನ ದೇಹ ಶಿಲುಬೆಯ ಮೇಲೆ ನಾಶವಾದಾಗ ಸೈತಾನನ ಪ್ರಭುತ್ವ ಕೊನೆಗೊಂಡಿತು.

ಯೇಸು ಸೈತಾನನನ್ನು ಜಯಿಸಿದನು. ಮನುಷ್ಯನು ಮಾಡಬೇಕಾದುದೆಲ್ಲಾ, ದೇವರು ಮಾನವರನ್ನು ಪಾಪದ ದೇಹದಿಂದ ಬಿಡಿಸಲು ಯೇಸು ಕ್ರಿಸ್ತನನ್ನು ಆರಿಸಿದ್ದಾನೆಂದು ನಂಬುವುದೇ.

ಯೇಸು ದೇವರ ಕುರಿಮರಿಯಾದಾತನು. ಎಲ್ಲಾ ಪಾಪಿಗಳಿಂದ ದೇವರ ಉಗ್ರಕೋಪವನ್ನು ತೆಗೆದು ಹಾಕಲು ಆತನು ಯಜ್ಞಾರ್ಪಿತನಾದನು. ಅವರು ಪಾಪದ ದೇಹದಲ್ಲಿದ್ದಾರೆ. ಯಾಕೆಂದರೆ ಅವರ ಪಾಪಗಳಿಗಾಗಿ ಅವರು ಮರಣ ಶಿಕ್ಷೆಗೆ ಅರ್ಹರಾಗಿದ್ದಾರೆ.



ದೇವರು ಮೋಷೆಯನ್ನು ಫರೋಹನನ ಮನೆಯಲ್ಲಿಯೇ ಫರೋಹನನಿಂದ ಹೇಗೆ ಬಚ್ಚಿಟ್ಟನೋ ಅದೇ ರೀತಿಯಲ್ಲಿ ದೇವರು ಯೇಸುವನ್ನು ಸೈತಾನನ ಮನೆಯಲ್ಲಿ ಸೈತಾನನಿಂದ ಬಚ್ಚಿಟ್ಟನು. ಯೇಸುವನ್ನು ಸೈತಾನನಿಗೆ ಒಂದೇ ಸಾರಿ ಪ್ರಕಟ ಮಾಡಲಾಯಿತು. ಆತನು ಬಾಪ್ತಿಸ್ಮ ಹೊಂದಿದನು ಮತ್ತು ಪವಿತ್ರಾತ್ಮನನ್ನು ಸ್ವೀಕರಿಸಿದನು.

ದೇವರು ಯಹೂದ್ಯರನ್ನು ಪಾಪಗಳ ಮನ್ನಣೆಗಾಗಿ ಪಶ್ಚಾತ್ತಾಪ ಪಡಬೇಕಂತಲೂ ಮತ್ತು ಬಾಪ್ತಿಸ್ಮ ಹೊಂದಬೇಕೆಂದಲೂ ಕರೆದಾಗ ಸ್ನಾನೀಕನಾದ ಯೋಹಾನನು ಅರಣ್ಯದಲ್ಲಿದ್ದನು. ಈ ಮಾದರಿಯನ್ನು ಯೇಸು ಅರ್ಥ ಮಾಡಿಕೊಂಡವನಾಗಿ ಬಾಪ್ತಿಸ್ಮ ಹೊಂದಲು ಹೋದನು. ಆತನ ನೀರಿನ ದೀಕ್ಷಾ ಸ್ನಾನ ಕೆಂಪು ಸಮುದ್ರದೊಂದಿಗೆ ಪರಸ್ಪರ ಸಂಬಂಧ ಸೂಚಿಸುತ್ತದೆ. ಮತ್ತು ಆದುದರಿಂದಲೇ ಪವಿತ್ರಾತ್ಮನು ಆತನ ಮೇಲೆ ಬಂದನು. ಅದೇ ರೀತಿಯಲ್ಲಿ ಮೋಡವು ಮೋಷೆಯ ಮೇಲೆಯೂ ಮತ್ತು ಯಹೂದ್ಯರ ಮೇಲೆಯೂ ಬಂತು.

ಲುಕ 3:21,22 "... ಯೇಸು ಸಹಾ ಬಾಪ್ತಿಸ್ಮ ಮಾಡಿಸಿಕೊಂಡು ಪ್ರಾರ್ಥಿಸುತ್ತಿದ್ದಾಗ ಆಕಾಶವು ತೆರೆಯಲ್ಪಟ್ಟಿತು. ಆಗ ಪರಿಶುದ್ಧಾತ್ಮನು ಪಾರಿವಾಳದ ದೇಹಾಕಾರದಲ್ಲಿ ಆತನ ಮೇಲೆ ಇಳಿದನು. ಮತ್ತು ನೀನು ಪ್ರಿಯನಾಗಿರುವ ನನ್ನ ಮಗನು ನಿನ್ನಲ್ಲಿ ನಾನು ಆನಂದಿಸುತ್ತೇನೆ, ಎಂಬ ಧ್ವನಿಯು ಸ್ವರ್ಗದೊಳಗಿನಿಂದ ಬಂತು."


ಯೇಸು ಆಗ ಇತರ ಯಹೂದ್ಯರಂತೆ ಅಕ್ಷರದ ನ್ಯಾಯ ಪ್ರಮಾಣದ ಕೆಳಗಿರಲಿಲ್ಲ. ಆತ ಆತ್ಮದ ನ್ಯಾಯ ಪ್ರಮಾಣದ ಕೆಳಗಿದ್ದನು.

ಕೂಡಲೇ ಯಹೂದ್ಯರು ಸಿನ್ ಅರಣ್ಯದಲ್ಲಿ ದೇವರ ನ್ಯಾಯ ಪ್ರಮಾಣದ ಮೇಲೆ ಬಂದರು. ಮೋಷೆಯಲ್ಲಿ (ನ್ಯಾಯ ಪ್ರಮಾಣ) ಅವರು ಬಾಪ್ತಿಸ್ಮ ಹೊಂದಿದರು ; ಸಮುದ್ರದಲ್ಲಿ (ನೀರು) ಮತ್ತು ಮೋಡದಲ್ಲಿ (ಆತ್ಮ)

**ಎರಡನೇ ಹಂತ : ಅರಣ್ಯದಲ್ಲಿ ಪರಿಶುದ್ಧರಾಗುವಿಕೆ.**

ಆಗ ಯೆಹೂದ್ಯರು ತಮ್ಮೊಳಗೇ ಎರಡು ವಿಧವಾದ ಯಹೂದ್ಯರನ್ನು ಕಂಡುಕೊಂಡರು ಒಂದು ಕಡೆ ಐಗುಪ್ತದ – ಯಹೂದ್ಯರು ; ಇವರು ಐಗುಪ್ತದಲ್ಲಿ ಹುಟ್ಟಿ ಐಗುಪ್ತದ ನಿಯಮದ ಕೆಳಗೆ ಇದ್ದರು. ಇನ್ನೊಂದು ಕಡೆ ದೇವರ ನಿಯಮದ ಕೆಳಗೆ ಹುಟ್ಟಿದ ಯಹೂದ್ಯರು. ಇವರು ಅರಣ್ಯದಲ್ಲಿ ಹುಟ್ಟಿದವರು. ಐಗುಪ್ತದಲ್ಲಿ ಹುಟ್ಟಿದ ಯೆಹೂದ್ಯರು ದೇವರಿಗೆ ವಿಧೇಯರಾಗಿರಲು ಸಾಧ್ಯವಾಗಿರಲಿಲ್ಲ, ಯಾಕೆಂದರೆ ಅವರು ಐಗುಪ್ತದ ಮಾರ್ಗದಲ್ಲಿ ನೆಲೆಗೊಂಡಿದ್ದರು. ಯಹೋದ್ಯರ ಹೊಸ ಸಂತತಿಗೆ ವಿಗ್ರಹಾರಾಧನೆಯ ಬಗ್ಗೆ ತಿಳುವಳಿಕೆ ಇರಲಿಲ್ಲ, ಆದುದರಿಂದ ಹಳೆಯ ಸಂತತಿಯವರ ಹಾಗೆ ವಿಗ್ರಹಾರಾಧಿಗಳಾಗಿರಲಿಲ್ಲ.

ನೋಡಿ ಕಲಿಯಿರಿ !





**ಸಿನ್ ಅರಣ್ಯ**

ಹಳೆ ಸಂತತಿ ಕಾನಾನ್ ದೇಶದೊಳಕ್ಕೆ ಪ್ರವೇಶಿಸಲು ದೇವರ ಆಜ್ಞೆಗೆ ಅವಿಧೇಯರಾದರು. ಮತ್ತು ಹೀಗೆ ಹೇಳಿದರು "ನಾವು ಅಸಮರ್ಥರು", ಆದುದರಿಂದ ಅವರ ಅಪನಂಬಿಕೆಯ ನಿಮಿತ್ತ ದೇವರು ಅವರನ್ನು ನಿರಾಕರಿಸಿದನು. ದೇವರು ವಿಧೇಯತೆಯನ್ನು ಅಪೇಕ್ಷಿಸುವುದರಿಂದ, ಅವಿಧೇಯರಾದ ಐಗುಪ್ತದ ಯೆಹೂದ್ಯರು ಸಾಯುವುದಕ್ಕೆ ಮುಂಚೆ ಹೊಸ ಸಂತತಿ ಕಾನಾನ್ ದೇಶವನ್ನು ಪ್ರವೇಶಿಸುವದು ಅಸಾಧ್ಯವಾಯಿತು. ಐಗುಪ್ತದಿಂದ ಹೊರಬಂದ ಯಹೂದ್ಯರೆಲ್ಲರಿಗಿಂತ, ಯೆಹೋಷುವ ಮತ್ತು ಕೇಲೇಬರು ವಿಧೇಯತೆಯಿಂದ ಹೇಳಿದ್ದು, "ನಾವು ಪ್ರವೇಶಿಸಲು ಸಮರ್ಥರು," ಯಾಕೆಂದರೆ ಅವರು ಭಯಪಡಲಿಲ್ಲ. ಅವರು ದೇವರ ಆಜ್ಞೆಯನ್ನು

1 ಕೊರಿ 10:1,2 "...ನೀವು ಈ ವಿಷಯಗಳನ್ನು ಅರಿಯದವರಾಗಿರಬಾರದೆಂದು ನನ್ನ ಅಪೇಕ್ಷೆಯಲ್ಲ ; ಅದೇನೆಂದರೆ ನಮ್ಮ ಪಿತೃಗಳೆಲ್ಲರೂ ಮೇಘದ ಕೆಳಗೆ ಇದ್ದು, ಸಮುದ್ರವನ್ನು ದಾಟಿದರು ; ಅವರೆಲ್ಲರೂ ಮೋಷೆಗಾಗಿ ಮೇಘದಲ್ಲಿಯೂ ಬಾಪ್ತಿಸ್ಮಾ ಹೊಂದಿದರು ;"

ಇಬ್ರಿ 3:16–19 "ಯಾಕೆಂದರೆ ಕೆಲವರು ಆತನು ನುಡಿದದನ್ನು ಕೇಳಿದಾಗ ಕೋಪವನ್ನೆಬ್ಬಿಸಿದರು ; ಆದಾಗ್ಯೂ ಮೋಷೆಯ ಮೂಲಕ ಐಗುಪ್ತದಿಂದ ಬಂದವರೆಲ್ಲರೂ ಅಲ್ಲ. ಆದರೆ ನಲವತ್ತು ವರ್ಷ ಆತನು ಯಾರಮೇಲೆ ಸಂತಾಪಗೊಂಡನು ? ಪಾಪ ಮಾಡಿದವರ ಮೇಲೆ ಅಲ್ಲವೇ ? ಅವರ ಶವಗಳು ಅರಣ್ಯದಲ್ಲಿ ಬಿದ್ದವಲ್ಲಾ ?ತನ್ನ ವಿಶ್ರಾಂತಿಯಲ್ಲಿ ಸೇರುವುದೇ ಇಲ್ಲವೆಂದು ಯಾರನ್ನು ಕುರಿತು ಆತನು ಪ್ರಮಾಣ ಮಾಡಿದನು ? ನಂಬದವರ ವಿಷಯವಾಗಿ ಅಲ್ಲವೇ ?ಅವರು ಸೇರಲಾರದೆ ಹೋದದ್ದು ಅಪನಂಬಿಕೆ ಇಂದಲೇ ಎಂದು ತಿಳಿದುಕೊಳ್ಳುತ್ತೇವೆ.

ಸಂಖ್ಯಾ 14:23, 24 "ನಾನು ಅವನ ಪಿತೃಗಳಿಗೆ ಪ್ರಮಾಣ ಮಾಡಿದ ದೇಶವನ್ನು ನಿಶ್ಚಯವಾಗಿ ಅವರು ನೋಡುವುದಿಲ್ಲ. ನನ್ನನ್ನು ಅಲಕ್ಷ್ಯ ಮಾಡಿದವರೆಲ್ಲರೂ ಸಹಾ ಅದನ್ನು ನೋಡುವುದಿಲ್ಲ. ಆದರೆ ನನ್ನ ಸೇವಕನಾದ ಕಾಲೇಬನಲ್ಲಿ ಬೇರೆ ಆತ್ಮ ಇದ್ದದರಿಂದಲೂ ಅವನು ನನ್ನನ್ನು ಸಂಪೂರ್ಣವಾಗಿ ಹಿಂಬಾಲಿಸಿದ್ದರಿಂದಲೂ ಅವನು ಪ್ರವೇಶಿಸಿದ ದೇಶಕ್ಕೆ ಅವನನ್ನು ತರುವೆನು ; ಅವನ ಸಂತಾನವು ಅದನ್ನು ಸ್ವತಂತ್ರಿಸಿಕೊಳ್ಳುವುದು."




ಪವಿತ್ರಾತ್ಮನು ಯೇಸುವನ್ನು ಸೈತಾನನಿಂದ ಶೋಧಿಸಲ್ಪಡುವುದಕ್ಕಾಗಿ ಅರಣ್ಯದಲ್ಲಿ ನಡೆಸಿದನು.

ಮಾರ್ಕ 1:13 "ಆತನು 40 ದಿವಸ, ಅಡವಿಯಲ್ಲಿ ಸೈತಾನನಿಂದ ಶೋಧಿಸಲ್ಪಡುತ್ತಾ ಕಾಡು ಮೃಗಗಳೊಂದಿಗೆ ಇದ್ದನು ;"

ಸೈತಾನನು ಆದಾಮ ಮತ್ತು ಹವ್ವರನ್ನು ಶೋಧಿಸಿ ದೇವರ ವಾಕ್ಯವನ್ನು ಉಲ್ಲಂಘಿಸುವಂತೆ ಮಾಡಿದನು. ಆದರೆ, ಯೇಸುವಿಗೆ ಗೊತ್ತಿತ್ತು, ಆತನು ಸೈತಾನನಿಗೆ ವಿಧೇಯನಾಗಿದ್ದರೆ, ಆತನೂ ಕೂಡ ಬೇರೆ ಯಹೂದ್ಯರಂತೆ ಪಾಪಕ್ಕೆ ಗುಲಾಮನಾಗುತ್ತಿದ್ದನು.

ಐಗುಪ್ತದ ಯೆಹೂದ್ಯರು ದೇವರನ್ನು ಅರಣ್ಯದಲ್ಲಿ ಶೋಧಿಸಿದಂತೆಯೇ ಸೈತಾನನು ಯೇಸುವನ್ನು ಶೋಧಿಸಿದನು. ಯೆಹೂದ್ಯರು ಬಂಗಾರದ ಬಸವನನ್ನು ಆರಾಧಿಸಿದಾಗ ಆತ್ಮನಲ್ಲಿ ದೇವರನ್ನು ಆರಾಧಿಸಿದರು. ಅವರ ಅವಿಧೇಯತೆಯಿಂದ ಪ್ರಾಣದಲ್ಲಿ ಮತ್ತು ಆಹಾರ ಮತ್ತು ನೀರುಗಳ ದೆಸೆಯಿಂದ ದೇಹದಲ್ಲಿ ದೇವರನ್ನು ಶೋಧಿಸಿದರು.

ಇಬ್ರಿ 3:9 "ನಿಮ್ಮ ಪಿತೃಗಳು ನನ್ನನ್ನು ಶೋಧಿಸಿದರು, ನನ್ನನ್ನು ಪರೀಕ್ಷಿಸಿದರು ಮತ್ತು 40 ವರ್ಷ ನನ್ನ ಕಾರ್ಯಗಳನ್ನು ನೋಡಿದರು"

ಅದೇ ರೀತಿಯಾಗಿ ಯೇಸು ಕೂಡ ದೇಹದಲ್ಲಿ ಶೋಧಿಸಲ್ಪಟ್ಟನು (ಹಸಿವೆಯಾಗಿದ್ದಾಗ), ಪ್ರಾಣದಲ್ಲಿ (ದೇವರಿಗೆ ಅವಿಧೇಯನಾಗಲು) ಆತ್ಮದಲ್ಲಿ (ಸೈತಾನನ್ನು ಆರಾಧಿಸುವಲ್ಲಿ). ಯೇಸು ಪಾಪ ಮಾಡಲಿಲ್ಲವಾದ್ದರಿಂದ ಪವಿತ್ರಾತ್ಮನ ಶಕ್ತಿಯನ್ನು ಹೊಂದಿದನು. (ಲೂಕ 4:1–13)

ಲೂಕ 4:14 "ತರುವಾಯ ಯೇಸು ಆತ್ಮನ ಬಲದಲ್ಲಿ ಗಲಿಲಾಯಕ್ಕೆ ಹಿಂತಿರುಗಿದನು..."


ಪರಿಪಾಲಿಸಿದರು, ವಾಗ್ದಾನದ ದೇಶವನ್ನು ಪ್ರವೇಶಿಸಿದರು, ಯಾಕೆಂದರೆ ಅವರು ಸಹ ಯಹೂದ್ಯರಂತೆ ಅವರಿಗೆ ವಿಗ್ರಹಾರಾಧನೆಯ ಆತ್ಮ ಇರಲಿಲ್ಲ. ದೇವರಿಗೆ ವಿಧೇಯ ರಾಗುವವರನ್ನು, ಅಂದರೆ ಆತನಲ್ಲಿ ನಂಬಿಕೆ ಇಟ್ಟು ವಿಧೇಯರಾಗಿ ನಡೆಯುವ ಯಹೂದ್ಯರಿಗೂ ಮತ್ತು ಅನ್ಯರಿಗೂ ತನ್ನ ವಾಗ್ದಾನಕ್ಕೆ ನಂಬಿಗಸ್ತನಾಗಿರುವನೆಂದೂ ಸಾಬೀತು ಪಡಿಸುತ್ತದೆ.

ನಲವತ್ತು (40) ವರ್ಷ ಅರಣ್ಯಕಾಲದಲ್ಲಿ ದೇವರ ನಿಯಮದ ಕೆಳಗೆ, ಯೆಹೂದ್ಯರ ಬುದ್ಧಿ ಬದಲಾಯಿತು. ವಾಗ್ದಾನದ ದೇಶವನ್ನು ಪ್ರವೇಶಿಸಿದ ಯಹೂದ್ಯರಿಗೆ, ಐಗುಪ್ತದಿಂದ ಹೊರಬಂದ ಯಹೂದ್ಯರಿಗಿಂತಾ ಬೇರೆ ಬುದ್ಧಿ ಇತ್ತು. ಕಾನಾನನ್ನು ಪ್ರವೇಷಸಿದ ಜನರು ಪರಿಶುದ್ಧರಾಗಿದ್ದರು. ಯಾಕೆಂದರೆ ಅಪನಂಬಿಕೆಯುಳ್ಳ ಐಗುಪ್ತದ ಯಹೂದ್ಯರು ತೆಗೆದುಹಾಕಲ್ಪಟ್ಟವರಾಗಿದ್ದರು. ನ್ಯಾಯ ತೀರ್ಪು ಹಳೆಯ ಸಂತಾನದ ಮೇಲೆ ಬಂತು. ಅವರು ಯೋರ್ದಾನ್ ಹೊಳೆಯನ್ನು ದಾಟುವುದರಲ್ಲಿ ದೇವರ ಆಜ್ಞೆಯನ್ನು ಉಲ್ಲಂಘಿಸಿದರು. ಅವರು ದೇವರಿಗಿಂತ ಮರಣಕ್ಕೆ ಭಯ ಪಟ್ಟದ್ದರಿಂದ ಆತನಿಗೆ ಅವಿಧೇಯರಾದರು, ಯೋರ್ದಾನ್ ಹೊಳೆಯು ಒಂದು ಮರಣದ ಹೊಳೆ. ಯಾಕೆಂದರೆ ಅವಿಧೇಯತೆ ಯುಳ್ಳವರು ಈ ಸ್ಥಳದಲ್ಲಿಯೇ ನಿರಾಕರಿಸಲ್ಪಟ್ಟರು. ಯೋರ್ದಾನ್ ಹೊಳೆಯು ವಿಶ್ವಾಸಿಗಳನ್ನು ಅವಿಶ್ವಾಸಿಗಳಿಂದ ಬೇರ್ಪಡಿಸಿತು.

**ಮೂರನೆಯ ಹಂತ : ಪರಿಶುದ್ಧ ದೇಶ**

ದೇವರ ನ್ಯಾಯ ಪ್ರಮಾಣವು ಯೆಹೂದ್ಯರಿಗೆ ಕೊಡಲ್ಪಟ್ಟಿದ್ದರಿಂದ ಮತ್ತು ಹಳೆಯ ಭಕ್ತಿ ಹೀನ ಸಂತತಿಯು ತೆಗೆದು ಹಾಕಲ್ಪಟ್ಟಿದ್ದರಿಂದ, ಅವರು ಒಂದು ಪರಿಶುದ್ಧ ದೇಶವಾಗಿದ್ದರು. ಯೆಹೂದ್ಯರು ಈಗ ಪರಿಶುದ್ಧರಾಗಿದ್ದರು, ಯಾಕೆಂದರೆ ಕೆಂಪು ಸಮುದ್ರದ ಬಳಿ ಅವರು ಐಗುಪ್ತದಿಂದ ಸ್ವತಂತ್ರರಾದರು ಮತ್ತು ಸಿನ್ ಅರಣ್ಯದಲ್ಲಿ ವಿಗ್ರಹಾರಾಧಕ ಐಗುಪ್ತದ - ಯೆಹೂದ್ಯರು ತೆಗೆದುಹಾಕಲ್ಪಟ್ಟರು.

ನೋಡಿ ಕಲಿಯಿರಿ !




ಮೋಷೆಯು "ನಾವು ಪ್ರವೇಶಿಸಲಾರೆವು" ಎಂದು ಹೇಳಿದ ಯೆಹೂದ್ಯರಿಗಾಗಿ ಪ್ರಾರ್ಥಿಸಿ ದೇವರಲ್ಲಿ ಕ್ಷಮಾಪಣೆ ಬೇಡಿದನು.
ಸಂಖ್ಯಾ 14:20,21,23 "ಆಗ ಕರ್ತನು ನಿನ್ನ ಮಾತಿನ ಪ್ರಕಾರ ಮನ್ನಿಸಿದ್ದೇನೆ, ಆದರೆ ನನ್ನ ಜೀವದಾಣೆ ... ನಾನು ಅವರ ಪಿತೃಗಳಿಗೆ ಪ್ರಮಾಣ ಮಾಡಿದ ದೇಶವನ್ನು ನಿಶ್ಚಯವಾಗಿ ಅವರು ನೋಡುವುದಿಲ್ಲ, ನನ್ನನ್ನು ಅಲಕ್ಷ ಮಾಡಿದವರೆಲ್ಲರೂ (ಐಗುಪ್ತದ-ಯೆಹೂದ್ಯರು) ಸಹ ಅದನ್ನು ನೋಡುವುದಿಲ್ಲ.

ರೋಮ 2:28,29 "ಯಾಕೆಂದರೆ ಹೊರಗೆ ಯೆಹೂದ್ಯನಾಗಿರುವವನು ಯೆಹೂದ್ಯನಲ್ಲ ಮತ್ತು ಹೊರಗೆ ಶರೀರದಲ್ಲಿ ಮಾಡಿದ ಸುನ್ನತಿಯು ಸುನ್ನತಿಯಲ್ಲ. ಆದರೆ ಒಳಗೆ ಯೆಹೂದ್ಯನಾಗಿರುವವನೇ ಯೆಹೂದ್ಯನು;ಸುನ್ನತಿಯು ಹೃದಯಕ್ಕೆ ಸಂಬಂಧಪಟ್ಟದ್ದಾಗಿ ಅಕ್ಷರೀಕವಾಗಿರದೇ (ನ್ಯಾಯ ಪ್ರಮಾಣದ), ಆತ್ಮೀಕವಾದದ್ದೇ ಆಗಿದೆ. ಹೀಗೆ ಅವನ ಹೊಗಳಿಕೆಯು ಮನುಷ್ಯರಿಂದಾಗಿರದೇ, ದೇವರಿಂದಲೇ ಆಗಿರುವುದು."

ಇಬ್ರಿ 4:1–3 "ಹೀಗಿರಲಾಗಿ ಆತನ ವಿಶ್ರಾಂತಿಯಲ್ಲಿ ಸೇರುವೆವೆಂಬ ವಾಗ್ದಾನವು ಇನ್ನೂ ಇರುವಲ್ಲಿ ನಿಮ್ಮೊಳಗೆ ಯಾವನಾದರೂ ಅದರಿಂದ ತಪ್ಪುವವನಾದನೋ ಎಂದು ಭಯಪಡೋಣ, ಯಾಕೆಂದರೆ, ಅವರಿಗೆ ಸುವಾರ್ತೆಯು ಸಾರೋಣವಾದಂತೆಯೇ ನಮಗೂ ಸಾರೋಣವಾಯಿತು ; ಆದರೆ ಕೇಳಿದವರು ನಂಬಲಿಲ್ಲವಾದ ಕಾರಣ ಸಾರಿದ ಆ ವಾಕ್ಯದಿಂದ ಅವರಿಗೆ ಪ್ರಯೋಜನವಾಗಲಿಲ್ಲ. ಲೋಕದ ಅಸ್ತಿವಾರದಿಂದ (ಆತನ) ಕೆಲಸಗಳು ಮುಗಿದಿದ್ದರೂ ಆತನು ಅವರು ನನ್ನ ವಿಶ್ರಾಂತಿಯಲ್ಲಿ ಸೇರುವುದೇ ಇಲ್ಲವೆಂದು ನಾನು ಕೋಪದಿಂದ ಪ್ರಮಾಣ ಮಾಡಿದೆನು ಎಂದು ಹೇಳಿದನು. ನಂಬಿರುವ ನಾವೇ ಆ ವಿಶ್ರಾಂತಿಯಲ್ಲಿ ಪ್ರವೇಶಿಸುತ್ತೇವೆ."

ಸ್ನಾನೀಕನಾದ ಯೋಹಾನನು ದೇವರ ಸುವಾರ್ತೆಯನ್ನು ಸಾರಿದಾಗ ಯಹೂದ್ಯರನ್ನು ಅರಣ್ಯದೊಳಗೆ ಕರೆದು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಟ್ಟು, ಯೋರ್ದಾನ್ ಹೊಳೆಯಲ್ಲಿ ಬಾಪ್ತಿಸ್ಮಾ ಹೊಂದಬೇಕೆಂದು ಅವರನ್ನು ಕರೆದನು. ಯೋಹಾನನು ನಂತರ ಯೆಹೂದ್ಯರಿಗೆ ಆಜ್ಞಾಪಿಸಿ ಬಾಪ್ತಿಸ್ಮಾ ಹೊಂದಿದ ನೀವು ಇನ್ನು ಮೇಲೆ ಪಾಪ ಮಾಡಬೇಡಿರೆಂದು ಹೇಳಿ ಕಳುಹಿಸಿದನು. ಯೇಸು ಕೂಡ ಯೋರ್ದಾನಿನಲ್ಲಿ ಬಾಪ್ತಿಸ್ಮಾ ಹೊಂದಿದನು. ಆದರೆ ಆಗ ಆತನೊಬ್ಬನೇ ಪಾಪವಿಲ್ಲದ ಜೀವಿತವನ್ನು ಜೀವಿಸಿದ ಯೆಹೂದ್ಯನಾಗಿದ್ದುದ್ದರಿಂದ ದೇವರು ಆತನನ್ನು ಅಮರತ್ವದ ದೇಹದಲ್ಲಿ ಎಬ್ಬಿಸಿದನು.

ಯೆಹೂದ್ಯರು ಯೋರ್ದಾನನ್ನು ದಾಟಿದ ನಂತರ ದೇವರು ಅವರಿಗೆ ಎರಡನೇ ಸಾರಿ ಸುನ್ನತಿ ಹೊಂದಬೇಕೆಂದು ಆಜ್ಞಾಪಿಸಿದನು. ಇದು ಐಗುಪ್ತದ – ಯೆಹೂದ್ಯರು ಅವರಿಂದ ತೆಗೆಯಲ್ಪಟ್ಟರು ಎಂಬದಕ್ಕೆ ಒಂದು ಚಿಹ್ನೆಯಾಗಿತ್ತು, ಅಥವಾ ಅವರು ಅಂತಿಮದಲ್ಲಿ ಐಗುಪ್ತದಿಂದ ಶುದ್ಧೀಕರಿಸಲ್ಪಟ್ಟು ಭಕ್ತಿಹೀನರಾದ ಐಗುಪ್ತದ ಯೆಹೂದ್ಯರಿಂದ ಬೇರ್ಪಟ್ಟರು.
ಯಹೋ 5:9 "...ಮತ್ತು ಕರ್ತನು ಯೆಹೋಶುವನಿಗೆ –ಈ ದಿನ ಐಗುಪ್ತದ ನಿಂದೆಯನ್ನು ನಿಮ್ಮಿಂದ ನಿವಾರಿಸಿಬಿಟ್ಟಿದ್ದೇನೆ ಎಂದನು."

ಮತ್ತಾ 20:16 "...ಹೀಗೆ ಕಡೆಯವರು ಮೊದಲನೆಯವರಾಗುವರು ; ಮೊದಲನೆಯವರು ಕಡೆಯವರಾಗುವರು. ಯಾಕೆಂದರೆ ಕರೆಯಲ್ಪಟ್ಟವರು ಅನೇಕರು ; ಆದರೆ ಆಯಲ್ಪಟ್ಟವರು ಸ್ವಲ್ಪ ಜನ..."
ಎಲ್ಲಾ ಯೆಹೂದ್ಯರು ಐಗುಪ್ತದಿಂದ ಹೊರಗೆ ಕರೆಯಲ್ಪಟ್ಟದ್ದರು, ಆದರೆ ಪರಿಶುದ್ಧತೆ ಹೊಂದಿದ ಕೆಲವೇ ಜನ ಕಾನಾನ್ ಪ್ರವೇಶಕ್ಕೆ ಆಯಲ್ಪಟ್ಟರು.

ಕಾನಾನಿನ ರಾಜರುಗಳ ಮೇಲೆ ಯೆಹೋಶುವನಿಗೆ ಸಿಕ್ಕ ಗೆಲುವು ಯೆಹೂದ್ಯರಿಗೆ ದೇಶದ ಮೇಲೆ ನಿಯಂತ್ರಣವನ್ನು ಕೊಟ್ಟಿತು. ದೇವರಿಗೆ ಒಂದೇ ಒಂದು ಅವಶ್ಯವಾಗಿದ್ದದ್ದು ಏನೆಂದರೆ, ದೇಶದಲ್ಲಿ ಯೆಹೂದ್ಯರು ಪ್ರಭುತ್ವವನ್ನು ನಡೆಸಿ ದೇವರ ನ್ಯಾಯ ಪ್ರಮಾಣವನ್ನು ಅನುಸರಿಸಬೇಕೆಂಬದೆ. ನ್ಯಾಯ ಪ್ರಮಾಣವು ಅವರನ್ನು ವಿಗ್ರಹಾರಾಧನೆಯೊಂದಿಗೆ ಅನ್ಯೋನ್ಯತೆಯನ್ನು ನಿಷೇಧಿಸಬೇಕೆಂದು ಹೇಳಿದ್ದರಿಂದ ಅವರು ಎಲ್ಲಾ ವಿಗ್ರಹಾರಾಧಕರನ್ನು ಸಂಹರಿಸಬೇಕಾಯಿತು.

ದೇವರು ನ್ಯಾಯ ಪ್ರಮಾಣದ ಕೆಳಗೆ ಹುಟ್ಟಿ ಬೆಳೆದ ಒಂದೇ ದೇಶ ಯೆಹೂದ್ಯರದೊಂದೆ. ಆದುದರಿಂದ ಪ್ರಪಂಚದ ಎಲ್ಲಾ ದೇಶಗಳಿಗಿಂತ ಬೇರೆಯ ಸ್ವಭಾವವಿತ್ತು. ಯೂದಾಯ ಮತದಲ್ಲಿ ಬೆಳೆದದ್ದರಿಂದ ಪ್ರಪಂಚದ ಉಳಿದ ಮತಗಳಂತೆ ಅವರು ಬೇರೆ ದೇವರುಗಳನ್ನು ಸೇವಿಸಲಿಲ್ಲ.

ಯೆಹೂದ್ಯರು ಅರಣ್ಯದಲ್ಲಾದ ವಿಗ್ರಹಾರಾಧನೆಯಿಂದ ಶುದ್ಧ ಮಾಡಲ್ಪಟ್ಟವರಾದ್ದರಿಂದ ಅವರು ತಮ್ಮನ್ನು ತಾವು ಶುದ್ಧವಾಗಿಟ್ಟುಕೊಳ್ಳಬೇಕಾಗಿತ್ತು ಮತ್ತು ತಿರಿಗಿ ಅವರು ವಿಗ್ರಹಗಳಿಗೆ ಸೇವಿಸುವಂತಿರಲಿಲ್ಲ. ಅವರ ಪಿತೃಗಳು ಹೀಗಾಗಿದ್ದರು. ಹೇಗಾದರೂ ಅವರು ವಿಗ್ರಹಾರಾಧಿಗಳನ್ನು ಸಂಹರಿಸಲಿಲ್ಲ. ಆದರೆ, ಅವರನ್ನು ಗುಲಾಮರನ್ನಾಗಿಸಿ ಮತ್ತು ತಮ್ಮ ಮಧ್ಯೆ ನಿವಸಿಸಲು ಅನುಮತಿಸಿದರು. ಕಾಲಕ್ರಮೇಣ ಅವರು ತಿರಿಗಿ ವಿಗ್ರಹಾರಾದಿಗಳಾದರು.

ದೇವರಿಗೆ ಅವಿಧೇಯರಾದದ್ದರಿಂದ ಅವರು ತಮ್ಮ ದೇಶವನ್ನು ಕಳೆದುಕೊಂಡರು, ಯಾಕೆಂದರೆ ದೇವರು ಕೊಟ್ಟ ಆ ದೇಶಕ್ಕೆ ಅವರು ಅನರ್ಹರಾಗಿದ್ದರು.

ಯೇಸು ಬರುವವರೆವಿಗೆ ಯೆಹೂದ್ಯರೊಂದಿಗೆ ದೇವರ ಎಲ್ಲಾ ವ್ಯವಹಾರಗಳಲ್ಲಿ ಮಿಕ್ಕ ಸ್ವಲ್ಪ ಜನ ಮಾತ್ರ ರಕ್ಷಿಸಲ್ಪಟ್ಟಿತು, ಯಾಕೆಂದರೆ ಅವರು ದೇವರಿಗೆ ವಿಧೇಯರಾಗಿ ಉಳಿದರು. ಈ ಉಳಿದ ಅಲ್ಪ ಯೆಹೂದ್ಯರೇ ಪರಲೋಕದ ಕಾನಾನಿಗೆ ಬಾಧ್ಯರಾದರು. ಹೊಸ ಪ್ರಪಂಚದಲ್ಲಿ ಇಸ್ರಾಯೇಲ್ಯರು ತಮ್ಮ ಶಾಶ್ವತ ನಿಲಯವನ್ನು ಕಂಡುಕೊಳ್ಳುತ್ತಾರೆ.




ಯೆಹೋಷುವನು ಪ್ರತಿ ಕೋಟೆಯನ್ನು ಜಯಿಸಿ ಕಾನಾನ್ ದೇಶವನ್ನು ಹೇಗೆ ಆಕ್ರಮಿಸಿದನೋ, ಅಂತೆಯೇ ಯೇಸು ಕೂಡ ದೇಹದಲ್ಲಿನ ಪ್ರತಿಯೊಂದು ಪಾಪವನ್ನು ಜಯಿಸಿದನು ಮತ್ತು ದೇಹವನ್ನು ಆಕ್ರಮಿಸಿದನು.

ಕಾನಾನ್ ದೇಶವನ್ನು ದೇವರ ನ್ಯಾಯ ಪ್ರಮಾಣದ ಕೆಳಗೆ ಹೇಗೆ ತೆಗೆದುಕೊಂಡು ಬಂದರೋ ಹಾಗೆಯೇ ಪಾಪದ ನ್ಯಾಯ ಪ್ರಮಾಣದ ಕೆಳಗಿದ್ದ ದೇಹವನ್ನು ಆತ್ಮದ ನ್ಯಾಯ ಪ್ರಮಾಣದ ಕೆಳಗೆ ತರಲಾಯಿತು ; ಹೀಗೆ ಪಾಪದ ದೇಹ ಕರ್ತನ ದೇಹವಾಯಿತು – ಕ್ರಿಸ್ತನ ದೇಹ

ರೋಮ 8:3 "ನ್ಯಾಯ ಪ್ರಮಾಣವು ಶರೀರದ ಮೂಲಕ ನಿರ್ಬಲವಾಗಿ ಯಾವುದನ್ನು ಮಾಡದೇ ಇತ್ತೋ ಅದನ್ನು ದೇವರೇ ಮಾಡಿದನು ; ಹೇಗೆಂದರೆ ಆತನು ತನ್ನ ಸ್ವಂತ ಮಗನನ್ನು ಪಾಪ ಶರೀರದ ಹೋಲಿಕೆಯಲ್ಲಿ ಕಳುಹಿಸಿ, ಪಾಪಕ್ಕಾಗಿ ಆ ಶರೀರದಲ್ಲಿಯೇ ಪಾಪವನ್ನು ದಂಡಿಸಿದನು.

ಯೇಸುವು ಸತ್ತವರೊಳಗಿನಿಂದ ಹೊಸ ದೇಹದಲ್ಲಿ ಎದ್ದು ಬಂದನು. ಆತನು ಪರಲೋಕಕ್ಕೆ ಏರಿಹೋದನು. ಮತ್ತು ಪವಿತ್ರಾತ್ಮನು ಎಲ್ಲರಿಗೂ ಲಭ್ಯವಾದನು. ಒಬ್ಬ ವ್ಯಕ್ತಿಯು ನಂಬಿ ಪವಿತ್ರಾತ್ಮನನ್ನು ಹೊಂದಿದಾಗ ಅವನ ದೇಹದಲ್ಲಿ ಪಾಪದ ನಿಯಮವನ್ನು ಆತ್ಮನ ನಿಯಮದಿಂದ ಬದಲಾಯಿಸಲಾಗುತ್ತದೆ. ಆಗಲೇ ಅವನ ಒಳಮನುಷ್ಯನು ಕರ್ತನ ದೇಹದಲ್ಲಿ ಇದೆ


ಯಹೋ 23:11–13 "ಆದ್ದರಿಂದ ನೀವು ನಿಮ್ಮ ದೇವರಾದ ಕರ್ತನನ್ನು ಪ್ರೀತಿ ಮಾಡುವ ಹಾಗೆ ನೀವು ಬಹಳ ಎಚ್ಚರವಾಗಿರಿ. ಯಾಕೆಂದರೆ ನೀವು ಹಿಂದಿರುಗಿಕೊಂಡು ನಿಮ್ಮಲ್ಲಿ ಉಳಿದಿರುವ ಈ ಜನಾಂಗಗಳಲ್ಲಿ ಉಳಿದವುಗಳನ್ನು ಸೇರಿಕೊಂಡು ಅವರಿಗೆ ಮದುವೆ ಮಾಡಿಕೊಟ್ಟರೆ, ನೀವು ಅವರ ಬಳಿಗೂ ಅವರು ನಿಮ್ಮ ಬಳಿಗೂ ಪ್ರವೇಶಿಸಿದರೆ, ನಿಮ್ಮ ದೇವರಾದ ಕರ್ತನು ಇನ್ನು ಮೇಲೆ ಈ ಜನಾಂಗಗಳನ್ನು ನಿಮ್ಮಮುಂದೆ ಹೊರಡಿಸಿ ಬಿಡುವುದಿಲ್ಲ. ನಿಮ್ಮ ದೇವರಾದ ಕರ್ತನು ನಿಮಗೆ ಕೊಟ್ಟ ಈ ಒಳ್ಳೇ ದೇಶದೊಳಗಿನಿಂದ ನೀವು ನಾಶವಾಗುವವರೆಗೂ ಅವರು ನಿಮಗೆ ಉರ್ಲಾಗಿಯೂ ಬೋನಾಗಿಯೂ ನಿಮ್ಮ ಪಕ್ಕೆಯಲ್ಲಿ ಶೂಲಾಗಿಯೂ ನಿಮ್ಮ ಕಣ್ಣುಗಳಿಗೆ ಮುಳ್ಳುಗಳಾಗಿಯೂ ಇರುವರೆಂದು ನಿಶ್ಚಯವಾಗಿ ತಿಳಿದುಕೊಳ್ಳಿರಿ."

ಯಹೋ 24:14 "ಆದ್ದರಿಂದ ಈಗ ಕರ್ತನಿಗೆ ಭಯಪಟ್ಟು ಯತಾರ್ಥದಲ್ಲಿಯೂ ಸತ್ಯದಲ್ಲಿಯೂ ಆತನನ್ನು ಸೇವಿಸಿರಿ. ಮತ್ತು ನಿಮ್ಮ ತಂದೆಗಳು ನದಿಯ (ಅರಣ್ಯದಲ್ಲಿನ ನದಿ) ಆಚೆಯಲ್ಲಿಯೂ ಐಗುಪ್ತದಲ್ಲಿಯೂ ಸೇವಿಸಿದ ದೇವರುಗಳನ್ನು ತೊರೆದುಬಿಟ್ಟು ಕರ್ತನನ್ನೇ ನೀವು ಸೇವಿಸಿರಿ.


ಈ ಉಪಮಾನಗಳು ಕ್ರೈಸ್ತರಿಗೆ ಬೋಧಿಸುವುದೇನೆಂದರೆ ಯಹೂದ್ಯರು ಮಾಡಿದ ತಪ್ಪುಗಳನ್ನೇ ಅವರೂ ಕೂಡ ಮಾಡಬಾರದೆಂದು. ಯಾಕೆಂದರೆ ಅವರಲ್ಲಿ ಅವಿಧೇಯರನ್ನು ಉಳಿಸದೇ ಹೋದರೆ ಅವಿಧೇಯ ಕ್ರೈಸ್ತರನ್ನೂ ಕೂಡ ಆತನು ಉಳಿಸುವುದಿಲ್ಲ.

ರೋಮ 11:20, 21 "ಒಳ್ಳೆಯದು, ಅವರು ನಂಬದೇ ಹೋದ್ದರಿಂದ ಮುರಿದು ಹಾಕಲ್ಪಟ್ಟರು, ನೀನು ನಿಂತಿರುವುದು ನಂಬಿಕೆಯಿಂದಲೇ, ಗರ್ವಪಡಬೇಡ, ಭಯದಿಂದಿರು ; ಯಾಕೆಂದರೆ ದೇವರು ಹುಟ್ಟು ಕೊಂಬೆಗಳನ್ನು ಉಳಿಸದೇ ಇದ್ದಮೇಲೆ ನಿನ್ನನ್ನೂ ಉಳಿಸುವುದಿಲ್ಲ.


# ಸಾರಂಶ





**ವಿಗ್ರಹಾರಾಧನೆ :**
ಹುಟ್ಟಿ ಬೆಳೆದದ್ದು ಐಗುಪ್ತದಲ್ಲಿ, ಅವರು ಫರೋಹನನ್ನು ಸೇವಿಸಿದರು, ಯಾಕೆಂದರೆ ಅವರು ಐಗುಪ್ತದ ನಿಯಮದ ಕೆಳಗಿದ್ದರೂ. ಐಗುಪ್ತದಲ್ಲಿ 430 ವರ್ಷಗಳ ನಂತರ ಯಾಕೋಬನ ಸಂತತಿಯವರು ವಿಗ್ರಹಾರಾಧಿಗಳಾದರು. ಮತ್ತು ದೇವರ ತಿಳುವಳಿಕೆ ಅವರಿಗಿರಲಿಲ್ಲ




**ಐಗುಪ್ತದಿಂದ ಬಿಡುಗಡೆ :**
ಐಗುಪ್ತದಿಂದ ಬಿಡುಗಡೆಯಾದ ನಂತರ ಯಹೂದ್ಯರು ದೇವರ ನ್ಯಾಯ ಪ್ರಮಾಣದ ಕೆಳಗೆ ಇದ್ದಿದ್ದರೆ, ಅವರು ದೇವರನ್ನು ಸೇವಿಸಬೇಕಾಗಿತ್ತು. ವಿಗ್ರಹಗಳನ್ನಲ್ಲ.




**ಸಿನ್ ಅರಣ್ಯ :**
ಯಹೂದ್ಯರು ಐಗುಪ್ತದಲ್ಲಿದ್ದಾಗ ಅವರು ದೇವರಿಗೆ ವಿರುದ್ಧವಾಗಿ ಪಾಪ ಮಾಡಲಿಲ್ಲ. ಆದರೆ ಅವರು ದೇವರ ನ್ಯಾಯ ಪ್ರಮಾಣದ ಕೆಳಗೆ ಬಂದಾಗ ಅವರ ಅವಿಧೇಯತೆ ಪಾಪವಾಯಿತು. ಪಾಪಕ್ಕೆ ಶಿಕ್ಷೆ ಮರಣ.




**ಪವಿತ್ರ ದೇಶ :**
ಪವಿತ್ರ ದೇಶದೊಳಗೆ ಬಂದ ಕೂಡಲೆ ಯಹೂದ್ಯರು ದೇವರಿಗೆ ವಿಧೇಯ ರಾಗಿರಬೇಕಾಗಿತ್ತು. ಮತ್ತು ತಿರುಗಿ ಅವಿಧೇಯ ರಾಗಬಾರದಿತ್ತು. ಮತ್ತು ಅವರ ಪಿತೃಗಳಂತೆ (ಐಗುಪ್ತದ ಯಹೂದ್ಯರು) ವಿಗ್ರಹಗಳ ಕಡೆಗೆ ತಿರುಗಬಾರದಿತ್ತು.

## ಅಧ್ಯಾಯ –6

### ನಂಬಿಕೆ ಮತ್ತು ವಿಧೇಯತೆ :

ಸುವಾರ್ತೆ ಎಂದರೆ ದೇವರು, ಕ್ರಿಸ್ತನಲ್ಲಿ, ಮಾನವನನ್ನು ಪಾಪದಿಂದ ರಕ್ಷಿಸುವ ಸಂದೇಶ, ದೇವರ ಮೇಲೆ ನಂಬಿಕೆ ಇಟ್ಟಿರುವ ಒಬ್ಬ ವ್ಯಕ್ತಿಯ ರಕ್ಷಣೆಯು ಒಂದು ಮಾದರಿಯನ್ನು ಅನುಸರಿಸುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಮತ್ತು ಪವಿತ್ರಾತ್ಮನ ಕಾರ್ಯದ ಮಾದರಿಯಲ್ಲಿ ತೋರಿಸಿದ ಹೆಜ್ಜೆಗಳಿಗನು ಸಾರವಾಗಿ ಇರಬೇಕೆಂದು ಅರಿಯಬೇಕು.

**ಈ ಮಾದರಿಯು ದೇವರಿಂದ ಇದರಲ್ಲಿ ಪ್ರಕಟವಾಯಿತು :**

1) ಐಗುಪ್ತದಿಂದ ಯೆಹೂದ್ಯರ ಬಿಡುಗಡೆ :
2) ಅರಣ್ಯದಲ್ಲಿ ಅವಿಧೇಯ ಯೆಹೂದ್ಯರ ಸಂಹಾರ :
3) ಕಾನಾನಿನೊಳಗೆ ವಿಧೇಯರಾದ ಯೆಹೂದ್ಯರ ಪ್ರವೇಶ :

ಈ ಮೂರು ಹೆಜ್ಜೆಗಳು ದೇವರನ್ನು ನಂಬಿದ ವ್ಯಕ್ತಿಗೆ ಅನ್ವಯಿಸುತ್ತದೆ, ಅವನು ಯೇಸುವನ್ನು ಕರ್ತನನ್ನಾಗಿಯೂ ಮತ್ತು ರಕ್ಷಕನಾಗಿಯೂ ಸ್ವೀಕರಿಸಿರಬೇಕು.

1) ಪಾಪದ ದೇಹದಿಂದ ಒಳ ಮನುಷ್ಯನ ಬಿಡುಗಡೆ :
2) ಆತ್ಮನಲ್ಲಿ ಒಳ ಮನುಷ್ಯನ ಪರಿಶುದ್ಧತೆ ಮಾಡುವಿಕೆ :
3) ವಿಧೇಯನಾದ ಒಳ ಮನುಷ್ಯನು ಕ್ರಿಸ್ತನ ದೇಹದಲ್ಲಿ ಪ್ರವೇಶಿಸುವಿಕೆ :

ಒಳಮನುಷ್ಯನನ್ನು ಪ್ರಥಮವಾಗಿರಿಸಿರುವುದು ಅವನನ್ನು ಪಾಪದ ದೇಹದಿಂದ ಬಿಡುಗಡೆ ಮಾಡಬೇಕು ಮತ್ತು ಕ್ರಿಸ್ತನ ದೇಹದಲ್ಲಿ ಪ್ರವೇಶಿಸುವುದಕ್ಕೆ ಮುಂಚೆ ಆತ್ಮನಿಗೆ ವಿಧೇಯನಾಗಿರುವುದನ್ನು ಕಲಿಯಬೇಕು.

**ಪಾಪದ ದೇಹದಲ್ಲಿ :**

ಪಾಪದ ದೇಹದಲ್ಲಿ ಹುಟ್ಟಿದ ಒಳಮನುಷ್ಯನು ಸೈತಾನನ ರಾಜ್ಯದಲ್ಲಿದ್ದಾನೆ ಮತ್ತು ಪಾಪಕ್ಕೆ ದಾಸನಾಗಿದ್ದಾನೆ ಇಂತಹ ಒಳ ಮನುಷ್ಯನಿಗೆ ಪಾಪದ ಸ್ವಭಾವ ಇದೆ, ಯಾಕೆಂದರೆ ಅವನು "ಮಾಂಸಧಾರಿ"ಯಾಗಿ ರೂಪಿಸಲ್ಪಟ್ಟನು. ಅವನು ಪಾಪಿ ಯಾಕೆಂದರೆ, ಅವನಿಗೆ ಅವನ ತಂದೆಯ ದೆವ್ವದ ಬುದ್ಧಿಯೂ ಮತ್ತು ಪಾಪದ ಸ್ವಭಾವವೂ ಇದೆ ; ಮತ್ತು ಅವನ ತಂದೆಯ ಕಾಮಾಭಿಲಾಷೆಗಳು ಮತ್ತು ದುರಾಶೆಗಳಿಗೆ ಈಡಾಗುತ್ತಾನೆ. ಅವನು ಅವಿಧೇಯತೆಯ ಮಗನಾಗಿರುವುದರಿಂದ ಅವನು ದೇವರಿಗಾಗಲೀ, ಆತನ ನ್ಯಾಯ ಪ್ರಮಾಣಕ್ಕಾಗಲೀ ವಿಧೇಯನಾಗಿರಲು ಅಸಾಧ್ಯ.

### ವಚನಗಳು ಮತ್ತು ವ್ಯಾಖ್ಯಾನಗಳು

ರೋಮ 6:17" ಆದರೆ ನೀವು ಪಾಪಕ್ಕೆ ದಾಸರಾಗಿದ್ದರೂ ನಿಮ್ಮಗೆ ಒಪ್ಪಿಸಲ್ಪಟ್ಟ ಭೋಧನೆಗೆ (ಮಾದರಿ ಮತ್ತು ಹೆಜ್ಜೆಗಳು) ನೀವು ಹೃದಯ ಪೂರ್ವಕವಾಗಿ ಅಧೀನರಾದ್ದರಿಂದ ದೇವರಿಗೆ ಸ್ತೋತ್ರವಾಗಲ್ಲಿ."

ಈ ಮಾದರಿಗೆ ಕೆಲವು ಹೆಜ್ಜೆಗಳಿವೆ ; ಅವು ಒಳ ಮನುಷ್ಯನಿಗ ರೂಪವನ್ನು ಕೊಡುತ್ತವೆ. ಅವನು ಪಾಪದ ದೇಹದಲ್ಲಿ ಕ್ರಿಸ್ತನ ದೇಹದ ಒಳಗೆ ರೂಪಿಸಲ್ಪಟ್ಟನು. ಈ ವಿಧಾನವನ್ನು ಬೆಂಕಿಯಲ್ಲಿ ಹಾಕಿದ ಬಂಗಾರಕ್ಕೆ ಹೋಲಿಸಬಹುದು. ಈ ಕಾರ್ಯದ ನಂತರ ಒಂದು ನಿಯಮಿತ ಆಕಾರದ ಅಚ್ಚಿನಲ್ಲಿ ಹಾಕಿ ರೂಪಿಸಬೇಕು.

ಎಲ್ಲಾ ಯೆಹೂದ್ಯರು ಐಗುಪ್ತದಿಂದ ಬಿಡುಗಡೆ ಮಾಡಲ್ಪಟ್ಟರು, ಆದರೆ ವಿಧೇಯರಾದ ಯೆಹೂದ್ಯರು ಮಾತ್ರ ಕಾನಾನನ್ನು ಪ್ರವೇಶಿಸಿದರು.

2 ತಿಮೋ 2:5 "ಇದಲ್ಲದೇ ಯಾವನಾದರೂ ಪ್ರವೀಣತೆಗೆ ಹೋರಾಡುವಾಗ **ನಿಯಮದ ಪ್ರಕಾರ ಹೋರಾಡದಿದ್ದರೆ** ಅವನಿಗೆ ಕಿರೀಟ ದೊರೆಯುವುದಿಲ್ಲ.

ಯೋಹಾ 3:5 ಹೀಗೆ ಓದುತ್ತದೆ "...ಒಬ್ಬ ಮನುಷ್ಯನು
1) ನೀರಿನಿಂದ ಹುಟ್ಟದೆ (ಹೊರಮನುಷ್ಯನಲ್ಲಿ) ಮತ್ತು
2) ಆತ್ಮನಿಂದಲೂ (ಒಳಮನುಷ್ಯನಲ್ಲಿ)ಅವನು
3) ಪ್ರವೇಶಿಸಲಾರ (ಕ್ರಿಸ್ತನ ದೇಹದಲ್ಲಿ) ದೇವರ ರಾಜ್ಯ".

ಒಳ ಮನುಷ್ಯನು ತನ್ನ ದೇಹದಲ್ಲಿ ಪಾಪಕ್ಕೆ ಗುಲಾಮನಾಗಿದ್ದಾನೆ. ಪಾಪದ ಆತ್ಮವು ನ್ಯಾಯ ಪ್ರಮಾಣದ ಅಕ್ಷರಕ್ಕಿಂತ ಬಲವಾಗಿರುವುದರಿಂದ, ಒಳ ಮನುಷ್ಯನು ಪಾಪವು ಇಚ್ಛಿಸುವುದನ್ನು ಮಾಡುತ್ತಾನೆ. ಅವು ಶರೀರಭಾವದ ಕ್ರಿಯೆಗಳು. ಅವನಿಗೆ ದೇವರ ನ್ಯಾಯ ಪ್ರಮಾಣವನ್ನನುಸರಿಸುವುದು ಬೇಕೆಂದರೂ ಅವನು ಪಾಪವನ್ನೇ ಅನುಸರಿಸುತ್ತಾನೆ. ಆದುದರಿಂದಲೇ ದೇವರು ಯೇಸುವನ್ನು ಪಾಪದ ಶರೀರದಲ್ಲಿ ಕಳುಹಿಸಿದನು. ಇದು ಒಳ ಮನುಷ್ಯನನ್ನು ಪಾಪದಿಂದ ಬಿಡುಗಡೆ ಮಾಡುವುದಕ್ಕೋಸ್ಕರವೇ.

ರೋಮ 8:7 "ಯಾಕೆಂದರೆ **ಶರೀರ ಸಂಬಂದವಾದ ಮನಸ್ಸು** ದೇವರಿಗೆ ಶತೃತ್ವ; ಕಾರಣವೇನೆಂದರೆ, ಅಂತಹ ಮನಸ್ಸು **ದೇವರ ನಿಯಮಕ್ಕೆ ಒಳಪಡುವುದಿಲ್ಲ ;** ಒಳಪಡುವುದಕ್ಕಾಗುವುದೂ ಇಲ್ಲ





ಯೆಹೂದ್ಯರು ಐಗುಪ್ತದ ಫರೋಹನನಿಂದ ಸೆರೆಹಿಡಿಯಲ್ಪಟ್ಟಿದ್ದರು. ಅಂತೆಯೇ ಒಳ ಮನುಷ್ಯನು ಸೈತಾನನಿಂದ ಪಾಪದ ದೇಹದಲ್ಲಿ ಸೆರೆಯಾ ಗಿದ್ದಾನೆ. ಐಗುಪ್ತ ದೇಶ, ಆದುದರಿಂದ ಪಾಪದ ದೇಹಕ್ಕೆ ಅನ್ವಯವಾಗುತ್ತದೆ.

ಯೆಹೂದ್ಯರ ಅಭಿಪ್ರಾಯ ಐಗುಪ್ತದವರು ತಮ್ಮಿಂದ ಭಿನ್ನವಾದವರೆಂದು ಆಗಿತ್ತು. ಆದರೆ, ದೇವರು ಅವರಿಗೆ ತನ್ನ ನ್ಯಾಯ ಪ್ರಮಾಣವನ್ನು ಕೊಟ್ಟಾಗ ಅವರು ಐಗುಪ್ತದವರಂತೆಯೇ ವಿಗ್ರಹಾರಾಧಿಗಳೆಂದು ತಿಳಿದುಕೊಂಡರು.




ರೋಮ 3:9 "ಹಾಗಾದರೆ ಏನು ? ನಾವು ಅವರಿಗಿಂತಲೂ ಉತ್ತಮರಾಗಿದ್ದೇವೋ ಇಲ್ಲ; ಯಾಕೆಂದರೆ ಯೆಹೂದ್ಯರು, ಅನ್ಯಜನರು ಎಲ್ಲರೂ ಪಾಪಕ್ಕೊಳಗಾಗಿದ್ದಾರೆಂದು ಮೊದಲೇ ನಾವು ಸ್ಥಾಪಿಸಿದ್ದೇವಲ್ಲ."

ನೋಡಿ ಕಲಿಯಿರಿ !




ಒಳಮನುಷ್ಯ ಪಾಪದ ನಿಯಮದ ಕೆಳಗೆ ಹುಟ್ಟಿ ಬೆಳೆದಿದ್ದರಿಂದ ಶರೀರ ಭಾವದವನಾಗಿದ್ದಾನೆ. ಅವನ ಪ್ರಾಣಕ್ಕೆ ಒಂದು ಮನಸ್ಸಿದೆ. ಅದು 'ಒಳ್ಳೆ ಮತ್ತು ಕೆಟ್ಟದರ' ತಿಳುವಳಿಕೆಗೆ ಅನುಸಾರವಾಗಿ ಕೆಲಸ ಮಾಡುತ್ತದೆ ಮತ್ತು ಈ ಮನಸ್ಸಿನ ಎಚ್ಚರಿಕೆ ಕಾಮಾಭಿಲಷೆಗಳನ್ನೂ, ದುರಾಶೆಗಳನ್ನೂ ಅವನ ಆತ್ಮದಲ್ಲಿ ಎಬ್ಬಿಸುತ್ತದೆ. ಈ ಕಾಮಾಭಿಲಾಷೆಗಳು ಮತ್ತು ದುರಾಶೆಗಳು ಶರೀರ ಭಾವದ ಕ್ರಿಯೆಗಳಲ್ಲಿ ತೋರಿಸಿಕೊಳ್ಳುತ್ತವೆ.

ದೇವರು ಒಳಮನುಷ್ಯನನ್ನು ಪಾಪದ ಶರೀರದಿಂದ ಬಿಡುಗಡೆ ಮಾಡದೆ ಹೊರತು ಅವನು ಪಾಪದಿಂದ ತಪ್ಪಿಸಿಕೊಳ್ಳಲಾರನು. ಬೇರಾವ ದೇವರೂ, ಅಥವಾ ಒಳ್ಳೆಯ ಕಾರ್ಯಗಳು ಒಳಮನುಷ್ಯನನ್ನು ಅವನ ದೇಹದಲ್ಲಿನ ಪಾಪದಿಂದ ಬಿಡುಗಡೆ ಮಾಡಲಾರವು. ಪಾಪಿಯು ತನ್ನನ್ನು ತಾನು ಉತ್ತಮಗೊಳಿಸಿ ಕೊಳ್ಳಬಹುದು, ಆದರೂ ಅವನು ಸೈತಾನನ ರಾಜ್ಯದಲ್ಲಿ ಉಳಿಯುತ್ತಾನೆ.

ಒಳಮನುಷ್ಯನು ಪಾಪದ ದೇಹದಲ್ಲಿ ಸಾಯುವುದಾದರೆ, ದೇವರ ನ್ಯಾಯ ತೀರ್ಪಿನ ದಿನದಲ್ಲಿ ಅವನು ಸೇವಿಸಿದ ಸೈತಾನನೊಂದಿಗೆ ನರಕದಲ್ಲಿ ತಳ್ಳಲ್ಪಡುವನು. ನರಕದಲ್ಲಿ ಪಾಪಿಯ ಶಾಶ್ವತ ಬಂಧನವೇ ಎರಡನೇ ಮರಣ. ಆದ ಕಾರಣವೇ ಯೇಸುವು ಕಳುಹಿಸಲ್ಪಟ್ಟದ್ದು. ಇದರಿಂದ ಯೇಸುವಿನಲ್ಲಿ ನಂಬಿಕೆ ಇಡುವ ಪಾಪಿಯು ಪಾಪದಿಂದ ಬಿಡುಗಡೆ ಹೊಂದುತ್ತಾನೆ.

**ನಂಬಿಕೆ**

ಯೇಸುವಿನಲ್ಲಿನ ನಂಬಿಕೆ ವಿಶ್ವಾಸಿಯ ಮೇಲೆ ಎರಡು ವಿಧವಾಗಿ ಪರಿಣಾಮ ಬೀರುತ್ತದೆ. ಒಳಮನುಷ್ಯನು ಪಾಪದ ದೇಹದಲ್ಲಿ ಮಾಡಿದ ಎಲ್ಲಾ ಪಾಪಗಳನ್ನು ದೇವರು ಮೊದಲು ಕ್ಷಮಿಸುತ್ತಾನೆ. ನಂತರ ಒಳ ಮನುಷ್ಯನನ್ನು ಪಾಪದ ದೇಹದಿಂದ ಬಿಡುಗಡೆ ಮಾಡುತ್ತಾನೆ. ಇದು ವಿಶ್ವಾಸಿಯೊಳಗೆ ನೆಲೆಸಲು ಆತನು ಪವಿತ್ರಾತ್ಮನನ್ನು ಕೊಟ್ಟಾಗಲೇ.

ರೋಮ 7:14 " ಯಾಕೆಂದರೆ ನ್ಯಾಯ ಪ್ರಮಾಣವು ಆತ್ಮೀಕವಾದದ್ದೆಂದು ನಾವು ಬಲ್ಲೆವು: ಆದರೆ ನಾನು ಶರೀರಾದಿಧೀನನೂ ಪಾಪದ ಅಧೀನದಲ್ಲಿರುವುದಕ್ಕೆ ಮಾರಲ್ಪಟ್ಟ ವನೂ ಆಗಿದ್ದೇನೆ.

ರೋಮ 7:24 " ಅಯ್ಯೋ, ನಾನು ಎಂಥ ನಿರ್ಗತಿಕನಾದ ಮನುಷ್ಯನು! ಇಂಥ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವವನು ಯಾರು?

ಯಹೂದ್ಯರೂ ಕೂಡಾ ಪಾಪದ ದೇಹದಲ್ಲಿರುವುದರಿಂದ. ಅನ್ಯ ಜನರಂತ್ತಿದ್ದಾರೆ. ಅವರು ಪಾಪಕ್ಕೆ ಕೂಡಾ ಗುಲಾಮರಾಗಿದ್ದಾರೆ. ಮತ್ತು ದೇವರ ನಿಯಮಕ್ಕೆ ವಿಧೇಯರಾಗಲಾರರು.


ಪ್ರಕ 21:8 "ಆದರೆ ಭಯಗ್ರಸ್ಥರು, ನಂಬಿಕೆ ಇಲ್ಲದವರು ಅಸಹ್ಯವಾದವರು, ಕೊಲೆಗಾರರು, ಜಾರರು, ಮಾಟಗಾರರು, ವಿಗ್ರಹಾರಾಧಕರು, ಎಲ್ಲಾ ಸುಳ್ಳುಗಾರರು **ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ ; ಅದು ಎರಡನೆಯ ಮರಣವು ಎಂದು ನನಗೆ ಹೇಳಿದನು.**"

ಅಪೋ 4:12 "ರಕ್ಷಣೆಯು ಇನ್ನಾರಲ್ಲಿಯೂ ಇಲ್ಲ ;**ಯಾಕೆಂದರೆ ಆಕಾಶದ ಕೆಳಗೆ, ಮನುಷ್ಯರಲ್ಲಿ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ** (ಪಾಪದಿಂದ)**ಎಂದು ಹೇಳಿದನು.**"

ಎಫೆ 2:8,9 "ಯಾಕೆಂದರೆ **ಕೃಪೆಯಿಂದಲೇ ನಂಬಿಕೆಯ ಮೂಲಕ ನೀವು ರಕ್ಷಣೆಹೊಂದಿದವರಾಗಿದ್ದೀರಿ.** ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, **ಅದು ದೇವರ ದಾನವೇ.** ಅದು ಕ್ರಿಯೆಗಳಿಂದ ಉಂಟಾದದ್ದಲ್ಲ ; ಆದ್ದರಿಂದ ಹೊಗಳಿಕೊಳ್ಳುವುದಕ್ಕೆ ಯಾರಿಗೂ ಆಸ್ಪದವಿಲ್ಲ."

ರೋಮ 6:6 "**ಪಾಪದ ಶರೀರವು ನಾಶವಾಗಿ** ನಾವು ಇನ್ನೂ ಪಾಪಕ್ಕೆ ದಾಸರಾಗಿರದಂತೆ, ನಮ್ಮ ಹಳೇ ಮನುಷ್ಯನು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟನೆಂದು."

ನೋಡಿ ಕಲಿಯಿರಿ !





ಯೆಹೂದ್ಯರು ಐಗುಪ್ತದಿಂದ ಹೊರಗೆ ಬಂದಾಗ ಅವರು ಸಮುದ್ರದಲ್ಲಿಯೂ, ಮೇಘದಲ್ಲಿಯೂ, ಬಾಪ್ತಿಸ್ಮಾ ಹೊಂದಿದರು. ಅದೇ ರೀತಿಯಲ್ಲಿ, ಒಳ ಮನುಷ್ಯನು ಪಾಪದ ದೇಹದಿಂದ ಹೊರಗೆ ಬಂದಾಗ, ಅವನು ಪವಿತ್ರಾತ್ಮನಿಂದ ಮತ್ತು ನೀರಿನಿಂದ ಬಾಪ್ತಿಸ್ಮಾ ಹೊಂದಿದ್ದಾನೆ.

**ಆತ್ಮನಲ್ಲಿ**

ಐಗುಪ್ತದಿಂದ ಹೊರಗೆ ಬಂದ ಯಹೂದ್ಯರು ಕಾನಾನಿನಲ್ಲಿ ಇರಲಿಲ್ಲ, ಆದರೆ ಸಿನ್ ಅರಣ್ಯದಲ್ಲಿ ಇದ್ದರೆಂದು ನಾವು ನೋಡುತ್ತೇವೆ. ಇಲ್ಲಿ ಅವರು ಮುಂಚೆ ದೇವರಿಗೆ ವಿಧೇಯರಾಗುವುದನ್ನು ಕಲಿತು, ನಂತರ ಕಾನಾನು ಪ್ರವೇಶ ಮಾಡುವುದಿತ್ತು. ಆತ್ಮನಲ್ಲಿರುವ ಒಳಮನುಷ್ಯನ ವಿಷಯವಾಗಿಯೂ ಸಹ ಇದು ನಿಜ. ಅವನು ಪಾಪದ ದೇಹದಲ್ಲಿಯಾದರೂ ಇಲ್ಲ. ಕ್ರಿಸ್ತನ ದೇಹದಲ್ಲಿಯಾದರೂ ಇಲ್ಲ. ಆದರೆ ಒಂದು ಪಾಪಗಳ ಅರಣ್ಯದಲ್ಲಿ. ದೇವರಲ್ಲಿ ವಿಧೇಯತೆಯನ್ನು ಕಲಿಯಬೇಕಾದರೆ ಅದು ಆತ್ಮನಲ್ಲಿ, ಆತ್ಮದ ನಿಯಮದ ಕೆಳಗೆ ಆಗಬೇಕು.

ನೋಡಿ ಕಲಿಯಿರಿ !




ಒಳ ಮನುಷ್ಯನಿಗೆ ಹೇಗೆ ಸೇವಿಸುವುದೋ ಗೊತ್ತಿಲ್ಲವಾದ್ದರಿಂದ ಮತ್ತು ಅವನು 'ಶರೀರ' ಭಾವದ ತೀವ್ರ ಆಸೆಗೆ ಒಳಗಾಗಿ ಈಗಲೂ ಜೀವಿಸುತ್ತಾ ಇದ್ದಾನೆಂದು ಅವನಿಗೆ ತಿಳಿಯದು. ಅವನು ಮತದ ಕಡೆಗೆ ಸಾಗುತ್ತಾನೆ. ಅವನು ಸಭೆಯ ಎಲ್ಲಾ ವಿಧವಾದ ಚಟುವಟಿಕೆಗಳಲ್ಲಿ ಸೇರಿಕೊಳ್ಳುತ್ತಾನೆ. ಯಾಕೆಂದರೆ ದೇವರನ್ನು ಸೇವಿಸುವುದು ಆತ್ಮನಿಗೆ ವಿಧೇಯನಾಗಿರುವುದೇ ಎಂಬುದು ಅವನಿಗೆ ತಿಳಿಯದು. ಇದೇ ತತ್ವವನ್ನು ನಾವು ಯೆಹೂದ್ಯರ ಮಧ್ಯೆ

ಇಬ್ರಿ 9:26 "...ಆದರೆ ಈಗ ಒಂದೇ ಸಾರಿ ಲೋಕಾಂತ್ಯದಲ್ಲಿ **ಪಾಪ ನಿವಾರಣೆ ಮಾಡುವುದಕ್ಕೆ** ತನ್ನನ್ನು ತಾನೇ ಯಜ್ಞಮಾಡಿಕೊಳ್ಳುವವನಾಗಿ **ಪ್ರತ್ಯಕ್ಷನಾದನು.**"

ಯೋಹಾ 19:34 "ಆದರೆ ಸೈನಿಕರಲ್ಲಿ ಒಬ್ಬನು ಈಟಿಯಿಂದ ಆತನ **ಪಕ್ಕೆಯನ್ನು ತಿವಿದನು ;** ಕೂಡಲೆ **ರಕ್ತವೂ, ನೀರೂ ಹೊರಗೆ ಬಂತು.**"

**ಗಮನಿಸು :** ಪಾಪಿಯು ವಾಸಿಯಾಗುವುದನ್ನು ಲೇವಿ 14:1–7 ರಲ್ಲಿ ದೃಷ್ಟಾಂತದ ರೂಪದಲ್ಲಿ ತೋರಿಸಲಾಗಿದೆ. ಒಂದು ಪಾರಿವಾಳವನ್ನು ಸ್ವತಂತ್ರನನ್ನಾಗಿಸಲು ತನ್ನ ಪ್ರಾಣವನ್ನು ಕೊಡಬೇಕಾಯಿತು. ಸ್ವತಂತ್ರನಾದ ಪಾರಿವಾಳ ನೀರಿನಲ್ಲಿ ಬಾಪ್ತಿಸ್ಮ ಹೊಂದಬೇಕಾಗಿತ್ತು, ಹಾಗೆಯೇ ಯಜ್ಞಾರ್ಪಿತವಾದ ಪಾರಿವಾಳದ ರಕ್ತದಲ್ಲಿಯೂ ಕೂಡ.

ಅಪೊ 2:38 "ಆಗ ಪೇತ್ರನು ಅವರಿಗೆ – ನೀವು ಮಾನಸಾಂತರ ಪಟ್ಟು ಪಾಪಗಳ ಪರಿಹಾರಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನು **ಯೇಸು ಕ್ರಿಸ್ತನ ಹೆಸರಿನಲ್ಲಿ,** ಬಾಪ್ತಿಸ್ಮಾ ಮಾಡಿಸಿಕೊಳ್ಳಿರಿ ;ಆಗ ನೀವು ಪವಿತ್ರಾತ್ಮನ ದಾನವನ್ನು ಹೊಂದುವಿರಿ."


ಕೆಂಪು ಸಮುದ್ರವನ್ನು ದಾಟಿದ ಯೆಹೂದ್ಯರು ಇನ್ನಮೇಲೆ ಐಗುಪ್ತದಲ್ಲಿ ಇಲ್ಲವಾದುದು ಹೇಗೋ ಹಾಗೆಯೇ ನೀರಿನ ಬಾಪ್ತಿಸ್ಮಾ ಒಳಮನುಷ್ಯನು ಇನ್ನು ಮೇಲೆ ಪಾಪದ ದೇಹದಲ್ಲಿ ಇಲ್ಲವೆಂದು ಸೂಚಿಸುತ್ತದೆ. ಯೆಹೂದ್ಯರು ಐಗುಪ್ತದಿಂದ ಹೊರಗೆ ತೆಗೆಯಲ್ಪಟ್ಟರು ಹೇಗೋ ಅದೇ ರೀತಿಯಲ್ಲಿ ಒಳ ಮನುಷ್ಯನು ಕೂಡ **ಪಾಪದ ದೇಹದಿಂದ** ಹೊರತೆಗೆಯಲ್ಪಡುತ್ತಾನೆ.

ಸೈತಾನನ ಮತ್ತು ಪಾಪದ ಶಕ್ತಿಯಿಂದಾದ ಈ ಬಿಡುಗಡೆ, ದೇವರ ಕೃಪೆಯಿಂದಾದದ್ದು. ಇದು ಯೇಸುವಿನಲ್ಲಿಡುವ ನಂಬಿಕೆಯಿಂದ ಸ್ವೀಕೃತವಾಗಿದ್ದು, ಮನುಷ್ಯನ ಸ್ವಂತ ಪ್ರಯತ್ನಗಳಿಂದ ಸಾಧಿಸಿ ಪಡೆಯುವುದಲ್ಲ.

ರೋಮ 8:2 "ಯಾಕೆಂದರೆ, ಜೀವವನ್ನುಂಟು ಮಾಡುವ ಆತ್ಮನ ನಿಯಮವು ಕ್ರಿಸ್ತಯೇಸುವಿನಲ್ಲಿ ನನ್ನನ್ನು ಪಾಪ ಮತ್ತು ಮರಣದ ನಿಯಮದಿಂದ ಬಿಡಿಸಿತು."

ರೋಮ 8:9 "ನೀವಾದರೋ ನಿಮ್ಮಲ್ಲಿ ದೇವರಾತ್ಮನು ವಾಸವಾಗಿರುವುದಾದರೆ, ಶರೀರಾಧೀನರಲ್ಲ. ಆತ್ಮನಿಗೆ ಅಧೀನರಾಗಿದ್ದೀರಿ."

ಎಫೆ 1:13 "...ಕ್ರಿಸ್ತನಲ್ಲಿ ನಂಬಿಕೆ ಇಟ್ಟವರಾದ ನೀವು ಸಹ ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ."




ಅವಿಧೇಯನಾದ ಐಗುಪ್ತದ ಯೆಹೂದ್ಯನೂ ಮತ್ತು ನ್ಯಾಯ ಪ್ರಮಾಣದ ಕೆಳಗೆ ಸಿನ್ ಅರಣ್ಯದಲ್ಲಿ ಹುಟ್ಟಿದ ವಿಧೇಯನಾದ ಯೆಹೂದ್ಯನು ಆತ್ಮದ ಕೆಳಗಿರುವ ಒಳಮನುಷ್ಯನ ಶರೀರಾಧಿನ ಸ್ವಭಾವವನ್ನು ತೋರ್ಪಡಿಸುತ್ತವೆ. ಅವನು ಆತ್ಮದ ನಿಯಮದ ಕೆಳಗೆ ಇದ್ದಾನೆ.

ವಿಧೇಯನಾದ ಯೆಹೂದ್ಯನು ಕಾನಾನ್ ಪ್ರವೇಶಿಸುವುದಕ್ಕೆ ಮುಂಚೆ ಅವಿಧೇಯನಾದ ಐಗುಪ್ತದ ಯೆಹೂದ್ಯನು ಹೇಗೆ ಸಾಯಬೇಕಾಗಿ ಬಂತೋ ಹಾಗೆಯೇ ಒಳಮನುಷ್ಯನ ಅವಿಧೇಯತೆಗಳೆಲ್ಲವನ್ನೂ ಕ್ರಿಸ್ತನಲ್ಲಿ ಅವನು ಪ್ರವೇಶಿಸುವುದಕ್ಕೆ ಮುಂಚೆ ಸಾಯಿಸಬೇಕು.

ಲೂಕ 6:46 "ನನ್ನನ್ನು ನೀವು–ಕರ್ತನೇ ಕರ್ತನೇ ಎಂದು ಕರೆದು ನಾನು ಹೇಳುವವುಗಳನ್ನು ನೀವು ಮಾಡದೇ ಇರುವುದು ಯಾಕೆ?"

ಕಾಣುತ್ತೇವೆ. ಅವರು ದೇವರ ನ್ಯಾಯ ಪ್ರಮಾಣವನ್ನು ಹೊಂದುವುದಕ್ಕೆ ಮುಂಚೆ ಅವರೊಂದು ಬಂಗಾರದ ಬಸವನನ್ನು ಮಾಡಿ ದೇವರ ಮಹಿಮೆಗಾಗಿ ಆರಾಧಿಸಿದರು. ಯಾಕೆಂದರೆ ಅವರು ವಿಗ್ರಹಾರಾಧಿಗಳಾಗಿದ್ದರು.

ದೇವರ ನ್ಯಾಯ ಪ್ರಮಾಣವೇ ಯೆಹೂದ್ಯರನ್ನು ವಿಧೇಯರು ಮತ್ತು ಅವಿಧೇಯರೆಂದು ವಿಭಾಗ ಮಾಡಿತು. ಅದೇ ರೀತಿಯಲ್ಲಿ ಆತ್ಮನ ನಿಯಮ ಒಳ ಮನುಷ್ಯನು ತನ್ನಲ್ಲಿ ದ್ವಿರೂಪವಾದ ಸ್ವಭಾವ ಇರುವುದೆಂದು ಕಂಡು ಹಿಡಿಯುವಂತೆ ಮಾಡುತ್ತದೆ. ಈಗ ಅವನು ಶರೀರ ಭಾವದವನೂ ಮತ್ತು ಆತ್ಮದ ಸ್ವಭಾವವನ್ನೂ ಉಳ್ಳವನೂ ಆಗಿದ್ದಾನೆ.

ಈ ದ್ವಿರೂಪತೆಯನ್ನು ಇಸಾಕನ ಸಂತತಿಯಲ್ಲಿ ಕೂಡ ನೋಡಬಹುದಾಗಿದೆ. ಅವನ ಸಂತಾನ ಅವಳಿಯನ್ನುಂಟು ಮಾಡಿತು ಎಂದರೆ ಏಸಾವ ಮತ್ತು ಯೊಕೋಬ. ಅವಳಿಯಾಗಿದ್ದ ಅವರು ಒಂದೇ ಬೀಜದಿಂದ ಹುಟ್ಟಿದವರು. ಆದರೆ, ಮೊದಲು ಹುಟ್ಟಿದ ಏಸಾವನು ಪ್ರಾಪಂಚಿಕ ವಿಷಯಗಳನ್ನು ಇಷ್ಟಪಟ್ಟನು. ಆದರೆ, ಎರಡನೆಯದಾಗಿ ಹುಟ್ಟಿದ ಯಾಕೋಬನು ದೇವರ ಸಂತತಿಗಳನ್ನು ಆಶಿಸಿದನು. ಅವರಲ್ಲಿ ದೇವರು ತನ್ನ ಚಿತ್ತವನ್ನು ಪ್ರಕಟಪಡಿಸಿದನು, ಅಂದರೆ ಶರೀರಭಾವವುಳ್ಳ ಮಗನನ್ನು ಆತನು ನಿರಾಕರಿಸಿದನು ಮತ್ತು ಆತ್ಮೀಯ ಮನಸ್ಸುಳ್ಳ ಮಗನನ್ನು ಆತನು. ಆಯ್ಕೆಮಾಡಿದನು.

ಏಸಾವನು ಮೊದಲು ಹುಟ್ಟಿದಾಗ್ಯೂ ಮತ್ತು ವಾಗ್ದಾನದ ದೇಶ ಅವನಿಗೆ ಸೇರಬೇಕಾಗಿದ್ದಾಗ್ಯೂ, ಯಾಕೋಬನು ತನ್ನ ತಾಯಿಯ ಸಹಾಯದಿಂದ ವಾಗ್ದಾನದ ದೇಶದ ಆಶೀರ್ವಾದವನ್ನು ತಾನು ಹೊಂದಿದನು. ಒಳ ಮನುಷ್ಯನ ವಿಷಯವಾಗಿ ಕೂಡ ಇದೇ ನಿಜ : ಪರಿಶುದ್ಧಾತ್ಮನು ಅವನಿಗೆ ಸಹಾಯ ಮಾಡಿ ಅವನ ಹಳೆಯ ಶರೀರ ಭಾವದ ಮೇಲೆ ತಿರಸ್ಕಾರದಿಂದ ಭುಜ ಹಾರಿಸುವಂತೆ ಸಹಾಯ ಮಾಡುತ್ತಾನೆ. ಹೀಗೆ ಅವನು ವಿಧೇಯನಾಗಿ ಕ್ರಿಸ್ತನ ದೇಹದಲ್ಲಿ ಪ್ರವೇಶಿಸಲು ಸಹಾಯವಾಗುತ್ತದೆ.

ಆತ್ಮನಲ್ಲಿ ಒಳ ಮನುಷ್ಯನು ಬಹು ಶ್ರಮೆಯನ್ನು ಅನುಭವಿಸುತ್ತಾನೆ. ಈ ಶ್ರಮೆಯು ಉಳಿಯುತ್ತದೆ, ಯಾಕೆಂದರೆ ಹಳೆಯ ಶರೀರ ಸ್ವಭಾವವು ಆತ್ಮದ ಎಳೆಯ ಸ್ವಭಾವಕ್ಕಿಂತ ಬಲವಾಗಿರುವುದರಿಂದ. ಅವನ ಶರೀರಭಾವ ದೇವರ ಸ್ವಭಾವಕ್ಕೆ ವಿರುದ್ಧವಾಗಿ ಯುದ್ಧ ಮಾಡುವುದರಿಂದ ಒಳಮನುಷ್ಯನು ದೇವರಿಗೆ ವಿಧೇಯನಾಗಲು ಪ್ರಯಾಸಪಡುತ್ತಾನೆ.ಇದೇ ತತ್ವವನ್ನು ನಾವು ಸಿನ್ ಅರಣ್ಯದಲ್ಲಿ ನೋಡುತ್ತೇವೆ.




ರೋಮ 8:6,7 "ಆದರೆ, ಶರೀರಕ್ಕನುಸಾರವಾದ ಮನಸ್ಸು, ಮರಣ ; ಆತ್ಮೀಕವಾದ ಮನಸ್ಸು ಜೀವವೂ ಸಮಾಧಾನವೂ ಆಗಿದೆ ಯಾಕೆಂದರೆ, ಶರೀರ ಸಂಬಂಧವಾದ ಮನಸ್ಸು ದೇವರಿಗೆ ಶತೃತ್ವ ; ಕಾರಣವೇನೆಂದರೆ, ಅಂತಹ ಮನಸ್ಸು ದೇವರ ನಿಯಮಕ್ಕೆ ಒಳಪಡುವುದಿಲ್ಲ ; ಒಳಪಡುವುದಕ್ಕಾಗುವುದೂ ಇಲ್ಲ."

ರೋಮ 8:13 "ನೀವು ಶರೀರ ಭಾವವನ್ನು ಅನುಸರಿಸಿದರೆ ಸಾಯುವಿರಿ ; ಆದರೆ, ನೀವು ಆತ್ಮನಿಂದ ದೇಹದ ಕ್ರಿಯೆಗಳನ್ನು ಸಾಯಿಸುವುದಾದರೆ ಜೀವಿಸುವಿರಿ."

ಹೊಸದೇಹವೆಂಬ ಭಾದ್ಯತೆಯನ್ನು ಒಳಮನುಷ್ಯನು ಗಟ್ಟಿಯಾಗಿ ಹಿಡಿದುಕೊಳ್ಳಲು ಪವಿತ್ರಾತ್ಮನು ಮಾರ್ಗದರ್ಶಿಯಾಗಿರುತ್ತಾನೆ. ಇಸ್ರಯೇಲ್ಯರು ಐಗುಪ್ತದ ಒಳಗಾದರೂ ಇಲ್ಲ ಅಥವಾ ಕಾನಾನಿನ ಒಳಗಾದರೂ ಇಲ್ಲ. (ಆದರೆ ಅರಣ್ಯದಲ್ಲಿ) ; ಅದು ಹೇಗೋ, ಹಾಗೆಯೇ ಒಳ ಮನುಷ್ಯನೂ ಕೂಡ ತನ್ನದೇ ಆದ ಅರಣ್ಯದ ಪಾಪಗಳನ್ನು ಅನುಭವಿಸುತ್ತಾನೆ.

ಐಗುಪ್ತದ ಯೆಹೂದ್ಯರೆಲ್ಲರೂ ಸಾಯುವುದಕ್ಕೆ ಮುಂಚೆ ಯೆಹೂದ್ಯರು ಪ್ರವೇಶಿಸಲಾಗಲಿಲ್ಲ. ಇದೇ ಒಳ ಮನುಷ್ಯನಿಗೂ ಅನ್ವಯಿಸುತ್ತದೆ. ಅವನ ಶರೀರ ಭಾವಕ್ಕನುಸಾರವಾದ ಹಳೆಯ ಪಾಪ ಜೀವಿತವನ್ನು ಸಾಯಿಸುವುದಕ್ಕೆ ಮುಂಚೆ ಕ್ರಿಸ್ತನ ದೇಹದಲ್ಲಿ ಪ್ರವೇಶಿಸಲಾರನು.



ಯೋಹನ 11:16 "ತರುವಾಯ ತಿದುಮನೆಂಬ ತೋಮನು ತನ್ನ ಜೊತೆ ಶಿಷ್ಯರಿಗೆ–ನಾವು ಸಹ ಆತನೊಂದಿಗೆ ಸಾಯುವಂತೆ ಹೋಗೋಣ ಅಂದನು,"
(ಓಃ ನೀವು ಯೇಸುವನ್ನು ಹಿಂಬಾಲಿಸಬೇಕೆಂದಿದ್ದರೆ, ನೀವು ಜೀವವನ್ನು ಕಳೆದುಕೊಂಡರೆ, ಅದನ್ನು ಪಡೆದುಕೊಳ್ಳಲು ಸಾಧ್ಯ)

ಮಲ 1:2,3 "...ಏಸಾವನು ಯಾಕೋಬನಿಗೆ ಅಣ್ಣನಲ್ಲವೋ ? ಆದಾಗ್ಯೂ ನಾನು ಯಾಕೋಬನನ್ನು ಪ್ರೀತಿ ಮಾಡಿದೆನು; ಆದರೆ ಏಸಾವನನ್ನು ಹಗೆ ಮಾಡಿದೆನು ..."

**ಗಮನಿಸು** : ರೆಬೆಕ್ಕಳು ಯಾಕೋಬನಿಗೆ ಹೇಗೆ ಸಹಾಯ ಮಾಡಿದಳೋ ಅವನು ಎರಡನೆಯದಾಗಿ ಹುಟ್ಟಿದರೂ ಕೂಡ, ವಾಗ್ದಾನದ ದೇಶವನ್ನು ಪಿತ್ರಾರ್ಜಿತ ಬಾದ್ಯತೆಯನ್ನಾಗಿ ತೆಗೆದುಕೊಳ್ಳುವುದಕ್ಕೋಸ್ಕರ, ಹಾಗೆಯೇ ಪವಿತ್ರಾತ್ಮನು ಎರಡನೆಯದಾಗಿ ಹುಟ್ಟಿದ ಒಳ ಮನುಷ್ಯನಿಗೆ ವಾಗ್ದಾನದ ಕ್ರಿಸ್ತನ ದೇಹವನ್ನು ಪಿತ್ರಾರ್ಜಿತ ಭಾದ್ಯತೆಯನ್ನಾಗಿ ಪಡೆಯಲು ಸಹಾಯ ಮಾಡುತ್ತಾನೆ.

ಈ ತತ್ವವನ್ನು ನಾವು ಅಬ್ರಹಾಮನ ಗಂಡು ಮಕ್ಕಳಲ್ಲಿ ನೋಡುತ್ತೇವೆ. ಇಶ್ಮಯೇಲನು ಒಬ್ಬ ದಾಸಿಯಲ್ಲಿ ಹುಟ್ಟಿದವನು ಮತ್ತು ಇಸಾಕನು ಸ್ವತಂತ್ರಳಲ್ಲಿ ಹುಟ್ಟಿದವನು. ಇಶ್ಮಯೇಲನು ಅಬ್ರಹಾಮನ ಜ್ಯೇಷ್ಠ ಪುತ್ರನಾದರೂ, ವಾಗ್ದಾನವು ಎರಡನೆಯವನಾಗಿ ಹುಟ್ಟಿದ ಇಸಾಕನಿಗೆ ಸೇರಿದ್ದಾಗಿತ್ತು.
**ಗಮನಿಸು** : ಹಾಗರಳಲ್ಲಿ, ಹುಟ್ಟಿದ ಇಶ್ಮಯೇಲನು – ಶರೀರಭಾವದ ಸಾರಳಲ್ಲಿ ಹುಟ್ಟಿದ ಇಸಾಕನನ್ನು ಹಿಂಸಿಸಿದನು–'ಆತ್ಮನು'. ಇದು ಹೀಗಾದದ್ದು ಯಾಕೆಂದರೆ, ಇಶ್ಮಯೇಲನು 14 ವರ್ಷ ದೊಡ್ಡವನಾಗಿದ್ದನು. ಆದುದರಿಂದ ಇಸಾಕನಿಗಿಂತ ಬಲವಾಗಿದ್ದ

ಆದಿ 21:10 "ಅಬ್ರಹಾಮನಿಗೆ (ಸಾರಳು) – ಈ ದಾಸಿಯನ್ನೂ ಅವಳ ಮಗನನ್ನೂ ಹೊರಗೆ ಹಾಕು ;ಈ ದಾಸಿಯ ಮಗನು ನನ್ನ ಮಗನಾದ ಇಸಾಕನ ಸಂಗಡ ಭಾದ್ಯನಾಗಬಾರದು ಎಂದಳು."

ದೇವರ ನ್ಯಾಯ ಪ್ರಮಾಣದ ಕೆಳಗಿನ ಯೆಹೂದ್ಯರ ಹೊಸ ಸಂತತಿಯು, ಅವಿಧೇಯ ಐಗುಪ್ತದ ಯೆಹೂದ್ಯರು ಸಾಯುವುದಕ್ಕಿಂತ ಮುಂಚಿತವಾಗಿ ಕಾನಾನನ್ನು ಪ್ರವೇಶ ಮಾಡಲು ಸಾಧ್ಯವಾಗಲಿಲ್ಲ. ಆದುದರಿಂದ ಹೊಸ ಸಂತತಿಯು, ಹಳೆಯ ಸಂತತಿಯವರನ್ನು ತೆಗೆದು ಹಾಕುವ ತನಕ ಅರಣ್ಯವನ್ನು ತಾಳಿಕೊಳ್ಳಬೇಕಾಯಿತು.

ಆತ್ಮದಲ್ಲಿರುವ ಒಳ ಮನುಷ್ಯನ ವಿಷಯವಾಗಿ ಕೂಡ ಇದು ನಿಜ. ಅವನ ಅವಿಧೇಯತೆಯಿಂದಾಗಿ ಅವನು ಕ್ರಿಸ್ತನ ದೇಹವನ್ನು ಪ್ರವೇಶಿಸಲಾರನು. ಅವನ ಶರೀರಭಾವವೇ ಅವನ ಅವಿಧೇಯತೆಗೆ ಕಾರಣ. ಆದುದರಿಂದ ಅವನು ಮಾಡುವ ಶರೀರ ಭಾವದ ಎಲ್ಲಾ ಕ್ರಿಯೆಗಳು ಸಾಯುವ ತನಕ ಅವನ ವೈಯುಕ್ತಿಕ ಸಿನ್ ಅರಣ್ಯವನ್ನು ಅವನು ತಾಳಿಕೊಳ್ಳಬೇಕಾಗುತ್ತದೆ.

'ಶರೀರ ಭಾವದ ಕ್ರಿಯೆಗಳು ಹೀಗಿರುತ್ತವೆ :
ಸತ್ಯವನ್ನು ಅಡಗಿಸುವುದು, ದೇವರನ್ನು ಅಲ್ಲಗಳೆಯುವುದು, ಕೃತಘ್ನತೆ, ಬುದ್ಧಿಗೇಡಿತನ, ವಿಗ್ರಹಾರಾಧನೆ ಅಶುದ್ಧತೆ – ದೇಹವನ್ನು ಮಾನಹಾನಿ ಮಾಡುವುದು, ಸೃಷ್ಟಿಕರ್ತನನ್ನಲ್ಲದೆ ಸೃಷ್ಟಿಯನ್ನು ಆರಾಧನೆ ಮಾಡಿ ಸೇವಿಸುವುದು, ತುಚ್ಛವಾದ ಮನೋಭಾವಗಳಿರುವುದು, ಅನಿಷ್ಠ ಭಾವಗಳುಳ್ಳದ್ದು, ಹಾದರ, ದುಷ್ಟತನ, ಆಶೆಬುರುಕುತನ, ದುರುದ್ದೇಶ ಉಳ್ಳದ್ದು, ಹೊಟ್ಟೆಕಿಚ್ಚು, ಕೊಲೆಗಡುಕುತನ, ವಿವಾದಾತ್ಮಕ, ಮೋಸಮಾಡುವುದು, ಬದ್ಧ ದ್ವೇಶದ, ಚಾಡಿ ಚುಚ್ಚುವುದು, ಪಿಸುಗುಟ್ಟುವುದು, ದೇವರನ್ನು ಹಗೆ ಮಾಡುವುದು, ವೈರತ್ವ, ಗರ್ವ, ಕೊಚ್ಚಿಕೊಳ್ಳುವುದು. ಕೆಟ್ಟ ಸಂಗತಿಗಳನ್ನು ಕಂಡುಹಿಡಿಯುವುದು, ತಂದೆ ತಾಯಿಗಳಿಗೆ ಅವಿಧೇಯತೆ, ತಾತ್ಸಾರ, ಒಪ್ಪಂದ ಮುರಿಯುವುದು, ಸ್ವಭಾವಸಿದ್ಧತೆ ಇಲ್ಲದಿರುವುದು, ಕ್ರೂರ ತನ, ದಯೆ ಇಲ್ಲದ್ದು, ಮೋಸ ಮಾಡಿ ಅಪಹರಿಸುವುದು, ವ್ಯಭಿಚಾರ, ಕಳ್ಳತನ, ಕುಡಿತ, ದೂಷಿಸುವುದು, ಬಲಾತ್ಕಾರದಿಂದ ಹಣ ಕಸಿಯುವುದು, ಕಾಮುಖತನ, ಮಂತ್ರ ಮಾಡುವದು, ಹಗೆ, ಕೋಪ, ದ್ವೇಶ, ಜಗಳ, ಕೆಡಿಸುವುದು, ಸುಳ್ಳು ಬೋಧನೆ, ಮಜಾಮಾಡುವುದು, ಕೊಳಕುತನ, ಹಾಸ್ಯಮಾಡುವುದು, ಸೂಳೆತನ, ಅಶುದ್ಧತೆಯೂ, ಆಶೆಯು ಉಳ್ಳ ವ್ಯಕ್ತಿಯು ವಿಗ್ರಹಾರಾಧಕನಾಗಿದ್ದಾನೆ. ಸ್ವಯಂ ಅನ್ನು ಪ್ರೀತಿಸುವುದು, ದೇವ ದೂಷಣೆ, ಅಪವಿತ್ರತೆ, ಒಪ್ಪಂದ ಮುರಿಯುವುದು, ಸುಳ್ಳು ಆರೋಪ, ಸಯಮ ರಹಿತವಾದ, ಭಯಂಕರವಾದ, ಒಳ್ಳೆಯವರನ್ನು ಹೀಯಾಳಿಸುವುದು, ದೇಶ ದ್ರೋಹತನ, ಉದಾಸೀನತೆ, ಹೆಮ್ಮೆ, ದೇವರಿಗಿಂತ ಭೋಗವನ್ನು ಪ್ರೀತಿಸುವುದು, ಭಕ್ತಿವೇಷ ಧರಿಸಿ ಅದರ ಪ್ರಭಾವವನ್ನು ಅಲ್ಲಗಳೆಯುವುದು ಮತ್ತು ಇನ್ನೂ

**ಗಮನಿಸು :** ಪವಿತ್ರಾತ್ಮನೂ ಕೂಡ ಮೊದಲು ಹುಟ್ಟಿದ ಒಳ ಮನುಷ್ಯನನ್ನು ತೆಗೆದು ಹಾಕುತ್ತಾನೆ (ಅವನು ಶರೀರಭಾವದವನು) ಮತ್ತು ಎರಡನೆಯದಾಗಿ ಹುಟ್ಟಿದ ಒಳ ಮನುಷ್ಯನಿಗೆ (ಅವನು ಆತ್ಮ ಸಂಬಂಧಿ) ಕ್ರಿಸ್ತನ ದೇಹದ ಭಾಧ್ಯತೆಯನ್ನು ಹೊಂದಲು ಸಹಾಯ ಮಾಡುತ್ತಾನೆ.

ಒಳಮನುಷ್ಯನ ದ್ವಿರೂಪವು ಅವನ ಪಾಪಗಳ ಅರಣ್ಯದಲ್ಲಿ ಅವನನ್ನು ಇರಿಸುತ್ತದೆ. ಯಾಕೆಂದರೆ ಅವನು ಶರೀರಭಾವದಲ್ಲಿದ್ದಾಗ ಮತ್ತು ಅವಿಧೇಯತೆಯ ಮಗನಾಗಿದ್ದಾಗ, ಬರಹಗಳು ಅವನೊಂದಿಗೆ ಮಾತನಾಡಲಿಲ್ಲ. ಆದರೆ ಈಗ ಪವಿತ್ರಾತ್ಮನು ಅವನ ಪಾಪದ ಸ್ಥಿತಿಯನ್ನು ಅವನಿಗೆ ತಿಳಿಯಪಡಿಸುವುದರಿಂದ ಅವನು ಅವನ ಶರೀರ ಭಾವದಿಂದ ರಕ್ಷಿಸಲ್ಪಡುವ, ಅವಶ್ಯಕತೆಯನ್ನು ತಿಳೀದುಕೊಳ್ಳುತ್ತಾನೆ.

ಯೂದಾ 1:5 "...ನಾನು ಇದನ್ನೇ ನಿಮ್ಮ ಜ್ಞಾಪಕಕ್ಕೆ ತರಬೇಕೆಂದು ಅಪೇಕ್ಷಿಸುತ್ತೇನೆ... ಕರ್ತನು (ತನ್ನ) **ಪ್ರಜೆಯನ್ನು ಐಗುಪ್ತದೇಶದೊಳಗಿನಿಂದ ರಕ್ಷಿಸಿದರೂ ತರುವಾಯ ಅವರೊಳಗೆ ನಂಬದೇ ಹೋದವರನ್ನು ಸಂಹಾರ ಮಾಡಿದನು.**

ಅವಿಧೇಯತೆಯು ಯೆಹೂದ್ಯರನ್ನು ಕಾನಾನ್ ದೇಶದ ಪ್ರವೇಶದಿಂದ ಹೇಗೆ ತಡೆಗಟ್ಟಿತೋ ಹಾಗೆಯೇ ಅವಿಧೇಯತೆಯ ಒಳಮನುಷ್ಯನನ್ನು ಕ್ರಿಸ್ತನ ದೇಹದಲ್ಲಿ ಪ್ರವೇಶಿಸುವುದರಿಂದ ತಡೆಗಟ್ಟುತ್ತದೆ. ಯಾಕೆಂದರೆ ಅವನು ಸುವಾರ್ತೆಯನ್ನು ನಂಬುವುದಿಲ್ಲ.

ಇಬ್ರಿ 12:5–8 "...ನನ್ನ ಮಗನೇ **ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡಬೇಡ.** ಇಲ್ಲವೇ ಆತನು ನಿನ್ನನ್ನು ಗದರಿಸುವಾಗ ಬೇಸರಗೊಳ್ಳಬೇಡ ; ಯಾಕೆಂದರೆ ಕರ್ತನು ತಾನು ಪ್ರೀತಿಸುವವರನ್ನೇ ಶಿಕ್ಷಿಸುತ್ತಾನೆ ; **ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗನನ್ನೂ ಹೊಡೆಯುತ್ತಾನೆ** ಎಂಬುದು. **ನೀವು ಶಿಕ್ಷೆಯನ್ನು ತಾಳಿಕೊಂಡರೆ ದೇವರು ನಿಮ್ಮನ್ನು ಪುತ್ರರೆಂದು ನಡೆಸುತ್ತಾನೆ.** ತಂದೆಯಿಂದ ಶಿಕ್ಷೆ ಹೊಂದದ ಮಗನೆಲ್ಲಿ ?**ಆದರೆ ನೀವು ಶಿಕ್ಷೆಹೊಂದುವವರೆಲ್ಲರೊಂದಿಗೆ ಪಾಲುಗಾರರಾಗಿರದಿದ್ದರೆ, ನೀವು ಹಾದರದಿಂದ ಹುಟ್ಟಿದವರೇ ಹೊರತು ಪುತ್ರರಲ್ಲ.**"

ಇಬ್ರಿ 4:1, 2 "...ಆತನ **ವಿಶ್ರಾಂತಿಯಲ್ಲಿ ಸೇರುವೆವೆಂಬ ವಾಗ್ದಾನವು** ಇನ್ನೂ ಇರುವಲ್ಲಿ ನಿಮ್ಮೊಳಗೆ ಯಾವನಾದರೂ ಅದರಿಂದ ತಪ್ಪುವವನಾದನೋ ಎಂದು **ನಾವು ಭಯಪಡೋಣ.** ಯಾಕೆಂದರೆ, ಅವರಿಗೆ ಸುವಾರ್ತೆಯು ಸಾರೋಣವಾದಂತೆಯೇ ನಮಗೂ ಸಾರೋಣವಾಯಿತು. ಆದರೆ ಕೇಳಿದವರು ನಂಬಲಿಲ್ಲವಾದ ಕಾರಣ ಸಾರಿದ ಆ ವಾಕ್ಯದಿಂದ ಅವರಿಗೆ ಪ್ರಯೋಜನವಾಗಲಿಲ್ಲ."

ರೋಮ 2:16 "... ಯೇಸು ಕ್ರಿಸ್ತನ ಮುಖಾಂತರ **ದೇವರು ನ್ಯಾಯ ತೀರಿಸುವ** ದಿವಸದಲ್ಲಿ ಅವರು ತೀರ್ಪು ಹೊಂದುವರು."

ಗಲಾ 5:24 "...**ಕ್ರಿಸ್ತನವರು ತಮ್ಮ ಶರೀರ ಭಾವವನ್ನು** (ಒಳ ಮನುಷ್ಯನ ಶರೀರ ಭಾವ) ಅದರ ಇಚ್ಛೆ, ದುರಾಶೆ ಸಹಿತವಾಗಿ **ಶಿಲುಬೆಗೆ ಹಾಕಿದ್ದಾರೆ.**"

ಯಾಕೋಬ 2 : 21, 22 "ನಮ್ಮ ಪಿತೃವಾದ (ನಂಬಿಕೆಯ) ಅಬ್ರಹಾಮನು ತನ್ನ ಮಗನಾದ **ಇಸಾಕನನ್ನು ಯಜ್ಞವೇದಿಯ ಮೇಲೆ ಅರ್ಪಿಸಿದಾಗ** ನೀತಿ **ನಿರ್ಣಯ ಹೊಂದಿದ್ದು, ಕ್ರಿಯೆಗಳಿಂದಲೆ ಅಲ್ಲವೇ ? ಅವನ ನಂಬಿಕೆಯೂ ಹೀಗೆ ತನ್ನ ಕ್ರಿಯೆಗಳೊಂದಿಗೆ ಕಾರ್ಯ ನಡೆಸಿ, ಆ ಕ್ರಿಯೆಗಳಿಂದಲೇ ನಂಬಿಕೆಯು ಸಿದ್ಧಿಗೆ ಬಂತೆಂಬುದನ್ನು** ನೀನು ಕಾಣುತ್ತೀಯಲ್ಲಾ ?"


ಹೃದಯದಲ್ಲಡಗಿರುವ ಅನೇಕ ಪಾಪಗಳು.

ಸುವಾರ್ತೆಯನ್ನು ನಂಬುವ ಒಳಮನುಷ್ಯನು ಶರೀರ ಭಾವದ ಕ್ರಿಯೆಗಳನ್ನು ಶಿಲುಬೆಗೆ ಹಾಕುತ್ತಾನೆ. ಈ ಶ್ರಮೆಯಲ್ಲಿರುವಾಗ ಅವನ ನಂಬಿಕೆ ಹೆಚ್ಚುತ್ತಾ ಅವನು ಸಂಪೂರ್ಣವಾಗುವವರೆವಿಗೆ ವಿಧೇಯತೆಯನ್ನು ಕಲಿಯುತ್ತಾನೆ. ಅವನ ನಂಬಿಕೆಯು ಇಸಾಕನನ್ನು ಬಲಿ ಅರ್ಪಿಸಿದ ಅಬ್ರಹಾಮನ ನಂಬಿಕೆಗೆ ಸರಿಸಮಾನವಾದಾಗ ದೇವರು ಅವನ ನಂಬಿಕೆಯನ್ನು ನೀತಿಯೆಂದು ಪರಿಗಣಿಸುತ್ತಾನೆ. ನಂತರ ಒಳಮನುಷ್ಯನು ದೇವರ ಸ್ವಭಾವದೊಂದಿಗೆ ಭಾಗಿ ಯಗುತ್ತಾನೆ. ಒಳ ಮನುಷ್ಯನ ದೈವೀಕ ಸ್ವಭಾವ ಸಾಯುತ್ತಲೇ, ಜೀವಂತವಾಗಿ ಬರುತ್ತದೆ.

**ವಿಧೇಯತೆ :**

ನಂಬಿಕೆಗೆ ವಿಧೇಯತೆ ಎರಡು ವಿಧವಾಗಿ ಪರಿಣಾಮ ಬೀರುತ್ತದೆ. ಒಳಮನುಷ್ಯನು ಯೇಸುವಿನ ರಕ್ತದಿಂದ ಚಿಮುಕಿಸಲ್ಪಡುತ್ತಾನೆ. ಮತ್ತು ಕೆಟ್ಟ ಮನಃಸಾಕ್ಷಿಯಿಂದ ಶುದ್ಧೀಕರಿಸಲ್ಪಡುತ್ತಾನೆ. ದೇವರು ಅವನಿಗೆ ಆವಾಗ ಕ್ರಿಸ್ತನ ದೇಹದಲ್ಲಿ ಪ್ರವೇಶ ಕೊಡುತ್ತಾನೆ.

ನೋಡಿ ಕಲಿಯಿರಿ !




ಅವಿಧೇಯತೆಯ ಯೆಹೂದ್ಯರೆಲ್ಲರೂ ಸತ್ತಮೇಲೆ, ವಿಧೇಯತೆಯುಳ್ಳ ಯೆಹೂದ್ಯರು ಯೋರ್ದಾನ್ ಮೂಲಕ ವಾಗ್ದಾನದ ದೇಶದೊಳಗೆ ಹೋದರು. ಅದರಂತೆಯೇ ಅವಿಧೇಯತೆ ಎಲ್ಲವೂ ಸತ್ತಮೇಲೆ, ಪವಿತ್ರಾತ್ಮನು ವಿಧೇಯತೆಯುಳ್ಳ ಮನುಷ್ಯನಿಗೆ ಕ್ರಿಸ್ತನ ದೇಹದಲ್ಲಿ ಬಾಪ್ತಿಸ್ಮ ಮಾಡಿಸುತ್ತಾನೆ.

**ಕ್ರಿಸ್ತನ ದೇಹದಲ್ಲಿ :**

ಕ್ರಿಸ್ತನ ದೇಹದಲ್ಲಿರುವ ಒಳಮನುಷ್ಯನು ವಿಶ್ರಾಂತಿಯಲ್ಲಿ ಪ್ರವೇಶಿಸಿದ್ದಾನೆ. ಇದು ದೇವರು ತನಗೆ ವಿಧೇಯರಾಗಿರುವ ಎಲ್ಲರಿಗೂ ವಾಗ್ದಾನ ಮಾಡಿದ ವಿಶ್ರಾಂತಿ. ಇಂತಹ ಒಳ ಮನುಷ್ಯನು ಆತ್ಮೀಯನು ಯಾಕೆಂದರೆ ಅವನು ಆತ್ಮನಲ್ಲಿ ಮಾರ್ಪಾಟು ಹೊಂದಿದನು, ಅವನಿಗೆ ಪವಿತ್ರಾತ್ಮನ ಮನಸ್ಸು ಮತ್ತು ಸ್ವಾಭಾವ ಇರುವುದರಿಂದ ಅವನು ದೇವರಿಂದ ಹುಟ್ಟಿದವನಾಗಿದ್ದಾನೆ.

ಅಬ್ರಹಾಮನು ದೇವರು ಸತ್ತವರನ್ನು ಎಬ್ಬಿಸುವನೆಂದು ನಂಬಿದನು. ವಿಶ್ವಾಸಿಯೂ ಕೂಡ ಅವನ ಸ್ವೇಚ್ಛೆಯನ್ನು ಸಾಯಿಸುವುದಾದರೆ, ನೂತನ ಸ್ವೇಚ್ಛೆಯು ಜೀವಂತ ಮಾಡಲ್ಪಡುತ್ತದೆಂದು ನಂಬಬೇಕು. ಒಳ ಮನುಷ್ಯನು ಪರಿಪೂರ್ಣನಾಗಬೇಕೆಂದರೆ, ಈ ನಂಬಿಕೆಯ ಕಾರ್ಯವನ್ನು ಮಾಡಬೇಕು.

ಯೊರ್ದಾನ್ ನದಿಯು ಯೆಹೂದ್ಯರಿಗೆ ಆತ್ಮದ ಬಾಪ್ತಿಸ್ಮ ಆಗಿತ್ತು. ತಮ್ಮ ಜೀವಕ್ಕಾಗಿ ಭಯಪಟ್ಟವರು ದೇವರಿಗೆ ಅವಿಧೇಯರಾಗಿ ಕಾನಾನನ್ನು ಬಿಟ್ಟುಬಿಟ್ಟರು.
ಇಬ್ರಿ 3:18, 19 "ತನ್ನ ವಿಶ್ರಾಂತಿಯಲ್ಲಿ **ಅವರು ಸೇರುವುದೇ** ಇಲ್ಲವೆಂದು ಯಾರನ್ನು ಕುರಿತು ಆತನು ಪ್ರಮಾಣ ಮಾಡಿದನು?**ನಂಬದವರ ವಿಷಯವಾಗಿ** ಅಲ್ಲವೇ? **ಅವರು ಸೇರಲಾರದೆ ಹೋದದ್ದು ಅಪನಂಬಿಕೆಯಿಂದಲೇ** ಎಂದು ತಿಳಿದುಕೊಳ್ಳುತ್ತೇವೆ."

ಒಳ ಮನುಷ್ಯನ ವಿಷಯವಾಗಿಯೂ ಇದೇ ನಿಜ. ಅವನಿಗೆ ತನ್ನ ಪಾಪದ ಜೀವಿತವನ್ನು ಕಳೆದುಕೊಳ್ಳುವ ಭಯ. ಅವನು ಆತ್ಮದ ಬಾಪ್ತಿಸ್ಮವನ್ನು ತಡೆಗಟ್ಟುವುದರಿಂದ ಕ್ರಿಸ್ತನ ದೇಹದಲ್ಲಿ ಪ್ರವೇಶಿಸಲಾರನು.

1 ಥೆಸಾ 4:7, 8 "ಯಾಕೆಂದರೆ ದೇವರು ನಮ್ಮನ್ನು ಅಶುದ್ಧತೆಗೆ ಕರೆಯದೆ ಶುದ್ಧತೆಗೆ ಕರೆದನು. ಹೀಗಿರಲು ತಾತ್ಸಾರ ಮಾಡುವವನು ಮನುಷ್ಯನನ್ನಲ್ಲ, ತನ್ನ ಪರಿಶುದ್ಧಾತ್ಮನನ್ನು ನಮಗೆ ದಯಪಾಲಿಸಿರುವ ದೇವರನ್ನೇ ತಾತ್ಸಾರ ಮಾಡುತ್ತಾನೆ."

ತೀತ 2:11,12 "ಯಾಕೆಂದರೆ ಎಲ್ಲಾ ಮನುಷ್ಯರಿಗೆ ರಕ್ಷಣೆಯನ್ನುಂಟು ಮಾಡುವ ದೇವರ ಕೃಪೆಯು ಪ್ರತ್ಯಕ್ಷವಾಯಿತು. **ನಾವು ಭಕ್ತಿಹೀನತೆಯನ್ನೂ ಲೋಕದ ಆಶೆಗಳನ್ನೂ ತೊರೆದು ಈಗಿನ ಲೋಕದಲ್ಲಿ ಸ್ವಸ್ಥಚಿತ್ತರಾಗಿಯೂ ನೀತಿವಂತರಾಗಿಯೂ ಭಕ್ತಿಯುಳ್ಳವರಾಗಿಯೂ ಬದುಕಬೇಕೆಂದು ಅದು (ಆ ಕೃಪೆಯು) ನಮಗೆ ಬೋಧಿಸುತ್ತದೆ.**"

ಯೋಹಾ 3:5 "ಯೇಸು ಪ್ರತ್ಯುತ್ತರವಾಗಿ ಅವನಿಗೆ ನಿನಗೆ ನಿಜ ನಿಜವಾಗಿ ಹೇಳುತ್ತೇನೆ **ಒಬ್ಬನು ನೀರಿನಿಂದಲೂ** (ಕೆಂಪು ಸಮುದ್ರ) **ಆತ್ಮನಿಂದಲೂ** (ಯೋರ್ದಾನ್ ನದಿ) **ಹುಟ್ಟದಿದ್ದರೆ ದೇವರ ರಾಜ್ಯದೊಳಗೆ** (ಕಾನಾನ್) **ಪ್ರವೇಶಿಸಲಾರನು.**"


ರೋಮ 8:1 "ಆದ್ದರಿಂದ ಕ್ರಿಸ್ತ ಯೇಸುವಿನಲ್ಲಿರುವವರಿಗೆ **ಅಪರಾಧ ನಿರ್ಣಯವು ಈಗ ಇಲ್ಲವೇಇಲ್ಲ;ಇವರು ಶರೀರಕ್ಕನುಸಾರವಾಗಿ ಅಲ್ಲ, ಆತ್ಮನಿಗನುಸಾರವಾಗಿಯೇ ನಡೆಯುವವರಾಗಿದ್ದಾರೆ.**"

2 ಕೊರಿ 5:17 "ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾಗಿದ್ದಾನೆ. ಹಳೆಯವು ಅಳಿದುಹೋದವು ; ಇಗೋ ಎಲ್ಲವೂ ನೂತನವಾದವು.

**ಒಬ್ಬ ದೇವರ ಮಗನು ಪಾಪ ಮಾಡುವುದಿಲ್ಲ.**

ಒಳ ಮನುಷ್ಯನು ಮಾರ್ಪಟ್ಟ ಮೇಲೆ ಅವನಿಗೆ ಕ್ರಿಸ್ತನ ಆತ್ಮನು ಲಭಿಸಿದ್ದಾನೆ. (ಕ್ರಿಸ್ತನ ಹೋಲಿಕೆ) ಮತ್ತು ವಾಗ್ದಾನಕ್ಕೆ ವಾರಸುದಾರನಾಗಿದ್ದಾನೆ. ಪಾಪ ಮಾಡುತ್ತಿದ್ದ ದೇವರ ಮಗನು, ಪಾಪ ಮಾಡದ ದೇವರ ಮಗನಾದನು.

ನೋಡಿ ಕಲಿಯಿರಿ !




ಒಳ ಮನುಷ್ಯನು ವಿಧೇಯನು ಯಾಕೆಂದರೆ ಅವನ ಪಾಪಗಳಿಗಾಗಿ ಅವನು ಮರಣದ ಮಟ್ಟಿಗೆ ಶ್ರಮೆ ಹೊಂದಿದ ನಂತರ, ಅವನು ಆತ್ಮದ ಬಾಪ್ತಿಸ್ಮದ ಮೂಲಕ ಜೀವಂತನಾದನು. ಇಂತಹ ವಿಶ್ವಾಸಿ ದೇವರ ಬಗ್ಗೆ ಎಚ್ಚರಿಕೆಯಾಗಿರುತ್ತಾನೆ. ಮತ್ತು ದೇವರ ಸ್ವಭಾವವನ್ನು ಹೊಂದಿರುತ್ತಾನೆ.

ಈ ವಿಶ್ವಾಸಿಯು ಹೊರ ಮನುಷ್ಯನಲ್ಲಿ ಈಗ ನೀರಿನಿಂದ ಹುಟ್ಟಿದ್ದಾನೆ. ಮತ್ತು ಒಳ ಮನುಷ್ಯನಲ್ಲೀ ಕೂಡ ಆತ್ಮನಿಂದ ಹುಟ್ಟಿದ್ದಾನೆ. ಅವನು ಕ್ರಿಸ್ತನ ದೇಹದಲ್ಲಿದ್ದಾನೆ. ಮತ್ತು ಅವನು ಆತ್ಮದ ಫಲವನ್ನು ಕೊಡುತ್ತಾನೆ, ಅವು : ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ವಿನಯ, ಸದ್ಗುಣ, ನಂಬಿಕೆ, ಸಾತ್ವಿಕತೆ, ಮಿತ ವ್ಯಯ ಇಂಥವುಗಳೇ ;   ದೇವರ ಚಿತ್ತ ಅವರಿಗೆ ತಿಳಿದಿರುವುದರಿಂದ ಪ್ರಪಂಚದಿಂದ ತನ್ನನ್ನು ತಾನು ನಿಷ್ಕಳಂಕವಾಗಿ ನೋಡಿಕೊಳ್ಳುತೆನೆ. ಮತ್ತು ಕೆಡುಕನು ಅವನಿಗೆ ಏನೂ ಮಾಡುವುದಿಲ್ಲ.

ಕರ್ತನಾದ ಯೇಸು ಕ್ರಿಸ್ತನ ಮಹಿಮೆಯನ್ನು ಉಚಿತವಾಗಿ ಪಡೆಯಲು ಕ್ರಿಸ್ತನ ಸುವಾರ್ತೆಯು ಒಳ ಮನುಷ್ಯನನ್ನು ಕರೆಯಿತು. ಈಗ ಒಳಮನುಷ್ಯನು ತನ್ನ ಹಳೆಯ ಪಾಪ ಸ್ವಭಾವದಿಂದ ಸ್ವತಂತ್ರ್ಯನಾಗಿರುವುದರಿಂದ ಮತ್ತು ನೀತಿಯ ಸೇವಕನಾಗಿ, ಆತನು ನಿತ್ಯ ಜೀವದ ಬಗ್ಗೆ ಖಚಿತವಾಗಿ ಇರುವನು. ಅವನ ಮಾರಕ ದೇಹ ಅಮರತ್ವವನ್ನು ಹೊಂದಿದಾಗ ಅವನು ಜೀವದ ಕಿರೀಟವನ್ನು ಹೊಂದುವನು.




ಕಾನಾನ್ ಒಳಗೆ ಪ್ರವೇಶಿಸಿದ ಯೆಹೂದ್ಯರು ಕ್ರಿಸ್ತನ ದೇಹದೊಳಗೆ ಪ್ರವೇಶಿಸಿದ ಒಳ ಮನುಷ್ಯನನ್ನು ಪ್ರಕಟ ಪಡಿಸುತ್ತದೆ. ಅವಿಧೇಯತೆಯ ಐಗುಪ್ತದ ಯಹೂದ್ಯರು ಹೇಗೆ ನಿರ್ಮೂಲವಾದರೋ, ಹಾಗೆಯೇ ಶರೀರ ಭಾವದಲ್ಲಿ ಹುಟ್ಟಿದ ಒಳ ಮನುಷ್ಯನು ಕೂಡ ನಿರ್ಮೂಲವಾದನು.

ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟಾಗ ಸುನ್ನತಿ ಹೊಂದಿದರು. ಮತ್ತು ಯೋರ್ದಾನ್ ಮೂಲಕ ಅವರು ದಾಟಿದಾಗ ಮತ್ತೆ ಅವರು ಸುನ್ನತಿ ಹೊಂದಿದರು. ಅದೇ ರೀತಿಯಲ್ಲಿ ವಿಶ್ವಾಸಿಯು ಹೊರಮನುಷ್ಯನಲ್ಲಿ ಸುನ್ನತಿ ಹೊಂದಿದನು. ಆಗ ಪಾಪದ ದೇಹವನ್ನು ಬೇರ್ಪಡಿಸಲಾಯಿತು. ತಿರುಗಿ ಒಳ ಮನುಷ್ಯನಲ್ಲಿ ಸುನ್ನತಿಯಾದಾಗ ಅವನ ಪಾಪದ ಸ್ವಭಾವವನ್ನು ಬೇರ್ಪಡಿಸಲಾಯಿತು.

ಯೆಹೋ 5:9 "ಮತ್ತು ಕರ್ತನು ಯೆಹೋಶುವನಿಗೆ  **ಈ ದಿನ ಐಗುಪ್ತದ ನಿಂದೆಯನ್ನು ನಿಮ್ಮಿಂದ ನಿವಾರಿಸಿಬಿಟ್ಟಿದ್ದೇನೆ** ಎಂದನು."


ಕ್ರಿಸ್ತನಲ್ಲಿರುವುದು ಎಂದರೆ ಕ್ರಿಸ್ತನ ದೇಹದಲ್ಲಿರುವುದು. ಅಂದರೆ ಅವನ ಸಭೇ (ಚರ್ಚ್) ಎಂದೂ ಕೂಡ ಕರೆಯಲ್ಪಟ್ಟಿದೆ. ಆದುದರಿಂದ ಸಭೆಯು ಕಾನಾನಿಗೆ ಅನ್ವಯವಾಗುತ್ತದೆ. ಯೆಹೂದ್ಯರು ಹೇಗೆ ಎಲ್ಲಾ ವಿಗ್ರಹಾರಾಧಿಗಳನ್ನು ಕಾನಾನಿನಿಂದ ತೆಗೆದು ಹಾಕಿದರೋ ಹಾಗೆಯೇ ವಿಧೇಯರಾದ ವಿಶ್ವಾಸಿಗಳು ಎಲ್ಲಾ ಅವಿಧೇಯ ವಿಶ್ವಾಸಿಗಳನ್ನು ಅವರ ಮಧ್ಯದಿಂದ ತೆಗೆದು ಹಾಕಬೇಕು.

1 ಪೇತ್ರ 5:10 "ಆದರೆ ಕ್ರಿಸ್ತ ಯೇಸುವಿನ ಮೂಲಕ ನಿಮ್ಮನ್ನು **ತನ್ನ ನಿತ್ಯ ಪ್ರಭಾವಕ್ಕೆ ಕರೆದ** ಕೃಪಾಪೂರ್ಣನಾದ ದೇವರು ತಾನೇ **ನೀವು ಸ್ವಲ್ಪಕಾಲ ಬಾಧೆ ಪಟ್ಟಮೇಲೆ ನಿಮ್ಮನ್ನು ಪರಿಪೂರ್ಣ ಮಾಡಿ, ಸ್ಥಿರಪಡಿಸಿ, ಬಲಪಡಿಸಿ, ನೆಲೆಗೊಳಿಸುವನು.**"


ಇಬ್ರಿ 4:9–11 "ಆದ್ದರಿಂದ ದೇವ ಜನರಿಗೆ ವಿಶ್ರಾಂತಿಯು ಇನ್ನೂ ಉಂಟು. ಹೇಗೆಂದರೆ ತನ್ನ ಕೆಲಸಗಳನ್ನು ಮುಗಿಸಿ ಹೇಗೆ ವಿಶ್ರಮಿಸಿಕೊಂಡನೋ ಹಾಗೆಯೇ **ಆತನ ವಿಶ್ರಾಂತಿಯಲ್ಲಿ ಸೇರಿರುವವನು ಸಹಾ ತನ್ನ ಕೆಲಸಗಳನ್ನು ಮುಗಿಸಿ ವಿಶ್ರಮಿಸಿಕೊಂಡಿದ್ದಾನೆ.** ಆದ್ದರಿಂದ ನಾವು ಅವರ ಅಪನಂಬಿಕೆಯನ್ನು ಅನುಸರಿಸುವವರಾಗಿರದಂತೆ ಆ ವಿಶ್ರಾಂತಿಯಲ್ಲಿ ಸೇರುವುದಕ್ಕೆ ಪ್ರಯಾಸ ಪಡೋಣ."

1 ಯೋಹಾ 5:18–20 "**ದೇವರಿಂದ ಹುಟ್ಟಿರುವವನು ಪಾಪ ಮಾಡುವವನಲ್ಲ**ವೆಂಬುದು ನಮಗೆ ಗೊತ್ತಿದೆ. **ದೇವರಿಂದ ಹುಟ್ಟಿದವನು ತನ್ನನ್ನು ತಾನು ಕಾಪಾಡಿಕೊಳ್ಳುವನು ;ಕೆಡುಕನು ಆತನ್ನನ್ನು ಮುಟ್ಟುವುದಿಲ್ಲ.** ನಾವು ದೇವರಿಗೆ ಸಂಬಂಧ ಪಟ್ಟವರಾಗಿದ್ದೇವೆಂದು ಲೋಕವೆಲ್ಲವೂ ಕೆಟ್ಟತನದಲ್ಲಿ ಬಿದ್ದಿದೆ ಎಂದು ನಮಗೆ ಗೊತ್ತಿದೆ. **ದೇವರ ಮಗನು ಬಂದು ನಾವು ಸತ್ಯವಾಗಿರುವಾತನನ್ನು ಅರಿತುಕೊಳ್ಳುವ ಹಾಗೆ** ನಮಗೆ "ತಿಳುವಳಿಕೆಯನ್ನು ಕೊಟ್ಟಿದ್ದಾನೆಂಬುದು ನಮಗೆ ಗೊತ್ತದೆ. ಮತ್ತು **ನಾವು ಆತನ ಮಗನಾದ ಯೇಸುಕ್ರಿಸ್ತನಲ್ಲಿ ಇರುವವರಾಗಿ ಸತ್ಯವಾಗಿ ಇರುವಾತನಲ್ಲಿದ್ದೇವೆ. ಈತನೇ ಸತ್ಯ ದೇವರು, ನಿತ್ಯ ಜೀವವು ಆಗಿದ್ದಾನೆ.**"


## ಸಾರಂಶ





**ಪಾಪದ ದೇಹದಲ್ಲಿ:**
ಪಾಪಿಗಳು (ಪ್ರಪಂಚವು) ಸರಿಯೇನೆಂದು ತಿಳಿದಿದ್ದಾರೆ. ಆದುದರಿಂದ ಅವರ ಪಾಪಗಳಿಗೆ ಅವರು ನ್ಯಾಯವಿಲ್ಲದವರಾಗಿದ್ದಾರೆ. ಅವರು ಅವಿಧೇಯತೆಯನ್ನು (ಪಾಪ) ತಮ್ಮ ಜೀವನದ ಒಂದು ಭಾಗವಾಗಿ ಒಪ್ಪಿಕೊಳ್ಳುತ್ತಾರೆ. ಅವರು ಮಾತ್ರ ಅವಿಧೇಯರಲ್ಲದೆ ಆದರೆ, ಪಾಪ ಮಾಡುವವರನ್ನೂ ಸೇರಿಸಿಕೊಳ್ಳುತ್ತಾರೆ. ನೀತಿಗನುಸಾರವಾದ ದೇವರ ತೀರ್ಪು ಏನೆಂದರೆ, ಪಾಪ ಮಾಡುವ ಪ್ರತಿಯೊಬ್ಬನೂ ಅನರ್ಹನು ಮತ್ತು ಮರಣಹೊಂದ ತಕ್ಕವನು.





**ಪಾಪದ ನಾಶನ:**
ಯೇಸುವಿನಲ್ಲಿನ ನಂಬಿಕೆಯಿಂದ ಒಬ್ಬ ಪಾಪಿಯು ಮರಣದಿಂದ ಪಾರಾಗಬಹುದು, ಯಾಕೆಂದರೆ, ಯೇಸುವು ಪಾಪಿಗೆ ಬದಲಾಗಿ ಇರುವ ಯಜ್ಞ, ಅವನ ಪೂರ್ವದ ಪಾಪಗಳನ್ನೂ ಕ್ಷಮಿಸಬಲ್ಲನು.




**ಆತ್ಮನಲ್ಲಿ :**
ಒಳಮನುಷ್ಯನು ಆತ್ಮನಲ್ಲಿರುವಾಗ, ಪವಿತ್ರಾತ್ಮನು ಪಾಪಿಗೆ ಸತ್ಯವನ್ನು ಪ್ರಕಟಮಾಡಿ ವಿಧೇಯತೆಯನ್ನು ಕಲಿಸುತ್ತಾನೆ.




**ಶರೀರಭಾವವು ತೆಗೆಯಲ್ಪಟ್ಟಿತು :**
ನಂಬಿಕೆಗೆ ವಿಧೇಯನಾಗುವುದರ ಮೂಲಕ ಶರೀರ ಭಾವವು ಆತ್ಮನಿಂದ ಸಾಯಿಸಲ್ಪಡುತ್ತದೆ. ಇದರಿಂದಾಗಿ ಒಳ ಮನುಷ್ಯನು ಕ್ರಿಸ್ತನ ದೇಹವನ್ನು ಪ್ರವೇಶಿಸಲು ಸಾಧ್ಯ.




**ಕ್ರಿಸ್ತನ ದೇಹದಲ್ಲಿ :**
ಒಳ ಮನುಷ್ಯನಿಗೆ ಸರಿ ಯೇನೆಂದು ಗೊತ್ತು ಮತ್ತು ಅವಿಧೇಯತೆಯನ್ನು ಜೀವನದ ತನ್ನ ಒಂದು ಭಾಗವೆಂದು ಅವನು ಒಪ್ಪಿಕೊಳ್ಳುವುದಿಲ್ಲ. ದೇವರ ನೀತಿಗನುಸಾರವಾದ ನ್ಯಾಯ ತೀರ್ಪಿನ ಪ್ರಕಾರ ಭಕ್ತನು ನಿತ್ಯ ಜೀವಕೆ ಅರ್ಹನಾಗುತ್ತಾನೆ.

**ಸಮಾಪ್ತಿ**

**ಸಭೆ (ಚರ್ಚ್)**

ದೇವರು ಆದಮನ ದೇಹದಲ್ಲಿರುವ ಪಾಪಿಗಳನ್ನು ಕ್ರಿಸ್ತನ ದೇಹದಲ್ಲಿರುವ ಭಕ್ತರಂತಾಗುವಂತೆ ಕರೆಯುತ್ತಾನೆಂಬುದನ್ನು ನಾವು ತೋರಿಸುತ್ತೇವೆ. ಒಟ್ಟಾಗಿ ಪಾಪಿಗಳು ಈ ಪ್ರಪಂಚವನ್ನು ರಚಿಸುತ್ತಾರೆ. ಮತ್ತು ಒಟ್ಟಾಗಿ ಪರಿಶುದ್ಧರು ಸಭೆಯನ್ನು ರಚಿಸುತ್ತಾರೆ. ಈ ಪ್ರಪಂಚವು ಅಂಧಕಾರದ ರಾಜ್ಯ, ಯಾಕೆಂದರೆ ಅದು "ಒಳ್ಳೆ ಮತ್ತು ಕೆಟ್ಟದರ" ತಿಳುವಳಿಕೆಯಿಂದ ಆಳಲ್ಪಟ್ಟಿದೆ. ಸಭೆ, ಇನ್ನೊಂದು ರೀತಿಯಾಗಿ ಬೆಳಕಿನ ರಾಜ್ಯವಾಗಿದೆ, ಯಾಕೆಂದರೆ ಅದು ದೇವರ ತಿಳುವಳಿಕೆಯಿಂದ ಆಳಲ್ಪಟ್ಟಿದೆ.

**ಸಭೆ (ಕಾನಾನ್)**

ಕಾನಾನ್ ಭೂಮಿಯ ಮೇಲೆ ದೇವರ ರಾಜ್ಯವಾಗಿತ್ತು, ಯಾಕೆಂದರೆ ದೇವರ ನ್ಯಾಯಪ್ರಮಾಣ ಅಲ್ಲಿ ಪ್ರಭುತ್ವ ನಡೆಸಿತು. ಕಾನಾನಿನಲ್ಲಿ ಕೆಲವರು ದೇವರ ನಿಯಮಕ್ಕೆ ವಿಧೇಯರಾಗಿದ್ದರು. ಮತ್ತು ಇನ್ನೂ ಕೆಲವರು ವಿಗ್ರಹಾರಾಧಕರಾಗಿ ದೇವರಿಗೆ ಅವಿಧೇಯರಾಗಿ ನಡೆಯುತ್ತಿದ್ದರು. ನ್ಯಾಯ ಪ್ರಮಾಣವು ವಿಗ್ರಹಾರಾಧನೆಯನ್ನು ನಿಷೇಧಿಸಿರುವುದರಿಂದ ವಿಧೇಯರಾದ ಯಹೂಧ್ಯರು ಎಲ್ಲಾ ವಿಗ್ರಹಾರಾಧಕರನ್ನು ದೇಶದಿಂದ ತೆಗೆದುಹಾಕಬೇಕಾಗಿತ್ತು.

ಹಾಗೆಯೇ ಸಭೆ ಪ್ರಪಂಚದಲ್ಲಿ ದೇವರ ರಾಜ್ಯವಾಗಿದೆ. ಹೇಗಾದರೂ ಕಾನಾನಿನಲ್ಲಿದ್ದಂತೆ ಸಭೆಯಲ್ಲಿಯೂ ಭಕ್ತರನ್ನು ಮತ್ತು ಭಕ್ತಿ ಹೀನರನ್ನು ಕೂಡ ನಾವು ಕಾಣುತ್ತೇವೆ. ಆತ್ಮನ ನಿಯಮವು ಕ್ರಿಸ್ತನ ದೇಹದಲ್ಲಿ ಪ್ರಭುತ್ವ ನಡಿಸುವುದರಿಂದ ಸಭೆಯುಲ್ಲಿ ಪಾಪವನ್ನು ಅನುಮತಿಸಲಾಗದು. ಈ ಕಾರಣದಿಂದ ಭಕ್ತಿ ಹೀನರು ಅವರ ಪಾಪಕ್ಕಾಗಿ ಪಶ್ಚಾತ್ತಾಪ ಪಡಬೇಕು ಮತ್ತು ಭಕ್ತರಾಗಬೇಕು. ಅವರ ಪಶ್ಚಾತ್ತಾಪ ಪಟ್ಟು ಬದಲಾಗದಿದ್ದರೆ, ಅವರನ್ನು ತೆಗೆದು ಹಾಕಬೇಕು, ಯಾಕೆಂದರೆ ಅವರು ಕ್ರಿಸ್ತ–ವಿರೋಧಿಗಳು.

ಆದುದರಿಂದ ನಿಜವಾದ ಸಭೆಯು ಪಾಪಕ್ಕೆ ತೀರ್ಪು ಮಾಡುತ್ತದೆ ಮತ್ತು ತನ್ನನ್ನು ತಾನು ನಿಷ್ಕಳಂಕನೂ, ನಿಂದೆಗೆ ಗುರಿಯಾದವನೂ ಆಗಿ ಇರುತ್ತದೆ.

1ಕೊರಿ 5:11 ಆದರೆ ಕ್ರಿಸ್ತನಲ್ಲಿ ತನ್ನನ್ನು ಸಹೋದರನೆಂದು ಹೇಳಿಕೊಳ್ಳುವವನು ಲೈಂಗಿಕ ಪಾಪ ಮಾಡುವವನಾಗಿದ್ದರೆ, ಸ್ವಾರ್ಥಿಯಾಗಿದ್ದರೆ, ವಿಗ್ರಹಗಳನ್ನು ಪೂಜಿಸುವವನಾಗಿದ್ದರೆ,

**ವಚನಗಳು ಮತ್ತು ವ್ಯಾಖ್ಯಾನಗಳು**

ಎಫೆ 2:1, 2 "ಇದಲ್ಲದೆ ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಆತನು ಬದುಕಿಸಿದನು. ನೀವು ಪೂರ್ವದಲ್ಲಿ **ಅಪರಾಧಗಳನ್ನೂ, ಪಾಪಗಳನ್ನೂ ಮಾಡುವವರಾಗಿದ್ದು, ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ. ವಾಯುಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ ಅಂದರೆ ಅವಿಧೇಯತೆಯ ಮಕ್ಕಳಲ್ಲಿ** (ಪಾಪಿಗಳು) ಈಗ ಕೆಲಸ ನಡೆಸುವ ಆತ್ಮನಿಗನುಸಾರವಾಗಿ ನಡೆದುಕೊಂಡಿರು."

ಕೊಲೋ 1:13 "ಆತನು ನಮ್ಮನ್ನು **ಅಂಧಕಾರದ ಶಕ್ತಿಯಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು.**"

ಪ್ರಪಂಚದಲ್ಲಿ ಅನೇಕ ನಂಬಿಕೆಗಳೂ ಪಂಗಡಗಳೂ ಇವೆ. ಇನ್ನೊಂದು ಕಡೆಯ ಸಭೆಯು ಒಂದು ವಾಸ್ತವೀಕತೆ ಮತ್ತು ಒಂದು ಮತವಲ್ಲ. ಆದರೆ ಪವಿತ್ರಾತ್ಮನಿಂದಾದುದು.


ಯಹೋ 24:20, 23 "ಯಾಕೆಂದರೆ **ಕರ್ತನನ್ನು ಬಿಟ್ಟು, ಅನ್ಯ ದೇವರುಗಳನ್ನು ಸೇವಿಸಿದರೆ,** ಒಳ್ಳೆಯದನ್ನು ಮಾಡದೆ ಆತನು ನಿಮಗೆ **ಕೇಡು ಮಾಡಿ ನಿಮ್ಮನ್ನು ದಹಿಸಿ ಬಿಡುವನು ಎಂದನು...** ಅದಕ್ಕವನು, ಈ ನಿಮ್ಮ ಮಧ್ಯದಲ್ಲಿರುವ **ಅನ್ಯದೇವರನ್ನು ತೊರೆದು, ನಿಮ್ಮ ಹೃದಯವನ್ನ ಇಸ್ರಯೇಲಿನ ದೇವರಾದ ಕರ್ತನಿಗೆ ತಿರಿಗಿಸಿರಿ** ಎಂದನು.

ಯಹೂದ್ಯರು ಯಹೋಷುವನ ಎಚ್ಚರಿಕೆಯ ಮಾತುಗಳಿಗೆ ಕಿವಿಗೊಡಲಿಲ್ಲ ಎಂದು ನಮಗೆ ಗೊತ್ತು, ಆದರೆ ಉಳಿದವರು ಯಾವಾಗಲೂ ನಂಬಿಗಸ್ತರಾಗಿದ್ದರು.

1 ಅರಸು 19:14, 18 "ಅದಕ್ಕೆ ಅವನ (ಯಲೈಜ) **...ಇಸ್ರಾಯೇಲಿನ ಮಕ್ಕಳು ನಿನ್ನ ಒಡಂಬಡಿಕೆಯನ್ನು ಬಿಟ್ಟು...** ನಾನೊಬ್ಬನೇ ಉಳಿದಿದ್ದೇನೆ... ಆದರೆ **ಬಾಳನಿಗೆ ಬಗ್ಗದೆ ಇರುವ ಸಕಲ ಮೊಣಕಾಲುಗಳೂ** ಅದನ್ನು ಮುದ್ದಿಡದ ಸಕಲ ಬಾಯಿಗಳೂ ಆಗಿರುವ **7 ಸಾವಿರ ಮಂದಿಯನ್ನು ಇಸ್ರಾಯೇಲಿನಲ್ಲಿ** ನನಗೋಸ್ಕರ (ಕರ್ತನು) ಉಳಿಸಿಕೊಂಡಿದ್ದೇನೆ ಅಂದನು."

1 ಕೊರಿ 5:11–13 "ಆದರೆ **ಸಹೋದರನೆನಿಸಿಕೊಂಡವನು** ಜಾರನಾದರೂ, ಲೋಭಿಯಾದರೂ, ವಿಗ್ರಹಾರಾಧಕನಾದರೂ, ಬೈಯ್ಯುವವನಾದರೂ, ಕುಡುಕನಾದರೂ, ಸುಲುಕೊಳ್ಳುವವನಾದರೂ, ಆಗಿದ್ದ ಪಕ್ಷದಲ್ಲಿ , **ಅಂಥವನ ಸಹವಾಸ ಮಾಡಬಾರದು, ಅಂಥವನ ಸಂಗಡ ಊಟ ಮಾಡಲೂ ಬಾರದು** ಎಂದು ನಾನು ಹೀಗೆ ಬರೆದಿದ್ದೇನೆ. ಹೊರಗಿನವರಿಗೆ ಸಹಾ ತೀರ್ಪು ಮಾಡುವುದಕ್ಕೆ ನನಗೇನಿದೆ **? ಒಳಗಿನವರಿಗೆ ತೀರ್ಪು ಮಾಡುವವರು ನೀವೇ ಅಲ್ಲವೆ** ?"ಆದರೆ ಹೊರಗಿನವರಿಗೆ ತೀರ್ಪು ಮಾಡುವಾತನು ದೇವರು ; ಆದ್ದರಿಂದ **ಆ ದುಷ್ಟನನ್ನು ನಿಮ್ಮ ಮಧ್ಯದಿಂದ ಹೊರಗೆ ಹಾಕಿರಿ.**

ಜನರಿಗೆ ಕೆಟ್ಟ ಮಾತುಗಳನ್ನಾಡುವವನಾಗಿದ್ದರೆ, ಮದ್ಯಪಾನ ಮಾಡಿ ಮತ್ತನಾಗುವವನಾಗಿದ್ದರೆ, ಜನರಿಗೆ ಮೋಸ ಮಾಡುವವನಾಗಿದ್ದರೆ, ಅವನ ಸಹವಾಸ ಮಾಡಬಾರದು; ಅವನೊಂದಿಗೆ ಊಟವನ್ನು ಸಹ ಮಾಡಬಾರದು.




**ಸಭೆಯು ಕ್ರಿಸ್ತನ ದೇಹ :**

ಮೇಲಣ ಚಿತ್ರ ನಮಗೆ ತೋರಿಸುವುದೇನೆಂದರೆ, ಕ್ರಿಸ್ತನ ದೇಹ ಪಾಪ ರಹಿತವಾದುದರಿಂದ, ಸಭೆಯೂ ಕೂಡಾ ಪಾಪ ರಹಿತವಾಗಿರಬೇಕು. ಪರಿಶುದ್ಧತೆಯನ್ನು ಪರಿಪೂರ್ಣ ಮಾಡಿದವರು ಮಾತ್ರ ಆತನ ದೇಹದ ಸದಸ್ಯರು. ಬರಹವೂ ಇದನ್ನು ಕಲಿಸುವುದರಿಂದ ಇದು ಹೀಗಾಗಿದೆ ; **"**...ಆತನು ಎಂತವನಾಗಿದ್ದನೋ, ನಾವು ಅಂತವರಾಗಿಯೇ ಈ ಲೋಕದಲ್ಲಿದ್ದೇವೆ (1 ಯೋಹ 4:17)"

ಆದಮನು ಅವಿಧೇಯತೆಯಿಂದ ಸೈತಾನನ ಮಗನಾದನು ಮತ್ತು ಯೇಸು ವಿಧೇಯತೆಯಿಂದ ದೇವರ ಮಗನಾದನು. ಪ್ರತಿ ಮನುಷ್ಯನೂ ತನ್ನ ದೇಹಕ್ಕೆ ತಲೆಯಾಗಿದ್ದಾನೆ. ಆದಮನು ಪಾಪಿಗಳಿಗೆ ಶಿರಸ್ಸು ಮತ್ತು ಕ್ರಿಸ್ತನು ಭಕ್ತರಿಗೆ ಶಿರಸ್ಸು. ಆದುದರಿಂದ ಒಬ್ಬ ವ್ಯಕ್ತಿಯು ಆದಮನ ದೇಹದಲ್ಲಿಯಾದರೂ ಇದ್ದಾನೆ ಅಥವಾ ಕ್ರಿಸ್ತನ ದೇಹದಲ್ಲಿಯಾದರೂ ಇದ್ದಾನೆ.

ಪ್ರಪಂಚವು ಒಂದು ಜನಾಂಗದ ದೇಹವನ್ನು ಒಳಗೊಂಡಿದೆ. ಅವರು ಪಾಪ ಮಾಡುತ್ತಾರೆ ಮತ್ತು ಸಭೆಯು ಒಂದು ಜನಾಂಗದ ದೇಹವನ್ನು ಒಳಗೊಂಡಿದೆ, ಅವರು ಪಾಪ ಮಾಡುವುದಿಲ್ಲ. ಕ್ರಿಸ್ತನ ದೇಹವು ಭಕ್ತರನ್ನು ಒಳಗೊಂಡಿರುವುದರಿಂದ, ಹೊಸದಾಗಿ ಮತಾಂತರ ಹೊಂದಿದ ಕ್ರೈಸ್ತರು ಭಕ್ತರಾಗಿರಬೇಕು. ಭಕ್ತನಾಗಲು ಅವನು / ಅವಳು ಅವರ ಪಾಪಕ್ಕಾಗಿ ಪಶ್ಚಾತ್ತಾಪ ಪಡಬೇಕು ಮತ್ತು ಆತ್ಮನಿಗೆ ವಿಧೇಯರಾಗಬೇಕು.

1 ತಿಮೋ 6:3,4 "ಯಾವನಾದರೂ ಬೇರೆ ವಿಧವಾದ ಉಪದೇಶವನ್ನು ಮಾಡಿ, ಅಂದರೆ ನಮ್ಮ **ಕರ್ತನಾದ ಯೇಸು ಕ್ರಿಸ್ತನ ಸ್ವಸ್ಥವಾದ ಮಾತುಗಳಿಗೂ ವ್ಯಾಕ್ಯನು ಸಾರವಾದ ಬೋಧನೆಗೂ** ಸಮ್ಮತಿಸದೇ ಹೋದರೆ, ಅಂತವನು ಒಂದನ್ನೂ ತಿಳಿಯದೇ ಕುತರ್ಕವಾಗ್ವಾಧಗಳನ್ನು ಮಾಡುವ ಭ್ರಾಂತಿಯಲ್ಲಿದ್ದು, ಅಹಂಕಾರಿಯಾಗಿದ್ದಾನೆ."

ಎಫೆ 5:23,27 "ಯಾಕೆಂದರೆ **ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ** ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಆತನು (ಕ್ರಿಸ್ತನು) ದೇಹಕ್ಕೆ ರಕ್ಷಕನಾಗಿದ್ದಾನೆ... ಅದನ್ನು ಕಳಂಕ, ಸೊಕ್ಕು ಇಂತದ್ದು ಯಾವುದೂ ಇಲ್ಲದೇ ಪರಿಶುದ್ಧವೂ ದೋಷವಿಲ್ಲದ್ದೂ ಆಗಿರುವ **ಮಹಿಮೆಯುಳ್ಳ ಸಭೆಯನ್ನಾಗಿ ತನಗೆ ತಾನೇ ಸಮರ್ಪಿಸಿಕೊಳ್ಳಬೇಕೆಂದಿದ್ದಾನೆ.**"

ಎಫೆ 3:8–10 "**ಕ್ರಿಸ್ತನ ಶೋಧಿಸಲಶಕ್ಯವಾದ ಐಶ್ವರ್ಯದ** ವಿಷಯವಾಗಿ ಅನ್ಯಜನರಿಗೆ ಸಾರುವ ಹಾಗೆ ಪರಿಶುದ್ಧರೊಳಗೆ ಅತ್ಯಲ್ಪನಾದ ನನಗೆ ಅನುಗ್ರಹಿಸೋಣವಾಯಿತಿ. ಸಮಸ್ತವನ್ನು ಯೇಸುಕ್ರಿಸ್ತನಿಂದ ಸೃಷ್ಟಿಸಿದ ದೇವರಲ್ಲಿ ಲೋಕಾದಿಯಿಂದ ಮರೆಯಾಗಿದ್ದ ಮರ್ಮದ ಅನ್ಯೋನ್ಯತೆಯು ಎಲ್ಲರಿಗೂ ತೋರುವಂತೆ ಮಾಡುವ ಹಾಗೆಯೂ ನಾನಾ ವಿಧವಾದ ದೇವರ ಜ್ಞಾನವು ಸ್ವರ್ಗದಲ್ಲಿ **ಈಗ ರಾಜತ್ವಗಳಿಗೂ ಅಧಿಕಾರಗಳಿಗೂ ಸಭೆಯ ಮೂಲಕ ಗೊತ್ತಾಗಬೇಕೆಂಬುದಾಗಿಯೂ ಆತನು ಉದ್ದೇಶಿಸಿದ್ದನು ;**"

1 ತಿಮೋ 3:15 "ಆದರೆ, ಒಂದುವೇಳೆ ನಾನು ತಡ ಮಾಡಿದರೂ **ಸತ್ಯಕ್ಕೆ ಸ್ಥಂಭವೂ ಆಧಾರವೂ** ಆಗಿರುವ **ದೇವರ ಮನೆಯಲ್ಲಿ** ಅಂದರೆ ಜೀವ ಸ್ವರೂಪನಾದ ದೇವರ **ಸಭೆಯಲ್ಲಿ ನಡೆದುಕೊಳ್ಳಬೇಕಾದ** ರೀತಿಯು ನಿನಗೆ ಗೊತ್ತಾಗಬೇಕು"

1 ಯೋಹಾ 3:2,3 "ಪ್ರಿಯರೇ, ನಾವು ಈಗ ದೇವರ ಪುತ್ರರಾಗಿದ್ದೇವೆ ; ಮುಂದೆ ನಾವು ಯೇನಾಗುವೆವೋ ಅದು ಇನ್ನೂ ಪ್ರತ್ಯಕ್ಷವಾಗಲಿಲ್ಲ. ಆದರೆ, ಆತನು ಪ್ರತ್ಯಕ್ಷನಾದಾಗ ಆತನ ಹಾಗಿರುವೆವೆಂದು ಬಲ್ಲೆವು ; ಯಾಕೆಂದರೆ ನಾವು ಆತನನ್ನು ಆತನಿರುವ ಪ್ರಕಾರವೇ ನೋಡುವೆವು."

ರೋಮ 5:19 "ಯಾಕೆಂದರೆ **ಒಬ್ಬ ಮನುಷ್ಯನ ಅವಿಧೇಯತೆಯಿಂದ,** ಅನೇಕರು ಹೇಗೆ ಪಾಪಿಗಳಾದರೋ, ಹಾಗೆಯೇ **ಒಬ್ಬನ ವಿಧೇಯುತ್ವದಿಂದ,** ಅನೇಕರು ನೀತಿವಂತರಾಗುವರು.**"**

1 ಯೋಹ 3:10 "ಇವರು ದೇವರ ಮಕ್ಕಳೆಂಬುದು ಅವರು ಸೈತಾನನ ಮಕ್ಕಳೆಂಬುದು ಇದರಿಂದ ವ್ಯಕ್ತವಾಗುತ್ತದೆ.**ನೀತಿಯನ್ನು ಅನುಸರಿಸದವನೂ** ತನ್ನ ಸಹೋದರರನನ್ನು ಪ್ರೀತಿಸದವನೂ **ದೇವರಿಗೆ ಸಂಬಂಧಪಟ್ಟವನಲ್ಲ**"

ಎಫೆ 4:20–24 "ನೀವಾದರೋ ಕ್ರಿಸ್ತನನ್ನು ಹಾಗೆ ಕಲಿತುಕೊಳ್ಳಲಿಲ್ಲ ;**ಆತನನ್ನೇ ಕೇಳಿದಿರಲ್ಲ, ಆತನಲ್ಲೇ ಉಪದೇಶ ಹೊಂದಿದಿರಲ್ಲ,** ಯೇಸುವಿನಲ್ಲಿರುವ ಸತ್ಯೋಪದೇಶವು ಯಾವುದೆಂದರೆ – ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವ ಸ್ವಭಾವವನ್ನು **ತೆಗೆದು ಹಾಕಿಬಿಡಬೇಕು.** ಅದು ಮೋಸಕರವಾದ ದುರಾಶೆಗಳಿಂದ ಕೆಟ್ಟು ಹೋಗುವಂತದ್ದು. ನೀವು **ನಿಮ್ಮ ಮನಸ್ಸಿನ ಭಾವದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ.** ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ನೀತಿಯಲ್ಲಿಯೂ ನಿಜವಾದ ಪರಿಶುದ್ಧತೆಯಲ್ಲಿಯು ನಿರ್ಮಿಸಲ್ಪಟ್ಟಿದೆ."

ಓದುಗನು ಆಧುನಿಕ ಚರ್ಚುಗಳೊಂದಿಗೆ ಯೇಸು ಕ್ರಿಸ್ತನ ಚರ್ಚನ್ನು ಗಲಿಬಿಲಿ ಮಾಡಿಕೊಳ್ಳಬಾರದು. ನಿಜವಾದ ಸಭೆ ಪ್ರತ್ಯಕ್ಷವಾದದ್ದಲ್ಲ, ಯಾಕೆಂದರೆ ಆಧುನಿಕ ಚರ್ಚುಗಳು ಪ್ರಪಂಚವನ್ನನು ಸರಿಸುವವರಾಗಿದ್ದಾರೆ, ಅಂದರೆ ಅವರು ಪಾಪವನ್ನೂ ಪಾಪಿಗಳನ್ನೂ ಹೊಂದಿಕೊಂಡು ಹೋಗುತ್ತಾರೆ.

ದೇವರ ಮಕ್ಕಳು ತೋರ್ಪಡಿಸಿಕೊಳ್ಳಬೇಕು ಎಂದು ನಾವು ಬಯಸಿದರೆ, ಅಗ ನಮ್ಮ ದಿನದ ಸುಳ್ಳು ಬೋಧನೆಗಳು ನಿಲ್ಲಬೇಕು, ಯಾಕೆಂದರೆ ಕ್ರಿಸ್ತನಲ್ಲಿರುವ ಸತ್ಯವೇ ಅಂಗಗಳನ್ನು ಭಕ್ತರಾಗಲು ಬಿಡುತ್ತದೆ.

**ನಿನ್ನನ್ನು ನೀನು ಪರೀಕ್ಷಿಸಿಕೋ :**

ನೆನಪಿನಲ್ಲಿಡು ! ನಿನ್ನ ಪಂಗಡ ಅಥವಾ ಚರ್ಚನ್ನು ಬದಲಾಯಿಸುವುದರಿಂದ ನೀನು ಭಕ್ತನಾಗಲು ಸಾಧ್ಯವಿಲ್ಲ. ನೀನು ನಿನ್ನನ್ನು ಬದಲಾಯಿಸಿಕೊಳ್ಳಬೇಕು. ಪವಿತ್ರಾತ್ಮನ ಸಹಾಯದಿಂದಲೂ ಮತ್ತು ಸತ್ಯವನ್ನು ಪ್ರೀತಿಸಿ ಸುಳ್ಳನ್ನು ಹೇಸುವ ಏಕ ಮನಸ್ಸಿನ ವಿಶ್ವಾಸಿಗಳ ಸಹಾಯದಿಂದಲೂ ಇದು ಸಾಧ್ಯ.

ಕರ್ತನ ಭೋಜನವು ದೇವರ ಸಾಧನ, ಒಬ್ಬ ವಿಶ್ವಾಸಿಯನ್ನು ತನ್ನನ್ನು ತಾನು ಪರೀಕ್ಷಿಸಿಕೊಳ್ಳಲು ಒತ್ತಾಯಿಸುತ್ತದೆ. ಹೀಗೆ ಅವನು / ಅವಳು ಪರಿಪೂರ್ಣ ಪರಿಶುದ್ಧತೆಯನ್ನು ಹೊಂದಬಹುದು. ರಾತ್ರಿ ಬೋಜನದ ರೊಟ್ಟಿ ಮತ್ತು ದ್ರಾಕ್ಷಾ ರಸದಲ್ಲಿ ಪಾಲುಗೊಳ್ಳುವವನು / ಅವಳು, ಕರ್ತನ ದೇಹ ಮತ್ತು ಜೀವದೊಂದಿಗೆ ಅನ್ಯೋನ್ಯ ಸಹವಾಸವಿದೆ ಎಂದು ತೋರಿಸುತ್ತಾನೆ / ಳೆ. ಪ್ರತಿ ವಿಶ್ವಾಸಿಯು ತನ್ನ ಸ್ವಂತ ಜೀವನದ ಬಗ್ಗೆಯೂ ಸಹ ವಿಶ್ವಾಸಿಗಳ ಬಗ್ಗೆಯೂ ಚಿಂತಿಸಬೇಕು, ಯಾಕೆಂದರೆ, ವ್ಯೆಯುಕ್ತಿಕವಾಗಿಯೂ ಒಂದಾಗಿಯೂ ಅವರು ಕರ್ತನ ದೇಹವಾಗಿದ್ದಾರೆ.

ಕರ್ತನ ದೇಹವು ಪವಿತ್ರವಾದುದರಿಂದ ಎಲ್ಲ ವಿಶ್ವಾಸಿಗಳು ತಮ್ಮನ್ನು ತಾವು ಶುದ್ಧೀಕರಿಸಿಕೊಳ್ಳಬೇಕು, ಯಾಕೆಂದರೆ ಸಭೆಯೂ ಕೂಡ ಪರಿಶುದ್ಧವಾಗಿರ ಬೇಕು, ಯಾವನಾದರೂ ತನ್ನ ಜೀವನದಲ್ಲಿ ಪಾಪಕ್ಕೆ ಸ್ಥಳಕೊಟ್ಟಿದ್ದರೆ. ಅವನು ತನಗೆ ತಾನು ದಂಡನೆಯನ್ನು ತಿಂದು ಕುಡಿಯುತ್ತಾನೆ. ಅವನು ಅಥವಾ ಅವಳು ಪಶ್ಚಾತ್ತಾಪಪಟ್ಟು ಭಕ್ತಿಹೀನತೆಯಿಂದ ತಿರುಗಿಕೊಳ್ಳದಿದ್ದರೆ. ಪ್ರಪಂಚದೊಂದಿಗೆ ಅವನೂ ಕೂಡ ದೇವರಿಂದ ನ್ಯಾಯ ತೀರ್ಪಿಗೆ ಗುರಿಯಾಗುತ್ತಾನೆ.

1 ಕೊರಿ 3:3,4 "**ಯಾಕೆಂದರೆ** ನೀವು ಇನ್ನೂ ಪ್ರಾಪಂಚಿಕರಾಗಿದ್ದೀರಿ. **ನಿಮ್ಮೊಳಗೆ ಹೊಟ್ಟೆಕಿಚ್ಚು, ಜಗಳ, ಬೇಧಗಳಿರುವಲ್ಲಿ ನೀವು ಪ್ರಾಪಂಚಿಕರಾಗಿದ್ದು, ಮನುಷ್ಯರಂತೆ (ಪ್ರಪಂಚ) ನಡೆಯುತ್ತೀರಲ್ಲವೇ** ? ಯಾಕೆಂದರೆ ಒಬ್ಬನು – ನಾನು ಪೌಲನವನೆಂದೂ ಮತ್ತೊಬ್ಬನು – ನಾನು ಅಪಲ್ಲೋಸನವರೆನೆಂದೂ ಹೇಳುತ್ತಿರುವಾಗ ನೀವು ಪ್ರಾಪಂಚಿಕರಲ್ಲವೇ?"

1 ಕೊರಿ 15:34 "**ನೀತಿಗಾಗಿ ಎಚ್ಚರಗೊಳ್ಳಿರಿ, ಪಾಪ ಮಾಡಬೇಡಿರಿ ; ಯಾಕೆಂದರೆ ಕೆಲವರಿಗೆ ದೇವರ ವಿಷಯವಾದ ಜ್ಞಾನವೇ** ಇಲ್ಲ;ನಾನು ಇದನ್ನು ನಿಮಗೆ ನಾಚಿಕೆ ಪಡಿಸುವುದಕ್ಕಾಗಿ ಹೇಳುತ್ತೇನೆ."

2 ಕೊರಿ 13:5 "**ನಂಬಿಕೆಯಲ್ಲಿ ನೀವು ಇದ್ದೀರೋ ಏನೋ ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ** ; ನೀವು **ಭ್ರಷ್ಟರಲ್ಲದಿದ್ದರೆ** ಯೇಸುಕ್ರಿಸ್ತನು ನಿಮ್ಮಲ್ಲಿದ್ದಾನೆಂದು ನಿಮ್ಮಷ್ಟಕ್ಕೆ ನೀವು ತಿಳಿದುಕೊಳ್ಳುವುದಿಲ್ಲವೋ ?"

1 ಕೊರಿ 5:6–8 "ನೀವು ಹಿಗ್ಗುವುದು ಒಳ್ಳಯದಲ್ಲ, ಸ್ವಲ್ಪ ಹುಳಿಯು ಕಣಿಕವನ್ನೆಲ್ಲ ಹುಳಿ ಮಾಡುತ್ತದೆಂಬುದು ನಿಮಗೆ ತಿಳಿಯದೋ ? ಆದ್ದರಿಂದ ನೀವು ಹುಳಿಯಿಲ್ಲದವರಾದ ಕಾರಣ **ಹೊಸ ಕಣಿಕವಾಗಿರುವಂತೆ ಆ ಹಳೇ ಹುಳಿಯನ್ನು ತೆಗೆದು ಹಾಕಿರಿ** ; ಯಾಕೆಂದರೆ ನಮ್ಮ ಪಸ್ಕವಾಗಿರುವ ಕ್ರಿಸ್ತನೇ ನಮಗೋಸ್ಕರ ಯಜ್ಞಾರ್ಪಿತನಾಗಿದ್ದಾನೆ, ಆದ ಕಾರಣ ನಾವು ಹಳೇ ಹುಳಿಯನ್ನು ಅಂದರೆ, ದುರ್ಮಾರ್ಗತ್ವ ಮತ್ತು ದುಷ್ಟತ್ವ ಎಂಬ ಹುಳಿಯನ್ನು ಇಟ್ಟುಕೊಳ್ಳದೇ, ಸರಳತೇ ಮತ್ತು ಸತ್ಯತೇ ಎಂಬ ಹುಳಿಯಿಲ್ಲದ ರೊಟ್ಟಿಯಿಂದ ಹಬ್ಬವನ್ನು ಆಚರಿಸೋಣ."

1 ಕೊರಿ 11:27,29,31,32 "ಹೀಗಿರುವುದರಿಂದ ಯಾವನಾದರೂ ಅಯೋಗ್ಯವಾಗಿ ಈ ರೊಟ್ಟಿಯನ್ನು ತಿಂದು ಕರ್ತನ ಪಾತ್ರೆಯಲ್ಲಿ ಪಾನ ಮಾಡಿದರೆ, ಅವನು ಕರ್ತನ ದೇಹಕ್ಕೂ ರಕ್ತಕ್ಕೂ ಅಪರಾಧ ಮಾಡಿದವನಾಗಿರುವನು; ಯಾಕೆಂದರೆ **ಕರ್ತನ ದೇಹವೆಂದು ವಿವೇಚಿಸದ ಅಯೋಗ್ಯವಾಗಿ ತಿಂದು ಕುಡಿಯುವವನು, ಹಾಗೆ ತಿಂದು ಕುಡಿಯುವುದರಿಂದ ನ್ಯಾಯತೀರ್ಪಿಗೊಳಗಾಗುವವನು ; ಯಾಕೆಂದರೆ ನಮ್ಮನ್ನು ನಾವು ವಿಚಾರಿಸಿಕೊಂಡರೆ ನ್ಯಾಯವಿಚಾರಣೆಗೊಳಗಾಗುವುದಿಲ್ಲ,** ಆದರೆ ನಮ್ಮನ್ನು ನಾವು ವಿಚಾರಿಸಿಕೊಂಡಾಗ **ಲೋಕದವರ ಸಂಗಡ ನಮಗೆ ಅಪರಾಧಿಗಳೆಂಬ ನಿರ್ಣಯವಾಗಬಾರದೆಂದು** ಕರ್ತನು ನಮ್ಮನ್ನು ಶಿಕ್ಷಿಸುತ್ತಾನೆ."

ಪ್ರಕ 3:16 "ಆದರೆ ನೀನು ತಣ್ಣಗಾಗಲೀ ಇಲ್ಲವೇ ಬಿಸಿಯಾಗಲೀ ಇಲ್ಲದೇ ಉಗುರು ಬೆಚ್ಚಗಿರುವುದರಿಂದ ನಿನ್ನನ್ನು ನಾನು ನನ್ನ ಬಾಯೊಳಗಿನಿಂದ ಕಾರುವೆನು."

## ಭಾಗ 3

# ದೇವರ ನಿತ್ಯವಾದ ಉದ್ದೇಶ

**ಈ ಭಾಗದಲ್ಲಿ ನಾವು ನಿಮಗೆ ತೋರಿಸಲಿರುವುದು :**

- ದೇವರು ತನ್ನನ್ನು ತಾನು ಮೂರು ವ್ಯಕ್ತಿಗಳನ್ನಾಗಿ ಪ್ರಕಟಿಸಿಕೊಂಡನು;
- ಮನುಷ್ಯನು ಒಂದು ತ್ರಿತ್ವ, ಅದಕ್ಕೆ ಪ್ರಾಣವಿದೆ, ಒಂದು ಆತ್ಮ ಮತ್ತು ಒಂದು ದೇಹ
- ಪಾಪವು ದೇಹದಲ್ಲಿ ಪ್ರವೇಶಿವುಸುದಕ್ಕೆ ಮುಂಚೆ ಅವಿಧೇಯತೆ ದೈವೀಕ ಕ್ರಮವನ್ನು ಕೆಡಿಸಿಬಿಟ್ಟಿತು
- ಯೇಸುವು ಕರ್ತನು ಯಾಕೆಂದರೆ, ಆತನು ದೇವರಿಗೆ ವಿಧೇಯತೆಯಿಂದ ಸೈತಾನನನ್ನು ಜೈಸಿದನು ಮತ್ತು ದೇಹದಲ್ಲಿ ಪಾಪವನ್ನು ನಾಶನ ಮಾಡಿದನು;
- ಪವಿತ್ರಾತ್ಮನು ವಿಶ್ವಾಸಿಯನ್ನು ಪಾಪದಿಂದ ಸ್ವತಂತ್ರನನ್ನಾಗಿ ಮಡುತ್ತಾನೆ ಮತ್ತು ಒಳ ಮನುಷ್ಯನು ತಿರಿಗಿ ಭಕ್ತನಾಗುವಂತೆ ಸಹಾಯ ಮಾಡುತ್ತಾನೆ.

**ಫಿಲಿಪ್ಪಿಯದವರಿಗೆ ಬರೆದ ಪತ್ರದಿಂದ ಆರಿಸಿದ ಈ ಪ್ರಾರ್ಥನೆಯನ್ನು ಆಗಾಗ ಮಾಡು. 1:9–11 ;**

"ತಂದೆಯೇ ಇದು ನಾನು ..............................................................
(ದಯವಿಟ್ಟು ನಿನ್ನ ಹೆಸರನ್ನು ಇಲ್ಲಿ ಬರೆ)
ನನ್ನ ಪ್ರೀತಿಯು ಹೆಚ್ಚುತ್ತಾ ಹೆಚ್ಚುತ್ತಾ ನಾನು ಜ್ಞಾನ ಮತ್ತು ಪೂರ್ಣ
ವಿವೇಕಗಳಿಂದ ಕೂಡಿದವನಾಗಿರಬೇಕೆಂತಲೂ ಉತ್ತಮ ಕಾರ್ಯಗಳು
ಯಾವುವೆಂದು ನಾನು ವಿವೇಚುಸುವವನಾಗಿ ಇರಬೇಕೆಂತಲೂ ಕ್ರಿಸ್ತನ
ದಿನದ ವರೆಗೆ ನಾನು ಸರಳವಾಗಿಯೂ
ನಿರ್ಮಲನಾಗಿಯೂ ಇರಬೇಕೆಂತಲೂ ಯೇಸು ಕ್ರಿಸ್ತನ ಮೂಲಕ
ನೀತಿಯೆಂಬ ಫಲಗಳಿಂದ ತುಂಬಿದವನಾಗಿ ದೇವರಿಗೆ ಮಹಿಮೆಯನ್ನು
ತರುವವನಾಗಿರಬೇಕೆಂತಲೂ ಪ್ರಾರ್ಥಿಸುತ್ತೇನೆ."
**ಆಮೆನ್.**

## ಅಧ್ಯಾಯ – 7


### ದೇವರು ಮನುಷ್ಯನಲ್ಲಿ ಪ್ರಕಟವಾದನು

ದೇವರ ನಿತ್ಯವಾದ ಉದ್ದೇಶ ಏನೆಂದರೆ, ತನ್ನ ಸ್ವಂತ ಚಿತ್ತದ ಪ್ರಕಾರ ತನ್ನ ಮಗನಾದ ಯೇಸು ಕ್ರಿಸ್ತನ ಮೂಲಕ ಪುತ್ರರನ್ನು ದತ್ತು ತೆಗೆದುಕೊಳ್ಳಲು ತೀರ್ಮಾನ ಮಾಡಿದನು.ಈ ಚಿತ್ತದ ನಿಮಿತ್ತವಾಗಿ ನಾವು ಮೊದಲೇ ಗೊತ್ತುಮಾಡಲ್ಪಟ್ಟಿದ್ದೇವೆ ಮತ್ತು ಯೇಸು ಕ್ರಿಸ್ತನ ಮೂಲಕ ದೇವರ ದತ್ತು ಪುತ್ರರಾಗುವುದಕ್ಕೋಸ್ಕರ ಆರಿಸಲ್ಪಟ್ಟಿದ್ದೇವೆ. ಒಬ್ಬ ದೇವರ ಮಗನು ಪಾಪ ಮಾಡುವುದಿಲ್ಲ ಎಂದು ದೇವರು ಮನುಷ್ಯನಿಗೆ ತಿಳಿಯಪಡಿಸಿದನು.ಆದುದರಿಂದಲೇ ದೇವರು ನಮ್ಮನ್ನು ಕರೆಯುತ್ತಾನೆ.

ನಾವು ಪರಿಶುದ್ಧರಾಗಿಯೂ ಆತನ ಎದುರಿನಲ್ಲಿ ನಿಂದೆ ಯಿಲ್ಲವರಾಗಿಯೂ (ಸಂಪೂರ್ಣರಾಗಿ) ಇರಬೇಕೆಂಬದೇ. ಕ್ರಿಸ್ತನ ಮುಂಚಿನ ದೈವ ನಿಯಮಗಳಲ್ಲಿ ಒಳ ಮನುಷ್ಯನು ಪಾಪ ಮಾಡುವುದನ್ನು ನಿಲ್ಲಿಸಲಾರದೇ ಹೋದನು, ಯಾಕೆಂದರೆ ದೇಹದಲ್ಲಿ ಪಾಪವಿತ್ತು. ಈ ಕಾರಣದಿಂದ ದೇವ ಕುಮಾರನಾದ ಯೇಸು ಪಾಪವನ್ನು ನಾಶಗೊಳಿಸಲು ಪಾಪದ ದೇಹದಲ್ಲಿ ಕಾಣಿಸಿಕೊಂಡು, ಆದ್ದರಿಂದ ದೇವರ ಮಕ್ಕಳು ನಿವಸಿಸಲು ದೇವರು ಪಾಪರಹಿತ ದೇಹವನ್ನುಂಟು ಮಾಡಬೇಕೆಂಬುದೇ.

**ದೇವರು ತನ್ನನ್ನು ತಾನು ಮೂರು ವ್ಯಕ್ತಿಗಳಲ್ಲಿ ತೋರಿಸಿಕೊಂಡನು.**

ನೋಡಿ ಕಲಿಯಿರಿ !




ದೇವರು ಆತ್ಮ ಸ್ವರೂಪಿ ಮತ್ತು ತನ್ನನ್ನು ತಾನು ನಮಗೆ ಮೂರು ವ್ಯಕ್ತಿಗಳಾಗಿ ತೋರಿಸಿಕೊಂಡನು. ಈ ಪರೋಕ್ಷ ದೇವರು ತನ್ನನ್ನು ತಾನು ತಂದೆ, ವಾಕ್ಯ ಮತ್ತು ಪವಿತ್ರಾತ್ಮರೆಂದು ತೋರಿಸಿಕೊಂಡನು.

### ವಚನಗಳು ಮತ್ತು ವ್ಯಾಖ್ಯಾನಗಳು

ಎಫೆ 1:4,5 "ನಾವು ಪ್ರೀತಿಯಲ್ಲಿದ್ದು, ಆತನ ಸನ್ನಿಧಿಯಲ್ಲಿ ಪರಿಶುದ್ಧರೂ, **ನಿರ್ದೋಶಿಗಳೂ ಆಗಿರಬೇಕೆಂದು ಅತನು ಜಗತ್ತಿಗೆ ಅಸ್ತಿವಾರ ಹಾಕುವುದಕ್ಕೆ ಮುಂಚೆ** ನಮ್ಮನ್ನು (ಕ್ರಿಸ್ತನಲ್ಲಿ) ಆರಿಸಿಕೊಂಡನು. ಆತನು ತನ್ನ ಚಿತ್ತದ ದಯಾಪೂರ್ವಕವಾದ ಆನಂದಕ್ಕನುಸಾರವಾಗಿ, ಯೇಸುಕ್ರಿಸ್ತನ **ಮೂಲಕ ನಮ್ಮನ್ನು ತನಗೋಸ್ಕರ ದತ್ತುಪುತ್ರ** ಸ್ವೀಕಾರ ಮಾಡುವಂತೆ ಮೊದಲೇ ಸಂಕಲ್ಪಿಸಿದನು...."


1 ಯೋಹಾ 4:17 "ನ್ಯಾಯ ತೀರ್ಪಿನ ದಿನದಲ್ಲಿ ನಮಗೆ ಧೈರ್ಯವಿರುವಂತೆ ನಮ್ಮ ಪ್ರೀತಿಯು ಸಿದ್ಧಿಗೆ ಬಂತು, **ಯಾಕೆಂದರೆ ಆತನು ಎಂತವನಾಗಿದ್ದನೋ ನಾವು ಅಂತವರಾಗಿಯೇ ಈ ಲೋಕದಲ್ಲಿದ್ದೇವೆ"**

ಲೂಕ 24:39 "**ನನ್ನ ಕೈಗಳನ್ನು ಮತ್ತು ಕಾಲುಗಳನ್ನು ನೋಡಿರಿ; ನಾನೇ ಅಲ್ಲವೇ ; ನನ್ನನ್ನು ಮುಟ್ಟಿ ನೋಡಿರಿ**, ಯಾಕೆಂದರೆ ನೀವು ನೋಡುವಂತೆ ನನಗಿರುವ ಮಾಂಸ ಮತ್ತು ಎಲುಬುಗಳು (ದೇಹ) ಭೂತಕ್ಕೆ ಇಲ್ಲ ಅಂದನು."

1 ಯೋಹಾ 1:1–2 "ಆದಿಯಿಂದ ಇದ್ದದ್ದನ್ನೂ **ಆ ಜೀವವಾಕ್ಯದ ವಿಷಯವಾಗಿ ಕೇಳಿದ್ದನ್ನೂ, ಕಣ್ಣಾರೆ ಕಂಡು ನೋಡಿದ್ದನ್ನೂ, ನಾವು ಕೈಯಿಂದ ಮುಟ್ಟಿದ್ದೇವೆ,** ಯಾಕೆಂದರೆ ಆ **ಜೀವವು ಪ್ರತ್ಯಕ್ಷವಾಯಿತು,** ತಂದೆಯ ಬಳಿಯಲ್ಲಿದ್ದು ನಮಗೆ ಪ್ರತ್ಯಕ್ಷವಾದಂತ ಆ ನಿತ್ಯ ಜೀವವನ್ನು ನಾವು ಕಂಡು, ಅದನ್ನು **ಕುರಿತು ಸಾಕ್ಷಿ ಹೇಳಿ ಅದನ್ನು ನಿಮಗೆ ತಿಳಿಯಪಡಿಸುತ್ತೇವೆ.**"

ಒಳ ಮನುಷ್ಯನಾದ ಯೇಸು ಪಾಪದ ದೇಹದಲ್ಲಿದ್ದಾಗ ದೇಹಕ್ಕೆ ನಿತ್ಯ ಜೀವವಿರಲಿಲ್ಲ. ಅದು ಮುಪ್ಪಾಗಿ ಸತ್ತಿತು.ಪಾಪ ರಹಿತವಾದ ನೂತನ ದೇಹ ಮುಪ್ಪಾಗಿ ಸಾಯುವುದಿಲ್ಲ, ಯಾಕೆಂದರೆ ಅದಕ್ಕೆ ನಿತ್ಯ ಜೀವ ಇದೆ.

ಕೆಳಗೆ ದೃಷ್ಟಾಂತದ ಮೂಲಕ ಕೊಟ್ಟಿರುವ ಚಿತ್ರದ ಪ್ರಕಾರ ದೇವರು ಒಂದು ತ್ರಿತ್ವ




ತಂದೆಯು ತ್ರಿತ್ವದ **ಪ್ರಾಣ** ಮತ್ತು ತಲೆ, ಪವಿತ್ರಾತ್ಮವು ತ್ರಿತ್ವದ **ಆತ್ಮ** ಮತ್ತು ಮಗನು ತ್ರಿತ್ವದ **ದೇಹ** ಆದುದರಿಂದ ಮನುಷ್ಯನು ಪ್ರಾಣ, ಆತ್ಮ ಮತ್ತು ಒಂದು ದೇಹದಿಂದ ಉಂಟು ಮಾಡಲ್ಪಟ್ಟನು.

1 ಯೋಹ 5:7 "ಯಾಕೆಂದರೆ ಸ್ವರ್ಗದಲ್ಲಿ ಸಾಕ್ಷಿಕೊಡುವವರು **ಮೂವರಿದ್ದಾರೆ** ; ಅವರು ಯಾರೆಂದರೆ, **ತಂದೆಯು,ವಾಕ್ಯವು** ಮತ್ತು **ಪರಿಶುದ್ಧಾತ್ಮನು** ; ಮೂವರಾಗಿರುವ ಇವರು ಒಂದಾಗಿದ್ದಾರೆ."

ಮತ್ತ 28:19 "ಹೋಗಿ ... ಎಲ್ಲಾ ಜನಾಂಗಗಳಿಗೆ ಬೋಧಿಸಿ, ಅವರಿಗೆ **ತಂದೆಯ,ಮಗನ** ಮತ್ತು **ಪವಿತ್ರಾತ್ಮದ** ಹೆಸರಿನಲ್ಲಿ ಬಾಪ್ತಿಸ್ಮ ಮಾಡಿರಿ ;"

ದೇವರು ಒಬ್ಬನಾಗಿದ್ದರೂ, ತಂದೆ, ವಾಕ್ಯ ಮತ್ತು ಪವಿತ್ರಾತ್ಮನು ಬೇರೆ ಬೇರೆ ವ್ಯಕ್ತಿಗಳು ಮತ್ತು ಪ್ರತಿಯೊಬ್ಬನೂ ಆತನ ಸ್ಥಾನಕ್ಕೆ ತಕ್ಕಂತೆ ದೇವರ ಹಾಗೆ ಕೆಲಸ ಮಾಡುತ್ತಾರೆ. ವಾಕ್ಯವು ದೇವರ ಸಂತಾನವಾದುದರಿಂದ ಮಗನಲ್ಲಿ ದೇವರ ಸಂಪೂರ್ಣತೆ ಪ್ರಕಟವಾಗಿದೆ.

**ತಂದೆ:**

ತ0ದೆಯು ದೇವರ ಪ್ರಾಣ ಮತ್ತು ಮನಸ್ಸು.ಅದುದರಿಂದ ದೇವರ ಚಿತ್ತ ತಂದೆಯಲ್ಲಿ ನೆಲೆಸಿದೆ.ಮತ್ತು ಆತನು ತೀರ್ಮಾನಗಳನ್ನು ಮಾಡುತ್ತಾನೆ. ತ್ರಿತ್ವದ ಶಿರಸ್ಸಾಗಿದ್ದು, ತಂದೆಗೆ ನ್ಯಾಯ ತೀರ್ಪುಕೊಡುವ ಅಧಿಕಾರ ಇದೆ.

**ಪವಿತ್ರಾತ್ಮನು :**

ಪವಿತ್ರಾತ್ಮನು ದೇವರ ಆತ್ಮನು.ದೇವರ ಸ್ವಭಾವ ಆತನ ಆತ್ಮನೊಂದಿಗೆ ಇರುತ್ತದೆ. ಅದು ಪರಿಶುದ್ಧವಾಗಿ ಇರುತ್ತದೆ.ಪವಿತ್ರಾತ್ಮನು ಶಿರಸ್ಸಿಗೆ ಅಧೀನನಾಗಿರುತ್ತಾನೆ. ತ್ರಿತ್ವದ ಆತ್ಮನಾಗಿರುವುದರಿಂದ ತಂದೆಯ ಚಿತ್ತವನ್ನು ನೆರವೇರಿಸುವುದಕ್ಕೂ ಬೆಳೆಸುವುದಕ್ಕೂ ಶಕ್ತನಾಗಿದ್ದಾನೆ.

ಒಟ್ಟಾಗಿ, ತಂದೆಯೂ ಮತ್ತು ಪವಿತ್ರಾತ್ಮನೂ ಮಗನಿಗೆ "ತಂದೆಯೂ" "ತಾಯಿಯೂ" ಆಗಿದ್ದಾರೆ.

**ವಾಕ್ಯವು :**

ದೇವರ ವಾಕ್ಯದ ಮೂಲಕವೇ ದೇವರು ಕಾಣುವಂತಹ ಲೋಕಗಳನ್ನು ಸೃಷ್ಠಿಮಾಡಿದನು.ವಾಕ್ಯವು ತಂದೆಯ ಕಾರ್ಯಗಳನ್ನು ಪವಿತ್ರಾತ್ಮನ ಶಕ್ತಯಿಂದ ಮಾಡುತ್ತಾನೆ.

ವಾಕ್ಯವು ಒಂದು ದಿನ ಒಂದು ದೇಹದಲ್ಲಿ ಕುಮಾರನಂತೆ ನೆಲೆಸುವನೆಂದು ದೇವರು ಲೋಕಗಳನ್ನು ಸೃಷ್ಠಿ ಮಾಡುವುದಕ್ಕೆ ಮುಂಚೆಯೇ ಮುನ್ತೀರ್ಮಾನ, ಮಾಡಿದನು.

**ಮನುಷ್ಯನ ಸೃಷ್ಠಿ :**

ದೇವರು ಒಂದು ದಿನ ತನ್ನನ್ನು ತಾನು ಮಾನವ ರೂಪದಲ್ಲಿ ತೋರ್ಪಡಿಸಿಕೊಳ್ಳುತ್ತಾನೆಂಬುದು ಯುಗಾಂತರಗಳಲ್ಲಿ ದೇವರು ಮುಚ್ಚಿಟ್ಟ ಮರ್ಮ. ಮೊದಲನೇ ಮಾನವನನ್ನು ಸೃಷ್ಠಿಸಿದಾಗ, ದೇವರು ಒಂದು ದೇಹವನ್ನು ಸೃಷ್ಠಿ ಮಾಡುವ ವಿಧಾನವನ್ನು ಆರಂಭಿಸಿ ಕಡೆಯಲ್ಲಿ ವಾಕ್ಯವು ಅದರಲ್ಲಿ ನೆಲಸುವಂತೆ ಮಾಡಿದನು.

ಕೊಲೊ 2:9 "ಯಾಕೆಂದರೆ ಕ್ರಿಸ್ತನಲ್ಲಿಯೇ **ದೈವತ್ವ ಸರ್ವ ಸಂಪೂರ್ಣತೆಯೂ ಶಾರೀರಿಕವಾಗಿ ವಾಸಮಾಡುತ್ತದೆ.**

1 ಯೋಹ 5:20 " ದೇವರ ಮಗನು ಬಂದು, ನಾವು ಸತ್ಯವಾಗಿರುವಾತನನ್ನು **ಅರಿತುಕೊಳ್ಳವ ಹಾಗೆ** ನಿಮಗೆ ತಿಳುವಳಿಕೆಯನ್ನು ಕೊಟ್ಟಿದ್ದಾನೆಂಬುದು ನಮಗೆ ಗೊತ್ತಿದೆ. ಮತ್ತು ನಾವು **ಆತನ ಮಗನಾದ ಯೇಸು ಕ್ರಿಸ್ತನಲ್ಲಿ** ಇರುವವರಾಗಿ ಸತ್ಯವಾಗಿರುವಾತನಲ್ಲಿದ್ದೇವೆ. ಈತನೇ **ಸತ್ಯದೇವರೂ ನಿತ್ಯ ಜೀವವೂ ಆಗಿದ್ದಾನೆ.**

ಯಾಕೋ 4:12 "ನ್ಯಾಯ ಪ್ರಮಾಣವನ್ನು ಕೊಟ್ಟಾತನು ಒಬ್ಬನೇ ; ಆತನೇ ಉಳಿಸುವುದಕ್ಕೂ ನಾಶ ಮಾಡುವುದಕ್ಕೂ ಶಕ್ತನು."

ಇಬ್ರಿ 12:28–29 "... ನಾವು ವಿನಯದಿಂದಲೂ ದೇವರ ಭಯದಿಂದಲೂ ದೇವರನ್ನು ಯೋಗ್ಯವಾಗಿ ಸೇವಿಸುವಂತೆ ಕೃಪೆಯನ್ನು ಹೊಂದಿಕೊಳ್ಳೋಣ.ಯಾಕೆಂದರೆ ನಮ್ಮ ದೇವರು **ದಹಿಸುವ ಅಗ್ನಿಯಾಗಿದ್ದಾನೆ.**

ಇಬ್ರಿ 10:31 "**ಜೀವವುಳ್ಳ ದೇವರ ಕೈಯಲ್ಲಿ** ಸಿಕ್ಕಿಬೀಳುವುದು **ಭಯಂಕರವಾದದ್ದು.**"

ಯೋಹ 16:13 "ಆದರೆ, ಆತನು ಅಂದರೆ **ಸತ್ಯದ ಆತ್ಮನು ಬಂದಾಗ,** ಆತನು ನಿಮ್ಮನ್ನು ಎಲ್ಲಾ ಸತ್ಯಕ್ಕೆ ನಡೆಸುವನು, ಯಾಕೆಂದರೆ **ಆತನು ತನ್ನಷ್ಟಕ್ಕೆ ತಾನೇ ಮಾತನಾಡದೆ, ತಾನು** ಕೇಳಿದವುಗಳನ್ನೇ (ತಂದೆಯಿಂದ) **ಮಾತನಾಡುತ್ತಾನೆ** ; ಮತ್ತು ಮುಂದೆ ಬರುವುದಕ್ಕಿರುವ ವಿಷಯಗಳನ್ನು ಆತನು ನಿಮಗೆ ತೋರಿಸುವನು.

ಅಪೋ 1:8 "ಆದರೆ **ಪವಿತ್ರಾತ್ಮನು ನಿಮ್ಮ ಮೇಲೆ ಬಂದಾಗ** ನೀವು ಬಲವನ್ನು ಹೊಂದುವಿರಿ."
ರೋಮ 15:19 "ಬಲವಾದ ಸೂಚಕ ಕಾರ್ಯಗಳಿಂದಲೂ, **ಅದ್ಭುತ ಕಾರ್ಯಗಳಿಂದಲೂ, ದೇವರಾತ್ಮನ ಬಲದಿಂದಲೂ ..."**

**ಎಲ್.ಷದಾಯಿ ಅಂದರೆ 'ಎದೆಯುಳ್ಳವನು' ಆಶೀರ್ವದಿಸುವವನು, ಪೋಷಿಸುವವನು, ಒದಗಿಸುವವನು ಮತ್ತು ತೃಪ್ತಿ ಪಡಿಸುವವನು.** ಆದಿ 17:1–2 ಮತ್ತು ಆದಿ 28:3 ಎಫೆ 5:27 (ಎನ್.ಕೆ.ಜೆ.ವಿ.) ಕೂಡ ಸಭೆಗೆ "ಅವಳು" ಎಂದು ಹೇಳಲಾಗಿದೆ. ಸಭೆ ಮತ್ತು ಪವಿತ್ರಾತ್ಮರು ತಂದೆಯಾದ ದೇವರಿಗೆ ಮಕ್ಕಳನ್ನು ಬೆಳೆಸುತ್ತಾರೆ.

ಇಬ್ರಿ 1:1–3 "... ದೇವರು (ತಂದೆ) ಈ ಅಂತ್ಯದಿನಗಳಲ್ಲಿ ನಮ್ಮ ಸಂಗಡ ತನ್ನ **ಮಗನ** (ಯೇಸು) ಮುಖಾಂತರ ಮಾತನಾಡಿದ್ದಾನೆ. ಈತನನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿದನು.**ಈತನ ಮೂಲಕವೇ ಲೋಕಗಳನ್ನು ಉಂಟು ಮಾಡಿದನು.** ಈತನು ದೇವರ **ಮಹಿಮೆಯ ಪ್ರಕಾಶವೂ,** ಆತನ **ವ್ಯಕ್ತಿತ್ವದ ಪ್ರತಿರೂಪವೂ ತನ್ನ ಬಲವುಳ್ಳ (ಆತ್ಮ) ವಾಕ್ಯದಿಂದ ಸಮಸ್ಥಕ್ಕೆ ಆಧಾರವೂ ಆಗಿದ್ದು,** ..."

1 ತಿಮೋ 3:16 "ದೇವ ಭಕ್ತಿಯ ಮರ್ಮವು ಮಹತ್ವವುಳ್ಳದ್ದೆಂಬುದು ತರ್ಕವಿಲ್ಲದ್ದು, ದೇವರು ಶರೀರಧಾರಿಯಾಗಿ (ಹಳೆಯ ದೇಹದಲ್ಲಿ) ಪ್ರತ್ಯಕ್ಷನಾದನು ; ಆತ್ಮ ಸಂಬಂಧನಾಗಿ ನೀತಿವಂತನೆಂದು ನಿರ್ಣಯಿಸಲ್ಪಟ್ಟನು ; ದೂತರಿಗೆ ಕಾಣಿಸಿಕೊಂಡು ಅನ್ಯಜನರಿಗೆ ಸಾರಲ್ಪಟ್ಟನು. ಲೋಕದಲ್ಲಿ ನಂಬಲ್ಪಟ್ಟನು ; ಮಹಿಮೆಗೆ ಸೇರಿಸಲ್ಪಟ್ಟನು. (ನೂತನ ದೇಹದಲ್ಲಿ)"

ಆದುದರಿಂದ "ಮುಚ್ಚಿಟ್ಟ ಮರ್ಮದ" ಆಧಾರದ ಮೇಲೆ ದೇವರು ಆದಮನನ್ನು ಸೃಷ್ಟಿಸಿದನು.ಹಿಂದಿನ ಪುಟದಲ್ಲಿ ದೃಷ್ಟಾಂತದ ರೂಪದ ಪ್ರಕಾರ ಚಿತ್ರದಲ್ಲಿ ತೋರಿಸಲಾಗಿದೆ.ಆದುದರಿಂದ ದೇವರು ಆದಮನನ್ನು ದೇವಕುಮಾರನೆಂದು ಕರೆದನು.

ನೋಡಿ ಕಲಿಯಿರಿ !




ಒಳ ಮನುಷ್ಯ ಹೊರ ಮನುಷ್ಯ
ಅದಾಮನು

ದೇವರು ಮೂರು ವ್ಯಕ್ತಿಗಳಾಗಿ ಇರುವುದರಿಂದ ಮನುಷ್ಯನನ್ನು ಒಂದು ಪ್ರಾಣ, ಒಂದು ಆತ್ಮ, ಮತ್ತು ಒಂದು ದೇಹವನ್ನಾಗಿ ಸೃಷ್ಟೀಸಿದನು.ಪ್ರಾಣವೂ ಮತ್ತು ಆತ್ಮವೂ ಒಳಮನುಷ್ಯನಂತಿವೆ. ಮತ್ತು ಪ್ರಾಕೃತಿಕ ದೇಹವು ಹೊರಮನುಷ್ಯನಂತಿದೆ. ತಂದೆಯ ಹಾಗೆ ಪ್ರಾಣವು ಒಳ ಮನುಷ್ಯನ ತಲೆ. ಪವಿತ್ರಾತ್ಮನ ಹಾಗೆ ಆತ್ಮನು ಒಳಮನುಷ್ಯನ ದೇಹ.

ದೇಹವು ವಾಕ್ಯವಿದ್ದ ಹಾಗೆ ; ಕುಟುಂಬದ ಕಲ್ಪನೆ ಕೂಡ ದೇವರಲ್ಲಿದೆ. ಒಂದು ಕುಟುಂಬವು ಒಬ್ಬ ತಂದೆ, ಒಬ್ಬ ತಾಯಿ ಮತ್ತು ಒಬ್ಬ ಮಗನನ್ನು ಒಳಗೊಂಡಿದೆ. ಮಗುವನ್ನು ಉಂಟು ಮಾಡುವುದಕ್ಕೋಸ್ಕರ ದೇವರು ಮನುಷ್ಯನ ದೇಹವನ್ನು ಗಂಡು ಮತ್ತು ಹೆಣ್ಣಾಗಿ ಸೃಷ್ಟಿಸಿದನು.ದೇವರು ಸೃಷ್ಟಿಕರ್ತನಾದ್ದರಿಂದ ಅನೇಕ ಜನರನ್ನು ಸೃಷ್ಟಿಮಾಡಬಹುದಾಗಿತ್ತು. ಆದರೆ ಗಂಡ ಮತ್ತು ಹೆಂಡಿರ ಮದುವೆಯ ಮೂಲಕ ಮಕ್ಕಳನ್ನುಂಟುಮಾಡಲು ಆಯ್ಕೆ ಮಾಡಿದನು.

**ಒಂದು ಕುಟುಂಬದ ಘಟಕವನ್ನುಂಟು ಮಾಡಿದ್ದು :**

ಕುಟುಂಬದ ಕಲ್ಪನೆ ದೇವರಲ್ಲಿ ಅಡಗಿರುವುದರಿಂದ, ಮಾನವನನ್ನು ಎರಡು ಭಾಗವನ್ನಾಗಿ ಉಂಟುಮಾಡಿದನು.ಒಂದು ಗಂಡು ಮತ್ತು ಒಂದು ಹೆಣ್ಣು.ಈ ರೀತಿಯಾಗಿ ಅವರು ಸಂತಾನ ಪಡೆಯಬಹುದಾಗಿತ್ತು. ಅದೇ ಪ್ರಕಾರ ತಂದೆ, ತಾಯಿ ಮತ್ತು ಮಗು ದೇವರ ತ್ರಿತ್ವವನ್ನು ಪ್ರಕಟಪಡಿಸುತ್ತದೆ.ಅವರೇ ತಂದೆ, ಪವಿತ್ರಾತ್ಮ ಮತ್ತು ಮಗ.

ಆದಿ 1:26 "ತರುವಾಯ ದೇವರು – ನಮ್ಮ ರೂಪದಲ್ಲಿ (ಹೊರ ಮನುಷ್ಯ) ನಮ್ಮ ಹೋಲಿಕೆಗೆ ಸರಿಯಾಗಿ (ಒಳ ಮನುಷ್ಯ) ..."

**ಗಮನಿಸು :** "ನಮ್ಮ ಎನ್ನುವ ಪದ ಕೂಡ ದೇವರ ತ್ರಿತ್ವಕ್ಕೆ ಅನ್ವಯಿಸುತ್ತದೆ"

ಲೂಕ 3:38 "ಇವನು ಯೇನೋಷನ ಮಗನು ; ಇವನು ಸೇಥನ ಮಗನು : ಇವನು ಆದಮನ ಮಗನು ; ಇವನು ದೇವರ ಮಗನು."

1 ಥೆಸಾ 5:23 "ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರ ಮಾಡಲಿ ; ಇದಲ್ಲದೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಬರೋಣದಲ್ಲಿ ನಿಮ್ಮ ಆತ್ಮ, ಪ್ರಾಣ ಮತ್ತು ಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಮಾಡಲಿ."

1 ಕೊರಿ 11:7 "ಯಾಕೆಂದರೆ ಪುರುಷನು ದೇವರ ಪ್ರತಿರೂಪವೂ (ಹೊರ ಮನುಷ್ಯ) ಪ್ರಭಾವವೂ (ಒಳ ಮನುಷ್ಯ) ಆಗಿರುವುದರಿಂದ ತಲೆಯನ್ನು ಮುಚ್ಚಿಕೊಳ್ಳಕೂಡದು ; ಒಳ ಮನುಷ್ಯನು ದೇವರ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟನು.

ಈ ಕಾರಣದಿಂದ ಪ್ರಾಣವು ಆತ್ಮನ ತಲೆಯಾಗಿದೆ.ದೇಹವು, ದೇವರ ತನ್ನ ಮಗನಿಗಾಗಿ ಊಹಿಸಿದ ರೂಪದಲ್ಲಿ ಉಂಟುಮಾಡಲ್ಪಟ್ಟಿತು. ಆದುದರಿಂದಲೇ, ಆದಮನೂ ಕೂಡ ದೇವರ ಮಗನೆಂದು ಕರೆಯಲ್ಪಟ್ಟನು.ಮಕ್ಕಳಿಲ್ಲದ ಒಬ್ಬ ಗಂಡ ಮತ್ತು ಹೆಂಡತಿ ಒಂದು ಕುಟುಂಬದ ರಚನೆ ಆಗುವುದಿಲ್ಲ. ಅವರ ಮೊದಲನೆಯ ಮಗನು ಹುಟ್ಟಿದಮೇಲೆ ಗಂಡನು ಒಬ್ಬ ತಂದಯಾಗುತ್ತಾನೆ. ಮತ್ತು ಹೆಂಡತಿ ಒಬ್ಬ ತಾಯಿಯಾಗುತ್ತಾಳೆ.ಆಗಮಾತ್ರ ಅವರು ಒಂದು ಕುಟುಂಬ ಘಟಕ.


ಮಲ 2:15 "ಮತ್ತು ಅವನಲ್ಲಿ ಆತ್ಮ ಉಳಿದಿದ್ದರೂ ಆತನು ಒಬ್ಬಳನ್ನೇ ನಿರ್ಮಿಸಲಿಲ್ಲವೋ ? ಮತ್ತು ಒಬ್ಬಳನ್ನೇ ಯಾಕೆ ?ಅವನು ದೇವಭಕ್ತಿಯುಳ್ಳ ಸಂತಾನವನ್ನು ಹುಡುಕುವುದಕ್ಕಾಗಿಯೇ.

ಲೂಕ 3:8 "ಯಾಕೆಂದರೆ, ದೇವರು ಈ ಕಲ್ಲುಗಳಿಂದ ಅಬ್ರಹಾಮನನಿಗೆ ಮಕ್ಕಳನ್ನು ಎಬ್ಬಿಸ ಶಕ್ತನು."

ಆದಿ 2:23, 24 "ಆಗ ಆದಮನು ಇವಳು ಈಗ ನನ್ನ ಎಲುಬುಗಳ ಎಲುಬು. ನನ್ನ ಮಾಂಸದ ಮಾಂಸ ಆಗಿದ್ದಾಳೆ.ಇವಳು ಮನುಷ್ಯನೊಳಗಿನಿಂದ ತೆಗೆಯಲ್ಪಟ್ಟಳು ಆದ್ದರಿಂದ ಸ್ತ್ರೀ ಎಂದು ಕರೆಯಲ್ಪಡುವಳು ಅಂದನು.ಆದ್ದರಿಂದ ಮನುಷ್ಯನು ತನ್ನ ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು.ಮತ್ತು ಅವರು (ಇಬ್ಬರು) ಒಂದೇ ಶರೀರವಾಗಿರುವರು (ಮಗುವಿನಲ್ಲಿ)."

ದೇವರು ಮನುಷ್ಯನನ್ನು ಉಂಟು ಮಾಡಿದನು ; ನಂತರ ಸ್ತ್ರೀಯನ್ನು ಅವನಿಂದ ಸೃಷ್ಟಿಸಿದನು. ನಂತರ ಇವರಿಬ್ಬರೂ ನಿಜವಾಗಿ ಒಂದು, ಯಾಕೆಂದರೆ, ತಂದೆಯಾದ ದೇವರು ಮತ್ತು ದೇವರಾದ ಪವಿತ್ರಾತ್ಮನು ಒಂದೇ.ದೇವರು ಈಗ ಉಂಟು ಮಾಡಿದ ಗಂಡ ಹೆಂಡಿರು, ಒಂದು ಮಗುವನ್ನು ತಮ್ಮ ರೂಪದಲ್ಲಿ ಮತ್ತು ತಮ್ಮ ಹೋಲಿಕೆಯ ಪ್ರಕಾರ ಉಂಟು ಮಾಡಬಹುದು. ತ್ರಿತ್ವದಲ್ಲಿ ಮಗುವೇ ಮೂರನೇ ವ್ಯಕ್ತಿಯನ್ನು ಪ್ರತಿನಿಧಿಸುತ್ತದೆ. ವಾಕ್ಯವು ದೇವರ ಸಂತಾನ ಹೇಗೋ

ನೋಡಿ ಕಲಿಯಿರಿ !




ದೈವತ್ವವು ಕುಟುಂಬದಲ್ಲಿ ಪ್ರಕಟವಾಗಿದೆ

ಮೇಲಿನ ಚಿತ್ರವು ದೃಷ್ಟಾಂತದ ಮೂಲಕ ಮಾನವನ ತ್ರಿತ್ವವನ್ನು ತೋರಿಸುತ್ತದೆ.ಇದನ್ನು ನಾವು ಕುಟುಂಬ ಘಟಕದಲ್ಲಿ ಮಾತ್ರ ನೋಡಬಹುದು.ಹೆಂಡತಿಯೊಂದಿಗೆ ಗಂಡನು ಒಳ ಮನುಷ್ಯನನ್ನು ಸೂಚಿಸುತ್ತಾನೆ. ಮದುವೆಯಲ್ಲಿ ಗಂಡನೂ ಮತ್ತು ಹೆಂಡತಿಯೂ ಆದಮನ ಪ್ರಾಣ ಮತ್ತು ಆತ್ಮನನ್ನು ಪ್ರತಿನಿಧಿಸುತ್ತಾರೆ. ಮಗುವು ಆದಮನ ದೇಹವನ್ನು ಪ್ರತಿನಿಧಿಸುತ್ತದೆ. ಒಳ ಮನುಷ್ಯನ ಪ್ರಾಣ ಮತ್ತು ದೇಹಗಳು ಒಂದಾಗಿವೆ, ಅವುಗಳನ್ನು ಬೇರ್ಪಡಿಸಲಾಗುವುದಿಲ್ಲ.

ಈ ಕಾರಣದಿಂದ ಗಂಡ ಮತ್ತು ಹೆಂಡಿರೂ ಕೂಡ ಒಂದಾಗಿದ್ದಾರೆ. ಅವರು ಒಂದೇ ದೇಹ, ಯಾಕೆಂದರೆ ಸ್ತ್ರೀಯು ಪುರುಷನ ಒಳಗಿನಿಂದ ತೆಗೆಯಲ್ಪಟ್ಟಳು. ಗಂಡನ ಸಂತತಿ ಹೆಂಡತಿಯಲ್ಲಿ ಮಗುವನ್ನು ತೋರ್ಪಡಿಸುತ್ತದೆ, ಮತ್ತು ಮಗುವಿನಲ್ಲಿ ಇಬ್ಬರೂ ಮತ್ತೆ ಒಂದಾಗುವುದನ್ನು ನಾವು ನೋಡುತ್ತೇವೆ. ಮನುಷ್ಯನ ಸಂಪೂರ್ಣತೆ (ಪ್ರಾಣ, ಆತ್ಮ ಮತ್ತು ದೇಹ) ಮಗುವಿನಲ್ಲಿ ಮತ್ತೆ ಬೆಳೆಯುತ್ತದೆ. ಮಗುವು ನಂತರ ಬರುವ ಸಂತಾನಕ್ಕೆ ಬೀಜವಾಗುತ್ತಾನೆ. ಮನುಷ್ಯನು ದೇವರ ಸ್ವರೂಪದಲ್ಲಿ ಆತನ ಹೋಲಿಕೆಗೆ ತಕ್ಕಂತೆ ಉಂಟುಮಾಡಲ್ಪಟ್ಟನು.ಇದರಿಂದ ಪ್ರತಿ ವ್ಯಕ್ತಿ ಹಾಗೆಯೇ ಕುಟುಂಬ ಘಟಕ ದೈವತ್ವವನ್ನು ಪ್ರತ್ಯಕ್ಷವಾಗಿ ಅಭಿವ್ಯಕ್ತ ಪಡಿಸುತ್ತದೆ.

**ಗಂಡನಿಗೂ, ಹೆಂಡತಿಗೂ ಮತ್ತು ಮಗನಿಗೂ ಇರುವ ಸಂಭಂದ:**

ಕುಟುಂಬ ಘಟಕದಲ್ಲಿ ಗಂಡನು ಪ್ರಾಣವಾಗಿದ್ದು, ತಂದೆಯಾದ ದೇವರಂತೆಯೇ ಶಿರಸ್ಸಾಗಿದ್ದಾನೆ. ಹೆಂಡತಿಯು ಆತ್ಮವಾಗಿದ್ದು, ಶಿರಸ್ಸಿಗೆ ಅಧೀನಳಾಗಿದ್ದಾಳೆ.ಇದು ದೇವರಾದ ಪವಿತ್ರಾತ್ಮನು ತಂದೆಗೆ ಅಧೀನನಾಗಿರುವಂತೆಯೇ ಮಗುವು ದೇಹ ಮತ್ತು ತಂದೆ ತಾಯಿಗಳಿಗೆ ವಿಧೇಯನಾಗಿರುತ್ತಾನೆ. ಇದೇ ರೀತಿಯಾಗಿಯೇ ದೇವರಾದ ಮಗನು ತಂದೆಗೂ ಪವಿತ್ರಾತ್ಮನಿಗೂ ವಿಧೇಯನಾಗಿರುತ್ತಾನೆ.

ಹಾಗೆಯೇ ಮಗುವು ಮನುಷ್ಯನ ಸಂತಾನ.

1 ಕೊರಿ 11:8 "ಯಾಕೆಂದರೆ ಪುರುಷನು ಸ್ತ್ರೀಯಿಂದ ನಿರ್ಮಿತನಾಗಲಿಲ್ಲ. ಸ್ತ್ರೀಯು ಪುರುಷನಿಂದ ನಿರ್ಮಿತಳಾದಳು."
1 ತಿಮೋ 2:13 "ಯಾಕೆಂದರೆ ಮೊದಲು ನಿರ್ಮಿತವಾದವನು ಆದಮನಲ್ಲವೇ.ಆಮೇಲೆ ಹವ್ವಳು."
1 ಪೇತ್ರ 3:1-5 "ಅದೇರೀತಿಯಾಗಿ ಸ್ತ್ರೀಯರೇ ನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ. ಯಾರಾದರೂ ವಾಕ್ಯಕ್ಕೆ ಅವಿಧೇಯರಾಗಿದ್ದರೋ ಹೆಂಡತಿಯರ ನಡತೆಯಿಂದ ವಾಕ್ಯವಿಲ್ಲದೆ ಅವರನ್ನು ಗೆಲ್ಲುವಂತೆ ... ಪೂರ್ವ ಕಾಲದಲ್ಲಿ ದೇವರ ಮೇಲೆ ನಂಬಿಕೆಯಿಟ್ಟ ಪರಿಶುದ್ಧ ಸ್ತ್ರೀಯರು ಸಹಾ ಹೀಗೆಯೇ ತಮ್ಮನ್ನು ಅಲಂಕರಿಸಿಕೊಂಡರು ; ಅವರು ತಮ್ಮ ತಮ್ಮ ಗಂಡಂದಿರಿಗೆ ಅಧೀನರಾಗಿದ್ದರು."


**ಗಮನಿಸು :** ಪರಿಶುದ್ಧ ಅಂದರೆ ದೇವರ ಆತ್ಮನು ಪವಿತ್ರನು, ಸಂಪೂರ್ಣನು, ಪಾಪ ರಹಿತನು. ಮತ್ತು ತಂದೆಗೆ ಅಧೀನತೆಯಲ್ಲಿ ಇರುವವನು. ಆತ್ಮನು ಪ್ರಾಣಕ್ಕೆ ಅಧೀನವಾಗಿಲ್ಲದಿದ್ದರೆ, ಆಗ ಮನುಷ್ಯನ ಆತ್ಮ ಒಂದು ದುರಾತ್ಮ.

ಮೇಲ್ಕಂಡ ತತ್ವ ಮದುವೆಯ ವಿಷಯವಾಗಿ ಮನುಷ್ಯನಿಗೆ ದೇವರ ಪರಿಪೂರ್ಣ ಚಿತ್ರ.ಈಗಿನ ಕಾಲದಲ್ಲಿ ಅನೇಕ ಮದುವೆಗಳ ಪರಿಸ್ಥಿತಿ ದೇವರ ಆಲೋಚನೆಗೆ ವಿರುದ್ಧವಾದುದರಿಂದ ಅವು ಪಾಪಮಯವಾಗಿವೆ.

**ಗಮನಿಸು :** ದೇವರ ಪ್ರಕಟಣೆಯಲ್ಲಿ ಗಂಡಸರ ಮತ್ತು ಹೆಂಗಸರ ಸಲಿಂಗ ಕಾಮುಕತನ ಇಲ್ಲ. ಯಾಕೆಂದರೆ ಅಂತಹ ಸಂಬಂಧ ಮಗುವನ್ನು ಉಂಟು ಮಾಡಲು ಅಸಾಧ್ಯ. ಅವು ದೈವತ್ವವನ್ನು ಪ್ರತಿನಿಧಿಸುವುದಿಲ. ಅವು ದೇವರ ಪರಿಪೂರ್ಣ ಕ್ರಮಕ್ಕೆ ವಿರುದ್ಧ, ಯಾಕೆಂದರೆ ಅವು ಮಕ್ಕಳನ್ನುಂಟು ಮಾಡಲಾರವು. ಮಕ್ಕಳೇ ಮುಂದಿನ ಸಂತಾನಕ್ಕೆ ಆರಂಭ. ಮಾನವರಿಗೆ ಮಕ್ಕಳಿಲ್ಲದಿದ್ದರೆ, ಮಾನವ ಕುಲವು ನಿರ್ಮೂಲವಾಗಿಬಿಡುತ್ತದೆ.

ರೋಮ 1:26-27 "ಈ ಕಾರಣದಿಂದ ದೇವರು ಅವರನ್ನು ತುಚ್ಛವಾದ ಮನೋಭಾವಗಳಿಗೆ ಒಪ್ಪಿಸಿಬಿಟ್ಟನು, ಯಾಕೆಂದರೆ ಅವರ ಹೆಂಗಸರೂ ಸಹಾ ಸ್ವಾಭಾವಿಕವಾದ ಭೋಗವನ್ನು ಸ್ವಭಾವ ವಿರುದ್ಧವಾದ ಭೋಗಕ್ಕೆ ಮಾರ್ಪಡಿಸಿದರು ; ಅದರಂತೆ ಗಂಡಸರೂ ಸ್ವಾಭಾವಿಕ ಸ್ತ್ರೀ ಭೋಗವನ್ನು ಬಿಟ್ಟು ಒಬ್ಬರಮೇಲೊಬ್ಬರು ತಮ್ಮ ಕಾಮಾತುರದಿಂದ ತಾಪ ಪಡುತ್ತಾ, ಗಂಡಸರ ಸಂಗಡ ಗಂಡಸರು ಅಯೋಗ್ಯವಾದದನ್ನು ಮಾಡುತ್ತಾ."

1 ಕೊರಿ 11:3 "ಪ್ರತೀ ಪುರುಷನಿಗೂ ಕ್ರಿಸ್ತನು ತಲೆ, ಸ್ತ್ರೀಗೆ ಪುರುಷನು ತಲೆ..."



**ಮಾನವನ ಸೃಷ್ಟಿಯ ಕ್ರಮ :**

ಕುಟುಂಬ ಘಟಕದಲ್ಲಿ ತಂದೆ, ತಾಯಿ ಮತ್ತು ಮಗನ ಸಂಬಂಧ ನಮಗೆ ಒಬ್ಬ ವ್ಯಕ್ತಿಯ ಪ್ರಾಣ, ಆತ್ಮ ಮತ್ತು ದೇಹಗಳನ್ನು ಆಳುವ ತತ್ವಗಳನ್ನು ತೋರ್ಪಡಿಸುತ್ತದೆ.

**<u>ಮನುಷ್ಯನ ಪ್ರಾಣ (ಗಂಡನು) :</u>**

ಪ್ರಾಣವು ಒಳ ಮನುಷ್ಯನ ಶಿರಸ್ಸೂ ಮತ್ತು ಮನಸ್ಸೂ ಆಗಿರುತ್ತದೆ.ದೇವರು ಆತ್ಮನ (ಹೆಂಡತಿ) ಕ್ಷೇಮ್ಮಕೆ ಪ್ರಾಣವನ್ನೂ (ಗಂಡ) ಮತ್ತು ದೇಹವನ್ನೂ ಜವಾಬ್ದಾರಿಯಾಗಿ ಉಳಿಸಿದ್ದಾನೆ. ಪ್ರಾಣಕ್ಕೆ (ಗಂಡ) ಅಧಿಕಾರ ಇರುವುದರಿಂದ ಅವನು (ಗಂಡ) ದೇವರಿಂದ ತೀರ್ಪು ಹೊಂದುತ್ತಾನೆ.

**<u>ಮನುಷ್ಯನ ಆತ್ಮ (ಹೆಂಡತಿ) :</u>**

ಆತ್ಮನು ಆತ್ಮೀಯ ದೇಹ ಮತ್ತು ಒಳ ಮನುಷ್ಯನ ಸ್ವಭಾವ. ಆತ್ಮನು (ಹೆಂಡತಿ) ಪ್ರಾಣಕ್ಕೆ (ಗಂಡ) ಅಧೀನವಾಗಿರುವುದರಿಂದ ಅದು ಬೆಂಬಲ ಕೊಟ್ಟು ಪ್ರಾಣದ (ಗಂಡ) ಚಿತ್ತವನ್ನು ದೇಹದ ಮೇಲೆ (ಮಗ) ಒತ್ತಾಯಿಸುತ್ತದೆ.

**<u>ಮನುಷ್ಯನ ಪ್ರಾಕೃತಿಕ ದೇಹ (ಮಗು) :</u>**

ಪ್ರಾಕೃತಿಕ ದೇಹ ಹೊರ ಮನುಷ್ಯನಾಗಿದ್ದಾನೆ. ದೇಹವು (ಮಗು) ಪ್ರಾಣಕ್ಕೆ (ತಂದೆ) ವಿಧೇಯನಾಗಿದ್ದು, ಅದರ ಚಿತ್ತವನ್ನು ನೆರವೇರಿಸುತ್ತದೆ.

**ಮನುಷ್ಯನು ಪರಿಪೂರ್ಣನಾಗಿ : ಉಂಟುಮಾಡಲ್ಪಟ್ಟನು.**

ಮನುಷ್ಯನ ಪ್ರಾಣ, ಆತ್ಮ ಮತ್ತು ದೇಹಗಳಿಗೆ ಇರುವ ಸಂಬಂಧ ದೈವೀಕ ಮನುಷ್ಯನಲ್ಲಿನ ಆಡಳಿತದ ಮೂರು ಕಾರ್ಯ ಕ್ಷೇತ್ರಗಳನ್ನು ಸೂಚಿಸುತ್ತದೆ.ಪ್ರಾಣವು ತೀರ್ಮಾನಗಳನ್ನು ತೆಗೆದುಕೊಳ್ಳುತ್ತದೆ.ಆತ್ಮನು ಆ ತೀರ್ಮಾನಗಳನ್ನು ಮುಂದುವರಿಸುತ್ತದೆ.ಮತ್ತು ದೇಹವು ಅದಕ್ಕೆ ವಿಧೇಯನಾಗುತ್ತದೆ, ಆದುದರಿಂದ ಪರಿಪೂರ್ಣತೆ ಎಂದರೆ ಪ್ರತಿಯೊಂದು ಅಂಗಕ್ಕೂ ನಿರ್ದೇಶಿಸಿದ ಒಂದು ಕೆಲಸವಿರುತ್ತದೆ, ಮತ್ತು ಪ್ರತಿಯೊಂದು ಅಂಗ ದೇವರು ನೇಮಿಸಿದ ತತ್ವಕ್ಕನುಸಾರವಾಗಿ ಕಾರ್ಯ ಸಾಧನೆ ಮಾಡುತ್ತದೆ. ಮನುಷ್ಯನ ಒಂದೊಂದು ಅಂಗದ ಪರಿಪೂರ್ಣ ಕ್ರಮದ ಶಾಂತಿ ಭಂಗವಾದರೆ, ಮನುಷ್ಯನು ತಕ್ಷಣವೇ ದೇವರ ಮಹಿಮೆಯನ್ನು ಕಳಕೊಂಡು ಪಾಪಿಯಾಗುತ್ತಾನೆ.

ಆದಿ 1:6 "ಸಭೆಯ ಹಿರಿಯನು ನಿಂದಾರಹಿತನೂ, ಏಕಪತ್ನಿಯುಳ್ಳವನೂ ಆಗಿರಬೇಕು, ಅವನ ಮಕ್ಕಳು ನಂಬಿಗಸ್ತರಾಗಿರ ಬೇಕು, ಅವರು ದುರ್ಮಾರ್ಗಸ್ತರೆನಿಸಿ ಕೊಂಡವರಾಗಲೀ, ಇಲ್ಲವೇ ಅಧಿಕಾರಕ್ಕೆ ಒಳಗಾದವರಾಗಲೀ, ಆಗಬಾರದು."

ಕೊಲೋ 3:18–20 "ಸ್ತ್ರೀಯರೇ, ನೀವು ಕರ್ತನಲ್ಲಿ ಯೋಗ್ಯರಾಗಿರುವಂತೆ ನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ. ಪುರುಷರೇ, ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ.ಅವರಿಗೆ ಕಹಿಯಾಗಿರಬೇಡಿರಿ.ಮಕ್ಕಳೇ ಎಲ್ಲಾ ವಿಷಯಗಳಲ್ಲಿ ನಿಮ್ಮ ತಂದೆ ತಾಯಿಗಳಿಗೆ ವಿಧೇಯರಾಗಿರ್ರಿ.ಯಾಕೆಂದರೆ ಇದು ಕರ್ತನ ದೃಷ್ಟಿಯಲ್ಲಿ ಮೆಚ್ಚಿಗೆಯಾಗಿದೆ.


ಆದಿ3:16 "...ಮತ್ತು ನಿನ್ನ ಗಂಡನ ಮೇಲೆ ಆಶೆ ಇರುವುದು, ಅವನು ನಿನ್ನನ್ನು ಆಳುವನು ಎಂದರು."

ಎಫೆ 5:22–23 "ಸ್ತ್ರೀಯರೇ ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮ ನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ.ಯಾಕೆಂದರೆ ಕ್ರಿಸ್ತನು ಸಭೆಗೆ ತಲೆಯಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಆತನು (ಕ್ರಿಸ್ತನು) ದೇಹಕ್ಕೆ ರಕ್ಷಕನಾಗಿದ್ದಾನೆ.

ಎಫೆ 5:25 "ಪುರುಷರೇ ನೀವು ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ, ಯಾಕೆಂದರೆ ಕ್ರಿಸ್ತನು ಸಹಾ ಸಭೆಯನ್ನು ಪ್ರೀತಿಸಿ ಅದಕ್ಕಾಗಿ ತನ್ನನ್ನು ತಾನೇ ಒಪ್ಪಿಸಿಕೊಟ್ಟನು."

1 ಕೊರಿ 11:7 "... ಸ್ತ್ರೀಯಾದರೋ ಪುರುಷನ ಪ್ರಭಾವವಾಗಿದ್ದಾಳೆ"

ಎಫೇ 6:1–2 "ಮಕ್ಕಳೇ, ನೀವು ಕರ್ತನಲ್ಲಿ ನಿಮ್ಮ ತಂದೆ ತಾಯಿಗಳಿಗೆ ವಿಧೇಯರಾಗಿರಿ ; ಇದು ನ್ಯಾಯವಾದದ್ದು. ನಿನ್ನ ತಂದೆಯನ್ನೂ ತಾಯಿಯನ್ನೂ ಸನ್ಮಾನಿಸಬೇಕು.ಇದು ವಾಗ್ದಾನ ಸಹಿತವಾದ ಮೊದಲನೇ ಆಜ್ಞೆ.





1 ಕೊರಿ 11:11,12 "ಆದರೂ ಕರ್ತನಲ್ಲಿ (ಪರಿಪೂರ್ಣನಾದ ಮನುಷ್ಯ) ಸ್ತ್ರೀ (ಆತ್ಮ) ಇಲ್ಲದೇ ಪುರುಷನು (ಪ್ರಾಣ), ಪುರುಷನಿಲ್ಲದೇ (ಪ್ರಾಣ) ಸ್ತ್ರೀಯು (ಆತ್ಮ) ಇಲ್ಲ. ಸ್ತ್ರೀಯು ಪುರುಷನಿಂದ ಹೇಗೆ ಉತ್ಪತ್ತಿಯದಳೋ ಹಾಗೆಯೇ ಪುರುಷನು ಸ್ತ್ರೀಯಿಂದ ಉತ್ಪತ್ತಿಯಾದನು. ಸಮಸ್ತಕ್ಕೂ ದೇವರೇ **ಮೂಲ ಕಾರಣ."**

ಸೈತನನು ಮಾಡಬೇಕಾದುದ್ದೆಲ್ಲಾ ದೇವರ ಕ್ರಮವನ್ನು ಚೂರುಚೂರು ಮಾಡುವುದಾಗಿತ್ತು. ಈ ಕಾರಣದಿಂದಲೇ ಅವನು ತಲೆಯಾದ ಆದಾಮನನ್ನು ದಾರಿ ತಪ್ಪಿಸಿದನು, ಹವ್ವಳನ್ನು ತನಗೆ ವಿಧೇಯಳಾಗುವಂತೆ ಮಾಡಿದನು. ಹವ್ವಳು ಸೈತಾನನಿಗೆ ಅಧೀನಳಾದಗಾ ಅವಳು ಇನ್ನು ತಲೆಗೆ ಅಧೀನಳಾಗಿರಲಿಲ್ಲ ಮತ್ತು ಆದಾಮನು ಹವ್ವಳಿಗೆ ಯಾವಾಗ ಅಧೀನನಾದನೋ, ಅವಾಗಿನಿಂದ ಅವನು ಹೆಂಡಿತಗೆ ತಲೆಯಾಗಿರಲಿಲ್ಲ.


ಒಂದು (ಅಇಔ) ಕಂಪನಿಯ ಮಾಲಿಕ (ಪ್ರಾಣ) ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತಾನೆ, ಮ್ಯಾನೇಜರನು (ಆತ್ಮ) ತೀರ್ಮಾನವನ್ನು ಮುಂದುವರೆಸುತ್ತಾನೆ ಮತ್ತು ಕೆಲಸಗಾರನು (ದೇಹ) ಮಾಲೀಕನ ಚಿತ್ತವನ್ನು ಪೂರೈಸುವ ಹಾಗೆ ನೋಡಿಕೊಳ್ಳುತ್ತಾನೆ.

ಕುಟುಂಬ ಘಟಕದಲ್ಲಿ ತಂದೆಯೇ ಮಾಲಿಕ (ಅಇಔ), ತಾಯಿಯು ಮ್ಯಾನೇಜರ್ ಯಾಕೆಂದರೆ ಆಕೆ ಮಗನು ವಿಧೇಯನಾಗಿ ತಂದೆಯ ಚಿತ್ತವನ್ನು ನೆರವೇರಿಸುವ ಹಾಗೆ ನೋಡಿಕೊಳ್ಳುತ್ತಾಳೆ.


# ಸಾರಂಶ




**ಮರೆಯಾದ ಮರ್ಮ :**
ದೇವರ ಉದ್ದೇಶ ಏನಾಗಿತೆಂದರೆ, ವಾಕ್ಯವು ಮನುಷ್ಯನ ದೇಹದಲ್ಲಿ ದೇವರ ಮಗನಾಗಿ ನೆಲೆಸುವುದೆ ಮತ್ತು ಆತನ ಮೂಲಕ ದೇವರು ಸೃಷ್ಟಿ ಮಾಡಿದ ಎಲ್ಲದರ ಮೇಲೆ ಪರಮ ಶ್ರೇಷ್ಠ ಪ್ರಭುತ್ವವನ್ನು ಮಾಡುವುದಾಗಿತ್ತು.




**ದೇವರು ಮನುಷ್ಯನಲ್ಲಿ ಪ್ರಕಟವಾದದ್ದು :**
ದೇವರು ಒಂದಾಗಿರುವುದರಿಂದ, ಆತನು ಒಬ್ಬ ಮನುಷ್ಯನನ್ನು ಉಂಟು ಮಾಡಿದನು. ದೇವರು ತ್ರಿತ್ವವಾಗಿರುವುದರಿಂದ, ಮನುಷ್ಯನಿಗೆ ಒಂದು ಪ್ರಾಣ, ಒಂದು ಆತ್ಮ ಮತ್ತೊಂದು ದೇಹ ಇದೆ. ದೇವರು ಮನುಷ್ಯನನ್ನು ತನ್ನ ಸೃಷ್ಟಿಯ ಮೇಲೆ ಪ್ರಭುತ್ವ ಮಾಡಲು ನೇಮಿಸಿದನು.



ದೈವತ್ವವು ಕುಟುಂಬದಲ್ಲಿ ಪ್ರಕಟವಾಗಿದೆ

**ಕುಟುಂಬದಲ್ಲಿ ದೇವರು ಪ್ರಕಟವಾಗಿರುವುದು :**
ಗಂಡನು ತಂದೆಯಾದ ದೇವರನ್ನು ಪ್ರತಿನಿಧಿಸುತ್ತಾನೆ, ಹೆಂಡತಿಯು ದೇವರಾದ ಪವಿತ್ರಾತ್ಮನನ್ನು ಪ್ರತಿನಿಧಿಸುತ್ತಾಳೆ ಮತ್ತು ಮಗು ದೇವರಾದ ಮಗನನ್ನು ಪ್ರತಿನಿಧಿಸುತ್ತಾನೆ.

ದೇವರು ಮನುಷ್ಯನನ್ನು ಎರಡು ಭಾಗವಾಗಿ ಉಂಟು ಮಾಡಿದನು – ಒಬ್ಬ ಗಂಡ ಮತ್ತು ಹೆಂಡತಿ. ಆತನ ಉದ್ದೇಶ ಮಗುವನ್ನು ಉಂಟುಮಾಡುವುದಾಗಿತ್ತು. ಮಗುವು ನಂತರದ ಸಂತಾನಕ್ಕೆ ಮನುಷ್ಯನ ಬೀಜ. ಈಗ ಮನುಷ್ಯನಿಗೆ ದೇವರಂತೆ ಸದಾ ಜೀವಿಸಲು ಸಮರ್ಥತೆ ಇದೆ.

# ಅಧ್ಯಾಯ 8 :

## ಮನುಷ್ಯನು ಬಿದ್ದುಹೋದದ್ದು :


ದೇವರು ತನ್ನನ್ನು ತಾನು ತ್ರಿತ್ವದಂತೆ ಪ್ರಕಟಿಸಿಕೊಂಡನು, ತಂದೆ, ಪರಿಶುದ್ಧಾತ್ಮ ಮತ್ತು ವಾಕ್ಯ. ತಂದೆಯು ಪರಿಶುದ್ಧಾತ್ಮನಿಗೆ ಪ್ರಾಣವೂ ಮತ್ತು ಶಿರಸ್ಸೂ ಆಗಿದ್ದಾನೆ. ಪರಿಶುದ್ಧಾತ್ಮನು ಆತನಿಗೆ ಅಧೀನನಾಗಿರುತ್ತಾನೆ. ತಂದೆಯ ಚಿತ್ತವು ಮಗನ ಮೂಲಕ ಪವಿತ್ರಾತ್ಮನ ಸಹಾಯದಿಂದ ನೆರವೇರುತ್ತದೆ.

ಆದುದರಿಂದ ಪರಿಪೂರ್ಣತೆ ಎಂದರೆ ಪ್ರಾಣವು ಆತ್ಮನಿಗೆ ಶಿರಸ್ಸಾಗಿದೆ ಎಂದರ್ಥ. ಮತ್ತು ದೇಹವು ಕೆಲಸ ಮಾಡುತ್ತದೆ. ಒಟ್ಟಿಗೆ ಪ್ರಾಣವು ಮತ್ತು ಆತ್ಮನು ಒಳ ಮನುಷ್ಯನನ್ನು ರೂಪಿಸುತ್ತದೆ. ಅದೇ ಸಮಯದಲ್ಲಿ ದೇಹವು ಹೊರ ಮನುಷ್ಯನಾಗುತ್ತದೆ. ಮತ್ತು ಅದು ತ್ರಿತ್ವದ ಮೂರನೆ ವ್ಯಕ್ತಿ. ಮನುಷ್ಯನು ಭಕ್ತನಾಗಿದ್ದನು. ಯಾಕೆಂದರೆ ಅವನ ಪ್ರಾಣ, ಅವನ ಆತ್ಮ ಮತ್ತು ಅವನ ದೇಹ ಅವರವರ ನಿಯಮಿತ ಕ್ರಮಕ್ಕನುಸಾರವಾಗಿ ಕೆಲಸ ಮಾಡುತ್ತಿದ್ದವು.

ದೇವರ ತತ್ವ ಇದು : ಪ್ರಾಣವು ಆತ್ಮನ ಮೇಲೆ ದೊರೆತನ ಮಾಡುತ್ತದೆ. ಮತ್ತು ಆತ್ಮನು ದೇಹವನ್ನು ನಿಯಂತ್ರಣದಲ್ಲಿ ಇರುಸುತ್ತದೆ. ಆತ್ಮನು ಪ್ರಾಣದ ಅಧಿಕಾರವನ್ನು ಕಿತ್ತುಕೊಂಡಾಗ ಮನುಷ್ಯನ ಬೀಳುವಿಕೆ ಉಂಟಾಯಿತು. ಹೀಗೆ ದೇಹವು ಅವಿಧೇಯತೆಗೆ ಒಳಗಾಯಿತು. ದೇವರು ನಿಯಮಿಸಿದ ಭಕ್ತನ ಕ್ರಮ ತಲೆಕೆಳಗಾಯಿತು, ಮನುಷ್ಯನು ಒಬ್ಬ ಅಪರಿಶುದ್ಧ ವ್ಯಕ್ತಿಯಾದನು.

**ಆತ್ಮ ಮತ್ತು ಪ್ರಾಣಗಳು ಬಿದ್ದದ್ದು.**

ನೋಡಿ ಕಲಿಯಿರಿ !




**ವಚನಗಳು ಮತ್ತು ವ್ಯಾಖ್ಯಾನಗಳು :**

ತಂದೆ, ಪವಿತ್ರಾತ್ಮ ಮತ್ತು ವಾಕ್ಯ ಪ್ರತಿಯೊಂದು ದೈವತ್ವದಲ್ಲಿ ತನ್ನದೇ ಆದ ಸ್ಥಾನ ಹೊಂದಿದೆ ಮತ್ತು ಪ್ರತಿಯೊಬ್ಬನೂ ತನ್ನದೇ ಆದ ಒಂದು ತತ್ವಕ್ಕನುಸಾರವಾಗಿ ಕೆಲಸ ಮಾಡುತ್ತಾರೆ. ದೇವರು ಉಂಟುಮಾಡಿದ ಪ್ರತಿಯೊಂದಕ್ಕೂ ಒಂದು ಸ್ಥಾನ ಮತ್ತು ಒಂದು ಕೆಲಸವಿದೆ. ದೇವರ ಸೃಷ್ಟಿಕ್ರಮಕ್ಕೆ ಶಾಂತಿ ಭಂಗವಾದರೆ ಅದು ಭಕ್ತಿಹೀನವಾಗುತ್ತದೆ. ಸೈತಾನನೂ ಮತ್ತು ದೂತರೂ ಅವರಿಗಾಗಿ ಉಂಟುಮಾಡಿದ ಆಧಿಪತ್ಯವನ್ನು ಬಿಟ್ಟಾಗ ನಡೆದದ್ದು ಇದೇ.

ಯೂಧಾ 1 : 6 "ತಮ್ಮ ಮೊದಲಿನ ಸ್ಥಿತಿಯನ್ನು ಕಾಪಾಡದೇ, ತಮ್ಮ ಸ್ವಂತ ವಾಸಸ್ಥಾನವನ್ನು ಬಿಟ್ಟ ದೂತರಿಗೆ ಆತನು ನಿತ್ಯವಾದ ಬೇಡಿಗಳನ್ನು ಹಾಕಿ ಮಹಾದಿನದ ತೀರ್ಪಿಗಾಗಿ ಅವರನ್ನು ಕತ್ತಲೆಯೊಳಗೆ ಕಾದಿರಿಸಿದ್ದಾನೆ."

ಮತ್ತ 5 : 48 "ಆದ್ದರಿಂದ ಸ್ವರ್ಗದಲ್ಲಿರುವ ನಿಮ್ಮ ತಂದೆಯು ಪರಿಪೂರ್ಣನಾಗಿರುವಂತೆಯೇ ನೀವೂ ಪರಿಪೂರ್ಣರಾಗಿರಿ."
1 ಪೇತ್ರ 3 : 5 "ಯಾಕೆಂದರೆ ಪೂರ್ವಕಾಲದಲ್ಲಿ ದೇವರ ಮೇಲೆ ನಂಬಿಕೆಯಿಟ್ಟ ಪರಿಶುದ್ಧ ಸ್ತ್ರೀಯರು ಸಹಾ ಹೀಗೆಯೇ ತಮ್ಮನ್ನು ಅಲಂಕರಿಸಿಕೊಂಡರು. : ಅವರು ತಮ್ಮ ತಮ್ಮ ಗಂಡಂದಿರಿಗೆ ಅಧೀನರಾಗಿದ್ದರು"
ಎಫ಼್ 6 :1 "ಮಕ್ಕಳೇ, ನೀವು ಕರ್ತನಲ್ಲಿ ನಿಮ್ಮ ತಂದೆತಾಯಿಗಳಿಗೆ ವಿಧೇಯರಾಗಿರಿ ಇದು ನ್ಯಾಯವಾದದ್ದು."

**ಗಮನಿಸು :** ಒಬ್ಬ ಪರಿಪೂರ್ಣನಾಗಿರುವ ಮನುಷ್ಯನ ಆತ್ಮ ತನ್ನ ಪ್ರಾಣಕ್ಕೂ ಮತ್ತು ವಿಧೇಯನಾದ ತನ್ನ ದೇಹಕ್ಕೂ ವಿಧೇಯನಾಗಿರುತ್ತಾನೆ. ಒಂದು ಕುಟುಂಬವು ಪರಿಪೂರ್ಣವಾಗಿರ ಬೇಕೆಂದರೆ ಒಬ್ಬನ ಹೆಂಡತಿ ಗಂಡನಿಗೆ ವಿಧೇಯಳಾಗಿದ್ದಾಗ ಮತ್ತು ಮಕ್ಕಳು ತಂದೆತಾಯಿಯರಿಗೆ ವಿಧೇಯರಾಗಿದ್ದಾಗ.

ಹೇಗಾದರೂ, ಆತ್ಮವು ಪ್ರಾಣಕ್ಕೆ ವಿಧೇಯನಾಗದಿದ್ದರೆ, ದೇಹವು ಪ್ರಾಣಕ್ಕೆ ವಿಧೇಯನಾಗುವುದಿಲ್ಲ. ಹೆಂಡತಿಯು ಗಂಡನಿಗೆ ವಿಧೇಯಳಾಗದಿದ್ದರೆ ಮಕ್ಕಳು ಕೂಡ ಆತನಿಗೆ ವಿಧೇಯರಾಗುವುದಿಲ್ಲ.

ಹವ್ವಳು ತನಗಾಗಿ ಸೃಷ್ಟಿಸಿದ ನಿಯಮವನ್ನು ಮೀರಿದಳು ಯಾಕೆಂದರೆ, ಆಕೆ ತಲೆಯಾದ ಆದಮನಿಗೆ ಅಧೀನಳಾಗಿರಲಿಲ್ಲ. ಆದಿನದಿಂದ ಮನುಷ್ಯನ ಆತ್ಮವೂ ಕೂಡ ಪ್ರಾಣದ ಮೇಲೆ ಪ್ರಭುತ್ವ ತೋರುತ್ತದೆ.

1 ತಿಮೋ 2 : 13, 14 "ಯಾಕೆಂದರೆ ಮೊದಲು ನಿರ್ಮಿತನಾದವನು ಆದಮನಲ್ಲವೇ, ಆಮೇಲೆ ಹವ್ವಳು; ಇದಲ್ಲದೇ ಆದಮನು ವಂಚನೆಗೆ ಒಳಬೀಳಲಿಲ್ಲ. ಸ್ತ್ರೀಯು (ಆತ್ಮನು) ವಂಚನೆಗೆ ಒಳಬಿದ್ದು, ಅಪರಾಧಿಯಾದಳು."

ಬಿದ್ದಿದ್ದರ ಫಲಿತಾಂಶವೇನೆಂದರೆ, ಮನುಷ್ಯನು ತನ್ನ ಆತ್ಮದ (ಹೃದಯ) ಇಷ್ಟಾನುಸಾರವಾಗಿ ಜೀವಿಸುತ್ತಾನೆ ಮತ್ತು ಇನ್ನು ಮುಂದೆ ಪ್ರಾಣದ (ಬುದ್ಧಿ) ತಿಳುವಳಿಕೆಗೆ ಅನುಸಾರವಾಗಿ ಅಲ್ಲ. ಸೈತಾನನಿಂದ ಶೋಧಿಸಲ್ಪಟ್ಟ ಹವ್ವಳು ನಿಯಮವನ್ನು ಮುರಿದಳು.

ಸ್ತ್ರೀಯರನ್ನು ದೇವರು ಸಹಾಯಕರನ್ನಾಗಿ ನಿರ್ಮಿಸಿದನು. ಆದರೆ ಹವ್ವಳು ಯಜಮಾನಿಯಾದಳು. ಆದುದರಿಂದಲೇ ಮನುಷ್ಯನ ಆತ್ಮವು ಅವನ ಪ್ರಾಣದ ಮೇಲೆ ದೊರೆತನ ಮಾಡುತ್ತದೆ.

ಪರಿಪೂರ್ಣನಾದ ಮನುಷ್ಯನ ಬೀಳುವಿಕೆ ಆದಮ ಹವ್ವರ ಜೀವನಗಳಲ್ಲಿ ಪ್ರಕಟವಾಗಿದೆ. ಕೆಳಗಣ ಚಿತ್ರದಲ್ಲಿ ಆತ್ಮನು ಪ್ರಾಣದ ಅಧಿಕಾರವನ್ನು ಕಿತ್ತುಕೊಂಡದ್ದನ್ನು ನೋಡುತ್ತೇವೆ.


ಹವ್ವಳು ಸೃಷ್ಟಿಯಾಗುವುದಕ್ಕಿಂತ ಮುಂಚೆ, ದೇವರು ಆದಮನಿಗೆ ಮೇಲು ಕೀಳುಗಳ ತಿಳುವಳಿಕೆಯ ಮರದ ಫಲವನ್ನು ತಿನ್ನಬಾರದು ಎಂದು ಆಜ್ಞಾಪಿಸಿದ್ದನು. ಆದರೆ ಹವ್ವಳು ದೇವರ ಆಜ್ಞೆಯನ್ನು ತನ್ನ ತಲೆಯಾದ ಆದಮನ ಮೂಲಕ ಹೊಂದಿದಳು.

ದೇವರು ಆದಮನೊಂದಿಗೆ (ಪ್ರಾಣ) ಮಾತನಾಡಿದನು, ಹವ್ವಳೊಂದಿಗೆ (ಆತ್ಮ) ಅಲ್ಲ. ಆದರೆ, ಸೈತಾನನು ದೇವರ ನಿಯಮವನ್ನು ಉಲ್ಲಂಘಿಸಿದನು ಮತ್ತು ಹವ್ವಳೊಂದಿಗೆ (ಆತ್ಮ) ನೇರವಾಗಿ ಮಾತನಾಡಿದನು. ಹವ್ವಳು ಘಟಕದ ತಲೆಯಾಗಿರಲಿಲ್ಲ.

ಸೈತಾನನಿಗೆ ಒಳ್ಳೆ ಮತ್ತು ಕೆಟ್ಟದ್ದರ ತಿಳುವಳಿಕೆ ಕಾಮಾಭಿಲಾಷೆಗಳನ್ನು ಮತ್ತು ದುರಾಶೆಗಳನ್ನು ಆತ್ಮನಲ್ಲಿ ಉಂಟು ಮಾಡುತ್ತದೆಂದು ಗೊತ್ತಿತ್ತು ಮತ್ತು ಆತ್ಮನ ಸ್ವಭಾವ ಪ್ರಾಣದ ಸ್ವಭಾವಕ್ಕಿಂತ ಬಲವಾಗಿರುವುದರಿಂದ ಹವ್ವಳು ಆದಮನನ್ನು ಬಂಧಿಯಾಗಿಸಿ, ದೇವರಿಗೆ ಅವಿಧೇಯನಾಗುವಂತೆ ಮಾಡುವಳೆಂದು ಗೊತ್ತಿತ್ತು. ಆದುದರಿಂದಲೇ ಸೈತಾನನು 'ಒಳ್ಳೆ ಮತ್ತು ಕೆಟ್ಟದ್ದರ' ತಿಳುವಳಿಕೆಯನ್ನು ಹವ್ವಳಿಗೆ ತೋರಿಸಲು ಇಚ್ಛಿಸಿದನು.

ಕೆಳಗಣ ಚಿತ್ರವು ಒಳಮನುಷ್ಯನು ಬಿದ್ದು ಹೋದ ಸ್ಥಿತಿಯನ್ನು ಉದಾಹರಣೆಯಾಗಿ ತೋರಿಸುತ್ತದೆ.

ನೋಡಿ ಕಲಿಯಿರಿ !




ಪ್ರಾಣವು ತಾನು ತನ್ನ ಸ್ವಂತ ಚಿತ್ತವನ್ನು ನೆರವೇರಿಸಲು ಬಲಹೀನನೆಂದು ತಿಳಿದುಕೊಳ್ಳುತ್ತಾನೆ. ಯಾಕೆಂದರೆ, ಆತ್ಮವು ಅದರ ಮೇಲೆ ದೊರೆತನ ಮಾಡುವುದರಿಂದ ಆತ್ಮನ ಇಚ್ಛೆಗಳು ನೆರವೇರುವವು.

ಸೈತಾನನು ಹವ್ವಳಿಗೆ ಮೋಸ ಮಾಡಿದನು ಯಾಕೆಂದರೆ, ಅವನು ಕೂಡ ತನಗಾಗಿ ನಿರ್ಮಿಸಿದ ಕ್ರಮದಿಂದ ತೊಲಗಿದನು.
ಯೆಶ 14 : 13, 14 "...ನಾನು (ಲೂಸಿಫರ್) ಆಕಾಶಕ್ಕೆ ಏರಿ, ದೇವರ ನಕ್ಷತ್ರಗಳ ಮೇಲೆ ನನ್ನ ಸಿಂಹಾಸನವನ್ನು ಘನತೆಗೇರಿಸುವೆನು... ಮಹೋನ್ನತನಿಗೆ (ದೇವರು) ಸಮನಾಗುತ್ತೇನೆ."

1 ಕೊರಿ 11 : 3 "...ಪ್ರತಿಪುರುಷನಿಗೂ ಕ್ರಿಸ್ತನು ತಲೆ, ಸ್ತ್ರೀಗೆ ಪುರುಷನು ತಲೆ, ಕ್ರಿಸ್ತನಿಗೆ ದೇವರು ತಲೆಯಾಗಿದ್ದಾನೆ..."

**ಗಮನಿಸು :** ಇದು ದೇವರ ಕ್ರಮವಾಗಿದೆ. ಆದರೆ, ಮನುಷ್ಯನು ಬಿದ್ದನಂತರ ಪರಿಸ್ಥಿತಿ ಹೀಗಾಗಲಿಲ್ಲ. ಅಂದಿನಿಂದ ಹೆಂಡತಿ ಗಂಡನಿಗೆ ತಲೆಯಾಗಿದ್ದಾಳೆ ಮತ್ತು ಸೈತಾನನು ಹೆಂಡತಿಗೆ ತಲೆಯಾಗಿದ್ದಾನೆ.

**ಉದಾಹರಣೆಗಳು** : ಸಂಸೋನನು ದಲೈಲಳಿಗೆ ಅಧೀನನಾದಾಗ, ದೇವರು ಇನ್ನೂ ಅವನ ತಲೆಯಾಗಿರಲಿಲ್ಲ. ಅಬ್ರಾಮನು ದೇವರಿಗೆ ಅವಿಧೇಯನಾದನು ಮತ್ತು ಇಸಾಕನ ಬದಲಾಗಿ ಇಶ್ಮಯೇಲನು ಹುಟ್ಟಿದನು.

ಆದಿ 2:16–18 "ಮತ್ತು ದೇವರಾದ ಕರ್ತನು ಮನುಷ್ಯನಿಗೆ (ಆದಮ) ಆಜ್ಞಾಪಿಸಿದ್ದೇನೆಂದರೆ... ಆದರೆ, ಮೇಲು ಕೇಡುಗಳ ತಿಳುವಳಿಕೆಯ ಮರದ ಫಲವನ್ನು ನೀನು ತಿನ್ನಬಾರದು... ಮತ್ತು ದೇವರಾದ ಕರ್ತನು, ಮನುಷ್ಯನು ಒಂಟಿಯಾಗಿರುವುದು ಒಳ್ಳೆಯದಲ್ಲ. ಅವನಿಗೆ ತಕ್ಕ ಸಹಕಾರಿ (ಹವ್ವಳು) ಯನ್ನು ಮಾಡುವೆನು ಅಂದನು.

ರೋಮ 6 : 16 "ನೀವು ಯಾರಿಗೆ ದಾಸರಂತೆ ವಿಧೇಯರಾಗುತ್ತೇವೆಂದು ನಿಮ್ಮನ್ನು ಒಪ್ಪಿಸಿ ಕೊಡುತ್ತೀರೋ ಅವರಿಗೆ ದಾಸರಾಗಿಯೇ ವಿಧೇಯರಾಗಿರುವಿರೆಂಬುದು ನಿಮಗೆ ಗೊತ್ತಿಲ್ಲವೋ ? ಪಾಪಕ್ಕೆ ದಾಸರಾದರೆ, ಮರಣವೇ..."

ಸೈತಾನನು ಕೂಡ ಮೇಲು ಮತ್ತು ಕೆಟ್ಟದ್ದರ ತಿಳುವಳಿಕೆಯನ್ನು ಹೊಂದಿದಾಗಲೇ ಅವನು ಬೀಳುವಿಕೆಯನ್ನು ಅನುಭವಿಸಿದನು. ಅದರ ಫಲಿತಾಂಶವೇನಾಯಿತೆಂದರೆ ಸೈತಾನನು ತನಗೆ ನಿರ್ಮಿಸಿದ ಸ್ಥಾನವನ್ನು ಬಿಟ್ಟನು ಮತ್ತು ದೇವರಿಗೆ ಸರಿಸಮಾನನಾಗಿ ಮಾಡಿಕೊಂಡನು. ಅವನು ಇನ್ನು ಮೇಲೆ ದೇವರಿಗೆ ಅಧೀನನಾಗಿರಲು ಸಾಧ್ಯವಾಗಲಿಲ್ಲ. ಹವ್ವಳೊಂದಿಗೆ ಅವನ ಮಾತುಕಥೆಯಲ್ಲಿ ಅವಳಿಗೆ 'ಒಳ್ಳೆ ಕೆಟ್ಟದರ' ತಿಳುವಳಿಕೆಯನ್ನು ಕೊಟ್ಟನು ಮತ್ತು ಅವಳು ಕೂಡ ಆದಮನಿಗೆ ಇನ್ನು ಮೇಲೆ ಅಧೀನಳಾಗಲು ಸಾಧ್ಯವಾಗಲಿಲ್ಲ.

ಯೋಬ 2 : 7, 9, 10 "ಆಗ ಸೈತಾನನು ಕರ್ತನ ಸಮ್ಮುಖದಿಂದ ಹೊರಟು ಯೋಬನಿಗೆ ಅಂಗಾಲಿನಿಂದ ನೆತ್ತಿಯವರೆಗೆ ಕೆಟ್ಟ ಹುಣ್ಣುಗಳು ಬರುವ ಹಾಗೆ ಅವನನ್ನು ಹೊಡೆದನು... ಆಗ ಅವನ ಹೆಂಡತಿಯು ಅವನಿಗೆ ಇನ್ನೂ ಯಾತಾರ್ಥತ್ವದಲ್ಲಿ ಉಳಿದಿದ್ದೀಯೋ ? ದೇವರನ್ನು ಶಪಿಸಿ ಸಾಯಿ ಅಂದಳು. ಆದರೆ, ಅವನು ಅವಳಿಗೆ – ಮೂರ್ಖ ಹೆಂಗಸರಲ್ಲಿ ಒಬ್ಬಳು ಮಾತನಾಡುವ ಪ್ರಕಾರ ನೀನು ಮಾತನಾಡುವೆಯೋ ? ... "
**ಗಮನಿಸು :** ಈ ಬರಹದಿಂದ ಹೆಂಡತಿಯು (ಆತ್ಮ) ಮಾರ್ಗದರ್ಶಿಯಾಗಲು ಸಾಧ್ಯವಿಲ್ಲವೆಂದು ನಾವು ನೋಡುತ್ತೇವೆ ಯಾಕೆಂದರೆ ಆತ್ಮವು ಆಲೋಚಿಸುವುದಿಲ್ಲ, ತನ್ನ ಉದ್ರೇಕಗಳಿಗನುಸಾರವಾಗಿ ಕ್ರಿಯೆ ನಡೆಸುತ್ತದೆ. ಯೋಬನು ತನ್ನ ಹೆಂಡತಿಗೆ ಅದೀನನಾಗದೇ ಇದ್ದದರಿಂದ ದೇವರು ಕಡೆಗೆ ಅವನನ್ನು ಹಿಂದಕ್ಕೆ ಕೊಟ್ಟನು.

ದೇವರ ಕ್ರಮ ಒಳ ಮನುಷ್ಯನಲ್ಲಿ ತಲೆಕೆಳಗಾದುದರಿಂದ ಹೊರ ಮನುಷ್ಯನು (ದೇಹ) ಸೈತಾನನ ಸ್ವತ್ತಾದನು. ಮತ್ತು ದೆವ್ವಗಳು ಅದರಲ್ಲಿ ನೆಲಸುವಂತಾಯಿತು.

**ದೇಹವು ಬಿದ್ದುಹೋದದ್ದು**

ಆದಮನು ಮತ್ತು ಹವ್ವ ಸೈತಾನನಿಗೆ ವಿಧೇಯರಾದಾಗ ದೇಹವು ಸೈತಾನನ ಸ್ವತ್ತಾಯಿತು. ಮತ್ತು ಪಾಪ ಮತ್ತು ಮರಣಗಳ ನಿಯಮ ಆಗಿನಿಂದಲೂ ಪ್ರಭುತ್ವ ನಡೆಸಿದೆ. ಎಲ್ಲಾ ಮೂರು ಅಂಗಗಳು ಸೈತಾನನ ನಿಯಂತ್ರಣದಲ್ಲಿ ಸಿಕ್ಕಿಬಂದವು. ಆ ದೇಹವು ಈಗ ಪಾಪದ ದೇಹವಾಯಿತು. ಮತ್ತು ಒಳ ಮನುಷ್ಯನು ಅದರ ಮೂಲಕ ಪಾಪ ಮಾಡುವ ಸಾಧನವಾದನು.

ನೋಡಿ ಕಲಿಯಿರಿ !




ಪಾಪದ ದೇಹ
(ಮನುಷ್ಯನ ಬೀಜ)

ದೇಹವು ಸೈತಾನನ ಮನೆಯಾಗಿರುವುದರಿಂದ ಪಾಪವು ದೇಹದಲ್ಲಿ ನೆಲೆಗೊಳ್ಳುತ್ತದೆ. ಪಾಪಕ್ಕೆ ಒಳ್ಳೆ ಮತ್ತು ಕೆಟ್ಟದರ ಮನಸ್ಸು ಇದೆ. ಮತ್ತು ಕಾಮಕ್ಕೆ ಮತ್ತು ದುರಾಸೆಗೆ ಒಳಗಾಗುವ ಸ್ವಭಾವಯಿದೆ. ಪಾಪವು ದೇಹದಲ್ಲಿ ಒಳಗೊಂಡಿರುವುದರಿಂದ ದೇಹವು ಮುಪ್ಪಾಗಿ ಸಾಯುತ್ತದೆ.

**ಮನುಷ್ಯನ ಸಂತತಿ :**

ದೇಹವು ಮನುಷ್ಯನ ಬೀಜವಾಗಿರುವುದರಿಂದ ಮನುಷ್ಯನ ಎಲ್ಲಾ ಮಕ್ಕಳು ಪಾಪದ ದೇಹದಲ್ಲಿ ಹುಟ್ಟಿದ್ದಾರೆ ಮತ್ತು ಪಾಪ ಮತ್ತು ಮರಣದ ನಿಯಮದ ಕೆಳಗೆ ಸೈತಾನನ ಗುಲಾಮರಾಗಿದ್ದಾರೆ.

ಆದಿ 19 : 26 "ಆದರೆ, ಲೋಟನ ಹಿಂದೆ ಇದ್ದ ಅವನ ಹೆಂಡತಿಯು ಹಿಂದಕ್ಕೆ ನೋಡಿ ಉಪ್ಪಿನ ಸ್ಥಂಭವಾದಳು."
**ಗಮನಿಸು :** ಲೋಟನು (ಪ್ರಾಣ) ಹಿಂದಕ್ಕೆ ನೋಡಬಾರದೆಂದು ಆಜ್ಞೆ ಹೊಂದಿದ್ದನು. ಆದರೆ, ಅವನ ಹೆಂಡತಿ (ಆತ್ಮ) ಹಿಂದಕ್ಕೆ ನೋಡಿದಳು. ಇಲ್ಲಿ ನಾವು ಮತ್ತೆ ಅಪರಿಶುದ್ಧಾತ್ಮದ ಅವಿಧೇಯ ಸ್ವಭಾವವನ್ನು ನೋಡುತ್ತೇವೆ.

ಯಾಕೋ 1 : 14, 15 "ಆದರೆ ಪ್ರತಿಯೊಬ್ಬನೂ ತನ್ನ ಸ್ವಂತ ದುರಾಶೆಯಿಂದ (ಆತ್ಮ) ಎಳೆಯಲ್ಪಟ್ಟು ಮರುಳುಗೊಂಡವನಾಗಿ ಶೋಧಿಸಲ್ಪಡುತ್ತಾನೆ. ಆಮೇಲೆ ದುರಾಶೆಯು ಗರ್ಭ ಧರಿಸಿ (ಒಬ್ಬ ಸ್ತ್ರೀ) ಪಾಪವನ್ನು ಹೆರುತ್ತದೆ. ; ಪಾಪವು ಸಂಪೂರ್ಣವಾದ ಮೇಲೆ ಮರಣವನ್ನು ಹಡೆಯುತ್ತದೆ."
**ಗಮನಿಸು :** ಒಬ್ಬ ಸ್ತ್ರೀ ಮಾತ್ರ ಗರ್ಭ ಧರಿಸಬಹುದು. ಇದು ಆತ್ಮನು ಒಬ್ಬ ಸ್ತ್ರೀ ಎಂದು ಸಮರ್ಥಿಸುತ್ತದೆ.

ಜ್ಞಾನೋ 25 : 28 "ತನ್ನ ಸ್ವಂತ ಮನಸ್ಸನ್ನು ಆಳದಿರುವವನು (ಪ್ರಾಣ) ಮುರಿಯಲ್ಪಟ್ಟು ಬಿದ್ದು ಹೋಗಿ, ಗೋಡೆಗಳಿಲ್ಲದ ಪಟ್ಟಣಕ್ಕೆ ಸಮಾನ."

ಪಟ್ಟಣದ ಗೋಡೆ ಮುರಿದ ತಕ್ಷಣವೇ ಶತೃವು ಪ್ರವೇಶಿಸಬಹುದು. ಇದೇ ಮನುಷ್ಯನ ದೇಹಕ್ಕೆ ಆದದ್ದು. ದಂಡಿನಷ್ಟು ದೆವ್ವಗಳು ಮನುಷ್ಯನ ದೇಹವನ್ನು ಆವರಿಸಬಹುದು (ಮಾರ್ಕ 5 : 9, 15)

ಒಂದು ದೇಶದ ನಿವಾಸಿಗಳು ಒಂದು ಹೊಸರಾಜ್ಯಾಡಳಿತಕ್ಕಾಗಿ ಓಟು ಹಾಕಿದಾಗ ಆ ಹೊಸ ಆಡಳಿತದ ನಿಯಮ ಆ ದೇಶದಲ್ಲಿ ಅವರ ಮೇಲೆ ಪ್ರಭುತ್ವ ನಡೆಸುತ್ತದೆ. ಆದಮ ಮತ್ತು ಹವ್ವಳು ಸೈತಾನನಿಗೆ ಓಟು ಹಾಕಿದಾಗ ದೇಹವು ಸೈತಾನನ ರಾಜ್ಯವಾಯಿತು. ಪಾಪವು ಆಗ ದೇಹದಲ್ಲಿ ನೆಲಸಿತು. ಮತ್ತು ಒಳ ಮನುಷ್ಯನ ಮೇಲೆ ಪ್ರಭುತ್ವ ನಡೆಸಿತು.
ರೋಮ 7 : 20 "ಇಚ್ಛೈಸದಿರುವುದನ್ನು ನಾನು ಮಾಡಿದರೆ ಅದನ್ನು ಮಾಡಿದವನು ಇನ್ನು ನಾನಲ್ಲ. ನನ್ನಲ್ಲಿ (ನನ್ನ ದೇಹದಲ್ಲಿ) ನೆಲೆಗೊಂಡಿರುವ ಪಾಪವೇ ಅದನ್ನು ಮಾಡಿತು."

ಲೂಕ 17 : 21 "...ದೇವರ ರಾಜ್ಯವು ನಿಮ್ಮೊಳಗೆ ಇದೆ ಅಂದನು"
**ಗಮನಿಸು :** ಈ ಬರಹದಿಂದ ನಾವು ತೀರ್ಮಾನಿಸ ಬಹುದಾಗಿರುವುದು ಸೈತಾನನ ರಾಜ್ಯವೂ ಕೂಡ ದೇಹದೊಳಗಿದೆ ಎಂದು.

ಎಫೆ 2 : 2 "ನೀವು ಪೂರ್ವದಲ್ಲಿ ಅಪರಾಧಗಳನ್ನು ಪಾಪಗಳನ್ನು ಮಾಡುವವರಾಗಿದ್ದು, ಇಹ ಲೋಕಕ್ಕೆ ಅನುಸಾರವಾಗಿ ನಡೆದುಕೊಂಡಿರಿ ; ವಾಯು ಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ ಅಂದರೆ ಅವಿದೇಯತೆಯ ಮಕ್ಕಳಲ್ಲಿ ಈಗ ಕೆಲಸ ನಡೆಸುವ ಆತ್ಮನಿಗನುಸಾರವಾಗಿ ನಡೆದುಕೊಂಡಿರಿ;"





ಪವಿತ್ರಾತ್ಮನು ದೇವರ ಮನಸ್ಸು ಅಥವಾ ಸ್ವಭಾವ ಹೇಗೋ ಹಾಗೆಯೇ ಪಾಪವು ಸೈತಾನನ ಮನಸ್ಸು ಅಥವಾ ಸ್ವಭಾವ. ದೇಹದಲ್ಲಿನ ಪಾಪದ ಮನಸ್ಸನ್ನೇ ಶರೀರಾಧೀನ ಎಂದು ಕರೆಯುವುದು ಮತ್ತು ಈ ದುರಾತ್ಮವೇ, ಪ್ರಾಕೃತಿಕ ದೇಹವಲ್ಲ. ಒಳ ಮನುಷ್ಯನನ್ನ ಕೆಡಿಸುವುದು

ಮನುಷ್ಯನ ದೇಹಕ್ಕೆ ಈಗ ಒಳಗೇ ನೆಲೆಸಿಕೊಂಡಿರುವ ಒಂದು ಕೆಟ್ಟ ಸ್ವಭಾವವಿದೆ. ಮಾನವನ ದೇಹದ ಸ್ವಭಾವವನ್ನು ಬದಲಾಗಿಸಿರಲಿಲ್ಲ. ದೇಹದಲ್ಲಿ ನೆಲೆಗೊಂಡಿರುವ ಕೆಟ್ಟಸ್ವಭಾವವೇ ಒಳ ಮನುಷ್ಯನನ್ನು ಕೆಡಿಸುವುದು.

ನೋಡಿ ಕಲಿಯಿರಿ !

### ದುಷ್ಟ ಸಂತತಿ



### ಅವಿದೇಯತೆಯ ಮಕ್ಕಳು

ಮಕ್ಕಳು ಪಾಪದ ದೇಹದಲ್ಲಿ ಬೆಳೆಯುತ್ತಾ ಬರುವಾಗ, ಅವರು ಒಳ್ಳೆ ಮತ್ತು ಕೆಟ್ಟದ್ದರ ತಿಳುವಳಿಕೆಯನ್ನು ಹೊಂದುತ್ತಾರೆ. ಅದು ಆತ್ಮದಲ್ಲಿನ ಕಾಮಾಭಿಲಾಷೆಗಳಿಗೂ ಮತ್ತು ದುರಾಶೆಗಳಿಗೂ ಕಾರಣವಾಗುತ್ತದೆ. ಆತ್ಮವು ಪಾಪ ಸ್ವಭಾವದಿಂದ ತುಂಬಿದಂತೆಲ್ಲಾ ಪ್ರಾಣದ ತರ್ಕ ಶಾಸ್ತ್ರದ ಮೇಲೆ ದೊರೆತನ ಮಾಡುತ್ತದೆ.

ಸ್ವಭಾವವು ತಿಳುವಳಿಕೆಗಿಂತ ಬಲವಾಗಿರುವುದರಿಂದ ಆತ್ಮನು, ಪ್ರಾಣವನ್ನು ಸೈತಾನನಿಗೆ ವಿಧೇಯನಾಗುವಂತೆ ಬಂಧಿಸುತ್ತಾನೆ. ಒಳಮನುಷ್ಯನ ಈ ಭಕ್ತಿ ಹೀನ ಸ್ಥಿತಿ ಹವ್ವಳಿಗೆ (ಆತ್ಮ) ಅನ್ವಯವಾಗುತ್ತದೆ. ಅವಳು ಆದಮನನ್ನು ಕೂಡ (ಪ್ರಾಣ) ಸೈತಾನನಿಗೆ ವಿಧೇಯನಾಗುವಂತೆ ಬಂಧಿಸುವವಳು. ಇದೇ ಮನುಷ್ಯನು ಬಿದ್ದು ಹೋದಗತಿ. ಒಬ್ಬ ಪಾಪಿಯು ಅವಿಧೇಯತೆಯ ಆತ್ಮನನ್ನುಳ್ಳ ಒಬ್ಬ ವ್ಯಕ್ತಿ. ಅದು ಅವನ ಪ್ರಾಣದ ಮೇಲೆ ದೊರೆತನ ಮಾಡುತ್ತದೆ.

ಒಂದು ಮಗು ಪಾಪಿಯಾಗಿ ಹುಟ್ಟಲಿಲ್ಲ. ಆದರೆ, ಒಂದು ಪಾಪದ ದೇಹದಲ್ಲಿ ಹುಟ್ಟಿದೆ. ಆದಾಮ್ ಹವ್ವರ ದೆಸೆಯಿಂದ ಅವನ ಒಳಮನುಷ್ಯನು ದೇವರಿಂದ ಖಂಡಿಸಲ್ಪಡುವುದಿಲ್ಲ. ಆದರೆ, ಅವನು ತಾನೇ ಪಾಪ ಮಾಡುವ ಪಾಪಿಯಾಗುತ್ತಾನೆ. ಒಬ್ಬ ಪಾಪಿಯು ತನ್ನ ಹೃದಯದ (ಆತ್ಮ) ಪಾಪ ಸ್ವಭಾವಕ್ಕನುಗುಣವಾಗಿ ಜೀವಿಸುತ್ತಾನೆ. ಮತ್ತು ಅವನ ಮನಸ್ಸಿನ (ಪ್ರಾಣ) ತರ್ಕಶಾಸ್ತ್ರಕ್ಕನುಗುಣವಾಗಿ ಅಲ್ಲ. ಪಾಪಿಯು ಅವನಿಂದ ಏನು ಅಪೇಕ್ಷಿಸಲ್ಪಟ್ಟಿದೆಯೋ ಅದರ ವಿಷಯವಾಗಿ ಎಚ್ಚರಿಕೆಯಾಗಿರಬಹುದಾರೂ, ಅವನು ತನ್ನ ಮೋಸವುಳ್ಳ ಆತ್ಮಕ್ಕನುಸಾರವಾಗಿ ಪ್ರತಿ ಕ್ರಿಯೆ ನೀಡುತ್ತಾನೆ. ಹೃದಯವು ಮೋಸವುಳ್ಳದ್ದು, ಯಾಕೆಂದರೆ ಅದು ಒಳ್ಳೇದನ್ನು ಮಾಡಬಲ್ಲದು, ಹಾಗೆಯೇ ಕೆಟ್ಟದ್ದನ್ನೂ ಮಾಡಬಲ್ಲದು ಆದುದರಿಂದ ಪಾಪಿಗೆ ತಾನು ಏನು ಮಾಡುತ್ತಾನೋ ಅವನಿಗೆ ತಿಳಿಯದು. ಅವನು ತನ್ನ ಎಲ್ಲಾ ವ್ಯವಹಾರಗಳಲ್ಲಿ ಚಂಚಲನೂ ಮತ್ತು

**ಗಮನಿಸು :** ಐಗುಪ್ತದಲ್ಲಿ ಹುಟ್ಟಿದ ಎಲ್ಲಾ ಯೆಹೂದ್ಯರು ಐಗುಪ್ತದ ನಿಯಮದ ಕೆಳಗೆ ಇದ್ದರು. ಮತ್ತು ಫರೋಹನನ ಗುಲಾಮರಾಗಿದ್ದರು. ಅದೇ ರೀತಿಯಾಗಿ ಪಾಪದ ದೇಹದಲ್ಲಿ ಹುಟ್ಟಿದ ಎಲ್ಲಾ ಜನರು ಪಾಪದ ನಿಯಮದ ಕೆಳಗೆ ಇದ್ದಾರೆ. ಮತ್ತು ಸೈತಾನನ ಗುಲಾಮರಾಗಿದ್ದಾರೆ.

ರೋಮ 3 : 9 "ಹಾಗಾದರೆ ಏನು ? ನಾವು (ಯಹೂದ್ಯರು) ಅವರಿಗಿಂತಲೂ (ಅನ್ಯಜನರು) ಉತ್ತಮರಾಗಿದ್ದೇವೋ ? ಇಲ್ಲವೇ ಇಲ್ಲ ; ಯಾಕೆಂದರೆ ಯಹೂದ್ಯರೂ, ಅನ್ಯಜನರೂ, ಎಲ್ಲರೂ ಪಾಪಕ್ಕೊಳಗಾಗಿದ್ದಾರೆಂದು ಮೊದಲೇ ನಾವು ಸ್ಥಾಪಿಸಿದ್ದೇವಲ್ಲ."

ರೋಮ 3 : 12 "ಎಲ್ಲರೂ ದಾರಿತಪ್ಪಿದವರಾಗಿ ಕೆಲಸಕ್ಕೆ ಬಾರದವರಾದರು ; ಒಳ್ಳೆಯದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ."

ಆದಿ 3 : 7 "ಆಗ ಅವರಿಬ್ಬರ ಕಣ್ಣುಗಳು ತೆರೆಯಲ್ಪಟ್ಟು ತಾವು ಬೆತ್ತಲೆಯಾಗಿದ್ದೇವೆಂದು ತಿಳಿದುಕೊಂಡರು ; ಮತ್ತು ಅವರು ಅಂಜೂರದ ಎಲೆಗಳನ್ನು ಹೊಲಿದುಕೊಂಡು ತಮಗೆ ತಾವೇ ಉಡುಗೆಗಳನ್ನು ಮಾಡಿಕೊಂಡರು."
**ಗಮನಿಸು :** ಆದಮ ಮತ್ತು ಹವ್ವರಂತೆಯೇ ಮಕ್ಕಳು ಕೂಡಾ ತಾವು ಬೆತ್ತಲೆಯಾಗಿದ್ದಾರೆಂದು ಎಚ್ಚರಗೊಂಡರೆ ತಮ್ಮನ್ನು ತಾವು ಮುಚ್ಚಿಕೊಳ್ಳುತ್ತಾರೆ. ಯಾಕೆಂದರೆ ಆಗ ಅವರೂ ಕೂಡ 'ಒಳ್ಳೆ ಕೆಟ್ಟದರ' ತಿಳುವಳಿಕೆಯನ್ನು ಹೊಂದಿದ್ದಾರೆ.

ರೋಮ 7 : 23 "ಆದರೆ ನನ್ನ ಅಂಗಗಳಲ್ಲಿ ಬೇರೊಂದು ನಿಯಮ ಉಂಟೆಂದು (ನನ್ನ ಆತ್ಮದ ನಿಯಮ) ನಾನು ನೋಡುತ್ತೇನೆ ; ಅದು ನನ್ನ ಮನಸ್ಸಿನಲ್ಲಿರುವ (ನನ್ನ ಪ್ರಾಣ) ನಿಯಮಕ್ಕೆ ವಿರೋಧವಾಗಿ ಕಾದಾಡಿ, ನನ್ನನ್ನು ಸೆರೆಹಿಡಿದು ನನ್ನ ಅಂಗಗಳಲ್ಲಿರುವ (ದೇಹ) ಪಾಪದ ನಿಯಮಕ್ಕೆ ವಶ ಮಾಡುವಂತಹದ್ದಾಗಿದೆ."
ರೋಮ 7 : 15 "ಹೇಗೆಂದರೆ ನಾನು ಮಾಡುವುದನ್ನು ನಾನೇ (ಪ್ರಾಣ) ಒಪ್ಪುವುದಿಲ್ಲ ; ಯಾವುದನ್ನು ಮಾಡಬೇಕೆಂದು ನಾನು ಇಚ್ಚಿಸುತ್ತೇನೋ ಅದನ್ನು ಮಾಡದೆ, ನಾನು ವಿರೋಧಿಸುವುದನ್ನು ಮಾಡುತ್ತೇನೆ."

ಕೀರ್ತ 51 : 5 "ಇಗೋ, ಅಕ್ರಮದಲ್ಲಿ ರೂಪಿಸಲ್ಪಟ್ಟೆನು ; ಪಾಪದಲ್ಲಿ ನನ್ನ ತಾಯಿ ನನ್ನನ್ನು ಗರ್ಭ ಧರಿಸಿದಳು."

ಜ್ಞಾನೋ 16 : 32 "ದೀರ್ಘಶಾಂತನು ಶೂರರಿಗಿಂತಲೂ ತನ್ನ (ಪ್ರಾಣ) ಮನಸ್ಸನ್ನು ಆಳುವನು ; ಪಟ್ಟಣವನ್ನು ಗೆದ್ದವನಿಗಿಂತಲೂ ಉತ್ತಮನು"

ಜ್ಞಾನೋ 25 : 28 "ತನ್ನ ಸ್ವಂತ ಮನಸ್ಸನ್ನು ಆಳದಿರುವನು ಮುರಿಯಲ್ಪಟ್ಟು ಬಿದ್ದುಹೋಗಿ, ಗೋಡೆಗಳಿಲ್ಲದ ಪಟ್ಟಣಕ್ಕೆ ಸಮಾನ."

ಯರೆ 17 : 9, 10 "ಹೃದಯವು (ಆತ್ಮ) ಎಲ್ಲಾದಕ್ಕಿಂತ ವಂಚನೆಯುಳ್ಳದ್ದಾಗಿಯೂ ಮಹಾ ದುಷ್ಟತನದ್ದೂ ಆಗಿದೆ. ಅದನ್ನು ತಿಳಿಯುವವನ್ಯಾರು ? ಕರ್ತನಾದ ನಾನೇ ಹೃದಯವನ್ನು (ಆತ್ಮ) ಪರೀಕ್ಷಿಸುತ್ತೇನೆ : ಅಂತರೇಂದ್ರಿಯಗಳನ್ನು ಶೋಧಿಸುತ್ತೇನೆ ; ಮತ್ತು ಒಬ್ಬೊಬ್ಬನಿಗೆ ಅವನವನ ಮಾರ್ಗಗಳ ಪ್ರಕಾರವೂ ಅವನ ಕ್ರಿಯೆಗಳ (ದೇಹ) ಪ್ರಕಾರವೂ (ಪ್ರತಿಫಲ) ಕೊಡುತ್ತೇನೆ."

ನಂಬಲನರ್ಹನು ಆಗಿದ್ದಾನೆ. ಅವನು ತನ್ನನ್ನು ತಾನೇ ನಂಬುವುದಿಲ್ಲ ಮತ್ತು ನಂಬಿಕೆಗೆ ಅನರ್ಹನು ಯಾಕೆಂದರೆ ಅವನು ಕೆಟ್ಟದ್ದನ್ನು ಮಾಡುವವನು.

ಮನುಷ್ಯನ ಪಾಪ ಸ್ವಭಾವ ಮಾತ್ರವಲ್ಲದೆ ಭೂಮಿಯೂ ಕೂಡ ಶಪಿಸಲ್ಪಟ್ಟಿತು. ಮತ್ತು ಅದು ಮುಳ್ಳುಗಳನ್ನೂ, ದತ್ತೂರಿಗಳನ್ನೂ ಬೆಳೆಯುವುದು. ಭೂಮಿಯು ಸಾಕಷ್ಟು ಬೆಳೆಯದೇ ಇರುವುದರಿಂದ, ಒಂದು ಸಮಾಜವು ಅಳಿಯದೆ ಉಳಿಯುವುದಕ್ಕಾಗಿ ಅನೀತಿಯಲ್ಲಿ ಕೆಲಸ ಮಾಡಿದರೆ ಕೊರತೆಯುಂಟಾಗುತ್ತದೆ.

ಪ್ರಪಂಚದ ಜ್ಞಾನ ಒಳ್ಳೆ ಮತ್ತು ಕೆಟ್ಟದರ ತಿಳುವಳಿಕೆಯ ಮೇಲೆ ಆಧಾರವಾಗಿರುತ್ತದೆ. ಮಾನವನ ಪಾಪದ ಸ್ವಾಭವದ ದೆಸೆಯಿಂದ ಇಡೀ ಪ್ರಪಂಚವು ಅದರ ಪದ್ದತಿಗಳೊಂದಿಗೆ ದುಷ್ಟತನದಲ್ಲಿ ಅಡಗಿದೆ.

**ಬೀಳುವುದರಿಂದಾದ ಪರಿಣಾಮಗಳು :**

**ಒಳ್ಳೆ ಕೆಟ್ಟದರ ತಿಳುವಳಿಕೆ :**

ಮನುಷ್ಯನ ಪ್ರಾಣ 'ಒಳ್ಳೆ ಕೆಟ್ಟದರ ತಿಳುವಳಿಕೆ'ಯನ್ನು ಹೊಂದಿರುವುದರಿಂದ ಆತ್ಮವು ಕಾಮಾಭಿಲಾಷೆಗಳನ್ನು, ದುರಾಶೆಗಳನ್ನು ಉಳ್ಳದ್ದಾಗಿದೆ. 'ಒಳ್ಳೆ ಕೆಟ್ಟದರ ತಿಳುವಳಿಕೆ'ಯ ಪರಿಣಾಮ ಮಾನವನ ಮೇಲೆ ಉಂಟಾದದ್ದನ್ನು ಕಾಯೀನ್ ಮತ್ತು ಯೇಬೇಲರ ಜೀವನಗಳಲ್ಲಿ ನೋಡಬಹುದು. ಅವರಿಬ್ಬರೂ ದೇವರಿಗಾಗಿ ಒಂದು ಕಾಣಿಕೆ ತಂದರು. ಎರಡು ಕಾಣಿಕೆಗಳು ಒಳ್ಳೆಯದಾಗಿದ್ದವು. ಆದರೆ ದೇವರು ಯೇಬೇಲನ ರಕ್ತದ ಕಾಣಿಕೆಯನ್ನು ಮೆಚ್ಚಿದನು. 'ಒಳ್ಳೆ ಕೆಟ್ಟದರ ತಿಳುವಳಿಕೆ'ಯು ಕಾಯೀನನ ಪ್ರಾಣದಲ್ಲಿದ್ದು, ಅವನ ಆತ್ಮದಲ್ಲಿ ಕೋಪ ಉಕ್ಕುವಂತೆ ಮಾಡಿತು. ಮತ್ತು ಅವನ ದೇಹದಿಂದ ಅವನು ಏಬೇಲನನ್ನು ಕೊಂದನು. 'ಒಳ್ಳೆ ಕೆಟ್ಟದರ ತಿಳುವಳಿಕೆ'ಯೇ ಕಾಯೀನನ ತನ್ನ ಸಹೋದರನನ್ನು ಕೊಲ್ಲುವುದಕ್ಕೆ ಕಾರಣವಾಯಿತು. ಕೊಲೆಯು 'ಶರೀರದ' ಕೆಲಸ.

**ಅನೀತಿಯ ಧನ**

ಭೂಮಿಯು ಶಾಪಗ್ರಸ್ತವಾಗಿದ್ದರಿಂದ ಕೊರತೆಯು ಕಾಣಿಸಿಕೊಳ್ಳಲು ಶುರುವಾಯಿತು. ಇದು ಆಸೆಗೂ, ಕೂಡಿಡುವುದಕ್ಕೂ ಕಾರಣವಾಯಿತು. ಭವಿಷತ್ತಿನ ಆಹಾರ ಸಾಮಗ್ರಿಗಳ ಬಗ್ಗೆ

ಆದಿ 3 : 17, 18 "...ನೀನು ನಿನ್ನ ಹೆಂಡತಿಯ ಮಾತನ್ನು ಕೇಳಿ... ನಿನಗೋಸ್ಕರ ಭೂಮಿಯು ಶಪಿಸಲ್ಪಟ್ಟಿದೆ ; ನಿನ್ನ ಜೀವಮಾನದ ದಿನಗಳಲ್ಲೆಲ್ಲಾ ದುಃಖದಲ್ಲೇ ನೀನು ಅದರ ಫಲವನ್ನು ತಿನ್ನುವಿ, ಮುಳ್ಳುಗಳನ್ನು ದತ್ತೂರಿಗಳನ್ನೂ ಭೂಮಿಯು ಬೆಳೆಯುವುದು..."

1 ಯೋಹಾ 2 : 16 "ಯಾಕೆಂದರೆ ಲೋಕದಲ್ಲಿರುವವುಗಳೆಲ್ಲವೂ ಅಂದರೆ ಶರೀರದ ಆಶೆ, ಕಣ್ಣಿನಾಶೆ, ಜೀವನದ ಗರ್ವ, ಇವು ತಂದೆಗೆ ಸಂಬಂಧಪಟ್ಟವುಗಳಲ್ಲ. ಆದರೆ ಲೋಕಕ್ಕೆ ಸಂಬಂಧಪಟ್ಟವುಗಳಾಗಿವೆ."

ರೋಮ 8 : 7 "ಯಾಕೆಂದರೆ ಶರೀರ ಸಂಬಂಧವಾದ ಮನಸ್ಸು, ದೇವರಿಗೆ ಶತೃತ್ವವು ; ಕಾರಣವೇನೆಂದರೆ ಅಂತಹ ಮನಸ್ಸು, ದೇವರ ನಿಯಮಕ್ಕೆ ಒಳಪಡುವುದಿಲ್ಲ ; ಒಳಪಡುವುದಕ್ಕಾಗುವುದೂ ಇಲ್ಲ."

ಒಂದು ಶರೀರ ಸಂಬಂಧವಾದ ಮನಸ್ಸು, ಒಳ್ಳೆ ಕೆಟ್ಟದರ ತಿಳುವಳಿಕೆಯನ್ನನ್ನುಸರಿಸಿ ಕೆಲಸ ಮಾಡುತ್ತದೆ. ಕೆಳಗೆ ಬರುವ ಸಾಮ್ಯದಲ್ಲಿ ಯೇಸು ಒಬ್ಬ ಮನುಷ್ಯನ ಮೇಲೆ ಒಳ್ಳೆ ಕೆಟ್ಟದರ ಅರಿವಿನ ಪರಿಣಾಮ ಏನಾಗುವುದೆಂದು ತಿಳಿಯಪಡಿಸಿದ್ದಾನೆ. ಒಬ್ಬ ಯಜಮಾನನು, ಕೂಲಿಗಳನ್ನು ಬಾಡಿಗೆಗೆ ಕರೆದನು. ಇವರು ದಿನದ ಬೇರೆ ಬೇರೆ ಸಮಯದಲ್ಲಿ ಕರೆಯಲ್ಪಟ್ಟರು. ಆದರೆ, ಕೆಲಸದ ದಿನದ ಕಡೆಯಲ್ಲಿ ಅವರಿಗೆ ಒಂದೇ ತರಹದ ಕೂಲಿಯನ್ನು ಕೊಟ್ಟನು. ಹೆಚ್ಚು ಗಂಟೆಗಳು ಕೆಲಸ ಮಾಡಿದವರು, ಅವರ ಮನಸ್ಸಿನಲ್ಲಿ ಗುಣುಗುಟ್ಟಿದರು. ಮತ್ತು ದೂರಿದರು. ಶರೀರ ಸ್ವಾಭಾವದ ಮನಸ್ಸು, ಅವರೆಲ್ಲರಿಗೆ ಒಂದೇ ತರದ ವೇತನ ಕೊಡುವುದನ್ನು ಒಪ್ಪಲಿಲ್ಲ. ಮತ್ತು ನಾವು ಇಲ್ಲಿ ನೋಡುತ್ತಾ ಇರುವುದು 'ಒಳ್ಳೆ ಕೆಟ್ಟದರ ಅರಿವು' ಶರೀರ ಭಾವದ ಕೆಲಸಗಳಿಗೆ ನಡೆಸುತ್ತದೆ. (ಮತ್ತ 20 : 8–14).

1 ತಿಮೋ 6 : 9, 10 "ಆದರೆ ಐಶ್ವರ್ಯವಂತರಾಗಬೇಕೆಂದು ಮನಸ್ಸು ಮಾಡುವವರು ಶೋಧನೆಯಲ್ಲಿಯೂ, ಉರ್ಲಿನಲ್ಲಿಯೂ ಸಿಕ್ಕಿಕೊಂಡು ಅನೇಕ ಬುದ್ದಿ ಹೀನತೆಯ ಮತ್ತು ಹಾನಿಕರವಾದ ದುರಾಶೆಗಳಲ್ಲಿ ಬೀಳುತ್ತಾರೆ. ಇಂತಹ ಆಶೆಗಳು ಮನುಷ್ಯರನ್ನು ಸಂಪೂರ್ಣ ನಾಶನಗಳಲ್ಲಿ ಮುಳುಗಿಸುತ್ತವೆ. ಹಣದ ಪ್ರೀತಿಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು ನಂಬಿಕೆಯಿಂದ ತಪ್ಪಿಹೋಗಿ ಅನೇಕ ದುಃಖಗಳಿಂದ ತಮ್ಮನ್ನು ತಾವೇ ತಿವಿಸಿಕೊಳ್ಳುತ್ತಾರೆ."

ಮತ್ತ 6 : 24 "ಯಾವ ಮನುಷ್ಯನು ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು ; ಯಾಕೆಂದರೆ, ಅವನು ಒಬ್ಬನನ್ನು ಹಗೆ ಮಾಡಿ ಇನ್ನೊಬ್ಬನನ್ನು ಪ್ರೀತಿ ಮಾಡುವನು ; ಇಲ್ಲವಾದರೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ಅಸಡ್ಡೆ ಮಾಡುವನು. ನೀವು ದೇವರನ್ನು ಧನವನ್ನು ಸೇವಿಸಲಾರಿರಿ."

ಸಂಶಯಗ್ರಸ್ತರಾದುದರಿಂದ ಅವರ ವ್ಯವಹಾರಗಳಲ್ಲಿ ಅವರು ಅನೀತಿವಂತರಾದರು.

ಹಣ ಮತ್ತು ಐಶ್ವರ್ಯಕ್ಕೆ ಧನ ಅನ್ನುತ್ತಾರೆ. ಧನ ದೆವ್ವವಲ್ಲ, ಆದರೆ, ಹಣದ ಮನಸ್ಸು 'ಒಳ್ಳೆ ಕೆಟ್ಟದರ' ಅರಿವು ಹೇಗೆ ಪಾಪವನ್ನು ಉತ್ಪತ್ತಿ ಮಾಡುತ್ತದೋ, ಹಾಗೆಯೇ ಹಣ ಅನೀತಿಯನ್ನೂ ಮತ್ತು ವಿಗ್ರಹಾರಾಧನೆಯನ್ನು ಉತ್ಪತ್ತಿ ಮಾಡುತ್ತವೆ.


ಮಾನವನಿಗೆ ಮಾರಕ ದೇಹ ವಿರುವವರೆವಿಗೆ ಹಣವು ಅವನ ಮೇಲೆ ಪ್ರಭಾವ ಬೀರುತ್ತದೆ. ಸಾವಿನ ಭಯವೇ (ಹಣದ ಕೊರತೆ) ಮಾನವನು ದೇವರಿಗಿಂತಲೂ ಹಣದ ಮೇಲೆ ನಂಬಿಕೆ ಇಡಲು ಕಾರಣವಾಯಿತು.

ಕೊಲೊ 3 : 5 "...ಮತ್ತು ವಿಗ್ರಹಾರಾಧನೆಯಾಗಿರುವ ಲೋಭ"


ಯೋಬ 2 : 4 "ಸೈತಾನನು ಪ್ರತ್ಯುತ್ತರವಾಗಿ ಕರ್ತನಿಗೆ – ಹೌದು, ಚರ್ಮಕ್ಕೆ ಚರ್ಮ; ತನಗೆ ಉಂಟಾದದ್ದನ್ನೆಲ್ಲಾ ತನ್ನ ಪ್ರಾಣಕ್ಕೋಸ್ಕರ ಮನುಷ್ಯನು ಕೊಡುವನು."

**ಉದಾಹರಣೆ :** ಮರಣದ ಭಯದಿಂದ ಜನರು ತಮಗಿದ್ದದ್ದನ್ನೆಲ್ಲಾ ರೋಗನಿವಾರಣೆಗಾಗಿ ಖರ್ಚು ಮಾಡುತ್ತಾರೆ. ಅವರಿಗೆ ಉಳಿಯುವ ಆಸೆ. ಪ್ರತಿಯೊಬ್ಬನಿಗೂ ಪರಲೋಕಕ್ಕೆ ಹೋಗುವ ಆಸೆ, ಆದರೆ ಯಾರಿಗೂ ಸಾಯಲಿಷ್ಟವಿರುವುದಿಲ್ಲ. ಇದು ಒಂದು ವಿರೋಧಾಭಾಸ.


## ಸಾರಂಶ




**ಆತ್ಮ ಮತ್ತು ಪ್ರಾಣ ಬಿದ್ದು ಹೋದದ್ದು :**
ಹವ್ವಳು ಸೈತಾನನಿಗೆ ವಿಧೇಯಳಾದಳು ಮತ್ತು ಆದಮನು ಹವ್ವಳಿಗೆ ವಿಧೇಯನಾದನು. ಆದುದರಿಂದ ಇಬ್ಬರೂ ದೇವರಿಗೆ ಅವಿಧೇಯರಾದರು ಮತ್ತು ಅವರು ಸೈತಾನನ ನಿಯಂತ್ರಣದಲ್ಲಿ ಸಿಕ್ಕಿದರು. ಗಂಡನು ಇನ್ನು ಹೆಂಡತಿಗೆ ತಲೆಯಾಗಿರಲಿಲ್ಲ. ಈ ಅಪರಿಶುದ್ಧ ಸ್ಥಿತಿ ದೇವರ ಸೃಷ್ಟಿಕ್ರಮಕ್ಕೆ ವಿರೋಧವಾಗಿದೆ. ಮತ್ತು ದೇವರ ಮಹಿಮೆಯನ್ನು ಅತಿಕ್ರಮ ಮಾಡುತ್ತದೆ.





**ದೇವರ ಕ್ರಮದ ಶಾಂತಿ ಭಂಗ :**
ಒಳ ಮನುಷ್ಯನ ಭಕ್ತಿ ಹೀನತೆಯ ಪರಿಸ್ಥಿತಿಯಿಂದಾಗಿ ಆತ್ಮನ ದುರಾಶೆಗಳು ಪ್ರಾಣದ ಚಿತ್ತದ ಮೇಲೆ ದೊರೆತನ ಮಾಡುತ್ತದೆ.




**ದೇಹವು ಬಿದ್ದು ಹೋದದ್ದು :**
ದೇಹವು ಪಾಪದ ಮತ್ತು ಮರಣದ ನಿಯಮದ ಕೆಳಗೆ ಬಂತು. ಯಾಕೆಂದರೆ ಒಳ ಮನುಷ್ಯನ ಭಕ್ತಿ ಹೀನತೆಯಿಂದಾಗಿ ಈಗ ಪಾಪವು ದೇಹದಲ್ಲಿ ದೊರೆತನ ಮಾಡುವುದರಿಂದ ಮನುಷ್ಯನ ದೇಹವು ಪಾಪದ ದೇಹವೆಂದು ಕರೆಯಲ್ಪಡುತ್ತದೆ .

ದುಷ್ಟ ಸಂತತಿ



ಅವಿದೇಯತೆಯ ಮಕ್ಕಳು

**ದುಷ್ಟ ಸಂತತಿ :**
ಮನುಷ್ಯನ ಇಡೀ ಸಂತತಿ ಒಂದು ಪಾಪದ ದೇಹದಲ್ಲಿ ಹುಟ್ಟಿದೆ ಮತ್ತು ಪಾಪ ಮತ್ತು ಮರಣಗಳ ನಿಯಮದ ಕೆಳಗೆ ಬಂದಿದ್ದಾರೆ. ಅವರಿಗೆ 'ಒಳ್ಳೆ ಮತ್ತು ಕೆಟ್ಟದ್ದರ' ಅರಿವಾದಂತೆಲ್ಲಾ ಅವರಿಗೆ ಸರಿಯಾಗಿ ಕಂಡದ್ದರಲ್ಲಿ ಅವರು ಕೆಟ್ಟವರಾಗುತ್ತಾರೆ.


## ಅಧ್ಯಾಯ 9 :

## ಲೋಕ ರಕ್ಷಕ

**ಪ್ರಪಂಚ :**

ಪ್ರಪಂಚವು ಭೂಮಿ ಮತ್ತು ಅದರ ನಿವಾಸಿಗಳು. ನಾವು ಪ್ರಪಂಚವನ್ನು ಮನುಷ್ಯನಿಗೆ ಹೋಲಿಸಿದರೆ, ಆಗ ಭೂಮಿಯು ಹೊರ ಮನುಷ್ಯ. ಅದೇ ಕಾಲದಲ್ಲಿ ನಿವಾಸಿಗಳು ಒಳ ಮನುಷ್ಯನಾಗುತ್ತದೆ.

ನೋಡಿ ಕಲಿಯಿರಿ !




ಆದಮನು ಸೈತಾನನಿಗೆ ವಿಧೇಯನಾದಾಗ, ಅವನು ದೇವರಿಂದ ಹೊಂದಿದ ಅಧಿಕಾರವನ್ನು ಸೈತಾನನಿಗೆ ಒಪ್ಪಿಸಿಬಿಟ್ಟನು. ಆಗ ಸೈತಾನನು ಇಹಲೋಕದ ಅಧಿಪತಿಯಾದನು. ಸೈತಾನನು ಪಾಪದ ನಿಯಮವಾದ 'ಒಳ್ಳೆ ಕೆಟ್ಟದರ' ತಿಳುವಳಿಕೆಯ ಮೂಲಕ ಈ ಪ್ರಪಂಚವನ್ನು ಹತೋಟಿಯಲ್ಲಿಟ್ಟು ಕೊಂಡಿದ್ದಾನೆ.

ಭೂಮಿಯ ಎಲ್ಲಾ ನಿವಾಸಿಗಳು, 'ಒಳ್ಳೆ ಕೆಟ್ಟದರ' ತಿಳುವಳಿಕೆ ಹೊಂದಿದ್ದಾರೆ, ಆದುದರಿಂದ ಸೈತಾನನ ಸ್ವಭಾವವುಳ್ಳವರಾಗಿದ್ದಾರೆ. ಪ್ರಾಣಕ್ಕೆ ಒಳ್ಳೆ ಕೆಟ್ಟದರ ತಿಳುವಳಿಕೆ ಹೆಚ್ಚಾದಂತೆಲ್ಲಾ ಮನುಷ್ಯನ ಆತ್ಮ ಕೆಟ್ಟತನಕ್ಕೆ ಏರುತ್ತಾ ಹೋಗುತ್ತದೆ. ಭಕ್ತಿಹೀನ ಒಳಮನುಷ್ಯನು ಆಗ ತನ್ನ ದೇಹವನ್ನು ಸೈತಾನನ ಕೆಲಸಗಳನ್ನು ಮಾಡಲು ಉಪಯೋಗಿಸುತ್ತಾನೆ. ಅವು ಒಳ್ಳೆಯದಾಗಿರ ಬಹುದು ಅಥವಾ ಕೆಟ್ಟದ್ದಾಗಿರಬಹುದು.

ಮಾನವನ ಹಕ್ಕುಗಳು, ಕೆಲಸಗಾರರ ಸಂಯೋಗ ಮತ್ತು ಪ್ರಜಾಪ್ರಭುತ್ವಗಳು ಒಳ್ಳೆಯದಾಗಿ ಕಾಣುತ್ತವೆ. ಅದರೆ, ಅವು ಜಗಳ ಮತ್ತು ಪುಂಡಾಟಗಳಿಗೆ ಮಾತ್ರ ನಡೆಸುತ್ತವೆ. ಇವು ಕೆಟ್ಟವುಗಳಾಗಿವೆ. ಪ್ರಪಂಚ ಮಾಡುವ ಎಲ್ಲಾ ಒಳ್ಳೆಯದು ಕೆಟ್ಟದ್ದಕ್ಕೆ ಮತ್ತು ನಾಶನಕ್ಕೆ ನಡೆಸುತ್ತದೆ. ಅವರು ಹೆಚ್ಚಾಗಿ ಒಳ್ಳೆಯದನ್ನು ಮಾಡಿದಷ್ಟೂ

**ವಚನಗಳು ಮತ್ತು ವ್ಯಾಖ್ಯಾನಗಳು :**

ಒಳ ಮನುಷ್ಯನು ತನ್ನ ದೇಹದಲ್ಲಿ ಹೇಗೆ ನಿವಾಸಿಸುತ್ತಾನೋ. ಆದೇ ರೀತಿಯಲ್ಲಿ ನಿವಾಸಿಗಳು ಭೂಮಿಯ ಮೇಲೆ ನಿವಸಿಸುತ್ತಾರೆ. ಮತ್ತು ದೇಹದಲ್ಲಿ ದೊರೆತನ ಮಾಡುವ ನಿಯಮವು ಹೇಗೆ ಒಳ ಮನುಷ್ಯನ ಮೇಲೆ ಪ್ರಭಾವ ಬೀರುತ್ತದೆಯೋ ಹಾಗೆಯೇ ಭೂಮಿಯ ಮೇಲೆ ದೊರೆತನ ಮಾಡುವ ನಿಯಮವು ಭೂ ನಿವಾಸಿಗಳ ಮೇಲೆ ಪ್ರಭಾವ ಬೀರುತ್ತದೆ. ಇದೇ ತತ್ವವು ಪ್ರತಿಯೊಂದು ದೇಶಕ್ಕೂ ಅನ್ವಯಿಸುವುದನ್ನು ನಾವು ನೋಡುತ್ತೇವೆ. ಪ್ರತಿಯೊಂದು ದೇಶದ ನಿಯಮವು ತನ್ನ ಪ್ರಜೆಗಳನ್ನು ಆಳುತ್ತದೆ.

ಯೋಹ 14:30 "...ಇಹಲೋಕದ ಅಧಿಪತಿಯು ಬರುತ್ತಾನೆ ಮತ್ತು ಅವನಿಗೆ ಸಂಬಂಧಪಟ್ಟದ್ದು ನನ್ನಲ್ಲಿ ಏನೂ ಇಲ್ಲ."

ರೋಮ 5:12 "ಈ ವಿಷಯ ಹೇಗೆಂದರೆ, ಒಬ್ಬ ಮನುಷ್ಯನಿಂದಲೇ (ಆದಮನು) ಪಾಪವೂ (ಒಳ್ಳೆ ಕೆಟ್ಟದರ ಅರಿವು) ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು. ಎಲ್ಲರೂ ಪಾಪ ಮಾಡಿದ್ದರಿಂದ, ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು."

ಲೂಕ 4:6 "ಮತ್ತು ಸೈತಾನನು ಆತನಿಗೆ – ಈ ಎಲ್ಲಾ ಅಧಿಕಾರವನ್ನೂ ಅವುಗಳ ವೈಭವವನ್ನೂ ನಾನು ನಿನಗೆ ಕೊಡುವೆನು ; ಯಾಕೆಂದರೆ ಅದು ನನಗೆ ಕೊಡಲ್ಪಟ್ಟಿರುವುದರಿಂದ (ಆದಮನಿಂದ) ನನಗೆ ಇಷ್ಟಬಂದ ಯಾರಿಗಾದರೂ ನಾನು ಕೊಡುವೆನು."

ರೋಮ 7:20,24 "ಇಚ್ಛಿಸದಿರುವುದನ್ನು ನಾನು ಮಾಡಿದರೆ, ಅದನ್ನು ಮಾಡಿದವನು ಇನ್ನು ನಾನಲ್ಲ, ನನ್ನಲ್ಲಿ ನೆಲೆಗೊಂಡಿರುವ ಪಾಪವೇ ಅದನ್ನು ಮಾಡಿತು. ಅಯ್ಯೋ ನಾನು ಎಂತ ನಿರ್ಗತಿಕನಾದ ಮನುಷ್ಯನು! ಇಂತಹ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವವನು ಯಾರು ?"

ಮತ್ತ 12:34 "ಓ ಸರ್ಪಸಂತತಿಯವರೇ, ಕೆಟ್ಟವರಾಗಿರುವ ನೀವು ಒಳ್ಳೆಯವುಗಳನ್ನು ಹೇಗೆ ಮಾತನಾಡೀರಿ? ಯಾಕೆಂದರೆ ಹೃದಯದಲ್ಲಿ ಸಮೃದ್ಧಿಯಾಗಿರುವುದನ್ನೇ ಬಾಯಿ ಮಾತನಾಡುತ್ತದೆ."
2 ಕೊರಿ 11:14 "...ಸೈತಾನನು ಬೆಳಕಿನ ದೂತನಂತೆ ಕಾಣಿಸಿಕೊಳ್ಳುವ ಹಾಗೆ ತನ್ನನ್ನು ತಾನೇ ಮಾರ್ಪಡಿಸಿಕೊಳ್ಳುತ್ತಾನೆ."

ಯಕೋ, 3:15–16 "ಅದು ಮೇಲಣಿಂದ ಬಂದ ಜ್ಞಾನವಲ್ಲ: ಅದು ಭೂಸಂಬಂಧವಾದದ್ದು, ಪ್ರಾಕೃತಭಾವವಾದದ್ದು, ದೆವ್ವಗಳಿಗೆ ಸಂಬಂಧಪಟ್ಟದ್ದು, ಯಾಕೆಂದರೆ ಹೊಟ್ಟೆಕಿಚ್ಚು ಜಗಳವೂ ಇರುವ ಕಡೆ, ಗಲಿಬಿಲಿಯೂ ಸಕಲ ವಿಧವಾದ ಕೆಟ್ಟ ಕೃತ್ಯವೂ ಇರುವವೂ."

ಪ್ರಪಂಚವು ಇನ್ನೂ ಹೆಚ್ಚಾಗಿ ಅಸ್ತವ್ಯಸ್ತವಾಗುತ್ತದೆ. ಪ್ರಪಂಚ ಮಾಡುವ ಎಲ್ಲಾ ಒಳ್ಳೆಯದು ಕೆಟ್ಟದ್ದನ್ನು ತೆಗೆದು ಹಾಕಲಾಗುವುದಿಲ್ಲ. ಒಬ್ಬ ಪಾಪಿಗಾಗಿ ಮಾಡಿದ ಒಳ್ಳೆಯದು ಕೂಡ ಅವನನ್ನು ಒಳ್ಳೆಯವನನ್ನಾಗಿಸಲಾರದು.

ಪಾಪಿಗಳು ಕೂಡಾ ಒಳ್ಳೆಯ ಕಾರ್ಯಗಳನ್ನು ಮಾಡುತ್ತಾರೆ. ಆದರೆ ವಾಸ್ತವವಾಗಿ ಅವರು ತಮ್ಮ ತಂದೆಗಳಂತೆ ದೆವ್ವಗಳು. ವಿಶ್ವಾಸಿಗಳು ಪ್ರಪಂಚದವರು ಮಾಡುವ ಎಲ್ಲಾ ಒಳ್ಳೆಯ ಕಾರ್ಯಗಳಿಂದ ಮೋಸ ಹೋಗದಂತೆ ಜಾಗರೂಕರಾಗಿರಬೇಕು. ಯಾಕೆಂದರೆ ಅದು ಕೆಟ್ಟದ್ದು.

**ಯೇಸು ಸೈತಾನನನ್ನು ಸೋಲಿಸಿದನು.**

ಆದಮನು ಪಾಪವನ್ನು ಲೋಕದೊಳಕ್ಕೆ ತಂದನು ಮತ್ತು ಕ್ರಿಸ್ತನು ಲೋಕದಿಂದ ಪಾಪವನ್ನು ತೆಗೆದು ಹಾಕಬೇಕಾಯಿತು. ಈ ಕಾರಣದಿಂದಲೇ ದೇವರ ವಾಕ್ಯವು ಯೇಸುವಾಗಿ ಪಾಪದ ದೇಹದಲ್ಲಿ ಕಾಣಿಸಿಕೊಂಡನು. ಆತನೇ ಮನುಷ್ಯ ಕುಮಾರನ ಲೋಕವನ್ನು ರಕ್ಷಿಸುವುದಕ್ಕಾಗಿ ಯೇಸು ಸೈತಾನನಿಗೆ ವಿರುದ್ಧವಾಗಿ ಏಳಬೇಕಾಯಿತು ಮತ್ತು ಅವನ ರಾಜ್ಯವನ್ನು ಸೋಲಿಸಬೇಕಾಯಿತು.

ಯೆಶ 61:1 "ದೇವರಾದ ಕರ್ತನ ಆತ್ಮವು ನನ್ನ ಮೇಲದೆ ; ಯಾಕೆಂದರೆ ದೀನರಿಗೆ ಶುಭ ಸಮಾಚಾರನ್ನು ಸಾರುವುದಕ್ಕೆ ಕರ್ತನು ನನ್ನನ್ನು ಅಭಿಷೇಕಿಸಿದ್ದಾನೆ : ... ಸೆರೆಯವರಿಗೆ ಬಿಡುಗಡೆಯನ್ನೂ ಬಂಧಿಸಲ್ಪಟ್ಟವರಿಗೆ (ಸೈತಾನನಿಂದ ಮತ್ತು ಪಾಪದಿಂದ) ಕದತೆರೆಯುವುದನ್ನೂ ಪ್ರಸಿದ್ಧ ಮಾಡುವುದಕ್ಕೂ ..."

ವಾಕ್ಯದ ತಿಳುವಳಿಕೆಗಿಂತ ಪಾಪವು ಬಲವುಳ್ಳದ್ದೆಂದು ಕಳೆದ ಅಧ್ಯಾಯಗಳಿಂದ ನಮಗೆ ಆಗಲೇ ಗೊತ್ತಾಗಿದೆ. ಮನುಷ್ಯ ಕುಮಾರನ ಹಾಗೆ ಇದ್ದದರಿಂದ ಯೇಸು ಪವಿತ್ರಾತ್ಮನಿಂದ ತುಂಬಲ್ಪಡಬೇಕಾಗಿತ್ತು. ಯಾಕೆಂದರೆ ಸೈತಾನನ ತಂತ್ರೋಪಾಯಗಳನ್ನು ಎದುರಿಸಬೇಕಾಗಿತ್ತು. ಸ್ನಾನೀಕನಾದ ಯೋಹಾನನಿಂದ ಮನುಷ್ಯ ಕುಮಾರನಾದ ಯೇಸು ಬಾಪ್ತಿಸ್ಮಾ ಹೊಂದಿದಾಗ ಆತನು ದೇವ ಕುಮಾರನಾದನು ಮತ್ತು ಸೈತಾನನ್ನು ಜಯಿಸಲು ಸಮರ್ಥನಾದ ಮನುಷ್ಯನು ಯೇಸು ಒಬ್ಬನೇ ಆಗಿದ್ದಾನೆ.

ಲೂಕ 3:22 "ಆಗ ಪರಿಶುದ್ಧಾತ್ಮನು ಪಾರಿವಾಳದ ದೇಹಾಕಾರದಲ್ಲಿ, ಆತನ ಮೇಲೆ ಇಳಿದನು; ಮತ್ತು ನೀನು ಪ್ರಿಯನಾಗಿರುವ ನನ್ನ ಮಗನು ; ... ಎಂಬ ಧ್ವನಿಯು ಸ್ವರ್ಗದೊಳಗಿನಿಂದ ಬಂತು."

ಯೋಹಾ 3:34 "ಯಾಕೆಂದರೆ ದೇವರು ಕಳುಹಿಸಿದಾತನು ದೇವರ ಮಾತುಗಳನ್ನೇ ಆಡುತ್ತಾನೆ ; ಮತ್ತು ದೇವರು ಆತನಿಗೆ ಆತ್ಮನನ್ನು ಅಳತೆ ಮಾಡದೆ ಕೊಡುತ್ತಾನೆ."

ಅಪೋ 1:8 "ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬಂದಾಗ, ನೀವು ಬಲವನ್ನು ಹೊಂದುವಿರಿ..."

ಪಾಪದ ಮನಸ್ಸು ಸೈತಾನನ ಶಕ್ತಿಯಾದರೆ, ಆಗ ಪವಿತ್ರಾತ್ಮನು ಯೇಸುವಿನ ಶಕ್ತಿಯಾಗುತ್ತಾನೆ.

ನೋಡಿ ಕಲಿಯಿರಿ !




ಲೂಕ 4:5,6 "ಬಳಿಕ ಸೈತಾನನು ಉನ್ನತವಾದ ಬೆಟ್ಟಕ್ಕೆ ಆತನನ್ನು ಕರೆದುಕೊಂಡು ಹೋಗಿ ಲೋಕದ ಎಲ್ಲಾ ರಾಜ್ಯಗಳನ್ನು ಕ್ಷಣ ಮಾತ್ರದಲ್ಲಿ ಆತನಿಗೆ ತೋರಿಸಿದನು ಮತ್ತು ಸೈತಾನನು ಆತನಿಗೆ – ಈ ಎಲ್ಲಾ ಅಧಿಕಾರವನ್ನು ನಾನು ನಿನ್ನಗೆ ಕೊಡುವೆನು, ಯಾಕೆಂದರೆ ಅದು ನನಗೆ ಕೊಡಲ್ಪಟ್ಟಿರುವುದರಿಂದ ನನಗೆ ಇಷ್ಟ ಬಂದ ಯಾರಿಗಾದರೂ ನಾನು ಕೊಡುವೆನು."

ಸೈತಾನನು ಇಹಲೋಕದ ಅಧಿಪತಿಯಾದನು ಮತ್ತು ಮಾನವ ಕುಲವನ್ನಾಳುವವನು, ಯಾಕೆಂದರೆ ಆದಾಮನು ಅವನಿಗೆ ಅಧೀನನಾದನು. ಸೈತಾನನ ಪ್ರಭುತ್ವದಿಂದ ಈ ಲೊಕವನ್ನು

ಯೇಸು ಸೈತಾನನೊಂದಿಗೆ ಮುಖಾಮುಖಿಯಾಗಿ ಮಾತನಾಡಿದ್ದನ್ನು ಮೋಶೆಯು ಐಗುಪ್ತದ ರಾಜನಾದ ಫರೋಹನನ ಎದುರಿನಲ್ಲಿ ಹೇಳಿದ್ದಕ್ಕೆ ಹೋಲಿಸಬಹುದು. ಯೇಸು 40 ದಿನಗಳು ಅರಣ್ಯದಲ್ಲಿ ಅನುಭವಿಸಿದ ಶೋಧನೆಗಳನ್ನು ಯೆಹೂದ್ಯರ ಅರಣ್ಯದಲ್ಲಿ 40 ವರ್ಷಗಳ ಅಲೆದಾಟಕ್ಕೆ ಹೋಲಿಸಬಹುದು.


ಬಿಡುಗಡೆ ಮಾಡುವುದಕ್ಕೋಸ್ಕರ ಯೇಸು ಸೈತಾನನ ವಿರುದ್ಧವಾಗಿ ಏಳಬೇಕಾಯಿತು. ಇದೇ ಕಾರಣದಿಂದಲೇ ಪವಿತ್ರಾತ್ಮನು ಯೇಸುವನ್ನು ಸೈತಾನನನಿಂದ ಶೋಧಿಸಲ್ಪಡುವುದಕ್ಕಾಗಿ ನಡೆಸಬೇಕಾಯಿತು.

ದೇವ ಕುಮಾರನಾದ ಯೇಸು ಅಲೌಕಿಕವಾಗಿ ಶೋಧಿಸಲ್ಪಟ್ಟನು ; ಆತನ ದೇಹದ ಮುಖಾಂತರ, ಕಲ್ಲುಗಳನ್ನು ರೊಟ್ಟಿ ಮಾಡುವುದಕ್ಕಾಗಿ, ಯಾಕೆಂದರೆ ಆತನಿಗೆ ಹಸಿವೆಯಾಗಿತ್ತು ; ಆತನ ಪ್ರಾಣದ ಮುಖಾಂತರ ದೇವಾಲಯದ ಶಿಖರದ ಮೇಲಿನಿಂದ ದುಮುಕುವುದಕ್ಕೋಸ್ಕರ, ಇದು ವಾಕ್ಯವನ್ನು ಅಪಾರ್ಥ ಮಾಡಿದ್ದರಿಂದ, ಮತ್ತು ಆತನ ಆತ್ಮದ ಮುಖಾಂತರ ಸೈತಾನನನ್ನು ಆರಾಧಿಸಲು ಯಾಕೆಂದರೆ ಅವನು ಆತನಿಗೆ ಲೋಕವನ್ನು ವಾಗ್ದಾನ ಮಾಡಿದನು. ಯೇಸು ಸೈತಾನನನಿಗೆ ಅಧೀನನಾಗಿದ್ದರೆ, ಆತನು ಸೈತಾನನ ಸೇವಕನಾಗಬೇಕಾಗಿತ್ತು. ಮತ್ತು ಆದಮನ ಹಾಗೆ ಪಾಪಕ್ಕೆ ಗುಲಾಮನಾಗಬೇಕಾಗಿತ್ತು.

**ಯೇಸು ಪಾಪದ ದೇಹವನ್ನು ನಾಶಪಡಿಸಿದನು.**

ಯೇಸು ಸೈತಾನನ್ನು ತಡೆಗಟ್ಟಿದ್ದರಿಂದ ದೇವರು ಆತನನ್ನು ಮೆಚ್ಚಿದನು ಮತ್ತು ಅಭಿಷೇಕ ಮಾಡಿದನು. ಆತನು ನಂತರ ಕಾನಾನಿಗೆ ಪರಿಶುದ್ಧಾತ್ಮನ ಶಕ್ತಿಯಲ್ಲಿ ಹಿಂತಿರುಗಿದನು. ಪಾಪದ ದೇಹದಲ್ಲಿದ್ದು ಅನೇಕ ಕಷ್ಟ ಸಂಕಟಗಳನ್ನು ಸಹಿಸಬೇಕಾಗಿ ಬಂದರೂ ಮತ್ತು ಮನುಷ್ಯರು ಕೊಡುವ ಶೋಧನೆಗಳನ್ನು ಹಿಂಸೆಗಳನ್ನು ತಡೆಯಬೇಕಾಗಿ ಬಂದರೂ ಆತನು ಪಾಪ ಮಾಡಲಿಲ್ಲ.

ಹೇಗಾದರೂ ಸೈತಾನನು ಇನ್ನೂ ಮನುಷ್ಯನ ಮೇಲೆ ಪ್ರಭುತ್ವ ನಡೆಸಿದ್ದರಿಂದಲೂ ಮತ್ತು ಪ್ರಪಂಚವನ್ನು ದೇಹದಲ್ಲಿನ ಪಾಪದ ಮೂಲಕವೂ, ಯೇಸು ಪಾಪದ ದೇಹವನ್ನು ಶಿಲುಬೆಯ ಮೇಲೆ ನಾಶಮಾಡಬೇಕಾಯಿತು. ಆತನು ಇದರ ಪರಿಣಾಮವಾಗಿ ಪ್ರಪಂಚದ ಅಧಿಪತಿಯಾದ ಸೈತಾನನನ್ನು ಸಿಂಹಾಸನದಿಂದ ತಳ್ಳಿಬಿಡಬೇಕಾಯಿತು.




ಲೂಕ 4:2,3 "40 ದಿನಗಳು ಸೈತಾನನಿಂದ ಶೋಧಿಸಲ್ಪಡುತ್ತಿದ್ದನು. ಮತ್ತು ಆ ದಿನಗಳಲ್ಲಿ ಆತನು ಏನೂ ತಿನ್ನಲಿಲ್ಲ. ಅವು ಮುಗಿದ ಮೇಲೆ ಆತನು ಹಸಿದನು... ನೀನು ದೇವಕುಮಾರನಾಗಿದ್ದರೆ ಈ ಕಲ್ಲು ರೊಟ್ಟಿಯಾಗುವಂತೆ ಅಪ್ಪಣೆಕೊಡು ..."
* ಈ ಶೋಧನೆಯು ಯೇಸುವಿನ ದೇಹವನ್ನು ನಿರ್ದೇಶಿಸುತ್ತದೆ.

ಲೂಕ 4 : 5, 7 "ಬಳಿಕ ಸೈತಾನನು... ಲೋಕದ ಎಲ್ಲಾ ರಾಜ್ಯಗಳನ್ನು ಕ್ಷಣಮಾತ್ರದಲ್ಲಿ ಆತನಿಗೆ ತೋರಿಸಿದನು... ನೀನು ನನ್ನನ್ನು ಆರಾಧಿಸಿದರೆ ಎಲ್ಲವುಗಳೂ ನಿನ್ನದಾಗುವುದು."
* ಈ ಶೋಧನೆಯು ಯೇಸುವಿನ ಆತ್ಮವನ್ನು ನಿರ್ದೇಶಿಸುತ್ತದೆ.

ಲೂಕ 4:9 "ಇದಲ್ಲದೆ ಅವನು ಆತನನ್ನು ಯೆರುಸಲೇಮಿಗೆ ಕರೆದುತಂದು ದೇವಾಲಯದ ಶಿಖರದ ಮೇಲೆ ನಿಲ್ಲಿಸಿ ಆತನಿಗೆ – ನೀನು ದೇವಕುಮಾರನಾಗಿದ್ದರೆ ಇಲ್ಲಿಂದ ಕೆಳಗೆ ದುಮುಕು;"
* ಈ ಶೋಧನೆಯು ಯೇಸುವಿನ ಪ್ರಾಣವನ್ನು ನಿರ್ದೇಶಿಸಿರುವುದು.

ಎಫೆ 5:23 "...ಆತನು (ಕ್ರಿಸ್ತನು) ದೇಹಕ್ಕೆ ರಕ್ಷಕನಾಗಿದ್ದಾನೆ."

1 ಯೋಹಾ 2:2 "ಆತನು ನಮ್ಮ ಪಾಪಗಳಿಗಾಗಿ ಪ್ರಾಯಶ್ಚಿತ್ತವಾಗಿದ್ದಾನೆ ; ನಮ್ಮ ಪಾಪಗಳಿಗೆ ಮಾತ್ರವಲ್ಲದೆ ಸಮಸ್ತ ಲೋಕದ ಪಾಪಗಳಿಗಾಗಿಯೂ ಪ್ರಾಯಶ್ಚಿತ್ತನಾಗಿದ್ದಾನೆ.

ಯೋಹಾ 16:11 "ಮತ್ತು ಇಹಲೋಕಾಧಿಪತಿಯು ನ್ಯಾಯ ತೀರ್ಪನ್ನು ಹೊಂದಿರುವುದರಿಂದ."

ಯೋಹಾ 12:31 "ಈಗ ಈ ಲೋಕಕ್ಕೆ ನ್ಯಾಯ ತೀರ್ಪು ಆಗುತ್ತದೆ ; ಇಹಲೋಕದ ಅಧಿಪತಿಯು ಈಗ ಹೊರಗೆ ಹಾಕಲ್ಪಡುವನು."
ಗಮನಿಸು : ಪಾಪದ ದೇಹವು (ಸೈತಾನನ ಮನೆ) ನಾಶಮಾಡಲ್ಪಟ್ಟದ್ದರಿಂದ ಸೈತಾನನು ಗಾಳಿಯಲ್ಲಿ ಮಾತ್ರ ಪ್ರಭುತ್ವ ನಡೆಸುತ್ತಾನೆ.

ಯೋಹಾ 1:29 "ಮರುದಿನ ಯೋಹಾನನು ತನ್ನಕಡೆಗೆ ಬರುತ್ತಿದ್ದ ಯೇಸುವನ್ನು ನೋಡಿ – ಇಗೋ, ಲೋಕದ ಪಾಪವನ್ನು ತೆಗೆದುಹಾಕುವ ದೇವರ ಕುರಿಮರಿ ಎಂದು ಹೇಳಿದನು."

ಯೋಹಾ 3:17 "ದೇವರು ಲೋಕಕ್ಕೆ ತೀರ್ಪು ಮಾಡುವುದಕ್ಕಾಗಿ ಅಲ್ಲ ; ಆದರೆ ತನ್ನ ಮಗನ ಮುಖಾಂತರ ಲೋಕವನ್ನು ರಕ್ಷಿಸುವುದಕ್ಕಾಗಿ ಆತನನ್ನು ಕಳುಹಿಸಿದನು."


ಅಪೋ 5:31 "...ಆತನು (ಯೇಸು) ಪ್ರಭುವೂ ರಕ್ಷಕನೂ (ಪ್ರಪಂಚದ) ಆಗಿರುವಂತೆ ದೇವರು ತನ್ನ ಬಲಗೈಯಿಂದ ಆತನನ್ನು ಉನ್ನತಕ್ಕೆ ಏರಿಸಿದ್ದಾನೆ."

ಅರಣ್ಯದಲ್ಲಿ ಯೇಸು ಸೈತಾನನನ್ನು ಜಯಿಸಿದನು ಮತ್ತು ಪಾಪದ ದೇಹದಲ್ಲಿ ಪಾಪವನ್ನು ಜಯಿಸಿದನು. ಪಾಪದ ದೇಹವು ಶಿಲುಬೆಯ ಮೇಲೆ ನಾಶವಾದಾಗ, ದೇವರು ಯೇಸುವನ್ನು ಒಂದು ಹೊಸದೇಹದಲ್ಲಿ ಎಬ್ಬಿಸಿದನು ಮತ್ತು ಯೇಸುವು ಪ್ರಪಂಚದ ಹೊಸ ಪ್ರಭುವಾದನು. ಸೈತಾನನು ಇನ್ನು ಮೇಲೆ ಇಹಲೋಕದ ಅಧಿಪತಿಯಾಗಲು ಸಾಧ್ಯವಾಗಲಿಲ್ಲ. ಆದರೆ ಗಾಳಿಯಲ್ಲಿ ಮಾತ್ರ ಅಧಿಪತಿಯಾಗಿದ್ದಾನೆ.

**ಯೇಸು ಮಾನವ ಕುಲದ ರಕ್ಷಕ :**

ಸೈತಾನನು ಪಾಪದ ನಿಯಮದ ಮೂಲಕ ಪ್ರಪಂಚದ ಮೇಲೆ ಪ್ರಭುತ್ವ ಮಾಡಿದನು. ಈಗ ಯೇಸು ಆತ್ಮದ ನಿಯಮದ ಮೂಲಕ ಪ್ರಪಂಚದ ಮೇಲೆ ಆಳ್ವಿಕೆ ನಡೆಸುತ್ತಾ ಇದ್ದಾನೆ. ಆತ್ಮದ ನಿಯಮವು ಸತ್ಯದ ತಿಳುವಳಿಕೆಯ ಮೂಲಕ (ದೇವರ ವಾಕ್ಯ) ಆಳ್ವಿಕೆ ನಡೆಸುತ್ತದೆ. ಇದೇ ಪ್ರಕಾರ ಪಾಪದ ನಿಯಮವು 'ಒಳ್ಳೆ ಕೆಟ್ಟದರ' ತಿಳುವಳಿಕೆಯ ಮೂಲಕ ಪ್ರಪಂಚದಲ್ಲಿ ಪ್ರಭುತ್ವ ನಡೆಸಿತ್ತು.

ನೋಡಿ ಕಲಿಯಿರಿ !




ಸತ್ಯವೇನೆಂದರೆ ಕ್ರಿಸ್ತನು ಈ ಭೂಲೋಕಕ್ಕೆ ಬಂದಾಗಿನಿಂದ ಪ್ರಪಂಚವು ಆತ್ಮದ ನಿಯಮದ ಕೆಳಗೆ ಇದೆ. ಹೇಗಾದರೂ ಜನ ಸತ್ಯವನ್ನು ನಂಬುವುದಿಲ್ಲ, ಆದುದರಿಂದ ಅವರು ಪಾಪದ ಜೀವಿತದಲ್ಲಿ ಮುಂದುವರೆಯುತ್ತಾರೆ. ಭೂಮಿಯ ಮೇಲೆ ಪಾಪಿಗಳದೇ ಬಹುಮತವಾಗಿರುವುದರಿಂದ ಪ್ರಪಂಚವನ್ನು ಪಾಪದಿಂದ ಬಿಡುಗಡೆಯೇ ಮಾಡಿಲ್ಲವೋ ಎಂಬಂತೆ ಕಾಣುತ್ತದೆ. ಯೇಸುವು ಕರ್ತನಾಗಿದ್ದರೂ. ಅವರ ಅಪನಂಬಿಕೆಯ ಮೂಲಕ ಅವರು ಸೈತಾನನ್ನೇ ಸೇವಿಸುತ್ತಾರೆ.

ಅಪೋ 2:36 "ಆದ್ದರಿಂದ ನೀವು ಶಿಲುಬೆಗೆ ಹಾಕಿದ ಈ ಯೇಸುವನ್ನೇ ದೇವರು ಕರ್ತನನ್ನಾಗಿಯೂ (ರಾಜ) ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂದು..."

ಕೊಲೋ 1:15 "ಆತನು (ಯೇಸುಕ್ರಿಸ್ತನು) ಅದೃಶ್ಯನಾದ ದೇವರ ಪ್ರತಿ ರೂಪನೂ (ದೇಹ) ಪ್ರತಿಯೊಂದು ಸೃಷ್ಟಿಗೆ ಜ್ಯೇಷ್ಠನೂ ಆಗಿದ್ದಾನೆ."

ಅಪೋ 17:30,31 "ಈ ಅಜ್ಞಾನ ಕಾಲಗಳನ್ನು ದೇವರು ಲಕ್ಷಕ್ಕೆ ತರಲಿಲ್ಲ; ಈಗಲಾದರೂ ಆತನು ಎಲ್ಲಾ ಕಡೆಯಲ್ಲಿರುವ ಮನುಷ್ಯರೆಲ್ಲರೂ ಮಾನಸಾಂತರ ಪಡಬೇಕೆಂದು ಅಪ್ಪಣೆ ಕೊಡುತ್ತಾನೆ. ಯಾಕೆಂದರೆ ಆತನು ನಿಷ್ಕರ್ಶೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯ ವಿಚಾರಣೆ ಮಾಡುವುದಕ್ಕೆ ಒಂದು ದಿವಸವನ್ನು ನೇಮಕ ಮಾಡಿದ್ದಾನೆ. ಆತನನ್ನು ಸತ್ತವರೊಳಗಿನಿಂದ ಎಬ್ಬಿಸಿದ್ದರಿಂದ ಇದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿದ್ದಾನೆ ಅಂದನು."

ಎಫೆ 2:2 "ನೀವು ಪೂರ್ವದಲ್ಲಿ ಅಪರಾಧಗಳನ್ನೂ ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ ; ವಾಯು ಮಂಡಳದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ ಅಂದರೆ ಅವಿಧೇಯತೆಯ ಮಕ್ಕಳಲ್ಲಿ ಈಗ ಕೆಲಸ ನಡೆಸುವ ಆತ್ಮನಿಗನುಸಾರವಾಗಿ ನಡೆದುಕೊಂಡಿರಿ ;"

1 ಯೋಹ 5 : 19 "...ಲೋಕವೆಲ್ಲವೂ ಕೆಟ್ಟತನದಲ್ಲಿ ಬಿದ್ದಿದೆ..."

ಸೈತಾನನು ಸೋಲಿಸಲ್ಪಟ್ಟು ತಳ್ಳಲ್ಪಟ್ಟಿದ್ದರೂ ಅವನು ಮತ್ತು ಅವನ ಸೇನೆಯು ಈಗಲೂ ಪ್ರಪಂಚದ ಮೇಲೆ ಮತ್ತು ಸಭೆಯ ಮೇಲೆ ವಾಯು ಮಂಡಳದಲ್ಲಿದ್ದು ಕೊಂಡೇ ದೇವರಿಗೆ ಅವಿಧೇಯರಾಗುವಂತೆ ಪ್ರೋತ್ಸಾಹಿಸುತ್ತಾ ಇದ್ದಾರೆ. ದೇವರಿಗೆ ಅವಿಧೇಯರಾಗಿರುವವರೆಲ್ಲರೂ ಸೈತಾನನ ಹತೋಟಿಯಲ್ಲಿದ್ದಾರೆ. ಮತ್ತು ಅವರ ಮೂಲಕ ಅವನು ಈಗಲೂ ಭೂಮಿಯ ಮೇಲೆ ಪ್ರಭುತ್ವ ನಡೆಸಿದ್ದಾನೆ. ಯೇಸುವು ಹಿಂತಿರುಗಿ ಬರುವಾಗ ಆತನು ಸೈತಾನನ್ನೂ, ಅವನ ಸೈನ್ಯವನ್ನೂ ಮತ್ತು ಅವನಿಗೆ ವಿಧೇಯರಾದವರೆಲ್ಲರನ್ನೂ ಅವರು ಸೇರಬೇಕಾಗಿರುವ ನರಕಕ್ಕೆ ಅವರನ್ನು ಹಾಕುತ್ತಾನೆ. ಆಗಲೇ ನಿಜವಾದ ಸಭೆ ಪ್ರಕಟವಾಗುವುದು.

ಎಫೆ 6:12 "ಯಾಕೆಂದರೆ ನಾವು ಹೋರಾಡುವುದು ರಕ್ತಮಾಂಸಕ್ಕೆ ವಿರೋಧವಾಗಿ ಅಲ್ಲ ; ರಾಜತ್ವಗಳ ಮೇಲೆಯೂ ಅಧಿಕಾರಿಗಳ ಮೇಲೆಯೂ ಈ ಲೋಕದ ಅಂಧಕಾರದ ಅಧಿಪತಿಗಳ ಮೇಲೆಯೂ ಆಕಾಶ ಮಂಡಲದಲ್ಲಿರುವ (ವಾಯು ಮಂಡಲ) ಆತ್ಮೀಕ ದುಷ್ಟತನದ ಮೇಲೆಯೂ ಹೋರಾಡುವವರಾಗಿದ್ದೇವೆ."

ರೋಮ 12:2 "ಮತ್ತು ಇಹಲೋಕವನ್ನು ಅನುಸರಿಸದೇ (ಪಾಪಿಗಳ ಹಾಗೆ ಜೀವಿಸದೇ) ನೂತನ ಮನಸ್ಸನ್ನು ಹೊಂದಿಕೊಂಡು ರೂಪಾಂತರಗೊಂಡವರಾಗಿರಿ (ಬದಲಾಗಿರಿ)."

ಮತ್ತ 13:38 "ಹೊಲವು ಈ ಲೋಕ, ಒಳ್ಳೆ ಬೀಜವು ರಾಜ್ಯದ ಮಕ್ಕಳಾಗಿದ್ದಾರೆ ; ಆದರೆ, ಹಣಜಿಯು ಕೆಡುಕನ ಮಕ್ಕಳಾಗಿದ್ದಾರೆ."

1 ಕೊರಿ 1:21 "...ಪ್ರಸಂಗದ ಹುಚ್ಚುತನದಿಂದಲೇ ನಂಬುವವರನ್ನು ರಕ್ಷಿಸುವುದು ದೇವರಿಗೆ ಇಷ್ಟವಾಗಿತ್ತು."

ಅವಿಶ್ವಾಸಿಗಳು ಸತ್ಯವನ್ನು ನಂಬಿ ಯೇಸುವನ್ನು ರಕ್ಷಕನೆಂದು ಸ್ವೀಕಾರ ಮಾಡುವವರೆವಿಗೆ ಪಾಪದಲ್ಲಿಯೇ ಉಳಿಯುತ್ತಾರೆ. ಈ ಕಾರಣದಿಂದಲೇ ಸುವಾರ್ತೆಯು ಎಲ್ಲಾ ಮಾನವ ಕುಲಕ್ಕೂ ಸಾರಲ್ಪಡಬೇಕು. ಯೇಸುವನ್ನು ರಕ್ಷಕನೆಂದು ನಂಬುವವರು ಪಾಪದಿಂದ ಬಿಡುಗಡೆ ಹೊಂದುವರು, ಆಗ ಅವರು ಪರಿಶುದ್ಧಾತ್ಮನ ದಾನವನ್ನು ಹೊಂದುವರು.

ಯೇಸುವಿನ ಮೇಲಿನ ನಂಬಿಕೆಯಿಂದ ತಿರುಗಿ ಹುಟ್ಟಿದವರು ಸಭೆಯನ್ನು ನಿರ್ಮಿಸುತ್ತಾರೆ. ಅವರು ಆತ್ಮನವರಾಗಿದ್ದಾರೆ. 'ಶರೀರಭಾವದವರಲ್ಲ.' ಸತ್ಯವನ್ನು ತಮಗೆ ತಾವೇ ತಿಳಿದುಕೊಂಡಂತೆಲ್ಲಾ ಮತ್ತು ದೇವರ ತಿಳುವಳಿಕೆಯಲ್ಲಿ ನಂಬುತ್ತಾ ಅವರು ಇನ್ನ ಮೇಲೆ ಪಾಪ ಮಾಡುವುದಿಲ್ಲ.


ಯೋಹಾ 1:12 "ಆದರೆ ಯಾರ್‍ಯಾರು ಆತನನ್ನು ಅಂಗೀಕರಿಸಿದರೋ ಅವರಿಗೆ ಅಂದರೆ ಆತನ ಹೆಸರಿನ (ಯೇಸು ಕ್ರಿಸ್ತನ) ಮೇಲೆ ನಂಬಿಕೆ ಇಡುವವರಿಗೆ ದೇವರ ಪುತ್ರರಾಗುವ ಅಧಿಕಾರವನ್ನು (ಪರಿಶುದ್ಧಾತ್ಮ) ಆತನು ಕೊಟ್ಟನು.

1 ಕೊರಿ 15 : 34 "ನೀತಿಗಾಗಿ ಎಚ್ಚರಗೊಳ್ಳಿರಿ, ಪಾಪ ಮಾಡಬೇಡಿರಿ ; ಯಾಕೆಂದರೆ ಕೆಲವರಿಗೆ ದೇವರ ವಿಷಯವಾದ ಜ್ಞಾನವೇ ಇಲ್ಲ..."

1 ಯೋಹ 2 : 28, 29 "ಮತ್ತು ಈಗ, ಚಿಕ್ಕಮಕ್ಕಳೇ ಆತನು ಪ್ರತ್ಯಕ್ಷನಾಗುವಾಗ ನಾವು ಆತನ ಆಗಮನದಲ್ಲಿ ಆತನ ಮುಂದೆ ನಿಲ್ಲಲು ನಾಚಿಕೆ ಪಡದೆ, ಧೈರ್ಯದಿಂದಿರುವಂತೆ ಆತನಲ್ಲಿ ನೆಲಗೊಂಡಿರ್‍ರಿ, ಆತನು ನೀತಿವಂತನಾಗಿದ್ದಾನೆಂಬುದು ನಿಮಗೆ ಗೊತ್ತಾಗಿದ್ದರೆ, ನೀತಿಯನ್ನು ಅನುಸರಿಸುವ ಪ್ರತಿಯೊಬ್ಬನೂ ಆತನಿಂದ ಹುಟ್ಟಿದ್ದಾನೆಂದು ನೀವು ತಿಳಿದಿದ್ದೀರಿ."

1 ಯೋಹ 3 : 6 "ಆತನಲ್ಲಿ ನೆಲೆಗೊಂಡಿರುವವನು ಪಾಪ ಮಾಡನು. ಪಾಪ ಮಾಡುವವನು ಆತನನ್ನು ಕಂಡವನೂ ಅಲ್ಲ. ತಿಳಿದವನೂ ಅಲ್ಲ."


## ಸಾರಂಶ





**ಲೋಕ :**
ಒಳ್ಳೆ ಕೆಟ್ಟದರ ತಿಳುವಳಿಕೆಯ ದೆಸೆಯಿಂದಲೇ ಪಾಪವು ಮನುಷ್ಯನ ದೇಹವನ್ನು ಪ್ರವೇಶಿಸಿತು. ಆದರಿಂದ ಸೈತಾನನು ಒಳ ಮನುಷ್ಯನ ಮೇಲೆ ನಿಯಂತ್ರಣ ಗಳಿಸಿದನು. ಪಾಪಮಯವಾದ ನಿವಾಸಿಗಳ ಮೂಲಕವೇ ಸೈತಾನನು ಲೋಕವನ್ನು ಆಳುತ್ತಾ ಇದ್ದಾನೆ.




**ಯೇಸು ಸೈತಾನನನ್ನು ಸೋಲಿಸಿದನು :**
ಪರಿಶುದ್ಧಾತ್ಮವು ಯೇಸುವಿನ ಮೇಲೆ ಅವರೋಹಣ ಮಾಡಿದಾಗ ಆತನು ಅರಣ್ಯಕ್ಕೆ ಸೈತಾನನನ್ನು ಎದುರಿಸಲು ನಡೆಸಲ್ಪಟ್ಟನು. ಯೇಸು ಸೈತಾನನ ಎಲ್ಲಾ ಶೋಧನೆಗಳನ್ನು ಗೆದ್ದದ್ದರಿಂದಲು ಮತ್ತು ಪಾಪ ಮಾಡದೆ ಇದ್ದದ್ದರಿಂದಲೂ ಲೋಕದ ಅಧಿಪತಿಯಾದ ಸೈತಾನನನ್ನು ಸಿಂಹಾಸನದಿಂದ ಕೆಳಗೆ ದೂಡಿದನು.




**ಯೇಸು ಪಾಪದ ದೇಹವನ್ನು ನಾಶನ ಗೊಳಿಸಿದನು :**
ಸೈತಾನನನ್ನು ಜಯಿಸಿದ ಕೂಡಲೆ ಪಾಪದ ದೇಹವೂ ಶಿಲುಬೆಯ ಮೇಲೆ ನಾಶವಾಯಿತು. ದೇಹವು (ಸೈತಾನನ ಮನೆ) ನಾಶವಾದುದರಿಂದ ಸೈತಾನನು ಈಗ ವಾಯುಮಂಡಳದಲ್ಲಿ ಜೀವಿಸಬೇಕಾಯಿತು. ಮರಣವು ನೀತಿ ವಂತನಾದ ಒಬ್ಬ ಮನುಷ್ಯನನ್ನು ಹಿಡಿಯಲು ಅಸಾಧ್ಯ. ಮತ್ತು ಈ ಕಾರಣದಿಂದಲೇ ದೇವರು ಯೇಸುವನ್ನು ಹೊಸ ದೇಹದಲ್ಲಿ ಎಬ್ಬಿಸಿದನು. ಸತ್ತವರೊಳಗಿಂದ ಜ್ಯೇಷ್ಠನಾಗಿ ಎದ್ದುಬಂದ ಯೇಸು ಕರ್ತನು ಮತ್ತು ಈ ಲೋಕದ ಯಜಮಾನನೂ ಆಗಿದ್ದಾನೆ.




**ಯೇಸು ಮಾನವ ಕುಲದ ರಕ್ಷಕ :**
ಪವಿತ್ರಾತ್ಮನ ಸುರಿಸುವಿಕೆಯ ಮೂಲಕ ಆತ್ಮದ ನಿಯಮವು ಪಾಪದ ನಿಯಮವನ್ನು ಈ ಲೋಕದಲ್ಲಿ ಬದಲಾವಣೆ ಮಾಡಿತು. ಪ್ರತಿಯೊಬ್ಬ ವ್ಯಕ್ತಿ ಯೇಸುವನ್ನು ಕರ್ತನಾಗಿ ಅಂಗೀಕರಿಸುವುದರಿಂದ ಪರಿಶುದ್ಧಾತ್ಮನನ್ನ ಸ್ವೀಕರಿಸಬಹುದು. ಮತ್ತು ಪಾಪದಿಂದ ಬಿಡುಗಡೆ ಹೊಂದಬಹುದು. ಅವನು ಆತ್ಮನಲ್ಲಿ ಹುಟ್ಟಿದ ವನಾದ್ದರಿಂದ, ಅವನು ಸಭೆಗೆ ಸದಸ್ಯನಾಗಿದ್ದು, ಕರ್ತನಿಗೆ ವಿಧೇಯನಾಗಿರಬೇಕು.

**ಸಮಾಪ್ತಿ :**

**ಹೆಸರುಗೊಂಡವರೆಲ್ಲರ ಮೇಲಿನ ಹೆಸರು :**

ದೇವರ ಚಿತ್ತವು ಮನುಷ್ಯನಾದ ಯೇಸುವಿನ ಮೂಲಕ ಪ್ರಪಂಚದಲ್ಲಿ ಪ್ರಕಟವಾಯಿತು. ಆತನ ಜ್ಞಾನವೇ ಲೋಕಕ್ಕೆ ಬೆಳಕು. ಅವರೂ ಮತ್ತು ಆಡಳಿತಗಳೂ ಆತನ ತತ್ವಗಳನ್ನು ಕುರಿತು ಪ್ರಯಾಸ ಪಡುತ್ತಾ ಇದ್ದಾರೆ. ಅದರಲ್ಲಿ ಅವರು ಆತನ ಜ್ಞಾನವನ್ನು ಒಪ್ಪಿಕೊಂಡರೋ ಆತನನ್ನು ನಿರಾಕರಿಸುತ್ತಲೇ ಹೋಗುತ್ತಾ ಇದ್ದಾರೆ. ಯೇಸುವಿನ ಜ್ಞಾನವು ನಮಗೆ ಬೈಬಲಿನ ಮೂಲಕ ಪರಿಶುದ್ಧಾತ್ಮನಿಂದ ತಿಳಿಯಪಡಿಸಲಾಗುತ್ತದೆ.

ನೋಡಿ ಕಲಿಯಿರಿ !

ಯೇಸು



ದೇವರ ವಾಕ್ಯವು

ಸತ್ಯವೇದವು ಬರೆದುಕೊಟ್ಟಿರುವ ದೇವರ ವಾಕ್ಯ ಪ್ರಪಂಚವು ಬೈಬಲಿನಲ್ಲಿರುವ ಆತನ ತತ್ವಗಳನ್ನು ಅನುಸರಿಸಿದರೂ ಯೇಸು ಎಂಬ ವ್ಯಕ್ತಿಯನ್ನು ನಿರಾಕರಿಸಿದ್ದಾರೆ. ಯೇಸುವು ಆ ತತ್ವಗಳನ್ನು ಶರೀರವಾಗಿ ಹೊಂದಿದ್ದಾನೆ.

ನೋಡಿ ಕರಿಯಿರಿ !



ಯೇಸು ಕರ್ತನು ಮತ್ತು ಕ್ರಿಸ್ತನು

ಸೈತಾನನಿಗೆ ಮಾತ್ರ ನಿಜವಾದ ದೇವರು ಯಾರೆಂದು ತಿಳಿದಿದೆ, ಆದುದರಿಂದ ಅವನು ಯೇನು ಮಾಡುತ್ತಾನೋ ನಾವು ನೋಡಬೇಕು, ಯಾಕೆಂದರೆ ಅದು ನಮಗೆ ಕರ್ತನು ಯಾರೆಂದು ಪ್ರಕಟಪಡಿಸುತ್ತದೆ. ಕೆಳಗೆ ಕಾಣುವ ವಿಷಯ ಯೇಸು ನಿಜವಾಗಿಯೂ ಕರ್ತನಾದ ದೇವರು ಎಂದು ರುಜುವಾತು ಪಡಿಸುತ್ತದೆ.

**ವಚನಗಳು ಮತ್ತು ವ್ಯಾಖ್ಯಾನಗಳು :**

ಯೋಹಾ 14 : 6 "ಯೇಸು ಅವನಿಗೆ – ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ. ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿ ಬರುವುದಿಲ್ಲ."

ಯೇಸುವಿಗೆ ಮುಂಚೆ ಹೊಸ ಒಡಂಬಡಿಕೆಯಲ್ಲಿ ಪ್ರಕಟವಾಗಿರುವ ಜ್ಞಾನವು ಮನುಷ್ಯನಿಗೆ ತಿಳಿದಿರಲಿಲ್ಲ. ಪ್ರಪಂಚವು ಯೇಸುವನ್ನು ಹೀನೈಸಿದರೂ, ಅವರೂ ಈಗಲೂ ಅವರ ನಿಯಮಗಳನ್ನು ಆತನ ತತ್ವಗಳ ಮೇಲೆ ಆಧಾರವಾಗಿಟ್ಟುಕೊಂಡಿದ್ದಾರೆ. ಮತ್ತು ಆತನ ಬೋಧನೆಗಳ ಮೇಲೆ ಆಧಾರವಾಗಿರುವಂತಹ ಜೀವನ ಶೈಲಿಯನ್ನು ಪ್ರೋತ್ಸಾಹಗೊಳಿಸುತ್ತಾರೆ. ಪ್ರಪಂಚಕ್ಕೆ ಈ ತತ್ವಗಳನ್ನು ಬಿಟ್ಟರೆ ಪ್ರೋತ್ಸಾಹಿಸುವುದಕ್ಕೆ ಬೇರಾವ ತತ್ವಗಳೂ ಇಲ್ಲ. ಆದುದರಿಂದಲೇ ಸೈತಾನನಿಗೆ ತನ್ನದೇ ಆದ ಬೈಬಲ್ ಇಲ್ಲ, ಆದರೆ ದೇವರ ವಾಕ್ಯವನ್ನು ಅಪಪ್ರಚಾರ ಮಾಡುತ್ತಾನೆ.

ಇಬ್ರಿ 1 : 1,2 "ಕಳೆದ ಕಾಲದಲ್ಲಿ ಪಿತೃಗಳ ಸಂಗಡ ಪ್ರವಾದಿಗಳ ಮುಖಾಂತರ ನಾನಾ ಸಮಯಗಳಲ್ಲಿ ವಿಧವಿಧವಾದ ರೀತಿಯಲ್ಲಿ ಮಾತನಾಡಿದ ದೇವರು ಈ ಅಂತ್ಯ ದಿನಗಳಲ್ಲಿ ನಮ್ಮ ಸಂಗಡ ತನ್ನ ಮಗನ ಮುಖಾಂತರ ಮಾತನಾಡಿದ್ದಾನೆ. ಈತನನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿದನು. ಈತನ ಮೂಲಕವೇ ಲೋಕಗಳನ್ನು ಉಂಟು ಮಾಡಿದನು."

ಮತ್ತ 1:21 "ನೀನು ಆತನಿಗೆ ಯೇಸು ಎಂದು ಕರೆಯಬೇಕು ; ಯಾಕೆಂದರೆ, ಆತನು ತನ್ನ ಜನರನ್ನು (ವಿಶ್ವಾಸಿಗಳನ್ನು) ಅವರ ಪಾಪಗಳಿಂದ ರಕ್ಷಿಸುವನು ಅಂದನು."

ಯೋಹಾ 1:14 "ಇದಲ್ಲದೇ ಆ ವಾಕ್ಯವಾಗಿರುವಾತನು ಶರೀರಧಾರಿಯಾಗಿ, ಕೃಪೆಯಿಂದಲೂ ಸತ್ಯದಿಂದಲೂ ತುಂಬಿ ನಮ್ಮ ಮದ್ಯದಲ್ಲಿ ವಾಸಮಾಡಿದನು. (ಮತ್ತು ತಂದೆಯಿಂದ ಹುಟ್ಟಿದ ಒಬ್ಬನೇ ಮಗನ ಮಹಿಮೆಯಂತೆ ನಾವು ಆತನ ಮಹಿಮೆಯನ್ನು ನೋಡಿದೆವು)."

ಯೋಹಾ 17 : 26 "...ನಾನು ಅವರಿಗೆ ನಿನ್ನ ಹೆಸರನ್ನು ಪ್ರಕಟಿಸಿದ್ದೇನೆ."

ಅಪೋ 17 : 30, 31 "ಈ ಅಜ್ಞಾನ ಕಾಲಗಳನ್ನು ದೇವರು ಲಕ್ಷಕ್ಕೆ ತರಲಿಲ್ಲ. ಈಗಲಾದರೂ ಆತನು ಎಲ್ಲಾ ಕಡೆಯಲ್ಲಿರುವ ಮನುಷ್ಯರೆಲ್ಲರೂ ಮಾನಸಾಂತರ ಪಡಬೇಕೆಂದು ಅಪ್ಪಣೆ ಕೊಡುತ್ತಾನೆ. ಯಾಕೆಂದರೆ ಆತನು ನಿಷ್ಕರ್ಶೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವುದಕ್ಕೆ ಒಂದು ದಿವಸವನ್ನು ನೇಮಕ ಮಾಡಿದ್ದಾನೆ. ಆತನನ್ನು ಸತ್ತವರೊಳಗಿನಿಂದ ಎಬ್ಬಿಸಿದ್ದರಿಂದ ಇದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿದ್ದಾನೆ ಅಂದನು."

1 ಯೋಹಾ 5:20 "ದೇವರ ಮಗನು ಬಂದು, ನಾವು ಸತ್ಯವಾಗಿರುವಾತನನ್ನು ಅರಿತುಕೊಳ್ಳುವ ಹಾಗೆ ನಮಗೆ ತಿಳುವಳಿಕೆಯನ್ನು ಕೊಟ್ಟಿದ್ದಾನೆಂಬುದು ನಮಗೆ ಗೊತ್ತದೆ. ಮತ್ತು ನಾವು ಆತನ ಮಗನಾದ ಯೇಸು ಕ್ರಿಸ್ತನಲ್ಲಿ ಇರುವವರಾಗಿ ಸತ್ಯವಾಗಿರುವಾತನಲ್ಲಿದ್ದೇವೆ. ಈತನೇ ಸತ್ಯದೇವರೂ ನಿತ್ಯಜೀವವೂ ಆಗಿದ್ದಾನೆ."

ವಿಮೋ 20:7 "ನಿನ್ನ ದೇವರಾದ ಕರ್ತನ ಹೆಸರನ್ನು ವ್ಯರ್ಥವಾಗಿ ಎತ್ತಬಾರದು."

ಕರ್ತನ ಹೆಸರನ್ನು ವ್ಯರ್ಥವಾಗಿ ಎತ್ತಬಾರದೆಂದು ಬೈಬಲ್ ಘೋಷಿಸುತ್ತದೆ. ಸಾಧಾರಣವಾಗಿ ನಿಂದೆಗೊಳಗಾಗುವ ಹೆಸರು ಯೇಸು, ಮತ್ತು ಯೇಸುವೇ ಕರ್ತನ ಹೆಸರೆಂದು ಇದು ರುಜುವಾತು ಪಡಿಸುತ್ತದೆ.


ಯೇಸುವಿನ ಹೆಸರಿನಿಂದಲೇ ದೆವ್ವಗಳನ್ನು ಬಿಡಿಸುವುದರಿಂದ, ಅವುಗಳಿಗೆ ಆತನೇ ಕರ್ತನೆಂದು ತಿಳಿದಿದೆ.

ಪಾಪಿಗಳು ಯೇಸುವಿನ ಹೆಸರನ್ನು ಕೇಳಿದಾಗ ಉದ್ರೇಕಗೊಳ್ಳುತ್ತಾರೆ, ಯಾಕೆಂದರೆ ಅವರು ದೇವರನ್ನು ಹಗೆ ಮಾಡುತ್ತಾರೆ. ಈ ಕಾರಣದಿಂದ ವಿಶ್ವಾಸಿಗಳು ಯೇಸುವಿನ ವಿಷಯವಾಗಿ ಪಾಪಿಗಳ ಎದುರಿನಲ್ಲಿ ಮಾತನಾಡಲು ಕಷ್ಟಪಡುತ್ತಾರೆ. ಅವರಿಗೆ ಗಾಳಿಯಲ್ಲಿ ಒಂದು ದೆವ್ವದ ಬಿರುಸುತನದ ಅರಿವಾಗುತ್ತದೆ.

ಯೇಸುವಿನ ಹೆಸರನ್ನು ಘನಪಡಿಸುವ ಹಾಡುಗಳಷ್ಟು ಬೇರಾವ ಹಾಡುಗಳು ಇಲ್ಲ. ಮಿಲಿಯನ ಪುಸ್ತಕಗಳು ಬರೆಯಲಾದವು, ಕೆಲಸ ಇನ್ನೂ ಸಾಗುತ್ತಲೇ ಇದೆ. ಇವೆಲ್ಲವೂ ಯೇಸುವಿನ ಮಹತ್ವದ ಬಗ್ಗೆ ಮತ್ತು ಆತನ ವಾಕ್ಯಗಳ ತೀರದಷ್ಟು ಜ್ಞಾನದ ಬಗ್ಗೆ. ಬೈಬಲ್‌ನಲ್ಲಿ ಯೇಸುಕ್ರಿಸ್ತನ ವಿಷಯವಾದ ಪ್ರವಾದನೆಗಳೂ ಮತ್ತು ಘೋಷಣೆಗಳೂ ಇತಿಹಾಸದಾದ್ಯಂತ ನೋಡಬಹುದು ಮತ್ತು ನಮ್ಮ ದಿನಗಳಲ್ಲಿಯೂ ಕೂಡ ಯೇಸು ಕ್ರಿಸ್ತನೊಬನೇ ಮನುಷ್ಯನಾಗಿದ್ದರೂ, ತಾನು ದೇವರೆಂದು ಹೇಳಿದನು. ಮತ್ತು ಅದ್ಭುತ ಕಾರ್ಯಗಳಿಂದ ಮತ್ತು ಸೂಚಕ ಕಾರ್ಯಗಳಿಂದ ತಾನು ದೇವರೆಂದು ರುಜುವಾತು ಪಡಿಸಿದನು.

**ಮನುಷ್ಯನಿಗಾಗಿ ದೇವರ ಏರ್ಪಾಟಿನ ಹಂಚಿಕೆ :**

ಮನುಷ್ಯನು ದೇವರ ಸ್ವರೂಪ ಮತ್ತು ಆತನ ಹೋಲಿಕೆಯಂತಿದ್ದಾನೆ. ದೇವರು ಪುರುಷ ಮತ್ತು ಸ್ತ್ರೀಯರನ್ನು, ಅವರು ಸಂತಾನ ಪಡೆಯುವುದಕ್ಕಾಗಿ ಉಂಟುಮಾಡಿದನು ಮತ್ತು ಅವರ ಮೇಲೆ ಪ್ರಭುತ್ವ ನಡೆಸಲು ಆದಮನನ್ನು ರಾಜನನ್ನಾಗಿ ನೇಮಿಸಿದನು. ಮನುಷ್ಯನು ಶಾಶ್ವತವಾಗಿ ಭೂಮಿಯ ಮೇಲೆ ಜೀವಿಸುವುದು ದೇವರ ಉದ್ದೇಶವಾಗಿದೆ.




ಯೇಸುವಿನ ಹೆಸರನ್ನು ಬಹಿರಂಗವಾಗಿ ಸುಳ್ಳುನಿಂದೆ ಹೊರಿಸಲಾಗಿದೆ, ಟೆಲಿವಿಷನ್ ಮೇಲೆಯೂ ಫಿಲ್ಮ್‌ಗಳಲ್ಲಿಯೂ ಇದು ನಿಜ. ಬೇರೆ ಮಾತುಗಳು ಮತ್ತು ಅದರ ಪ್ರವಾದಿಗಳು ಯೇಸುವಿನಷ್ಟು ನಿಂದಾರ್ಹರಾಗಿಲ್ಲ.

ಮಾರ್ಕ 16:17 "ಇದಲ್ಲದೇ ನಂಬುವವರಿಂದ ಈ ಸೂಚಕ ಕಾರ್ಯಗಳು ಉಂಟಾಗುವವು; ಅವರು ನನ್ನ ಹೆಸರಿನಲ್ಲಿ ದೆವ್ವಗಳನ್ನು ಬಿಡಿಸುವರು..."

ಮತ್ತ 24:9 "...ಇದಲ್ಲದೇ ನನ್ನ ಹೆಸರಿನ ನಿಮಿತ್ತವಾಗಿ ಎಲ್ಲಾ ಜನಾಂಗಗಳವರು ನಿಮ್ಮನ್ನು ಹಗೆ ಮಾಡುವರು."

ಯೋಹಾ 21:25 "ಇದಲ್ಲದೆ ಯೇಸು ಮಾಡಿದವುಗಳು ಬಹಳ ಉಂಟು; ಅವುಗಳನ್ನು ಒಂದೊಂದಾಗಿ ಬರೆಯುವುದಾದರೆ, ಬರೆಯಬೇಕಾದ ಪುಸ್ತಕಗಳನ್ನು ಲೋಕವೇ ಹಿಡಿಸಲಾರದೆ ಹೋದೀತೆಂದು ನಾನು ನೆನಸುತ್ತೇನೆ. ಆಮೆನ್..."

2 ಪೇತ್ರ 3:13, 14 "ಆದಾಗಿಯೂ ಆತನ ವಾಗ್ದಾನದ ಪ್ರಕಾರ ನೂತನ ಆಕಾಶಗಳನ್ನೂ ನೂತನ ಭೂಮಿಯನ್ನೂ ಎದುರು ನೋಡುತ್ತಾ ಇದ್ದೇವೆ ; ಅವುಗಳಲ್ಲಿ ನೀತಿಯು ವಾಸವಾಗಿರುವುದು. ಆದಕಾರಣ ಪ್ರಿಯರೇ, ನೀವು ಇಂಥವುಗಳನ್ನು ಎದುರು ನೋಡುವವರಾಗಿರುವುದರಿಂದ ಸಮಾಧಾನದಲ್ಲಿದ್ದು, ನಿರ್ಮಲರಾಗಿಯೂ, ನಿರ್ದೋಶಿಗಳಾಗಿಯೂ ಆತನಿಗೆ ಕಾಣಿಸಿಕೊಳ್ಳುವಂತೆ ಜಾಗ್ರತೆಯುಳ್ಳವರಾಗಿರಿ."

ಈ ವಾಕ್ಯವು ನಮಗೆ ರುಜುವಾತು ಮಾಡುವುದೇನೆಂದರೆ, ಮನುಷ್ಯನಿಗೆ ದೇವರ ಏರ್ಪಾಟಿನ ಹಂಚಿಕೆ ಇದಾಗಿದೆ : ಅವರು ಶಾಶ್ವತವಾಗಿ ಭೂಮಿಯ ಮೇಲೆ ನೀತಿವಂತರಾಗಿ ಜೀವಿಸಬೇಕು.

ಒಬ್ಬ ಪರಿಪೂರ್ಣ ಮನುಷ್ಯನು ಎಂದರೆ, ಅವನ ಪ್ರಾಣದಲ್ಲಿ ಒಳ್ಳೆ ಕೆಟ್ಟದರ ತಿಳುವಳಿಕೆ ಇಲ್ಲದವನು, ಅವನ ಆತ್ಮನು ಅವನ ಪ್ರಾಣಕ್ಕೆ ಅಧೀನನಾಗುತ್ತಾನೆ ಮತ್ತು ಅವನ ದೇಹದಲ್ಲಿ ಪಾಪವಿರುವುದಿಲ್ಲ.

ಯೆಹೆ 18:4,9,32 "ಇಗೋ, ಎಲ್ಲಾ ಪ್ರಾಣಗಳೂ ನನ್ನವೇ ; ...ಪಾಪ ಮಾಡುವವನು ತಾನಾಗಿಯೇ ಸಾಯುವನು... ಸತ್ಯವನ್ನು ಮಾಡುವುದಕ್ಕಾಗಿ ನನ್ನ ನಿಯಮಗಳಲ್ಲಿ ನಡೆದು, ನನ್ನ ನ್ಯಾಯಗಳನ್ನು ಕೈಗೊಂಡು, ಸತ್ಯಪರನಾಗಿ ನಡೆದರೆ ಅವನು ನೀತಿವಂತನು. ಮತ್ತು ನಿಶ್ಚಯವಾಗಿ ಬದುಕುವನು ಎಂದು ದೇವರಾದ ಕರ್ತನು ಹೇಳಿದ್ದಾನೆ, ಯಾಕೆಂದರೆ ಸಾಯುವವನ ಸಾವಿನಲ್ಲಿ ನನಗೆ ಸಂತೋಷವಿಲ್ಲವೆಂದು ದೇವರಾದ ಕರ್ತನು ಹೇಳುತ್ತಾನೆ; ಆದ ಕಾರಣ ತಿರುಗಿಕೊಂಡು ಬಾಳಿರಿ."

**ಶಾಶ್ವತವಾಗಿ ಜೀವಿಸಲು ಮೊದಲೇ ಗೊತ್ತುಮಾಡಿದ್ದು :**

ರಾಜನಾಗಿ ಆದಮನು ಜೀವವೃಕ್ಷದ ಮರದಿಂದ ತಿನ್ನಬಹುದಿತ್ತು. ಆದರೆ ಒಳ್ಳೆ ಕೆಟ್ಟದರ ತಿಳುವಳಿಕೆಯ ಮರದಿಂದ ಮಾತ್ರ ತಿನ್ನಬಾರದಿತ್ತು. ರಾಜನು ಮಾಡುವ ಆಯ್ಕೆ ಅವನ ಮೇಲೂ, ಅವನ ಎಲ್ಲಾ ಸಂತಾನಗಳ ಮೇಲೂ ಪ್ರಭಾವ ಬೀರುವುದಿತ್ತು. ಅವನು ಜೀವ ವೃಕ್ಷದ ಮರದಿಂದ ತಿನ್ನುವುದಕ್ಕೆ ಆಯ್ಕೆ ಮಾಡಿದ್ದರೆ, ಅವನೂ ಮತ್ತು ಅವನ ಸಂತತಿಯವರೆಲ್ಲರೂ ದೇವರ ಭಕ್ತರಾಗಿ ಶಾಶ್ವತವಾಗಿ ಜೀವಿಸುತ್ತಿದ್ದರು, ಆದರೆ ಅವನು ಒಳ್ಳೆ ಕಟ್ಟದರ ಅರಿವಿನ ಮರದಿಂದ ತಿನ್ನಲು ಆಯ್ಕೆ ಮಾಡಿದ್ದರಿಂದ ಅವನು ಮತ್ತು ಅವನ ಸಂತತಿಯು ಭಕ್ತಿಹೀನರಾಗಿ ಸಾಯಬೇಕಾಯಿತು.

**ದೈವೀಕ ಸಮಾಜವಾಗಬೇಕೆಂದು ಮೊದಲೇ ಗೊತ್ತು ಮಾಡಿದ್ದು.**

ಮನುಷ್ಯನಿಗಾಗಿ ದೇವರ ಇಚ್ಛೆ. ಅವರು ಒಂದು ದೈವೀಕವಾದ ಸಮಾಜವಾಗಬೇಕು ಎಂಬದೇ. ಮನಃಶಾಂತಿಯಿಂದ ಮತ್ತು ಪ್ರಶಾಂತವಾದ ಜೀವನವನ್ನು ನಡೆಸಬೇಕೆಂದು ಮತ್ತು ಒಬ್ಬರನ್ನೊಬ್ಬರು ಸಹೋದರ, ಸಹೋದರಿಯರ ಪ್ರೀತಿಯಿಂದ ಇರಬೇಕೆಂತಲೂ ದೇವರು ಬಯಸಿದನು. ಆದುದರಿಂದಲೇ ದೇವರು ಆದಮನಿಗೆ ನೀನು ಸ್ವೇಚ್ಛೆಯಾಗಿ ಜೀವವೃಕ್ಷದ ಮರದಿಂದ ತಿನ್ನಬಹುದು ಎಂದು ಹೇಳಿದನು. ಜೀವವೃಕ್ಷದ ಮರವು ಆದಮನಿಗೆ ದೇವರ ತಿಳುವಳಿಕೆಯನ್ನು ಕೊಡುತ್ತಿತ್ತು ಮತ್ತು ನೀತಿಯ ಅರ್ಥವನ್ನು ತಿಳಿಸುತ್ತಿತ್ತು. ಮಾನವ ಕುಲದ ಶಿರಸ್ಸಾಗಿ ಅವರನ್ನು ಆದಮನು ನೀತಿಯಲ್ಲಿ ಆಳ್ವಿಕೆ ಮಾಡಬಹುದಿತ್ತು.

ಅಂತ ದೈವ ಭಕ್ತ ಸಮಾಜ ಆತ್ಮನ ಫಲವನ್ನು ಸ್ಪಷ್ಟವಾಗಿ ತೋರಿಸುತ್ತಿತ್ತು. ಅದೇನೆಂದರೆ : ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ವಿನಯ, ಸದ್ಗುಣ, ನಂಬಿಕೆ, ಸಾತ್ವಿಕತೆ, ಮಿತವ್ಯಯ ಇಂತವುಗಳೇ.

**ಮನುಷ್ಯನು ಬಿದ್ದುಹೋದದ್ದು.**

ಸೈತಾನನು ಹವ್ವಳನ್ನು ಶೋಧಿಸಿ ಒಳ್ಳೆ ಕೆಟ್ಟದರ ತಿಳುವಳಿಕೆಯನ್ನುಂಟು ಮಾಡುವ ಮರದ ಫಲವನ್ನು ತಿನ್ನುವಂತೆ ಮಾಡಿದ್ದರಿಂದ ಆದಮನು ಅಧೀನನಾದಾಗ ಅವನು ಪಾಪ ಮಾಡಿದನು ಮತ್ತು ತನ್ನ ಪ್ರಭುತ್ವವನ್ನು ಸೈತಾನನಿಗೆ ಬಿಟ್ಟುಕೊಟ್ಟನು. ಸೈತಾನನು ಆಗ ಇಹಲೋಕದ ಅಧಿಪತಿಯಾದನು. ಮತ್ತು ಒಳ್ಳೆ ಕೆಟ್ಟದರ ತಿಳುವಳಿಕೆಯ ಮೂಲಕ ಪಾಪದ ಸ್ವಭಾವವನ್ನು ದೇಹದಲ್ಲಿ ತೋರ್ಪಡಿಸಿದನು.

ರೋಮ 6:23 "ಪಾಪದ ಸಂಬಳ ಮರಣ; ಆದರೆ ದೇವರ ಉಚಿತಾರ್ಥ ವರ ನಮ್ಮ ಕರ್ತನಾದ ಯೇಸುಕ್ರಿಸ್ತನಲ್ಲಿರುವ ನಿತ್ಯ ಜೀವ."

ಆದಮನು ಜೀವ ವೃಕ್ಷದ ಮರದಿಂದ ತಿಂದಿದ್ದರೆ ಪರಿಶುದ್ಧಾತ್ಮವು ದೇಹದಲ್ಲಿ ನೆಲೆಸುತ್ತಿತ್ತು. ಆತ್ಮನು ಅವನಿಗೂ ಮತ್ತು ಅವನ ಸಂತಾನಕ್ಕೂ ನೀತಿ ಮಾರ್ಗಗಳನ್ನು ಬೋಧಿಸುತ್ತಿದ್ದನು ಮತ್ತು ಭಕ್ತಿವಂತರಾಗುವಂತೆ ಮಾಡುತ್ತಿದ್ದನು. ಮನುಷ್ಯ ಕುಲವು ಒಂದು ದೈವೀಕ ಸಮಾಜವಾಗುತ್ತಿತ್ತು ಮತ್ತು ಆದಮನು ಈ ಲೋಕದ ಅಧಿಪತಿಯಾಗುತ್ತಿದ್ದನು.

1 ಕೊರಿ 2:9,10 "ಆದರೆ ಬರೆದಿರುವ ಪ್ರಕಾರ – ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧ ಮಾಡಿರುವಂತವುಗಳನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ. ಇಲ್ಲವೇ ಅವು ಮನುಷ್ಯನ ಹೃದಯದಲ್ಲಿ ಸೇರಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅವುಗಳನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳಲ್ಲೂ, ಹೌದು ದೇವರ ಅಗಾಧವಾದ ವಿಷಯಗಳನ್ನೂ ಕೂಡ ಪರಿಶೋಧಿಸುವವನಾಗಿದ್ದಾನೆ."

ಗಲಾ 5:22,23 "ಆದರೆ ಆತ್ಮನ ಫಲವೇನೆಂದರೆ : ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ವಿನಯ, ಸದ್ಗುಣ, ನಂಬಿಕೆ, ಸಾತ್ವಿಕತೆ, ಮಿತವ್ಯಯ ಇಂತವುಗಳೇ."


ಯೋಹಾ 12:31 "ಈಗ ಈ ಲೋಕಕ್ಕೆ ನ್ಯಾಯ ತೀರ್ಪು ಆಗುತ್ತದೆ ; ಇಹಲೋಕದ ಅಧಿಪತಿಯು ಈಗ ಹೊರಗೆ ಹಾಕಲ್ಪಡುವನು."
ಗಮನಿಸು : ಸೈತಾನನು ಮಾನವ ಕುಲವನ್ನು ಪಾಪದ ಸ್ವಭಾವದಿಂದ (ಪಾಪದ ನಿಯಮ) ಪ್ರಭುತ್ವ ಮಾಡುತ್ತಾನೆ. ಮತ್ತು ದೆವ್ವಗಳ ಪ್ರಭಾವದಿಂದ.

ಬಿದ್ದು ಹೋದ ಮನುಷ್ಯ ಅಂದರೆ ಒಳ್ಳೆ ಕೆಟ್ಟದರ ತಿಳುವಳಿಕೆ ಇರುವವನು : ಅವನ ಆತ್ಮ ಪ್ರಾಣದ ಮೇಲೆ ದೊರೆತನ ಮಾಡುತ್ತದೆ ಮತ್ತು ಅವನ ದೇಹದಲ್ಲಿ ಪಾಪನೆಲೆಸಿರುತ್ತದೆ.

ರೋಮ 6:12 "ಹೀಗಿರುವುದರಿಂದ ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಿ ನೀವು ಅದರ (ಅವನ) ದುರಾಶೆಗಳಿಗೆ ಒಳಪಡಬೇಡಿರಿ."
**ಗಮನಿಸು :** ಪಾಪವು ಗಾಳಿಯಲ್ಲಿ ತೇಲಾಡುವ ಒಂದು ವಸ್ತುವಲ್ಲ. ಅದು ಒಂದು ಪಾಪದ ಮನಸ್ಸು ಅಥವಾ ಸ್ವಭಾವ ಅದು ಮನುಷ್ಯನ ದೇಹದಲ್ಲಿ ನಿವಸಿಸುವಂಥದ್ದು. ದೇಹವು ಸೈತಾನನ ಮನೆಯಾಗಿರುವುದರಿಂದ ದೆವ್ವಗಳೂ ಕೂಡ ಅದರಲ್ಲಿ ನಿವಾಸ ಮಾಡಬಹುದು.

ನೋಡಿ ಕಲಿಯಿರಿ !

ಬಿದ್ದು ಹೋದ ಮನುಷ್ಯ




**ಸಾಯುವದನ್ನು ಮುಂದಾಗಿ ಗೊತ್ತು ಮಾಡಿತ್ತು.**

ಪಾಪದ ನಿಮಿತ್ತವಾಗಿ ದೇಹವು ಮುಪ್ಪಾಗಿ ಸಾಯುತ್ತದೆ. ಇದರ ಅರ್ಥ ಏನೆಂದರೆ ಒಳ ಮನುಷ್ಯನು ಭೂಮಿಯ ಮೇಲೆ ಶಾಶ್ವತವಾಗಿ ಇನ್ನುಮೇಲೆ ಜೀವಿಸಲಾರನು, ಯಾಕೆಂದರೆ ಒಳ್ಳೆ ಕೆಟ್ಟದರ ತಿಳುವಳಿಕೆ ಆತ್ಮನಲ್ಲಿ ಕಾಮಾಭಿಲಾಷೆ ಮತ್ತು ದುರಾಶೆಗಳನ್ನು ಉಂಟು ಮಾಡುತ್ತದೆ. ಆತ್ಮದ ಕಾಮಾಭಿಲಾಷೆಗಳು ಮತ್ತು ದುರಾಶೆಗಳು ಪ್ರಾಣದ ಚಿತ್ತದ ಮೇಲೆ ದೊರೆತನ ಮಾಡುತ್ತವೆ. ಮನುಷ್ಯನು ಅಪವಿತ್ರನೂ ಮತ್ತು ಒಬ್ಬ ಪಾಪದ ಮನುಷ್ಯನು ಆದನು.

ಮನುಷ್ಯನ ಆಯುಷ್ಯ ಈ ಜೀವನದಲ್ಲಿ ಸಣ್ಣದಾದುದು ಮಾತ್ರವಲ್ಲ. ಅವನು ಎರಡನೇ ಮರಣದಲ್ಲಿ ಕೂಡ ಪಾಲು ತೆಗೆದುಕೊಳ್ಳುತ್ತಾನೆ. ಅಂದರೆ, ಶಾಶ್ವತವಾಗಿ ನರಕದಲ್ಲಿ.

**ಭಕ್ತಿ ಹೀನ ಸಮಾಜ ಆಗುವುದಕ್ಕೆ ಮುಂದಾಗಿ ಗೊತ್ತು ಮಾಡಿದ್ದು.**

ಪ್ರಾಣದಲ್ಲಿ ಒಳ್ಳೆ ಕೆಟ್ಟದರ ತಿಳುವಳಿಕೆಯು ಮನುಷ್ಯನ ಆತ್ಮವನ್ನು ಸೈತಾನನ ಸ್ವಭಾವದಲ್ಲಿ ಪಾಲು ತೆಗೆದುಕೊಳ್ಳುವಂತೆ ಮಾಡುತ್ತದೆ. ಆತ್ಮವು ಒಳ್ಳೆ ಕೆಟ್ಟದರ ತಿಳುವಳಿಕೆಯ ಮೂಲಕ ಉಂಟಾಗಿರುವುದರಿಂದ ಅದು ಒಳ್ಳೆಯದಾಗಿಯೂ ಮತ್ತು ಕೆಟ್ಟದಾಗಿಯೂ ಇರಬಹುದು. ಇದರ ಅರ್ಥವೇನೆಂದರೆ ಬಿದ್ದು ಹೋದ ಮನುಷ್ಯನು ಒಳ್ಳೆಯದನ್ನು ಮಾಡಬಲ್ಲನು ಹಾಗೆಯೇ ಕೆಟ್ಟದ್ದನ್ನೂ ಮಾಡಬಲ್ಲನು. ಇಂಥ ಸಮಾಜ ಭಕ್ತಿ ಹೀನವಾದದ್ದು, ಮತ್ತು ಕೆಟ್ಟದ್ದು ಯಾಕೆಂದರೆ ಅವರ ವ್ಯವಹಾರಗಳು ಅನೀತಿಯಲ್ಲಿ ನೆಲೆಗೊಂಡಿವೆ – ವ್ಯಭಿಚಾರ, ಹಾದರ, ಹಗೆ, ಜಗಳವಾಡುವುದು, ಒಡಕುಗಳು, ಕೊಲೆ, ಮೋಸ ಮಾಡುವುದು, ಸುಳ್ಳು ಹೇಳುವುದು, ರೇಗುವುದು, ಯುದ್ಧಗಳು, ದುಃಖ, ವ್ಯಥೆ, ಶ್ರಮೆ ಮತ್ತು ನೋವು ಇತ್ಯಾದಿ. ಈ ಅನೀತಿಯೇ ಅವರ ಜೀವನದಲ್ಲಿನ ವಿಧಿಯಾಟ.

1 ಕೊರಿ 10:13 "ಮನುಷ್ಯನಿಗೆ ಸಾಮಾನ್ಯವಾಗಿ ಬರುವ ಶೋಧನೆಯೇ ಹೊರತು ಬೇರೆ ಯಾವುದು ನಿಮಗೆ ಸಂಭವಿಸಲಿಲ್ಲ. (ಮಾನವ ಸ್ವಭಾವ)"
**ಗಮನಿಸು :** ಒಳ ಮನುಷ್ಯನು ಪಾಪದ ಸ್ವಭಾವದಿಂದ ಪ್ರಭಾವ ಹೊಂದುವುದು ಮಾತ್ರವಲ್ಲದೆ, ದೇಹದಲ್ಲಿ ನೆಲೆಗೊಂಡಿರುವ ದೆವ್ವಗಳಿಂದಲೂ ಕೂಡ. ಒಳ ಮನುಷ್ಯನ ಎಲ್ಲಾ ಶೋಧನೆಗಳು ಮನುಷ್ಯ ಮಾತ್ರದವರಿಗೆ ಸೀಮಿತವಾಗಿವೆ.

ರೋಮ 7:17–19 "ಹೀಗಿರಲಾಗಿ ವಿರೋಧವಾದದ್ದನ್ನು ಮಾಡುವವನು ನಾನಲ್ಲ. ನನ್ನಲ್ಲಿ ನೆಲೆಗೊಂಡಿರುವ ಪಾಪವೇ... ಯಾಕೆಂದರೆ ನನ್ನಲ್ಲಿ ಅಂದರೆ ನನ್ನ ಶರೀರದಲ್ಲಿ ಒಳ್ಳೆಯದೇನೂ ವಾಸವಾಗಿಲ್ಲವೆಂದು ನನಗೆ ತಿಳಿದಿದೆ. ಒಳ್ಳೆಯದನ್ನು ಮಾಡುವುದಕ್ಕೆ ನನಗೇನೋ ಮನಸ್ಸುಂಟು; ಆದರೆ ಅದನ್ನು ಮಾಡುವುದು ನನ್ನಿಂದಾಗದು. ನಾನು ಇಚ್ಛಿಸುವ ಒಳ್ಳೇದನ್ನು ಮಾಡದೆ ಇಚ್ಛಿಸದಿರುವ ಕೆಟ್ಟದ್ದನ್ನೇ ಮಾಡುವವನಾಗಿದ್ದೇನೆ."
**ಗಮನಿಸು :** ಪಾಪವು ದೇಹದಲ್ಲಿ ನೆಲೆಗೊಂಡಿರುವುದರಿಂದ ಶ್ರೀ ಪೌಲನು ತಿರಿಗಿ ಹುಟ್ಟುವುದಕ್ಕೆ ಮುಂಚಿತ ಒಬ್ಬ ಪಾಪಿಯ ಜೀವಿತ ಮತ್ತು ಅನುಭವಗಳನ್ನು ವಿವರವಾಗಿ ಬರೆದಿದ್ದಾನೆ. ಅವನ ಪ್ರಾಣ ಒಳ್ಳೆಯದನ್ನು ಮಾಡುವುದಕ್ಕೆ ಇಚ್ಛೈಸುತ್ತದೆ, ಆದರೆ, ಅವನ ಆತ್ಮದ ಚಿತ್ತವು ದೊರೆತನ ಮಾಡುವುದರಿಂದ ಪ್ರಾಣವು ತಾನು ಇಚ್ಛಿಸುವುದನ್ನು ಮಾಡಲಾರದು.
1ಪೇತ್ರ 2:11 "...ಆತ್ಮಕ್ಕೆ ವಿರೋಧವಾಗಿ ಯುದ್ಧ ಮಾಡುವ ಶಾರೀರಿಕ ದುರಾಶೆಗಳಿಗೆ ದೂರವಾಗಿರಬೇಕೆಂದು..."

ಇಬ್ರಿ 9:27 "ಒಂದೇ ಸಾರಿ ಸಾಯುವುದು ತರುವಾಯ ನ್ಯಾಯ ತೀರ್ಪು ಮನುಷ್ಯರಿಗೆ ನೇಮಕವಾಗಿದೆ."

ಪ್ರಕ 21:8 "ಆದರೆ ಭಯಗ್ರಸ್ಥರು, ನಂಬಿಕೆಯಿಲ್ಲದವರು ಅಸಹ್ಯವಾದವರು, ಕೊಲೆಗಾಗರೂ, ಜಾರರು, ಮಾಟಗಾರರು, ವಿಗ್ರಹಾರಾಧಕರು ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿಗಂಧಕಗಳು ಉರಿಯುವ ಕೆರೆಯೇ ; ಅದು 2ನೇಯ ಮರಣವು ಎಂದು ನನಗೆ ಹೇಳಿದನು."

ಮತ್ತ 25:41 "ಮತ್ತು ಆತನು ಎಡಗಡೆಯಲ್ಲಿರುವವರಿಗೆ – ಶಾಪಗ್ರಸ್ತರೇ, ನೀವು ನನ್ನಿಂದ ತೊಲಗಿ ಸೈತಾನನಿಗೂ ಆತನ ದೂತರಿಗೂ ಸಿದ್ಧ ಮಾಡಲ್ಪಟ್ಟ ನಿತ್ಯ ಬೆಂಕಿಯೊಳಗೆ ಹೋಗಿರಿ."

**ಗಮನಿಸು :** ಸ್ನೇಹ ಭಾವವುಳ್ಳವನೂ ಮತ್ತು ನ್ಯಾಯವಿಲ್ಲದವನೂ ಆಗಿರುವ ಒಬ್ಬ ವ್ಯಕ್ತಿ ಪ್ರಮಾಣಿಕತೆಯುಳ್ಳವನೂ ಮತ್ತು ಇಲ್ಲದವನೂ ಆಗಿದ್ದರೆ ದೇವರ ದೃಷ್ಟಿಯಲ್ಲಿ ಅಂತವನು ಅಸಹ್ಯನಾಗಿದ್ದಾನೆ.
**ಸಾಮ್ಯ :** ಪ್ಲಾಸ್ಟಿಕ್‌ಗೆ ಕೆಲವು ವೇಳೆ ಶಕ್ತಿ ಪ್ರವಹಿಸುವ ಸಾಮರ್ಥ್ಯವಿದ್ದು ಇನ್ನು ಕೆಲವು ವೇಳೆ ಇಲ್ಲದೆ ಹೋದರೆ ಅದ ನಂಬಲನರ್ಹವಾದದ್ದು. ಹಾಗೆಯೇ ಒಬ್ಬ ವ್ಯಕ್ತಿ ಒಳ್ಳೆಯದು ಮತ್ತು ಕೆಟ್ಟದ್ದು ಎರಡನ್ನೂ ಮಾಡುವುದಾದರೆ ಅವನು ನಂಬಲನರ್ಹನು. ಅವನು ಸೈತಾನನ್ನು ಸತ್ಯವನ್ನು ಮತ್ತು ಸುಳ್ಳನ್ನೂ ಕೂಡ, ಮತ್ತು ಪ್ರೀತಿಯನ್ನೂ ಮತ್ತು ಹಗೆಯನ್ನೂ ಸಹಾ ಮಾಡುತ್ತಾನೆ.


1 ಯೋಹ 3:8 "ಪಾಪ ಮಾಡುವವನು ಸೈತಾನನಿಗೆ ಸಂಬಂಧ ಪಟ್ಟವನಾಗಿದ್ದಾನೆ ; ಯಾಕೆಂದರೆ ಆದಿಯಿಂದಲೂ ಸೈತಾನನು ಪಾಪ ಮಾಡುವವನಾಗಿದ್ದಾನೆ."

**ಸಾಮ್ಯ :** ಒಂದು ಮುಳ್ಳಿನ ಗಿಡವು ಫಲವನ್ನು ಕೊಡದೆ ಹೋದರೆ ಮತ್ತು ಫಲಿಸುವ ಮರವು ಮುಳ್ಳನ್ನು ಬಿಡದೆ ಹೋದರೆ ಆಗ ಪಾಪ ಮಾಡುವ ಯಾವನೇ ವ್ಯಕ್ತಿಯೂ ಪಾಪಿಯೇ ಆಗಿ ಇದ್ದಾನೆ ಆಗ ದೇವರ ಮಗನಲ್ಲ.

**ಮನುಷ್ಯನ ಪುನಃ ಸ್ಥಾಪನೆ :**

ಯೇಸು ಸೈತಾನನನ್ನು ಸೋಲಿಸಿದ ನಂತರ, ಮತ್ತು ಪರಲೋಕಕ್ಕೆ ಆರೋಹಣನಾದ ಮೇಲೆ ಪರಿಶುದ್ಧಾತ್ಮನು ಈ ಲೋಕದೊಳಗೆ ಕಳುಹಿಸಲ್ಪಟ್ಟನು. ಪ್ರಪಂಚವು ಈಗ ಆತ್ಮನ ನಿಯಮದ ಕೆಳಗೆ ಇದೆ, ಮತ್ತು ಇನ್ನ ಮೇಲೆ ಪಾಪದ ನಿಯಮದ ಕೆಳಗೆ ಅಲ್ಲ. ಆದರೆ ಪಾಪಿಗಳು ಸತ್ಯವನ್ನು ಎಲ್ಲಿಯವರೆಗೆ ಒಪ್ಪಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅವರು ಸೈತಾನನಿಗೆ ಗುಲಾಮರಾಗಿ ಉಳಿಯುತ್ತಾರೆ. ಮತ್ತು ಪಾಪದಲ್ಲಿರುತ್ತಾರೆ.

ನೋಡಿ ಕಲಿಯಿರಿ !




ಪಾಪವು ಪ್ರಭುತ್ವ ನಡೆಸಿದಾಗ ಲೋಕವು ಅಂಧಕಾರದಲ್ಲಿತ್ತು, ಆದರೆ ಯೇಸು ಸೈತಾನನನ್ನು ಜಯಿಸಿದ್ದರಿಂದ, ಪರಿಶುದ್ಧಾತ್ಮವು ಪ್ರಭುತ್ವ ಮಾಡುತ್ತಿದೆ. ಸೈತಾನನು ಇನ್ನು ಮೇಲೆ ಇಹಲೋಕದ ಅಧಿಪತಿಯಲ್ಲ ಆದರೆ ವಾಯು ಮಂಡಲದ ಅಧಿಪತಿ ಮಾತ್ರ. ಪ್ರಪಂಚವು ಯೇಸುವನ್ನು ಕರ್ತನೆಂದು ಒಪ್ಪಕೊಳ್ಳದೇ ಇದ್ದರೂ ಮತ್ತು ಪರಿಶುದ್ಧಾತ್ಮನ ಬಗ್ಗೆ ಚಿಂತಿಸದಿದ್ದರೂ, ಆತನ ಬೋಧನೆಯನ್ನು ಅನುಸರಿಸದೆ ಬೇರೆ ಮಾರ್ಗವಿಲ್ಲ, ಅವರಿಗೆ ಅವರದೇ ಆದ ಮಾರ್ಗವನ್ನು ತೋರಿಸುವುದಕ್ಕೆ ಇಲ್ಲ.

ಲೋಕವು ಯೇಸುವಿನಲ್ಲಿ ನಂಬಿಕೆ ಇಡದೆ ಇರುವುದರಿಂದ, ದೇವರು ಅವರಿಗೆ ಪರಿಶುದ್ಧಾತ್ಮನನ್ನು ಕೊಡುವುದಿಲ್ಲ. ಆದುದರಿಂದ ಅವರು ಪಾಪದ ನಿಯಮದ ಕೆಳಗೆ ಉಳಿಯುತ್ತಾರೆ. ಮತ್ತು ಸೈತಾನನ ನಿಯಂತ್ರಣದಲ್ಲಿದ್ದಾರೆ. ಅವರು ಒಂದು ಮಾದರಿಯ ಜೀವನವನ್ನು ಬೋಧಿಸುತ್ತಾ ಮತ್ತು ಪ್ರಯತ್ನಿಸುತ್ತಾ ಇದ್ದರೂ ಅವರ ಎಲ್ಲಾ ಒಳ್ಳೆಯ ಉದ್ದೇಶಗಳನ್ನು ಅವರ ಪಾಪಗಳು ನಾಶನ ಮಾಡುತ್ತಾ ಹೋಗುತ್ತವೆ.

ಯೋಹ 3:16 "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು, ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ, ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು."

ಯೋಹ 8:34 "ಆಗ ಯೇಸು ಪ್ರತ್ಯುತ್ತರವಾಗಿ ಅವರಿಗೆ – ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ – ಪಾಪ ಮಾಡುವವನು ಪಾಪಕ್ಕೆ ಗುಲಾಮನಾಗಿದ್ದಾನೆ."

ಎಫೆ 4:17–19 "ಆದ್ದರಿಂದ ಅನ್ಯಜನರು ನಡೆದುಕೊಳ್ಳುವ ಪ್ರಕಾರ ನೀವು ಇನ್ನು ಮೇಲೆ ನಡೆದುಕೊಳ್ಳಬಾರದೆಂದು ಕರ್ತನಲ್ಲಿರುವವನಾಗಿ ನಾನು ನಿಮಗೆ ಖಂಡಿತವಾಗಿ ಹೇಳುತ್ತೇನೆ. ಅವರು ನಿಷ್ಪ್ರಯೋಜನವಾದ ಬುದ್ಧಿಯುಳ್ಳವರಾಗಿ ನಡೆದುಕೊಳ್ಳುತ್ತಾರೆ, ಮತ್ತು ಅವರ ಮನಸ್ಸು ಮೊಬ್ಬಾಗಿ ಹೋಗಿದೆ. ಅವರು ತಮ್ಮ ಹೃದಯದ ಕುರುಡು ತನದ ನಿಮಿತ್ತದಿಂದಲೂ ತಮ್ಮಲ್ಲಿರುವ ಅಜ್ಞಾನದ ನಿಮಿತ್ತದಿಂದಲೂ ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದಾರೆ. ಅವರು ತಮ್ಮ ದುಸ್ಥಿತಿಗಾಗಿ ಸ್ವಲ್ಪವೂ ಚಿಂತಿಸದೇ, ತಮ್ಮನ್ನು ಬಂಡುತನಕ್ಕೆ ಒಪ್ಪಿಸಿಕೊಟ್ಟು, ಎಲ್ಲಾ ವಿಧವಾದ ಅಶುದ್ಧ ಕೃತ್ಯಗಳನ್ನು ಅತ್ಯಾಶೆಯಿಂದ ನಡೆಸುವವರಾಗಿದ್ದಾರೆ."

1 ಕೊರಿ 6 : 19, 20 "ಏನು ? ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಆಲಯವಾಗಿದೆ ಎಂಬುದು ನಿಮಗೆ ತಿಳಿಯದೋ ? ನೀವು ನಿಮ್ಮ ಸ್ವಂತ ಸ್ವತ್ತಲ್ಲ. ಯಾಕೆಂದರೆ ನೀವು ಕ್ರಯಕ್ಕೆ ಕೊಂಡುಕೊಳ್ಳಲ್ಪಟ್ಟಿದ್ದೀರಿ. ಆದ್ದರಿಂದ ದೇವರ ಸ್ವತ್ತಾಗಿರುವ ನಿಮ್ಮ ದೇಹದಲ್ಲಿಯೂ, ನಿಮ್ಮ ಆತ್ಮದಲ್ಲಿಯೂ ದೇವರನ್ನು ಮಹಿಮೆ ಪಡಿಸಿರಿ."

ರೋಮ 8 : 9 "ನೀವಾದರೋ ನಿಮ್ಮಲ್ಲಿ ದೇವರಾತ್ಮನು ವಾಸವಾಗಿರುವುದಾದರೆ ಶರೀರಾಧೀನರಲ್ಲ. ಆತ್ಮನಿಗೆ ಅಧೀನರಾಗಿದ್ದೀರಿ. ಯಾವನಿಗಾದರೂ ಕ್ರಿಸ್ತನ ಆತ್ಮವು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ."
**ಗಮನಿಸು :** ಒಬ್ಬ ವ್ಯಕ್ತಿಯು ಪವಿತ್ರಾತ್ಮನನ್ನು ಹೊಂದಿದ ಕೂಡಲೆ ಒಳ ಮನುಷ್ಯನನ್ನು ಕ್ರಿಸ್ತನ ಹೋಲಿಕೆಗೆ ಬದಲಾಯಿಸಬೇಕು. ಪ್ರಾಣವು ಪಾಪ ಮಾಡದ ಯೇಸುವಿನಂತಿರಬೇಕಾದರೆ, ಪ್ರಾಣವು ಅವನ ಆತ್ಮದ ನಿಯಂತ್ರಣದಲ್ಲಿ ಇರಬೇಕು.

ಎಫೆ 2:2 "ನೀವು ಪೂರ್ವದಲ್ಲಿ ಅಪರಾಧಗಳನ್ನೂ, ಪಾಪಗಳನ್ನೂ ಮಾಡುವವರಾಗಿದ್ದು, ಇಹಲೋಕಾಚಾರಕ್ಕನುಸಾರವಾಗಿ ನಡೆದುಕೊಂಡಿರಿ, ವಾಯುಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ ಅಂದರೆ, ಅವಿಧೇಯತೆಯ ಮಕ್ಕಳಲ್ಲಿ ಈಗ ಕೆಲಸ ನಡೆಸುವ ಆತ್ಮನಿಗನುಸಾರವಾಗಿ ನಡೆದುಕೊಂಡಿರಿ ;"
**ಗಮನಿಸು :** ಅವಿಶ್ವಾಸಿಗಳು ಯೇಸುವನ್ನು ಕರ್ತನೆಂದು ಒಪ್ಪಿಕೊಳ್ಳದೇ ಇರುವುದರಿಂದ ಅವರು ಈಗಲೂ ಸೈತಾನನ ನಿಯಂತ್ರಣದಲ್ಲಿ ಮತ್ತು ವಾಯುಮಂಡಲದ ಪ್ರಭಾವಗಳಲ್ಲಿ ಸಿಕ್ಕಿಕೊಂಡಿದ್ದಾರೆ. ಇದನ್ನು ಒಂದು ದೇಶಕ್ಕೆ ಹೋಲಿಸಬಹುದು. ಅದರಲ್ಲಿನ ಜನ ನ್ಯಾಯಬದ್ಧವಾದ ಆಡಳಿತವನ್ನು ಒಪ್ಪಿಕೊಳ್ಳುವುದಿಲ್ಲ, ಯಾಕೆಂದರೆ ಅವರು ವಿರೋಧ ಪಕ್ಷದ ಪ್ರಭಾವವನ್ನು ಹೊಂದಿ ಆಳುತ್ತಿರುವ ಪಕ್ಷಕ್ಕೆ ಅವಿಧೇಯರಾಗುತ್ತಾರೆ.

ರೋಮ 1 : 28–31 "ಇದಲ್ಲದೆ ಅವರು ತಮ್ಮ ತಿಳುವಳಿಕೆಯಿಂದ ದೇವರನ್ನು ಸ್ಮರಿಸುವುದಕ್ಕೆ ಮನಸ್ಸಿಲ್ಲದ ಕಾರಣ ದೇವರು ಅವರನ್ನು ಮಾಡಬಾರದವುಗಳನ್ನು ಮಾಡುವಂತೆ ಅನಿಷ್ಟ ಭಾವಕ್ಕೆ ಒಪ್ಪಿಸಿದನು. ಹೀಗೆ ಅವರು ಸಕಲ ಅನೀತಿಯಿಂದಲೂ ಜಾರತ್ವ, ದುರ್ಮಾರ್ಗತನ, ದುರಾಶೆ, ದುಷ್ಟತ್ವ ಇವುಗಳಿಂದಲೂ ತುಂಬಿದವರಾಗಿ ಹೊಟ್ಟೆಕಿಚ್ಚು, ಕೊಲೆ, ವಿವಾದ, ಮೋಸದಿಂದ

ಲೋಕವು ಎಷ್ಟು ಕಾಲ ಯೇಸುವನ್ನು ಕರ್ತನೆಂದು ಒಪ್ಪಿಕೊಳ್ಳುವುದಿಲ್ಲವೋ, ದೇವರ ಉಗ್ರಕೋಪ ಅವರ ಮೇಲೆ ಉಳಿಯುತ್ತದೆ. ಆದರೆ, ಅವರು ಯೇಸುವನ್ನು ಕರ್ತನೆಂದು ಸ್ವೀಕರಿಸಿದಾಗ, ಅವರ ಪಾಪಗಳು ಕ್ಷಮಿಸಲ್ಪಡುವುದರಿಂದ ದೇವರೊಂದಿಗೆ ಒಂದಾಗುತ್ತಾರೆ. ಅವರು ಪರಿಶುದ್ಧಾತ್ಮನನ್ನು ಹೊಂದಿದ ಕೂಡಲೇ ಅವರು ಪಾಪದಿಂದ ಬಿಡುಗಡೆ ಹೊಂದುವರು ಮತ್ತು ಆತನು ತಲೆಯಾಗಿರುವ ಸಭೆಗೆ ಸದಸ್ಯರಾಗುತ್ತಾರೆ.

ಪಾಪಿಗಳು ಲೋಕವನ್ನು ನಿಯಮಿಸಿದ್ದಾರೆ ಮತ್ತು ವಿಶ್ವಾಸಿಗಳು ಸಭೆಯನ್ನು ನಿಯಮಿಸಿದ್ದಾರೆ. ಸಭೆಯು ಯೇಸುವನ್ನು ಒಪ್ಪಿಕೊಳ್ಳುತ್ತದೆ. ಆದರೆ ಲೋಕವು ಆತನನ್ನು ಕರ್ತನೆಂದು ಒಪ್ಪಿಕೊಳ್ಳುವುದಿಲ್ಲ, ಯಾಕೆಂದರೆ ಅವರಿಗೆ ಪರಿಶುದ್ಧಾತ್ಮನು ಇಲ್ಲ. ಸಭೆಯು ದೈವ ಭಕ್ತ ಸಮಾಜ ಯಾಕೆಂದರೆ ಅವರು ಆತ್ಮನಲ್ಲಿದ್ದಾರೆ.

ಸಭೆಯು ಕ್ರಿಸ್ತನ ದೇಹ ಹಾಗೂ ಆತನಲ್ಲಿ ಪಾಪವಿಲ್ಲ. ದೇವರು ಕ್ರಿಸ್ತನಲ್ಲಿ ಮಾನವನನ್ನು ಆದಮನು ಬೀಳುವುದಕ್ಕಿಂತ ಮುಂಚೆ ಇದ್ದಂತಹ ಪಾಪ ರಹಿತ ಸ್ಥಾನಕ್ಕೆ ಪುನಃ ಸ್ಥಾಪನೆ ಮಾಡಿದ್ದಾನೆ. ಒಬ್ಬೊಬ್ಬ ವಿಶ್ವಾಸಿಯೂ ಪಾಪದಲ್ಲಿ ಮುಂದುವರೆಯುವುದು ವಾಸ್ತವವಾದರೂ ದೇವರು ಮಾಡಿದ್ದನ್ನು ಬದಲಾಯಿಸಲಾಗುವುದಿಲ್ಲ.

**ನಿನ್ನನ್ನು ನೀನು ಪರೀಕ್ಷಿಸಿಕೊ :**

ನೀನು ಪ್ರಪಂಚದ ಒಬ್ಬ ಸದಸ್ಯನಾ ಅಥವ ಸಭೆಯ ಸದಸ್ಯನಾ ? ಪ್ರಪಂಚದ ಸದಸ್ಯರು ಪಾಪದಲ್ಲಿ ಜೀವಿಸುವುದು ನಮಗೆ ಅರ್ಥವಾಗುತ್ತದೆ. ಆದರೆ ನೀನು ಸಭೆಯ ಒಬ್ಬ ಸದಸ್ಯನೆಂದು ಗೋಷಿಸಿದರೆ, ದೇವರ ವಾಕ್ಯಕ್ಕೆ ಏಕೆ ಅವಿಧೇಯನಾಗಿ ಜೀವಿಸುತ್ತೀ ? ನೀನು ಸಭೆಯ ಸದಸ್ಯನಾಗಿರುವುದರಿಂದ ಪಾಪ ಮಾಡಲು ನಿನಗೆ ಅನುಮತಿ ಇಲ್ಲ. ನೀನು ಭೂಮಿಗೆ ಉಪ್ಪಾಗಿರುವಿ ಎಂದು ಮತ್ತು ಪ್ರಪಂಚಕ್ಕೆ ಬೆಳಕಾಗಿದ್ದೀ ಎಂದು ತಿಳಿದುಕೋ.

ತುಂಬಿದವರೂ, ಅತಿ ಉಗ್ರತೆಯಿಂದ ಪಿಸುಗುಟ್ಟುವವರೂ, ಚಾಡಿ ಹೇಳುವವರೂ, ದೇವರನ್ನು ಹಗೆ ಮಾಡುವವರೂ, ಧಿಕ್ಕರಿಸುವವರೂ, ಅಹಂಕಾರಿಗಳೂ, ಉಬ್ಬಿಕೊಳ್ಳುವವರೂ, ಕೆಟ್ಟದನ್ನು, ಕಲ್ಪಿಸಿಕೊಳ್ಳುವವರೂ, ತಂದೆ ತಾಯಿಗೆ ಅವಿಧೇಯರೂ, ತಿಳುವಳಿಕೆ ಇಲ್ಲದವರೂ, ಪ್ರಮಾಣಕ್ಕೆ ತಪ್ಪುವವರೂ, ಸ್ವಾಭಾವಿಕವಾದ ಮಮತೆ ಇಲ್ಲದವರೂ, ಸಮಾಧಾನವಾಗದವರೂ, ಕರುಣೆ ಇಲ್ಲದವರೂ ಆದರು.

2 ಕೊರಿ 5 : 20 "ದೇವರೇ ನಮ್ಮ ಮೂಲಕ ನಿಮ್ಮನ್ನು ಬೇಡಿಕೊಳ್ಳುತ್ತಾನೋ ಎಂಬಂತೆ ನಾವು ಈಗ ಕ್ರಿಸ್ತನ ರಾಯಭಾರಿಗಳಾಗಿದ್ದೇವೆ. ದೇವರೊಂದಿಗೆ ಸಮಾಧಾನವಾಗಿರೆಂದು ಕ್ರಿಸ್ತನಿಗೆ ಬದಲಾಗಿ ನಾವು ನಿಮ್ಮನ್ನು ಬೇಡಿಕೊಳ್ಳುತ್ತೇವೆ."

ಕೊಲೋ 1 : 13, 14 "ಆತನು (ದೇವರು) ನಮ್ಮನ್ನು ಅಂಧಕಾರದ ಶಕ್ತಿಯಿಂದ ಬಿಡಿಸಿ, ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು."

1 ಕೊರಿ 12 : 3 "ಹೀಗಿರುವುದರಿಂದ ನಾನು ನಿಮಗೆ ತಿಳಿಸುವುದೇನೆಂದರೆ, ದೇವರಾತ್ಮನಿಂದ ಮಾತನಾಡುವ ಯಾವ ಮನುಷ್ಯನಾದರೂ, ಯೇಸುವನ್ನು ಶಾಪಗ್ರಸ್ಥನೆಂದು ಹೇಳುವುದಿಲ್ಲ ; ಮತ್ತು ಪವಿತ್ರಾತ್ಮನಿಂದಲೇ ಹೊರತು, ಯಾವ ಮನುಷ್ಯನಾದರೂ ಯೇಸುವನ್ನು ಕರ್ತನೆಂದು ಹೇಳಲಾರನು."

1 ಯೋಹ 3 : 5, 6 "ಪಾಪಗಳನ್ನು ನಿವಾರಣೆ ಮಾಡುವುದಕ್ಕಾಗಿ ಆತನು ಪ್ರತ್ಯಕ್ಷನಾದನೆಂಬುದು ನಿಮಗೆ ಗೊತ್ತಾಗಿದೆ ; ಆತನಲ್ಲಿ ಪಾಪವಿಲ್ಲ. ಆತನಲ್ಲಿ ನೆಲೆಗೊಂಡಿರುವ ಪಾಪ ಮಾಡನು ; ಪಾಪಮಾಡುವವನು ಆತನನ್ನು ಕಂಡವನೂ ಅಲ್ಲ. ತಿಳಿದವನೂ ಅಲ್ಲ."

ಮತ್ತ 5 : 48 "ಆದುದರಿಂದ ಸ್ವರ್ಗದಲ್ಲಿರುವ ನಿಮ್ಮ ತಂದೆಯು ಪರಿಪೂರ್ಣರಾಗಿರುವಂತೆ ನೀವೂ ಪರಿಪೂರ್ಣವಾಗಿರಿ"
**ಗಮನಿಸು :** ಆದಮನು ಬಿದ್ದುಹೋಗುವುದಕ್ಕೆ. ಮುಂಚೆ ಪರಿಪೂರ್ಣನಾಗಿದ್ದನು. ಮತ್ತು ಈಗ ದೇವರು ತನ್ನ ಸಭೆಗೆ (ವಿಶ್ವಾಸಿಗಳಿಗೆ) ಆಜ್ಞಾಪಿಸುವುದೇನೆಂದರೆ, ಪರಿಪೂರ್ಣರಾಗಿರಬೇಕೆಂದು.

1 ಯೋಹ 1 : 5, 6 "ನಾವು ಆತನಿಂದ ಕೇಳಿ, ನಿಮಗೆ ತಿಳಿಸುವ ವಾರ್ತೆ ಯಾವುದೆಂದರೆ – ದೇವರು ಬೆಳಕಾಗಿದ್ದಾನೆ ; ಮತ್ತು ಆತನಲ್ಲಿ ಎಷ್ಟು ಮಾತ್ರವು ಕತ್ತಲೆ ಇಲ್ಲ ಎಂಬುದೇ. ನಾವು ಆತನ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ, ಕತ್ತಲೆಯಲ್ಲಿ ನಡೆದರೆ, ಸುಳ್ಳಾಡುವವರಾಗಿದ್ದೇವೆ, ಸತ್ಯವನ್ನನುಸರಿಸುವವರಲ್ಲ."

1 ತಿಮೋ 3 : 15 "ಆದರೆ ಒಂದು ವೇಳೆ ನಾನು ತಡೆ ಮಾಡಿದರೂ, ಸತ್ಯಕ್ಕೆ ಸ್ಥಂಭವೂ ಆಧರವೂ ಆಗಿರುವ ದೇವರ ಮನೆಯಲ್ಲಿ (ದೇಹ) ಅಂದರೆ ಜೀವ ಸ್ವರೂಪನಾದ ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕು."

ತೀತ 1 : 16 "ಅವರು ತಾವು ದೇವರನ್ನು ಅರಿತವರೆಂದು ಹೇಳಿಕೊಳ್ಳುತ್ತಾರೆ ; ಆದರೆ ಅವರು ಅಸಹ್ಯರೂ, ಅವಿಧೇಯರೂ, ಸತ್ಕಾರ್ಯಗಳಿಗೆಲ್ಲಾ ಭ್ರಷ್ಟರೂ ಆಗಿರುವುದರಿಂದ ದೇವರನ್ನು ತನ್ನ ಕೃತ್ಯಗಳಿಂದಲೇ ಅಲ್ಲಗಳೆಯುವರು."

# ಭಾಗ 4

## ಪರಿಪೂರ್ಣನಾಗಿರುವಂತೆಯೇ ನೀವು ಪರಿಪೂರ್ಣರಾಗಿರ್ರಿ

**ನಾನು ಈ ಭಾಗದಲ್ಲಿ ನಿಮಗೆ ತೋರಿಸಿರುವುದು :**

• ಮನುಷ್ಯನು ಬಿದ್ದು ಹೋದ ಕಾರ್ಯ ಆತ್ಮನಲ್ಲಿ, ಪ್ರಾಣದಲ್ಲಿ ಮತ್ತು ದೇಹದಲ್ಲಿ ನಡೆಯಿತು. ಆದರೆ ಮನುಷ್ಯನು ದೇಹದಲ್ಲಿ, ಪ್ರಾಣದಲ್ಲಿ ಮತ್ತು ಆತ್ಮದಲ್ಲಿ ರಕ್ಷಿಸಲ್ಪಟ್ಟಿದ್ದಾನೆ ;

• ಯೇಸುವಿನಲ್ಲಿನ ನಂಬಿಕೆ ಮನುಷ್ಯನನ್ನು ಪಾಪದಿಂದ ರಕ್ಷಿಸುತ್ತದೆ. ಆದರೆ, ಸತ್ಯದಲ್ಲಿರುವ ನಂಬಿಕೆ ಒಳ ಮನುಷ್ಯನನ್ನು ಪಾಪಗಳಿಂದ ರಕ್ಷಿಸುತ್ತದೆ ;

• ಸತ್ಯವೇದ ವಾಕ್ಯವನ್ನು ಅರ್ಥಮಾಡಿಕೊಳ್ಳುವುದು ಮನಸ್ಸನ್ನು ನವೀಕರಿಸುತ್ತದೆ. ಆದರೆ, ಸತ್ಯದ ಪ್ರಕಟಣೆ ಆತ್ಮವನ್ನು ಮಾರ್ಪಾಡು ಮಾಡುತ್ತದೆ ;

• ದೇಹವು ಪಾಪದಿಂದ ರಕ್ಷಿಸುತ್ತದೆ, ಆದರೆ, ಮರಣವು ಮಾರಕ ದೇಹವನ್ನು ಮಾರ್ಪಾಡು ಮಾಡಿದಾಗ ಮಾತ್ರ ತೊಲಗಿ ಹೋಗುತ್ತದೆ ;

• ದೇವರಿಗೆ ವಿಧೇಯನಾಗಿರುವುದರಿಂದ ಪಾಪದಿಂದ ದೂರ ಇರುವಿ.

**ಕೊಲಸಿ 1:9–13 ರಿಂದ ತೆಗೆದುಕೊಂಡಿರುವ ಈ ಪ್ರಾರ್ಥನೆಯನ್ನು ಮಾಡು.**

"ತಂದೆಯೇ ನಾನು .................................................. ಇಚ್ಛಿಸುವುದು
(ದಯವಿಟ್ಟು ನಿನ್ನ ಹೆಸರನ್ನು ಇಲ್ಲಿ ಬರೆ)
ನಾನು ಸಕಲ ಜ್ಞಾನವನ್ನು ಆತ್ಮೀಯ ಗ್ರಹಿಕೆಯನ್ನು ಹೊಂದಿ, ನಿನ್ನ ಚಿತ್ತದ ವಿಷಯವಾದ ತಿಳುವಳಿಕೆಯಿಂದ ತುಂಬಿಕೊಂಡು ನಿನಗೆ ಯೋಗ್ಯನಾಗಿ ನಡೆದು, ಎಲ್ಲಾ ವಿಧದಲ್ಲಿ ನಿನ್ನನ್ನು ಸಂತೋಷ ಪಡಿಸುವಂತವನಾಗಿರ ಬೇಕೆಂತಲೂ ನಾನು ಸಕಲ ಸತ್ಕಾರ್ಯವೆಂಬ ಫಲವನ್ನು ಕೊಡುತ್ತಾ ನಿನ್ನ ಜ್ಞಾನದಲ್ಲಿ ಅಭಿವೃದ್ಧಿಯಾಗಬೇಕೆಂತಲೂ ನಿನ್ನ ಮಹಿಮಾ ಶಕ್ತಿಯ ಪ್ರಕಾರ ಪರಿಪೂರ್ಣ ಬಲಹೊಂದಿ ಬಲಿಷ್ಟನಾಗಿ ಆನಂದಪೂರ್ವಕವಾದ ತಾಳ್ಮೆಯನ್ನು ಮತ್ತು ದೀರ್ಘಶಾಂತಿಯನ್ನು ತೋರಿಸುವವನು ಆಗಿರಬೇಕೆಂತಲೂ ಬೆಳಕಿನಲ್ಲಿರುವ ಪರಿಶುದ್ಧರ ಬಾಧ್ಯತೆಯಲ್ಲಿ ಪಾಲುಗಾರನಾಗುವುದಕ್ಕೆ ನನ್ನನ್ನು ಯೋಗ್ಯನನ್ನಾಗಿ ಮಾಡಿದ ನಿನಗೆ ಕೃತಜ್ಞತಾಸ್ತುತಿ ಮಾಡುವವನಾಗಿರ ಬೇಕೆಂತಲೂ ನಿನನ್ನು ಬೇಡಿಕೊಳ್ಳುತ್ತೇನೆ."
**ಆಮೆನ್.**

## ಅಧ್ಯಾಯ 10

### ದೇಹ, ಪ್ರಾಣ ಮತ್ತು ಆತ್ಮಗಳ ರಕ್ಷಣೆ :

ಆದಮನ ಅವಿಧೇಯತೆಯಿಂದ ಪಾಪವು ಪ್ರಾಕೃತಿಕ ದೇಹದಲ್ಲಿ ಪ್ರವೇಶಿಸಿತ್ತು. ಪಾಪದ ನಿಯಮದ ಕೆಳಗೆ ಒಳ ಮನುಷ್ಯನು ಪಾಪಿಯಾದನು. ಈ ಕಾರಣದಿಂದಲೇ ಒಳಮನುಷ್ಯನು ಪಾಪವನ್ನು ನಿಲ್ಲಿಸುವುದಕ್ಕೆ ಮುಂಚೆ ದೇಹವು ಪಾಪದಿಂದ ಬಿಡುಗಡೆ ಹೊಂದಬೇಕು.

ಮನುಷ್ಯನ ಬೀಳುವಿಕೆ ಈ ಕೆಳಕಂಡ ಕ್ರಮದಲ್ಲಿ ನಡೆಯಿತು : ಮೊದಲು ಆತ್ಮನು ಯಾಕೆಂದರೆ ಹವ್ವಳು ಆದಮನಿಗೆ ಅವಿಧೇಯಳಾದಳು ; ನಂತರ ಪ್ರಾಣ, ಯಾಕೆಂದರೆ ಆದಮನು ದೇವರಿಗೆ ಅವಿಧೇಯನಾದನು, ಮತ್ತು ಇದಾದಮೇಲೆ ದೇಹ ಯಾಕೆಂದರೆ, ಪಾಪವು ದೇಹದೊಳಗೆ ಪ್ರವೇಶಿಸಿತ್ತು. ಹೇಗಾದರೂ ಮನುಷ್ಯನ ಪುನಃಸ್ಥಾಪನೆ ದೇಹದಿಂದ ಮೊದಲು ಶುರುವಾಗುತ್ತದೆ, ನಂತರ ಪ್ರಾಣ, ಮತ್ತು ಕಡೆಯಲ್ಲಿ ಆತ್ಮ.

**ದೇಹ :**

ಮೊದಲನೆಯದಾಗಿ ದೇಹವು ಪಾಪದಿಂದ ಬಿಡುಗಡೆ ಹೊಂದ ಬೇಕು. ಇದಕ್ಕೆ ಕಾರಣವೇನೆಂದರೆ ಒಳಮನುಷ್ಯನು ಪಾಪದ ನಿಯಮದ ಕೆಳಗೆ ಇರುವವರೆಗೂ, ದೇವರಿಗೆ ವಿಧೇಯನಾಗಲು ಸಾಧ್ಯವಿಲ್ಲ. ಒಳ ಮನುಷ್ಯನು ಪಾಪದ ಶಕ್ತಿಯಿಂದ ಬಿಡುಗಡೆ ಹೊಂದಲು ದೇಹವು ಪರಿಶುದ್ಧಾತ್ಮನನ್ನು ಸ್ವೀಕರಿಸಿದಾಗಲೇ. ದೇಹವು ಆಗ ಕರ್ತನ ದೇಹವಾಗುವುದು ಯಾಕೆಂದರೆ ಆತ್ಮನ ನಿಯಮ ಒಳಮನುಷ್ಯನ ಮೇಲೆ ಆಳ್ವಿಕೆ ಮಾಡುತ್ತದೆ. ಈಗ ಒಳಮನುಷ್ಯನು ದೇವರಿಗೆ ವಿಧೇಯನಾಗಿರಬಹುದು.


**ಪ್ರಾಣ :**

ಎರಡನೆಯದಾಗಿ ಪ್ರಾಣವನ್ನು ಆತ್ಮದ ನಿಯಮದ ಕಡೆಗೆ ಹೊಸದಾಗಿಸಬೇಕು. ಅದು ಈಗ ಕ್ರಿಸ್ತನ ಮನಸ್ಸನ್ನು ಹೊಂದುವುದಕ್ಕಾಗಿ ಒಳಮನುಷ್ಯನನ್ನು ಆಳುತ್ತದೆ. ಪ್ರಾಣಕ್ಕೆ ಬೋಧಿಸುವುದು ಮತ್ತು ವಾಕ್ಯವನ್ನು ಪ್ರಕಟಮಾಡುವುದು ಒಳಗೆ ನೆಲೆಗೊಂಡಿರುವ ಪರಿಶುದ್ಧಾತ್ಮನ ಕೆಲಸ. ಸತ್ಯದ ಪ್ರಕಟಣೆಯನ್ನು ಪ್ರಾಣವು ಸ್ವೀಕರಿಸುತ್ತಲೇ ಅವನ ಮನಸ್ಸನ್ನು ಹೊಸದಾಗಿಸುತ್ತದೆ.


**ವಚನಗಳು ಮತ್ತು ವ್ಯಾಖ್ಯಾನಗಳು :**

ದೇವರು ಮನುಷ್ಯನನ್ನು ರಕ್ಷಿಸುವುದು ವ್ಯತಿರಿಕ್ತವಾದ ಕ್ರಮದಲ್ಲಿ. ಮೊದಲು ಪರಿಶುದ್ಧಾತ್ಮನು ದೇಹವನ್ನು ಪ್ರವೇಶಿಸಿದಾಗಿ ದೇಹವನ್ನು ಪಾಪದಿಂದ ಬಿಡುಗಡೆ ಮಾಡಲಾಗುತ್ತದೆ. ಒಳಮನುಷ್ಯನನ್ನು ಆಗ ಪಾಪದ ಶಕ್ತಿಯಿಂದ ಬಿಡುಗಡೆ ಮಾಡಲಾಗುತ್ತದೆ. ಎರಡನೆಯದಾಗಿ, ಒಳ್ಳೆ ಕೆಟ್ಟದರ ಬಗ್ಗೆ ಎಚ್ಚರವಾಗಿರುವ ಪ್ರಾಣವು ವಾಕ್ಯದ ಮೂಲಕ ಹೊಸದಾಗಬೇಕು. ಇದು ಪರಿಶುದ್ಧಾತ್ಮನಿಂದ ಆಗುವ ಕಾರ್ಯ ಹೀಗೆ ಸತ್ಯದ ಬಗ್ಗೆ ಎಚ್ಚರಿಕೆಯುಂಟಾಗುವುದು. ಮೂರನೆಯದಾಗಿ ಅವನ ಮನಸ್ಸಿನ ಆತ್ಮದಲ್ಲಿ ಪ್ರಾಣವು ಹೊಸದಾಗುವಾಗ, ಆತ್ಮದ ಶರೀರಭಾವವು ಬದಲಾಗಿ ದೈವೀಕ ಸ್ವಭಾವವನ್ನು ಹೊಂದುತ್ತದೆ.

1 ಪೇತ್ರ 2 : 24 "ನಾವು (ಒಳ ಮನುಷ್ಯ) ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಆತನು ಮರದ ಮೇಲೆ ನಮ್ಮ ಪಾಪಗಳನ್ನು ತನ್ನ ದೇಹದಲ್ಲಿ ಹೊತ್ತನು ; ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು (ಪಾಪದಿಂದ)"




ರೋಮ 8 : 5 "ಯಾಕೆಂದರೆ ಶರೀರವನ್ನು ಅನುಸರಿಸುವವರು ಅದಕ್ಕೆ ಸಂಬಂಧ ಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ, ಆತ್ಮನನ್ನನುಸರಿಸುವವರಾದರೋ ಆತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ."



**ಆತ್ಮನು :**


ಮೂರನೆಯದಾಗಿ ಆತ್ಮನ ದುಷ್ಪಸ್ವಭಾವವನ್ನು ದೈವಭಕ್ತಿಗೆ ಬದಲಾಯಿಸಬೇಕು. ಪರಿಶುದ್ಧಾತ್ಮನು ಆತ್ಮನ ಸ್ವಭಾವವನ್ನು ಬದಲಾಯಿಸುತ್ತಾನೆ. ಈ ಕಾರ್ಯವು ಮನಸ್ಸಿನ ನೂತನ ಪಡಿಸುವಿಕೆಯನ್ನು ಅನುಸರಿಸುತ್ತದೆ. **ನೆನಪಿನಲ್ಲಿಡು,** ಬದಲಾವಣೆಗೆ ಮುಂಚೆ ನಂಬಿಕೆ ಬರುತ್ತದೆ. ಮತ್ತು ಆತ್ಮನಲ್ಲಿ ನಂಬಿಕೆ ಹೆಚ್ಚಾದಂತೆಲ್ಲಾ ಆತ್ಮವು ಸತ್ಯವನ್ನು ನಿಜವೆಂದು ಒಪ್ಪಿಕೊಳ್ಳುತ್ತದೆ. ಆತ್ಮನ ಭಕ್ತಿಹೀನ ದುರಾಶೆಗಳನ್ನು ಸಾಯಿಸುವಾಗ ಅದು ಶ್ರಮೆಯನ್ನು ಅನುಭವಿಸುತ್ತದೆ.

ಒಬ್ಬ ಪಾಪಿಯು ಪಾಪ ಮಾಡುವುದರಿಂದಲೂ ಒಬ್ಬ ಭಕ್ತನು ಪಾಪ ಮಾಡದೇ ಇರುವುದರಿಂದಲೂ, ಎಲ್ಲಾ ಮೂರು ಅಂಗಗಳು ದೇಹ, ಪ್ರಾಣ ಮತ್ತು ಆತ್ಮಗಳು ರಕ್ಷಿಸಲ್ಪಡಬೇಕು. ದೇವರು ಕೊಟ್ಟ ರಕ್ಷಣೆಯ ಮಾದರಿ ಯೆಹೂದ್ಯರನ್ನು ಐಗುಪ್ತದಿಂದ ಬಿಡಿಸಿದಾಗ ಮತ್ತು ಅರಣ್ಯದ ಮೂಲಕ ಕಾನಾನಿಗೆ ನಡೆಸಿದ್ದರಲ್ಲಿ ಅದನ್ನು ನಾವು ದೃಷ್ಟಾಂತವಾಗಿ ಕಾಣಬಹುದು. ಇದೇ ರೀತಿಯಲ್ಲಿ ದೇವರು ಈ ದಿನಗಳಲ್ಲ ಒಬ್ಬ ಪಾಪಿಯನ್ನು ಶರೀರಾಧೀನ ಸ್ವಭಾವದಿಂದ ಬಿಡುಗಡೆ ಮಾಡುತ್ತಾನೆ. ಇದು ಆತ್ಮನ ಮೂಲಕ ಮತ್ತು ಕ್ರಿಸ್ತನೊಳಗೆ ಆಗುತ್ತದೆ.


**'ಶರೀರಭಾವದಲ್ಲಿ' (ಐಗುಪ್ತಕ್ಕೆ ಅನುಗುಣವಾಗಿದೆ)**

ದೇಹದಲ್ಲಿ ಪಾಪವಿರುವುದರಿಂದ ಆದಮನ ಸಂತತಿಯವರೆಲ್ಲರೂ ಶರೀರಭಾವದಲ್ಲಿ 'ಪಾಪಿಗಳೇ'

ನೋಡಿ ಕಲಿಯಿರಿ :




ರೋಮ 10 : 17 "ಕೇಳುವುದರಿಂದ ನಂಬಿಕೆಯುಂಟಾಗುತ್ತದೆ ; ದೇವರ ವಾಕ್ಯವನ್ನು ಕೇಳುವುದರಿಂದಲೇ"




1 ಯೋಹಾ 1:8 "ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ, ನಮ್ಮನ್ನು ನಾವೇ ಮೋಸಗೊಳಿಸಿಕೊಳ್ಳುತ್ತೇವೆ ಮತ್ತು ಸತ್ಯವು ನಮ್ಮಲ್ಲಿ ಇಲ್ಲ."
ಪ್ರಪಂಚವು ಪಾಪದ ಅಸ್ತಿತ್ವವನ್ನು ಒಪ್ಪಿಕೊಳ್ಳುವುದಿಲ್ಲ. ಹೇಗಾದರೂ ಸತ್ಯವೇನೆಂದರೆ, ಪ್ರತಿಯೊಬ್ಬರ ದೇಹದಲ್ಲಿ ಪಾಪವು ನೆಲೆಗೊಂಡಿದೆ.

1 ಯೋಹಾ 1:10 "ಆತನು ಲೋಕದಲ್ಲಿ ಇದ್ದನು: ಮತ್ತು ಲೋಕವು ಆತನಿಂದ ಉಂಟಾಯಿತು: ಮತ್ತು ಲೋಕವು ಆತನನ್ನು ಅರಿಯಲಿಲ್ಲ."

ಪ್ರಪಂಚವು ತಾವು ಪಾಪಿಗಳೆಂಬ ಸತ್ಯಾಂಶವನ್ನು ಒಪ್ಪಿಕೊಳ್ಳುವುದಿಲ್ಲ.

ಅವರು ಪಾಪಿಗಳಾಗಿರುವುದರಿಂದ ಅವರು ಸತತವಾಗಿ ನಿಯಮಗಳನ್ನು ಮಾಡುತ್ತಾರೆ. ಯಾಕೆಂದರೆ ತಮ್ಮನ್ನು ತಾವು ನಿಯಂತ್ರಣದಲ್ಲಿರಿಸಿಕೊಳ್ಳುವುದಕ್ಕಾಗಿ. ಹೇಗಾದರೂ ಅವರು ತಮ್ಮ ಸ್ವಂತ ನಿಯಮಗಳಿಗೆ ವಿಧೇಯರಾಗಿರಲಾರರು, ಮತ್ತು ದೇವರ ನಿಯಮಗಳಿಗೂ ವಿಧೇಯರಾಗಲಾರರು, ಯಾಕೆಂದರೆ ಅವರೆಲ್ಲರೂ ಪಾಪದ ನಿಯಮದ ಕೆಳಗೆ ಇದ್ದಾರೆ.

ಪಾಪದ ನಿಯಮದ ದೆಸೆಯಿಂದ ಪಾಪಿಗಳು ಸೈತಾನನ ರಾಜ್ಯದಲ್ಲಿದ್ದಾರೆ. ಮತ್ತು ಸೈತಾನನ ಮನಸ್ಸನ್ನೂ ಸ್ವಾಭವವನ್ನೂ ಹೊಂದಿದ್ದಾರೆ. ಭೂಮಿಯ ಮೇಲೆ ಸೈತಾನನ ಕೆಲಸಗಳು ಎಲ್ಲರೂ ನೋಡುವಂತೆ ಸ್ಪಷ್ಟವಾಗಿವೆ : ನೀವು ಅದನ್ನು ನೋಡದಿರಲು ಕುರುಡರಾಗಿರಬೇಕು. ಯಾಕೆಂದರೆ ಅವರಿಗೆ ಒಳ್ಳೆ ಕೆಟ್ಟದರ ತಿಳುವಳಿಕೆ ಇದೆ. ಅವರು ಒಳ್ಳೇದನ್ನು ಮಾಡಿ ಕೆಟ್ಟದನ್ನು ತಡೆಯಲು ಪ್ರಯತ್ನಿಸುತ್ತಾರೆ. ಆದರೆ ಅದು ಅವರನ್ನು ಪಾಪದ ನಿಯಮದಿಂದ ಬಿಡುಗಡೆ ಮಾಡಲು ಅಸಾಧ್ಯ.

1 ಯೊಹ 1 : 9 "ನಾವು ನಮ್ಮ ಪಾಪವನ್ನು ಅರಿಕೆ ಮಾಡಿದರೆ, ಆತನು ನಂಬಿಗಸ್ಥನೂ ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯಿಂದ ನಮ್ಮನ್ನು ಶುದ್ಧಿ ಮಾಡುವನು."


ದೇವರನ್ನು ನಂಬುವ ಪಾಪಿಯು ತಾನು ಪಾಪಿಯೆಂದು ಒಪ್ಪಿಕೊಳ್ಳುತ್ತಾನೆ. ಮತ್ತು ಯೇಸುವನ್ನು ಅಂಗೀಕರಿಸುತ್ತಾನೆ. ದೇವರು ಅವನ ಪಾಪಗಳನ್ನು ಕ್ಷಮಿಸುತ್ತಾನೆ. ಮತ್ತು ಅವನ ದೇಹದಲ್ಲಿರುವ ಪಾಪದಿಂದ ಬಿಡುಗಡೆ ಮಾಡುತ್ತಾನೆ. ಆಗಲೇ ಅವನಿಗೆ ಪವಿತ್ರಾತ್ಮನನ್ನು ಕೊಡುತ್ತಾನೆ.

ಒಬ್ಬ ಪಾಪಿಗೆ ಒಳ್ಳೆ ಕೆಟ್ಟದರ ಮನಸ್ಸಿದೆ ಮತ್ತು ಕಾಮಾಭಿಲಾಷೆಗಳು ಮತ್ತು ದುರಾಶೆಗಳಿರುವ ಒಂದು ಆತ್ಮ ಇದೆ. ಸ್ವಭಾವವು ತಿಳುವಳಿಕೆಗಿಂತ ಬಲವಾಗಿರುವುದರಿಂದ ಪಾಪಸ್ವಭಾವದ ಆತ್ಮ ಪ್ರಾಣದ ತರ್ಕದ ಮೇಲೆ ದೊರೆತನ ಮಾಡುತ್ತದೆ. ಆದುದರಿಂದ ಆತ್ಮನ ಕಾಮಾಭಿಲಾಷೆಗಳು ಮತ್ತು ದುರಾಶೆಗಳು ಜಯಹೊಂದುತ್ತವೆ. ಒಳ ಮನುಷ್ಯನೇ ಪಾಪಿಯಾಗಿರುವವನು. ಅವನ ಕೆಲವು ಪಾಪಗಳು ಅವನ ದೇಹದ ಮೂಲಕ ತೋರ್ಪಡಿಸುತ್ತವೆ. ಆದರೆ ಇನ್ನೂ ಕೆಲವು ಗುಪ್ತವಾಗಿಡಲ್ಪಟ್ಟಿವೆ.

**ದೇಹದ ರಕ್ಷಣೆ :**

ಯೆಹೂದ್ಯರು ಕೆಂಪು ಸಮುದ್ರವನ್ನು ದಾಟಿದಾಗ ಅವರು ಐಗುಪ್ತದಿಂದ ಮಾತ್ರ ಬಿಡುಗಡೆ ಹೊಂದಿದರು. ಆದುದರಿಂದಲೇ ಯೇಸು ನಿಕೋದೇಮನಿಗೆ ಹೇಳಿದ್ದು, ಯೊಹಾ 3:5 "...ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದೇ ಹೋದರೆ ಅವನು ದೇವರ ರಾಜ್ಯವನ್ನು ಸೇರಲಾರನು." ಯೇಸು ಯತಾರ್ಥವಾಗಿ ಹೇಳುತ್ತಿರುವುದೇನೆಂದರೆ, ಹೊರಮನುಷ್ಯನು ಹಾಗೆಯೇ ಒಳಮನುಷ್ಯನು ರಕ್ಷಿಸಲ್ಪಡಬೇಕು. ದೇಹವು ಪಾಪದಿಂದ ಬಿಡುಗಡೆಹೊಂದದಿದ್ದರೆ, ಒಳ ಮನುಷ್ಯನು ರಕ್ಷಣೆ ಹೊಂದಲಾರನು.

ನೋಡಿ ಕಲಿಯಿರಿ !





ದೇಹದಲ್ಲಿ ಪವಿತ್ರಾತ್ಮನು ಪಾಪದ ಬದಾಲಗಿ ಬರುವಾಗ ವಿಶ್ವಾಸಿಯು ನೀರಿನಿಂದ ಹುಟ್ಟಿದ್ದಾನೆ. ಅವನು ತಿರಿಗಿ ಹುಟ್ಟಿದ್ದಾನೆ, ಯಾಕೆಂದರೆ ಅವನ ಹೊರ ಮನುಷ್ಯನ ಸ್ವಭಾವವು ಪವಿತ್ರಾತ್ಮನ ನೆಲೆಸುವಿಕೆಯಿಂದ ಬಲದಾಗಿಸಿದೆ. ಒಳ ಮನುಷ್ಯನು ಆಗ ಆತ್ಮನ ನಿಯಮದ ಕೆಳಗೆ ಇದ್ದಾನೆ.

ಯೆಹೂದ್ಯರು ಕೂಡ ಕೆಂಪು ಸಮುದ್ರವನ್ನು ದಾಟುವಾಗ 'ನೀರಿನಿಂದ ಹುಟ್ಟಿದರು'. ಫರೋಹನನ ಆಜ್ಞೆಯಿಂದ ಅವರು ಬಿಡುಗಡೆ ಹೊಂದಿದ ಮೇಲೆ ಅವರು ದೇವರ ಆಜ್ಞೆಯ ಕೆಳಗೆ ಬಂದರು.

**ಆತ್ಮನಲ್ಲಿ (ಸಿನ್ ಅರಣ್ಯಕ್ಕೆ ಅನುಗುಣವಾಗಿದೆ) :**

ಹಳೆಯ ಶರೀರ ಸ್ವಭಾವದಲ್ಲಿದ್ದು, ಬಿಡುಗಡೆ ಹೊಂದಿದ ಒಳ ಮನುಷ್ಯನು, ಆತ್ಮನಲ್ಲಿ ನೂತನ ಜೀವವನ್ನು ಜೀವಿಸಬೇಕು.

ಕೊಲೋ 2 : 11 – 13 "ನೀವು ಆತನಲ್ಲಿ (ಯೇಸು) ಸುನ್ನತಿಯನ್ನು ಹೊಂದಿದ್ದೀರಿ ; ಆ ಸುನ್ನತಿಯು ಕೈಯಿಂದ ಮಾಡಿದಲ್ಲ ; ಇದು ಕ್ರಿಸ್ತನಿಂದಾದ ಸುನ್ನತಿಯಾಗಿದ್ದು, ಪಾಪದ ಶರೀರವನ್ನು ವಿಸರ್ಜಿಸುವುದೇ ಬಾಪ್ತಿಸ್ಮದಲ್ಲಿ ಆತನೊಂದಿಗೆ ಹೂಣಲ್ಪಟ್ಟು, ಆತನನ್ನು ಸತ್ತವರೊಳಗಿನಿಂದ ಎಬ್ಬಿಸಿದ ದೇವರ ಕಾರ್ಯದಲ್ಲಿ ನಂಬಿಕೆ ಯಿಟ್ಟಿರುವುದರಿಂದ ನೀವು (ಒಳ ಮನುಷ್ಯ) ಸಹಾ ಅದರಲ್ಲಿ (ಬಾಪ್ತಿಸ್ಮದಲ್ಲಿ) ಎಬ್ಬಿಸಲ್ಪಟ್ಟಿದ್ದೀರಿ."




ಅಪೋ 22 : 16 "ಈಗ ನೀನು ತಡಮಾಡುವುದು ಯಾಕೆ ? ಎದ್ದು ಬಾಪ್ತಿಸ್ಮ ಮಾಡಿಸಿಕೊಂಡು, ಕರ್ತನ ಹೆಸರನ್ನು ಹೇಳಿಕೊಳ್ಳುವವನಾಗಿ ನಿನ್ನ ಪಾಪಗಳನ್ನು ತೊಳೆದುಕೋ ಎಂದು ಹೇಳಿದನು."


ಒಂದು ದೇಶದ ನಿವಾಸಿಗಳು ಬದಲಾವಣೆ ಹೊಂದಬೇಕಾದರೆ, ಅದರ ರಾಜ್ಯದ ವ್ಯವಸ್ಥೆಯು (ನ್ಯಾಯ ಪ್ರಮಾಣ) ಬದಲಾಗಬೇಕು.

ದೇವರ ನ್ಯಾಯ ಪ್ರಮಾಣವು ಮೋಷೆಯ ಮೂಲಕ ಸಿನ್ ಅರಣ್ಯದಲ್ಲಿ ಕೊಡಲ್ಪಟ್ಟಿತು.

1 ಪೇತ್ರ 4 : 17, 18 "ಯಾಕೆಂದರೆ ದೇವರ ಮನೆಯಲ್ಲಿ ಪ್ರಾರಂಭವಾಗತಕ್ಕ ನ್ಯಾಯ ತೀರ್ಪಿನ ಸಮಯವು ಬಂದಿದೆ ; ಅದು ಮೊದಲು ನಮ್ಮಲ್ಲಿ (ದೇವರ ಮಕ್ಕಳಲ್ಲಿ) ಪ್ರಾರಂಭವಾದರೆ, ದೇವರ ಸುವಾರ್ತೆಗೆ ಅವಿಧೇಯರಾದವರ ಅಂತ್ಯವು ಏನಾಗಿರುವುದು ? ನೀತಿವಂತನೇ (ಪಾಪ ಮಾಡದ ಮಕ್ಕಳು) ರಕ್ಷಣೆ ಹೊಂದುವುದು ಕಷ್ಟವಾದರೆ
ಭಕ್ತಿಹೀನನೂ (ಪಾಪದಲ್ಲಿ ಮುಂದುವರೆಯುವ ದೇವರ ಮಕ್ಕಳು) ಪಾಪಿಷ್ಟನು (ಅವಿಶ್ವಾಸಿ) ನಿಲ್ಲುವುದು ಎಲ್ಲಿ? "

ಒಳ ಮನುಷ್ಯನು ಪರಿಶುದ್ಧಾತ್ಮದಿಂದ ಬದುಕುವವನಾದರೂ ಮತ್ತು ಅವನ ಪೂರ್ವ ಕಾಲದ ಪಾಪಗಳಿಗೆ ಕ್ಷಮಾಪಣೆ ಹೊಂದಿದ್ದರೂ ಪ್ರಾಣವು ಇನ್ನೂ ಆತ್ಮನ ಹತೋಟಿಯಲ್ಲಿ ಇಲ್ಲ. ಅವನು ಅವನ ಹಳೆಯ ಪಾಪದ ಜೀವಕ್ಕನುಗುಣವಾಗಿ ಜೀವಿಸಲು ಪ್ರಯತ್ನಿಸುತ್ತಾನೆ. ಅಂದರೆ ಅವನ ಆತ್ಮದ ಪಾಪದ ಸ್ವಭಾವಕ್ಕನುಗುಣವಾಗಿ. ಅದು ಶರೀರಾಧೀನವಾಗಿ ಮಾಡಲ್ಪಟ್ಟಿತ್ತು. ಈಗ ಒಳಮನುಷ್ಯನು ಆತ್ಮನಲ್ಲಿರುವುದರಿಂದ ಪ್ರಾಣವು ಎಲ್ಲಾ ಶಾಸ್ತ್ರಗಳನ್ನು ಮೀರಿ, ನಡೆದಿದ್ದಾನೆಂದು ಅರ್ಥ ಮಾಡಿಕೊಳ್ಳಬೇಕು.

ನೋಡಿ ಕಲಿಯಿರಿ !





**ನೂತನ ಮನಸ್ಸು :**

ಹೊಸ ಒಡಂಬಡಿಕೆಯ ವಾಕ್ಯಗಳು ಆತ್ಮದ ನಿಯಮವನ್ನು ಪ್ರಕಟಿಸಿವೆ. ಹೇಗಾದರೂ 'ಒಳ್ಳೇ ಕೆಟ್ಟದರ' ತಿಳುವಳಿಕೆಯಿಂದ ತುಂಬಿದ ಮನಸ್ಸು, ಶರೀರಾಧೀನದ ಮನಸ್ಸು. ಪವಿತ್ರಾತ್ಮನು ಜ್ಞಾನ ಮತ್ತು ತಿಳುವಳಿಕೆಯನ್ನು ಕೊಡದಿದ್ದರೆ, ಪ್ರಾಣವು ಶಾಸ್ತ್ರಗಳನ್ನು ಅರ್ಥ ಮಾಡಿಕೊಳ್ಳಲಾರದು. ಯಾಕೆಂದರೆ, ಶಾಸ್ತ್ರಗಳನ್ನೂ ಆತ್ಮೀಕವಾಗಿ ಅರ್ಥಮಾಡಿಕೊಳ್ಳಬೇಕು.

ಪ್ರಾಣವು ಸತ್ಯದ ತಿಳುವಳಿಕೆಯನ್ನು ಹೊಂದಿದ ಮೇಲೆ ಶರೀರಾಧೀನ ಮನಸ್ಸನ್ನು ನೂತನಗೊಳಿಸಲಾಗುತ್ತದೆ. ಮತ್ತು ಆತ್ಮೀಕವಾಗುತ್ತದೆ. ಇದು ಶರೀರಾಧೀನ ಮನಸ್ಸನ್ನು ಉತ್ತಮಗೊಳಿಸುವುದಲ್ಲ, ಅಥವಾ ವಾಕ್ಯವನ್ನು ಕಂಠಪಾಟ ಮಾಡುವುದಲ್ಲ. ಆದರೆ, ಸತ್ಯದ ಪ್ರಜ್ಞೆಯ ನೂತನ ಸ್ಥಾನ. ಇದನ್ನು ಪವಿತ್ರಾತ್ಮನ ಅಭಿಷೇಕದ ಮೂಲಕ ಹೊಂದಬಹುದು. ಈ ನೂತನ ಪ್ರಜ್ಞೆಯೇ ಕ್ರಿಸ್ತನ ಮನಸ್ಸು. ಇದು ಶರೀರಾಧೀನ ಮನಸ್ಸನ್ನೂ ಮತ್ತು ಆತ್ಮೀಯ ಸಂಗತಿಗಳನ್ನೂ ಬೇರೆಬೇರೆಯಾಗಿ ಅರ್ಥ ಮಾಡಿಕೊಳ್ಳಬಲ್ಲದು.

ರೋಮ 6:23 "ಪಾಪದ ಸಂಬಳ ಮರಣ : ಆದರೆ ದೇವರ ಉಚಿತಾರ್ಥ ವರವೋ ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿರುವ ನಿತ್ಯ ಜೀವ"

ರೋಮ 8:6 "ಆದರೆ ಶರೀರಕ್ಕನುಸಾರವಾದ ಮನಸ್ಸು ಮರಣ ; ಆತ್ಮೀಕವಾದ ಮನಸ್ಸು ಜೀವವು ಸಮಾಧಾನವಾಗಿದೆ."




1 ಕೊರಿ 2:13 "ಇವುಗಳನ್ನು ಮನುಷ್ಯ ಜ್ಞಾನವು (ಶರೀರಾಧೀನ ಸ್ವಭಾವ) ಕಲಿಸಿದ ಮಾತುಗಳಿಂದ ಹೇಳದೆ, ಪರಿಶುದ್ಧಾತ್ಮನು ಕಲಿಸಿಕೊಟ್ಟ ಮಾತುಗಳಿಂದ ಹೇಳಿ, ಆತ್ಮ ಸಂಬಂಧವಾದವುಗಳನ್ನು ಆತ್ಮೀಕವಾದವುಗಳೊಂದಿಗೆ ಹೋಲಿಸುತ್ತೇವೆ."

ರೋಮ 6:22 "ಈಗಲಾದರೋ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ, ದೇವರಿಗೆ ದಾಸರಾದ್ದರಿಂದ ಪರಿಶುದ್ಧತೆಯೇ ನಿಮಗೆ ಫಲ ; ಅದರ ಅಂತ್ಯವು ನಿತ್ಯ ಜೀವವೇ"
ಪರಿಶುದ್ಧಾತ್ಮವು, ಆತ್ಮವು ಪರಿಶುದ್ಧನಾಗಲು (ಅಧೀನನಾಗಲು) ಸಹಾಯ ಮಾಡುತ್ತದೆ.

ಎಫೆ 1: 17,18 ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ಪ್ರಭಾವ ಪೂರ್ಣನಾದ ತಂದೆಯೂ ಆಗಿರುವಾತನು, ತನ್ನ ವಿಷಯವಾದ ತಿಳುವಳಿಕೆಗನುಸಾರವಾಗಿ, ಜ್ಞಾನ ಪ್ರಕಟಣೆಗಳ ಆತ್ಮವನ್ನು ನಿಮಗೆ ಅನುಗ್ರಹಿಸುವಂತೆಯೂ ಆತನು ನಿಮ್ಮ ಮನೋನೇತ್ರವನ್ನು ಬೆಳಗಿಸಿ, ಆತನ ಕರೆಯುವಿಕೆಯ ನಿರೀಕ್ಷೆಯು ಎಂಥದೆಂಬುದನ್ನೂ ಪರಿಶುದ್ಧರಲ್ಲಿರುವ ಆತನ ಸ್ವಾಸ್ತ್ಯದ ಮಹಿಮಾತಿಶಯವು ಎಂತದೆಬುದನ್ನೂ ..."

ಇಬ್ರಿ 8:10 "...ನಾನು ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವುದು, ಅದೇನೆಂದರೆ, ನನ್ನ ಆಜ್ಞೆಗಳನ್ನು (ದೈವೀಕ ತತ್ವಗಳು) ಅವರ ಮನಸ್ಸಿನಲ್ಲಿ (ಪ್ರಾಣ)ಇಡುವೆನು ; ಅವರ ಹೃದಯಗಳಲ್ಲಿ (ಆತ್ಮ) ಅವುಗಳನ್ನು ಬರೆಯುವೆನು ; ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಜನರಾಗಿರುವರು."

**ಗಮನಿಸು :** ಈ ರೀತಿಯಾಗಿ ಪ್ರಾಣವು ಆತ್ಮನ ತಲೆಯಾಗಿ ಪುನಃ ಸ್ಥಾಪನೆ ಮಾಡಲಾಗುತ್ತದೆ.

1 ಯೋಹಾ 2:20 "ಆದರೆ ನೀವು ಪವಿತ್ರಾತ್ಮನಾಗಿರುವಾತನಿಂದ ಅಭಿಷೇಕವನ್ನು ಹೊಂದಿದವರಾಗಿದ್ದು, ಎಲ್ಲವನ್ನೂ ತಿಳಿದವರಾಗಿದ್ದೀರಿ (ಪ್ರಾಣ)."

ಪವಿತ್ರಾತ್ಮನ ಅಭಿಷೇಕವು ಆತ್ಮನು ಪ್ರಾಣಕ್ಕೆ ಅಧೀನನಾಗುವ ಚಿತ್ತವನ್ನು ಕೂಡಾ ಕೊಡುತ್ತದೆ. ಆತ್ಮನು ಪ್ರಾಣಕ್ಕೆ ಅಧೀನನಾದಾಗ ಅದು ಪವಿತ್ರವಾಗುತ್ತದೆ ಮತ್ತು ಕೊನೆಗೆ ಪ್ರಾಣಕ್ಕೆ ಸಂಬಂಧಿಸಿದಂತೆ ತನ್ನ ಸ್ಥಾನವನ್ನು ದೇವರ ಉದ್ದೇಶದಂತೆಯೇ ಕಂಡುಕೊಳ್ಳುತ್ತದೆ.

ಪ್ರಾಣವನ್ನು ನೂತನಗೊಳಿಸಿ ಅದು ಆತ್ಮನಿಗೆ ತಲೆಯಾದಾಗ ರಕ್ಷಿಸಲ್ಪಡುತ್ತದೆ. ಹೇಗಾದರೂ ಪ್ರಾಣವು ಈಗಲೂ ಆತ್ಮನು ಭಕ್ತಿ ಹೀನತೆಯಿಂದ ತಡೆಗಟ್ಟುವುದನ್ನು ಅನುಭವಿಸುತ್ತದೆ. ಆತ್ಮದ ಸ್ವಭಾವವು ಎಲ್ಲಿಯವರೆಗೆ ಬದಲಾಗಲಿಲ್ಲವೋ ಅಲ್ಲಿಯವರೆಗೆ ಪ್ರಾಣವು ಪಾಪದಿಂದ ವಿಶ್ರಾಂತಿಯನ್ನು ಅನುಭವಿಸುವುದಿಲ್ಲ.

ವಾಕ್ಯದ ಅರ್ಥಗೊತ್ತಿರುವ ಪ್ರಾಣವು ದೇವರ ಚಿತ್ತವನ್ನರಿತಿದೆ. ದೇವರಿಗೆ ವಿಧೇಯನಾಗಿರುವುದರಿಂದ ಪ್ರಾಣವು ಆತ್ಮನ ಭಕ್ತಿಹೀನತೆ ಮತ್ತು ದುರಾಶೆಗಳನ್ನು ನಿರಾಕರಿಸಬೇಕು. ಇದು ಬಹು ಶ್ರಮೆಯನ್ನುಂಟು ಮಾಡುತ್ತದೆ. ಈ ಶ್ರಮೆಯು ಆತ್ಮನಲ್ಲಿ ನಂಬಿಕೆ ಹುಟ್ಟುವವರೆಗೆ ಮುಂದುವರೆಯುತ್ತದೆ, ಪರಿಶುದ್ಧಾತ್ಮನು ಆಗ ಅಭಿಷೇಕವನ್ನು ಬಿಡುಗಡೆ ಮಾಡುತ್ತಾನೆ. ಇದು ಆತ್ಮನ ಭಕ್ತಿಹೀನತೆಯನ್ನು ದೈವ ಭಕ್ತಿಗೆ ಬದಲಾಯಿಸುತ್ತದೆ. ಹೇಗಾದರೂ ತನ್ನ ಮನಸ್ಸಿನಲ್ಲಿ ಶ್ರಮೆಯಿಂದಾಗಿ ಮೂರ್ಛೆಹೋದರೆ ಮತ್ತು ಹಿಂದಕ್ಕೆ ಸರಿದರೆ, ತಂದೆಗೆ ಆ ಪ್ರಾಣದ ಮೇಲೆ ಸಂತೋಷವಿಲ್ಲ. ಯಹೂದ್ಯರು ಅರಣ್ಯದಲ್ಲಿ ಯೋರ್ದಾನ್ ಹೊಳೆಯ ಹತ್ತಿರ ಹಿಂಜರಿದಾಗ ಇದೇ ಅಲ್ಲಿ ಆದದ್ದು.

ಆತ್ಮನ ಭಕ್ತಿಹೀನತೆ ಹೋಗಿ ದೈವ ಭಕ್ತಿಗೆ ತಿರುಗಬೇಕಾದರೆ, ಒಂದೇ ಮಾರ್ಗ. ಅದು ಪರಿಶುದ್ಧಾತ್ಮನ ಬಾಪ್ತಿಸ್ಮದಿಂದ.

**ಆತ್ಮನ ರಕ್ಷಣೆ :**

ಯಹೂಧ್ಯರು ಯೋರ್ದಾನ್ ಹೊಳೆಯ ಮೂಲಕ ಕಾನಾನ್ ಪ್ರವೇಶ ಮಾಡಿದ್ದರಿಂದಲೇ ಯೇಸು ನಿಕೋದೇಮನಿಗೆ ಹೇಳಿದ್ದು. ಯೊಹ 3 : 5 "ಒಬ್ಬ ಮನುಷ್ಯನು ನೀರಿನಿಂದಲೂ ಆತ್ಮದಿಂದಲೂ ಹುಟ್ಟದೆ ಹೋದರೆ ಅವನು ದೇವರ ರಾಜ್ಯವನ್ನು ಪ್ರವೇಶಿಸಲಾರ." ದೇಹ ಮತ್ತು ಪ್ರಾಣಗಳು ರಕ್ಷಿಸಲ್ಪಟ್ಟಿರುವುದರಿಂದ, ಈಗ ಆತ್ಮನು ತನ್ನ ಭಕ್ತಿ ಹೀನತೆಯಿಂದ ರಕ್ಷಿಸಲ್ಪಡಬೇಕಾದರೆ, ಅದು ಪವಿತ್ರಾತ್ಮನು ಮಾಡುವ ಕಾರ್ಯ.

ಜ್ಞಾನೋ 16:32 "ದೀರ್ಘಶಾಂತನು ಶೂರರಿಗಿಂತಲೂ ತನ್ನ (ಪ್ರಾಣ) ಮನಸ್ಸನ್ನು ಆಳುವವನು ; ಪಟ್ಟಣವನ್ನು ಗೆದ್ದವನಿಗಿಂತಲೂ ಉತ್ತಮನು."

ತೀತ 2:11,12 "ಯಾಕೆಂದರೆ ಎಲ್ಲಾ ಮನುಷ್ಯರಿಗೆ ರಕ್ಷಣೆಯನ್ನುಂಟು ಮಾಡುವ ದೇವರ ಕೃಪೆಯು ಪ್ರತ್ಯಕ್ಷವಾಯಿತು. ನಾವು ಭಕ್ತಿ ಹೀನತೆಯನ್ನೂ ಲೋಕದ ಆಶೆಗಳನ್ನೂ ತೊರೆದು ಈಗಿನ ಲೋಕದಲ್ಲಿ ಸ್ವಸ್ತಚಿತ್ತರಾಗಿಯೂ ಬದುಕಬೇಕೆಂದು (ಆ ಕೃಪೆಯು) ನನಗೆ ಬೋಧಿಸುತ್ತದೆ."

ಮಾರ್ಕ 7:21,22 "ಯಾಕೆಂದರೆ ಮನುಷ್ಯರ ಹೃದಯ (ಆತ್ಮ) ದೊಳಗಿನಿಂದ ಹೊರಡುವಂತದ್ದು ಅಂದರೆ ಕೆಟ್ಟ ಆಲೋಚನೆಗಳು, ವ್ಯಭಿಚಾರಗಳು, ಹಾದರಗಳು, ಕೊಲೆಗಳು, ಕಳ್ಳತನಗಳು, ದುರಾಶೆ, ಕೆಟ್ಟತನ, ಮೋಸ, ಕಾಮಾಭಿಲಾಷೆ, ಕೆಟ್ಟ ದೃಷ್ಟಿ, ದೇವದೂಷಣೆ, ಗರ್ವ, ಬುದ್ದಿಗೇಡಿತನ."

ಎಫೆ 3:16,17 "ನಿಮಗೆ ತನ್ನ ಮಹಿಮೆಯ ಐಶ್ವರ್ಯಕ್ಕನುಸಾರವಾಗಿ ಆತನ ಆತ್ಮದ ಮೂಲಕ ಅಂತರ್ಯದಲ್ಲಿ ವಿಶೇಷ ಬಲವನ್ನು ಅನುಗ್ರಹಿಸುವ ಹಾಗೆಯೂ ಕ್ರಿಸ್ತನು (ಆತನ ಅಭಿಷೇಕ) ನಿಮ್ಮ ಹೃದಯ(ಆತ್ಮ)ಗಳಲ್ಲಿ ನಂಬಿಕೆಯ ಮೂಲಕ ವಾಸಿಸುವಂತೆಯೂ ನೀವು ನೀತಿಯಲ್ಲಿ ಬೇರೂರಿ ನೆಲೆಗೊಂಡು, ನಿಂತು, ..."
ಇಬ್ರಿ 12:11 "ಯಾವ ಶಿಕ್ಷೆಯಾದರೂ ತಾತ್ಕಾಲಕ್ಕೆ ಸಂತೋಷಕರವಾಗಿ ತೋಚದೆ ಕ್ರೂರವಾಗಿ ತೋಚುತ್ತದೆ; ಆದರೂ ತರುವಾಯ ಅದು ಶಿಕ್ಷೆಯನ್ನು ಹೊಂದಿದವರಿಗೆ ಸಾಮಾಧಾನವುಳ್ಳ ನೀತಿಯ ಫಲವನ್ನು (ದೇವಭಕ್ತಿ) ಕೊಡುತ್ತದೆ."

ಇಬ್ರಿ 3 : 7–11 "ಆದ್ದರಿಂದ ಪವಿತ್ರಾತ್ಮನು ಹೇಳುವ ಪ್ರಕಾರ ನೀವು ಈದಿನ ದೇವರ ಶಬ್ದಕ್ಕೆ ಕಿವಿಕೊಟ್ಟರೆ ಅರಣ್ಯದಲ್ಲಿದ್ದಾಗ ಶೋಧನೆಯ ದಿನದಲ್ಲಿ ದೇವರಿಗೆ ಕೋಪವನ್ನೆಬ್ಬಿಸದಂತೆ ನಿಮ್ಮ ಹೃದಯಗಳನ್ನು (ಆತ್ಮ) ಕಠಿಣ ಮಾಡಿಕೊಳ್ಳಬೇಡಿರಿ. ನಿಮ್ಮ ಪಿತೃಗಳು ನನ್ನನ್ನು ಶೋಧಿಸಿದರು, ನನ್ನನ್ನು ಪರೀಕ್ಷಿಸಿದರು ಮತ್ತು 40 ವರ್ಷ ನನ್ನ ಕಾರ್ಯಗಳನ್ನು ನೋಡಿದರು." ಆದ್ದರಿಂದ ನಾನು ಆ ಸಂತತಿಯವರ ಮೇಲೆ ಬಹಳ ಸಂತಾಪಗೊಂಡು – ಅವರು ಯಾವಾಗಲೂ ಹೃದಯದಲ್ಲಿ (ಆತ್ಮ) ತಪ್ಪಿಹೋಗುತ್ತಾರೆ ಎಂದು ಹೇಳಿದೆನು ಮತ್ತು ಅವರು (ಪ್ರಾಣ) ನನ್ನ ಮಾರ್ಗಗಳನ್ನು ತಿಳಿದುಕೊಳ್ಳಲಿಲ್ಲ. ಹೀಗಿರಲು ಅವರು ನನ್ನ ವಿಶ್ರಾಂತಿಯಲ್ಲಿ (ಕಾನಾನಿನಲ್ಲಿ) ಸೇರುವುದೇ ಇಲ್ಲ ಎಂದು, ನನ್ನ ಕೋಪದಲ್ಲಿ ಪ್ರಮಾಣಮಾಡಿದೆನು.

ಇಬ್ರಿ 4:1 "ಹೀಗಿರಲಾಗಿ ಆತನ ವಿಶ್ರಾಂತಿಯಲ್ಲಿ ಸೇರುವೆವೆಂಬ ವಾಗ್ದಾನವು ಇನ್ನೂ ಇರುವಲ್ಲಿ ನಿಮ್ಮೊಳಗೆ ಯಾವನಾದರೂ ಅದರಿಂದ ತಪ್ಪುವವನಾದಾನೋ ಎಂದು ನಾವು ಭಯಪಡೋಣ."
1 ಕೊರಿ 10:5,6 "ಆದರೆ ಅವರೊಳಗೆ (ಇಸ್ರಾಯೇಲ) ಅನೇಕರ ವಿಷಯದಲ್ಲಿ ದೇವರು ಸಂತೋಷಿಸಲಿಲ್ಲ. ಯಾಕೆಂದರೆ ಅವರು ಅಡವಿಯೊಳಗೆ ಸಂಹರಿಸಲ್ಪಟ್ಟರು. ಅವರು ಕೆಟ್ಟ ವಿಷಯಗಳನ್ನು ಆಶಿಸಿದಂತೆ ನಾವು ಆಶಿಸಬಾರದೆಂಬುದಕ್ಕಾಗಿ ಈ ಸಂಗತಿಗಳು ನಿಮಗೆ ನಿದರ್ಶನಗಳಾಗಿವೆ."

ಯೆಶ 10 : 27 "ಆದಿನದಲ್ಲಿ ಅವರು ಹೊರಿಸಿದ ಹೊರೆಯು ನಿಮ್ಮ ಬೆನ್ನಿನಿಂದಲೂ ಹೂಡಿದ ನೊಗವು ನಿಮ್ಮ ಕುತ್ತಿಗೆಯಿಂದಲೂ (ಪ್ರಾಣ) ತೊಲಗುವುದು ಮತ್ತು ನೀವು ಅಭಿಷಿಕ್ತರಾದ (ಪರಿಶುದ್ಧಾತ್ಮ) ಕಾರಣ ನೊಗವು (ಆತ್ಮನ ದೊರೆತನ) ನಾಶವಾಗಿ ಹೋಗುವುದು."
ಜೆಕ 4:6 "ನಾನು ಇಲ್ಲ, ನನ್ನ ಒಡೆಯನೇ ಅಂದೆನು. ಆಗ ಅವನು ಉತ್ತರ ಕೊಟ್ಟು ನನಗೆ ಹೇಳಿದ್ದೇನಂದರೆ –ಜೆರುಬ್ಬಾ ಬೆಲನಿಗೆ ಕರ್ತನ ವಾಕ್ಯವು ಇದೇ–

( ಯೋರ್ದಾನ್ )



# ಆತ್ಮನ ರಕ್ಷಣೆ

## ಆತ್ಮನ ಬದಲಾವಣೆಯ ಸಮಯ


ಆತ್ಮದಲ್ಲಿ ಹುಟ್ಟುವುದು

ಆತ್ಮನು ಸ್ವಾಭವದಲ್ಲಿ ದೈವ ಭಕ್ತನಾಗುವುದು ಪರಿಶುದ್ಧಾತ್ಮನ ಅಭಿಶೇಕದಿಂದಲೇ. ಅಭಿಷೇಕವೇ ಆತನ ಭಕ್ತಿಹೀನತೆಯನ್ನು ತೆಗೆದುಹಾಕುವುದು. ಆತ್ಮನ ಭಕ್ತಿಹೀನ ಸ್ವಭಾವವನ್ನು ಸಾಯಿಸಿದಂತೆಲ್ಲಾ ಆತ್ಮನು ಪರಿಶುದ್ಧಾತ್ಮನ ದೈವೀಕ ಸ್ವಭಾವದಲ್ಲಿ ಪಾಲುಗಾರನಾಗುತ್ತದೆ. ಒಳ ಮನುಷ್ಯನು ಆತ್ಮನಿಂದ ಹುಟ್ಟಿರುವವನು ಆಗುವುದು ಆತ್ಮವು ದೈವಭಕ್ತಿಯ ಸ್ವಭಾವದವನಾಗುವಾಗ. ಆತ್ಮನು ದೈವ ಭಕ್ತನ ಸ್ವಭಾವದವನಾದ ಕೂಡಲೇ, ವಿಶ್ವಾಸಿಗೆ ಕ್ರಿಸ್ತನ ಆತ್ಮ ಲಭಿಸಿದೆ.


ಆತ್ಮನಲ್ಲಿ ಹುಟ್ಟುವುದು, ಎರಡನೇ ಸಾರಿ ಸುನ್ನತಿ ಹೊಂದಿದ ಯಹೂದ್ಯರಿಗೆ ಅನುಗುಣವಾಗುತ್ತದೆ. ಇದು ಯೋರ್ದಾನ್ ಹೊಳೆಯನ್ನು ಅವರು ದಾಟಿದಾಗ ನಡೆದ ಸಂಗತಿ. ಆ ದಿವಸದಲ್ಲಿ ದೇವರು ಅವರ ಮೇಲಿನ ಐಗುಪ್ತದ ಪ್ರಭಾವವನ್ನು ತೆಗೆದುಹಾಕಿದನು. ಆತ್ಮನ ಬಾಪ್ತಿಸ್ಮ ಎರಡನೆಯ ಸುನ್ನತಿಯಾಗಿದ್ದ, ಒಳ ಮನುಷ್ಯನ ಆತ್ಮನ ಮೇಲಿದ್ದ ಪಾಪದ ಪ್ರಭಾವವನ್ನು ತೆಗೆದುಹಾಕುತ್ತದೆ.

### ಕ್ರಿಸ್ತನಲ್ಲಿ

ಕ್ರಿಸ್ತನಲ್ಲಿ ಅಂದರೆ ಒಳ ಮನುಷ್ಯನಿಗೆ ಈಗ ಕ್ರಿಸ್ತನ ಮನಸ್ಸೂ ಮತ್ತು ಆತ್ಮನೂ ಇದೆಯೆಂದರ್ಥ. ಇಂತಹ ಒಳಮನುಷ್ಯನು ಪಾಪ ಮಾಡದ ದೇವರ ಮಗನು. ಮತ್ತು ಇನ್ನು ಮೇಲೆ ಅವನು ಆತ್ಮನಲ್ಲಿ ಈಗಲೂ ಪಾಪ ಮಾಡುವ ಮಗುವಲ್ಲ. ಇದು ಯೆಹೂದ್ಯರಿಗೆ ಅನುಗುಣವಾಗುತ್ತದೆ. ಅವರು ಸಿನ ಅರಣ್ಯದಲ್ಲಿ ಇನ್ನು ಮೇಲೆ ಇಲ್ಲ. ಆದರೆ ಪವಿತ್ರ ದೇಶದಲ್ಲಿದ್ದಾರೆ.




ಅಧಿಕಬಲದಿಂದಲ್ಲ, ಶಕ್ತಿಯಿಂದಲ್ಲ, ನನ್ನ ಆತ್ಮದಿಂದಲೇ ಎಂದು ಸೈನ್ಯಗಳ ಕರ್ತನು ಹೇಳುತ್ತಾನೆ.
ರೋಮ 8 : 9 "ನೀವಾದರೋ ನಿಮ್ಮಲ್ಲಿ ದೇವರಾತ್ಮನು ವಾಸವಾಗಿರುವುದಾದರೇ, ಶರೀರಾಧೀನರಲ್ಲ. ಆತ್ಮನಿಗೆ ಅಧೀನನಾಗಿದ್ದೀರಿ. ಯಾವನಿಗ[illegible] ಕ್ರಿಸ್ತನ ಆತ್ಮನು ಇಲ್ಲದಿದ್ದರೆ, ಅವನು ಕ್ರಿಸ್ತನವನಲ್ಲ."




2 ಪೇತ್ರ 1 : 3, 4 "ತನ್ನ ಮಹಿಮೆಗಾಗಿಯೂ (ಪವಿತ್ರಾತ್ಮ) ಗುಣಾತಿಶಯಕ್ಕಾಗಿಯೂ ನಮ್ಮನ್ನು ಕರೆದಾತನ ವಿಷಯವಾದ ಪರಿಜ್ಞಾನದ ಮೂಲಕವಾಗಿ ಆತನ ದೈವ ಶಕ್ತಿಯು ಜೀವಕ್ಕೂ, ಭಕ್ತಿಗೂ ಬೇಕಾದದ್ದೆಲ್ಲವುಗಳನ್ನು ನಮಗೆ ದಯಪಾಲಿಸಿತು. ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು, ದೈವ ಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂದು, ಆತನು ಅತ್ಯಂತ ಮಹತ್ವವುಳ್ಳ ಅಮೂಲ್ಯ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ."

1 ಪೇತ್ರ 2 : 21, 22 "ಇದಕ್ಕಾಗಿಯೇ ನೀವು ಕರಿಯಲ್ಪಟ್ಟಿರಿ ; ಯಾಕೆಂದರೆ ಕ್ರಿಸ್ತನೂ ಸಹಾ ನಮಗೋಸ್ಕರ ಬಾಧೆಯನ್ನನುಭವಿಸಿ, ನೀವು ತನ್ನ ಹೆಜ್ಜೆ ಜಾಡಿನಲ್ಲಿ ನಡೆಯಬೇಕೆಂದು ನಮಗೆ ಮಾದರಿಯನ್ನು ಬಿಟ್ಟು ಹೋದನು. ಆತನು ಯಾವ ಪಾಪವನ್ನೂ ಮಾಡಲಿಲ್ಲ. ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ."

ಯೆಹೋ 5 : 9 "...ಈ ದಿನ ಐಗುಪ್ತದ ನಿಂದೆಯನ್ನು ನಿಮ್ಮಿಂದ ನಿವಾರಿಸಿಬಿಟ್ಟಿದ್ದೇನೆ..."
**ಗಮನಿಸು :** ಇಬ್ರಿ 8 : 10 ರಲ್ಲಿ ದೇವರು ತನ್ನ ನಿಯಮಗಳನ್ನು ವಿಶ್ವಾಸಿಯ ಮನಸ್ಸಿನಲ್ಲಿಡುತ್ತಾನೆ. ಮತ್ತು ಅವುಗಳನ್ನು ಆತ್ಮನ ಮೇಲೆ ಬರೆಯುತ್ತಾನೆ ; ಆದರೆ ಇಬ್ರಿ 10 : 16 ರಲ್ಲಿ ದೇವರು ತನ್ನ ನಿಯಮಗಳನ್ನು ವಿಶ್ವಾಸಿಯ ಆತ್ಮನೊಳಗೆ ಇಡುತ್ತಾನೆ. (ಆತ್ಮನ ಸ್ವಭಾವ ಬದಲಾಗುತ್ತದೆ) ಮತ್ತು ಮನಸ್ಸಿನ ಮೇಲೆ ಬರೆಯುತ್ತಾನೆ.
**ಗಮನಿಸು :** 1 ಯೊಹಾ 20 ಕ್ಕೂ 1 ಯೊಹಾ 27 ಗೂ ಕೂಡ ಒಂದು ವ್ಯತ್ಯಾಸ ಕಂಡುಬರುತ್ತದೆ. (kjv) ಅಭಿಷೇಕದ ಮೂಲಕ ಮನಸ್ಸನ್ನು ನೂತನ ಪಡಿಸಲಾಗುತ್ತದೆ. ಮತ್ತು ಅಭಿಷೇಕದ ಮೂಲಕ ಆತ್ಮನ ಸ್ವಭಾವವೂ ಬದಲಾವಣೆಗೊಳ್ಳುತ್ತದೆ.

ಇಬ್ರಿ 10 : 16 "...ಆದಿನಗಳಾದ ಮೇಲೆ, ನನ್ನ ಆಜ್ಞೆಗಳನ್ನು (ದೈವೀಕ ಸ್ವಭಾವ) ಅವರ ಹೃದಯಗಳಲ್ಲಿ (ಆತ್ಮ) ಇಡುವೆನು. ಅವರ ಮನಸ್ಸುಗಳಲ್ಲಿ (ಪ್ರಾಣ) ಅವುಗಳನ್ನು ಬರೆಯುವೆನು :"
1 ಯೋಹಾ 1 : 27 "ಆದರೆ ಆತನಿಂದ ನೀಡಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವುದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವುದು ಅವಶ್ಯವಿಲ್ಲ. ಆ ಅಭಿಷೇಕವೇ ಎಲ್ಲಾ ವಿಷಯಗಳಲ್ಲಿ ನಿಮಗೆ ಉಪದೇಶ ಮಾಡುವಂಥದ್ದಾಗಿದ್ದು ಸತ್ಯವಾಗಿದೆ, ಸುಳ್ಳಲ್ಲ ಮತ್ತು ಅದು ನಿಮಗೆ ಉಪದೇಷ (ಅಭಿಶೇಕ ಮಾಡಿದ್ದು) ಮಾಡಿದ ಪ್ರಕಾರವೇ ಆತನಲ್ಲಿ (ಕ್ರಿಸ್ತನಲ್ಲಿ) ನೀವು ನೆಲೆಗೊಂಡ್ಡಿರಿ (ಜೀವಿಸಿರಿ)"

**ಜೀವನದಲ್ಲಿ ಆಳ್ವಿಕೆ ಮಾಡಿರಿ.**

ದೇವರಿಂದ ಹುಟ್ಟಿದ ಒಳ ಮನುಷ್ಯನು ಅಭಿಷೇಕ ಹೊಂದಿದವನು ! ಯಾಕೆಂದರೆ ಅವನಿಗೆ ಕ್ರಿಸ್ತನ ಮನಸ್ಸಿದೆ, ಕ್ರಿಸ್ತನ ಆತ್ಮವಿದೆ. ಮತ್ತು ಕರ್ತನ ದೇಹದಲ್ಲಿ ಅವನಿದ್ದಾನೆ. ಪರಿಶುದ್ಧಾತ್ಮನ ಮೇಲ್ವಿಚಾರಣೆಯ ಕೆಳಗೆ ತಂದೆಯಾದ ದೇವರು ಅವನನ್ನು ಜೀವನದಲ್ಲಿ ಆಳಲು ಅನುಮತಿಸುತ್ತಾನೆ. ಇಂತಹ ವ್ಯಕ್ತಿ ಗೌರವಕ್ಕೆ ತಕ್ಕ ಪಾತ್ರ. ಪರಿಶುದ್ಧ ಮಾಡಲ್ಪಟ್ಟು ಪ್ರತಿ ಒಳ್ಳೆಯ ಕಾರ್ಯಕ್ಕೂ ದೇವರಿಂದ ಸಿದ್ಧ ಮಾಡಲ್ಪಟ್ಟವನು. ಇದನ್ನೆ ನಾವು ಯಹೂದ್ಯರಲ್ಲಿ ನೋಡುತ್ತೇವೆ. ಅವರು ಅರಣ್ಯದಲ್ಲಿ ದೇವರ ನಿಯಮದ ಕೆಳಗೆ ಹುಟ್ಟಿ ಬೆಳೆದರು. ನ್ಯಾಯ ಪ್ರಮಾಣದ ತಿಳುವಳಿಕೆಗೆ ಅನುಗುಣವಾಗಿ ಅವರು ಕಾನಾನಿನಲ್ಲಿ ಆಳ್ವಿಕೆ ಮಾಡಲು ದೇವರಿಂದ ಸಿದ್ಧ ಮಾಡಲ್ಪಟ್ಟವರು.

ಒಬ್ಬ ದೇವರ ಮಗನು ನಿಂದಾರಹಿತನೂ, ಕೆಡಕು ಮಾಡದವನೂ, ತಪ್ಪಿಲ್ಲದವನೂ ಆಗಿರುವುದರಿಂದ ಲೋಕದಲ್ಲಿ ಅವನು ಬೆಳಕಿನಂತೆ ಪ್ರಕಾಶಿಸುತ್ತಾನೆ. ಅವನು ಭೂಮಿಗೆ ಉಪ್ಪಾಗಿಯೂ ಮತ್ತು ಮುಚ್ಚಿಡಲಾಗದ ಬೆಳಕೂ ಆಗಿದ್ದಾನೆ. ಅವನು ಪ್ರೋತ್ಸಾಹ ಮಾಡುವುದಕ್ಕೂ ಮತ್ತು ಎಲ್ಲಾ ಅಧಿಕಾರದಿಂದ ಖಂಡಿಸುವುದಕ್ಕೂ ಸಮರ್ಥನು. ಒಬ್ಬ ದೇವರ ಕುಮಾರನು ಒಂದು ದಿನ ದೇವ ದೂತರಿಗೆ ನ್ಯಾಯ ತೀರಿಸುವವನಾದರೆ, ತಾನೇ ನ್ಯಾಯ ತೀರ್ಪಿಗೊಳಗಾಗದೆ, ತನ್ನ ಸಹೋದರರ ಮಧ್ಯೆ ವ್ಯಾಜ್ಯಗಳನ್ನು ಪರಿಹರಿಸಬಲ್ಲನು.

**ಪಾಪಿಗಳು ಮತ್ತು ಐಶ್ವರ್ಯವು.**

ಒಳ ಮನುಷ್ಯನು ಆತ್ಮನಲ್ಲಿರುವಾಗ (ಸಿನ್ ಅರಣ್ಯದಲ್ಲಿ) ಅವನು ಕ್ರಿಸ್ತನಲ್ಲಿನ ಜೀವನಕ್ಕೆ (ಕಾನಾನಿನಲ್ಲಿ) ಪರಿಶುದ್ಧಾತ್ಮನಿಂದ ಸಿದ್ಧ ಮಾಡಲ್ಪಟ್ಟನು. ಇದು ಅವನ ಮನಸ್ಸನ್ನು ಹೊಸತು ಪಡಿಸಿ, ಮತ್ತು ಆತ್ಮನನ್ನು ಶುದ್ಧೀಕರಿಸುವುದರ ಮೂಲಕ ಆಗುತ್ತದೆ. ಈಗ ಅವನು ಕ್ರಿಸ್ತನಲ್ಲಿರುವುದರಿಂದ ಅವನು ತನ್ನನ್ನು ತಾನು ಪವಿತ್ರನಾಗಿ ಇಟ್ಟಿಕೊಳ್ಳಬೇಕು ಮತ್ತು ಪಾಪಾತ್ಮರ ಮಾರ್ಗಗಳಲ್ಲಿ ಮತ್ತು ಅನೀತಿಯ ಐಶ್ವರ್ಯದಲ್ಲಿ ಸಿಲುಕಿಕೊಳ್ಳಬಾರದು. ಇದು ಕಾನಾನಿಗೆ ಬಂದ ಯಹುದ್ಯರಿಗೆ ಅನುಗುಣವಾಗಿದೆ. ಮತ್ತು ಮುಖಾ ಮುಖಿಯಾಗಿ ಅವರು ವಿಗ್ರಹಾರಾಧಕರನ್ನೂ ಮತ್ತು ಅವರ ಐಶ್ವರ್ಯವನ್ನೂ ಎದುರಿಸಬೇಕಾಯಿತು. ಯಹೂದ್ಯರು ವಿಗ್ರಹಾರಾಧಕರೊಂದಿಗೆ ಅನ್ಯೋನ್ಯವಾಗಿರುವಂತಿರಲಿಲ್ಲ, ಹಾಗೂ ಅವರ ಐಶ್ವರ್ಯವನ್ನು ಆಶಿಸುವಂತಿರಲಿಲ್ಲ. ಪಾಪಿಗಳು ಸೈತಾನನ ಗುಲಾಮರಾಗಿದ್ದಾರೆ ಮತ್ತು ಪಾಪದ ಹಾಗೂ ವಾಯುಮಂಡಲದ

1 ಯೋಹ 2 : 29 "ಆತನು ನೀತಿವಂತನಾಗಿದ್ದಾನೆಂಬುದು ನಿಮಗೆ ಗೊತ್ತಾಗಿದ್ದರೆ ನೀತಿಯನ್ನು ಅನುಸರಿಸುವ ಪ್ರತಿಯೊಬ್ಬನೂ ಆತನಿಂದ ಹುಟ್ಟಿದವನಾಗಿದ್ದಾನೆಂದು ನೀವು ತಿಳಿದಿದ್ದೀರಿ"
1 ಯೋಹಾ 2 : 3, 4, 6 "ನಾವು ಆತನ ಆಜ್ಞೆಗಳನ್ನು ಕೈಗೊಂಡು ನಡೆಯುವುದರಿಂದಲೇ ಆತನನ್ನು ಬಲ್ಲವರಾಗಿದ್ದೇವೆಂದು ತಿಳಿದುಕೊಳ್ಳುತ್ತೇವೆ. ಒಬ್ಬನು – ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು ಕೈಗೊಳ್ಳದಿದ್ದರೆ ಅವನು ಸುಳ್ಳುಗಾರನಾಗಿದ್ದಾನೆ ; ಸತ್ಯವು ಅವನಲ್ಲಿಲ್ಲ... ಆತನಲ್ಲಿ (ಕ್ರಿಸ್ತನಲ್ಲಿ) ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಆತನು ನಡೆದಂತೆಯೇ ತಾನೂ ನಡೆಯುವುದಕ್ಕೆ ಬದ್ಧನಾಗಿದ್ದಾನೆ."

ಇಬ್ರಿ 7 : 25 "ಆದ ಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವುದಕ್ಕೆ ಶಕ್ತನಾಗಿದ್ದಾನೆ ; ಅವರಿಗೋಸ್ಕರ ವಿಜ್ಞಾಪನೆ ಮಾಡುವುದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ."

ಎಫೆ 3 : 20 "ನಮ್ಮಲ್ಲಿ (ನಂಬುವವರಲ್ಲಿ) ಕಾರ್ಯ ಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವುದಕ್ಕಿಂತಲೂ ಯೋಚಿಸುವುದಕ್ಕಿಂತಲೂ ಅತ್ಯಧಿಕವಾದುದನ್ನು ಮಾಡಲು ಶಕ್ತನಾದಾತನಿಗೆ, ..."

ಪ್ರಕಾ 5 : 10 "ಮತ್ತು ನಮ್ಮನ್ನು ದೇವರಿಗೋಸ್ಕರ ರಾಜರನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದ್ದೀ ; ನಾವು ಭೂಮಿಯ ಮೇಲೆ ಆಳುವೆವು ಎಂದು ಹೇಳಿದನು."

1 ಪೇತ್ರ 2 : 9 "ಆದರೆ ಕತ್ತಲೆಯೊಳಗಿದ್ದ ನಿಮ್ಮನ್ನು ತನ್ನ ಆಶ್ರಯವಾದ ಬೆಳಕಿಗೆ ಸೇರಿಸಿದಾತನ ಸ್ತುತಿಗಳನ್ನು ಪ್ರಕಟಿಸುವವನಾಗುವಂತೆ, ನೀವು ಆಯಲ್ಪಟ್ಟ ವಂಶದವರೂ, ರಾಜರಾದ ಯಾಜಕ. ವರ್ಗದವರೂ, ಪರಿಶುದ್ಧ ಜನಾಂಗವೂ ಅಸಮಾನ್ಯರಾದ ಜನರೂ ಆಗಿದ್ದೀರಿ."

ಫಿಲಿ 2 : 15 "ಹೀಗೆ ನೀವು ದೋಶವಿಲ್ಲದವರೂ ಕೇಡುಮಾಡದವರೂ ನಿಂದಾರಹಿತರೂ ಆದ ದೇವಪುತ್ರರಾಗಿ ವಕ್ರವುಳ್ಳ ದುಷ್ಟ ಜನಾಂಗದ ಮಧ್ಯದಲ್ಲಿ ಜೀವದಾಯಕ ವಾಕ್ಯವನ್ನು ಹಿಡಿದುಕೊಂಡು ಲೋಕದಲ್ಲಿ ಬೆಳಕುಗಳಂತೆ ಹೊಳೆಯುವವರಾಗಿದ್ದೀರಿ."
1 ಕೊರಿ 5 : 12, 13 "ಹೊರಗಿನವರಿಗೆ (ಪಾಪಿಗಳು) ಸಹಾ ತೀರ್ಪು ಮಾಡುವುದಕ್ಕೆ ನನಗೇನಿದೆ ? ಒಳಗಿನವರಿಗೆ (ವಿಶ್ವಾಸಿಗಳು) ತೀರ್ಪು ಮಾಡುವವರು ನೀವೇ ಅಲ್ಲವೇ ? ಆದರೆ ಹೊರಗಿನವರಿಗೆ ತೀರ್ಪು ಮಾಡುವವನಾತನು ದೇವರು ; ಆದ್ದರಿಂದ ಆ ದುಷ್ಟನನ್ನು ನಿಮ್ಮ ಮಧ್ಯದಿಂದ ಹೊರಗೆ ಹಾಕಿರಿ."

2 ಪೇತ್ರ 2 : 20, 21 "ಯಾಕೆಂದರೆ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ವಿಷಯವಾದ ಜ್ಞಾನ ಹೊಂದಿ, ಲೋಕದ ಮಲಿನತ್ವ (ಐಗುಪ್ತದಲ್ಲಿ ಕಲಿತ ವಿಗ್ರಹಾರಾಧನೆ) ಗಳಿಗೆ ತಪ್ಪಿಸಿಕೊಂಡವರು ತಿರುಗಿ ಅವುಗಳಲ್ಲಿ (ವಿಗ್ರಹಾರಾಧನೆ) ಸಿಕ್ಕಿಕೊಂಡು ಸೋತು ಹೋದರೆ, ಅವರ ಅಂತ್ಯ ಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗಿದೆ. ಯಾಕೆಂದರೆ ಅವರು ನೀತಿ ಮಾರ್ಗವನ್ನು ತಿಳಿದು, ತಮಗೆ ಕೊಡಲ್ಪಟ್ಟ ಪರಿಶುದ್ಧ ಆಜ್ಞೆಯಿಂದ ತೊಲಗಿ ಹೋಗುವುದಕ್ಕಿಂತ ಆ ಮಾರ್ಗವನ್ನು ತಿಳಿಯದೇ ಇದ್ದಿದ್ದರೆ ಮೇಲಾಗಿತ್ತು. (ಐಗುಪ್ತದಲ್ಲೇ ಉಳಿಯುವುದು)"
ಯಾಕೋಬ 4 : 4 "ವ್ಯಭಿಚಾರಿಗಳೇ, ವ್ಯಭಿಚಾರಿಣಿಯರೇ, ಇಹಲೋಕ ಸ್ನೇಹವು ದೇವ ವೈರತ್ವವೆಂದು ನಿಮಗೆ ತಿಳಿಯದೋ ? ಲೋಕಕ್ಕೆ ಸ್ನೇಹಿತನಾಗಿರ ಬೇಕೆಂದಿರುವವನು ದೇವರಿಗೆ ವೈರಿಯಾಗಿದ್ದಾನೆ."

ದೆವ್ವಗಳ ಹತೋಟಿಯಲ್ಲಿದ್ದಾರೆ. ಅವರ ಬೆಲೆ ಆಶೆಗಳು, ಗ್ರಹಿಕೆ, ಮನೋವೃತ್ತಿಗಳು ಮತ್ತು ನಡತೆ ದೇವರ ತತ್ವಗಳಿಗೆ ವಿರುದ್ಧವಾಗಿವೆ.

ಆದುದರಿಂದ ಒಬ್ಬ ದೇವರಕುಮಾರನು ದೇವರ ವಾಕ್ಯದಲ್ಲಿ ಬರೆದಿರುವ ತತ್ವಗಳಿಗೆ ಅವಿಧೇಯನಾಗುವಂತೆ ಸತತ ಒತ್ತಡವನ್ನು ಅನುಭವಿಸುತ್ತಾನೆ. ಅವನು ಪಾಪಾತ್ಮರ ಮಾರ್ಗಗಳಲ್ಲಿ ಸಿಲುಕಿಕೊಂಡರೆ, ದೇವರಿಗೆ ಶತೃವಾಗುತ್ತಾನೆ. ಇದು ಯಾಕೆಂದರೆ, ದೇವರಿಗಿಂತಲೂ ಹೆಚ್ಚಾಗಿ ಯಾವುದನ್ನೂ ಗೌರವದಿಂದ ಕಾಣುವುದಾಗಲೀ ಬೆಲೆಕಟ್ಟುವುದಾಗಲೀ, ಬೇರಾವುದನ್ನೂ ಇಷ್ಟಪಡುವುದಾಗಲೀ ಮಾಡಿದರೆ ವಿಗ್ರಹಾರಾಧನೆಗೆ ಸಮನಾಗುತ್ತದೆ.

ಪಾಪಿಗಳನ್ನೇ ಅಲ್ಲದೇ ದೇವರಮಗನು ಅನೀತಿಯ ಹಣದ ವಿಷಯವಾಗಿಯೂ ಕೂಡ ಆಲೋಚಿಸಬೇಕು. ಐಶ್ವರ್ಯ ಅಂದರೆ, ಹಣದ ಮೇಲಿನ ಆಶೆ, ಅದು ಆಶೆಬುರುಕುತನವನ್ನು ಹೆಚ್ಚಿಸಿ ಅದರ ಮೇಲೆಯೇ ಆಧಾರವಾಗಿರುತ್ತದೆ. ಐಶ್ವರ್ಯವಂತರ ಮೇಲೂ, ಬಡವರ ಮೇಲೂ ಹಣದ ಪ್ರಭಾವ ಒಂದೇ. ಇರುವವನಿಗೆ ಇನ್ನೂ ಹೆಚ್ಚು ಬೇಕು ಮತ್ತು ಇಲ್ಲದಿರುವವನಿಗೂ ಕೂಡ ಇನ್ನೂ ಹೆಚ್ಚು ಬೇಕು. ಒಬ್ಬ ದೇವರ ಮನುಷ್ಯರಲ್ಲಿ ಐಶ್ವರ್ಯಕ್ಕೆ ಎಲ್ಲ ಶರೀರಭಾವಗಳನ್ನೂ ಪುನಶ್ಚೇತನಗೊಳಿಸುವ ಶಕ್ತಿ ಇದೆ.

ಕ್ರಿಸ್ತನಲ್ಲಿ ಅವನ ಜೀವನ ಕಾಲದಲ್ಲೆಲ್ಲಾ ಒಬ್ಬ ದೇವರ ಮಗನು ಹಿಂಸೆಗಳನ್ನು ಅನುಭವಿಸಬಹುದು. ಎಲ್ಲ ವಿಧವಾದ ಕಷ್ಟಗಳು, ನಷ್ಟಗಳು, ಹಾನಿ, ಕೆಡುಕು, ಹೊಡೆತ, ಕಾಯಿಲೆ ದೇವರಲ್ಲಿ ಅಪನಂಬಿಕೆಯನ್ನು ಹುಟ್ಟಿಸುತ್ತವೆ. ಮತ್ತು ಲೋಕದ ಮಾರ್ಗಗಳನ್ನನುಸರಿಸುವಂತೆ ಮಾಡುತ್ತವೆ. ವಿಶೇಷವಾಗಿ ಈ ಹಿತವಲ್ಲದ ದಿವಸಗಳಲ್ಲಿ ಅವನ ನಂಬಿಕೆಯು ಪರೀಕ್ಷಿಸಲ್ಪಡುತ್ತದೆ. ದೇವರಲ್ಲಿ ಅವನ ನಂಬಿಕೆ ಹೆಚ್ಚಾದಂತೆಲ್ಲಾ, ಮನುಷ್ಯರ ಭಯ, ತೊರೆಯಲ್ಪಡುವ ಭಯ ಮತ್ತು ಮರಣದ ಭಯಗಳು ಹೋಗಿ ಅವನು ಅವುಗಳ ಮೇಲೆ ಜಯ ಹೊಂದುವನು. ಜಯ ಹೊಂದುವವನಿಗೆ ಜೀವದ ಕಿರೀಟ ಲಭಿಸುತ್ತದೆ. ದೇವರ ಸನ್ನಿಧಿಯಲ್ಲಿ ನೆಲೆಸುತ್ತಾನೆ. ಮತ್ತು ಕ್ರಿಸ್ತನೊಂದಿಗೆ ಆಳುತ್ತಾನೆ. ಅವನ ಹೆಸರು ಕುರಿಮರಿಯಾದಾತನ ಪುಸ್ತಕದಲ್ಲಿ ಬರೆಯಲ್ಪಟ್ಟಿದೆ.

ಪರಿಶುದ್ಧತೆಯನ್ನು ಪರಿಪೂರ್ಣ ಮಾಡದ ವಿಶ್ವಾಸಿಗಳು, ಎಲ್ಲಾ ಪಾಪಿಗಳೊಂದಿಗೆ ದೇವರ ನ್ಯಾಯ ತೀರ್ಪಿನ ಮಹಾದಿನದಲ್ಲಿ ಆತನ ಎದುರಿನಲ್ಲಿ ನಿಲ್ಲುತ್ತಾರೆ. ಆದಿನದಲ್ಲಿ ಜೀವ ಬಾಧ್ಯರ ಪಟ್ಟಿಯಲ್ಲಿ ವಿಶ್ವಾಸಿಯ ಹೆಸರು ಕಂಡು ಬಂದರೆ, ಅವನಿಗೆ ನೂತನ ಭೂಮಿಯ ಪ್ರಜೆಯಾಗಲು ಅನುಮತಿ ಸಿಕ್ಕುತ್ತದೆ. ಆದರೆ ಜೀವ ಬಾಧ್ಯರ ಪಟ್ಟಿಯಲ್ಲಿ ಯಾರ್‍ಯಾರ ಹೆಸರು ಇಲ್ಲವೋ ಅವರು

ಕೊಲೊ 3 : 5 "ಆದ್ದರಿಂದ ನಿಮ್ಮಲಿರುವ ಭೂಸಂಬಂಧವಾದ ಭಾವಗಳನ್ನು ಅಂದರೆ ಜಾರತ್ವ, ಬಂಡುತನ, ಕಾಮಾಭಿಲಾಷೆ, ದುರಾಸೆ, ವಿಗ್ರಹಾರಾಧನೆಯಾಗಿರುವ ಲೋಭ ಇವುಗಳನ್ನು ಸಾಯಿಸಿರಿ.

ಎಫೆ 2 : 1 – 3 "ಇದಲ್ಲದೆ ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಆತನು ಬದುಕಿಸಿದನು. ನೀವು ಪೂರ್ವದಲ್ಲಿ ಅಪರಾಧಗಳನ್ನೂ ಪಾಪಗಳನ್ನೂ ಮಾಡುವವರಾಗಿದ್ದು, ಇಹ ಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ ; ವಾಯುಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ ಅಂದರೆ ಅವಿಧೇಯತೆಯ ಮಕ್ಕಳಲ್ಲಿ ಈಗ ಕೆಲಸ ನಡೆಸುವ ಆತ್ಮನಿಗನುಸಾರವಾಗಿ ನಡೆದುಕೊಂಡಿರಿ ; ನಾವೆಲ್ಲರೂ ಪೂರ್ವದಲ್ಲಿ ಶರೀರಭಾವದ ಆಶೆಗಳಿಗೆ ಅಧೀನರಾಗಿ ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನೆರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವಸಿದ್ಧರಾಗಿ ಕೋಪದ ಮಕ್ಕಳಾಗಿದ್ದೆವು."

ಮತ್ತ 6 : 24 "ಯಾವ ಮನುಷ್ಯನೂ ಇಬ್ಬರು ಯೆಜಮಾನರಿಗೆ ಸೇವೆ ಮಾಡಲಾರನು ; ಯಾಕೆಂದರೆ ಅವನು ಒಬ್ಬನನ್ನು ಹಗೆ ಮಾಡಿ ಇನ್ನೊಬ್ಬನನ್ನು ಪ್ರೀತಿ ಮಾಡುವನು ; ಇಲ್ಲವಾದರೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ಅಸಡ್ಡೆ ಮಾಡುವನು. ನೀವು ದೇವರನ್ನೂ ಧನವನ್ನೂ ಸೇವಿಸಲಾರಿರಿ."

1 ತಿಮೋ 6 : 9, 10 "ಆದರೆ ಐಶ್ವರ್ಯವಂತರಾಗಬೇಕೆಂದು ಮನಸ್ಸು ಮಾಡುವವರು ಶೋಧನೆಯಲ್ಲಿಯೂ ಉರ್ಲಿನಲ್ಲಿಯೂ ಸಿಕ್ಕಿಕೊಂಡು ಅನೇಕ ಬುದ್ದಿ ಹೀನತೆಯ ಮತ್ತು ಹಾನಿಕರವಾದ ದುರಾಶೆಗಳಲ್ಲಿ ಬೀಳುತ್ತಾರೆ. ಇಂತ ಆಶೆಗಳು ಮನುಷ್ಯರನ್ನು ಸಂಹಾರನಾಶನಗಳಲ್ಲಿ ಮುಳುಗಿಸುತ್ತವೆ. ಹಣದ ಪ್ರೀತಿಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು ನಂಬಿಕೆಯಿಂದ ತಪ್ಪಿಹೋಗಿ ಅನೇಕ ದುಖಃಗಳಿಂದ ತಮ್ಮನ್ನು ತಾವೇ ತಿವಿಸಿಕೊಳ್ಳುತ್ತಾರೆ."

ಫಿಲಿ 1:9–11 "ಮತ್ತು ನಿಮ್ಮ ಪ್ರೀತಿಯು ಹೆಚ್ಚುತ್ತಾ ನೀವು ಜ್ಞಾನ ಮತ್ತು ಪೂರ್ಣ ವಿವೇಕಗಳಿಂದ ಕೂಡಿದವರಾಗಿರಬೇಕೆಂತಲೂ, ಉತ್ತಮ ಕಾರ್ಯಗಳು ಯಾವುದೆಂದು ನೀವು ವಿವೇಚಿಸುವವರಾಗಿರಬೇಕೆಂತಲೂ ಕ್ರಿಸ್ತನ ದಿನದವರೆಗೆ ನೀವು ಸರಳವಾಗಿಯೂ ನಿರ್ಮಲರಾಗಿಯೂ ಇರಬೇಕೆಂತಲೂ ಯೇಸು ಕ್ರಿಸ್ತನ ಮೂಲಕ ನೀತಿಯೆಂಬ ಫಲಗಳಿಂದ ತುಂಬಿದವರಾಗಿ ದೇವರಿಗೆ ಮಹಿಮೆಯನ್ನೂ ಸ್ತೋತ್ರವನ್ನೂ ತರುವವರಾಗಿರಬೇಕೆಂತಲೂ ಪ್ರಾರ್ಥಿಸುತ್ತೇನೆ."

ಯಾಕೋ 1 : 12 "ಕಷ್ಟಗಳನ್ನು ಸಹಿಸಿಕೊಳ್ಳುವವನು ಧನ್ಯನು. ಅವನು ಪರಿಶೋಧೀತನಾದ ಮೇಲೆ ಕರ್ತನು ತನ್ನನ್ನು ಪ್ರೀತಿಸುವವರಿಗೆ ವಾಗ್ದಾನ ಮಾಡಿದ ಜೀವದ ಕಿರೀಟವನ್ನು ಹೊಂದುವನು ;"


ಪ್ರಕಾ 21 : 27 "ಅದರಲ್ಲಿ ಹೊಲೆ ಮಾಡುವಂಥದ್ದು ಯಾವುದು ಸೇರುವುದಿಲ್ಲ. – ಅಸಹ್ಯವಾದುದ್ದನ್ನೂ ಸುಳ್ಳಾಡುವುದನ್ನೂ ನಡೆಸುವವನು ಅಲ್ಲಿ ಸೇರುವುದಿಲ್ಲ. ಆದರೆ ಕುರಿಮರಿಯಾದಾತನ ಜೀವ ಗ್ರಂಥದಲ್ಲಿ ಬರೆಯಲ್ಪಟ್ಟವರು ಮಾತ್ರ ಸೇರುವರು."

ಪ್ರಕಾ 3 : 5 "ಜಯ ಹೊಂದುವ ಇವನೇ ಬಿಳಿ ವಸ್ತ್ರದಿಂದ ಹೊದಿಸಲ್ಪಡುವನು. ಜೀವದ ಪುಸ್ತಕದಿಂದ ನಾನು ಅವನ ಹೆಸರಿನನ್ನು ಅಳಿಸಿಬಿಡವುದೇ ಇಲ್ಲ. ಆದರೆ ನನ್ನ ತಂದೆಯ ಮುಂದೆಯೂ ಆತನ ದೂತನ ಮುಂದೆಯೂ ಅವನ ಹೆಸರನ್ನು ಒಪ್ಪಿಕೊಳ್ಳುವೆನೆ."

ಸೈತಾನನ್ನನುಸರಿಸಿದ್ದರಿಂದ ಅವನೊಂದಿಗೆ ನರಕದಲ್ಲಿ ಹಾಕಲ್ಪಡುವರು.

ಪ್ರಕ 20 : 12 "ಇದಲ್ಲದೆ ಸತ್ತವರಾದ ಚಿಕ್ಕವರೂ ದೊಡ್ಡವರೂ ದೇವರ ಮುಂದೆ ನಿಂತಿರುವುದನ್ನು ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು ; ಮತ್ತು ಜೀವ ಗ್ರಂಥವೆಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು ; ಆ ಪುಸ್ತಕದಲ್ಲಿ ಬರೆದಿರುವ ಪ್ರಕಾರ ಅವರವರ ಕೃತ್ಯಗಳಿಗೆ ತಕ್ಕಂತೆ ಸತ್ತವರಿಗೆ ನ್ಯಾಯ ತೀರ್ಪಾಯಿತು.
ಪ್ರಕ 20 : 15 "ಯಾವನ ಹೆಸರು ಜೀವ ಗ್ರಂಥದಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದಬ್ಬಲ್ಪಟ್ಟನು.

# ಸಾರಂಶ




**ಮನುಷ್ಯನು ಪಾಪಾತ್ಮ :**

ಮನುಷ್ಯನು ಬಿದ್ದ ಕ್ರಮ : ಮೊದಲು ಆತ್ಮನು, ಇದು ಹವ್ವಳ ದೆಸೆಯಿಂದ, ನಂತರ ಪ್ರಾಣ, ಇದು ಆದಮನ ದೆಸೆಯಿಂದ, ಮತ್ತು ಅದಾದಮೇಲೆ ಪಾಪವು ದೇಹದಲ್ಲಿ ನೆಲೆಗೊಳ್ಳುತ್ತದೆ. ಹೇಗಾದರೂ ಮನುಷ್ಯನ ರಕ್ಷಣೆಯು ವ್ಯತಿರಿಕ್ತವಾದ ಕ್ರಮದಲ್ಲಿ ನಡೆಯುತ್ತದೆ ; ಅಂದರೆ : ದೇಹವು ಮೊದಲು, ನಂತರ ಪ್ರಾಣ ಮತ್ತು ಅದಾದ ನಂತರ ಆತ್ಮ.

**ದೇಹದ ರಕ್ಷಣೆ :**

ಪಾಪದ ದೇಹವು ನಾಶ ಮಾಡಲ್ಪಟ್ಟು, ಮತ್ತು ಒಂದು ಹೊಸ ದೇಹವು ಸೃಷ್ಟಿಯಾದುದರಿಂದ ದೇವರು ಪರಿಶುದ್ಧಾತ್ಮನನ್ನು ದೇಹಕ್ಕೆ ಪಾಪದ ಬದಲಾಗಿ ಕೊಡುತ್ತಾನೆ.

**ಪ್ರಾಣದ ರಕ್ಷಣೆ :**

ಪ್ರಾಣವು ತನ್ನ ಸ್ವಂತ ಆತ್ಮದ ದೊರೆತನದಿಂದ ಆತ್ಮನ ನಿಯಮದ ಕೆಳಗೆ ರಕ್ಷಿಸಲ್ಪಡುತ್ತದೆ. ಮನಸ್ಸನ್ನು ನೂತನ ಗೊಳಿಸುವುದರ ಮೂಲಕ ಪ್ರಾಣವು ಪುನಃ ಆತ್ಮನ ತಲೆಯಾಗುತ್ತದೆ, ಆದರೆ ತನ್ನ ಆತ್ಮನ ಶರೀರಭಾವದ ಕಾಮಾಭಿಲಾಷೆ ಮತ್ತು ದುರಾಶೆಗಳಿಂದ ವಿಶ್ರಾಂತಿಯಿಲ್ಲದೆ ಹೊಗುತ್ತದೆ.

**ಆತ್ಮನ ರಕ್ಷಣೆ :**

ಆತ್ಮನ ಕಾಮಾಭಿಲಾಷೆ ಮತ್ತು ದುರಾಶೆಗಳನ್ನು ಪರಿಶುದ್ಧಾತ್ಮನ ಅಭಿಷೇಕದಿಂದಲೇ ಸಾಯಿಸಬಹುದಾಗಿದೆ. ಶ್ರಮೆಯಲ್ಲಿಯೇ ಆತ್ಮವು ಬದಲಾಗುತ್ತದೆ ಮತ್ತು ದೈವ ಭಕ್ತಿಯನ್ನು ಹೊಂದುತ್ತದೆ.

**ಪುನಃ ಸ್ಥಾಪನೆಯಾದ ಮನುಷ್ಯ :**

ಆದಮನು ಬೀಳುವುದಕ್ಕೆ ಮುಂಚೆ ಇದ್ದ ರೀತಿಯಲ್ಲಿ ಪುನಃ ಸ್ಥಾಪನೆಗೊಂಡ ಮನುಷ್ಯನು ಒಬ್ಬ ದೇವರ ಪುತ್ರನು. ಪ್ರಾಣವು ತನ್ನ ಆತ್ಮವನ್ನು ನಾನಾಶೋಧನೆಗಳಿಂದ ಕಾಪಾಡಿಕೊಳ್ಳಬೇಕು ಮತ್ತು ಆದಮನು (ಪ್ರಾಣ) ಹವ್ವಳನ್ನು (ಆತ್ಮ) ಕಾಪಾಡದೆ ಹೋದ ಹಾಗೆ ಪ್ರಾಣವು ಬೇಸರಗೊಳ್ಳಬಾರದು. ಒಬ್ಬ ದೇವರ ಪುತ್ರನು ಅನೇಕ ಬೆದರಿಕೆಗಳನ್ನು

ಎದುರಿಸಬೇಕಾಗುತ್ತದೆ. ಮತ್ತು ದುಷ್ಟ ಶಕ್ತಿಗಳ ಮೂಲಕ ಬರುವ ಶೋಧನೆಗಳು ಲೋಕದ ಮೂಲಕ, ಮತ್ತು ಐಶ್ವರ್ಯದ ಮೂಲಕ. ಅವನು ದೇವರಿಂದ ಅಭಿಷಿಕ್ತನಾಗಿರುವುದರಿಂದ ಈ ಎಲ್ಲಾ ಹಲ್ಲೆಗಳನ್ನು ದೇವರಿಗೆ ವಿಧೇಯನಾಗಿದ್ದುಕೊಂಡು ಜೈಸಬಲ್ಲನು.

## ಅಧ್ಯಾಯ 11


### ವಿಶ್ವಾಸದಿಂದ ವಿಶ್ವಾಸಕ್ಕೆ :

ಪೌಲನು ರೋಮಿನಲ್ಲಿನ ವಿಶ್ವಾಸಿಗಳಿಗೆ ಬರೆದ ಪತ್ರಿಕೆಯಲ್ಲಿ ಹೇಳುವುದೇನೆಂದರೆ, ಯೇಸುವಿನಲ್ಲಿನ ಅವರ ನಂಬಿಕೆಯು ಲೋಕದಲ್ಲೆಲ್ಲಾ ಪ್ರಸಿದ್ಧವಾಯಿತೆಂದು. ಆದರೆ ರೋಮ 1:15 ರಲ್ಲಿ ಅವನು ಹೇಳುವುದೇನೆಂದರೆ, ಅವನು ಕೂಡಾ ಕ್ರಿಸ್ತನ ಸುವಾರ್ತೆಯನ್ನು ಅವರಿಗೆ ಸಾರಬೇಕೆಂದು. ಈಗ ಕೇಳಬೇಕಾಗಿರುವ ಪ್ರಶ್ನೆಯೇನೆಂದರೆ : ಅವರು ಶಿಲುಬೆಗೆ ಹಾಕಲ್ಪಟ್ಟ ದೇವರು ಕುರಿಮರಿಯಾದ ಯೇಸುವಿನ ಮೇಲೆ ನಂಬಿಕೆಯಿಟ್ಟು, ಆಗಲೇ ನೀತಿವಂತರೆಂದು ಎಣಿಸಲ್ಪಟ್ಟ ಮೇಲೆ ಸುವಾರ್ತೆಯು ಅವರಿಗೆ ಏಕೆ ಸಾರಲ್ಪಡಬೇಕು ?

ಅದು ಯಾಕೆಂದರೆ, ಯೇಸು ಅವರ ಪಾಪಗಳಿಗಾಗಿ ಸಾಯುವುದು ಮಾತ್ರವಲ್ಲದೇ, ಆತನು ಹೊಸ ಮನುಷ್ಯನಾಗಿ ನೂತನ ದೇಹದಲ್ಲಿ ಎಬ್ಬಿಸಲ್ಪಟ್ಟನು. ವಿಶ್ವಾಸಿಯು ನೂತನ ದೇಹದಲ್ಲಿ ಎಬ್ಬಿಸಲ್ಪಡ ಬೇಕಾದರೆ, ಒಳ ಮನುಷ್ಯನು ಈ ಸತ್ಯಕ್ಕೆ ವಿಧೇಯನಾಗಬೇಕು. ಕ್ರಿಸ್ತನ ಸುವಾರ್ತೆಯೇನೆಂದರೆ, ಹಳೆಯ ದೇಹವು ನಾಶ ಹೊಂದಿತು ಮತ್ತು ಒಂದು ನೂತನ ದೇಹವು ಸೃಷ್ಠಿಯಾಯಿತು ಮತ್ತು ಪವಿತ್ರಾತ್ಮನ ಸಹಾಯದಿಂದ ಒಳ ಮನುಷ್ಯನು ತನ್ನ ಹಳೇ ಪಾಪ ಜೀವನಕ್ಕೆ ತಿರಸ್ಕಾರದಿಂದ ಭುಜ ಹಾರಿಸಬಲ್ಲನು ಮತ್ತು ನೂತನ ಮನುಷ್ಯನಂತೆ ಒಂದು ಹೊಸ ಪಾಪರಹಿತ ಜೀವನವನ್ನು ಜೀವಿಸಬಲ್ಲನು. ಈ ಕಾರ್ಯವು ಒಳ ಮನುಷ್ಯನನ್ನು ಪರಿಶುದ್ಧಗೊಳಿಸುವುದರ ಮೂಲಕ ಮಾಡಲಾಗುತ್ತದೆ.

**ವಿಶ್ವಾಸದ ಹಂತಗಳು :**


ನಂಬಿಕೆಯ ಎರಡು ಹಂತಗಳನ್ನು 'ನಂಬಿಕೆಯಿಂದ ನಂಬಿಕೆಗೆ' ಅನ್ನುವ ತತ್ವದಲ್ಲಿ ಈ ಕೆಳಕಂಡ ರೇಖಾಚಿತ್ರವು ತೋರಿಸುತ್ತದೆ.




**ವಚನಗಳು ಮತ್ತು ವ್ಯಾಖ್ಯಾನಗಳು :**

ರೋಮ 1:16.17 "ಕ್ರಿಸ್ತನ ಸುವಾರ್ತೆಯ ವಿಷಯದಲ್ಲಿ ನಾಚಿಕೆ ಪಡುವುದಿಲ್ಲ ; ಯಾಕೆಂದರೆ ಅದು (ಸುವಾರ್ತೆಯು) ನಂಬುವ ಪ್ರತಿಯೊಬ್ಬನಿಗೂ ರಕ್ಷಣೆಗಾಗಿ ದೇವರ ಶಕ್ತಿಯಾಗಿದೆ. ಯಾಕೆಂದರೆ ನೀತಿವಂತನು ನಂಬಿಕೆಯಿಂದಲೇ ಜೀವಿಸುವನು ಎಂದು ಬರೆಯಲ್ಪಟ್ಟಂತೆ, ದೇವರ ನೀತಿಯು ಅದರಲ್ಲಿ ವಿಶ್ವಾಸದಿಂದ (ಮೊದಲನೇ ಹಂತ) ವಿಶ್ವಾಸಕ್ಕೆ (ಎರಡನೇ ಹಂತ)."

1 ಯೋಹಾ 5:13 "ನಿಮಗೆ ನಿತ್ಯ ಜೀವವು ಉಂಟೆಂದು ನೀವು ತಿಳಿಯುವ ಹಾಗೆಯೂ ನೀವು ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಡುವ ಹಾಗೆಯೂ (ಮೊದಲನೇ ಹಂತ) ದೇವರ ಮಗನ ಹೆಸರಿನಲ್ಲಿ ನಂಬೆಕೆಯಿಡುವ ಇವುಗಳನ್ನು ಬರೆದಿದ್ದೇನೆ."




ಯೇಸುವಿನಲ್ಲಿನ ನಂಬಿಕೆ ಒಳ ಮನುಷ್ಯನನ್ನು ಅವನ ದೇಹದಲ್ಲಿನ ಪಾಪದಿಂದ ಬಿಡುಗಡೆ ಮಾಡಿತು. ಒಳ ಮನುಷ್ಯನು ಪಾಪದಿಂದ ಬಿಡುಗಡೆ ಹೊಂದಿರುವುದರಿಂದ ಅವನು ಈಗಲೂ ಮಾಡುತ್ತಿರವ ಪಾಪಗಳನ್ನು ನಿಲ್ಲಿಸಬೇಕು.
ಮತ್ತ 5:48 "ಆದ್ದರಿಂದ ಸ್ವರ್ಗದಲ್ಲಿರುವ ನಿಮ್ಮ ತಂದೆಯು ಪರಿಪೂರ್ಣನಾಗಿರುವಂತೆಯೇ ನೀವೂ ಪರಿಪೂರ್ಣರಾಗಿರಿ"

ವಿಶ್ವಾಸಿಯು ಸ್ವತಂತ್ರದ ನಿಯಮಕ್ಕನುಸಾರವಾಗಿ ನ್ಯಾಯತೀರ್ಪು ಹೊಂದುವುದರಿಂದ.
ಯಾಕೋ 2:12 "ಬಿಡುಗಡೆಯನ್ನುಂಟು ಮಾಡುವ ನ್ಯಾಯ ಪ್ರಮಾಣದಿಂದ ಅವರು ತೀರ್ಪು ಹೊಂದುವವರಿಗೆ ತಕ್ಕಂತೆಯೇ ನೀವು ಮಾತನಾಡಿರಿ ; ಮತ್ತು ಹಾಗೆಯೇ ಮಾಡಿರಿ."
ರೋಮ 6:20,22 "ಯಾಕೆಂದರೆ ನೀವು ಪಾಪಕ್ಕೆ ದಾಸರಾಗಿದ್ದಾಗ ನೀತಿಯ ಹಂಗಿನವರಾಗಿರಲಿಲ್ಲ ಈಗಲಾದರೋ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ ದೇವರಿಗೆ ದಾಸರಾದ್ದರಿಂದ ಪರಿಶುದ್ಧತೆಯೇ ನಿಮಗೆ ಫಲ ; ಅದರ ಅಂತ್ಯವು ನಿತ್ಯ ಜೀವವೇ."

**ಉದಾಹರಣೆಗಳು :**
ಮತ್ತ 5:27,28 "ವ್ಯಭಿಚಾರ ಮಾಡಬಾರದು ಎಂದು ಪೂರ್ವಿಕರು ಹೇಳಿರುವುದನ್ನು ನೀವು ಕೇಳಿದ್ದೀರಿ; ಅದರೆ, ನಾನು ನಿಮಗೆ ಹೇಳುವುದೇನೆಂದರೆ – ಒಬ್ಬ ಸ್ತ್ರೀಯನ್ನು ಮೋಹಿಸುವುದಕ್ಕೆ ನೋಡುವ ಪ್ರತಿಯೊಬ್ಬನು ಆಗಲೇ ತನ್ನ ಹೃದಯದಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದ್ದಾನೆ."
ಮತ್ತ 5:21,22 "ಮತ್ತು – ನೀನು ನರ ಹತ್ಯೆ ಮಾಡಬಾರದು ; ಯಾವನಾದರೂ ನರಹತ್ಯೆ ಮಾಡಿದರೆ ನ್ಯಾಯ ತೀರ್ಪಿನ ಅಪಾಯಕ್ಕೆ ಒಳಗಾಗುವನು ಎಂದು ಪೂರ್ವಿಕರು ಹೇಳಿರುವುದನ್ನು ನೀವು ಕೇಳಿದ್ದೀರಿ. ಆದರೆ ನಿಷ್ಕಾರಣವಾಗಿ ತನ್ನ ಸಹೋದರನ ಮೇಲೆ ಯಾವನಾದರೂ ಸಿಟ್ಟುಗೊಂಡರೆ, ಅವನು ನ್ಯಾಯತೀರ್ಪಿನ ಅಪಾಯಕ್ಕೆ ಒಳಗಾಗುವನು ; ಮತ್ತು ಯಾವನಾದರೂ ತನ್ನ ಸಹೋದರನಿಗೆ –

**ವಿಶ್ವಾಸದ ಮೊದಲನೇ ಹಂತದಲ್ಲಿ ದೇವರು.**
ಒಳಮನುಷ್ಯನನ್ನು ಆದಮನ ದೇಹದಿಂದ ಹೊರಗೆ ಕರೆಯುತ್ತಾನೆ, ಯಾಕೆಂದರೆ ಅವನು ಪಾಪದ ನಿಯಮದ ಕೆಳಗೆ ಇರುವಾಗ ದೇವರಿಗೆ ವಿಧೇಯನಾಗಿರಲು ಅಸಾಧ್ಯ. ಅವನು ದೇವರಲ್ಲಿ ನಂಬಿಕೆಯಿಟ್ಟಿ ಯೇಸುವನ್ನು ಕರ್ತನೆಂದು ಒಪ್ಪಿಕೊಂಡರೆ, ಅವನ ಪಾಪಗಳು ಕ್ಷಮಿಸಲ್ಪಟ್ಟು, ಅವನು ಪರಿಶುದ್ಧಾತ್ಮನನ್ನು ಹೊಂದುತ್ತಾನೆ. ಈ ರೀತಿಯಲ್ಲಿ ಒಳ ಮನುಷ್ಯನು ಕೃಪೆಯಿಂದಲೇ ಪಾಪದಿಂದ ಸ್ವತಂತ್ರನಾಗುತ್ತಾನೆ. ನಂಬಿಕೆಯ ಮೂಲಕವೇ ಆಗಲೀ ಅವನು ಮಾಡಿರುವ ಒಳ್ಳೇ ಕಾರ್ಯಗಳಿಂದಾಗಲೀ ಅಥವ ನೀತಿಯ ಕಾರ್ಯಗಳಿಂದಾಗಲೀ ಅಲ್ಲ.

ಒಳ ಮನುಷ್ಯನಲ್ಲಿ ಆತ್ಮನಲ್ಲಿ ಇದ್ದರೂ ಅವನು ಈಗಲೂ ಶರೀರಭಾವದಲ್ಲಿದ್ದಾನೆ, ಮತ್ತು ಅವನ ಪಾಪಗಳೊಂದಿಗೆ, ಮುಂದುವರೆಯುತ್ತಾನೆ. ಕ್ರಿಸ್ತನ ಹೋಲಿಕೆಗೆ ಅವನು ಬರಬೇಕಾದರೆ, ಒಳ ಮನುಷ್ಯನ ಶುದ್ಧೀಕರಣ ಈಗಲೂ ಆಗುತ್ತಿರಬೇಕು.

**ನಂಬಿಕೆಯು ಎರಡನೇ ಹಂತದಲ್ಲಿ.**
ದೇವರು ಒಳ ಮನುಷ್ಯನಿಗೆ ಪರಿಪೂರ್ಣ ಶುದ್ಧತೆಗಾಗಿ ಆಜ್ಞಾಪಿಸುತ್ತಾನೆ. ಮತ್ತು ಕ್ರಿಸ್ತನಲ್ಲಿ ಸೇರುವಂತೆ ಹೊಸದೇಹದಲ್ಲಿ ಪಾಪವಿಲ್ಲವೆಂದು ನಂಬಿದ ಒಳ ಮನುಷ್ಯನು ಪರಿಶುದ್ಧಾತ್ಮನಲ್ಲಿ ನಂಬಿಕೆಯಿಡುತ್ತಾ ತಾನು ಮಾಡುವ ಪ್ರತಿಯೊಂದು ಪಾಪವನ್ನು ಸಾಯಿಸುತ್ತಾ ಬರಬೇಕು. ಪರಿಶುದ್ಧಾತ್ಮನು ಒಳ ಮನುಷ್ಯನನ್ನು ಶುದ್ಧಗೊಳಿಸಿದಾಗಲೇ ಅವನು ಕ್ರಿಸ್ತನಂತೆ ಆಗುವನು.

ಯಾರೇ ಆಗಲೀ ನಂಬಿಕೆಯಿಟ್ಟಿದ್ದರೂ ಪಾಪ ಮಾಡುತ್ತಾ ಇದ್ದರೆ, ಅವನು ಸತ್ಯಕ್ಕೆ ಅವಿಧೇಯನಾಗಿದ್ದಾನೆ, ಯಾಕೆಂದರೆ ಅವನು ನಂಬಿಕೆಯಲ್ಲಿಲ್ಲ. ಅವನಿಗೆ ಉಪದೇಶ ಮಾಡಿದ ಸುವಾರ್ತೆಯಿಂದ ಅವನಿಗೇನೂ ಲಾಭವಾಗಲಿಲ್ಲ ಯಾಕೆಂದರೆ ಅವನು ವಾಕ್ಯವನ್ನು ನಂಬಿಕೆಯೊಂದಿಗೆ ಬೆರೆಸಲಿಲ್ಲ.

**ಒಳ ಮನುಷ್ಯನನ್ನು ಪರಿಶುದ್ಧಾನನ್ನಾಗಿಸುವಿಕೆ :**

ವಿಶ್ವಾಸದ ಎರಡನೇ ಹಂತದಲ್ಲಿ ಮಾತ್ರ ದೇವರು ವಿಶ್ವಾಸಿಯನ್ನು ಪರಿಪೂರ್ಣ ಪರಿಶುದ್ಧತೆಗೆ ಕರೆಯುತ್ತಾನೆ. ಯೇಸುವಿನಲ್ಲಿನ ನಂಬಿಕೆ ಒಳ ಮನುಷ್ಯನನ್ನು ನೀತಿವಂತನನ್ನಾಗಿಸುತ್ತದೆ. ಯಾಕೆಂದರೆ, ಒಳಗೆ ನೆಲೆಗೊಂಡಿರುವ ಆತ್ಮನು ಪಾಪವನ್ನು ಹೋಗಲಾಡಿಸುತ್ತಾನೆ, ಅದರೆ, ಸತ್ಯದಲ್ಲಿನ ನಂಬಿಕೆ ಮತ್ತು ಪರಿಶುದ್ಧಾತ್ಮನ ಕ್ರಿಯೆ ಒಳ ಮನುಷ್ಯನನ್ನು ಪರಿಶುದ್ಧಗೊಳಿಸುತ್ತದೆ.

ವ್ಯರ್ಥವಾದವನೇ ಎಂದು ಹೇಳಿದರೆ, ಅವನ ನ್ಯಾಯ ಸಭೆಯ ಅಪಾಯಕ್ಕೆ ಒಳಗಾಗುವನು. ಇದಲ್ಲದೆ ಯಾವನಾದರೂ – ನೀನು ಮೂರ್ಖನು ಎಂದು ಹೇಳಿದರೆ, ಅವನು ನರಕಾಗ್ನಿಯ ಅಪಾಯಕ್ಕೆ ಒಳಗಾಗುವನು."

ಪಾಪದಿಂದ ಬಿಡುಗಡೆ ಹೊಂದಿದ ಒಳಮನುಷ್ಯನು ತಾನು ಸ್ವತಂತ್ರ್ಯದ ನಿಯಮಕ್ಕನುಗುಣವಾಗಿ ನ್ಯಾಯತೀರ್ಪನ್ನು ಹೊಂದುವನೆಂದು ಅರ್ಥಮಾಡಿಕೊಳ್ಳಬೇಕು.

1 ಪೇತ್ರ 2:16 "ಸ್ವತಂತ್ರರಾಗಿರ್ರಿ, ಆದರೆ ಕೆಟ್ಟತನವನ್ನು ಮರೆ ಮಾಡುವುದಕ್ಕೆ ನಿಮ್ಮ ಸ್ವಾತಂತ್ರ್ಯವನ್ನು ಉಪಯೋಗಿಸಬೇಡಿರಿ ; ಆದರೆ ನೀವು ದೇವರ ದಾಸರ ಹಾಗೆ ಇರ್ರಿ."

2 ಕೊರಿ 13:5 "ನಂಬಿಕೆಯಲ್ಲಿ ನೀವು ಇದ್ದೀರೋ ಏನೋ ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ ; ನಿಮ್ಮನ್ನು ನೀವೇ ಪರಿಶೋಧಿಸಿಕೊಳ್ಳಿರಿ; ನೀವು ಭ್ರಷ್ಟರಲ್ಲದಿದ್ದರೆ, ಯೇಸು ಕ್ರಿಸ್ತನು ನಿಮ್ಮಲ್ಲಿದ್ದಾನೆಂದು ನಿಮ್ಮಷ್ಟಕ್ಕೆ ನೀವೇ ತಿಳಿದುಕೊಳ್ಳುವುದಿಲ್ಲವೋ ?"

ಕ್ರೈಸ್ತನು ತಾನು ಪರಿಶುದ್ಧಾತ್ಮನನ್ನು ಸ್ವೀಕರಿಸಿದ್ದಾನೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯ ಅಥವಾ ಪಾಪವು ಅವನಲ್ಲಿ ಇನ್ನೂ ನೆಲೆಗೊಂಡಿದೆಯೋ ಏನೋ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು. ಪವಿತ್ರಾತ್ಮನು ಒಂದು ವೇಳೆ ಅವನಲ್ಲಿ ನೆಲೆಗೊಂಡಿದ್ದರೆ ಅವನು ಬರೀ ಮತವನ್ನು ಆಚರಿಸುತ್ತಾ ಇದ್ದಾನೆ, ಯಾಕೆಂದರೆ ಒಳ ಮನುಷ್ಯನ ಶುದ್ಧೀಕರಣ ಸಾಧನೆ ಆಗುವುದಿಲ್ಲ.

ಗಲಾ 5:25 "ನಾವು (ಒಳ ಮನುಷ್ಯ) ಆತ್ಮನಲ್ಲಿ ಜೀವಿಸುವುದಾದರೆ, ನಾವೂ ಸಹ ಆತ್ಮನಲ್ಲಿ ನಡೆಯೋಣ."

ಇಬ್ರಿ 4:2 "ಯಾಕೆಂದರೆ ಅವರಿಗೆ ಸುವಾರ್ತೆಯು ಸಾರೋಣವಾದಂತೆಯೇ ನಮಗೂ ಸಾರೋಣವಾಯಿತು; ಆದರೆ, ಕೇಳಿದವರು ನಂಬಲಿಲ್ಲವಾದ ಕಾರಣ ಸಾರಿದ ಆ ವಾಕ್ಯದಿಂದ ಅವರಿಗೆ ಪ್ರಯೋಜನವಾಗಲಿಲ್ಲ."

2 ಥೆಸ 2:13,14 "...ಸತ್ಯದ ಮೇಲೆ ನಂಬಿಕೆಯನ್ನಿಟ್ಟು ರಕ್ಷಣೆನ್ನು ಪಡೆಯುವುದಕ್ಕಾಗಿ, ದೇವರು ನಿಮ್ಮನ್ನು ಆದಿಯಿಂದ ಆರಿಸಿಕೊಂಡದ್ದರಿಂದ ನಾವು ನಿಮ್ಮ ವಿಷಯದಲ್ಲಿ ಯಾವಾಗಲೂ ದೇವರಿಗೆ ಕೃತಜ್ಞತಾಸ್ತುತಿ ಮಾಡುವುದಕ್ಕೆ ಬದ್ಧರಾಗಿದ್ದೇವೆ. ನಮ್ಮ ಕರ್ತನಾದ ಯೇಸುಕ್ರಿಸ್ತನ ಪ್ರಭಾವವನ್ನು ಹೊಂದಿಕೊಳ್ಳ ಬೇಕೆಂದು ದೇವರು ನಮ್ಮ ಸುವಾರ್ತೆಯ ಮೂಲಕವಾಗಿ ನಿಮ್ಮನ್ನು ಅದಕ್ಕೆ ಕರೆದನು"

1 ಕೊರಿ 3:16,17 "ನೀವು (ದೇಹ) ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ (ನಿಮ್ಮ ದೇಹ) ನಿಮಗೆ ಗೊತ್ತಿಲ್ಲವೋ ? ಯಾವನಾದರೂ ದೇವರ ಆಲಯವನ್ನು (ದೇಹ) ಹೊಲೆ ಮಾಡಿದರೆ, ದೇವರು ಅವನನ್ನು ನಾಶ ಮಾಡುವನು ; ಯಾಕೆಂದರೆ ದೇವರ ಆಲಯವು ಪವಿತ್ರವಾದದ್ದು, ಆ ಆಲಯವು ನೀವೇ."

ರೋಮ 12:2 "ಮತ್ತು ಇಹಲೋಕವನ್ನು ಅನುಸರಿಸದೇ... ನೂತನ ಮನಸ್ಸನ್ನು (ಪ್ರಾಣ) ಹೊಂದಿಕೊಂಡು ರೂಪಾಂತರಗೊಂಡವರಾಗಿರ್ರಿ (ನಿಮ್ಮ ಆತ್ಮನಲ್ಲಿ)."


ಯೇಸುವಿನಲ್ಲಿನ ವಿಶ್ವಾಸಿಯು ಪರಿಶುದ್ಧನನ್ನಾಗಿಸದ ಹೊರತು ದೇವರನ್ನು ಕಾಣಲಾರನೆಂದು ಅರ್ಥ ಮಾಡಿಕೊಳ್ಳಬೇಕು. ಒಳ ಮನುಷ್ಯನು ಪರಿಪೂರ್ಣನಾಗ ಬೇಕಾದರೆ, ಅವನ ಮನಸ್ಸು ನೂತನವಾಗಬೇಕು. ಹಾಗೆ ಅವನ ಆತ್ಮವು ಮಾರ್ಪಾಟಾಗುತ್ತದೆ.

**ಪರಿಶುದ್ಧಗೊಳಿಸುವಿಕೆಯೆಂದರೆ :**

1) ಒಳ್ಳೆ ಕೆಟ್ಟದ್ದರ ಬಗ್ಗೆ ಎಚ್ಚರಗೊಂಡ ಮನಸ್ಸನ್ನು ಕ್ರಿಸ್ತನಲ್ಲಿರುವ ಸತ್ಯದಲ್ಲಿ ಎಚ್ಚರಗೊಳಿಸುವಂತೆ ಮನಸ್ಸನ್ನು ನೂತನಗೊಳಿಸುವುದು.
2) ಅಪವಿತ್ರತೆಯಿಂದ ದೊರೆತನ ಮಾಡುವ ಆತ್ಮನು ಪವಿತ್ರನಾದ ಆತ್ಮಕ್ಕೆ ಮತ್ತು ಅಧೀನ ಸ್ವಭಾವಕ್ಕೆ ಮಾರ್ಪಡಬೇಕು.

ಒಳ ಮನುಷ್ಯನು ಆತ್ಮನಲ್ಲಿದ್ದಾಗ್ಯೂ ಅವನ ಪ್ರಾಣವು ಈಗಲೂ ಶರೀರಾಧೀನ ಸ್ವಭಾವವುಳ್ಳದ್ದಾಗಿದೆ, ಮತ್ತು ಆತ್ಮೀಕ ಮನಸ್ಸನ್ನು ಹೊಂದಿಲ್ಲ. ಮನಸ್ಸನ್ನು ನೂತನಗೊಳಿಸಲು ಒಳ್ಳೆ ಕಟ್ಟದ್ದರ ಎಚ್ಚರಿಕೆಯಿಂದ ಸತ್ಯದ ಬಗ್ಗೆ ಎಚ್ಚರಿಸುವುದು ನಂಬದೇ ಇರುವ ಮತ್ತು ದೊರೆತನ ಮಾಡುವ ಆತ್ಮವನ್ನು ಸತ್ಯವನ್ನು ನಂಬುವ ಆತ್ಮಕ್ಕೆ ತರುವ ಕಾರ್ಯಕ್ಕೆ ಕೇಂದ್ರಬಿಂದುವಾಗಿರುತ್ತದೆ.

ದೇವರ ವಾಕ್ಯವು (ಬೈಬಲ್) ಸತ್ಯವನ್ನು ಪ್ರಾಣಕ್ಕೆ ತಿಳಿಸುತ್ತದಾಗಲೀ ಆತ್ಮಕ್ಕಲ್ಲ. ಪ್ರಾಣದ ಮೂಲಕ ಸತ್ಯವನ್ನು ತಿಳಿದಂತೆಲ್ಲಾ ಆತ್ಮವು ನಂಬಿಕೆಯಿಟ್ಟು ಪ್ರಾಣಕ್ಕೆ ಅಧೀನಗೊಳ್ಳುತ್ತದೆ. ಅರ್ಧ ಸತ್ಯಗಳನ್ನು ಮತ್ತು ತಪ್ಪು ವ್ಯಾಖ್ಯಾನಗಳನ್ನು ಪ್ರಾಣಕ್ಕೆ ಬೋಧಿಸುವುದರಿಂದಲೂ ಆತ್ಮವು ಭಕ್ತಿಹೀನವಾಗಿಯೂ ಮತ್ತು ಅಧೀನ ಸ್ವಭಾವ ಇಲ್ಲದೆಯೂ ಹೋಗುತ್ತದೆ. ಆದುದರಿಂದಲೇ ವಿಶ್ವಾಸಿಗಳು ಪಾಪಿಗಳ ಹಾಗೆ ಜೀವಿಸುತ್ತಾ ಹೋಗುತ್ತಾರೆ.




1 ಪೇತ್ರ 3:5,6 "ಯಾಕೆಂದರೆ ಪೂರ್ವಕಾಲದಲ್ಲಿ ದೇವರ ಮೇಲೆ ನಂಬಿಕೆಯಿಟ್ಟ ಪರಿಶುದ್ಧ ಸ್ತ್ರೀಯರೂ ಸಹ ಹೀಗೆಯೇ ತಮ್ಮನ್ನು ಅಲಂಕರಿಸಿಕೊಂಡರು; ಅವರು ತಮ್ಮ ತಮ್ಮ ಗಂಡಂದಿರಿಗೆ (ಪ್ರಾಣ) ಅಧೀನರಾಗಿದ್ದರು. ಹಾಗೆಯೇ ಸಾರಳು ಅಬ್ರಹಾಮನಿಗೆ ವಿಧೇಯಳಾಗಿದ್ದು, ಅವನನ್ನು ಯಜಮಾನ ಎಂದು ಕರೆದಳು. ನೀವು ಸಾರಳ ಕುಮಾರ್ತೆಯರಾಗಿದ್ದೀರಲ್ಲಾ; ಇವು ಒಳ್ಳೆದನ್ನೂ ಮಾಡುವುದಾದರೆ, ಯಾವ ಭೀತಿಗೂ ಗಾಬರಿಪಡುವುದಿಲ್ಲ."

**ಗಮನಿಸು:** ಸಾರಳು (ಆತ್ಮ) ಅಪನಂಬಿಕೆಯಲ್ಲಿದ್ದಾಗ ಅಬ್ರಹಾಮನ ಮೇಲೆ (ಪ್ರಾಣ) ದೊರೆತನ ಮಾಡಿದಳು. ಅದರ ಪರಿಣಾಮವಾಗಿ ಇಷ್ಮಯೇಲನು ಜನಿಸಿದನು. ('ಶರೀರಾಧೀನವಾದ ಕ್ರಿಯೆ') ಆದರೆ ಅವಳು ದೇವರನ್ನು ನಂಬಿದಾಗ ಅಬ್ರಹಾಮನು ತಲೆಯೆಂದು ಒಪ್ಪಿಕೊಂಡು ಅಧೀನಳಾದಳು, ಇಸಾಕನನ್ನು ಅವನು ಬಲಿ ಅರ್ಪಿಸಿದಾಗ ಕೂಡ.

ರೋಮ 10:14,17 "ಆದರೆ ತಾವು (ಆತ್ಮ) ಯಾವಾತನನ್ನು ನಂಬಲಿಲ್ಲವೋ ಆತನನ್ನು ಬೇಡಿಕೊಳ್ಳುವುದು ಹೇಗೆ ? ಮತ್ತು ಆತನ ವಿಷಯವಾಗಿ ಕೇಳದಿರುವಲ್ಲಿ ಆತನನ್ನು ನಂಬುವುದು ಹೇಗೆ ? ಸಾರಿ ಹೇಳುವವನಿಲ್ಲದೆ ಕೇಳುವುದು ಹೇಗೆ ? ಕೇಳುವುದರಿಂದ ನಂಬಿಕೆಯುಂಟಾಗುತ್ತದೆ ; ದೇವರ ವಾಕ್ಯವನ್ನು ಕೇಳುವುದರಿಂದಲೇ."

ಶುದ್ಧೀಕರಿಸುವ ವಿಧಾನ ನಿಮ್ಮ ಪ್ರಾರ್ಥನೆಗಳನ್ನೂ ಮತ್ತು ದೇವರನ್ನೂ ಒಟ್ಟುಗೂಡಿಸುವುದಾಗಿದೆ. (ಕೊಲೋ 1:9–12). ನೀವು ಸ್ಥಿರಚಿತ್ತರಾಗಿರುವಾಗ ತಂದೆಯು ತಮ್ಮ ನಿಯಮಗಳನ್ನು ನಿಮ್ಮ ಪ್ರಾಣದಲ್ಲಿ ಇಡುತ್ತಾನೆ. ನಂತರ ನಿಮ್ಮ ಆತ್ಮನಲ್ಲಿ (ಇಬ್ರಿ 8:10 ಮತ್ತು ಇಬ್ರಿ 10:16) ಮತ್ತು ಪರಿಶುದ್ಧಾತ್ಮನು ಅಭಿಷೇಕವನ್ನು ಕೊಡುತ್ತಾನೆ ಮತ್ತು ನಿಮ್ಮನ್ನು ಅಭಿಷೇಕಿಸುತ್ತಾನೆ. (1 ಯೋಹಾ 2:20, 27) ಹೀಗೆ ಆತನ ಮಗನ ದೇಹಕ್ಕೆ ಅರ್ಹರನ್ನಾಗಿ ಮಾಡುತ್ತಾನೆ.

ನೀವು ಪ್ರಾರ್ಥನೆ ಮಾಡುವಾಗ ನಿಮ್ಮ ಪ್ರಾಣವು ...ಸಕಲ ಜ್ಞಾನವೂ ಆತ್ಮೀಯ ಗ್ರಹಿಕೆಯನ್ನು ಹೊಂದುವಂತೆ (ಕೊಲೋ 1:9), ದೇವರು ತನ್ನ ಪರಿಶುದ್ಧಾತ್ಮನ ಮೂಲಕ ನಿಮ್ಮ ಮನಸ್ಸಿನಲ್ಲಿ ತನ್ನ ನಿಯಮಗಳನ್ನು ಮತ್ತು ನಿಮ್ಮ ಹೃದಯಗಳಲ್ಲಿ (ಆತ್ಮ) ಬರಿಯುತ್ತಾನೆ. "ಕರ್ತನಿಗೆ ಯೋಗ್ಯರಾಗಿ ನಡೆದು, ಎಲ್ಲಾ ವಿಧದಲ್ಲಿ ಆತನನ್ನು ಸಂತೋಷ ಪಡಿಸುವವರಾಗಿರ ಬೇಕೆಂತಲೂ ... (ಕೊಲೋ 1:10)."

ನೀನು ಪ್ರಾರ್ಥನೆ ಮಾಡುವಾಗ ನಿನ್ನ ಆತ್ಮನು ...
"ಆತನ ಮಹಿಮಾ ಶಕ್ತಿಯ ಪ್ರಕಾರ ಪರಿಪೂರ್ಣ ಬಲಹೊಂದಿ, ಬಲಿಷ್ಠರಾಗಿ ಆನಂದ ಪೂರ್ವಕವಾದ ತಾಳ್ಮೆಯನ್ನು ಮತ್ತು ದೀರ್ಘ ಶಾಂತಿಯನ್ನು" ಹೊಂದಬೇಕೆಂದು (ಕೊಲೋ 1:11). ದೇವರು ನಿಮ್ಮ ಪ್ರಾರ್ಥನೆಗಳಿಗೆ ಉತ್ತರ ಸಿಕ್ಕಕೂಡಲೇ ನೀನು ದೇವರಿಗೆ ವಂದನೆ ಸಲ್ಲಿಸಬಹುದು. ಆತನು "... ಬೆಳಕಿನಲ್ಲಿರುವ ಪರಿಶುದ್ಧರ ಬಾಧ್ಯತೆಯಲ್ಲಿ (ಹೊಸದೇಹ) ಪಾಲುಗಾರರಾಗುವುದಕ್ಕೆ ನಮ್ಮನ್ನು (ನಿಮ್ಮನ್ನು) ಯೋಗ್ಯರನ್ನಾಗಿ ಮಾಡಿದ ತಂದೆಗೆ ಕೃತಜ್ಞತಾ ಸ್ತುತಿ ಮಾಡುವವರಾಗಿರ ಬೇಕೆಂತಲೂ . (ಕೊಲೋ 1:10)

ನಿಮ್ಮ ಪ್ರಾರ್ಥನೆಗಳು ಉತ್ತರ ಹೊಂದಿದ ಕೂಡಲೆ ದೇವರಿಗೆ ವಂದನೆ ಸಲ್ಲಿಸಿ "ನಮ್ಮನ್ನು (ನೀವು) ಪಾಲುಗಾರರಾಗುವುದಕ್ಕೆ ಯೋಗ್ಯರನ್ನಾಗಿ ಮಾಡುವದಕ್ಕೆ (ಹೊಸದೇಹ) ಬೆಳಕಿನಲ್ಲಿರುವ ಪರಿಶುದ್ಧರ ಬಾಧ್ಯತೆ."

2 ಕೊರಿ 6:16–18 "ವಿಗ್ರಹಗಳ ಕೂಡ ದೇವರ ಮಂದಿರಕ್ಕೆ ಒಪ್ಪಿಗೆಯೇನು ? ಯಾಕೆಂದರೆ ನೀವು ಜೀವವುಳ್ಳ ದೇವರ ಮಂದಿರವಾಗಿದ್ದೀರಲ್ಲಾ ಇದರ

**ಮನಸ್ಸನ್ನು ನೂತನ ಪಡಿಸುವಿಕೆ :**

ಶರೀರಾಧೀನ ಮನಸ್ಸುಳ್ಳ ವಿಶ್ವಾಸಿಯು 'ಒಳ್ಳೇ ಕೆಟ್ಟದರ' ತಿಳುವಳಿಕೆಗೆ ಅನುಸಾರವಾಗಿ ಕೆಲಸ ಮಾಡುತ್ತಾನೆ. ಮತ್ತು ಆತ್ಮದ ಮನುಸ್ಸುಳ್ಳ ವಿಶ್ವಾಸಿಯು ಸತ್ಯದ ತಿಳುವಳಿಕೆಗೆ ಅನುಗುಣವಾಗಿ ಕೆಲಸ ಮಾಡುತ್ತಾನೆ. ವಿಶ್ವಾಸಿಯು ವಾಕ್ಯವನ್ನು ಅಧ್ಯಯನ ಮಾಡಿ, ಪರಿಶೀಲಿಸಿ, ಧ್ಯಾನ ಮಾಡುತ್ತಾ ಇರುವಾಗ ಪರಿಶುದ್ಧಾತ್ಮನ ಅಭಿಷೇಕವು ಅವನಿಗೆ ವಾಕ್ಯದ ಅರ್ಥವನ್ನು ತಿಳಿಯಪಡಿಸುತ್ತದೆ. ಪ್ರಾಣಕ್ಕೆ ವಾಕ್ಯದಲ್ಲಿರುವ ಸತ್ಯ ಅರಿವಾದಾಗ ವಿಶ್ವಾಸಿಗೆ ಕ್ರಿಸ್ತನ ಮನಸ್ಸು ಇದೆ.

'ಒಳ್ಳೇ ಕೆಟ್ಟದರ' ತಿಳುವಳಿಕೆ ಪ್ರಾಣವನ್ನು ಎರಡು ಮನಸ್ಸುಳ್ಳವನಾಗ ಮಾಡಿ ನ್ಯಾಯತೀರ್ಪಿನ ಗುಣವನ್ನು ಕೊಡುತ್ತದೆ. ಶರೀರಾಧೀನದ ವಿಶ್ವಾಸಿಯು ತನ್ನದೇ ಆದ ನೀತಿಗನುಗುಣವಾಗಿ ಎಲ್ಲವನ್ನೂ ಒಳ್ಳೇದು ಕೆಟ್ಟದ್ದು ಎಂದು ತೀರ್ಪು ಮಾಡುತ್ತಾನೆ. ಇಂಥಹ ಬುದ್ಧಿ ಭಿನ್ನಮತಿಗಳಿಗೆ, ಜಗಳಗಳಿಗೆ ಮತ್ತು ಅವನ ಆತ್ಮದಲ್ಲಿ ಅನೀತಿಗೆ ಕಾರಣವಾಗುತ್ತದೆ. ಅದು 'ಶರೀರಾಧೀನ ಕ್ರಿಯೆಗಳಾಗಿ' ತೋರ್ಪಡಿಸಿಕೊಳ್ಳುತ್ತದೆ. ಆದರೆ ಸತ್ಯದ ತಿಳುವಳಿಕೆ ಪ್ರಾಣವನ್ನು ಏಕ ಮನಸ್ಸುಳ್ಳದ್ದಾಗಿಯೂ, ಜ್ಞಾನಿಯನ್ನಾಗಿಯೂ ಮಾಡುತ್ತದೆ. ಆತ್ಮೀಕ ಮನಸ್ಸುಳ್ಳವನು ಎಲ್ಲವನ್ನೂ ದೇವರ ನೀತಿಗನುಗುಣವಾಗಿ ತೀರ್ಪು ಮಾಡುತ್ತಾನೆ. ಇಂತಹ ಬುದ್ಧಿ ಒಮ್ಮತ, ಶಾಂತಿ ಮತ್ತು ಆತ್ಮನಲ್ಲಿ ನೀತಿಯನ್ನುಂಟು ಮಾಡುತ್ತದೆ. ಅದು ಆತ್ಮನು ಕೊಡುವ ಫಲವಾಗಿ ತೋರ್ಪಡಿಸಿಕೊಳ್ಳುತ್ತದೆ.

ಕೆಳಗೆ ಕಾಣುವ ಉದಾಹರಣೆಗಳು ಒಳ್ಳೆ ಕೆಟ್ಟದರ ತಿಳುವಳಿಕೆಗೆ ಅನುಸಾರವಾಗಿ ಕೆಲಸ ಮಾಡುವ ಶರೀರಾಧೀನ ಮನಸ್ಸನ್ನು ನಾವು ಅರ್ಥ ಮಾಡಿಕೊಳ್ಳುವಂತೆ ಮಾಡುತ್ತದೆ. ಮತ್ತು ಸತ್ಯಕ್ಕನುಗುಣವಾಗಿ ಕೆಲಸ ಮಾಡುವ ಆತ್ಮೀಕ ಮನಸ್ಸು ಏನೆಂದು ನಮಗೆ ಗೊತ್ತಾಗುತ್ತದೆ.

ಒಬ್ಬ ಎಜಮಾನನು ಕೂಲಿ ಆಳುಗಳನ್ನು ದಿನದ ಬೇರೆ ಬೇರೆ ಸಮಯಗಳಲ್ಲಿ ಬಾಡಿಗೆಗೆ ತೆಗೆದುಕೊಂಡನು. ಅವರೆಲ್ಲರಿಗೂ ಒಂದೇ ಕೂಲಿಯನ್ನು ಕೊಟ್ಟಾಗ ಹೆಚ್ಚು ತಾಸುಗಳು ಕೆಲಸ ಮಾಡಿದವರು ಯಜಮಾನನಿಗೆ ವಿರುದ್ಧವಾಗಿ ಗುಣಗುಟ್ಟಿದರು. ಆದರೆ ಕೆಲವೇ ತಾಸುಗಳು ಕೆಲಸ ಮಾಡಿದವರು ಅದನ್ನು ಒಳ್ಳೇದೆಂದು ತೀರ್ಪು ಮಾಡಿದರು.

ಆತ್ಮೀಕ ಮನಸ್ಸುಳ್ಳವನಿಗೆ ಗೊತ್ತಾಗುವುದೇನೆಂದರೆ, ಎಲ್ಲರೂ ಒಪ್ಪಿಗೆಗೆ ಪ್ರಕಾರ ಹಣವನ್ನು ಸ್ವೀಕರಿಸಿದರು, ಆದ್ದರಿಂದ ಅವರಿಗೆ ಗುಣುಗುಟ್ಟಲು ಯಾವ ಕಾರಣವೂ ಇರಲಿಲ್ಲ. ಶರೀರಾಧೀನವಾದ

ಸಂಬಂಧವಾಗಿ ದೇವರು – ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು. ನಾನು ಅವನಿಗೆ ದೇವರಾಗಿರುವೆನು. ಮತ್ತು ಅವರು ನನಗೆ ಪ್ರಜೆಯಾಗಿರುವರು ಎಂದು ಹೇಳಿದ್ದಾನೆ. ಆದ್ದರಿಂದ ಅವರ ಮಧ್ಯದಲ್ಲಿಂದ ನೀವು ಹೊರಗೆ ಬಂದು ನೀವು ಪ್ರತ್ಯೇಕವಾಗಿರಿ, ಇದಲ್ಲದೇ ಅಶುದ್ಧವಾದ ಯಾವುದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ. ಮತ್ತು – ನಾನು ನಿಮ್ಮನ್ನು ಸೇರಿಸಿಕೊಂಡು ನಿಮಗೆ ತಂದೆಯಾಗಿರುವೆನು ; ನೀವು ನಮಗೆ ಕುಮಾರ ಕುಮಾರ್ತೇಯರಾಗಿರುವಿರಿ ಎಂದು ಸರ್ವಶಕ್ತನಾದ ಕರ್ತನು ಹೇಳುತ್ತಾನೆ."
**ಗಮನಿಸು :** ದೇವರು ಅವರನ್ನು ತನ್ನ ಜನರೆಂದು ಕರೆಯಬೇಕಾದರೆ, ಪರಿಶುದ್ಧಾತ್ಮನು ಅವರಲ್ಲಿ ನೆಲೆಗೊಂಡಿರಬೇಕು, ಶುದ್ಧೀಕರಣವಾದ ನಂತರ ಆತನು ಅವರನ್ನು ಕುಮಾರ, ಕುಮಾರ್ತೆಯರಾಗಿ ಅಂಗೀಕರಿಸುತ್ತಾನೆ.

ಆದಿ ಕಾಂಡದಲ್ಲಿ ಒಳ್ಳೇ ಕೆಟ್ಟದರ ತಿಳುವಳಿಕೆಯು ಮಾನವನ ದೇಹದಲ್ಲಿ ಪಾಪವು ಹೊಕ್ಕುವಂತೆ ಹೊಕ್ಕಿದ್ದನ್ನು ನಾವು ತಿಳಿದುಕೊಂಡೆವು. ವಿಶ್ವಾಸಿಯ ಪ್ರಾಣವು ಈಗಲೂ ಒಳ್ಳೆ ಕೆಟ್ಟದರ ತಿಳುವಳಿಕೆಗೆ ಅನುಗುಣವಾಗಿ ಕೆಲಸ ಮಾಡುವುದರಿಂದ ಅವನ ಆತ್ಮವು ಸದಾ ಪಾಪದ ಒತ್ತಡದ ಕೆಳಗೆ ಇರುತ್ತದೆ. ಪ್ರಾಣವು ಒಳ್ಳೆ ಕೆಟ್ಟದರ ಬಗ್ಗೆ ಎಚ್ಚರವಾಗಿರುವಾಗ ಆತ್ಮವು ಭಕ್ತಿಹೀನವಾಗಿಯೂ ಮತ್ತು ದೂರೆತನ ಮಾಡುವಂತದ್ದಾಗಿಯೂ ಇರುತ್ತದೆ. ಪ್ರಾಣವು ಸತ್ಯದ ಬಗ್ಗೆ ಎಚ್ಚರವಾಗಿದ್ದಾಗ ಆತ್ಮವು ದೈವಭಕ್ತಿಯುಳ್ಳದ್ದಾಗಿಯೂ ಮತ್ತು ಅಧೀನ ಸ್ವಭಾವದಲ್ಲಿಯೂ ಇರುತ್ತದೆ.
ಉದಾ : ಯೇಸು ಹೇಳಿದ್ದು – ನಿನ್ನ ಇನ್ನೊಂದು ಕೆನ್ನೆಯನ್ನು ತಿರುಗಿಸು. ವಿಶ್ವಾಸಿಯ ಮನಸ್ಸು ಒಳ್ಳೆ ಕೆಟ್ಟದರ ಬಗ್ಗೆ ಎಚ್ಚರವಾಗಿರುವಾಗ ಅವನ ಆತ್ಮವು ಪ್ರತೀಕಾರ ಮಾಡುತ್ತದೆ. ಆದರೆ ವಿಶ್ವಾಸಿಯ ಮನೋಭಾವ ಸತ್ಯದ ಬಗ್ಗೆ ಎಚ್ಚರವಾಗಿರುವಾಗ ಅವನ ಆತ್ಮವು ಪ್ರತೀಕಾರ ಮಾಡುವುದಿಲ್ಲ.

ಶರೀರಾಧೀನ ವಿಶ್ವಾಸಿಯು ಭಕ್ತಿಹೀನರಂತೆಯೇ ನಡೆದುಕೊಳ್ಳುತ್ತಾನೆ, ಮತ್ತು ಅವನ ಆತ್ಮವು ದೃಢವಾಗಿ ಹೇಳುವುದಕ್ಕೆಲ್ಲಾ ಕಿವಿಗೊಡುತ್ತಾನೆ. ಅವನು ತೀರ್ಪು ಮಾಡುತ್ತಾನೆ ಮತ್ತು ಪಾಪ ಮಾಡುತ್ತಾನೆ, ಯಾಕೆಂದರೆ ಅವನು ಸತ್ಯಾಂಶಗಳನ್ನ (ಸತ್ಯ) ತಿಳಿಯದೆ ತೀರ್ಪು ಮಾಡುತ್ತಾನೆ. ಆತ್ಮಿಕ ಮನಸ್ಸುಳ್ಳ ವಿಶ್ವಾಸಿಯು ದೈವ ಭಕ್ತಿಯುಳ್ಳವನು. ಮತ್ತು ತನ್ನ ಆತ್ಮನ ಅಧೀನ ಸ್ವಭಾವಕ್ಕನುಸಾರವಾಗಿ ನಡೆದುಕೊಳ್ಳುತ್ತಾನೆ. ಅವನು ಪಾಪ ಮಾಡುವುದಿಲ್ಲ. ಯಾಕೆಂದರೆ ಅವನು ಜ್ಞಾನಿ. ಮತ್ತು ಅವನು ಸತ್ಯಕ್ಕನುಸಾರವಾಗಿ (ಸತ್ಯಾಂಷಗಳು) ತೀರ್ಪು ಮಾಡುತ್ತಾನೆ.

ಪಿಶಾಚನು ಸಭೆಯನ್ನು ತಪ್ಪುದಾರಿಗೆಳೆದಿದ್ದಾನೆ, ಮತ್ತು ಅವರು ಒಬ್ಬರನ್ನೊಬ್ಬರು ತೀರ್ಪು ಮಾಡಬಾರದೆಂದು ಅವರಿಗೆ ಮನದಟ್ಟು ಮಾಡಿದ್ದಾನೆ. ಆದರೆ ವಾಕ್ಯವು ಹೀಗೆ ಹೇಳುತ್ತದೆ :
ಇಬ್ರಿ 3:13 "ನಿಮ್ಮಲ್ಲಿ ಒಬ್ಬರಾದರೂ ಪಾಪದಿಂದ ಮೋಸ ಹೋಗಿ ಕಠಿಣರಾಗದಂತೆ – ಈ ದಿನ ಎಂದು ಕರೆಯಲ್ಪಡುವಾಗಲೇ ಪ್ರತಿ ನಿತ್ಯವೂ ಒಬ್ಬರನ್ನೊಬ್ಬರು ಎಚ್ಚರಿಸಿರಿ." ಪರಿಪಕ್ವವಾದ ದೇವರ ಮಕ್ಕಳು ಪಾಪ ಮಾಡುವುದಿಲ್ಲವಾದುದರಿಂದ ಅವರಿಗೆ ಸಭೆಯಲ್ಲಿರುವ ತುಂಟರನ್ನು ಬುದ್ಧಿಹೇಳಿ ನಡೆಸುವುದಕ್ಕಾಗಿ ಅಧಿಕಾರವೂ ಜವಾಬ್ದಾರಿಕೆಯೂ ಕೊಡಲ್ಪಟ್ಟಿದೆ. ಆದುದರಿಂದ ತಿರುಗಿ ಹುಟ್ಟಿದ ವಿಶ್ವಾಸಿಗಳು ಒಬ್ಬರನ್ನೊಬ್ಬರು ತೀರ್ಪು ಮಾಡಿ ಅವರಲ್ಲಿಯೇ ಒಬ್ಬರು ಸತ್ಯಕ್ಕನುಸಾರವಾಗಿ ನಡೆಯುತ್ತಾ ಇಲ್ಲವೋ ಎಂದು ನೋಡಿಕೊಳ್ಳಬೇಕು.

ದೇವರ ವಾಕ್ಯವು ಸತ್ಯವಾದದ್ದು. ಅದು ಸತತವಾಗಿ ಸ್ಥಿರಪಡಿಸಲಾಗಿದೆ. ಹೇಗಾದರು ನೂತನ ಪಡಿಸದ ವಿಶ್ವಾಸಿಯು ತನ್ನ ಮನಸ್ಸನ್ನು ದಿನೇದಿನೇ ಸಂದರ್ಭಕ್ಕನುಸಾರವಾಗಿ ಬದಲಾಯಿಸುತ್ತಾನೆ. ನೂತನ ಗೊಳಿಸದ ಮನಸ್ಸಿಗೆ ಯಾವುದು ಒಳ್ಳೆಯದೆಂದು ಕಾಣುವುದೋ ಅದು ವಾಸ್ತವವಾಗಿ ಕೆಟ್ಟದ್ದಾಗಿರಬಹುದು ಮತ್ತು ನೂತನ ಗೊಳಿಸದ ಮನಸ್ಸಿಗೆ ಯಾವುದು ಕೆಟ್ಟದ್ದಾಗಿ

ವಿಶ್ವಾಸಿಯನ್ನು ಹೊಗಳಿದರೆ ಅದು ಒಳ್ಳೆಯದು. ಮತ್ತು ಅವನ ಆತ್ಮ ಆನಂದ ಹೊಂದುತ್ತದೆ. ಹೇಗಾದರೂ ಅವನನ್ನು ಟೀಕೆ ಮಾಡಿದರೆ ಅದು ಕೆಟ್ಟದ್ದು ಮತ್ತು ಅವನ ಆತ್ಮಕ್ಕೆ ನೋವಾಗುತ್ತದೆ. ಆನಂದವೂ ಮತ್ತು ನೋವೂ ಗರ್ವಕ್ಕೆ ಮತ್ತು ಕಹಿಯಾಗುವುದಕ್ಕೆ ನಡೆಸಬಹುದು. ಇವೆರಡೂ 'ಶರೀರದ ಕ್ರಿಯೆಗಳು'. ಈ 'ಒಳ್ಳೆಯದು ಮತ್ತು ಕೆಟ್ಟ' ಮನೋಭಾವನೆಗಳೆರಡೂ ಪಾಪಗಳಿಗೆ ನಡೆಸಬಹುದು, ಅಂದರೆ ಗರ್ವ, ಹೊಟ್ಟೆಕಿಚ್ಚು, ಗೊಡ್ಡುಹರಟೆ, ಕೋಪ, ಚಾಡಿಚುಚ್ಚುವುದು, ಒಡಕು. ಇತ್ಯಾದಿ. ಆತ್ಮೀಕ ಮನಸ್ಸುಳ್ಳ ವಿಶ್ವಾಸಿಯು ಇನ್ನೊಂದು ಕಡೆ ಹೊಗಳಿದರೂ, ಟೀಕಿಸಿದರೂ, ತನ್ನ ಆತ್ಮನಲ್ಲಿ ಮನಗುಂದುವುದಿಲ್ಲ. ಅವನು ಪ್ರತಿಯೊಂದು ಆಲೋಚನೆಯನ್ನು ಸತ್ಯಕ್ಕೆ ವಿಧೇಯನಾಗಿ ಹಿಡಿಯುತ್ತಾನೆ. ಒಳ್ಳೆ ಕೆಟ್ಟದರ ತಿಳುವಳಿಕೆಯನ್ನು ನಿರಾಕರಿಸಿ ಅವನು ತನ್ನ ಆತ್ಮನನ್ನು ಕಾಪಾಡಿಕೊಂಡು ಪಾಪ ಮಾಡುವುದಿಲ್ಲ.

ಎಲ್ಲ ಮನುಷ್ಯರನ್ನೂ ಉಂಟುಮಾಡಿದವನು ದೇವರು. ಒಬ್ಬ ವ್ಯಕ್ತಿಯನ್ನು ಇನ್ನೊಬ್ಬನಿಗಿಂತ ಮೇಲೆಂದು ಪರಿಗಣಿಸುವುದು ಶರೀರ ಮನೋಭಾವದ ಗುರುತು. ಶರೀರಾಧೀನ ಮನಸ್ಸುಳ್ಳವನೇ ಸುಂದರ ಮತ್ತು ಅಸಹ್ಯ, ಬಡವ ಬಲ್ಲಿದ, ಜಾಣ ಮತ್ತು ಮೂಢ, ಪ್ರಾಮುಖ್ಯ ಮತ್ತು ತಿರಸ್ಕೃತ ಎಂಬ ಭಿನ್ನ ಮತಗಳನ್ನು ಉಂಟುಮಾಡುವವನು. ಆತ್ಮೀಕ ಮನೋಭಾವವುಳ್ಳ ವಿಶ್ವಾಸಿಯು ಕ್ರಿಸ್ತನಂತಿದ್ದು, ಪಕ್ಷಪಾತಿಯಾಗಿರುವುದಿಲ್ಲ.

ಶರೀರಾಧೀನದ ಮನೋಭಾವನೆಯುಳ್ಳ ವಿಶ್ವಾಸಿಗಳು ನಂಬಿಕೆಗೆ ಅನರ್ಹರು. ಯಾಕೆಂದರೆ ಅವರು "ಹೌದು" ಹೌದಲ್ಲ "ಅಲ್ಲ" ಅಲ್ಲಲ್ಲ. ಉದಾಹರಣೆ : ಅವರು ಮದುವೆಯಾದಾಗ "ಮರಣವು ನಮ್ಮನ್ನು ಅಗಲಿಸುವ ತನಕಾ" ಆದರೆ ನಂತರದ ದಿನಗಳಲ್ಲಿ, ಅವರು ಹೌದು ಇಲ್ಲವಾಗಿ ಅವರು ವಿಚ್ಛೇದನ ಹೊಂದುವರು. ಅವರು ವಿಚ್ಛೇದನ ಹೊಂದಿದ ಕಾರಣ ಅವರ ಮಧ್ಯೆ ಜಗಳವಾಯಿತು. ವ್ಯಭಿಚಾರ ಮಾಡಿದರು ಇತ್ಯಾದಿ. ಇವೆಲ್ಲವೂ ಶರೀರಭಾವದ ಕ್ರಿಯೆಗಳು. ಇಬ್ಬರು ವಿಶ್ವಾಸಿಗಳು ಒಂದು ವ್ಯವಹಾರ ಪತ್ರಕ್ಕೆ ಸಹಿ ಹಾಕುತ್ತಾರೆ. ಆದರೆ ಸ್ವಲ್ಪ ಸಮಯದ ನಂತರ ಅದು 'ಇಲ್ಲ'ವಾಗಿ ಅವರ ಒಪ್ಪಂದ ನ್ಯಾಯಾಲಯದಲ್ಲಿ ಕೊನೆಗಾಣುತ್ತದೆ. ಅತ್ಮನ ಮನೋಭಾವವುಳ್ಳ ವಿಶ್ವಾಸಿಯ 'ಹೌದು' ಹೌದು ಮತ್ತು ಅವನ 'ಇಲ್ಲ' ಇಲ್ಲ. ಅದು ಅವನಿಗೆ ಅನಾನುಕೂಲವಾಗಿದ್ದರೂ ಸಹಾ.

ಮೇಲ್ಕಂಡ ಸಂಗತಿಗಳೆಲ್ಲಾ ತೋರಿಸುವುದೇನೆಂದರೆ ಶರೀರಾಧೀನ ಸ್ವಭಾವದ ವಿಶ್ವಾಸಿಯು ಒಳ್ಳೆ ಕೆಟ್ಟದ್ದರ ಅರಿವಿನಿಂದ ಕೆಲಸಮಾಡುತ್ತಾನೆ ಮತ್ತು ಅವನು ಬಹು ಯಥಾರ್ಥವಾಗಿ ಕೆಲಸ ಮಾಡಿದರೂ ಪಾಪ ಮಾಡುವುದನ್ನು ನಿಲ್ಲಿಸಲಾರ, ಸತ್ಯವೇನೆಂದರೆ,

ಕಾಣುವುದೋ, ಅದು ವಾಸ್ತವವಾಗಿ ಒಳ್ಳೆಯದಾಗಿರ ಬಹುದು. ನೆನಪಿನಲ್ಲಿಡಿ ! 'ಒಳ್ಳೇದು' ಮತ್ತು 'ಕೆಟ್ಟದ್ದು' ಸತ್ಯವಾಗಿ ಇರಬೇಕಾಗಿಲ್ಲ. ಹೇಗಾದರೂ ಸತ್ಯವು ಯಾವಾಗಲೂ ಒಳ್ಳೆಯದೇ. ವಾಕ್ಯವು 'ಹೌದು' ಎಂದರೆ, ಅದು ಒಳ್ಳೆಯದು ಮತ್ತ ವಾಕ್ಯವು 'ಇಲ್ಲ' ಎಂದರೆ ಅದು ಕೂಡ ಒಳ್ಳೆಯದೇ.

ದೇವರ ಮಕ್ಕಳನ್ನು ಉತ್ಪತ್ತಿ ಮಾಡುವ ಬೀಜ ದೇವರ ವಾಕ್ಯವೇ. ದೇವರ ವಾಕ್ಯವೂ ಪಾಪ ಮಾಡದ ಒಬ್ಬ ಮಗನನ್ನು ಪಡೆಯದೇ ಹೋದರೆ, ಆಗ ಅವರಿಗೆ ಸಿಕ್ಕ ವಾಕ್ಯದ ಉಪದೇಶವು ತಪ್ಪಾಗಿರಬೇಕು. ಓಃ! ಸತ್ಯವೇದದ ತಪ್ಪು ಬೋಧನೆ ಸುಳ್ಳಾಗುತ್ತದೆ ಆದುದರಿಂದ ಅದು ಸತ್ಯವಲ್ಲ. ತಪ್ಪು ಬೋಧನೆಗಳ ಫಲಿತಾಂಶವೇನೆಂದರೆ , ವಿಶ್ವಾಸಿಗಳು ಸತ್ಯವೇದದಿಂದ ಉಲ್ಲೇಖಿಸಿದರೂ ಪಾಪದಲ್ಲಿ ಮುಂದುವರೆಯುತ್ತಾರೆ. ಯೇಸು ಹೇಳಿದ್ದು : "ಇದಲ್ಲದೆ ನೀವು ಸತ್ಯವನ್ನು ತಿಳಿದುಕೊಳ್ಳುವಿರಿ. ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು. (ಪಾಪದಿಂದ)..." ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ. ಪಾಪ ಮಾಡುವವನು ಪಾಪಕ್ಕೆ ಗುಲಾಮನಾಗಿದ್ದಾನೆ. ಮತ್ತು ಗುಲಾಮನು (ಪಾಪದ) ದೇವರ ಮನೆಯಲ್ಲಿ ಶಾಶ್ವತವಾಗಿ ನೆಲೆಸುವುದಿಲ್ಲ ; ಆದರೆ ಮಗನು ಯಾವಾಗಲೂ ಇರುತ್ತಾನೆ. ಯೋಹ 8:32 ; 8:34,38

ಪ್ರತಿಯೊಂದು ಬೀಜ ಅದರಂತೆಯೇ ಫಲಕೊಡುತ್ತದೆ. ವಾಕ್ಯವನ್ನು ಕೇಳಿದ ವಿಶ್ವಾಸಿಯು ಪಾಪ ಮಾಡುವುದನ್ನು ನಿಲ್ಲಿಸದೇ ಹೋದರೆ, ಅವನು ದೇವರ ಮಗನಲ್ಲ ಆದರೆ ಹಾದರಕ್ಕೆ ಹುಟ್ಟದ ಮಗನಾದರೋ ದೇವರಿಂದ ನಿರಾಕರಿಸಲ್ಪಡುತ್ತಾನೆ. ಉದಾಹರಣೆ : ನೀನು ಒಂದು ಕೋತಿಗೆ ಉಡುಪು ಧರಿಸಿ ಮನುಷ್ಯನಂತೆ ನಟಿಸಲು ಹೇಳಿಕೊಡಬಹುದು. ಅವನು ಒಂದು ಬೆಲೆಯುಳ್ಳ ವೇಷ ಧರಿಸಬಹುದು, ಬೈಸಿಕಲ್ ಸವಾರಿ ಮಾಡಬಹುದು, ತನ್ನ ಯಜಮಾನನಿಗೆ ಮುದ್ದಿಡಬಹುದು ಆದರೂ ಅವನು ಕೋತಿಯಾಗಿಯೇ ಉಳಿಯುತ್ತಾನೆ. ವಾಕ್ಯವನ್ನು ತಿಳಿದು ಅದರ ಶಕ್ತಿಯನ್ನು ತಿರಸ್ಕರಿಸುವ ಒಬ್ಬ ವಿಶ್ವಾಸಿಯ ಸ್ಥಿತಿಯೂ ಹೀಗೆಯೇ ಇರುತ್ತದೆ.

ಬೈಬಲ್ "ಸುಳ್ಳು ಹೇಳಬೇಡ, ಕದಿಯಬೇಡ, ದಯೆತೋರಿಸು ಇತ್ಯಾದಿ". ಎಂದು ಹೇಳುವಾಗ ಮನಸ್ಸನ್ನು ನೂತನಗೊಳಿಸದ ವಿಶ್ವಾಸಿಗೆ ಅದು ಹೇಳುತ್ತಾ ಇದೆ. ಯಾಕೆಂದರೆ ಮನಸ್ಸನ್ನು ನೂತನಗೊಳಿಸಿದ ಒಬ್ಬ ದೇವರ ಮಗನು ಹೀಗೆ ಮಾಡುವುದಿಲ್ಲ. ಮನಸ್ಸನ್ನು ನೂತನಗೊಳಿಸದ ವಿಶ್ವಾಸಿಯು ತಾನು ಕಳ್ಳತನ ಮಾಡದಿದ್ದರೆ ಒಳ್ಳೆಯವನು ಅಂದುಕೊಳ್ಳುತ್ತಾನೆ, ಮತ್ತು ಕಳ್ಳತನ ಮಾಡಿದರೆ ಕೆಟ್ಟವನೆಂದು, ಯಾಕೆಂದರೆ ಅವನಿಗೆ ಒಳ್ಳೇ ಕೆಟ್ಟದರ ಅರಿವಿದೆ. ಇದು ಮತಾಸಕ್ತಿಯುಳ್ಳ ವಿಶ್ವಾಸಿಗೆ ಗುರುತಾಗಿದೆ. ದೇವರು ಇಷ್ಟು ದಿವಸ ಇಂತಹ ವಿಶಾದಕರವಾದ ಮಾನಸಿಕ ಸ್ಥಿತಿಯನ್ನು ಸಹಿಸಿಕೊಂಡಿರಬೇಕು, ಯಾಕೆಂದರೆ, ಅಂತಹ ವಿಶ್ವಾಸಿಯು ಶೋಧನೆಗೀಡಾದರೆ, ಅವನು ತನ್ನ ಪಾಪದ ಸ್ಥಿತಿಗೆ ಹಿಂತಿರುಗುತ್ತಾನೆ.

ಲೂಕ 13:6-9 "ಮತ್ತು ಆತನು ಈ ಸಾಮ್ಯವನ್ನು ಕೂಡಾ ಹೇಳಿದನು : ಒಬ್ಬಾನೊಬ್ಬ ಮನುಷ್ಯನಿಗೆ ತನ್ನ ದ್ರಾಕ್ಷೇ ತೋಟದಲ್ಲಿ ನೆಡಲ್ಪಟ್ಟಿದ್ದ ಒಂದು ಅಂಜೂರದ ಮರವಿತ್ತು ; ಮತ್ತು ಅವನು ಬಂದು ಅದರಲ್ಲಿ ಫಲವನ್ನು ಹುಡುಕಿದಾಗ ಒಂದೂ ಸಿಕ್ಕಲಿಲ್ಲ. ಆಗ ಅವನು ತನ್ನ ದ್ರಾಕ್ಷೇ ತೋಟವನ್ನು ಮಾಡುವವನಿಗೆ – ಇಗೋ, ಈ ಮೂರು ವರ್ಷಗಳಿಂದ ನಾನು ಈ ಅಂಜೂರದ ಮರದಲ್ಲಿ ಫಲ ಹುಡುಕಿದರೂ ಒಂದನ್ನೂ ಕಂಡುಕೊಳ್ಳಲಿಲ್ಲ ; ಇದನ್ನು ಕಡಿದು ಹಾಕು ; ಭೂಮಿಗೆ ಇದು ಯಾಕೆ ಭಾರವಾಗಿರಬೇಕು ಎಂದು ಹೇಳಿದನು. ಆದರೆ ಅವನು ಪ್ರತ್ಯುತ್ತರವಾಗಿ – ಒಡೆಯನೇ ನಾನು ಅದರ ಸುತ್ತಲೂ ಅಗೆದು ಗೊಬ್ಬರಹಾಕುವವರೆಗೆ ಈ ವರ್ಷವು ಇದನ್ನು ಬಿಡು, ಇದು ಫಲ ಫಲಿಸಿದರೆ

ಒಬ್ಬ ದೇವರ ಮಗನು ಪಾಪ ಮಾಡುವುದಿಲ್ಲ, ಆದರೆ ಶರೀರಾಧೀನ ಸ್ವಭಾವದ ವಿಶ್ವಾಸಿಗಳು ದೇವರೊಂದಿಗೆ ಸಮಂಜಸವಾಗುವುದಿಲ್ಲ. ದೇವರು 'ಪರಿಪೂರ್ಣವಾಗಿರಿ' ಎಂದು ಹೇಳುತ್ತಾನೆ, ಆದರೆ ಅವರು 'ಅದು ಸಾಧ್ಯವಲ್ಲ' ಎಂದು ಹೇಳುತ್ತಾರೆ. ಆದುದವರಿಂದ ಅವರು ಯಾವಾಗಲೂ ಸತ್ಯದ ಆತ್ಮವನ್ನು ತಡೆಯುತ್ತಾರೆ. ಸತ್ಯವನ್ನು ಅವರು ಒಪ್ಪಿಕೊಳ್ಳದೇ ಇರುವುದರಿಂದ ಅವರು ಪಾಪದಲ್ಲಿಯೇ ಉಳಿಯುತ್ತಾರೆ. ಅವರು ಆತ್ಮನ ಮಕ್ಕಳೆಂದು ಹೇಗೆ ಹಕ್ಕು ಸಾಧಿಸಬಲ್ಲರು ?

**ಆತ್ಮನು ರೂಪಾಂತರಗೊಳ್ಳುವಿಕೆ :**

ಸತ್ಯದ ಬಗ್ಗೆ ವಿವೇಕವುಳ್ಳ ಪ್ರಾಣವು ಸತ್ಯಕ್ಕೆ ವಿಧೇಯನಾಗಬೇಕಾದರೆ, ತನ್ನ ಆತ್ಮನಿಂದ ತಡೆಯನ್ನು ಅನುಭವಿಸುತ್ತಾನೆ. ಆತ್ಮನು ತಡೆಯುತ್ತಾನೆ ಯಾಕೆಂದರೆ, ಆತನಿಗೆ ಈಗಲೂ ಸತ್ಯದ ಮೇಲೆ ಅಪನಂಬಿಕೆ ಇದೆ. ಪರಿಶುದ್ಧಾತ್ಮನು ಸತ್ಯವನ್ನು ಪ್ರಕಟಿಸಿದಾಗಲೇ ಆತ್ಮನು ಸತ್ಯವನ್ನು ನಂಬಲು ಸಾಧ್ಯವಾಗುತ್ತದೆ. ಆತ್ಮನಿಗೆ ಬೆಳಕು ಪ್ರಾಣದ ಮೂಲಕವೇ ಬರುವುದು ಮತ್ತು ಈ ಕಾರಣದಿಂದಲೇ ಪ್ರಾಣವು ಹಗಲೂ ರಾತ್ರಿಯೂ ಸತ್ಯವನ್ನು ಕುರಿತು ಧ್ಯಾನ ಮಾಡಬೇಕು, ಪ್ರಾಣದ ಪ್ರಾರ್ಥನೆಗಳಿಂದ ಮತ್ತು ವಿಜ್ಞಾಪನೆಗಳಿಂದಾಗಿ, ಪರಿಶುದ್ಧಾತ್ಮನು ಅಭಿಷೇಕವನ್ನು ಬಿಡುಗಡೆ ಮಾಡುತ್ತಾನೆ. ಅದು ಅಪನಂಬಿಕೆಯ ಆತ್ಮನನ್ನ ಸತ್ಯವನ್ನು ನಂಬುವ ಆತ್ಮನನ್ನಾಗಿ ರೂಪಾಂತರ ಮಾಡುತ್ತದೆ.

ಆತ್ಮನು ಪ್ರಾಣದ ಜೀವವಾಗಿರುವುದರಿಂದ ಅಪನಂಬಿಕೆಯ ಆತ್ಮನು ಅನೀತಿಯ ಜೀವನವನ್ನೂ ವಿಶ್ರಾಂತಿ ಇಲ್ಲದ್ದನ್ನೂ ಮತ್ತು ತೃಪ್ತಿಯಿಲ್ಲದ್ದನ್ನೂ ಪರಿಶುದ್ಧಾತ್ಮನಲ್ಲಿ ಉಂಟು ಮಾಡುತ್ತದೆ. ಇಂತಹ ಜೀವನವು 'ಶರೀರಾಧೀನದ' ಕಾರ್ಯಗಳಿಂದ ತುಂಬಿರುತ್ತದೆ ಮತ್ತು ನೂತನಗೊಳಿಸಿದ ಪ್ರಾಣಕ್ಕೆ ತನ್ನ ಪ್ರಭಲವಾದ ಆತ್ಮನ ಮೇಲೆ ಹತೋಟಿಯಿಲ್ಲದೇ ಹೋಗುತ್ತದೆ. ಆತ್ಮನು ನಂಬದೇ ಇರುವುದರಿಂದ ಒಳ ಮನುಷ್ಯನು ಆತ್ಮನಲ್ಲಿಯೂ ಸತ್ಯಕ್ಕೆ ತಕ್ಕ ಹಾಗೆ ದೇವರನ್ನು ಸೇವಿಸಲಾರನು. ಇನ್ನೊಂದು ಕಡೆ ಬದಲಾದ ಆತ್ಮವು ಸತ್ಯವನ್ನು ನಂಬುವುದರಿಂದ ನೀತಿಯುಳ್ಳ ಜೀವನವನ್ನು ಪವಿತ್ರಾತ್ಮನಲ್ಲಿ ಶಾಂತಿ ಸಮಾಧಾನಗಳನ್ನು ಉಂಟುಮಾಡುತ್ತದೆ. ಇಂತಹ ಜೀವನವು ಆತ್ಮನ ಫಲದಿಂದ ತುಂಬಿರುತ್ತದೆ. ನೂತನಗೊಳಿಸಿದ ಪ್ರಾಣಕ್ಕೆ ಅಧೀನ ಸ್ವಭಾವ ಇರುವುದರಿಂದ ಅವನು ದೇವರನ್ನು ಆತ್ಮನಲ್ಲಿಯೂ ಸತ್ಯಕ್ಕೆ ತಕ್ಕಹಾಗೆ ಸೇವಿಸುತ್ತಾನೆ.

ನಂಬಿಕೆಯು ಆತ್ಮನ ಮುಖಾಂತರವಾದದ್ದರಿಂದ ಆತ್ಮನ ಪ್ರತಿಕ್ರಿಯೆ ನೂತನಗೊಳಿಸಿದ ಪ್ರಾಣಕ್ಕೆ ಪ್ರಕಟಿಸುವುದು ಏನೆಂದರೆ ಆತ್ಮವು

ಸರಿ, ಇಲ್ಲವಾದರೆ ನೀನು ಇದನ್ನು ಕಡಿದು ಹಾಕಬಹುದು ಎಂದನು."
**ಗಮನಿಸು :** ಈ ಸಾಮ್ಯದ ಪ್ರಕಾರ ಒಬ್ಬ ತಿರುಗಿ ಹುಟ್ಟಿದ ವಿಶ್ವಾಸಿಯು 3–4 ವರ್ಷಗಳಲ್ಲಿ ಪರಿಶುದ್ಧತೆಯನ್ನು ಪರಿಪೂರ್ಣಗೊಳಿಸಬಲ್ಲನು. ಯಾವುದೇ ವಿಶ್ವಾಸಿಗೆ 3–4 ವರ್ಷಗಳಲ್ಲಿ ಕಳ್ಳತನ ಮಾಡುವುದು ಸುಳ್ಳುಹೇಳುವುದು ಅಥವ ಗೊಡ್ಡು ಹರಟೆ ಹೊಡೆಯುವುದು ಇಂತಹ ನಡತೆಯನ್ನು ನಿಲ್ಲಿಸುವುದು ಅಸಾಧ್ಯವೇ ? ಪಾಪವನ್ನು ನಿಲ್ಲಿಸಬೇಕಾದರೆ ವಿಶ್ವಾಸಿಯ ಆತ್ಮವು ಸತ್ಯವನ್ನು ನಂಬುವುದಕ್ಕೋಸ್ಕರ ಬದಲಾವಣೆ ಹೊಂದಬೇಕು. ವಿಶ್ವಾಸಿಯು ತನ್ನ ಪ್ರಾಣದಿಂದ ಸತ್ಯವನ್ನು ಅರ್ಥ ಮಾಡಿಕೊಂಡು ಒಪ್ಪಿಕೊಳ್ಳಬಹುದು, ಆದರೆ ಅವನ ಆತ್ಮ ಕೂಡ ಸತ್ಯವನ್ನು ನಂಬುವುದಕ್ಕೆ ಮುಂದೆ ಬರಬೇಕು. ಆಗ ಮಾತ್ರ ಪಾಪವು ನಿಲ್ಲುತ್ತದೆ.

**ಕೆಳಗೆ ಕಾಣುವ ವಾಕ್ಯಗಳು ಎಲ್ಲಾ ವಿಶ್ವಾಸಿಗಳಿಗೂ ಎಚ್ಚರಿಕೆಯ ಮಾತುಗಳಾಗಿವೆ:**
ಇಬ್ರಿ 6:4–8 "ಒಂದು ಸಾರಿ ಬೆಳಕನ್ನು ಹೊಂದಿ ಸ್ವರ್ಗದಿಂದಾದ ರುಚಿಯನ್ನು ನೋಡಿ, ಪವಿತ್ರಾತ್ಮನಲ್ಲಿ ಪಾಲುಗಾರರಾಗಿ ಶ್ರೇಷ್ಠವಾದ ದೇವರ ವಾಕ್ಯವನ್ನೂ ಬರುವ ಲೋಕದ ಮಹತ್ವವನ್ನೂ (ಕ್ಷಮಾಪಣೆ) ರುಚಿನೋಡಿದವರು ಬಿದ್ದುಹೋಗುವುದಾದರೆ, ('ಶರೀರಾಧೀನ ಕ್ರಿಯೆಗಳನ್ನು' ಮಾಡಿ ಆತ್ಮನ ಫಲವನ್ನು ಕೊಡದೆ ಇರುವವರು) ಅವರಲ್ಲಿ (ವಿಶ್ವಾಸಿಗಳಲ್ಲಿ) ತಿರುಗಿ ಮಾನಸಾಂತರವನ್ನು ಹುಟ್ಟಿಸುವುದು. ಅಸಾಧ್ಯ : ಯಾಕೆಂದರೆ, ಅವರು ತಮ್ಮ ಪಾಲಿಗೆ ದೇವರ ಮಗನನ್ನು ಪುನಃ ಶಿಲುಬೆಗೆ ಹಾಕುವವರೂ ಆತನನ್ನು ಬಹಿರಂಗವಾಗಿ ಅವಮಾನ ಪಡಿಸುವವರೂ ಆಗಿದ್ದಾರೆ. ಯಾಕೆಂದರೆ ಭೂಮಿಯು ತನ್ನ ಮೇಲೆ ಅನೇಕಾವರ್ತಿ ಸುರಿಯುವ ಮಳೆಯನ್ನು ಹೀರಿಕೊಂಡು, ಅದು ಯಾರ ನಿಮಿತ್ತವಾಗಿ ವ್ಯವಸಾಯ ಮಾಡಲ್ಪಡುತ್ತದೋ ಅವರಿಗೆ ಅನುಕೂಲವಾದ ಬೆಳೆಯನ್ನು ಕೊಟ್ಟರೆ, ದೇವರ ಆಶೀರ್ವಾದವನ್ನು ಹೊಂದುತ್ತದೆ. ಆದರೆ, ಅದು ಮುಳ್ಳು ಗಿಡಗಳನ್ನೂ ಕಳೆಗಳನ್ನೂ ಬೆಳೆಸಿದರೆ, ತಿರಸ್ಕರಿಸಲ್ಪಟ್ಟು ಶಾಪಕ್ಕೆ ಗುರಿಯಾಗುತ್ತದೆ. ಅದರ ಅಂತ್ಯವು ಸುಡಲ್ಪಡುವುದೇ.

1 ಯೋಹಾ 5:18 "ದೇವರಿಂದ ಹುಟ್ಟಿರುವವನು ಪಾಪ ಮಾಡುವವನಲ್ಲವೆಂಬುದು ನಮಗೆ ಗೊತ್ತಿದೆ. ದೇವರಿಂದ ಹುಟ್ಟಿದವನು ತನ್ನನ್ನು ತಾನು ಕಾಪಾಡಿಕೊಳ್ಳುವನು ; ಕೆಡುಕನು ಅವನನ್ನು ಮುಟ್ಟುವುದಿಲ್ಲ."

ಯೆಹೋ 1:8,9 "ಈ ಪುಸ್ತಕದಲ್ಲಿ (ವಾಕ್ಯ) ಬರೆದಿರುವ ನ್ಯಾಯ ಪ್ರಮಾಣವು ನಿನ್ನ ಬಾಯಿಂದ ಹೋಗಬಾರದು; ಅದರಲ್ಲಿ ಬರೆದಿರುವ ಪ್ರಕಾರವೇ ಕೈಗೊಂಡು ನಡೆಯುವ ಹಾಗೆ ರಾತ್ರಿ ಹಗಲು ಅದನ್ನು ಧ್ಯಾನಿಸಬೇಕು. ಆಗ ನಿನ್ನ ಮಾರ್ಗವನ್ನು ಸಫಲಮಾಡಿಕೊಂಡು ಮಹಾಜಯಶಾಲಿಯಾಗುವಿ. ಬಲವಾಗಿರು, ಧೈರ್ಯದಿಂದಿರು ; ಭಯಪಡಬೇಡ ನಿರುತ್ಸಾಹಗೊಳ್ಳಬೇಡ ಯಾಕೆಂದರೆ ನೀನು ಹೋಗುವಲ್ಲೆಲ್ಲಾ ನಿನ್ನ ದೇವರಾದ ಕರ್ತನು ನಿನ್ನ ಸಂಗಡ ಇದ್ದಾನೆ ಎಂದು ಹೇಳಿದನು."

ಕೀರ್ತ 119:130 "ನಿನ್ನ ವಾಕ್ಯಗಳ ಪ್ರವೇಶವು ಬೆಳಕನ್ನುಕೊಟ್ಟು ಮೂರ್ಖರಿಗೆ ಗ್ರಹಿಕೆಯನ್ನುಂಟು ಮಾಡುತ್ತದೆ."


ಜ್ಞಾನೋ 4:20–23 "ನನ್ನ ಮಗನೇ (ಪ್ರಾಣ) ನನ್ನ ಮಾತುಗಳನ್ನು ಆಲಿಸು ; ನನ್ನ ನುಡಿಗಳಿಗೆ ಕಿವಿಗೊಡು, ಅವುಗಳು ನಿನ್ನ ಕಣ್ಣುಗಳಿಗೆ ತಪ್ಪಿಹೋಗದೇ ಇರಲಿ ; ಅವುಗಳನ್ನು ನಿನ್ನ ಹೃದಯದ (ಆತ್ಮ) ಮದ್ಯದಲ್ಲಿ ಇಟ್ಟುಕೋ. ಯಾಕೆಂದರೆ, ಅವುಗಳನ್ನು ಕಂಡುಕೊಳ್ಳುವವರಿಗೆ ಅವು ಜೀವವೂ ಅವರ ದೇಹಕ್ಕೆಲ್ಲಾ (ಪಾಪಗಳು) ಆರೋಗ್ಯವೂ ಆಗಿದೆ. ಎಲ್ಲಾ ಜಾಗ್ರತೆಯಿಂದ ನಿನ್ನ ಹೃದಯವನ್ನು (ಆತ್ಮ) ಕಾಪಾಡಿಕೋ ; ಯಾಕೆಂದರೆ, ಜೀವಧಾರೆಗಳು ಅದರೊಳಗಿನಿಂದ ಹೊರಡುವವು."

ಸತ್ಯವನ್ನು ವಿಶ್ವಾಸವಿಡುತ್ತದೆಯೋ ಅಥವಾ ಇನ್ನೂ ಸತ್ಯವನ್ನು ನಂಬುವುದಿಲ್ಲವೋ ಎಂಬದೇ. ಆದುದರಿಂದ ವಿಶ್ವಾಸಿಯು ತಾನೂ ಇನ್ನೂ ವಿಶ್ವಾಸದಲ್ಲಿದ್ದಾನೋ ಇಲ್ಲವೋ ಎಂಬುದನ್ನು ಪರೀಕ್ಷಿಸಿಕೊಳ್ಳಬಹುದಾಗಿದೆ. ಆತ್ಮನಿಂದ ಹುಟ್ಟುವ ಶರೀರಾಧೀನ ಕ್ರಿಯೆಗಳು ನಿಲ್ಲಬೇಕಾದರೆ ಆತ್ಮವು ಸತ್ಯವನ್ನು ನಂಬಿದಾಗಲೇ. ದೈವೀಕ ಸ್ವಭಾವ ನಂಬುವ ಆತ್ಮಕ್ಕೆ ರುಜುವಾತಾಗಿದೆ. ಒಳಗೆ ನೆಲೆಗೊಂಡಿರುವ ಪವಿತ್ರಾತ್ಮನಲ್ಲದೇ (ಆತನು ನಿತ್ಯಜೀವದ ವಾಗ್ದಾನ) ಪ್ರಾಣಕ್ಕಿರುವ ನಿತ್ಯಜೀವದ ಇನ್ನೊಂದು ಸಾಕ್ಷಿ ಇಲ್ಲಿ ಮತ್ತು ಈಗ ಒಂದು ಪರಿಶುದ್ಧವಾದ ದೈವ ಭಕ್ತಿಯುಳ್ಳ ಆತ್ಮನು ಮಾತ್ರ.

**ನೆನಪಿನಲ್ಲಿಡುವುದು ಅವಶ್ಯ :**
ದೇಹವು ಪಾಪದಿಂದ ರಕ್ಷಿಸಲ್ಪಟ್ಟಿತು. ಯಾಕೆಂದರೆ ಪವಿತ್ರಾತ್ಮನು ನೆಲೆಗೊಂಡಿರುವುದರಿಂದ. ಪರಿಶುದ್ಧಾತ್ಮನ ಅಭಿಷೇಕದ ಮೂಲಕ ಪ್ರಾಣವನ್ನು ಸತ್ಯದ ಕಡೆಗೆ ನೂತನ ಪಡಿಸಲಾಯಿತು, ಮತ್ತು ಪರಿಶುದ್ಧಾತ್ಮನ ಅಭಿಷೇಕದ ಮೂಲಕ ಆತ್ಮನು ಸತ್ಯವನ್ನು ನಂಬುವುದಕ್ಕಾಯಿತು. ವಿಶ್ವಾಸಿಯ ಮೂರು ಅಂಗಗಳಾದ – ದೇಹ, ಪ್ರಾಣ ಮತ್ತು ಆತ್ಮಗಳು – ರಕ್ಷಿಸಲ್ಪಟ್ಟಿರುವುದರಿಂದ ಈಗ ದೇವರಿಗೆ ಉಳಿದಿರುವುದು ವಿಶ್ವಾಸಿಯ ಮಾರ್ಗ ದೇಹವನ್ನು ಕ್ರಿಸ್ತನ ಅಮರ ದೇಹಕ್ಕೆ ಬದಲಾಯಿಸುವುದೇ.

**ದೇಹದ ವಿಮೋಚನೆ :**

ಪುರುಷರು ಸ್ತ್ರೀಯರು ಪಾಪದ ದೇಹದಲ್ಲಿ ಹುಟ್ಟಿದ್ದಾರೆ. ಒಳ ಮನುಷ್ಯನನ್ನು ಕೆಡಿಸುವುದು ದೇಹವಲ್ಲ. ಆದರೆ ದೇಹದೊಳಗೆ ನೆಲೆಗೊಂಡಿರುವ ಪಾಪ. ಕೆಟ್ಟುಹೋದ ಒಳ ಮನುಷ್ಯನು ದೇಹವನ್ನು ಆಗ ಅನೀತಿಯ ಸಾಧನವನ್ನಾಗಿ ಉಪಯೋಗಿಸಿಕೊಳ್ಳುತ್ತಾನೆ.




ದೇವರಕುರಿಮರಿಯಾದಾತನಾದ ಯೇಸುವಿನ ಮರಣ ಅಥವ ಶಿಲುಬೆಯ ಸಾವು, ಪಾಪ ನಿವಾರಣೆಗಾಗಿ ಹಳೆಒಡಂಡಿಕೆಯಲ್ಲಿ ಪ್ರಾಣಿಗಳನ್ನು ಯಜ್ಞ ಅರ್ಪಿಸುವ ಕಾರ್ಯಕ್ಕೆ ಹೋಲಿಕೆಯಾಗಿದೆ.

**ಗಮನಿಸಬೇಕದ ಎರಡು ಅಂಶಗಳು :**
1) ಪ್ರಾಣವು ತಾನು ಹೊಂದುವ ಬೋಧನೆಗಳಿಗೆ ಎಚ್ಚರಿಕೆ ಯಾಗಿರಬೇಕು, ಒಂದು ಸುಳ್ಳು ಬೋಧನೆಯನ್ನು ಸತ್ಯವೆಂದು ಒಪ್ಪಿಕೊಳ್ಳುವುದೇ ಆದರೆ, ಅದು ಆತ್ಮದ ನಂಬಿಕೆಯ ಮೇಲೆ ಪ್ರಭಾವ ಬೀರುತ್ತದೆ. ಸುಳ್ಳಿನಲ್ಲಿಡುವ ನಂಬಿಕೆ ಆತ್ಮನನ್ನು ಪಾಪದಿಂದ ಬಿಡುಗಡೆ ಮಾಡುವುದಿಲ್ಲ, ಆದರೆಸತ್ಯದಲ್ಲಿಡುವ ನಂಬಿಕೆ ಮಾಡುತ್ತದೆ.
2) ಒಂದು ಸಾರತಿ ಒಂದು ಶರೀರಾಧೀನ ಕ್ರಿಯೆಯನ್ನು (ಬಲಹೀನತೆ) ಸಾಯಿಸಿದ ಮೇಲೆ ಆ ನಿಶ್ಚಿತ ಪಾಪವು ಆತ್ಮದ ಮೇಲೆ ಇನ್ನು ಯಾವ ಪ್ರಭಾವವನ್ನೂ ಬೀರುವುದಿಲ್ಲ. ವಿಶ್ವಾಸಿಯು ಇನ್ನು ಮೇಲೆ ಕೆಡುಕನ ಆ ನಿಶ್ಚಿತವಾದ ಶೋಧನೆಗೊಳಗಾಗುವುದಿಲ್ಲ.

**ಮೇಲ್ಕಂಡ ವಿಷಯವನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಗೊಳಿಸಬಹುದು:**
“ ಒಂದು ದೇಶದಲ್ಲಿ ಆಳ್ವಿಕೆ ನಡೆಸುವ ಪಕ್ಷವು ಮತ್ತು ಅದರ ಪ್ರಜೆಗಳು ವಿರೋಧಪಕ್ಷದವರು ಹೇಗಾದರೂ ಗಾಳಿಯಿಂದ ಆಳ್ವಿಕೆ ನಡೆಸುತ್ತಾರೆ. ವಿರೋಧ ಪಕ್ಷಕ್ಕೆ ಆಳುವ ಪಕ್ಷದಂತೆಯೇ ರಚನೆಯಿದ್ದರೂ ಅದು ರಾಜ್ಯದ ನ್ಯಾಯ ಸಮ್ಮತವಾದ ಪ್ರಭುವಲ್ಲ. ವಿರೋಧ ಪಕ್ಷದವರು ಆಳ್ವಿಕೆಯ ಪಕ್ಷವಾಗಲು ಹೆಣಗಾಡುತ್ತಾರೆ. ಮೊದಲನೆಯದಾಗಿ, ವಿರೋದ ಪಕ್ಷವು ತಮ್ಮದೇ ಆದ ವಿಚಾರ ಶಾಸ್ತ್ರಗಳನ್ನು ಪ್ರಚಾರ ಮಾಡಿ ಓಟು ಹಾಕಲು ಜನರ ಮನಸ್ಸನ್ನು ಸೆರೆ ಹಿಡಿಯುತ್ತಾರೆ. ಎರಡನೆಯದಾಗಿ, ಅವರು ಪ್ರಭುತ್ವದಲ್ಲಿರುವ ಪಕ್ಷದ ಬಲಹೀನತೆಗಳ ಮೇಲೆ ಗುರಿಯಿಡುತ್ತಾರೆ ಮತ್ತು ಆಡಳಿತವನ್ನು ಕೋರ್ಟಿಗೆ ಕೂಡಾ ಒಯ್ಯುತ್ತಾರೆ.

ಮೇಲ್ಕಂಡ ಉದಾಹರಣೆ ವಿಶ್ವಾಸಿಯ ಮೇಲೆ ಸೈತಾನನಿಗೆ (ವಾಯು ಮಂಡಲದ ಅಧಿಪತಿ) ಮತ್ತು ಸೇನಾಪಡೆಗೆ ಇರುವ ಅಧಿಕಾರವನ್ನು ತೋರಿಸುತ್ತದೆ. ಮೊದಲನೆಯದಾಗಿ, ಸುಳ್ಳು ಬೋಧನೆಗಳ ಮೂಲಕ ಪ್ರಾಣವನ್ನು ಅಸ್ತವ್ಯಸ್ಥಗೊಳಿಸುತ್ತಾನೆ. ಇದು ಒಡಕುಗಳಿಗೆ, ಜಗಳಗಳಿಗೆ ಅವಿಧೇಯತೆಗಳಿಗೆ ಕಾರಣವಾಗುತ್ತದೆ. ಎರಡನೆಯದಾಗಿ, ಅವನು ಬಲಹೀನತೆಗಳಿಗೆ ಗುರಿಯಿಡುತ್ತಾನೆ ಮತ್ತು ಹಗಲೂ ರಾತ್ರಿ ವಿಶ್ವಾಸಿಯನ್ನು ದೇವರ (ನ್ಯಾಯಾಧೀಶ) ಎದುರಿಗೆ ದೂರುತ್ತಾನೆ. ಅವನ ದೂರುಗಳು ಪ್ರಾಣವು ಪಶ್ಚಾತ್ತಾಪ ಪಡುವ ವರೆಗೂ ಮತ್ತು ಆತ್ಮನು ಆ ಒಂದು ನಿಶ್ಚಿತ ಪಾಪವನ್ನು ನಿಲ್ಲಿಸುವ ವರೆಗೂ ಮುಂದುವರೆಯುತ್ತವೆ. ನೀತಿವಂತ ನ್ಯಾಯಾದೀಶನಾದ ದೇವರು ಪಾಪಿಯನ್ನು ನಿರಪರಾಧಿ ಎಂದು ಘೋಷಿಸಲಾರನು, ಅವನ ಪಾಪವನ್ನು ಕ್ಷಮಿಸುವುದಾದರೂ ಮಾಡನು, ಯಾಕೆಂದರೆ, ಕ್ಷಮಾಪಣೆ ಮಾತ್ರ ಆ ನಿಶ್ಚಿತ ಪಾಪದಿಂದ ಪಾಪಿಯನ್ನು ಗುಣಪಡಿಸುವುದಿಲ್ಲ.

ಪ್ರ.ಕಾ. 12:10,11 “...ಯಾಕೆಂದರೆ, ಹಗಲಿರುಳು ನಮ್ಮ ಸಹೋದರರ ಮೇಲೆ ದೇವರ ಮುಂದೆ ದೂರು ಹೇಳಿದ ದೂರುಗಾರನು ದಬ್ಬಲ್ಪಟ್ಟಿದ್ದಾನೆ. ಅವರು ಪ್ರಾಣದ (ಪಾಪದ ನಾಶನ) ಮೇಲಿನ ಪ್ರೀತಿಯನ್ನು ತೊರೆದು (ಆತ್ಮನು ರಕ್ಷಣೆ ಹೊಂದಿದನು) ಕುರಿಮರಿಯಾದಾತನ ರಕ್ತದಿಂದಲೂ (ದೇಹವು ರಕ್ಷಿಸಲ್ಪಟ್ಟಿತು). ತಮ್ಮ ಸಾಕ್ಷಿಯ ವಾಕ್ಯದಿಂದಲೂ (ಪ್ರಾಣವು ರಕ್ಷಿಸಲ್ಪಟ್ಟಿತು) ಅವನನ್ನು ಜಯಿಸಿದರು (ಸೈತಾನನನ್ನು)”
2 ಕೊರಿ 5:10 “ಯಾಕೆಂದರೆ ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡೆಸಿದ ಒಳ್ಳೆಯದಕ್ಕಾಗಲೀ ಇಲ್ಲವೇ ಕೆಟ್ಟದ್ದಕ್ಕಾಗಲೀ ಸೆರೆಯಾದದ್ದನ್ನು ಹೊಂದುವುದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಕಾಣಿಸಿಕೊಳ್ಳಲೇಬೇಕು.”

ಇನ್ನೂ ಮುಖ್ಯವಾಗಿ ಯೇಸುವಿನ ಪುನರುತ್ಥಾನದ ನಿಮಿತ್ತವಾಗಿ ಒಳಗೆ ನೆಲೆಗೊಂಡಿರುವ ಪವಿತ್ರಾತ್ಮನ ಮೂಲಕ ದೇಹವು ಪಾಪದಿಂದ ರಕ್ಷಿಸಲ್ಪಡುತ್ತದೆ. ಹೇಗಾದರೂ ಯೇಸು ಹೊಸದೇಹದಲ್ಲಿ ಪುನರುತ್ಥಾನನಾಗದಿದ್ದರೆ ಮತ್ತು ಮಾರಕ ದೇಹದಲ್ಲಿ ಪಾಪವನ್ನು ಬಿಡಿಸಲು ಪರಿಶುದ್ಧಾತ್ಮನು ಲಭ್ಯವಾಗದಿದ್ದರೆ, ಆಗ ಒಳ ಮನುಷ್ಯನು ಕ್ಷಮಿಸಲ್ಪಡುತ್ತಾನೆ. ಆದರೆ ಪಾಪ ನೆಲೆಸಿರುವ ದೇಹದಲ್ಲಿ.


ನೂತನ ಮನುಷ್ಯನಾದ ಯೇಸುಕ್ರಿಸ್ತನು ಜೀವಿಸಿರುವುದರಿಂದ ಪರಿಶುದ್ಧಾತ್ಮನು ಮಾರಕ ದೇಹದಲ್ಲಿ ನೆಲೆಸಿರುತ್ತಾನೆ ಮತ್ತು ಪಾಪದಿಂದ ಕೆಟ್ಟುಹೋದ ಆದರೆ ಸತ್ಯವನ್ನು ನಂಬುವ ಒಳ ಮನುಷ್ಯನನ್ನು ಕ್ರಿಸ್ತನಂತೆ ಆಗಲು ಸಹಾಯ ಮಾಡುತ್ತಾನೆ. ಆಗ ಮಾತ್ರ ಒಳ ಮನುಷ್ಯನು ತನ್ನ ದೇಹವನ್ನು ನೀತಿಯ ಸಾಧನವನ್ನಾಗಿ ಉಪಯೋಗಿಸುತ್ತಾನೆ.

ಯೇಸುವಿದನ ಎರಡನೇ ಬರೋಣಿಕೆಯಲ್ಲಿ ವಿಶ್ವಾಸಿಯ ಮಾರಕದೇಹವು ಅಮರದೇಹಕ್ಕೆ ರೂಪಾಂತರಗೊಳ್ಳುವುದರಿಂದ ಮರಣವು ನಿರ್ಮೂಲನವಾಗುವುದು. ಒಳ ಮನುಷ್ಯನಲ್ಲಿ ಪವಿತ್ರತೆಯನ್ನು ಪರಿಪೂರ್ಣ ಮಾಡಿದ ವಿಶ್ವಾಸಿಗಳನ್ನು ಮಾತ್ರ ಪರಿಶುದ್ಧಾತ್ಮನ ಸಹಾಯದಿಂದ ಹೊಸದೇಹದಲ್ಲಿ ನಿತ್ಯಜೀವವನ್ನು ಹೊಂದುತ್ತಾರೆ, ಮತ್ತು ದೇವರ ಮಕ್ಕಳೆಂದು ಪ್ರಕಟಿಸಲ್ಪಡತ್ತಾರೆ.

ಒಬ್ಬ ವಿಶ್ವಾಸಿಯು ತನ್ನ ದೇಹಕ್ಕೆ ಮಾನವ ಸ್ವಭಾವ ಇರುವುದೆಂದೂ ಅದಕ್ಕೆ ಅವಶ್ಯಕತೆಗಳು ಇರುತ್ತವೆಂದೂ ತಿಳಿದುಕೊಳ್ಳಬೇಕು. ದೇಹದಲ್ಲಿ ಪಾಪವಿದ್ದರೂ ಸರಿ ಪವಿತ್ರಾತ್ಮನು ನೆಲೆಗೊಂಡಿದ್ದರೂ ಸರಿ. ದೇಹಕ್ಕೆ ಒಳ್ಳೆಯದನ್ನೇ ಆಗಲಿ ಕೆಟ್ಟದ್ದನ್ನೇ ಆಗಲಿ ಹೊರಿಸಲಾಗುವುದಿಲ್ಲ. ದೇಹವು ಪುರುಷನದೇ ಆಗಲೀ ಸ್ತ್ರೀಯದೇ ಆಗಲೀ ಅದರ ಎಲ್ಲಾ ಕ್ರಿಯೆಗಳಿಗೆ ಒಳ ಮನುಷ್ಯನೇ ಜವಾಬ್ದಾರಿ. ಉದಾಹರಣೆ : ದೇಹಕ್ಕೆ ಮದ್ಯಸಾರಗಳನ್ನು ಬಳಸುವ ಇಚ್ಛೆಯಿಲ್ಲ. ಮಾದಕ ದ್ರವ್ಯಗಳನ್ನು ಶುರುಮಾಡಿದವನು ಒಳ ಮನುಷ್ಯನು. ಈ ಕಾರಣದಿಂದ ದೇಹವು ರಾಸಾಯನಿಕ ಚಟಕ್ಕೆ ಒಳಗಾಯಿತು. ಒಳ ಮನುಷ್ಯನೇ ಈ ಚಟವನ್ನು ಶುರು ಮಾಡಿದ್ದರಿಂದ ಅದನ್ನು ಬಿಟ್ಟುಬಿಡುವ ಹೊಣೆಯನ್ನು ಅವನೇ ವಹಿಸಬೇಕಾಗುತ್ತದೆ. ತಿಂಡಿಪೋತನ ಬಗ್ಗೆಕೂಡಾ ಇದೇ ಹೇಳಬಹುದು, ಯಾಕೆಂದರೆ, ದೇಹಕ್ಕೆ ತನ್ನನ್ನು ತಾನು ಕಾಪಾಡಿಕೊಳ್ಳಲು ಆಹಾರ ಅವಶ್ಯ. ಅದೇರೀತಿಯಾಗಿ, ಜೀವಿಸಲು ಅವಶ್ಯವಾದದ್ದನ್ನೇ ಹೊರತು ದೇಹವು ಭೌತಿಕ ಪದಾರ್ಥಗಳಾದ ಕಾರು, ವಸ್ತ್ರ ಇತ್ಯಾದಿಗಳನ್ನು ಇಷ್ಟಪಡುವುದಿಲ್ಲ. ದೇಹವು ಗೊಡ್ಡು ಹರಟೆ ಹೊಡೆಯಲಾರದು, ಹೊಟ್ಟೆಕಿಚ್ಚು ಪಡುವುದು, ಪಕ್ಷಪಾತಿಯಾಗುವುದು, ಅಥವಾ

ಎಫೆ 5:23 "ಯಾಕೆಂದರೆ ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ... ದೇಹಕ್ಕೆ ರಕ್ಷಕನಾಗಿದ್ದಾನೆ"
ಕೊಲೋ 1:18 "ಸಭೆಯೆಂಬ ದೇಹಕ್ಕೆ ಆತನು ಶಿರಸ್ಸಾಗಿದ್ದಾನೆ. ಆತನೇ ಆದಿಯಾಗಿದ್ದು... ಸತ್ತವರೊಳಗಿನಿಂದ ಬಂದ ಜ್ಯೇಷ್ಠನೂ ಆಗಿದ್ದಾನೆ."
**ಗಮನಿಸು :** ಪಾಪದಿಂದ ದೇಹಗಳ ರಕ್ಷಣೆಯಾದ ವ್ಯಕ್ತಿಗಳು ಸಭೆಯೊಳಗಿದ್ದಾರೆ. ಯಾವನೇ ವಿಶ್ವಾಸಿಯು ಪವಿತ್ರಾತ್ಮನನ್ನು ಹೊಂದದೇ ಹೋಗಿದ್ದರೆ, ಆತನ ಸಭೆಯಾದ ಆತನ ದೇಹದಲ್ಲಿ ಪಾಲುಗಾರನಾಗಲು ಸಾಧ್ಯವಿಲ್ಲ.

**ವಿಶ್ವಾಸಿಗಳೇ ಎಚ್ಚರಿಕೆ !** ಕೆಳಗೆ ಕಾಣುವ ಚಿತ್ರವು ಕ್ರೈಸ್ತರು ನಿಜವೆಂದು ನಂಬಿದ ಸುಳ್ಳನ್ನು ಪ್ರಕಟಪಡಿಸುತ್ತದೆ. ಅವರು ಮೋಸ ಹೋಗಿದ್ದಾರೆ. ಯಾಕೆಂದರೆ ಅವರು ದೇಹವು ಪಾಪಮಯ ಮತ್ತು ಅದು ಪಾಪರಹಿತ ದೇಹವಾಗಿ ಮರಣಾನಂತರ ಮಾತ್ರ ಬದಲಾಗಬಹುದೆಂದು ನಂಬಿದ್ದಾರೆ. ಆದುದರಿಂದಲೇ ವಿಶ್ವಾಸಿಗಳು ಅವರು ಈಗಲೂ ಮಾಡುತ್ತಿರುವ ಪಾಪಗಳಿಗೆ ವಿರುದ್ಧವಾಗಿ ಬಲಹೀನರಾಗಿದ್ದಾರೆ. (ಒಳ ಮನುಷ್ಯ)




ಸುಳ್ಳಿಗನುಸಾರವಾಗಿ ಯೇಸು ಪ್ರಾಣಿಗಳ ಯಜ್ಞಕ್ಕೆ ಬದಲಿಯಾಗಿರುವವನು. ಪ್ರಾಣಿಗಳ ಯಜ್ಞ ಕ್ಷಮಾಪಣೆಗೆ ಮಾತ್ರ ಕೆಲಸಕ್ಕೆ ಬರುತ್ತಿತ್ತು. ಆದರೆ ದೇಹವನ್ನು ಪಾಪದಿಂದ ಬಿಡುಗಡೆ ಮಾಡಲಿಕ್ಕಾಗಲಿಲ್ಲ. ಮೇಲ್ಕಂಡ ಚಿತ್ರವು ಸತ್ಯವಾದರೆ ಯೇಸು ಪ್ರಾಣಿ ಬಲಿಗಿಂತ ಉತ್ತಮನೇನಲ್ಲ ದೇಹವು ಪಾಪದಿಂದ ಬಿಡುಗಡೆಯಾದರೆ, ಆಗ ಒಳ ಮನುಷ್ಯನು ಇನ್ನೂ ಪಾಪದ ನಿಯಮದ ಕೆಳಗೆ ಇದ್ದಾನೆ.

ಈ ಸುಳ್ಳಿನ ದೆಸೆಯಿಂದಲೇ ಯೇಸುವಿನಲ್ಲಿನ ವಿಶ್ವಾಸಿಗಳು ಹಳೇ ಒಡಂಬಡಿಕೆಯ ನಂಬಿಕೆಯಲ್ಲಿ ಮುಂದುವರೆಯುತ್ತಾರೆ, ಮತ್ತು ಅವರು ಪಾಪದಲ್ಲಿ ಮುಂದುವರೆಯುವ ಕಾರಣ ಇದೆ. ಮತ್ತು ಅವರು ಹೇಳುವುದು : "ನಾವು ಕ್ಷಮಿಸಲ್ಪಟ್ಟ ಪಾಪಿಗಳು ಮಾತ್ರ." ತಿರುಗಿ ಹುಟ್ಟಿದೆವು ಎಂದು ಹೇಳುವ ವಿಶ್ವಾಸಿಗಳೂ ಕೂಡ ಸುಳ್ಳನ್ನು ನಂಬಿ ಅವರ ಪಾಪಗಳಲ್ಲಿ ಮುಂದುವರೆಯುತ್ತಾರೆ. ಅವರಿಗೆ ಸತ್ಯ ಗೊತ್ತಿದ್ದರೆ, ಸುಳ್ಳು ಜೀವನದಿಂದ ಅವರನ್ನು ಸತ್ಯವು ಬಿಡಿಸುತ್ತಿತ್ತು.

ಸುಳ್ಳನ್ನು ನಂಬುವ ವಿಶ್ವಾಸಿಗಳು ಕ್ರಿಸ್ತ ವಿರೋಧಿಗಳು, ಯಾಕೆಂದರೆ ಅವರು ಪಾಪ ಮಾಡುವುದನ್ನು ನಿಲ್ಲಿಸುವುದಿಲ್ಲ. ಅವರು ಯೇಸು ಕ್ರಿಸ್ತನು ದೇಹದಲ್ಲಿ (ಪಾಪ) ಬರಲಿಲ್ಲ ಎಂದು ನಂಬುತ್ತಾರೆ. ಇದು ನಿಜವಾದರೆ, ಯೇಸು ದೇಹದಲ್ಲಿ ಪಾಪವನ್ನು ಜಯಿಸಲಿಲ್ಲ. ಇಂತ ನಂಬಿಕೆಯು ಸತ್ಯವೇದಕ್ಕೆ ವಿರೋಧವಾದದ್ದು. ಯಾಕೆಂದರೆ, ಮೋಷೆಯು ಫರೋಹನನ ಮನೆಯಲ್ಲಿ ಹೇಗೆ ಬೆಳೆದು ಅವನಿಗೆ ವಿರುದ್ಧವಾಗಿ ಬೆಳೆದನೋ ಹಾಗೆಯೇ ಯೇಸು ಸೈತಾನನ ಮನೆಯಲ್ಲಿ ಬೆಳದರೂ ಅವನಿಗೆ ವಿರುದ್ಧವಾಗಿ ಎದ್ದನು.

ಕೋಪೋದ್ರೇಕಗಳು. ಯಾಕೆಂದರೆ, ಒಳ ಮನುಷ್ಯನೇ ಇವುಗಳನ್ನೆಲ್ಲಾ ಮಾಡುವುದು. ಅದು ಒಳ ಮನುಷ್ಯನಿಂದ ಶುರುವಾಗುವುದು. ಮತ್ತು ಅವನು ಬದಲಾಗಬೇಕು ಮತ್ತು ಶರೀರಾಧೀನ ಸ್ವಭಾವಗಳನ್ನು ಪರಿಶುದ್ಧಾತ್ಮನ ಸಹಾಯದಿಂದ ನಿಲ್ಲಿಸಬೇಕು.

ಅದೇ ರೀತಿಯಲ್ಲಿ ಯಾವುದೇ ಒಳ್ಳೇ ಕೆಲಸವನ್ನು ಮಾನವನ ದೇಹಕ್ಕೆ ಆರೋಪಿಸಲಾಗುವುದಿಲ್ಲ. ಉದಾಹರಣೆ : ನಂಬುವುದು, ಅನುಕಂಪ ಪಡುವುದು, ದಾನ ಮಾಡುವುದು, ಉಪದೇಶ ಮಾಡುವುದು ಅಥವಾ ದೇವರ ಸೇವೆ ಮಾಡುವುದು. ಇದೆಲ್ಲಾ ಮಾಡುವುದು ದೇಹವಲ್ಲ ಆದರೆ ಒಳ ಮನುಷ್ಯನು.

**ಧನ :**

ಒಳ ಮನುಷ್ಯನು ಆತ್ಮನಲ್ಲಿದ್ದರೂ, ಅವನಿಗೆ ಒಂದು ಮರ್ಥ್ಯ ದೇಹವಿದೆ. ದೇಹಕ್ಕೆ ಕೆಲವು ಅವಶ್ಯಕತೆಗಳು ಇರುವುದರಿಂದ ಅಂದರೆ, ಆಶ್ರಯ, ಆಹಾರ ಮತ್ತು ವಸ್ತ್ರ. ಧನ ಮತ್ತು ಪ್ರಪಂಚ ಮತ್ತು ಪಿಶಾಚನ ಸೈನ್ಯ ಒಳ ಮನುಷ್ಯನನ್ನು ಶೋಧಿಸಿ ಪಾಪಕ್ಕೆ ಈಡುಮಾಡುತ್ತವೆ.

ಮರಣದ ಭಯ, ದೈಹೀಕವಾಗಿಯೂ ಮತ್ತು ಆರ್ಥಿಕವಾಗಿಯೂ ಇವುಗಳೇ ಧನಕ್ಕೆ (ಅನೀತಿಯ ಹಣದ ಮನಸ್ಸು) ಮನುಷ್ಯನ ಮೇಲೆ ಇರುವ ಹಿಡಿತ ಯಾಕೆಂದರೆ, ಮನುಷ್ಯನ ದೇಹ ಮಾರಕ. ಹಣದ ವ್ಯವಹಾರಗಳಲ್ಲಿ ವಿಶ್ವಾಸಿಯು ಸ್ವಾರ್ಥಪರರು ಮತ್ತು ಅನೀತಿವಂತರು ಎಂದು ಭಯವುಳ್ಳ ಆತ್ಮವು ಇವುಗಳನ್ನು ಆಗುವಂತೆ ಮಾಡುತ್ತದೆ. ಧನವು ಬಡವಿಶ್ವಾಸಿ ಮತ್ತು ಬಲ್ಲಿದ ವಿಶ್ವಾಸಿ ಎಂಬ ಭಿನ್ನಮತ ಮಾಡುವುದಿಲ್ಲ, ಯಾಕೆಂದರೆ ಪ್ರಪಂಚದ ಚಿಂತೆಗಳು ಮತ್ತು ಐಶ್ವರ್ಯದ ಮೋಸಗಳು ಅವೆರಡರಲ್ಲಿಯೂ ಹಣದಾಶೆಯನ್ನು ಹುಟ್ಟಿಸುತ್ತವೆ.

ಹಣದ ಕೊರತೆ ಮತ್ತು ಸಮೃದ್ಧಿ ಒಳ ಮನುಷ್ಯನನ್ನು ಪಾಪದೊಳಗೆ ಬೀಳಿಸಬಹುದು. ಹಣದ ಕೊರತೆ ಚಿಂತೆಯನ್ನುಂಟು ಮಾಡುತ್ತದೆ. ಭಯ ಮತ್ತು ಅಪನಂಬಿಕೆಗಳನ್ನೂ ಕೂಡ. ಇವು ಎಲ್ಲ ವಿಧವಾದ ಅನೀತಿಯನ್ನುಂಟು ಮಾಡುತ್ತವೆ. ಅಂದರೆ ಸುಳ್ಳು ಹೇಳುವುದು. ಮೋಸ ಮಾಡುವುದು, ಕಳ್ಳತನ ಮಾಡುವುದು ಇತ್ಯಾದಿ. ಐಶ್ವರ್ಯದ ಸಮೃದ್ಧಿಯು ಒಂದು ಸುಳ್ಳು ಭದ್ರತೆಯ ಮನೋಭಾವನೆಯನ್ನು ಉಂಟು ಮಾಡುತ್ತದೆ ಮತ್ತು ಗರ್ವವು ವಿಶ್ವಾಸಿಯನ್ನು ದೇವರ ಕಡೆಗೆ ಉಗುರುಬೆಚ್ಚನೆ ಮಾಡುತ್ತದೆ. ಇವೆಲ್ಲವುಗಳೂ ಮೇಲೆ ಹೇಳಿದಂತೆ ಅನೀತಿಗೇ ನಡೆಸುತ್ತವೆ. ಆರ್ಥಿಕ ಮರಣದ ಭಯ ಆತ್ಮ ಸಂರಕ್ಷಣೆಗೆ ಕಾರಣವಾಗುತ್ತವೆ ಮತ್ತು ಆತ್ಮ ಸಂರಕ್ಷಣೆಯು

ಯೇಸುವಿನಲ್ಲಿಡುವ ನಂಬಿಕೆ ದೇಹದ ಪಾಪವನ್ನು ತೆಗೆದು ಹಾಕುತ್ತದೆ ಎಂದು ನಂಬದ ವಿಶ್ವಾಸಿಗಳು ಸುಳ್ಳು ಪ್ರವಾದಿಗಳು. ಅವರು ಕ್ಷಮಾಪಣೆಯನ್ನು ಬೋಧಿಸುತ್ತಾರೆ. ಆದರೆ, ಯೇಸುವನ್ನು ಅಲ್ಲಗಳೆಯುತ್ತಾರೆ. ಯಾಕೆಂದರೆ ಅವರ ಪ್ರಕಾರ ಆತನು ಒಳ ಮನುಷ್ಯನನ್ನು ಪಾಪದ ದೇಹದೊಳಗಿನಿಂದ ಬಿಡುಗಡೆ ಮಾಡುವುದಿಲ್ಲ. ಅವರು ಸುಳ್ಳನ್ನು ನಂಬುವುದರಿಂದ ತಮ್ಮ ಪಾಪಗಳನ್ನು ಜಯಿಸಲಾರರು. ಇಂತಹ ನಂಬಿಕೆಯು ಸತ್ಯವೇದಕ್ಕೆ ವಿರುದ್ಧವಾಗಿದೆ, ಯಾಕೆಂದರೆ, ಪರಿಶುದ್ದಾತ್ಮನು ದೇಹದಲ್ಲಿನ ಪಾಪಕ್ಕೆ ಬದಲಾಗಿ ಬರುತ್ತಾನೆ. ಪಾಪವು ಒಳಮನುಷ್ಯನನ್ನು ಕೆಡಿಸಿದ ಹಾಗೆಯೇ ಪರಿಶುದ್ಧಾತ್ಮನು ಶುದ್ಧೀಕರಣದ ಮೂಲಕ ಸತ್ಯವನ್ನು ನಂಬುವ ವಿಶ್ವಾಸಿಗಳನ್ನು ಗುಣಪಡಿಸುತ್ತಾನೆ.

ಪರಿಶುದ್ಧಾತ್ಮನನ್ನು ಹೊಂದಿರುವ ಯಾವನೇ ವಿಶ್ವಾಸಿಯು ತಾನು ಇನ್ನೂ ಪಾಪದ ದೇಹದಲ್ಲಿರುವನೆಂದು ನಂಬುತ್ತಾನೋ. ಅವನು ಮೋಸ ಹೋಗಿದ್ದಾನೆ. ಯಾಕೆಂದರೆ ಸತ್ಯವು ಇದಾಗಿದೆ : ದೇಹವು ಪರಿಶುದ್ಧಾತ್ಮನ ಆಲಯ ಒಳಮನುಷ್ಯನು ಪಾಪರಹಿತ ಜೀವನವನ್ನು ತನ್ನ ಮಾರಕ ದೇಹದಲ್ಲಿಯೇ ಇಲ್ಲಿ ಮತ್ತು ಈಗ ಜೀವಿಸಬಹುದು. ಯಾಕೆಂದರೆ, ಅವನು ಆಗಲೇ ತನ್ನ ದೇಹದಲ್ಲಿರುವ ಪಾಪದಿಂದ ಬಿಡುಗಡೆ ಹೊಂದಿದ್ದಾನೆ. ತಾನು ಸತ್ತಮೇಲೆಯೇ ಪಾಪದ ದೇಹದಿಂದ ಬಿಡುಗಡೆ ಹೊಂದುವೆನೆಂದು ವಿಶ್ವಾಸಿಯು ಅಂದುಕೊಳ್ಳಬಾರದು.

**ಕೆಳಗಿರುವ ವಿಷಯ ಎಲ್ಲವನ್ನು ಸ್ಪಷ್ಟಗೊಳಿಸುತ್ತದೆ !!!**
ಹಳೆಯ ದಕ್ಷಿಣ ಆಫ್ರಿಕಾವು ಪಕ್ಷಪಾತದ ನಿಯಮದ ಕೆಳಗೆ ಇತ್ತು ಮತ್ತು ಎಲ್ಲಾ ನಿವಾಸಿಗಳು ಅದೇ ಪದ್ಧತಿಯನ್ನು ಒಪ್ಪಿದರು. ಹೊಸ ದಕ್ಷಿಣ ಆಫ್ರಿಕಾವು ಪಕ್ಷಪಾತವಿಲ್ಲದ ನಿಯಮದ ಕೆಳಗಿದ್ದರೂ ನಿವಾಸಿಗಳು ಜನಗಳ ನಿಯಮವನ್ನೇ ಪರಿಪಾಲಿಸುತ್ತಾ ಇದ್ದಾರೆ. ದೇಶವು (ದೇಹ) ಪಕ್ಷಪಾತದ ನಿಯಮದಿಂದ ಬಿಡುಗಡೆಯಾದರೂ, ನಿವಾಸಿಗಳು (ಒಳ ಮನುಷ್ಯ) ಪಕ್ಷಪಾತವನ್ನೇ ಅನುಸರಿಸುತ್ತಾ ಇರುವುದನ್ನು ನಾವು ನೋಡುತ್ತಾ ಇದ್ದೇವೆ. ಅವರು ತಮ್ಮ ಸಂವಿಧಾನವನ್ನು ನಂಬುವುದೂ ಇಲ್ಲ, ಅದಕ್ಕೆ ಅಧೀನರಾಗುವುದೂ ಇಲ್ಲ. ದೇಶವಾದರೋ ಪಕ್ಷಪಾತ ಮಾಡುವಂತಿಲ್ಲ ! ದೇಶದ ನಿವಾಸಿಗಳೇ ಪಕ್ಷಪಾತ ಮಾಡುತ್ತಾ ಇರುವುದು. ಅದೇ ರೀತಿಯಲ್ಲಿ ಪಾಪದ ನಿಯಮದಿಂದ ವಿಮೋಚನೆ ಹೊಂದಿದ ಕ್ರೈಸ್ತರು, ಪರಿಶುದ್ಧಾತ್ಮನ ಕೆಳಗೆ ಇದ್ದರೂ ತಮ್ಮ ಪಾಪಗಳಲ್ಲಿ ಮುಂದುವರೆಯುತ್ತಾರೆ. ಈ ಕಾರಣದಿಂದಲೇ ಯೇಸುವಿನ ನಾಮವನ್ನು ವ್ಯರ್ಥವಾಗಿ ಬಳಸಲಾಗಿದೆ (ದೈವ ದೂಶಣೆ) ಮತ್ತು ಜನರಿಗೆ ಕ್ರೈಸ್ತರ ಮೇಲೆ ಗೌರವವಿಲ್ಲ.

**ಗಮನಿಸು** : ದಕ್ಷಿಣ ಆಫ್ರಿಕಾ ದೇಶದ (ದೇಹ) ಮೇಲೆ ದೋಶಾರೋಪಣೆ ಮಾಡುವಂತಿಲ್ಲ. ದೇಶದ ನಿವಾಸಿಗಳೇ (ಒಳ ಮನುಷ್ಯರು) ತಪ್ಪಿತಸ್ಥರು.

ಯೋಬ 2:4 "ಸೈತಾನನು ಪ್ರತ್ಯುತ್ತರವಾಗಿ ಕರ್ತನಿಗೆ – ಹೌದು, ಚರ್ಮಕ್ಕೆ (ದೇಹ) ಚರ್ಮ (ದೇಹ) ; ತನಗೆ ಉಂಟಾದದ್ದನ್ನೆಲ್ಲಾ ತನ್ನ ಪ್ರಾಣಕ್ಕೋಸ್ಕರ ಮನುಷ್ಯನು ಕೊಡುವನು."
**ಗಮನಿಸು :** ಪ್ರತಿಯೊಬ್ಬರಿಗೂ ದೇಹವಿದ್ದು, ಪ್ರಾಣದ ಭಯವಿರುವಿದರಿಂದ ಅವನು ತನಗಿರುವದೆಲ್ಲವನ್ನೂ ಪ್ರಾಣಕ್ಕೋಸ್ಕರ ಕೊಡುವನು. ಮನುಷ್ಯನು ತನ್ನ ಜೀವನವನ್ನೆಲ್ಲಾ ಹಣವನ್ನು ಸಂಪಾಧಿಸುವುದಕ್ಕೋಸ್ಕರ ಕಳೆಯುತ್ತಾನೆ. ಮತ್ತು ಕಳ್ಳಕಾಕರುಗಳಿಂದಲೂ, ವ್ಯಾಧಿಯಿಂದಲೂ, ಮತ್ತು ಮುಪ್ಪಿನಿಂದಲೂ ಭಯ ಹೊಂದಿದವನಾದಾಗ ತನ್ನ ಜೀವವನ್ನು ಕಾಪಾಡಿಕೊಳ್ಳಲು ತನಗಿರುವುದನ್ನೆಲ್ಲಾ (ಹಣ) ಕೊಟ್ಟುಬಿಡುತ್ತಾನೆ.

ಸ್ವಾರ್ಥತೆಗೆ ಕಾರಣವಾಗುತ್ತದೆ. ಇದರ ಫಲವೇನೆಂದರೆ, ವಿಶ್ವಾಸಿಗಳಿಗೆ ಕೊರತೆಯಲ್ಲಿರುವ ತಮ್ಮ ಸಹವಿಶ್ವಾಸಿಗಳಿಗೆ ಸಹಾಯ ಮಾಡಲು ಸಾಕಷ್ಟು ಯಾವಾಗಲೂ ಇರುವುದಿಲ್ಲ. ವಿಶ್ವಾಸಿಗಳ ಮಧ್ಯದಲ್ಲಿ ಇಂತಹ ಪರಿಸ್ಥಿತಿ ದೇವರ ದೃಷ್ಟಿಯಲ್ಲಿ ಮೆಚ್ಚಿಕೆಯಾಗುವುದಿಲ್ಲ.

ಮೇಲೆ ಹೇಳಿರುವುದು ಸತ್ಯ ಮತ್ತು ವಿಶ್ವಾಸಿಗಳು ಸಮಸ್ಯೆಯನ್ನು ತಿಳಿದುಕೊಂಡು ಒಪ್ಪಿಕೊಂಡರೂ ಸಹಾಯ ಮಾಡಲು ಅವರಿಗೆ ಸಂತೋಷ ಯಾಕೆಂದರೆ, ಅವರ ಆತ್ಮದ ಭಯವುಳ್ಳ ಸ್ವಭಾವ ಆಗಿದೆ. ಸತ್ಯವನ್ನು ನಂಬುವ ಮಟ್ಟಿಗೆ ಬಂದಿರುವ ವಿಶ್ವಾಸಿಗಳ ಆತ್ಮ ಅವರ ಸಹೋದರರ ಅವಶ್ಯಕತೆಗಳಿಗೆ ವಿತರಿಸಲು ಸಿದ್ಧವಾಗಿವೆ. ಇಂತಹ ವಿಶ್ವಾಸಿಗಳು ದೇವರನ್ನು ಸೇವಿಸುತ್ತಾರೆಯೇ ಆಗಲಿ ಧನವನ್ನಲ್ಲ. ಯಾಕೆಂದರೆ ಅವರ ನಂಬಿಕೆ ದೇವರಲ್ಲಿದೆ, ಧನದಮೇಲಲ್ಲ.

ಭೌತಿಕ ದೇಹ ಸಾಯಬಲ್ಲದಾದುದರಿಂದ, ಹಣದ ಕೊರತೆ ಮರಣದ ಭಯಕ್ಕೆ ಕಾರಣವಾಗುತ್ತದೆ. ಇದು ಹಣದ ವಿಷಯಗಳಲ್ಲಿ ಸ್ವಾರ್ಥತೆಗೂ ಅನೀತಿಗೂ ನಡೆಸುತ್ತದೆ. ಅವರ ಆತ್ಮದ ಮೇಲಿನ ಹಣದ ಪ್ರಭಾವವನ್ನು ವಿಶ್ವಾಸಿಗಳು ಹೇಗೆ ಜೈಸಬಲ್ಲರು ?

ಸತ್ಯವನ್ನು ತಿಳಿದುಕೊಂಡ ಪ್ರಾಣವು ತನ್ನ ಭಯವುಳ್ಳ ಆತ್ಮದ ಸ್ವಾರ್ಥತೆಗೆ ಆಗಲೀ, ಅನೀತಿಗೆ ಆಗಲೀ ವಿಧೇಯನಾಗ ಬಾರದು. ವಿಶ್ವಾಸಿಯು ಕೊಡುವ ಮನಸ್ಸುಳ್ಳವನಾದಾಗ ಅವನು ತನ್ನ ಸ್ವಾರ್ಥತೆಯುಳ್ಳ ಆತ್ಮನಿಂದ ಭಯವನ್ನು ಅನುಭವಿಸುತ್ತಾನೆ. ಇದೂ ಅಲ್ಲದೆ ಆರ್ಥಿಕ ಸಂಧರ್ಭಗಳು ಅವನ ಸಹೋದರರಿಗೆ ಕೊಡುವುದನ್ನು ನಿಲ್ಲಿಸಲು ಪ್ರಯತ್ನಿಸುತ್ತವೆ. ಹೆಚ್ಚು ಪ್ರಾರ್ಥನೆ ಮತ್ತು ವಿಜ್ಞಾಪನೆಗಳ ಮೂಲಕ ಅವನು ಪ್ರಯಾಸ ಪಡಬೇಕು. ಮತ್ತು ಆತ್ಮನ ಶ್ರಮೆಯನ್ನು ತಾಳಿಕೊಳ್ಳಬೇಕು. ಅವನು ತಾಳ್ಮೆಯಿಂದ ಪರಿಶುದ್ಧಾತ್ಮನ ಅಭಿಷೇಕಕ್ಕಾಗಿ ಕಾಯುವಾಗ ಆತನು ಭಯ ಮತ್ತು ಅಪನಂಬಿಕೆಯನ್ನು ನಾಶಗೊಳಿಸುತ್ತಾನೆ. ಭಯವನ್ನು ತೆಗೆದುಹಾಕಿ ದೇವರಲ್ಲಿ ನಂಬಿಕೆಯನ್ನಿರಿಸಿದಾಗ ವಿಶ್ವಾಸಿಯು ಸಂತೋಷದಿಂದ ಕೊಡುವವನಾಗುವನು.

**ಬುದ್ಧಿವಾದ :** ವಿಶ್ವಾಸಿಯು ಹಣವನ್ನು ಕೊಟ್ಟು ಹಣವನ್ನು ಪಡೆಯದ ಹಾಗೆ ಎಚ್ಚರವಾಗಿರಬೇಕು, ಯಾಕೆಂದರೆ ಅದು ಶರೀರ ಭಾವವಾಗಿದ್ದು, ಕೆಟ್ಟದ್ದಾಗಿದೆ. ಕೊಡುವ ಉದ್ದೇಶವೇನೆಂದರೆ, ಬದಲಾಗಿ ಆತ್ಮನಲ್ಲಿ ಪರೋಪಕಾರ ಮಾಡಲು. ಹೀಗೆ ಸ್ವಾರ್ಥತೆಯನ್ನು ನಾಶಗೊಳಿಸ ಬಹುದು. ದೇವರು ಸಂತೋಷದಿಂದ ಕೊಡುವವನಿಗಾಗಿ ಹುಡುಕುತ್ತಾನಾದುದರಿಂದ ಆತನು ಹೃದಯವನ್ನು ನೋಡುತ್ತಾನಾಗಲೀ, ಮೊತ್ತ ಹಣವನ್ನಲ್ಲ.

ಹಣವು ತಾನೇ ಪಾಪವಲ್ಲ, ಅದು ಬದಲಾವಣೆಯಲ್ಲಿರುವ ನಾಣ್ಯ. ಹೇಗಾದರೂ ಹಣಕ್ಕೆ ಒಂದು ಅನೀತಿಯ ಆತ್ಮವಿದೆ, ಯಾಕೆಂದರೆ ಮನುಷ್ಯನ ಸ್ವಾರ್ಥತೆಯಿಂದಾಗಿ ಮತ್ತು ಅವನ ಪ್ರಾಣದ ಭಯದಿಂದಾಗಿ. ಈ ಭಾವಕ್ಕೆ ಧನ ಎಂದು ಕರೆಯುತ್ತಾರೆ. ಯಾವಾಗಲಾದರೂ ಮನುಷ್ಯನು ಹಣದ ವ್ಯವಹಾರವನ್ನು ಮಾಡಲಿ ಅನೀತಿಯು ಪ್ರತ್ಯಕ್ಷವಾಗಿರುತ್ತದೆ. ಹಣದ ವ್ಯವಹಾರಗಳಲ್ಲಿ ನೀತಿವಂತನಾಗಿರುವ ವಿಶ್ವಾಸಿಯು ದೇವರನ್ನು ಸೇವಿಸುತ್ತಾನೆ, ಯಾಕೆಂದರೆ, ಅವನು ಸ್ವಾರ್ಥಿಯಲ್ಲ ಮತ್ತು ಆರ್ಥಿಕ ಮತ್ತು ದೈಹೀಕ ಮರಣಕ್ಕೆ ಅವನು ಭಯಪಡಿವುದಿಲ್ಲ. ಹಣದ ವ್ಯವಹಾರಗಳಲ್ಲಿ ಅನೀತಿಯಲ್ಲಿರುವ ಒಬ್ಬ ವಿಶ್ವಾಸಿಯು ಧನವನ್ನು ಸೇವಿಸುತ್ತಾನೆ.

ಲೂಕ 16:13 "ಯಾವ ಸೇವಕನೂ ಇಬ್ಬರು ಯಜಮಾನರನ್ನು ಸೇವಿಸಲಾರನು; ಯಾಕೆಂದರೆ ಅವನು ಒಬ್ಬನನ್ನು ಹಗೆ ಮಾಡಿ, ಮತ್ತೊಬ್ಬನನ್ನು ಪ್ರೀತಿಸುವನು... ನೀವು ದೇವರನ್ನೂ ಧನವನ್ನೂ ಸೇವಿಸಲಾರಿರಿ."
**ಗಮನಿಸು** : ಹಣವೇ ಸುರಕ್ಷಿತವಾದುದರಿಂದ, ಮತ್ತು ವಿಶ್ವಾಸಿಯ ಎಲ್ಲಾ ಅವಶ್ಯಕತೆಗಳನ್ನು ನೀಗಿಸುವುದರಿಂದ ಅವನು ಒಂದು ಹಣದ ಆಸೆಯನ್ನು ಬೆಳೆಸಿಕೊಳ್ಳುತ್ತಾನೆ. ಮತ್ತು ಅವನಿಗೆ ತಿಳಿಯದ ಹಾಗೆ ಅನೀತಿಯ ಧನ ಅವನ ಯಜಮಾನನಾಗುತ್ತದೆ. ಅವನು ಕೂಡಿಸಿಡುತ್ತಾನೆ ಮತ್ತು ಹೆಚ್ಚುಗಳಿಸಲು ಮೋಸಮಾಡುತ್ತಾನೆ. ನಂತರ ವ್ಯರ್ಥ ಖರ್ಚು ಮಾಡಿ ತನ್ನ ಸಹ ವಿಶ್ವಾಸಿಗಳ ಅವಶ್ಯಕತೆಗೆ ಹೊಂದಿಕೊಳ್ಳದೇ ತನ್ನ ದುರಾಶೆಗಳಿಗೆ ಖರ್ಚು ಮಾಡುತ್ತಾನೆ.

ಯಾಕೋ 4:3 "ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸ ಬೇಕೆಂದು ತಪ್ಪಾಗಿ ಬೇಡಿಕೊಳ್ಳುವುದರಿಂದ ನಿಮಗೆ ದೊರೆಯುವುದಿಲ್ಲ."

ಎಫೆ 4:28 "ಕಳವು ಮಾಡಿದವನು ಇನ್ನು ಮೇಲೆ ಕಳವು ಮಾಡದೇ ಕೈಯಿಂದ ಯಾವುದಾದರೊಂದು ಒಳ್ಳೇ ಉದ್ಯೋಗವನ್ನು ಮಾಡಿ ದುಡಿಯಲಿ ! ಆಗ ಕೊರತೆಯಲ್ಲಿರುವವರಿಗೆ ಕೊಡುವುದಕ್ಕೆ ಅವನಿಂದಾಗುವುದು."

2 ಕೊರಿ 8:12,13 "ಯಾಕೆಂದರೆ ಒಬ್ಬನು ಕೊಡುವುದಕ್ಕೆ ಮನಸ್ಸಿದ್ದರೆ, ಅವನು ತನಗೆ ಇಲ್ಲದಕ್ಕನುಸಾರವಾಗಿ ಅಲ್ಲ, ಆದರೆ, ಇರುವುದಕ್ಕನುಸಾರವಾಗಿಯೇ ಕೊಟ್ಟರೆ ಅದು ಸಮರ್ಪಕವಾಗಿರುವುದು. ಇತರರ ಭಾರವು ಪರಿಹಾರವಾಗಬೇಕೆಂದೂ ನಿಮಗೆ ಭಾರವಾಗಬೇಕೆಂದೂ ನನ್ನ ತಾತ್ಪರ್ಯವಲ್ಲ."
**ಗಮನಿಸು :** ವಿಶ್ವಾಸಿಯು ಭಯಪಡಬೇಕಾಗಿಲ್ಲ. ಯಾಕೆಂದರೆ, ಅವನು ಅವನಿಗಿರುವುದರಲ್ಲಿ ಕೊಡತಕ್ಕದ್ದು ಮತ್ತು ಅವನಿಗೆ ಇಲ್ಲದೇ ಇರುವುದನ್ನು ಅವನು ಕೊಡಬೇಕಾಗಿಲ್ಲ. ಅವನ ಮನೆಯು ಸಾಲದಲ್ಲಿ ನಡೆಯುವಾಗ ಅವನು ಕೊಡವವನಾಗಬಾರದು. ಮೊದಲು ಸಾಲ ತೀರಿಸು, ನಂತರ ನೀನು ಕೊಡುವವನಾಗುವಿ. ಸಾಲದಿಂದ ಪಾರಾಗಬೇಕಾದರೆ, ಸ್ವಭಾವವನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅದು ಆತ್ಮನ ಶುದ್ಧೀಕರಣದಿಂದ ಬರುತ್ತದೆ.

**ಮುಖ್ಯಾಂಶ !** ನಿನ್ನ ಸ್ವಂತ ಸಂಸಾರಕ್ಕೂ ವಿಧವೆಯರಿಗೂ ಒದಗಿಸು, ಮತ್ತು ಅಪರಿಚಿತ ಮನುಷ್ಯರಿಗೂ, ಸಂಸ್ಥೆಗಳಿಗೂ ಕೊಡುವುದಕ್ಕೆ ಮುಂಚೆ ನಿನ್ನ ಸಹೋದರರಿಗೆ ಕೊಡು.
1 ತಿಮೋ 5:8 "ಯಾವನಾದರೂ ಸ್ವಂತದವರನ್ನು, ವಿಶೇಷವಾಗಿ ತನ್ನ ಮನೆಯವರನ್ನು ಸಂರಕ್ಷಿಸದೇ ಹೋದರೆ, ಅವನು ನಂಬಿಕೆಯನ್ನು ಅಲ್ಲಗಳೆದವನೂ ನಂಬದವನಿಗಿಂತ ಕೆಟ್ಟವನೂ ಆಗಿದ್ದಾನೆ."

ರೋಮ 12:13 "ಪರಿಶುದ್ಧರ ಕೊರತೆಯ ಪ್ರಕಾರ ಹಂಚಿರಿ ; ಅತಿಥಿ ಸತ್ಕಾರವನ್ನು ಮಾಡಿರಿ."

**ಲೋಕ :**

ಲೋಕ ಎಂದರೆ ಲೋಕದ ಜನ, ಅವರ ಕಾಮಾಭಿಲಾಷೆಗಳು, ಅವರ ದುರಾಶೆಗಳು ಮತ್ತು ಅವರ ಕರ್ಮಗಳು. ಅವರು ಪಾಪಿಗಳು ಮತ್ತು ಅವರ ಕ್ರಿಯೆಗಳ ಮೂಲಕ ವಿಶ್ವಾಸಿಗಳ ಮೇಲೆ ಪ್ರಭಾವ ಬೀರುತ್ತಾರೆ. ಅವರ ಸಂಸ್ಕೃತಿ ವಿಚಾರ ಶಾಸ್ತ್ರ, ಮೋಹಕ ಲಾವಣ್ಯ, ರೀತಿ, ಸಂಗೀತ, ತಿಂಡಿಪೋತತನ, ಆಹಾರ ಕ್ರಮ, ಹಚ್ಚೆ ಚುಚ್ಚಿಸಿಕೊಳ್ಳುವುದು, ವ್ಯಭಿಚಾರ, ಸಲಿಂಗಕಾಮ, ಮಾನವನ ಹಕ್ಕುಗಳು ಇತ್ಯಾದಿ. ವಿಶ್ವಾಸಿಗಳನ್ನು ಶೋಧಿಸಿ, ಅವುಗಳಲ್ಲಿ ಭಾಗವಹಿಸುವಂತೆ ಮಾಡುತ್ತಾರೆ. ಈ ರೀತಿಯಾಗಿ ವಿಶ್ವಾಸಿಗಳು ದೇವರ ವಾಕ್ಯವನ್ನು ಉಲ್ಲಂಘಿಸುವವರಾಗುತ್ತಾರೆ.

ದೇಹದ ದೆಸೆಯಿಂದ ಸರ್ಕಾರದ ನಿಯಮಗಳು ವಿಶ್ವಾಸಿಗಳ ಮೇಲೆಯೂ, ಅವಿಶ್ವಾಸಿಗಳ ಮೇಲೆಯೂ, ಅಧಿಕಾರ ಚಲಾಯಿಸಿವೆ. ದೇವರು ವಿಶ್ವಾಸಿಯ ಒಳಮನುಷ್ಯನ ಮೇಲೆ ಪ್ರಭುತ್ವ ಮಾಡುತ್ತಾನೆ, ಮತ್ತು ಸರ್ಕಾರವು ಅವನ ಹೊರ ಮನುಷ್ಯನ ಮೇಲೆ ಪ್ರಭುತ್ವ ಮಾಡುತ್ತದೆ. ಕಾನೂನು ಪ್ರಕಾರ ಶಿಕ್ಷಾರ್ಹರನ್ನು ಶಿಕ್ಷಿಸುವುದು ಸರ್ಕಾರದ ಜವಾಬ್ದಾರಿಕೆ. ಹೇಗಾದರೂ ಸರ್ಕಾರ ಶಿಕ್ಷಿಸದ ತಪ್ಪುಗಳೂ ಮತ್ತು ಒಳ ಮನುಷ್ಯನ ಮುಚ್ಚಿಟ್ಟ ಪಾಪಗಳೂ, ದೇವರ ನ್ಯಾಯ ತೀರ್ಪಿನ ದಿವಸ ಲೆಕ್ಕ ಕೊಡಬೇಕಾಗುತ್ತದೆ.

**ಮಾನವನ ಹಕ್ಕುಗಳು :**

ಮಾನವನ ಹಕ್ಕುಗಳು ತನ್ನನ್ನು ತಾನು ಉತ್ತಮಶೀಲ ಸ್ವಭಾವದವರೆಂದೂ, ನೀತಿವಂತರೆಂದೂ ತೋರಿಸಿಕೊಳ್ಳುತ್ತಾರೆ. ಆದರೆ, ಮಾನವನ ಅಕ್ರಮದ ಕೆಟ್ಟ ಸ್ವಭಾವವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಲೋಕವು ಮಾನವನ ಹಕ್ಕುಗಳನ್ನು ಪ್ರಜಾಪ್ರಭುತ್ವವನ್ನೂ ಪ್ರೋತ್ಸಾಹಿಸುತ್ತದೆ, ಆದರೆ ಸಮಾಜವನ್ನು ಒಟ್ಟಾಗಿ ತೆಗೆದುಕೊಂಡಾಗ ಅದರ ಮೇಲೆ ಬೀಳುವ ನಾಶನದ ಪರಿಣಾಮಗಳನ್ನು ಲೆಕ್ಕಿಸುವುದಿಲ್ಲ. ಮಾನವನ ಹಕ್ಕುಗಳು ಪ್ರಜಾಪ್ರಭುತ್ವಕ್ಕೆ ಉತ್ತೇಜನ ಕೊಡುವುದರಿಂದ ಜನರು ಆಳುತ್ತಾರೆ. ಪಾಪಿಗಳ ವಿಭಿನ್ನವಾದ ಅಭಿಪ್ರಾಯಗಳನ್ನು ಹೇಗೆ ತೃಪ್ತಿಗೊಳಿಸುವುದು ? ಪ್ರಜಾಪ್ರಭುತ್ವದಿಂದ ಆಯ್ಕೆಯಾದ ನಾಯಕರು ಒಬ್ಬನನ್ನು ಮೆಚ್ಚಿಸಿದರೆ, ಇನ್ನೊಬ್ಬನು ಗೊಣುಗುತ್ತಾನೆ. ಪಾಪದ ಸಮಾಜದಲ್ಲಿ ಎಲ್ಲರೂ ಚೆನ್ನಾಗಿ ಬಾಳುವುದು ಅಸಾಧ್ಯ, ಪರಿಣಾಮವೇನೆಂದರೆ, ಅಧಿಕಾರದಲ್ಲಿರುವವರು ಆಳಲಾಗುವುದುದಿಲ್ಲ. ಮಾನವನ ಹಕ್ಕುಗಳು, ಮಾಧ್ಯಮದಿಂದ ಪ್ರಚಾರವಾಗಿ ಸರ್ಕಾರಕ್ಕೂ, ಪೊಲೀಸರಿಗೂ, ಫಲೋತ್ಪಾಧಕ

2 ಕೊರಿ 9:7 "ಪ್ರತಿಯೊಬ್ಬನು ತನ್ನ ಹೃದಯದಲ್ಲಿ ನಿರ್ಣಯಿಸಿಕೊಂಡ ಪ್ರಕಾರ ಕೊಡಲಿ; ದುಃಖದಿಂದಾಗಲೀ ಇಲ್ಲವೇ ಬಲಾತ್ಕಾರದಿಂದಾಗಲೀ ಯಾರೂ ಕೊಡಬಾರದು; ಯಾಕೆಂದರೆ ಸಂತೋಷವಾಗಿ ಕೊಡುವವನನ್ನು ದೇವರು ಪ್ರೀತಿ ಮಾಡುತ್ತಾನೆ.

ಮನುಷ್ಯನು ತನ್ನ ಜೀವಮಾನವನ್ನೆಲ್ಲಾ ದೇವರಿಲ್ಲದೆ ಕಳೆಯಬಹುದು. ಆದರೆ ಹಣವಿಲ್ಲದೆ ಅಲ್ಲ. ಹಣದ ದೆಸೆಯಿಂದ ಧನಕ್ಕಿರುವ ಶಕ್ತಿ ಇದೇ ಆದುದರಿಂದ ವಿಶ್ವಾಸಿಯು ಹಣಕಾಸಿನ ವ್ಯವಹಾರಗಳಲ್ಲಿ ತೊಡಗುವಾಗ ಎಚ್ಚರಿಕೆಯಿಂದಲೂ ಜಾಗೃತೆಯಾಗಿಯೂ ವರ್ತಿಸಬೇಕು.

ಲೂಕ 16:14, 15 "ಆಗ ಲೋಭಿಗಳಾದ ಫರಿಸಾಯರು ಸಹಾ ಇವೆಲ್ಲವುಗಳನ್ನು ಕೇಳಿ, ಆತನಿಗೆ ಪರಿಹಾಸ್ಯ ಮಾಡಿದರು. ಆಗ ಆತನು ಅವರಿಗೆ ಮನುಷ್ಯರ ಮುಂದೆ ನೀತಿವಂತರಾಗಿ ಮಾಡಿಕೊಳ್ಳುವವರೂ ನೀವೆ ; ಆದರೆ ದೇವರು ನಿಮ್ಮ ಹೃದಯಗಳನ್ನು ತಿಳಿದಿದ್ದಾನೆ : ಯಾಕೆಂದರೆ ಮನುಷ್ಯರಲ್ಲಿ ಯಾವುದು ಶ್ರೇಷ್ಠವೆಂದು ಎಣಿಸಿಲ್ಪಡುತ್ತದೋ ಅದು ದೇವರ ದೃಷ್ಟಿಯಲ್ಲಿ ಅಸಹ್ಯವಾಗಿರುತ್ತದೆ."

ಮಾರ್ಕಾ 12 : 41–43 "... ಅನೇಕ ಐಶ್ವರ್ಯವಂತರು ಹೆಚ್ಚೆಚ್ಚಾಗಿ ಹಾಕಿದರು. ಆಗ ಅಲ್ಲಿ ಒಬ್ಬ ಬಡ ವಿಧವೆಯು ಬಂದು ಎರಡು ನಾಣ್ಯಗಳನ್ನು ಹಾಕಿದನು... ಈ ಬೊಕ್ಕಸದಲ್ಲಿ ಹಾಕಿದವರೆಲ್ಲರಿಗಿಂತ ಈ ಬಡ ವಿಧವೆಯು ಹೆಚ್ಚಾಗಿ ಹಾಕಿದ್ದಾಳೆ ಎಂದು ನಾನು ನಿಮಗೆ ನಿಜವಾಗಿ ಹೇಳುತ್ತೇನೆ."

1 ತಿಮೋ 6 : 17–19 "ಈ ಲೋಕದಲ್ಲಿ ಐಶ್ವರ್ಯವುಳ್ಳವರು ಅಹಂಕಾರಿಗಳಾಗಿರದೆ, ಅಸ್ಥಿರವಾದ ಐಶ್ವರ್ಯದ ಮೇಲೆ ಭರವಸೆಯನ್ನಿಡದೆ, ನಮ್ಮ ಅನುಭೋಗಕ್ಕೋಸ್ಕರ ನಮಗೆ ಎಲ್ಲವನ್ನೂ ಹೇರಳವಾಗಿ ದಯಪಾಲಿಸುವ ಜೀವವನ್ನುಳ್ಳ ದೇವರ ಮೇಲೆ ಭರವಸೆಯನ್ನಿಡ ಬೇಕೆಂತಲೂ ಅವರು ಒಳ್ಳೆಯದನ್ನು ಮಾಡುವವರೂ, ಸತ್ಕಾರ್ಯಗಳಲ್ಲಿ ಐಶ್ವರ್ಯವಂತರೂ, ಪಾಲುಕೊಡುವುದರಲ್ಲಿ ಸಿದ್ಧವಾಗಿರುವವರೂ, ಪರೋಪಕಾರ ಮಾಡುವವರೂ ಆಗಿದು, ಮುಂದಿನ ಕಾಲಕ್ಕೆ ಒಳ್ಳೆ ಅಸ್ತಿವಾರ ಆಗುವಂಥವುಗಳನ್ನು ತಮಗೆ ಕೂಡಿಸಿಟ್ಟುಕೊಳ್ಳ ಬೇಕೆಂತಲೂ, ಅವರಿಗೆ ಆಜ್ಞಾಪಿಸು.
**ಗಮನಿಸು :** ನಿತ್ಯ ಜೀವವನ್ನು ಹಿಡಿದುಕೊಳ್ಳುವುದಕ್ಕಾಗಿ, ಒಳಮನುಷ್ಯನ ಪರಿಶುದ್ಧತೆಯು ಹಣದ ವಿಷಯವಾಗಿಯೂ ಮತ್ತು ಅದರ ಕಾರ್ಯ ನಿರ್ವಹಣೆಗಾಗಿಯೂ ಪರಿಪೂರ್ಣಗೊಳ್ಳಬೇಕು.

1 ಯೋಹಾ 5 : 19 "ನಾವು (ವಿಶ್ವಾಸಿಗಳು) ದೇವರಿಗೆ ಸಂಬಂಧಪಟ್ಟವರಾಗಿದ್ದೇವೆಂದೂ, ಲೋಕವೆಲ್ಲವೂ ಕೆಟ್ಟತನದಲ್ಲಿ ಬಿದ್ದಿದೆ ಎಂದೂ, ನಮಗೆ ಗೊತ್ತಿದೆ."
ಯಾಕೋ 4 : 4 "ಇಹಲೋಕ ಸ್ನೇಹವು ದೇವ ವೈರತ್ವವೆಂದು ನಿಮಗೆ ತಿಳಿಯದೋ ? ಲೋಕಕ್ಕೆ ಸ್ನೇಹಿತನಾಗಿರಬೇಕೆಂದಿರುವವನು ದೇವರಿಗೆ ವೈರಿಯಾಗಿದ್ದಾನೆ."
1 ಕೊರಿ 6 : 19 "ಏನು ? ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಆಲಯವಾಗಿದೆ ಎಂಬುದು ನಿಮಗೆ ತಿಳಿಯದೋ ? ನೀವು ನಿಮ್ಮ ಸ್ವಂತ ಸ್ವತ್ತಲ್ಲ."
ಲೇವಿ 19 : 28 "ಸತ್ತವರಿಗಾಗಿ ನಿಮ್ಮ ಶರೀರವನ್ನು ಕೊಯ್ದುಕೊಳ್ಳಬಾರದು ನಿಮ್ಮ ಮೇಲೆ ಯಾವ ಚಿಹ್ನೆಗಳನ್ನೂ ಮುದ್ರಿಸಿಕೊಳ್ಳಬಾರದು ; ನಾನೇ ಕರ್ತನು."
ಗಮನಿಸು : ದೇವರ ಆಲಯವನ್ನು ನೀವು ವಿರೂಪ ಗೊಳಿಸುವುದಾಗಲೀ, ಗೀಚಿ ಚಿತ್ರಗಳನ್ನು ನಿರ್ಮಿಸುವುದಾಗಲೀ ಮಾಡಬಾರದು.

ಕಾರ್ಯನಿರ್ವಹಣೆ ಅಸಾಧ್ಯವಾಗುತ್ತದೆ. ಯಾಕೆಂದರೆ, ಅಪರಾಧಿಗಳಿಗೆ ಕೂಡಾ ಹಕ್ಕುಗಳಿವೆ.

ಪ್ರಕಟಣೆ 3:14–22 ರಲ್ಲಿ ಲವೋದಿಕೆಯಾದ ಸಭೆಗೆ ಯೇಸು ಮಾತನಾಡಿದನು. ಅದು ಈಗಿನ ಸಭೆಗೆ ಕೂಡ ಅನ್ವಯವಾಗುತ್ತದೆ. ಲವೋದಿಕೆಯಾದಲ್ಲಿ ಪ್ರಭುತ್ವ ನಡೆಸಿದ ವಿಚಾರಶಾಸ್ತ್ರ ಮಾನವನ ಹಕ್ಕುಗಳಾಗಿದೆ. ಈ ದಿನದ ಸಭೆಯೂ ಕೂಡ ಮಾನವನ ಹಕ್ಕುಗಳ ವಿಚಾರ ಶಾಸ್ತ್ರದ ಕೆಳಗೆ ತನ್ನನ್ನು ತಾನು ಕಂಡುಕೊಂಡಿದೆ. ಒಬ್ಬ ಮಾನವನ ಹಕ್ಕು ಒಂದು ಹೊಸ ಯುಗದ 'ಮತ'ವಾಗಿದೆ, ಮತ್ತು ಅದು ಗೌರವಾನ್ವಿತವಾಗಿ ಕಂಡರೂ, ಕ್ರಿಸ್ತನ ಆಳ್ವಿಕೆಯನ್ನು ಬಹಿಷ್ಕರಿಸುತ್ತದೆ. ಈದಿನದ ಲೋಕವೂ ಹಾಗೂ ಸಭೆಯೂ ಸತ್ಯವನ್ನು ಅನೀತಿಯಲ್ಲಿ ತಡೆಹಿಡಿಯುತ್ತದೆ. (ರೋಮ 1:18). ಒಬ್ಬನ ಕಡೆಗೆ ಅವರು ಯೇಸುಕ್ರಿಸ್ತನ ತತ್ವಗಳನ್ನು ನಿಜವಾಗಿ ಅಭ್ಯಾಸ ಮಾಡಿದರೆ, ಇನ್ನೊಬ್ಬನ ಕಡೆಗೆ ಅವರು ಅನೀತಿವಂತರಾಗಿದ್ದಾರೆ. ಕ್ರೈಸ್ತರು ಹೆಚ್ಚೆಚ್ಚಾಗಿ ಈ ಜೀವನ ಶೈಲಿಗೆ ಒಗ್ಗುತ್ತಾರೆ.

ಉದಾಹರಣೆಗಾಗಿ : ಯಜಮಾನನಿಗೂ, ಕೆಲಸಗಾರರಿಗೂ ಇರುವ ಸಂಬಂಧವನ್ನು ತೆಗೆದುಕೊಳ್ಳಿ. ಒಬ್ಬ ಯಜಮಾನನ ಕೂಲಿ ಆಳುಗಳು ಮುಷ್ಕರ ಹೂಡಲು ಹಕ್ಕು ಹೊಂದಿದ್ದರೆ, ಅದೇ ವಲದಲ್ಲಿ ಯಜಮಾನರೂ ಹಾಗೂ ಇದರ ವ್ಯಾಪಾರಸ್ತರೂ ಮತ್ತು ಸಂಸಾರಗಳು ನಷ್ಟ ಹೊಂದುತ್ತವೆ. ತಮ್ಮ ಮಾನವ ಹಕ್ಕುಗಳನ್ನು ಸಾಧಿಸುವ ಪಕ್ಷಗಳು ಈ ಕಾರ್ಯವಿಧಾನದಲ್ಲಿ ಯಾವಾಗಲಾದರೋ ಜನರ ಮಾನವಹಕ್ಕುಗಳನ್ನು ಪರ್ಯಾಲೋಚಿಸುತ್ತಾರಾ ? ಅವರು ಎಷ್ಟು ಒಳ್ಳೇದು ಮಾಡಬೇಕೆಂದರೂ ಇನ್ನೂ ಹೆಚ್ಚು ಕೆಟ್ಟದ್ದನ್ನೇ ಮಾಡುತ್ತಾರೆ. ಕ್ರೈಸ್ತರು ಕೂಡ ಇದೇ ವಿಧವಾದ ಅನೀತಿಯನ್ನು ಅಭ್ಯಸಮಾಡುವುದನ್ನು ನಾವು ಕಂಡುಕೊಳ್ಳುತ್ತೇವೆ. ನಿರ್ದೋಷಿಗಳು ಅಪರಾಧಿಗಳನ್ನು ಕ್ಷಮಿಸುವಂತೆ ಹೇಳುತ್ತಾರೆ. ಅತಿಕ್ರಮಣ ಮಾಡಿದವರು ಸ್ವತಂತ್ರರಾಗಿ ಹೋಗುತ್ತಾರೆ.

**ದೆವ್ವಗಳ ಕಾರ್ಯಗಳು :**

ಒಂದನೇ ಅಧ್ಯಾಯದಲ್ಲಿ ನಾವು ನೋಡಿದ ಹಾಗೆ ಪಾಪವು ದೇಹದೊಳಗೆ ಪ್ರವೇಶಿಸಿದಾಗ, ದೇಹವು ಪಾಪದ ದೇಹವಾಗಿ ಪರಿಣಮಿಸಿತು – ಸೈತಾನನ ಮನೆ. ಆಗಿನಿಂದ ಅಪರಿಶುದ್ಧ ಆತ್ಮಗಳೂ ಕೂಡಾ ದೇಹದಲ್ಲಿ ನೆಲೆಗೊಳ್ಳಬಹುದು. ಆದುದರಿಂದಲೇ ದೆವ್ವಗಳನ್ನು ಹೊರಗಡೆ ಓಡಿಸಬಹುದು. ಒಬ್ಬ ವಿಶ್ವಾಸಿಯು ಸೈತಾನನ ಮತ್ತು ಪಾಪದ ಪ್ರಭುತ್ವದ ಕೆಳಗೆ

ರೋಮ 13 : 1, 4 "ಪ್ರತಿಯೊಬ್ಬನೂ ತನ್ನ ಮೇಲಿರುವ ಅಧಿಕಾರಿಗಳಿಗೆ ಅಧೀನನಾಗಿರಲಿ ; ಯಾಕೆಂದರೆ, ದೇವರಿಂದ ಹೊರತು ಒಬ್ಬರಿಗೂ ಅಧಿಕಾರವಿರುವುದಿಲ್ಲ. ಅವನು ನಿನ್ನ ಹಿತಕ್ಕೋಸ್ಕರ ದೇವರ ಸೇವಕನಾಗಿದ್ದಾನಲ್ಲಾ ; ಆದರೆ ನೀನು ಕೆಟ್ಟದನ್ನು ಮಾಡಿದರೆ ಭಯಪಡಬೇಕು ; ಅವನು ಸುಮ್ಮನೆ ಕೈಯಲ್ಲಿ ಕತ್ತಿಯನ್ನು ಹಿಡಿದಿಲ್ಲ ; ಅವನು ದೇವರ ಸೇವಕನಾಗಿದ್ದು ಕೆಟ್ಟದನ್ನು ನಡೆಸುವವರಿಗೆ ದಂಡನೆಯನ್ನು ವಿಧಿಸುತ್ತಾನೆ."

2 ಕೊರಿ 5 : 10 "ಯಾಕೆಂದರೆ ಪ್ರತಿಯೊಬ್ಬನೂ ತನ್ನ ದೇಹದ ಮೂಲಕ ನಡೆಸಿದ ಒಳ್ಳೆಯದಕ್ಕಾಗಲೀ ಇಲ್ಲವೇ ಕೆಟ್ಟದಕ್ಕಾಗಲೀ ಸರಿಯಾದುದ್ದನ್ನು ಹೊಂದುವುದಕ್ಕೋಸ್ಕರಾ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದಮುಂದೆ ಕಾಣಿಸಿಕೊಳ್ಳಬೇಕು."
**ಗಮನಿಸು :** ವಿಶ್ವಾಸಿಗಳು ತಾವು ಇಷ್ಟಬಂದದ್ದನ್ನು ಮಾಡಿ ತಪ್ಪಿಸಿಕೊಳ್ಳಬಹುದೆಂದು ಕ್ಷಣಮಾತ್ರಕ್ಕೂ ಯೋಚಿಸಬಾರದು.

ಬೈಬಲ್ಲಿನಲ್ಲಿ ದೇವರು ಯಾವಾಗಲೂ ರಾಜರುಗಳಿಗೆ ಆಳುವವರೆಂದು ನಿರ್ದೇಶಿಸಿರುತ್ತಾನೆ. ದೇವರು ನೇಮಕ ಮಾಡಿದ ರಾಜನು ಯೇಸು ಮತ್ತು ಆತನನ್ನು ಒಳಗಾಗಲಿ ಹೊರಗಾಗಲೀ ಓಟು ಹಾಕಲಾಗದು. ದೇವರ ರಾಜ್ಯದಲ್ಲಿ ಪ್ರಜಾಪ್ರಭುತ್ವವಾಗಲೀ, ಮಾನವನ ಹಕ್ಕುಗಳಾಗಲೀ ಇಲ್ಲ. ಆತನ ರಾಜ್ಯದಲ್ಲಿ ಆತನ ವಾಕ್ಯವೇ ಎಲ್ಲರೂ ವಿಧೇಯರಾಗಿರಬೇಕಾಗಿರುವ ನ್ಯಾಯಪ್ರಮಾಣ. ಮತ್ತು ಉಲ್ಲಂಘನೆ ಮಾಡಿದವರೆಲ್ಲರಿಗೂ ದೇವರಿಗೆ ನ್ಯಾಯವಾದ ಶಿಕ್ಷೆ ವಿಧಿಸಲಾಗುತ್ತದೆ. ಅದು ಈ ಜೀವನದಲ್ಲಿ ಆದರೂ ಆಗಬಹುದು. ಅಥವಾ ನ್ಯಾಯ ತೀರ್ಪಿನ ದಿನವಾದರೂ ಆಗಬಹುದು.
ರೋಮ 2 : 16 "ಮನುಷ್ಯರು ರಹಸ್ಯಗಳ ವಿಷಯವಾಗಿ ನನ್ನ ಸುವಾರ್ತೆಗನುಸಾರ, ಯೇಸು ಕ್ರಿಸ್ತನ ಮುಖಾಂತರ ದೇವರು ನ್ಯಾಯ ತೀರಿಸುವ ದಿವಸದಲ್ಲಿ ಅವರು ತೀರ್ಪು ಹೊಂದುವರು."

ಕೀರ್ತ 2 : 1–4 "ಅನ್ಯ ಜನರೂ ಕೋಪೋದ್ರೇಕ ಗೊಳ್ಳುವುದೂ, ಪ್ರಜೆಗಳು ವ್ಯರ್ಥವಾದುದನ್ನೂ ಯೋಚಿಸುವುದು ಯಾಕೆ ? ತನಗೆ ವಿರೋಧವಾಗಿಯೂ ಆತನ ಅಭಿಷಿಕ್ತನಿಗೆ ವಿರೋಧವಾಗಿಯೂ ಭೂರಾಜರು ನಿಂತುಕೊಳ್ಳುತ್ತಾರೆ ; ಪ್ರಭುಗಳು ಒಟ್ಟಾಗಿ ಆಲೋಚಿಸುತ್ತಾರೆ. ನಾವು ಅವರ ಬಂಧಗಳನ್ನು ತುಂಡು ತುಂಡಾಗಿ ಮುರಿದು ಅವರ ಕಟ್ಟುಗಳನ್ನು ನಮ್ಮಿಂದ ಬಿಸಾಡೋಣ ಅನ್ನುತ್ತಾರೆ. ಸ್ವರ್ಗದಲ್ಲಿ ಕುಳಿತಿರುವಾತನು ಅದಕ್ಕೆ ನಗುತ್ತಾನೆ ! ಕರ್ತನು ಅವರನ್ನು ಪರಿಹಾಸ್ಯ ಮಾಡುವನು."

ವ್ಯಖ್ಯಾನ : ದೇವರು ಯೇಸು ಕ್ರಿಸ್ತನನ್ನು ತನ್ನ ಜನರಮೇಲೆ ರಾಜನಾಗಿ ಆಳುವುದಕ್ಕೆ ಆಯ್ಕೆ ಮಾಡಿಕೊಂಡನೆಂಬದನ್ನು ಸಭೆಯು ನೆನಪಿನಲ್ಲಿಡಬೇಕು. ರಾಜನೆಲ್ಲಿರುವನೋ ಅಲ್ಲಿ ಮಾನವನ ಹಕ್ಕುಗಳು ಮತ್ತು ಪ್ರಜಾಪ್ರಭುತ್ವವು ಇರುವುದಿಲ್ಲ. ಅಂದರೆ ಮಾನವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವವೂ ದೇವರಿಂದ ಆದದ್ದಲ್ಲ. ಮಾನವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವಗಳೂ ಲೋಕದಲ್ಲಿಯೂ, ಸಭೆಯಲ್ಲಿಯೂ ಅಕ್ರಮವನ್ನು ಉಂಟುಮಾಡುತ್ತವೆ. ದೇವರ ವಾಕ್ಯವು ಇನ್ನುಮೇಲೆ ಸಭೆಯಲ್ಲಿ ನ್ಯಾಯಪ್ರಮಾಣವಲ್ಲ, ಯಾಕೆಂದರೆ ಮಾನವನ ಹಕ್ಕು ಮತ್ತು ಪ್ರಜಾಪ್ರಭುತ್ವಗಳು ಆಳುತ್ತಿವೆ. ಉದಾ : ಮಾನವನ ಹಕ್ಕುಗಳು ಪೋಷಕರು ತಮ್ಮ ಮಕ್ಕಳನ್ನು ಶಿಸ್ತು ಪಡಿಸುವುದರಿಂದ ನಿಷೇಧಿಸುತ್ತದೆ. ಸಲಿಂಗ ಕಾಮಗಳನ್ನು ಮತ್ತು ಪಾಪ ಮಾಡುವ ಎಲ್ಲರನ್ನೂ ಶಿಸ್ತು ಮಾಡುವ ಹಾಗೂ ಇಲ್ಲ. ಅಥವಾ ಸಭೆಯಿಂದ ಹೊರದೂಡುವಂತೆಯೂ ಇಲ್ಲ. ಇವೆಲ್ಲವೂ ಮಾನವನ ಹಕ್ಕುಗಳ ದೆಸೆಯಿಂದ.

ಇರುವುದರಿಂದ ದೆವ್ವದ ಸೇನೆಗಳು ದೇಹದೊಳಕ್ಕೆ ನುಗ್ಗಲು ಪ್ರವೇಶಾಧಿಕಾರ ಹೊಂದಿವೆ. ಹೇಗಾದರೂ ಒಬ್ಬ ವ್ಯಕ್ತಿಯು ಪರಿಶುದ್ಧಾತ್ಮನನ್ನು ಸ್ವೀಕರಿಸಿದಾಗ, ದೇಹವು ಯೇಸು ಕ್ರಿಸ್ತನ ಸ್ವತ್ತಾಗುತ್ತದೆ. ದೆವ್ವದ ಸೇನೆಗಳಿಗೆ ಇನ್ನು ಮೇಲೆ ಸ್ವತಂತ್ರವಾದ ಪ್ರವೇಶಾಧಿಕಾರ ಇರುವುದಿಲ್ಲ. ಆದರೆ ಒಳ ಮನುಷ್ಯನು ಮೋಸಹೋಗಿ ಸೇರಿಸಿಕೊಳ್ಳುವುದಾದರೆ, ಅದು ಸಾಧ್ಯ.

ಆಕಾಶ ಮಂಡಲದಲ್ಲಿರುವ ರಾಜತ್ವಗಳು ಮತ್ತು ಅಧಿಕಾರಿಗಳು ವಿಶ್ವಾಸಿಯ ಪ್ರಾಣದಲ್ಲಿ ಕೆಲವು ಯೋಚನೆಗಳಿಗಾಗಿ ಕಾರಣರಾಗಬಹುದು. ಒಳ್ಳೇದೇ ಆಗಲೀ ಅಥವಾ ಕೆಟ್ಟದ್ದೇ ಆಗಲೀ. ಈ ಯೋಚನೆಗಳು ಮತ್ತು ಕಲ್ಪನೆಗಳು ಮನಸ್ಸಿನಲ್ಲಿ ದೀರ್ಘವಾಗಿ ಉಳಿಯುವುದಾದರೆ, ಅವು ಆತ್ಮವನ್ನು ಅಹಂಕಾರಕ್ಕೆ ನಡೆಸುತ್ತವೆ ಮತ್ತು ಗರ್ವ, ಸರ್ವಜ್ಞಾನ, ಹೊಟ್ಟೆಕಿಚ್ಚು, ಹಗೆ, ಕಹಿ, ಚಿಂತೆ, ಜಗಳ, ಅಶುದ್ಧ ಯೋಚನೆಗಳು, ಅಪನಂಬಿಕೆ, ಅನುಮಾನ, ವ್ಯಾಕುಲತೆ ಇತ್ಯಾದಿಗಳಿಗೆ ಕಾರಣವಾಗುತ್ತದೆ. ಈ ರೀತಿಯಾಗಿ ದೆವ್ವಕ್ಕೆ ವಿಶ್ವಾಸಿಯಾದ ಆತ್ಮನ ಮೇಲೆ ಕುತ್ತಿಗೆ ಹಿಸುಕಿ ಕೊಲ್ಲುವ ಪಟ್ಟು ಸಿಕ್ಕುತ್ತದೆ. ಈ ಉದ್ರೇಖಗಳು ಆತ್ಮನಲ್ಲಿ ಆಳವಾದಂತೆಲ್ಲಾ ಮತ್ತು ತೀವ್ರಗೊಂಡಹಾಗೆಲ್ಲಾ, ಅದು ಕೊಲೆ, ಆತ್ಮಹತ್ಯೆ, ನರಗಳ ಕುಸಿತ, ವಕ್ರತೆ, ದೇವದೂಷಣೆ, ಉಪದೇಶ ಹಿಡಿಸದವರು, ಬುದ್ಧಿಹೀನತೆ, ಒಡಕು, ಮುಂತಾದ ಕಾರ್ಯಗಳಲ್ಲಿ ತೋರ್ಪಡಿಸಿಕೊಳ್ಳುತ್ತವೆ.

ದೆವ್ವದ ಕಾರ್ಯಗಳನ್ನು ಕಂಡು ಹಿಡಿಯಬಹುದು. ಆ ಯೋಚನೆಯೂ ಮತ್ತು ಕಲ್ಪನೆಯೂ ಹಾದು ಹೋಗುವ ಯೋಚನೆ ಆಗಿಲ್ಲದಿದ್ದರೆ ಮತ್ತು ವಿಶ್ವಾಸಿಯ ಚಿತ್ತಕ್ಕೆ ವಿರುದ್ಧವಾಗಿ ಪ್ರಯತ್ನ ಮುಂದುವರೆಸಿದರೆ, ಅದು ಸಾಧ್ಯ. ಈ ಪರಿಸ್ಥಿತಿ ಮುಂದುವರೆದರೆ, ಪ್ರಾಣವು ಕುಗ್ಗಿ ಹೋಗುತ್ತದೆ. ಯಾಕೆಂದರೆ ಇದು ಬೇಕಿಲ್ಲದ ಯೋಚನೆಯಿಂದಾಗಿ. ಸತ್ಯಕ್ಕೆ ವಿಧೇಯನಾಗಿ ಆ ಯೋಚನೆಯನ್ನು ಅಲಕ್ಷ್ಯ ಮಾಡದೆ ಹೋದರೆ ವಿಶ್ವಾಸಿಯು ತನ್ನ ಆತ್ಮನಲ್ಲಿ ವ್ಯಥೆಗೊಳಗಾಗುತ್ತಾನೆ. ದುರಾತ್ಮಕ್ಕೆ ಮನಸ್ಸಿನ ಮೇಲೆ ಹಾಗೂ ಆತ್ಮನ ಮೇಲೆ ಹತೋಟಿ ಸಿಕ್ಕ ಕೂಡಲೇ, ಒಳ ಮನುಷ್ಯನು ಸೋತು ಅವನ ದೇಹವು ದೆವ್ವದ ಸ್ವಾಧೀನವಾಗಿ, ತನ್ನ ಚಿತ್ತವನ್ನು ತೋರಿಸಿಕೊಳ್ಳುತ್ತದೆ.

ಒಬ್ಬ ವಿಶ್ವಾಸಿಯು ತನಗೆ ವಿರುದ್ಧವಾಗಿ ತಾನೇ ವರ್ತಿಸುವುದಾದರೆ ಅವನು ದೆವ್ವದ ಸ್ವಾಧೀನವೆಂಬುದಕ್ಕೆ ಅದು ಗುರ್ತಾಗಿದೆ. ಯಾಕೆಂದರೆ ಅವನು ತನ್ನ ಸ್ವಾಧೀನದಲ್ಲಿಲ್ಲ. ದೆವ್ವದ ದುರಾಶೆಗಳಿಗೂ, ಸಲಹೆಗಳಿಗೂ ತೆರೆದ ಹೃದಯ ಇರುವ ಯಾರನ್ನೇ ಆಗಲೀ ದೆವ್ವವು ಗುರಿ ಇಡುತ್ತದೆ. ಒಳ ಮನುಷ್ಯನು

ಟುನೀಷಿಯಾವನ್ನು ತೆಗೆದುಕೊಳ್ಳಿ, ಲಿಬಿಯಾ, ಐಗುಪ್ತ ಮತ್ತು ಇರಾಖ್ ಇವುಗಳೇ ಉದಾಹರಣೆಗಳು. ಪೂರ್ವದ ಮಧ್ಯದೇಶಗಳಿಗೆ ರಾಜರು ಮತ್ತು ನಿರಂಕುಶ ಪ್ರಭುಗಳು ಆಳುತ್ತಿದ್ದಾಗ ಶಾಂತಿ ಮತ್ತು ಏಳಿಗೆ ಇರಲಿಲ್ಲ. ಮಾನವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ಅವರ ಮೇಲೆ ಬಲಾತ್ಕಾರ ಮಾಡಿದಾಗಲೇ, ನರಕವು ನಾಶನವೂ ಅವರ ದೇಶಗಳಿಂದ ಹೊರಟು ಹೋದವು, ಸಾವಿರಾರು ಮಂದಿ ಸತ್ತರು ಮತ್ತು ಎಲ್ಲಾ ಕ್ರಮಗಳೂ ಕುಸಿದು ಬಿದ್ದವು. ಯಾಕೆಂದರೆ ಅಲ್ಲಿ ಆಳುವವರು ಯಾರೂ ಇಲ್ಲ. ಈ ಅಕ್ರಮ ದೇಶಗಳಿಂದ ಹೊರಗೆ ವಲಸೆ ಹೋಗುವವರಿಗೆ ಬೇರೆ ದೇಶಗಳು ತಮ್ಮ ಸ್ವಂತ ಜನಕ್ಕೆ ಹಾನಿಯಾದರೂ, ಆಶ್ರಯಕೊಡಬೇಕಾಗಿದೆ.

ಮಾನವನ ಹಕ್ಕುಗಳು ತಾನು ಪ್ರಸಾರ ಮಾಡುವುದಕ್ಕೆ ತಾನೇ ಜವಾಬ್ದಾರಿಕೆ ವಹಿಸುವುದಿಲ್ಲ. ಪೂರ್ವದ ಮಧ್ಯ ದೇಶಗಳಲ್ಲಿ ಈ ಎಲ್ಲಾ ಅಸ್ತವ್ಯಸ್ತತೆಗೆ (ಕಾನೂನ ಕಟ್ಟಳೆ ಇಲ್ಲದ) ಅದೇ ಕಾರಣ ಮತ್ತು ಈಗ ಬೇರೆ ದೇಶಗಳು ಈ ಭಾರವನ್ನು ಹೊರಬೇಕಾಗಿದೆ. ಸೈತಾನನು ಮತ್ತು ಅವನ ಪೈಶಾಚಿಕ ಸೇನೆಯು ಅವರ ರಾಜನಾದ ಅಂತಿಮ ಕ್ರಿಸ್ತನ ಬರೋಣಿಕೆಗೆ ಸಿದ್ಧ ಮಾಡುತ್ತಿದ್ದಾರೆ. ಕಾನೂನಿನ ಅಸ್ತವ್ಯಸ್ತತೆ ಪ್ರಪಂಚದಲ್ಲಿ ಎದ್ದುಕಾಣುತ್ತಾ ಇರುವುದರಿಂದ ದೇಶಗಳನ್ನು ಒಟ್ಟು ಗೂಡಿಸಿ, ಕ್ರಮಬದ್ಧವಾಗಿ ಆಳುವ ಒಬ್ಬ ನಾಯಕನ ಅವಶ್ಯಕತೆ ಉಂಟಾಗಿದೆ. ನಾಯಕನು ಒಬ್ಬ ಬೆಳಕಿನ ದೇವದೂತನಂತೆ ಬರುತ್ತಾನೆ. ಆದರೆ ಮಾನವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದೊಂದಿಗೆ ಆಳುವುದು ಅಸಾಧ್ಯವಾದುದರಿಂದ ಅವನೊಂದು ನಿರಂಕುಶ ಪ್ರಭುವಾಗಿ ತನಗೆ ಅವಿಧೆಯರಾದವರನ್ನೆಲ್ಲಾ ಹಿಂಸಿಸುತ್ತಾನೆ.

2 ಥೆಸಾ 2 : 9, 10 “ಆ ಕೆಡುಕನ ಬರುವಿಕೆಯು ಸೈತಾನನ ಕಾರ್ಯಕ್ಕನುಸಾರವಾಗಿ ; ಅದು ಎಲ್ಲಾ ಶಕ್ತಿಯಿಂದಲೂ ಸೂಚಕಗಳಿಂದಲೂ ಸೂಚಕ ಅದ್ಭುತ ಕಾರ್ಯಗಳಿಂದಲೂ ದುರ್ನೀತಿಯ ವಂಚನೆಗಳಿಂದಲೂ ಕೂಡಿ ನಾಶವಾಗುವುದರಲ್ಲಿ ಸಂಭವಿಸುವುದು. ಅವರು ಪ್ರೀತಿಯ ಸತ್ಯವನ್ನು ಅಂಗೀಕರಿಸುವ ಕಾರಣ, ರಕ್ಷಣೆಯನ್ನು ಹೊಂದುವುದಿಲ್ಲ.”

ಮಾರ್ಕ 5:8,9 “ಯಾಕೆಂದರೆ ಆತನು ಅವನಿಗೆ – ಅಶುದ್ಧಾತ್ಮವೇ, ಆ ಮನುಷ್ಯನೊಳಗಿನಿಂದ ಹೊರಗೆ ಬಾ ಎಂದು ಹೇಳಿದನು ಮತ್ತು ಆತನು ಅವನಿಗೆ ನಿನ್ನ ಹೆಸರೇನು ಎಂದು ಕೇಳಲು, ಅವನು ಪ್ರತ್ಯುತ್ತರವಾಗಿ – ನನ್ನ ಹೆಸರು ದಂಡು ; ಯಾಕೆಂದರೆ ನಾವು ಅನೇಕರಿದ್ದೇವೆ ಅಂದನು.”

ಮತ್ತ 7:22 “ಆದಿನದಲ್ಲಿ ಕರ್ತನೇ, ಕರ್ತನೇ ನಿನ್ನ ಹೆಸರಿನಲ್ಲಿ ನಾವು ಪ್ರವಾದಿಸಲಿಲ್ಲವೇ ? ಮತ್ತು ನಿನ್ನ ಹೆಸರಿನಲ್ಲಿ ದೆವ್ವಗಳನ್ನು ಬಿಡಿಸಲಿಲ್ಲವೇ ? ಇದಲ್ಲದೇ ನಿನ್ನ ಹೆಸರಿನಲ್ಲಿ ಬಹಳ ಮಹಾತ್ಕಾರ್ಯಗಳನ್ನು ಮಾಡಲಿಲ್ಲವೇ ? ಎಂದು ಬಹಳ ಜನರು ನನಗೆ ಹೇಳುವರು.”

ಒಳ್ಳೆ ಮತ್ತು ಕೆಟ್ಟ ಆಲೋಚನೆಗಳೆರಡು ದೆವ್ವಗಳಿಂದ ಮೂಲತಃ ಬರುವುದರಿಂದ ಅವು ವಿಶ್ವಾಸಿಯ ಕೆಡುಕಿಗಾಗಿಯೂ ಮತ್ತು ನಾಶನಕ್ಕಾಗಿಯೂ ಕೆಲಸ ಮಾಡುತ್ತವೆ. ದೆವ್ವದ ಪ್ರಭಾವಗಳು ವಿಶ್ವಾಸಿಗಳ ಹಿತಕ್ಕಾಗಿ ಚಿಂತಿಸುವುದಿಲ್ಲ.

ಎಫೆ 6:11,12 “ನೀವು ಸೈತಾನನ ತಂತ್ರೋಪಾಯಗಳನ್ನು ಎದುರಿಸಿ ನಿಲ್ಲುವುದಕ್ಕೆ ಶಕ್ತರಾಗುವಂತೆ ದೇವರ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ, ಯಾಕೆಂದರೆ ನಾವು ಹೋರಾಡುವುದು ರಕ್ತ ಮಾಂಸಕ್ಕೆ ವಿರೋಧವಾಗಿ ಅಲ್ಲ; ರಾಜತ್ವಗಳ ಮೇಲಿಯೂ ಅಧಿಕಾರಿಗಳ ಮೇಲೆಯೂ ಈ ಲೋಕದ ಅಂದಕಾರದ

ಸ್ಮೃತಿ ತಪ್ಪಿದಾಗ ದೆವ್ವದ ಕಾಮಾಭಿಲಾಷೆಗಳು ಮತ್ತು ದುರಾಶೆಗಳೂ ದೇಹದ ಮೂಲಕ ಹೀಗೆ ತೋರಿಸಿಕೊಳ್ಳುತ್ತದೆ. ಒಂದು ದೆವ್ವವನ್ನು ಯೇಸುವಿನ ನಾಮದಲ್ಲಿ ಓಡಿಸಬಹುದು ಆದರೆ, ವಿಶ್ವಾಸಿಯ

ಚಿತ್ತಕ್ಕೆ ವಿರುದ್ಧವಾಗಿ ಅಲ್ಲ. ದೆವ್ವಗಳಿಗೂ ಪಾಪಗಳಿಗೂ ಒಂದು ವ್ಯತ್ಯಾಸವಿದೆ. ದೆವ್ವಗಳನ್ನು ಹೊರಗೆ ಓಡಿಸಬಹುದು ಆದರೆ ಪಾಪಗಳನ್ನು ಪರಿಶುದ್ಧಾತ್ಮನ ಆತ್ಮದ ಶುದ್ಧೀಕರಣದಿಂದ ಸಾಯಿಸಬಹುದು.

ಅಧಿಪತಿಗಳ ಮೇಲೆಯೂ ಆಕಾಶ ಮಂಡಲದಲ್ಲಿರುವ ಆತ್ಮೀಕ ದುಷ್ಟತನದ ಮೇಲೆಯೂ ಹೋರಾಡುವವರಾಗಿದ್ದೇವೆ."

2 ಕೊರಿ 10:3–5 "ಯಾಕೆಂದರೆ ನಾವು ಶರೀರದಲ್ಲಿ (ದೇಹ) ನಡೆದುಕೊಳ್ಳುವವರಾದರೂ ಶರೀರ ಪ್ರಕಾರವಾಗಿ ಯುದ್ಧ ಮಾಡುವವರಲ್ಲ. (ದೈಹೀಕವಾಗಿ ಅಲ್ಲ ಆತ್ಮೀಕವಾಗಿ) ; (ನಾವು ಉಪಯೋಗಿಸುವ ಯುದ್ಧಾಯುಧಗಳು ಶರೀರ ಸಂಬಂಧವಾದ ಆಯುಧಗಳಲ್ಲ ; ಅವು ದೇವರ ಮೂಲಕ ಬಲವಾಗಿದ್ದು, ಬಲವಾದ ಕೋಟೆಗಳನ್ನು ಕೆಡವಿ ಹಾಕುವಂಥವುಗಳಾಗಿವೆ). ನಾವು ಊಹೆಗಳನ್ನೂ ದೇವಜ್ಞಾನವನ್ನೂ ವಿರೋಧಿಸುವುದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದವುಗಳೆಲ್ಲವನ್ನೂ ಕೆಡವಿ ಹಾಕಿ, ಎಲ್ಲಾ ಯೋಜನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆ ಹಿಡಿದು..."

ಯೋಚನೆಗಳು ನಮ್ಮಲ್ಲಿಯೇ ಶುರುವಾಗ ಬಹುದು, ದುರಾತ್ಮಗಳಿಂದಾಗಲೀ ಅಥವಾ ಪರಿಶುದ್ಧಾತ್ಮನಿಂದಲೂ ಆಗಬಹುದು. ವಿಶ್ವಾಸಿಯು ಏನು ಯೋಚನೆ ಮಾಡುತ್ತಾನೋ ಅದರಲ್ಲಿ ದೇವರ ವಾಕ್ಯಕ್ಕೆ ವಿರೋಧವಾದದ್ದನ್ನು ಬಿಟ್ಟು ಆಯ್ಕೆ ಮಾಡುವುದು ಅವನ ಜವಾಬ್ದಾರಿಕೆ.


2 ತಿಮೋ 2:25,26 "ಎದುರಿಸುವವರನ್ನು ಸಾತ್ವಿಕತ್ವದಿಂದ ತಿದ್ದುವವನು ಆಗಿರಬೇಕು. ಒಂದು ವೇಳೆ ದೇವರು ಆ ಎದುರಿಸುವವರಲ್ಲಿ ಪಶ್ಚಾತ್ತಾಪವನ್ನುಂಟು ಮಾಡಿ, ಸತ್ಯದ ತಿಳುವಳಿಕೆಯನ್ನು ಅವರಿಗೆ ಕೊಟ್ಟಾನು ಮತ್ತು ಸೈತಾನನ ಉರ್ಲಿಗೆ ಬಿದ್ದು, ಅವನ ಇಷ್ಟದಿಂದ ಸೆರೆ ವೈಯ್ಯಲ್ಪಟ್ಟವರಾದ ಇವರು ಒಂದು ವೇಳೆ ಎಚ್ಚತ್ತಾರು."

1 ಪೇತ್ರ 5:8,9 "ಸ್ವಸ್ತ ಚಿತ್ತರಾಗಿರ್ರಿ ; ಯಾಕೆಂದರೆ ನಿಮ್ಮ ವಿರೋಧಿಯಾಗಿರುವ ಸೈತಾನನು ಘರ್ಜಿಸುವ ಸಿಂಹದಂತೆ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ. ನೀವು ನಂಬಿಕೆಯಲ್ಲಿ ದೃಢವಾಗಿದ್ದು, ಅವನನ್ನು ಎದುರಿಸಿರಿ ; ಲೋಕದಲ್ಲಿರುವ ನಿಮ್ಮ ಸಹೋದರರಿಗೂ ಅಂತ ಬಾಧೆಗಳೇ ಸಂಭವಿಸುತ್ತದೆ ಎಂದು ನಿಮಗೆ ತಿಳಿದಿದೆಯಲ್ಲಾ."

ಮತ್ತ 12:43–45 "ಅಶುದ್ಧಾತ್ಮವು ಒಬ್ಬ ಮನುಷ್ಯನಿಂದ ಹೊರಗೆ ಹೋದ ಮೇಲೆ ನೀರಿಲ್ಲದ ಸ್ಥಳಗಳಲ್ಲಿ ವಿಶ್ರಾಂತಿಗಾಗಿ ತಿರುಗಾಡಿದರೂ ಅದನ್ನು ಕಂಡುಕೊಳ್ಳಲಿಲ್ಲ. ಆಗ ಅದು – ನಾನು ಹೊರಟು ಬಂದ ನನ್ನ ಮನೆಗೆ (ದೇಹ) ಹಿಂತಿರುಗುವೆನು ಎಂದು ಅಂದುಕೊಂಡು, ಬಂದು ಅದು ಬರಿದಾಗಿಯೂ ಗುಡಿಸಿ ಅಲಂಕರಿಸಲ್ಪಟ್ಟದ್ದಾಗಿಯೂ ಇರುವುದನ್ನು ಕಂಡಿತು. ತರುವಾಯ ಅದು ಹೋಗಿ ತನಗಿಂತ ಕೆಟ್ಟವುಗಳಾಗಿರುವ ಬೇರೆ 7 ಆತ್ಮಗಳನ್ನು ಕರೆದುಕೊಂಡು ಅವು ಅದರೊಳಗೆ ಪ್ರವೇಶಿಸಿ (ದೇಹದಲ್ಲಿ) ವಾಸಮಾಡುತ್ತವೆ ; ಹೀಗೆ ಆ ಮನುಷ್ಯನ ಕಡೇ ಸ್ಥಿತಿಯು ಮೊದಲಿಗಿಂತಲೂ ಕೆಟ್ಟದ್ದಾಗಿರುವುದು. ಅದರಂತೆಯೇ ಈ ಕೆಟ್ಟಸಂತತಿಗೂ ಆಗುವುದು ಎಂದು ಹೇಳಿದನು."

# ಸಾರಂಶ

## ವಿಶ್ವಾಸದ ಎರಡು ಹಂತಗಳು




## ನಂಬಿಕೆಯ ಎರಡು ಹೆಜ್ಜೆಗಳು :


<u>ನಂಬಿಕೆಯ ಮೊದಲ ಹೆಜ್ಜೆ</u>

ಯೇಸುವಿನಲ್ಲಿನ ನಂಬಿಕೆಯ ಮೂಲಕ ವಿಶ್ವಾಸಿಯು ನೀತಿವಂತನೆಂದು ಘೋಷಿಸಲ್ಪಡುತ್ತಾನೆ.

<u>ನಂಬಿಕೆಯ ಎರಡನೇಯ ಹೆಜ್ಜೆ</u>

ಪವಿತ್ರಾತ್ಮನ ಕೆಲಸದಲ್ಲಿ ನಂಬಿಕೆ ಇಡುವುದರ ಮೂಲಕ ವಿಶ್ವಾಸಿಯು ನೀತಿವಂತನಾಗುತ್ತಾನೆ.


ನಂಬಿಕೆಯ ಎರಡು ಹೆಜ್ಜೆಗಳು ಪಾಪ ಮಾಡುವ ಹಳೇ ಮನುಷ್ಯನನ್ನು ಪಾಪ ಮಾಡದ ಹೊಸ ಮನುಷ್ಯನ್ನಾಗಿ ಮಾರ್ಪಾಟು ಮಾಡುತ್ತದೆ.




## ಪರಿಶುದ್ದನಾಗುವಿಕೆ :

ಮನುಷ್ಯನು ನೂತನಗೊಳಿಸುವುದರ ಮೂಲಕ ಆತ್ಮವು ಸತ್ಯವನ್ನು ನಂಬುವಂತಾಗುತ್ತದೆ.

ಆತ್ಮವು ಸತ್ಯವನ್ನು ನಂಬಿದ ಕೂಡಲೇ ಕ್ರಿಸ್ತನ ದಿವ್ಯಸ್ವಭಾವವನ್ನು ಹಂಚಿಕೊಳ್ಳುತ್ತದೆ,ಒಳ ಮನುಷ್ಯನು ಆಗಲೇ ದೇವರನ್ನು ಆತ್ಮನಿಂದಲೂ, ಸತ್ಯದಿಂದಲೂ ಸೇವಿಸಬಹುದು.




## ನಿತ್ಯ ಜೀವ :

ಪಾಪದ ದೆಸೆಯಿಂದ ಆದಾಮನ ದೇಹ ನಿತ್ಯ ಜೀವವನ್ನು ಹೊಂದಿಲ್ಲ.

ಹೊಸದಾಗಿ ಹುಟ್ಟಿದ ವಿಶ್ವಾಸಿಯು ಪವಿತ್ರಾತ್ಮನನ್ನು ಹೊಂದಿರುವ ಕಾರಣ ನಿತ್ಯ ಜೀವದ ವಾಗ್ದಾನವನ್ನು ಹೊಂದಿದ್ದಾನೆ.

ಕ್ರಿಸ್ತನ ದೇಹಕ್ಕೆಅರ್ಹನಾಗಿರುವ ವಿಶ್ವಾಸಿಯು ನಿತ್ಯ ಜೀವಕ್ಕೆ ಬಾಧ್ಯನಾಗುತ್ತಾನೆ.

### ಅಧ್ಯಾಯ 12

### ಹಕ್ಕಲು ಆಯುವುದು:

**ತಿರಿಗಿ ಹುಟ್ಟಿದ ವಿಶ್ವಾಸಿಗಳು ಪಾಪ ಮಾಡುವುದೇಕೆ ?**

ಅವರು ಪಾಪ ಮಾಡುತ್ತಾರೆ ಯಾಕೆಂದರೆ ದೇವರು ಹೇಳುವುದನ್ನು ಅವರು ನಂಬುವುದಿಲ್ಲ. ಸತ್ಯವೇದವು ಪದೇ ಪದೇ ವಿಶ್ವಾಸಿಗಳಿಗೆ ಪಾಪವನ್ನು ನಿಲ್ಲಿಸೆಂದು ಹೇಳುತ್ತದೆ. ಯಾಕೆಂದರೆ ದೇವರ ಮಕ್ಕಳು ಪಾಪ ಮಾಡುವುದಿಲ್ಲ. ಅವರ ಅಪನಂಬಿಕೆಗೆ ಸಾಕ್ಷಿ ಏನೆಂದರೆ ಅವರು ಒಪ್ಪಿಕೊಳ್ಳುವುದಿಲ್ಲ. "ಒಬ್ಬ ದೇವರ ಮಗ ಪಾಪ ಮಾಡುವುದಿಲ್ಲ." ಅವರು ದೇವರಾದ ಪರಿಶುದ್ಧಾತ್ಮನೊಂದಿಗೆ ಅಸಮ್ಮತಿಸುವುದರಿಂದ, ಆತನು ಅವರ ಸಹಾಯಕನಾಗಿದ್ದರೂ ಸಹಾಯ ಮಾಡಲಾರ.

ಕ್ರೈಸ್ತರು ನಂಬಿ ಅನೇಕ ವಚನಗಳನ್ನು ಉಲ್ಲೇಖಿಸಿದರೂ, 1 ಯೋಹಾ 3 : 9 ನ್ನು ಮಾತ್ರ ಬಿಟ್ಟುಬಿಡುತ್ತಾರೆ. ಅದೇನೆಂದರೆ "ದೇವರಿಂದ ಹುಟ್ಟಿದವನು ಪಾಪಮಾಡುವವನಾಗಿರಲಾರನು ; ಯಾಕೆಂದರೆ ಆತನ ಬೀಜವು ಅವನಲ್ಲಿ ನೆಲೆಗೊಂಡಿದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪ ಮಾಡಲಾರನು." ಅವರು ಒಬ್ಬರಿಗೊಬ್ಬರು "ದೇವರ ಮಗನು ಪಾಪಮಾಡಲಾರನು." ಎಂದು ಒಪ್ಪಿಕೊಂಡರೆ ಅವರ ಆತ್ಮನಲ್ಲಿ ನಂಬಿಕೆ ಹುಟ್ಟುತ್ತದೆ. ವಿಶ್ವಾಸಿಯ ಆತ್ಮವು ಸತ್ಯವನ್ನು ನಂಬಿದ ಕೂಡಲೇ, ಮತ್ತು ಸತ್ಯವನ್ನು ನಿಜವೆಂದು ನಂಬಿದ ಕೂಡಲೇ, ಅವನು ಪಾಪ ಮಾಡುವುದಿಲ್ಲ.

ಹೊಸ ಒಡಂಬಡಿಕೆಯಲ್ಲಿ ದೇವರು ಒಂದು ಪಾಪ ರಹಿತ ಜೀವನವನ್ನು ಕೇಳುವನು. ಹಳೇ ಒಡಂಬಡಿಕೆಯಲ್ಲಿ ಅದು ಸಾಧ್ಯವಾಗಲಿಲ್ಲ, ಯಾಕೆಂದರೆ, ಪಾಪವು ದೇಹದಲ್ಲಿ ನೆಲೆಗೊಂಡಿತ್ತು. ಆದರೆ, ಹೊಸ ಒಡಂಬಡಿಕೆಯಲ್ಲಿ ಅದು ಸಾಧ್ಯ, ಯಾಕೆಂದರೆ ಪರಿಶುದ್ಧಾತ್ಮನು ದೇಹದಲ್ಲಿ ವಾಸವಾಗಿರುತ್ತಾನೆ. ಪರಿಶುದ್ಧಾತ್ಮನ ಪ್ರತ್ಯಕ್ಷತೆಯಿಂದಾಗಿ ವಿಶ್ವಾಸಿಯು ಪಾಪದಿಂದ ಸ್ವತಂತ್ರನಾಗಿದ್ದಾನೆ. ವಿಶ್ವಾಸಿಯು ಇನ್ನು ಮೇಲೆ ಪಾಪದ ನಿಯಮದ ಕೆಳಗೆ ಇಲ್ಲ, ಆದುದರಿಂದಲೇ ಶರೀರಾಧೀನದ ಕ್ರಿಯೆಗಳನ್ನು ಮಾಡಬೇಕಾದ ಕಾರಣವಿಲ್ಲ. ನಿನ್ನನ್ನು ನೀನು ಕೇಳಿಕೋ ! ನೀನು ಮಾಡುತ್ತಿರುವ ಯಾವ ಪಾಪವನ್ನು ನಂಬಿಕೆಯ ಮೂಲಕ, ಪ್ರಾರ್ಥನೆಯಿಂದ ಮತ್ತು ವಿಜ್ಞಾಪನೆಯಿಂದ ಸಾಯಿಸಲಾಗುವುದಿಲ್ಲ ? ಒಂದು ಸಾರ್ತಿ ಆ ನಿರ್ದಿಷ್ಟ ಪಾಪವು ಪರಿಶುದ್ಧಾತ್ಮನಿಂದ ಕ್ಷಮಿಸಲ್ಪಟ್ಟು ಸಾಯಿಸಲ್ಪಡುತ್ತದೋ, ಆಗ ಆ ಪಾಪವು ಸತ್ತಿದ್ದರಿಂದ ನಿನಗೊಂದು ವಿಶ್ರಾಂತಿಯ ಅನುಭವ ಅದರಿಂದ ಸಿಕ್ಕುತ್ತದೆ.

**ವಚನಗಳು ಮತ್ತು ವ್ಯಾಖ್ಯಾನಗಳು :**

2 ಕೊರಿ 4 : 13 "ಹೀಗಿದ್ದರೂ ನಾನು ನಂಬಿದೆನು, ಆದ್ದರಿಂದ ಮಾತನಾಡಿದೆನು ಎಂದು ಬರೆಯಲ್ಪಟ್ಟಿರುವ ಪ್ರಕಾರ ನಂಬಿಕೆಯ ಆತ್ಮವನ್ನೇ ಹೊಂದಿ, ನಾವೂ ಸಹಾ ನಂಬುತ್ತೇವೆ ; ಆದ್ದರಿಂದ ಮಾತನಾಡುತ್ತೇವೆ.
ಇಬ್ರಿ 11 : 6 "ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ ; ಯಾಕೆಂದರೆ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಜಾಗೃತೆಯಾಗಿ ಹುಡುಕುವವನಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ."

ರೋಮ 10 : 9 – 11 "ನೀನು ಕರ್ತನಾದ ಯೇಸುವನ್ನು ಬಾಯಿಂದ ಅರಿಕೆ ಮಾಡಿ, ದೇವರು ಆತನನ್ನು ಸತ್ತವರೊಳಗಿನಿಂದ ಎಬ್ಬಿಸಿದ್ದಾನೆ ಎಂದು ನಿನ್ನ ಹೃದಯದಲ್ಲಿ ನಂಬಿದರೆ, ನಿನಗೆ ರಕ್ಷಣೆಯಾಗುವುದು ಎಂಬದೆ. ಯಾಕೆಂದರೆ ಹೃದಯದಿಂದ (ಆತ್ಮ) ನಂಬುವುದರ ಮೂಲಕ ನೀತಿಯು ದೊರೆಯುತ್ತದೆ. ಬಾಯಿಂದ ಅರಿಕೆ ಮಾಡುವುದರ ಮೂಲಕ ರಕ್ಷಣೆಯಾಗುತ್ತದೆ, ಯಾಕೆಂದರೆ ಆತನ ಮೇಲೆ ನಂಬಿಕೆಯಿಡುವ ಯಾವನಾದರೂ ನಾಚಿಕೆಪಡುವುದಿಲ್ಲ ಎಂದು ಬರಹವು ಹೇಳುತ್ತದೆ.

ಕಾರ್ಯದಲ್ಲಿರುವ ತತ್ವ ಹೀಗಿದೆ : ನೀನು (ಪ್ರಾಣ) ಬಾಯಿಂದ ಅರಿಕೆ ಮಾಡಿದರೆ. "ದೇವರ ಮಗನು ಪಾಪ ಮಾಡುವುದಿಲ್ಲ." ಮತ್ತು ನಿನ್ನ ಹೃದಯದಿಂದ ನಂಬಿದರೆ (ಆತ್ಮನು) ನೀನು ಮಾಡುವ ಪ್ರತಿಯೊಂದು ಪಾಪದಿಂದ ರಕ್ಷಿಸಲ್ಪಡುವಿ.

1 ಯೋಹ 5 : 18 "ದೇವರಿಂದ ಹಿಟ್ಟಿರುವವನು ಪಾಪ ಮಾಡುವವನಲ್ಲವೆಂಬುದು ನಮಗೆ ಗೊತ್ತಿದೆ. ದೇವರಿಂದ ಹುಟ್ಟಿದವನು ತನ್ನನ್ನು ತಾನು ಕಾಪಾಡಿಕೊಳ್ಳುವನು ; ಕೆಡುಕನು ಅವನನ್ನು ಮುಟ್ಟುವುದಿಲ್ಲ."
**ಪಾಪ ಮಾಡಬೇಡ :** ಯೋಹ 5 : 14; ಯೋಹಾ 8 : 11; 1 ಕೊರಿ 15 : 34; 2 ಕೊರಿ 7 : 1; ಎಫೆ 4 : 26; ಇಬ್ರಿ 12 : 14; 1 ಯೋಹಾ 2 : 1; 1 ಯೋಹಾ 3 : 6, 9; 2 ಯೋಹಾ 1 : 9 – 11.

2 ತಿಮೋ 4 : 18 "ನನ್ನನ್ನು ಪ್ರತಿಯೊಂದು ದುಷ್ಟತನದಿಂದ ಕರ್ತನು ತಪ್ಪಿಸಿ, ತನ್ನ ಸ್ವರ್ಗರಾಜ್ಯಕ್ಕೆ ನನ್ನನ್ನು ಕಾಪಾಡುವನು. ಎಂದೆಂದಿಗೂ ಆತನಿಗೆ ಮಹಿಮೆ. ಆಮೆನ್."
ಗಲಾ 5 : 24, 25 : "ಕ್ರಿಸ್ತನವರು (ಒಳ ಮನುಷ್ಯನು) (ದೇವರ ಮಕ್ಕಳು) ತಮ್ಮ ಶರೀರವನ್ನು ಅದರ ಇಚ್ಛೆಯ ದುರಾಶೆಸಹಿತವಾಗಿ ಶಿಲುಬೆಗೆ ಹಾಕಿದ್ದಾರೆ. ನಾವು ಆತ್ಮನಲ್ಲಿ ಜೀವಿಸುವುದಾದರೆ, ನಾವೂ ಸಹಾ ಆತ್ಮನಲ್ಲಿ ನಡೆಯೋಣ."
**ಗಮನಿಸು :** ಕ್ರಿಸ್ತನಿಗೆ ಸೇರಿರುವವರಾಗಿರ ಬೇಕಾದರೆ ಆತ್ಮನಲ್ಲಿರುವ ಒಳಮನುಷ್ಯನು ತಾನು ಶರೀರಾಧೀನದಲ್ಲಿ ಇರುವಾಗ ಕಲಿತ ಪಾಪಗಳನ್ನು ನಿಲ್ಲಿಸ / ಸಾಯಿಸ ಬೇಕು. ಯಾರೂ ಕೂಡಾ ತಾವು ಮಾಡಿರುವ ಮತ್ತು ಮಾಡುತ್ತಿರುವ ಪಾಪಗಳನ್ನು ಸಾಯಿಸದೇ ಕ್ರಿಸ್ತನವರೆಂದು ಹೇಳಿಕೊಳ್ಳಲು ಸಾಧ್ಯವಿಲ್ಲ !

2 ಕೊರಿ 4 : 2 "ಆದರೆ ನಾಚಿಕೆಗೆ ಕಾರಣವಾಗುವ ಗುಪ್ತಕಾರ್ಯಗಳನ್ನು ನಾವು ಬಿಟ್ಟುಬಿಟ್ಟು, ತಂತ್ರದಲ್ಲಿ ನಡೆಯದೆಯೂ ವಂಚನೆಯಿಂದ ದೇವರ ವಾಕ್ಯವನ್ನು ಕೆಡಿಸದೆಯೂ ಸತ್ಯವನ್ನು ಪರಿಶ್ಕಾರವಾಗಿ ಬೋಧಿಸುತ್ತಾ ನಾವು ಯೋಗ್ಯರೆಂದು ಪ್ರತಿ ಮನುಷ್ಯನ ಮನಸ್ಸಾಕ್ಷಿ ದೇವರ ಮುಂದೆ ಒಪ್ಪಬೇಕಾದ ರೀತಿಯಲ್ಲಿ ನಡೆಯುತ್ತೇವೆ."

ನಮ್ಮ ದಿನದ ಸಂದೇಶಗಳು ಕ್ಷಮಾಪಣೆಯನ್ನು ಸಾರುತ್ತವೆ. ಆದರೆ, ಬಿಡುಗಡೆಯನ್ನಲ್ಲ. ಈ ಬೋಧನೆಯ ಫಲಿತಾಂಶವೇನೆಂದರೆ ವಿಶ್ವಾಸಿಗಳಿಗೆ ಕ್ಷಮಾಪಣೆಯ ಬಗ್ಗೆ ನಂಬಿಕೆಯಿದೆ, ಆದರೆ, ಪಾಪವನ್ನು ನಿಲ್ಲಿಸಲು ನಂಬಿಕೆಯಿಲ್ಲ. ಅವರು ಯೇಸುವನ್ನು ಮಾತ್ರ ಅವರ ಪಾಪಗಳಿಗಾದ ಯಜ್ಞ ಎಂದು ನೋಡುತ್ತಾರೆ, ಮತ್ತು ಪಾಪರಹಿತ ಜೀವನವನ್ನು ನಡೆಸಲು ಪುನರುತ್ಥಾನನಾದ ಕರ್ತನೆಂದು ನಂಬುವುದಿಲ್ಲ. ಬಿಡುಗಡೆ ಮತ್ತು ಪಾಪದ ಮೇಲೆ ಜಯ ಇವು ಅನುಭವಗಳು, ಮತ್ತು ಬರೀ ಅಭಿಪ್ರಾಯವಲ್ಲ.

ಪ್ರತಿಯೊಂದು ವಚನ ಒಂದು ಅನುಭವ. ಉದಾಹರಣೆಗಾಗಿ : ಕೊಲೋ 3:9,10 ಹೇಳುವುದು "ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ ; ನೀವು ಹಳೇ ಮನುಷ್ಯನನ್ನು ಅವನ ಕೃತ್ಯಗಳ ಕೂಡ ತೆಗೆದು ಹಾಕಿದ್ದೀರಲ್ಲವೇ ? ಮತ್ತು ನೀವು ನೂತನ ಮನುಷ್ಯನನ್ನು ಧರಿಸಿಕೊಂಡವರಾಗಿದ್ದೀರಿ ! ಅವನನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ಜ್ಞಾನದಲ್ಲಿ ಅವನು ನೂತನವಾಗುತ್ತಾನೆ." ತಿರಿಗಿ ಹುಟ್ಟುವ ಅನುಭವ ನಿನ್ನನ್ನು ಹಳೆಯ ಮನುಷ್ಯನಿಂದ ಹೊರಗೆ ತಂದಿದ್ದು, ಮತ್ತು ನೂತನ ಮನುಷ್ಯನಲ್ಲಿ ಇರಿಸಿತು. ನೀನು ಹಳೆಯ ಮನುಷ್ಯನಾದಾಗ ಸುಳ್ಳುಗಾರನಾಗದ್ದಿದ್ದರೆ, ಖಂಡಿತವಾಗಿ ನೀನು ಇನ್ನು ಸುಳ್ಳಾಡುವುದಿಲ್ಲ ಎಂಬ ಅನುಭವ ಉಂಟಾಗಿರಬೇಕು. ಇದು ನಿನ್ನ ಅನುಭವ ಆಗಿಲ್ಲದಿದ್ದರೆ ಆಗ ನೀನು ದೇವರ ಕೆಲಸದಲ್ಲಿಲ್ಲ, ಆದರೆ ಬೇರೆ ಕೆಲಸದಲ್ಲಿದ್ದೀಯೆ.

**ಕ್ಷಮಾಪಣೆ ಯಾಗಿದೆ ಎಂಬದಕ್ಕೆ ನಿದರ್ಶನವೇನು :**

ವಿಶ್ವಾಸಿಗಳು ಸಾಮಾನ್ಯವಾಗಿ ತಮ್ಮ ಪಾಪಗಳನ್ನು ಕ್ಷಮಿಸೆಂದು ದೇವರನ್ನು ಕೇಳುವುದಿಲ್ಲ. ಒಂದಾನೊಂದು ಪಾಪಕ್ಕೆ ಕ್ಷಮಾಪಣೆ ಕೇಳುವವರು ಕ್ಷಮಾಪಣೆ ಹೊಂದಿದ್ದೇವೆಂದು 1 ಯೋಹ 1:9 ರ ಆಧಾರದ ಮೇಲೆ ನಂಬುತ್ತಾರೆ, ಆದರೆ ಕ್ಷಮಾಪಣೆ ಸಿಕ್ಕಿದೆ ಎಂಬುದಕ್ಕೆ ನಿದರ್ಶನವಿಲ್ಲ. ಕ್ಷಮಾಪಣೆಗೆ ಒಂದೇ ಒಂದು ನಿದರ್ಶನವೆಂದರೆ, ಆ ನಿಶ್ಚಿತ ಪಾಪವನ್ನು ನಿಲ್ಲಿಸಿದ ಅನುಭವ ವಿಶ್ವಾಸಿಗೆ ಆದಾಗಲೇ. ಆದುದರಿಂದ ವಿಶ್ವಾಸಿಯು ದೇವರಿಂದ ಕ್ಷಮಾಪಣೆ ಕೇಳುವುದು ಮಾತ್ರವಲ್ಲ, ಆದರೆ ಆ ಪಾಪವು ಗುಣವಾಗುವಂತೆ ಕೂಡ ಕೇಳಿಕೊಳ್ಳಬೇಕು.

**ಉದಾ :** ತನ್ನ ಕೋಪದಿಂದ ಕಷ್ಟಪಡುತ್ತಾ ಇರುವ ಒಬ್ಬ ವಿಶ್ವಾಸಿಯು ದೇವರನ್ನು ಕ್ಷಮಿಸೆಂದು ಬೇಡಿಕೊಳ್ಳುತ್ತಾನೆ. ಆತನ್ನ ಕೋಪ ಮುಂದುವರೆದಂತೆಲ್ಲಾ ಅವನು ಕ್ಷಮಾಪಣೆ ಹೊಂದಿಲ್ಲವೆಂಬುದಕ್ಕೆ ನಿರ್ದಶನವಾಗುತ್ತದೆ. ಯಾಕೆಂದರೆ ಅಂತ ಪಾಪದ ಗುಣವನ್ನು

ಮತ್ತಾ 17 : 20 "... ಮತ್ತು ನಾನು ನಿಮಗೆ ನಿಜನಿಜವಾಗಿ ಹೇಳುವುದೇನೆಂದರೆ – ಸಾಸಿವೆ ಕಾಳಷ್ಟು ನಂಬಿಕೆ ನಿಮಗಿರುವುದಾದರೆ ನೀವು ಈ ಬೆಟ್ಟಕ್ಕೆ – ಇಲ್ಲಿಂದ ಆ ಸ್ಥಳಕ್ಕೆ ಹೋಗು ಎಂದು ಹೇಳುವುದಾದರೆ ಅದು ಹೋಗುವುದು ; ಮತ್ತು ಯಾವುದೂ ನಿಮಗೆ ಅಸಾಧ್ಯವಾಗಿರುವುದಿಲ್ಲ."

ಇಬ್ರಿ 11 : 1 "ನಂಬಿಕೆಯು ನಿರೀಕ್ಷಿಸುವವುಗಳ ನಿಜ ಲಕ್ಷಣವೂ ಕಾಣದವುಗಳ ನಿದರ್ಶನವೂ ಆಗಿದೆ."
**ಗಮನಿಸು :** ಈ ಎರಡೂ ವಚನಗಳನ್ನು ಉದಾಹರಣೆಯ ಮೂಲಕ ಸ್ಪಷ್ಟೀಕರಿಸಬಹುದು : "ನೀನು ನಂಬಿದರೆ ಸುಳ್ಳು ಹೇಳುವುದಿಲ್ಲ. ನೀನು ಸುಳ್ಳು ಹೇಳಿದರೆ, ನೀನು ನಂಬುವುದಿಲ್ಲ."

ರೋಮ 5 : 10 " ವೈರಿಗಳಾಗಿದ್ದ ನಾವು ದೇವರ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಾಗಿದ್ದರೇ, ಸಮಾಧಾನವಾದ ನಮಗೆ ಆತನ ಜೀವದಿಂದ (ಪರಿಶುದ್ಧಾತ್ಮ) ರಕ್ಷಣೆಯಾಗುವುದು (ಪಾಪದಿಂದ) ಮತ್ತೂ ನಿಶ್ಚಯವಲ್ಲವೇ."

ಯಾಕೋ 2 : 26 : "ಯಾಕೆಂದರೆ ಆತ್ಮವಿಲ್ಲದ ದೇಹವು ಸತ್ತದ್ದಾದ ಪ್ರಕಾರವೇ ಕ್ರಿಯೆಗಳಿಲ್ಲದ ನಂಬಿಕೆಯೂ (ನೀನು ಪಾಪದಿಂದ ರಕ್ಷಣೆ ಹೊಂದಿದ್ದೀಯೇ ಎಂಬ) ಸತ್ತದ್ದಾಗಿದೆ. ಕ್ರಿಯೆಗಳಿಲ್ಲದ (ನಿದರ್ಶನ)

ಎಫೆ 1 : 7 "ಆತನ ಕೃಪಾ ಐಶ್ವರ್ಯಕ್ಕನುಸಾರವಾಗಿ ಆತನ ರಕ್ತದ ಮೂಲಕ ಆತನಲ್ಲಿ ನಮಗೆ ವಿಮೋಚನೆಯೂ (ಬಿಡುಗಡೆ) ಆದರೆ ಪಾಪಗಳ ಕ್ಷಮಾಪಣೆಯು ಉಂಟಾಯಿತು.
ಕೊಲೋ 1 : 14 "ಆತನಲ್ಲಿ ಆ ಕುಮಾರನಲ್ಲಿ, ಆತನ ರಕ್ತದ ಮೂಲಕ ನಮಗೆ ವಿಮೋಚನೆಯು (ಬಿಡುಗಡೆ) ಅಂದರೆ ಪಾಪ ಪರಿಹಾರ ಉಂಟಾಯಿತು."
**ಗಮನಿಸು :** ಮೇಲ್ಕಂಡ ವಚನಗಳಿಂದ ನಾವು ತೀರ್ಮಾನಿಸುವುದೇನೆಂರೆ ವಿಮೋಚನೆ ಮತ್ತು ಕ್ಷಮಾಪಣೆಗಳೆರಡೂ ಒಂದೇ ನಾಣ್ಯದ ಎರಡು ಪಕ್ಕೆಗಳು. ಒಂದನ್ನು ಬಿಟ್ಟು ಇನ್ನೊಂದು ಇರಲಾರವು. ದೇವರು ಒಬ್ಬ ಮನುಷ್ಯನನ್ನು ವಿಮೋಚಿಸದೆ ಕ್ಷಮಿಸಲಾರನು, ಮತ್ತು ಕ್ಷಮಿಸದೇ ವಿಮೋಚಿಸಲಾರ.

1 ಯೋಹಾ 1 : 9 "ನಾವು ನಮ್ಮ ಪಾಪಗಳನ್ನು ಅರಿಕೆ ಮಡಿದರೆ, ಆತನು ನಂಬಿಗಸ್ತನೂ, ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯಿಂದ ನಮ್ಮನ್ನು ಶುದ್ಧಿಮಾಡುವನು."
ಗಮನಿಸು : ಇಲ್ಲೀ ಕೂಡ ನಾವು ಒಂದು ನಾಣ್ಯದ ಎರಡು ಪಕ್ಕೆಗಳನ್ನು ನೋಡಬಹುದು.

1 ಯೋಹ 5 : 17 "ಅನೀತಿಯೆಲ್ಲವೂ ಪಾಪವಾಗಿದೆ..."

ದೇವರು ಒಪ್ಪುವುದಿಲ್ಲ. ದೇವರು ಕ್ಷಮಿಸಲಾರ ಮತ್ತು ನಂತರ ಸ್ವಂತ ಕೋಪದಿಂದ ವಿಶ್ವಾಸಿಯನ್ನು ಬಿಡುಗಡೆ ಮಾಡಲಾರ. ದೇವರು ಕ್ಷಮಿಸಿರುವುದಕ್ಕೆ ಸಾಕ್ಷಿ ವಿಶ್ವಾಸಿಯು ಸ್ವಂತ ಕೋಪವನ್ನು ನಿಲ್ಲಿಸಿದ ಅನುಭವವಾದಾಗಲೇ.

ವಿಶ್ವಾಸಿಯು ಎಷ್ಟುಕಾಲ ಪಾಪ ಮಾಡುತ್ತಾನೋ. ಅಷ್ಟು ಕಾಲ ಸೈತಾನನಿಗೆ ದೇವರ ಮುಂದೆ ದೂರು ಹೇಳುವ ಹಕ್ಕಿದೆ. ದೇವರು ನೀತಿವಂತನಾದ ನ್ಯಾಯಾಧಿಪತಿಯಾಗಿರುವುದರಿಂದ ತಪ್ಪಿತಸ್ತನನ್ನು ಕ್ಷಮಿಸಿ ಅವರು ತಪ್ಪಿತಸ್ತನಲ್ಲ ಎಂದು ಘೋಷಿಸುವುದಕ್ಕೆ ಆಗುವುದಿಲ್ಲ, ಈಗ ಉಳಿದಿರುವುದು ಒಂದೇ ಮಾರ್ಗ ಪಾಪ ಮಾಡದೇ ಇರುವುದು, ಯಾಕೆಂದರೆ, ಅಗ ಸೈತಾನನು ವಿಶ್ವಾಸಿಯನ್ನು ದೂರಲಾರ. ಹೇಗಾದರೂ ವಿಶ್ವಾಸಿ ಪಾಪ ಮಾಡಿದರೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸುಕ್ರಿಸ್ತನು ಪಕ್ಷವಾದಿಯಾಗಿದ್ದಾನೆ.

ಪಾಪ ಮಾಡುವ ವಿಶ್ವಾಸಿಯು ಮುನ್ತಿಳಿಸಿದಂತೆ ಅಪವಾಧಿಯಾಗಿದ್ದಾನೆ. ಆದರೆ ಯೇಸು – ನೀತಿವಂತನಾಗಿರುವುದರಿಂದ – ಮಧ್ಯಸ್ಥನಾಗಿ ವಿಜ್ಞಾಪನೆ ಮಾಡುತ್ತಾನೆ. ನ್ಯಾಯ ತೀರ್ಪನ್ನು ಉಂಟುಮಾಡಲಾಯಿತು. ಆತ್ಮದ ಬಾಪ್ತಿಸ್ಮದ ಮೂಲಕ ಪರಿಶುದ್ಧಾತ್ಮನು ವಿಶ್ವಾಸಿಯನ್ನು ತಾನು ಮಾಡಿದ ಪಾಪಕ್ಕಾಗಿ ಪಶ್ಚಾತ್ತಾಪ ಪಡುವಂತೆ ನಡೆಸುತ್ತಾನೆ. ಪರಿಶುದ್ಧಾತ್ಮನು ಅವನ ಆತ್ಮನಲ್ಲಿ ದೈವ ಭಕ್ತಿಯ ದುಃಖ ಪ್ರವೇಶಿಸುವ ವರೆವಿಗೂ ಅವನ ಪಾಪವನ್ನು ಅವನಿಗೆ ನೆನಪು ಮಾಡುತ್ತಾನೆ. ಮತ್ತು ಆತ್ಮನು ಬದಲಾದಾಗ ಅವನು ಮಾಡುವ ಪಾಪ ನಿಂತುಹೋಗುತ್ತದೆ. ಆಗಲೆ ನ್ಯಾಯಾಧೀಶನು ವಿಶ್ವಾಸಿಯು ಅಪವಾದಿಯಲ್ಲವೆಂದು ಘೋಷಿಸುತ್ತಾನೆ, ಮತ್ತು ಅಪಾದನೆ ಬಿದ್ದು ಹೋಗುತ್ತದೆ.

ಮೇಲೆ ಹೇಳಿದ ತತ್ವ ಸ್ನಾನೀಕನಾದ ಯೋಹಾನನಿಂದ ಬೋಧಿಸಲ್ಪಟ್ಟಿತು. ಮಾರ್ಕ 1 : 4 ರಲ್ಲಿ "ಯೋಹಾನನು ಅಡವಿಯಲ್ಲಿ ಬಾಪ್ತಿಸ್ಮಾ ಮಾಡಿಸುತ್ತಾ, ಪಾಪಗಳ ಪರಿಹಾರಕ್ಕಾಗಿ ಮಾನಸಾಂತರದ ಬಾಪ್ತಿಸ್ಮವನ್ನು ಸಾರಿದನು."

ಮಾನಸಾಂತರವಿಲ್ಲ, ಕ್ಷಮಾಪಣೆಯಿಲ್ಲ. !

ಕರ್ತನ ಭೋಜನವೂ ಕೂಡ ವಿಶ್ವಾಸಿಗೆ ತನ್ನನ್ನು ತಾನು ಪರೀಕ್ಷಿಸಿಕೊಳ್ಳುವ ಹಾಗೆ ಬುದ್ಧಿಹೇಳುತ್ತದೆ. ವಿಶ್ವಾಸಿಯು ತನ್ನ ಪಾಪವನ್ನು ನಿಲ್ಲಿಸದೆ ಹಾಗೇ ತಿಂದು ಕುಡಿದರೆ ದೇವರ ನ್ಯಾಯ ತೀರ್ಪಿಗೆ ಒಳಗಾಗುವನು.

1 ಯೋಹ 1 : 6 "ನಾವು ಆತನ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ, ಸುಳ್ಳಾಡುವವರಾಗಿದ್ದೇವೆ. ಸತ್ಯವನ್ನನುಸರಿಸುವವರಲ್ಲ."

ಪ್ರಕ 12 : 10 "... ಯಾಕೆಂದರೆ ಹಗಲಿರುಳು (ಯಾವಾಗಲೂ) ನಮ್ಮ ಸಹೋದರರ ಮೇಲೆ ನಮ್ಮ ದೇವರ ಮುಂದೆ ದೂರು ಹೇಳಿದ ದೂರುಗಾರನು ದಬ್ಬಲ್ಪಟ್ಟಿದ್ದಾನೆ."

1 ಯೊಹಾ 5 : 18 "ದೇವರಿಂದ ಹುಟ್ಟಿದವನೂ ಪಾಪ ಮಾಡಿದವನಲ್ಲವೆಂಬುದು ನಮಗೆ ಗೊತ್ತಿದೆ ; ದೇವರಿಂದ ಹುಟ್ಟಿದವನು ತನ್ನನ್ನು ತಾನು ಕಾಪಾಡಿಕೊಳ್ಳುವನು ; ಕೆಡುಕನು ಅವನನ್ನು ಮುಟ್ಟುವುದಿಲ್ಲ."

1 ಯೊಹಾ 2 : 1 "ನನ್ನ ಚಿಕ್ಕ ಮಕ್ಕಳೇ, ನೀವು ಪಾಪ ಮಾಡದಂತೆ ಇವುಗಳನ್ನು ನಾನು ನಿಮಗೆ ಬರೆಯುತ್ತೇನೆ. ಯಾವನದರೂ ಪಾಪ ಮಾಡಿದರೆ, ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನು ನಮಗೆ ಪಕ್ಷವಾದಿಯಾಗಿದ್ದಾನೆ."
**ಗಮನಿಸು :** 'ಮಾಡಿದರೆ' ಅನ್ನುವ ಮಾತು ಒಬ್ಬ ವಿಶ್ವಾಸಿಯು ಪಾಪ ಮಾಡಬಹುದು ಎಂಬುದನ್ನು ಹೊರತು ಪಡಿಸಿದುದಾಗಿದೆ. ಪಾಪವನ್ನು ಸುಮ್ಮನೆ ಕ್ಷಮಿಸಲಾಗದು. ಆದುದರಿಂದ ಅವನನ್ನು ನ್ಯಾಯಾಲಯದಲ್ಲಿ ಕಾಪಾಡಲು ಒಬ್ಬ ಪಕ್ಷವಾದಿಯು ಅವಶ್ಯ.

ಮತ್ತ 3 : 12 "ಮೊರವನ್ನು ಆತನು ತನ್ನ ಕೈಯಲ್ಲಿ ಹಿಡಿದಿದ್ದಾನೆ ; ಆತನು ತನ್ನ ಕಣವನ್ನು ಸಂಪೂರ್ಣವಾಗಿ ಹಸನು ಮಾಡಿ. ತನ್ನ ಗೋಧಿಯನ್ನು ಕಣಜದಲ್ಲಿ ಕೂಡಿಸುವನು ; ಆದರೆ, ಹೊಟ್ಟನ್ನು ಆರದ ಬೆಂಕಿಯಿಂದ ಸುಟ್ಟು ಬಿಡುವನು ಎಂದು ಹೇಳಿದನು."

ಮತ್ತ 12:20 "ಆತನು ನ್ಯಾಯವನ್ನು ವಿಜಯಕ್ಕಾಗಿ ಕಳುಹಿಸುವವರೆವಿಗೆ ಜಜ್ಜಿದ ದಂಟನ್ನು ಮುರಿಯುವುದಿಲ್ಲ ಮತ್ತು ಹೊಗೆಯಾಡುವ ಬತ್ತಿಯನ್ನು ನಂದಿಸುವುದಿಲ್ಲ."

ಮತ್ತ 3:11 "ನಾನು ಮಾನಸಾಂತರದ ನಿಮಿತ್ತ ನಿಮಗೆ ನೀರಿನಲ್ಲಿ ಬಾಪ್ತಿಸ್ಮ ಮಾಡಿಸುವುದು ನಿಜವೇ ; ಆದರೆ ನನ್ನ ಹಿಂದೆ ಬರುವಾತನು ನನಗಿಂತಲೂ ಶಕ್ತನಾಗಿದ್ದಾನೆ ; ಆತನ ಕೆರಗಳನ್ನು ಹೊರುವುದಕ್ಕೂ ನಾನು ಯೋಗ್ಯನಲ್ಲ ; ಆತನು ಪವಿತ್ರಾತ್ಮನಿಂದಲೂ ಬೆಂಕಿಯಿಂದಲೂ ನಿಮಗೆ ಬಾಪ್ತಿಸ್ಮ ಮಾಡಿಸುವನು."

1 ಕೊರಿ 11:28–32 "ಆದರೆ ಒಬ್ಬನು ತನ್ನನ್ನು ಪರೀಕ್ಷಿಸಿ ಕೊಂಡವನಾಗಿ ಆ ರೊಟ್ಟಿಯಲ್ಲಿ ತೆಗೆದು ಕೊಂಡು ತಿನ್ನಲಿ ಮತ್ತು ಆ ಪಾತ್ರೆಯಲ್ಲಿ ಕುಡಿಯಲಿ, ಯಾಕೆಂದರೆ ಕರ್ತನ ದೇಹವೆಂದು ವಿವೇಚಿಸದೆ ಅಯೋಗ್ಯವಾಗಿ ತಿಂದು ಕುಡಿಯುವವನು, ಹಾಗೆ ತಿಂದು ಕುಡಿಯುವುದರಿಂದ ನ್ಯಾಯ ತೀರ್ಪಿಗೊಳಗಾಗುವನು. ಈ ಕಾರಣದಿಂದಲೇ ನಿಮ್ಮಲ್ಲಿ ಬಹು ಮಂದಿ ಬಲಹೀನರು ರೋಗಿಗಳು ಆಗಿದ್ದಾರೆ ; ಮತ್ತು ಅನೇಕರು ನಿದ್ರಿಸುತ್ತಾರೆ. ಯಾಕೆಂದರೆ, ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯ ವಿಚಾರಣೆಗೆ ಒಳಗಾಗುವುದಿಲ್ಲ. ಆದರೆ ನಾವು ನಮ್ಮನ್ನು ವಿಚಾರಿಸಿಕೊಂಡಾಗ, ಲೋಕದವರ ಸಂಗಡ ನಮಗೆ ಅಪರಾಧಿಗಳೆಂಬ ನಿರ್ಣಯವಾಗಬಾರದೆಂದು ಕರ್ತನು ನಮ್ಮನ್ನು ಶಿಕ್ಷಿಸುತ್ತಾನೆ."

## ಕ್ರಿಸ್ತನಲ್ಲಿರುವ ಉನ್ನತವಾದ ಕರೆ :

ದೇವರು ಜಗದುತ್ಪನಾದಿಗೆ ಮೊದಲೇ ತನಗಾಗಿ ದತ್ತು ಪುತ್ರರನ್ನು ಯೇಸು ಕ್ರಿಸ್ತನ ಮೂಲಕ ಆರಿಸುವುದಾಗಿ ತೀರ್ಮಾನ ಮಾಡಿದನು. ಕ್ರಿಸ್ತನಿಗೆ ಮುಂಚೆ ಯಾರೂ ದೇವರ ಮಗನಾಗಲು ಸಾಧ್ಯವಿರಲಿಲ್ಲ. ಹಳೆಯ ಒಡಂಬಡಿಕೆಯಲ್ಲಿ ಯಾರೂ ದೇವರ ಕುಟುಂಬದ ಸದಸ್ಯನಾಗುವಂತಿರಲಿಲ್ಲ. ಯಾಕೆಂದರೆ ದೇವ ಕುಮಾರನು ಇನ್ನೂ ಪ್ರತ್ಯಕ್ಷನಾಗಿರಲಿಲ್ಲ. ಯೇಸು ಕ್ರಿಸ್ತನ ನಂತರ ಯಾರು ಬೇಕಾದರೂ ದೇವರ ಕುಟುಂಬದಲ್ಲಿ ಒಬ್ಬ ಸದಸ್ಯನಾಗಿರಬಹುದು.

ದೇವರ ಕುಟುಂಬದ ಸದಸ್ಯನಾಗಬೇಕಾದರೆ ಒಬ್ಬನು ತಿರುಗಿ ಹುಟ್ಟಿ ದೇವರ ಮಗುವಂತಿರಬೇಕು. ದೇವರ ಜ್ಯೇಷ್ಠ ಪುತ್ರನಾದ ಯೇಸು ಪಾಪ ರಹಿತನಾಗಿದ್ದ ಹಾಗೆ, ಪ್ರತಿಯೊಬ್ಬ ದೇವರ ಮಗುವಿಗೆ ದೇವರ ಮಗನಾಗುವ ನಿರೀಕ್ಷೆ ಇದ್ದರೆ, ಆತನು ಪರಿಶುದ್ಧನಾಗಿರುವಂತೆಯೇ, ಅವನೂ ಕೂಡ ಪರಿಶುದ್ಧನಾಗಬೇಕು.

ಹಳೆ ಒಡಂಬಡಿಕೆಯಲ್ಲಿ ದೇವರ ಮಗನಾಗುವುದು ಅಸಾಧ್ಯವಾಗಿತ್ತು, ಯಾಕೆಂದರೆ ಮಾನವನು ತಿರುಗಿ ಹುಟ್ಟುವುದಕ್ಕಾಗಿ ಪರಿಶುದ್ಧಾತ್ಮನು ಇನ್ನೂ ಲಭ್ಯವಾಗಿರಲಿಲ್ಲ. ಅವರು ದೇವರ ಸೇವಕರಾಗಿದ್ದರಿಂದ ದೇವರು ತನ್ನ ಪುತ್ರರಿಗೆ ಇಟ್ಟಿರುವಂಥಹ ಉನ್ನತ ಸ್ಥಾನವನ್ನು ಏರಲಾರದೆ ಹೋದರು. ಪರಿಶುದ್ಧಾತ್ಮನ ಸಹಾಯದಿಂದಲೂ ಮತ್ತು ಕ್ರಿಯೆಗಳಿಂದಲೂ ಮಾತ್ರ ದೇವರು ತನ್ನ ಮಕ್ಕಳಿಂದ ಅಪೇಕ್ಷಿಸುವ ಸ್ಥಾನವನ್ನು ಹೊಂದಲು ಸಾಧ್ಯ. ಈ ಕಾರಣದಿಂದಲೇ ಯೇಸು **ಮತ್ತ 5 : 20** ರಲ್ಲಿ ಹೇಳಿದ್ದು, "ಮತ್ತು ನಾನು ನಿಮಗೆ ಹೇಳುವುದೇನೆಂದರೆ – ಶಾಸ್ತ್ರಿಗಳ ಮತ್ತು ಪರಿಸಾಯರ ನೀತಿಗಿಂತಲೂ ನಿಮ್ಮ ನೀತಿಯು ಹೆಚ್ಚಿನದಾಗಿರದ ಹೊರತು, ನೀವು ಸ್ವರ್ಗ ರಾಜ್ಯದಲ್ಲಿ ಪ್ರವೇಶಿಸುವುದಕ್ಕಾಗುವುದೇ ಇಲ್ಲ."

ಹಳೆ ಒಡಂಬಡಿಕೆಯಲ್ಲಿ ದೇವರನ್ನು ಸೇವಿಸಬೇಕಾದರೆ, ಅವರು ಮಾಡಬೇಕಾದನ್ನೂ ಮಾಡಬಾರದ್ದನ್ನೂ ಅಕ್ಷರವು ಗೊತ್ತುಮಾಡಿತು. ಹೊಸ ಒಡಂಬಡಿಕೆಯಲ್ಲಿ ಪರಿಶುದ್ಧಾತ್ಮವು ಕ್ರಿಸ್ತನಿಗೆ ಇರುವ ದೇವರ ಸ್ವಭಾವವನ್ನು ತೋರ್ಪಡಿಸುತ್ತದೆ. ಈ ತಿಳುವಳಿಕೆ ವಿಶ್ವಾಸಿಯನ್ನು ದೇವರ ಚಿತ್ತದ ಬಗ್ಗೆ ಎಚ್ಚರಿಸುತ್ತದೆ. ಮತ್ತು ಪರಿಶುದ್ಧಾತ್ಮದ ಸಹಾಯದಿಂದ ಅವನ ಆತ್ಮವು ದೈವಭಕ್ತಿಯ ಸ್ವಭಾವುಳ್ಳದ್ದಾಗಿ ಮಾರ್ಪಡುತ್ತದೆ. ಹೊಸ ಒಡಂಬಡಿಕೆಯ ವಿಶ್ವಾಸಿಯ ದೈವ ಭಕ್ತಿಯ ಸ್ವಭಾವವೇ ಅವರ ನೀತಿಯನ್ನು ಹಳೆ ಒಡಂಬಡಿಕೆಯ ವಿಶ್ವಾಸಿಗಳಿಗಿಂತಾ ಮಿಗಿಲಾಗಿ ಮಾಡುತ್ತದೆ. ಒಳಗೆ ನೆಲೆಗೊಂಡಿರುವ ಪವಿತ್ರಾತ್ಮನ ಕಾರಣದಿಂದಲೆ ದೇವರು ಅಪೇಕ್ಷಿಸುವ ನೀತಿಯ ಪ್ರಮಾಣ ಹೆಚ್ಚಿದೆ.

ಎಫೆ 1 : 5 "ಆತನು ತನ್ನ ಚಿತ್ತದ ದಾಯಾ ಪೂರ್ವಕವಾದ ಆನಂದಕ್ಕನು ಸಾರವಾಗಿ, ಯೇಸು ಕ್ರಿಸ್ತನ ಮೂಲಕ ನಮ್ಮನ್ನು ತನಗೋಸ್ಕರ ದತ್ತುಪುತ್ರ ಸ್ವೀಕಾರ ಮಾಡುವಂತೆ ಮೊದಲೇ ಸಂಕಲ್ಪಿಸಿ..."

ಮೇಲ್ಕಂಡ ವಾಕ್ಯದಿಂದ ಸ್ಪಷ್ಟವಾಗಿರುವುದೇನೆಂದರೆ, ಹಳೇ ಒಡಂಬಡಿಕೆಯಲ್ಲಿ ಅವರು ದೇವರ ಸೇವಕರಾಗಿದ್ದರು. ದೇವರು ಅವರ್‍ಯಾರನ್ನೂ ಮಕ್ಕಳಂತೆ ದತ್ತು ತೆಗೆದುಕೊಳ್ಳಲಿಲ್ಲ, ಯಾಕೆಂದರೆ ಪರಿಶುದ್ಧಾತ್ಮನು ಅವರಲ್ಲಿ ನೆಲೆಗೊಳ್ಳಲು ಲಭ್ಯವಿರಲಿಲ್ಲ.

1 ಯೋಹಾ 3 : 3 "ಆತನಲ್ಲಿ ಈ ನಿರೀಕ್ಷೆಯನ್ನು ಇಟ್ಟಿರುವ ಪ್ರತಿಯೊಬ್ಬನೂ ಆತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧ ಮಾಡಿಕೊಳ್ಳುತ್ತಾನೆ."
1 ಯೋಹಾ 2 : 28, 29 "ಮತ್ತು ಈಗ, ಚಿಕ್ಕಮಕ್ಕಳೇ, ಆತನು ಪ್ರತ್ಯಕ್ಷನಾಗುವಾಗ ನಾವು ಆತನ ಆಗಮನದಲ್ಲಿ ಆತನ ಮುಂದೆ ನಿಲ್ಲಲು ನಾಚಿಕೆಪಡದೆ, ಧೈರ್ಯದಿಂದಿರುವಂತೆ ಆತನಲ್ಲಿ ನೆಲೆಗೊಂಡಿರ್‍ರಿ. ಆತನು ನೀತಿವಂತನಾಗಿದ್ದಾನೆಂಬುದು ನಿಮಗೆ ಗೊತ್ತಾಗಿದ್ದರೆ, ನೀತಿಯನ್ನು ಅನುಸರಿಸುವ ಪ್ರತಿಯೊಬ್ಬನೂ ಆತನಿಂದ ಹುಟ್ಟಿದವನಾಗಿದ್ದಾನೆಂದು ನೀವು ತಿಳಿದಿದ್ದೀರಿ."

1 ಯೋಹಾ 3 : 7, 8 "ಚಿಕ್ಕಮಕ್ಕಳೇ, ಯಾರೂ ನಿಮ್ಮನ್ನು ಮೋಸಗೊಳಿಸದಿರಲಿ. ಆತನು ಹೇಗೆ ನೀತಿವಂತನಾಗಿದ್ದಾನೋ ಹಾಗೆಯೇ ನೀತಿಯನ್ನು ಅನುಸರಿಸುವವನೂ ನೀತಿವಂತನಾಗಿದ್ದಾನೆ. ಪಾಪ ಮಾಡುವವನು ಸೈತಾನನಿಗೆ ಸಂಬಂಧಪಟ್ಟವನಾಗಿದ್ದಾನೆ ;"
**ಉದಾ :** ದೇವರು ಸುಳ್ಳು ಹೇಳುವುದಿಲ್ಲ ಎಂಬುದು ನಮಗೆ ಗೊತ್ತು. ಒಳ ಮನುಷ್ಯನು ಸುಳ್ಳು ಹೇಳುವುದನ್ನು ನಿಲ್ಲಿಸಿದ ಮೇಲೆ, ಆಗ – ಸುಳ್ಳಿಗೆ ಲಕ್ಷ್ಯ ಕೊಡುವುದರಿಂದ – ದೇವರಂತೆಯೇ ಅವನು ನೀತಿವಂತನು. ಸುಳ್ಳನ್ನು ಮುಂದುವರಿಸಿರುವ ಒಳ ಮನುಷ್ಯನು ಮೋಸಗಾರ, ಮತ್ತು ಸೈತಾನನಿಗೆ ಸಂಬಂಧಪಟ್ಟವನು. ಈ ಕಾರಣದಿಂದ ಶರೀರಾಧೀನವಾದ ಪ್ರತಿಯೊಂದು ಕೆಲಸವೂ ಸೈತಾನನ ಭಕ್ತಿಹೀನ ಸ್ವಭಾವವಾಗಿದ್ದು, ಪರಿಶುದ್ಧಾತ್ಮನ ಸಹಾಯದಿಂದ ಸಾಯಿಸಲ್ಪಡಬೇಕು.
1 ಕೊರಿ 1 : 7 – 9 "...ಹೀಗಿರಲಾಗಿ ನೀವು ಯಾವುದರಲ್ಲಿಯೂ ಕೊರತೆ ಇಲ್ಲದವರಾಗಿದ್ದು, ನಮ್ಮ ಕರ್ತನಾದ ಯೇಸು ಕ್ರಿಸ್ತನ ಬರೋಣಕ್ಕಾಗಿ ಎದುರು ನೋಡುವವರಾಗಿದ್ದೀರಿ. ನಮ್ಮ ಕರ್ತನಾದ ಯೇಸು ಕ್ರಿಸ್ತನ ದಿನದಲ್ಲಿ ಯಾರೂ ನಿಮ್ಮ ಮೇಲೆ ತಪ್ಪು ಹೊರಿಸದಂತೆ ಆತನು ನಿಮ್ಮನ್ನು ಕಡೇವರೆಗೂ ಧೃಡ ಪಡಿಸುವನು. ದೇವರು ನಂಬಿಗಸ್ತನು ; ನಮ್ಮ ಕರ್ತನಾದ ಯೇಸು ಕ್ರಿಸ್ತನೆಂಬ ತನ್ನ ಮಗನ ಅನ್ಯೋನ್ಯತೆಗೆ ನಿಮ್ಮನ್ನು ಕರೆದಾತನು ಆತನೇ."
**ನೆನಪಿನಲ್ಲಿಡಿ :** ವಿಶ್ವಾಸಿಯು ತಾನು ಇಹಲೋಕವನ್ನು ತ್ಯಜಿಸುವುದಕ್ಕೆ ಮುಂಚೆ ನಿಂದಾರಹಿತನೆಂದು ಖಚಿತಪಡಿಸಿಕೊಳ್ಳಬೇಕು, ಯಾಕೆಂದರೆ ಸೈತಾನನು ಸಹೋದರರನ್ನು ದೂರುವವನು.

ಮತ್ತ 5:21–22 ಮತ್ತು – ನೀನು ನರಹತ್ಯ ಮಾಡಬಾರದು: ಯಾವನಾದರೂ ನರಹತ್ಯ ಮಾಡಿದರೆ, ನ್ಯಾಯ ತೀರ್ಪಿನ ಅಪಾಯಕ್ಕೆ ಒಳಗಾಗುವನು ಎಂದು ಪೂರ್ವಿಕರು ಹೇಳಿರುವುದನ್ನು ನೀವು ಕೇಳಿದ್ದೀರಿ, ನಾನು ನಿಮಗೆ ಹೇಳುವುದೇನೆಂದರೆ ನಿಷ್ಕಾರಣವಾಗಿ ತನ್ನ ಸಹೋದರನ ಮೇಲೆ ಯಾವನಾದರೂ ಸಿಟ್ಟುಗೊಂಡರೆ ಅವನು ನ್ಯಾಯ ತೀರ್ಪಿನ ಅಪಾಯಕ್ಕೆ ಒಳಗಾಗುವನು: ಮತ್ತು ಯಾವನಾದರೂ ತನ್ನ ಸಹೋದರನಿಗೆ– ವ್ಯರ್ಥವಾದವನೇ ಎಂದು ಹೇಳಿದರೆ, ಅವನು ನ್ಯಾಯಸಭೆಯ ಅಪಾಯಕ್ಕೆ ಒಳಗಾಗುವನು ಇದಲ್ಲದೆ ಯಾವನಾದರೂ–ನೀನು ಮೂರ್ಖನು ಎಂದು ಹೇಳಿದರೆ, ಅವನು ನರಕಾಗ್ನಿಯ ಅಪಾಯಕ್ಕೆ ಒಳಗಾಗುವನು.


ಅನಂತರದ ವಾಕ್ಯಗಳು **ಮತ್ತ** 5 : 27, 28 ತೋರಿಸುವುದು ಹೊಸ ಒಡಂಬಡಿಕೆಗಳ ವಿಶ್ವಾಸಿಗಳ ನೀತಿಯು ಹಳೆ ಒಡಂಬಡಿಕೆಯ ವಿಶ್ವಾಸಿಗಳ ನೀತಿಗಿಂತ ಮಿಗಿಲಾಗಿರಬೇಕು ಎಂಬುದನ್ನು... "ವ್ಯಭಿಚಾರ ಮಾಡಬಾರದೆಂದು ನೀವು ಹೇಳಿದ್ದೀರಿ ; ಆದರೆ ನಾನು ನಿಮಗ ಹೇಳುವುದೇನೆಂದರೆ ಒಬ್ಬ ಸ್ತ್ರೀಯನ್ನು ಮೋಹಿಸುವುದಕ್ಕೆ ನೋಡುವ ಪ್ರತಿಯೊಬ್ಬನೂ ಆಗಲೇ ತನ್ನ ಹೃದಯದಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದ್ದಾನೆ."

ಯೇಸುವನ್ನು ಪ್ರೀತಿಸುತ್ತೇನೆ ಎಂದು ಹೇಳುವ ಯಾವನೇ ವಿಶ್ವಾಸಿಯಾದರೂ ಆತನ ಆಜ್ಞೆಗಳನ್ನು ಕೈಕೊಳ್ಳಲು ಬದ್ಧನಾಗಿದ್ದಾನೆ.

**ದೇವರ ನಿಯಮಕ್ಕೆ ಪ್ರತಿಯಾಗಿ ಸ್ವಾತಂತ್ರ್ಯದ ನಿಯಮ :**

ದೇವರ ನಿಯಮ ಎಂದರೆ ಹಳೆ ಒಡಂಬಡಿಕೆಯ ನಿಯಮ ಮತ್ತು ಸ್ವತಂತ್ರ್ಯದ ನಿಯಮ, ಅಂದರೆ ಹೊಸ ಒಡಂಬಡಿಕೆಯ ನಿಯಮ. ಪಾಪವು ಇರುವಲ್ಲಿ ದೇವರ ನಿಯಮವು ಇರುತ್ತದೆ ಮತ್ತು ಆತ್ಮನಿರುವಲಿ ಸ್ವಾತಂತ್ರ್ಯ ಇರುತ್ತದೆ. ದೇಹದಲ್ಲಿರುವ ಪಾಪದ ನಿಯಮದ ಕಾರಣದಿಂದ ಪಾಪವನ್ನು ಪ್ರಕಟ ಮಾಡುವುದಕ್ಕೋಸ್ಕರ ದೇವರ ನಿಯಮವೆ ಒಳ ಮನುಷ್ಯನಿಗೆ ಕೊಡಲ್ಪಟ್ಟಿತು ಮತ್ತು ದೇಹದಲ್ಲಿ ಅತ್ಮನ ನಿಯಮದ ಕಾರಣದಿಂದ ಸ್ವಾತಂತ್ರ್ಯದ ನಿಯಮವು ಒಳ ಮನುಷ್ಯನಿಗೆ ಬಿಡುಗಡೆಯನ್ನು ಪ್ರಕಟ ಮಾಡುವುದಕ್ಕೋಸ್ಕರ ಕೊಡಲ್ಪಟ್ಟಿತು.

ಹಳೆ ಒಡಂಬಡಿಕೆಯ ವಿಶ್ವಾಸಿಯು ದೇವರ ನಿಯಮಕ್ಕೆ ವಿಧೇಯನಾಗಿರ ಬೇಕಾಗಿತ್ತು, ಯಾಕೆಂದರೆ ಅವನು ನ್ಯಾಯ ಪ್ರಮಾಣದಿಂದ ತೀರ್ಪು ಹೊಂದುವವನಾಗಿದ್ದನು. ಹೊಸ ಒಡಂಬಡಿಕೆಯ ವಿಶ್ವಾಸಿಯು, ಪಾಪದಿಂದ ಬಿಡುಗಡೆ ಹೊಂದಿದವನಾಗಿ, ಸ್ವಾತಂತ್ರ್ಯದ ನಿಯಮದ ಪ್ರಕಾರ ತೀರ್ಪು ಹೊಂದುವವನ ಹಾಗೆ ಜೀವಿಸಬೇಕಾಗಿದೆ.




ಮತ್ತ 5 : 31, 32 "ಮತ್ತು ಯಾವನಾದರೂ ತನ್ನ ಹೆಂಡತಿಯನ್ನು ಬಿಟ್ಟುಬಿಡಬೇಕೆಂದಿದ್ದರೆ ಆಕೆಗೆ ತ್ಯಾಗ ಪತ್ರ ಕೊಡಲಿ ಎಂದು ಹೇಳಿದೆ ; ಆದರೆ ನಾನು ನಿಮಗೆ ಹೇಳುವುದೇನೆಂದರೆ – ಹಾದರದ ಕಾರಣದಿಂದಲ್ಲದೇ ತನ್ನ ಹೆಂಡತಿಯನ್ನು ಬಿಟ್ಟುಬಿಡುವವನು ಆಕೆಯು ವ್ಯಭಿಚಾರ ಮಾಡುವಂತೆ ಕಾರಣನಾಗುವನು ; ಮತ್ತು ಬಿಡಲ್ಪಟ್ಟವನನ್ನು ಯಾವನಾದರೂ ಮದುವೆಯಾದರೆ, ಅವನು ವ್ಯಭಿಚಾರ ಮಾಡುವವನಾಗಿದ್ದಾನೆ."

ಮತ್ತ 5 : 33, 37 "ಮತ್ತು – ನೀನು ಸುಳ್ಳಾಣೆ ಇಡಬೇಡ ; ಆದರೆ ನಿನ್ನ ಪ್ರಮಾಣಗಳನ್ನು ಕರ್ತನಿಗೆ ಸಲ್ಲಿಸಬೇಕು ಎಂದು ಪೂರ್ವಿಕರು ಹೇಳಿರುವುದನ್ನು ನೀವು ಕೇಳಿದ್ದೀರಿ. ಆದರೆ ನಿನ್ನ ಮಾತು ಹೌದಾಗಿದ್ದರೆ ಹೌದು, ಅಲ್ಲವಾಗಿದ್ದರೆ ಅಲ್ಲ ಎಂದಿರಲಿ ; ಯಾಕೆಂದರೆ ಇವಗಳಿಗಿಂತ ಹೆಚ್ಚಾದದ್ದು, ಕೆಟ್ಟದ್ದರಿಂದ (ಸೈತಾನನಿಂದ) ಬರುವಂಥದ್ದು."
**ಗಮನಿಸು :** ವಿಶ್ವಾಸಿಯು ಒಂದು ಮಾತು ಕೊಟ್ಟಮೇಲೆ ಅವನು ಅದನ್ನು ನಡೆಸಿಕೊಡಲು ಕಟ್ಟು ಬಿದ್ದಿದ್ದಾನೆ.
ಯೋಹಾ 14 : 15 "ನೀವು ನನ್ನನ್ನು ಪ್ರೀತಿಸುವುದಾದರೆ ನನ್ನ ಆಜ್ಞೆಗಳನ್ನು ಕೈಗೊಳ್ಳಿರಿ."

ಒಂದು ಒಡಂಬಡಿಕೆ ಮತ್ತು ಒಂದು ಒಪ್ಪಂದ ಒಂದು ನಾಣ್ಯದ ಎರಡು ಪಕ್ಕೆಗಳು. ಒಡಂಬಡಿಕೆಯು ಯೇಸುವಿನ ಮರಣದ ಕಾರಣದಿಂದ ಅಸ್ತಿತ್ವದಲ್ಲಿದೆ. ಒಪ್ಪಂದವು ಅಸ್ತಿತ್ವದಲ್ಲಿರುವ ಕಾರಣ ವಿಶ್ವಾಸಿಗೂ ಪರಿಶುದ್ಧಾತ್ಮನ ಮೂಲಕ ಜೀವಂತ ಕ್ರಿಸ್ತನಿಗೂ ಇರುವ ಸಂಬಂಧ. ಒಡಂಬಡಿಕೆಯ ಕಾರಣದಿಂದ ಒಬ್ಬ ವಿಶ್ವಾಸಿಯು ಪಾಪದಿಂದ ಬಿಡುಗಡೆಯಾಗುತ್ತಾನೆ. ಆದರೆ ಒಪ್ಪಂದವು ಪಾಪದಿಂದ ಅವನನ್ನು ಬಿಡುಗಡೆ ಮಾಡಿದವನಿಂದ ವಿಧೇಯತೆಯನ್ನು ಅಪೇಕ್ಷಿಸುತ್ತದೆ. ಒಳ್ಳೆ ಸಂಬಂಧ ವಿರಬೇಕಾದರೆ, ಎರಡು ಪಕ್ಷಗಳಿಂದಲೂ ನಂಬಿಗಸ್ತತೆ ಅವಶ್ಯ.

2 ತಿಮೋ 2 : 11 – 13 "ಇದು ನಂಬತಕ್ಕ ಮಾತಾಗಿದೆ, ಏನೆಂದರೆ ನಾವು ಆತ್ಮನೊಡನೆ ಸತ್ತಿದ್ದರೆ, (ಒಡಂಬಡಿಕೆ) ಆತನೊಡನೆ ನಾವೂ ಸಹಾ ಜೀವಿಸುವೆವು. ನಾವು ಬಾಧೆ ಪಡುವವರಾಗಿದ್ದರೆ ನಾವೂ ಸಹಾ ಆತನೊಂದಿಗೆ ಆಳುವೆವು (ಒಪ್ಪಂದ) ; ಆತನನ್ನು ಅಲ್ಲಗಳೆದರೆ, ಆತನೂ ಸಹಾ ನಮ್ಮನ್ನು ಅಲ್ಲಗಳೆಯುವನು. ನಾವು ಅಪನಂಬಿಕೆ ಯುಳ್ಳವರಾಗಿದ್ದರೂ ಆತನು ನಂಬಿಗಸ್ತನಾಗಿಯೇ ಇರುವನು ; ಆತನು ತನ್ನನ್ನು ತಾನು ಅಲ್ಲಗಳೆಯಲಾರನು."
ಯೋಹ 5 : 39,40 "(ನೀವು) ಬರಹಗಳನ್ನು ಪರಿಶೋಧಿಸಿರಿ ; ಅವುಗಳಲ್ಲಿ ನಿಮಗೆ ನಿತ್ಯ ಜೀವವುಂಟೆಂದು ನೀವು ನೆನಸುತ್ತೀರಲ್ಲಾ ; ಅವುಗಳೇ ನನ್ನ ವಿಷಯವಾಗಿ ಸಾಕ್ಷಿಕೊಡವುವುಗಳಾಗಿವೆ, ಆದರೆ ನೀವು ಜೀವವನ್ನು ಹೊಂದುವಂತೆ (ಪರಸ್ಪರ ಸಂಬಂಧ ಹೊಂದುವಂತೆ) ನನ್ನ ಬಳಿಗೆ ಬರುವುದಿಲ್ಲ"
**ಗಮನಿಸು :** ವಿಶ್ವಾಸಿಗಳಿಗೆ ಅನೇಕ ವಚನಗಳು ಗೊತ್ತಿರಬಹುದು ಆದರೆ ತಾವು ಮುಂದುವರೆಸುತ್ತಾ ಇರುವ ಪಾಪಗಳ ಬಗ್ಗೆ ಅವರಿಗೆ ಎಚ್ಚರವಿಲ್ಲ. ಇದಕ್ಕೆ ಕಾರಣ ಆತನೊಂದಿಗೆ ಅವರಿಗೆ ಪರಸ್ಪರ ಸಂಬಂಧವಿಲ್ಲ. ಆತನೊಂದಿಗೆ ಅವರಿಗೆ ಸಂಬಂಧವಿದ್ದರೆ, ಆತನು ಅವರಿಗೆ ಅವರ ಪಾಪಗಳನ್ನು ತೋರಿಸುತ್ತಿದ್ದನು. ಮತ್ತು ಅವರು ಪಾಪ ಮಾಡುವುದರಿಂದ ನಿಲ್ಲಿಸಲು ಸಹಾಯ ಮಾಡುತ್ತಿದ್ದನು.

ರೋಮ 6 : 15 "ಹಾಗಾದರೇನು ? ನಾವು ನ್ಯಾಯಪ್ರಾಮಾಣಾಧೀನರಲ್ಲ, (ಪಾಪದ) ಕೃಪೆಗೆ ಅಧೀನರಾಗಿದ್ದೇವೆಂದು (ಪಾಪದಿಂದ ಬಿಡುಗಡೆ) ಪಾಪವನ್ನು ಮಾಡಬಹುದೋ ? ಹಾಗೆ ಎಂದಿಗೂ ಅಲ್ಲ."
ಯಾಕೋ 1 : 25 "ಆದರೆ ಬಿಡುಗಡೆಯನ್ನುಂಟುಮಡುವ (ಹೊಸ ಒಡಂಬಡಿಕೆ) ಪರಿಪೂರ್ಣವಾದ ನಿಯಮವನ್ನು ಲಕ್ಷ್ಯ ಕೊಟ್ಟು ನೋಡಿ. ಇನ್ನೂ

ವಿಶ್ವಾಸಿಯು ಯೇಸುವಿನಲ್ಲಿನ ನಂಬಿಕೆಯ ಮೂಲಕ ತಿರುಗಿ ಹುಟ್ಟಿದ್ದಾನೆ. ಯೇಸು ಅವನನ್ನು ಪಾಪದಿಂದ ಬಿಡುಗಡೆ ಮಾಡುತ್ತಾನೆ. ದೇವರ ಆತ್ಮವನ್ನು ಹೊಂದಿದ ವಿಶ್ವಾಸಿಯು ಪಾಪದಿಂದ ಸ್ವತಂತ್ರ್ಯನಾಗಿದ್ದಾನೆ. ಆದ್ದರಿಂದ ದೇವರ ನಿಯಮದಿಂದ ಸ್ವತಂತ್ರ್ಯನು. ವಿಶ್ವಾಸಿಯು ದೇವರೊಂದಿಗೆ ಪರಿಶುದ್ಧಾತ್ಮನ ಸನ್ನಿಧಿಯ ಮೂಲಕ ಸಂಪರ್ಕಿಸಬಲ್ಲನು. ಆತನು ಇಮ್ಮಾನುವೇಲನು – ದೇವರು ನಮ್ಮೊಂದಿಗೆ !!!

ವಿಶ್ವಾಸಿಯು ನ್ಯಾಯ ಪ್ರಮಾಣವನ್ನು ಕೈಗೊಳ್ಳದೇ ಯೇಸುವಿನಲ್ಲಿ ನಂಬಿಕೆಯಿಟ್ಟು ತಿರಿಗಿ ಹುಟ್ಟಿದರೆ, ಅವನು ಪರಿಶುದ್ಧಾತ್ಮನ ಸಹಾಯದಿಂದ ದೇವರೊಂದಿಗೆ ಸಂಪರ್ಕ ಇಟ್ಟುಕೊಂಡು ನಂಬಿಕೆಯಿಂದ ಜೀವಿಸಬೇಕಾಗುತ್ತದೆ.

**ಗಮನಿಸು :** ದೇವರು ಒಳ ಮನುಷ್ಯನ ಪ್ರಾಣದೊಂದಿಗೆ ಬರೆದಿರುವ ವಾಕ್ಯಕ್ಕನುಸಾರವಾಗಿ ಸಂಪರ್ಕಿಸುತ್ತಾನೆ. ಪಾಪದ ನಿಯಮದ ಕೆಳಗೆ ಒಳಮನುಷ್ಯನು ದೇವರ ನಿಯಮವನ್ನು ಪರಿಪಾಲಿಸಬೇಕಾಗಿತ್ತು. ಆದರೆ ಸ್ವಾತಂತ್ರ್ಯದ ನಿಯಮದ ಕೆಳಗೆ ಒಳ ಮನುಷ್ಯನು ದೇವರೊಂದಿಗೆ ಒಳ್ಳೆ ಸಂಬಂಧವನ್ನಿಟ್ಟುಕೊಂಡು ಜೀವಿಸಬೇಕು. ಪಾಪ ಮಾಡುವ ವಿಶ್ವಾಸಿಯು ತಂದೆಯಾದ ದೇವರನ್ನು ಮನನೋಯಿಸುವವನಾಗಿದ್ದಾನೆ, ಪರಿಶುದ್ಧಾತ್ಮನನ್ನು ಅಲಕ್ಷ ಮಾಡುತ್ತಾನೆ, ಮತ್ತು ಯೇಸು ಕ್ರಿಸ್ತನಿಗೆ ಶತೃವಾಗಿ ನಡೆದುಕೊಳ್ಳುತ್ತಾನೆ.

### ಕ್ರಿಸ್ತನ ವಿಷಯವಾದ ಬೋಧನೆ :

ಕ್ರಿಸ್ತನ ಬೋಧನೆಯಲ್ಲಿ ಎಲ್ಲಾ ಸತ್ಯಗಳೂ ಅಡಗಿವೆ ಮತ್ತು ವಿಶ್ವಾಸಿಗೆ ಮಾರ್ಗದರ್ಶಿಯಾಗಿರುವ ತತ್ವಗಳು ಪರಿಪೂರ್ಣತೆಗೂ ಮತ್ತು ದೈವ ಭಕ್ತಿಗೂ ನಡೆಸುತ್ತವೆ.

ಕೆಳಗಿರುವ 3 ಚಿತ್ರಗಳು ಕ್ರಿಸ್ತನ ಬೋಧನೆಗಳನ್ನು ದೃಷ್ಟಾಂತದ ಮೂಲಕ ತೋರಿಸುತ್ತವೆ ಮತ್ತು ವಿಶ್ವಾಸಿಯು ನಂಬಬೇಕಾದ ಮತ್ತು ಒಳ ಮನುಷ್ಯನನ್ನು ರಕ್ಷಿಸಿಕೊಳ್ಳಬೇಕಾದರೇ, ಅಂಟಿಕೊಳ್ಳಬೇಕಾದ ಸತ್ಯಗಳನ್ನೂ, ತತ್ವಗಳನ್ನೂ, ತೋರಿಸುತ್ತದೆ. ಇದು ಕಡೆಯಲ್ಲಿ ನಿತ್ಯಜೀವವನ್ನು ಹೊಂದುವುದಕ್ಕಾಗಿ – ಇದೇ ಅಮರ ದೇಹ.

* ಚಿತ್ರ 1 ಕ್ರಿಸ್ತನ ಸುವಾರ್ತೆಯನ್ನು ದೃಷ್ಟಾಂತದ ಮೂಲಕ ತೋರಿಸುತ್ತದೆ.
* ಚಿತ್ರ 2 ಸುವಾರ್ತೆಯ ಶಕ್ತಿಯನ್ನು ಮತ್ತು ಯೇಸುವಿನ ಮೇಲೆ ನಂಬಿಕೆಯಿಡುವವನ ಮೇಲೆ ಅದರ ಪ್ರಭಾವವನ್ನು ತೋರಿಸುತ್ತದೆ.

ನೋಡುತ್ತಲೇ ಇರುವವನು (ವಾಕ್ಯವನ್ನು) ಕೇಳಿ ಮರೆತುಹೋಗುವವನಾಗಿರದೆ ಅದರ ಪ್ರಕಾರ ನಡೆಯುವವನಾಗಿದ್ದು, ತನ್ನ ಕ್ರಿಯೆಯಿಂದ ಧನ್ಯವಾಗಿರುವನು."

ಯಾಕೋ 2 : 12 "ಬಿಡುಗಡೆಯನ್ನುಂಟುಮಾಡುವ (ಪಾಪದಿಂದ ಬಿಡುಗಡೆ) ನ್ಯಾಯ ಪ್ರಮಾಣದಿಂದ ಅವರು ತೀರ್ಪು ಹೊಂದುವವರಿಗೆ ತಕ್ಕಂತೆಯೇ ನೀವು ಮಾತನಾಡಿರಿ ; ಮತ್ತು ಹಾಗೆಯೇ ಮಾಡಿರಿ. (ಜೀವಿಸಿರಿ)"
**ಗಮನಿಸು :** ವಿಶ್ವಾಸಿಯ ಕೆಲವು ಪಾಪಗಳನ್ನು ಇಲ್ಲಿ ಮತ್ತು ಈಗ ತೀರ್ಪು ಮಾಡಲಾಗುತ್ತದೆ. ಆಗ ಇತರ ಪಾಪಗಳನ್ನು ಇದಾದಮೇಲೆ ತೀರ್ಪುಮಾಡುತ್ತದೆ. ವಿಶ್ವಾಸಿಯನ್ನು ಭವಿಷ್ಯತ್ತಿನ ತೀರ್ಪಿನಿಂದ ರಕ್ಷಿಸುವುದಕ್ಕೋಸ್ಕರ ನಿತ್ಯವೂ ದಂಡನೆಯನ್ನು ಅನುಭವಿಸುತ್ತಾನೆ.

1 ಪೇತ್ರ 4 : 17 "ಯಾಕೆಂದರೆ ದೇವರ ಮನೆಯಲ್ಲಿ ಪ್ರಾರಂಭವಾಗತಕ್ಕ ನ್ಯಾಯತೀರ್ಪಿನ ಸಮಯವು ಬಂದಿದೆ ; ಅದು ನಮ್ಮಲ್ಲಿ ಮೊದಲು ಪ್ರಾರಂಭವಾದರೆ, ದೇವರ ಸುವಾರ್ತೆಗೆ ಅವಿಧೇಯರಾದವರ ಅಂತ್ಯವು ಏನಾಗಿರುವುದು (ಮಾದರಿಯೂ ಮತ್ತು ಹೆಜ್ಜೆಗಳು) ?"
2 ಕೊರಿ 3 : 17 "ಕರ್ತನು ಆ ಆತ್ಮನೇ ಆಗಿದ್ದಾನೆ. ಕರ್ತನ ಆತ್ಮನು ಯಾರಲ್ಲಿದ್ದಾನೋ ಅವರಿಗೆ ಬಿಡುಗಡೆಯುಂಟು."
1 ಯೋಹಾ 1 : 6, 7 "ಆತನು ಬೆಳಕಿನಲ್ಲಿರುವಂತೆಯೇ ನಾವೂ ಬೆಳಕಿನಲ್ಲಿ ನಡೆದರೆ, ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ. (ವಿಶ್ವಾಸಿಯೂ ಮತ್ತು ದೇವರು) ; ನಾವು ಆತನ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ, ಸುಳ್ಳಾಡುವವರಾಗಿದ್ದೇವೆ. ಸತ್ಯವನ್ನನುಸರಿಸುವವರಲ್ಲ."

1 ಯೋಹಾ 4 : 17 "ನ್ಯಾಯ ತೀರ್ಪಿನ ದಿನದಲ್ಲಿ ನಮಗೆ ಧೈರ್ಯವಿರುವಂತೆ ನಮ್ಮ ಪ್ರೀತಿಯು (ವಿಶ್ವಾಸಿಗೂ ದೇವರಿಗೂ ಮಧ್ಯದಲ್ಲಿರುವ) ಸಿದ್ಧಿಗೆ ಬಂತು. ಯಾಕೆಂದರೆ ಆತನು ಎಂಥವನಾಗಿದ್ದಾನೋ, (ಆತನು ಪಾಪ ಮಾಡುವುದಿಲ್ಲ) ನಾವೂ ಅಂಥವರಾಗಿಯೇ (ವಿಶ್ವಾಸಿಯು ಪಾಪ ಮಾಡುವುದಿಲ್ಲ) ಈ ಲೋಕದಲ್ಲಿದ್ದೇವೆ."
**ಗಮನಿಸು :** ಪಾಪದಿಂದ ಸಿಕ್ಕ ಸ್ವಾತಂತ್ರ್ಯವನ್ನು ವಿಶ್ವಾಸಿಯು ತಿರುಗಿ ಪಾಪ ಮಾಡಲು ಉಪಯೋಗಿಸಬಾರದು.


1 ತಿಮೋ 4 : 13 – 16 "ನಾನು ಬರುವ ತನಕಾ ಓದುವುದರಲ್ಲಿಯೂ ಎಚ್ಚರಿಸುವುದರಲ್ಲಿಯೂ, ಬೋಧಿಸುವುದರಲ್ಲಿಯೂ ಲಕ್ಷ್ಯ ಕೊಡು. ನಿನ್ನ ವಿಷಯದಲ್ಲಿಯೂ ಉಪದೇಶದ ವಿಷಯದಲ್ಲಿಯೂ ಎಚ್ಚರಿಕೆಯಾಗಿರು. ನೀನು ಇವುಗಳಲ್ಲಿ ಎಚ್ಚರಿಕೆಯಾಗಿರು ; ಹೀಗೆ ಮಾಡುವುದರಿಂದ ನೀನು ನಿನ್ನನ್ನೂ ನಿನ್ನ ಉಪದೇಶ ಕೇಳುವುವರನ್ನು ರಕ್ಷಿಸುವಿ.'

1 ಥೆಸಾ 4 : 7, 8 "ಯಾಕೆಂದರೆ ದೇವರು ನಮ್ಮನ್ನು ಅಶುದ್ಧತೆಗೆ ಕರೆಯದೆ ಶುದ್ಧತೆಗೆ ಕರೆದನು. ಹೀಗಿರಲು, ತಾತ್ಸಾರ ಮಾಡುವವನು ಮನುಷ್ಯನನ್ನಲ್ಲ, ತನ್ನ ಪರಿಶುದ್ಧಾತ್ಮನನ್ನು ನಮಗೆ ದಯಪಾಲಿಸಿರುವ ದೇವರನ್ನೇ ತಾತ್ಸಾರ ಮಾಡುತ್ತಾನೆ."

2 ಯೋಹಾ 1 : 9, 10 "ಕ್ರಿಸ್ತನ ಬೋಧನೆಯಲ್ಲಿ ನೆಲೆಗೊಳ್ಳದೆ (ವಿಧೇಯನಾಗದೆ) ಅದನ್ನು ಅತಿಕ್ರಮಿಸುವವನಿಗೆ ದೇವರಿಲ್ಲ ; ಕ್ರಿಸ್ತನ ಬೋಧನೆಯಲ್ಲಿ ನೆಲೆಗೊಂಡಿರುವವನಿಗೆ ತಂದೆಯೂ ಮಗನೂ ಇದ್ದಾರೆ. ಈ ಬೋಧನೆಯನ್ನೂ ತಾರದಿರುವ ಯಾವನಾದರೂ ನಿಮ್ಮ ಬಳಿಗೆ ಬಂದರೆ,

* ಚಿತ್ರ 3 ವಿಶ್ವಾಸಿಯು ಅನುಸರಿಸಬೇಕಾದ ರಕ್ಷಣೆಯ ಮಾದರಿಯನ್ನು ತೋರಿಸುತ್ತದೆ.


**ಚಿತ್ರ 1 :**




ಯೇಸು ಶಿಲುಬೆಗೆ ಹಾಕಲ್ಪಟ್ಟಾಗ ಹಳೆಯ ಮನುಷ್ಯನು ಶಿಲುಬೆಯ ಮೇಲೆ ನಾಶವಾದನು. ಮತ್ತು ಹೊಸ ಮನುಷ್ಯನಾದ ಕ್ರಿಸ್ತನು ಮರಣದಿಂದ ಎಬ್ಬಿಸಲ್ಪಟ್ಟನು. ಪಾಪದ ದೇಹವು ಸತ್ತಾಗ ಪಾಪವು ತೀರ್ಪು ಹೊಂದಿ ಇನ್ನು ಇಲ್ಲದಾಯಿತು. ಕ್ರಿಸ್ತನು ನೆಲೆಗೊಂಡಿರುವುದಕ್ಕಾಗಿ ದೇವರು ಆಗ ಪಾಪವಿಲ್ಲದ ಹೊಸ ದೇಹವನ್ನು ಉಂಟುಮಾಡಿದನು. ದೇವರ ಹೊಸ ಸೃಷ್ಟಿಯಾದ ಯೇಸು ಕ್ರಿಸ್ತನಲ್ಲಿ ನಿತ್ಯ ಜೀವ ಇದೆ, ಯಾಕೆಂದರೆ ಹೊಸ ಅಮರ ದೇಹದ ಕಾರಣದಿಂದ.

ಯೇಸು ಕ್ರಿಸ್ತನು ಪರಲೋಕಕ್ಕೆ ಆರೋಹಣನಾದಾಗ ದೇವರು ಪವಿತ್ರಾತ್ಮನನ್ನು ಮನುಷ್ಯನಿಗೆ ಲಭ್ಯನಾಗುವಂತೆ ಮಾಡಿದನು. ಕೆಳಗಿನ ಎರಡನೇ ಚಿತ್ರ ಯೇಸುವನ್ನು ನಂಬಿ ಕರ್ತನೆಂದು ಒಪ್ಪಿಕೊಳ್ಳುವ ಒಳ ಮನುಷ್ಯನಿಗೆ ಹೇಗೆ ಕ್ರಿಸ್ತನ ಸುವಾರ್ತೆಯು ವಾಸ್ತವವಾಗುತ್ತದೆ ಎಂಬುದನ್ನು ತೋರಿಸುತ್ತದೆ.

**ಚಿತ್ರ 2 :**




ಪವಿತ್ರಾತ್ಮನು ನಂಬುವ ಒಳ ಮನುಷ್ಯನಿಗೆ ರಕ್ಷಣೆಯಾಗಲು ಬೇಕಾಗಿರುವ ಸುವಾರ್ತೆಯ ಶಕ್ತಿ. ಆತ್ಮನು ಪಾಪಕ್ಕೆ ಬದಲಾಗಿ

ಅವನನ್ನು ಮನೆಯೊಳಗೆ ಸೇರಿಸಿಕೊಳ್ಳಬೇಡಿರಿ, ಮತ್ತು ಅವನಿಗೆ ವಂದನೆಯೆಂದು ಹೇಳಬೇಡಿರಿ ;"
ಯೋಹಾ 3 : 16 "ದೇವರು ಲೋಕದ ಮೇಲೆ ಎಷ್ಟು ಪ್ರೀತಿಯನ್ನಿಟ್ಟು, (ಮಾನವ ಕುಲದ ಮೇಲೆ) ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನುಕೊಟ್ಟನು."
ಯೋಹಾ 1 : 29 "... ಇಗೋ ಲೋಕದ ಪಾಪವನ್ನು ತೆಗೆದುಹಾಕುವ ದೇವರ ಕುರಿಮರಿ."
1 ಯೋಹಾ 2 : 2 "ಆತನು ನಮ್ಮ ಪಾಪಗಳಿಗಾಗಿ ಪ್ರಾಯಶ್ಚಿತ್ತನಾಗಿದ್ದಾನೆ. ; ನಮ್ಮ ಪಾಪಗಳಿಗೆ ಮತ್ರವಲ್ಲದೆ, ಸಮಸ್ತ ಲೋಕದ ಪಾಪಗಳಿಗಾಗಿಯೂ ಪ್ರಾಯಶ್ಚಿತ್ತನಾಗಿದ್ದಾನೆ.
ಇಬ್ರಿ 10 : 9, 10 "ತರುವಾಯ – ಇಗೋ, ಓ ದೇವರೇ ನಿನ್ನ ಚಿತ್ತವನ್ನು ನೆರವೇರಿಸುವುದಕ್ಕೆ ಬಂದಿದ್ದೇನೆ ಎಂತಲೂ ಹೇಳಿದ್ದಾನೆ. ಆತನು ಎರಡನೆಯದನ್ನು ( ಕ್ರಿಸ್ತನ ದೇಹವನ್ನು ) ಸ್ಥಾಪಿಸುವುದಕ್ಕಾಗಿ ಮೊದಲನೆಯದನ್ನು (ಆದಮನ ದೇಹ) ತೆಗೆದು ಹಾಕುತ್ತಾನೆ. ಯೇಸು ಕ್ರಿಸ್ತನು ಒಂದೇ ಸಾರಿ ಎಂದೆಂದಿಗೂ ಅರ್ಪಿಸಿದ ತನ್ನ ದೇಹದ ಮೂಲಕ ಆತನ ಚಿತ್ತದಿಂದ ನಾವು ಶುದ್ಧರಾದೆವು."
ಇಬ್ರಿ 9 : 28 "ಹಾಗೆಯೇ ಕ್ರಿಸ್ತನು ಬಹುಜನರ ಪಾಪಗಳನ್ನು ಹೊತ್ತುಕೊಳ್ಳುವುದಕ್ಕೋಸ್ಕರ ಒಂದೇ ಸಾರಿ ಸಮರ್ಪಿತನಾದನು ; ಮತ್ತು ತನ್ನನ್ನು ನಿರೀಕ್ಷಿಸಿಕೊಂಡಿರುವವರಿಗೆ ರಕ್ಷಣೆಯನ್ನುಂಟು ಮಾಡುವುದಕ್ಕೋಸ್ಕರ ಪಾಪ ವಿಲ್ಲದವನಾಗಿ ಎರಡನೆ ಸಾರಿ ಕಾಣಿಸಿಕೊಳ್ಳುವನು."
1 ಕೊರಿ 15 : 53 "ಲಯವಾಗುವಂಥದ್ದು (ಈ ದೇಹವು) ನಿರ್ಲಯತ್ವವನ್ನು ಧರಿಸಿಕೊಳ್ಳುವುದೂ, ಮರಣಾಧೀನವಾಗಿರುವಂತಹ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವುದು ಅವಶ್ಯ.
ರೋಮ 5 : 21 " ಹೀಗೆ ಪಾಪವು ಮರಣವನ್ನುಂಟು ಮಾಡುವುದಕ್ಕಾಗಿ ಪ್ರಭುತ್ವವನ್ನು ನಡೆಸಿದ ಹಾಗೆಯೇ, ಕೃಪೆಯು ನೀತಿಯ ಮೂಲಕ ನಮ್ಮ ಕರ್ತನಾದ ಯೇಸುಕ್ರಿಸ್ತನಿಂದಾದ ನಿತ್ಯ ಜೀವವನ್ನುಂಟು ಮಾಡುವುದಕ್ಕಾಗಿ ಪ್ರಭುತ್ವ ನಡಿಸುವುದು.
ಯೋಹಾ 1 : 12 "ಆದರೆ ಯಾರ್ಯಾರು ಆತನನ್ನು ಅಂಗೀಕರಿಸಿದರೋ ಅವರಿಗೆ ಆತನ ಹೆಸರಿನ ಮೇಲೆ ನಂಬಿಕೆ ಇಡುವವರಿಗೆ ದೇವರ ಪುತ್ರರಾಗುವ ಅಧಿಕಾರವನ್ನು (ಪವಿತ್ರಾತ್ಮವನ್ನು) ಆತನು ಕೊಟ್ಟನು."
ರೋಮ 6 : 6 "ಪಾಪದ ಶರೀರವು ನಾಶವಾಗಿ ನಾವು ಇನ್ನೂ ಪಾಪಕ್ಕೆ ದಾಸರಾಗಿರದಂತೆ ನಮ್ಮ ಹಳೇ ಮನುಷ್ಯನು (ಹಳೇ ದೇಹ) ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟನೆಂದು ತಿಳಿದಿದ್ದೇವೆ."
ಇಬ್ರಿ 10 : 4 "ಯಾಕೆಂದರೆ ಹೋರಿಗಳ ಮತ್ತು ಓತಗಳ ರಕ್ತವು ಪಾಪಗಳನ್ನು ತೆಗೆದುಹಾಕುವುದು ಅಸಾಧ್ಯವಗಿದೆ."
1 ಕೊರಿ 6 ; 19 "ಯೇನು ? ದೇವರಿಂದ ದೊರಕಿ ನಿಮ್ಮೊಳಗೆ (ದೇಹದೊಳಗೆ) ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಆಲಯವಾಗಿದೆ ಎಂಬುದು ನಿಮಗೆ ತಿಳಿಯದೋ ? ನೀವು ನಿಮ್ಮ ಸ್ವಂತ ಸ್ವತಲ್ಲ ;"

ಅಪೋ 2 : 38 "... ಆಗ ಪೇತ್ರನು ಅವರಿಗೆ – ನೀವು ಮಾನಸಾಂತರ ಪಟ್ಟು, ಪಾಪಗಳ ಪರಿಹಾರಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನೂ ಯೇಸು ಕ್ರಿಸ್ತನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ ; ಆಗ ನೀವು ಪವಿತ್ರಾತ್ಮನ ದಾನವನ್ನು ಹೊಂದಿರಿ."
ಫಿಲಿ 2 : 13 "ಯಾಕೆಂದರೆ ತನ್ನ ಸುಚಿತ್ತದ ಪ್ರಕಾರ ನಿಮ್ಮಲ್ಲಿ ಉದ್ದೇಶವನ್ನೂ (ಪ್ರಾಣ) ಕಾರ್ಯವನ್ನೂ (ಆತ್ಮ) ಸಾಧಿಸುವಾತನು ದೇವರೇ. (ಪರಿಶುದ್ಧಾತ್ಮನು)"


ಕೊಲೋ 3 : 9 – 11 "ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ. (ಬೇರೆ

ದೇಹದಲ್ಲಿ ಬರುವುದು ಮಾತ್ರವಲ್ಲದೆ ಹೊಸ ದೇಹದ ನಿಶ್ಚಯತ್ವವನ್ನು ತೋರಿಸುತ್ತದೆ. ಆತ್ಮನ ಸಮ್ಮುಖವು ಒಳ ಮನುಷ್ಯನಲ್ಲಿ ದೇವರನ್ನು ಮೆಚ್ಚಿಸುವ ಆಶೆಯನ್ನು ಉಂಟು ಮಾಡುತ್ತದೆ.

ತಿರಿಗಿ ಹುಟ್ಟಿದ ವಿಶ್ವಾಸಿಯು ಒಬ್ಬ ನೂತನ ಮನುಷ್ಯ : ಈ ಕಾರಣದಿಂದಲೇ ಒಳ ಮನುಷ್ಯನು ಭಕ್ತನೆಂದು ಕರೆಯಲ್ಪಡುತ್ತಾನೆ. ಒಳ ಮನುಷ್ಯನಾದ ಯೇಸು ಕ್ರಿಸ್ತನು ಪಾಪ ಮಾಡುವುದಿಲ್ಲ ವಾದುದರಿಂದ, ಒಳ ಮನುಷ್ಯನು ಅರ್ಥ ಮಾಡಿಕೊಳ್ಳ – ಬೇಕಾಗಿರುವುದೇನೆಂದರೆ, ಭಕ್ತನು ಪಾಪ ಮಾಡುವುದಿಲ್ಲವೆಂದೂ ಮತ್ತು ಅವನು ಪಾಪ ಮಾಡಲು ಅನುಮತಿ ಇಲ್ಲವೆಂದು.

ಪಾಪ ಮಾಡುವ ಒಳ ಮನುಷ್ಯನು ಪರಿಶುದ್ಧತೆಯನ್ನು ಪರಿಪೂರ್ಣ ಗೊಳಿಸಿಲ್ಲ. ಪರಿಶುದ್ಧತೆಯು ಪರಿಪೂರ್ಣ ಮಾಡಬೇಕಾದರೆ ಪ್ರಾಣವೂ ಸ್ವೀಕರಿಸ ಬೇಕು ಮತ್ತು ಆತ್ಮವೂ ದೈವ ಭಕ್ತಿಯ ಬೋಧನೆಗೆ ಅಧೀನವಾಗಬೇಕು. ಇದು ಅವನು ಈಗಲೂ ಮಾಡುತ್ತಾಯಿರುವ ಪಾಪಗಳಿಂದ ಪರಿಶುದ್ಧಾತ್ಮನು ರಕ್ಷಿಸುವುದಕ್ಕೆ ಅನುಮತಿ ಕೊಡುತ್ತದೆ. ”

**ಚಿತ್ರ 3 :**




ಕ್ರಿಸ್ತನ ಬೋಧನೆಯಲ್ಲಿ ನಂಬತಕ್ಕಂತಹ ಎಲ್ಲಾ ಸತ್ಯಗಳೂ ಅಡಗಿವೆ. ವಿಧೇಯನಾಗಿರ ಬೇಕಾಂದಾಗ ಎಲ್ಲಾ ವೇದ ವಾಕ್ಯಗಳು ಮತ್ತು ವಿಶ್ವಾಸಿಯು ಪರಿಶುದ್ಧತೆಯನ್ನು ಪರಿಪೂರ್ಣನಾಗಲು ಅವನಿಗೆ ಅವಶ್ಯವಾದ ಮಾದರಿ ಇವೆ. ಅಡ್ಡ ದಾರಿಗಳಿಲ್ಲ, ಯಾಕೆಂದರೆ ಸಿನ್ ಅರಣ್ಯದ ಮೂಲಕ ಕಾನಾನಿಗೆ ಇಸ್ರಯೇಲಿನ ಬಿಡುಗಡೆಯಲ್ಲಿ ದೇವರ ಸುವಾರ್ತೆಯು ನಿಯಮಿಸಿದ ಮಾದರಿಯಿಂದ ಪರಿಶುದ್ಧಾತ್ಮನು ಹಾದಿ ತಪ್ಪಲು ಸಾಧ್ಯವಿಲ್ಲ.

ಪಾಪಗಳನ್ನೂ) ; ನೀವು ಹಳೇ ಮನುಷ್ಯನನ್ನು (ದೇಹ) ಅವನ ಕೃತ್ಯಗಳ ಕೂಡ ತೆಗೆದುಹಾಕಿದ್ದೀರಲ್ಲವೇ ಮತ್ತು ನೀವು ನೂತನ ಮನುಷ್ಯನನ್ನು (ದೇಹ) ಧರಿಸಿಕೊಂಡವರಾಗಿದ್ದೀರಿ ; ಅವನನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ಜ್ಞಾನದಲ್ಲಿ ಅವನು ನೂತನವಾಗುತ್ತಾನೆ. ಇದರಲ್ಲಿ ಗ್ರೀಕನು, ಯಹೂದ್ಯನು ಎಂಬ ಬೇಧವಿಲ್ಲ ; (ವಿಭಿನ್ನ ಪಂಗಡಗಳು) ಮ್ಲೇಚ್ಛ, ಹೂಣರೆಂದಿಲ್ಲ ; ದಾಸನು ಸ್ವತಂತ್ರನು ಎಂಬ ಬೇಧವಿಲ್ಲ ; ಆದರೆ ಕ್ರಿಸ್ತನೇ (ಪರಿಶುದ್ಧಾತ್ಮನು) ಸಮಸ್ತರಲ್ಲಿಯೂ ಸಮಸ್ತವೂ ಆಗಿದ್ದಾನೆ.”

ಅಪೋ 3 : 26 "ನಿಮ್ಮಲ್ಲಿ ಪ್ರತಿಯೊಬ್ಬರನ್ನೂ ಅವನವನ ದ್ರೋಹಗಳಿಂದ ತಿರುಗಿಸಿ, ಆಶೀರ್ವಧಿಸುವುದಕ್ಕಾಗಿ ದೇವರು ತನ್ನ ಮಗನಾದ ಯೇಸುವನ್ನು ಎಬ್ಬಿಸಿ ಮೊದಲು ಆತನನ್ನು ನಿಮ್ಮ ಬಳಿಗೆ ಕಳುಹಿಸಿದನು. (ಪವಿತ್ರಾತ್ಮನನ್ನು) ಎಂದು ಹೇಳಿದ್ದೀರಿ.

2 ತಿಮೋ 4 : 18 "ನನ್ನನ್ನು (ಒಳಮನುಷ್ಯನನ್ನು) ಪ್ರತಿಯೊಂದು ದುಷ್ಕೃತ್ಯದಿಂದ ಕರ್ತನು ತಪ್ಪಿಸಿ ತನ್ನ ಸ್ವರ್ಗ ರಾಜ್ಯಕ್ಕೆ ನನ್ನನ್ನು ಕಾಪಾಡುವನು." ಗಮನಿಸು : ದೇಹವು ಆಗಲೇ ಪಾಪದಿಂದ ಬಿಡುಗಡೆ ಆಯಿತು, ಮತ್ತು ಯೇಸುಕ್ರಿಸ್ತನು ಎರಡನೇ ಸಾರಿ ಪ್ರತ್ಯಕ್ಷನಾಗುವಾಗ ಅಮರ ದೇಹವಾಗಿ ಮಾರ್ಪಡುತ್ತದೆ.

ಯೋಹ 3 : 36 "ಮಗನ ಮೇಲೆ ನಂಬಿಕೆ ಇಡುವವನಿಗೆ ನಿತ್ಯ ಜೀವವುಂಟು. ಮತ್ತು ಯಾವನು ಮಗನನ್ನು ನಂಬುವುದಿಲ್ಲವೋ ಅವನು ಜೀವವನ್ನು ಕಾಣುವುದಿಲ್ಲ ; ಆದರೆ ದೇವರ ಕೋಪವು ಅವನ ಮೇಲೆ ನೆಲೆಗೊಂಡಿದೆ."

ಇಬ್ರಿ 4 : 1 – 3 "ಹೀಗಿರಲಾಗಿ (ಭಕ್ತರಾದ ನಾವು) ಆತನ ವಿಶ್ರಾಂತಿಯಲ್ಲಿ (ಪಾಪ ಮಾಡುವುದರಿಂದ) ಸೇರುವೆವೆಂಬ ವಾಗ್ದಾನವು ಇನ್ನೂ ಇರುವಲ್ಲಿ ನಿಮ್ಮೊಳಗೆ ಯಾವನಾದರೂ ಅದರಿಂದ ತಪ್ಪುವವನಾದಾನೋ, ಎಂದು ನಾವು ಭಯ ಪಡೋಣ. ಯಾಕೆಂದರೆ ಅವರಿಗೆ (ಯಹೂದ್ಯರಿಗೆ ಸುವಾರ್ತೆಯು ಸಾರೋಣವಾದಂತೆಯೇ ನಮಗೂ ಕ್ರೈಸ್ತರಿಗೆ ಸಾರೋಣವಾಯಿತು ; ಆದರೆ ಕೇಳಿದವರು ನಂಬಲಿಲ್ಲವಾದ ಕಾರಣ ಸಾರಿದ ಆ ವಾಕ್ಯದಿಂದ ಪ್ರಯೋಜನವಾಗಲಿಲ್ಲ.”

1 ಪೇತ್ರ 2 : 21, 22 "ಇದಕ್ಕಾಗಿ ನೀವು ಕರೆಯಲ್ಪಟ್ಟಿರಿ ; ಯಾಕೆಂದರೆ ಕ್ರಿಸ್ತನೂ ಸಹಾ ನಮಗೋಸ್ಕರ ಬಾಧೆಹನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ನಮಗೆ ಮಾದರಿಯನ್ನು ಬಿಟ್ಟು ಹೋದನು.”

1 ಕೊರಿ 10 : 1 – 6 "ಇದಲ್ಲದೆ ಸಹೋದರರೇ ನೀವು ಈ ವಿಷಯಗಳನ್ನು ಅರಿಯದವರಾಗಿರಬಾರದೆಂದು ನನ್ನ ಅಪೇಕ್ಷೆಯಲ್ಲ ; ಅದೇನೆಂದರೆ – ನಮ್ಮ ಪಿತೃಗಳೆಲ್ಲರೂ ಮೇಘದ ಕೆಳಗೆ ಇದ್ದು ಸಮುದ್ರವನ್ನು ದಾಟಿದರು ; ಅವರೆಲ್ಲರೂ ಮೋಶೆಗಾಗಿ ಮೇಘದಲ್ಲಿಯೂ ಸಮುದ್ರದಲ್ಲಿಯೂ ಬಾಪ್ತಿಸ್ಮ ಹೊಂದಿದರು. ಅವರೆಲ್ಲರೂ ಆತ್ಮೀಕವಾದ ಒಂದೇ ಆಹಾರವನ್ನು ತಿಂದರು, ಮತ್ತು ಅವರೆಲ್ಲರೂ ಆತ್ಮೀಕವಾದ ಪಾನವನ್ನು ಕುಡಿದರು ; ಯಾರೆಂದರೆ ಅವರನ್ನು ಹಿಂಬಾಲಿಸಿದ ಆ ಆತ್ಮೀಕ ಬಂಡೆಯೊಳಗಿನಿಂದ ಅವರು ಕುಡಿದರು ; ಮತ್ತು ಆ ಬಂಡೆಯು ಕ್ರಿಸ್ತನೇ. ಆದರೆ ಅವರೊಳಗೆ ಅನೇಕರ ವಿಷಯದಲ್ಲಿ ದೇವರು ಸಂತೋಷಿಸಲಿಲ್ಲ. ಯಾಕೆಂದರೆ ಅವರು ಅಡವಿಯೊಳಗೆ ಸಂಹರಿಸಲ್ಪಟ್ಟರು. ಅವರು ಕೆಟ್ಟ ವಿಷಯಗಳನ್ನು ಆಶಿಸಿದಂತೆ ನಾವು ಆಶಿಸುವವರಾಗಬಾರದೆಂಬದಕ್ಕಾಗಿ, ಈ ಸಂಗತಿಗಳು ನಮಗೆ ನಿದರ್ಶನಗಳಾಗಿವೆ."
ರೋಮ 6 : 17 "ಆದರೆ ನೀವು ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಒಪ್ಪಿಸಲ್ಪಟ್ಟ

ಪಾಪ ಮಾಡುವ ಒಳ ಮನುಷ್ಯನು ತಾನು ಬೈಬಲ್ಲಿನ ಸತ್ಯವನ್ನು ನಂಬಬೇಕು ಮತ್ತು ತನ್ನ ಅತಿಕ್ರಮಗಳನ್ನು ನಿಲ್ಲಿಸಬೇಕು. ಅವನು ಸತ್ಯಕ್ಕೆ ವಿಧೇಯನಾಗಲು ಶುರು ಮಾಡಿದ ಕೂಡಲೇ ಮತ್ತು ತಾನು ಮಾಡುವ ಒಂದು ನಿಶ್ಚಿತ ಪಾಪವನ್ನು ತಡೆಗಟ್ಟುತ್ತಾ ಬಂದಹಾಗೆಲ್ಲಾ ಅವನು ಶ್ರಮೆಯನ್ನು ಅನುಭವಿಸುತ್ತಾನೆ. ಇದು ಆ ಪಾಪ ನಿರ್ಮೂಲವಾಗುವತನಕ ಶಿಲುಬೆಗೆ ಹಾಕುವುದಕ್ಕೆ ಸಮನಾಗಿರುತ್ತದೆ. ಅವನು ಪಾಪದ ಕಡೆಗೆ ಸತ್ತವನಾದ ಕೂಡಲೇ, ಅವನು ಪರಿಶುದ್ಧಾತ್ಮನಿಂದ ಕ್ರಿಸ್ತನ ಕಡೆಗೆ ಜೀವಂತನಾಗುತ್ತಾನೆ. ಯಾಕೆಂದರೆ ಪಾಪ ಸಾಯದ ಹೊರತು ಯಾರನ್ನೂ ಜೀವಂತ ಮಾಡಲು ಸಾಧ್ಯವಿಲ್ಲ. ಒಳ ಮನುಷ್ಯನನ್ನು ಶಿಲುಬೆಗೇರಿಸುವುದೇ ಆತ್ಮೀಯ ದೀಕ್ಷಾ ಸ್ನಾನ. ಪಾಪದ ಕಡೆಗೆ ಸತ್ತ ಒಳಮನುಷ್ಯನು ಇನ್ನುಮೇಲೆ ಪಾಪ ಮಾಡುವುದಿಲ್ಲ.

ತಪ್ಪು ಬೋಧನೆಗಳಿಂದ ಅನೇಕ ಪಂಗಡಗಳು ಉದ್ಭವವಾಗಿವೆ. ಆದರೆ ದೇವರಿಗೆ ಒಂದೇ ಒಂದು ಸಭೆಯಿದೆ. ಆದುದರಿಂದ ಒಂದೇ ಬೋಧನೆ ಸಾಧ್ಯ. ಮೇಲ್ಕಂಡ ಮೂರು ಚಿತ್ರಗಳು ಕರ್ತನಾದ ಯೇಸು ಕ್ರಿಸ್ತನ ಹಿತಕರ ಮತುಗಳಿಗೆ ಅನುಗುಣವಾಗಿದೆ ಮತ್ತು ದೈವಭಕ್ತಿಗನುಸಾರವಾದ ಬೋಧನೆಗೆ ಅನುಗುಣವಾಗಿವೆ.

ತಿರಿಗಿ ಹುಟ್ಟಿದ ವಿಶ್ವಾಸಿಯು ತನಗೆ ತಾನೇ ವಾಕ್ಯ ವಿಮರ್ಶೆ ಮಾಡುವುದು ಅಗತ್ಯ ಮತ್ತು ಆ ನಿರ್ದಿಷ್ಟ ವಾಕ್ಯ ಯಾವ ಚಿತ್ರಕ್ಕೆ ಹೊಂದಿಕೊಂಡು ಹೋಗುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಹೀಗೆ ಮಾಡುವುದರಿಂದ ಎಲ್ಲಾ ಅನುಮಾನಗಳು ತೊಲಗುತ್ತವೆ. ಉದಾಹರಣೆಗಾಗಿ : ಒಬ್ಬ ವ್ಯಕ್ತಿಯು ತಾನು ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದ್ದಾನೆಂದೂ ಕ್ರಿಯೆಗಳಿಂದಲ್ಲವೆಂದೂ ನಂಬುತ್ತಾನೆ. ಇದು ನಿಜ ಯಾಕೆಂದರೆ ಒಳಗೆ ನೆಲೆಗೊಂಡಿರುವ ಪರಿಶುದ್ಧಾತ್ಮನ ದೆಸೆಯಿಂದ. ಇದನ್ನು ಚಿತ್ರ ಎರಡರಲ್ಲಿ ನೋಡಬಹುದು. ಆದರೆ ವಾಕ್ಯ ಕೂಡಾ ಇದನ್ನು ಹೇಳುತ್ತದೆ ; ಇದು ಕೂಡಾ ನಿಜ. ಮತ್ತು ಚಿತ್ರ 3 ರಲ್ಲಿ ತೋರಿಸಿದ ಹಾಗೆ ಒಳ ಮನುಷ್ಯನಿಗೆ ಅನ್ವಯಿಸುತ್ತದೆ. ಈ ಎರಡೂ ವಾಕ್ಯಗಳು ನಿಜವಾಗಿರುವುದರಿಂದ ಒಳ ಮನುಷ್ಯನು ನಂಬಿಕೆಯ ವಷವಾಗಬೇಕು – ಪರಿಶುದ್ಧತೆಯನ್ನು ಪರಿಪೂರ್ಣ ಮಾಡುವುದರಿಂದ – ಚಿತ್ರ 3 ರಲ್ಲಿ ತೋರಿಸಿದ ಹಾಗೆ. ಒಂದು ವಾಕ್ಯವನ್ನು ನಂಬಿ ಇನ್ನೊಂದು ವಾಕ್ಯವನ್ನು ಯಾರೂ ಅಸಡ್ಡೆ ಮಾಡಬಾರದು.

**ಗಮನಿಸು :** ಚಿತ್ರ 3 ಮತ್ತು ಚಿತ್ರ 2 ರ ವಿಶಾಲತೆ. ಅದು ಒಳ ಮನುಷ್ಯನ ಶುದ್ಧೀಕರಣ ವಿಧಾನವನ್ನು ತೋರಿಸುತ್ತದೆ. ಇದನ್ನು ವಿಶ್ವಾಸಿಗಳು ಪರಿಶುದ್ಧಾತ್ಮನ ಸಹಾಯದಿಂದ ಸಾಧಿಸಬೇಕು ; ಯಾಕೆಂದರೆ, ಶುದ್ಧೀಕರಣವಿಲ್ಲದೆ ಕರ್ತನನ್ನು ನೋಡಲು

ಬೋಧನೆಗೆ (ಮಾದರಿ) ನೀವು ಹೃದಯ ಪೂರ್ವಕವಾಗಿ ಅಧೀನರಾದ್ದರಿಂದ ದೇವರಿಗೆ ಸ್ತೋತ್ರವಾಗಲಿ."
ಗಲ 5 : 17, 24 "ಯಾಕೆಂದರೆ ಶರೀರದಾಶೆಯು ಆತ್ಮನಿಗೆ ವಿರುದ್ದವಾಗಿದೆ. ಆತ್ಮನು ಶರೀರಕ್ಕೆ ವಿರುದ್ಧವಾಗಿದ್ದಾನೆ. ನೀವು (ಒಳ ಮನುಷ್ಯ) ಮಾಡಲಿಚ್ಚಿಸುವುದನ್ನು ಮಾಡದಂತೆ ಇವು ಒಂದಿಕ್ಕೊಂದು, ವಿರೋಧವಾಗಿವೆ. ಕ್ರಿಸ್ತನವರು ತಮ್ಮ ಶರೀರವನ್ನು ಅದರ ಇಚ್ಛೆ ದುರಾಶೆ ಸಹಿತವಾಗಿ ಶಿಲುಬೆಗೆ ಹಾಕಿದ್ದಾರೆ."
**ಗಮನಿಸು :** ಒಳ ಮನುಷ್ಯನ ಪಾಪ ಸ್ವಭಾವವನ್ನೇ ಶಿಲುಬೆಗೆ ಹಾಕಬೇಕಾಗಿರುವುದು, ಯಾಕೆಂದರೆ ಅವನು ಶರೀರಾಧೀನ ಸ್ವಭಾವದಲ್ಲಿಲ್ಲ. ಆದರೆ ಆತ್ಮನಲ್ಲಿದ್ದಾನೆ.

ಎಫೆ 4 : 13, 14 "ಹೀಗೆ ನಾವೆಲ್ಲರೂ ನಂಬಿಕೆಯ ಅನ್ಯೋನ್ಯತೆಯಲ್ಲಿಯೂ ದೇವ ಕುಮಾರನ ಜ್ಞಾನದಲ್ಲಿಯೂ ಪರಿಪೂರ್ಣ ಮನುಷ್ಯರಾಗುವುದಕ್ಕೆ ಕ್ರಿಸ್ತನ ಪರಿಪೂರ್ಣತೆಯ ನೀಳದ ಪ್ರಮಾಣಕ್ಕೆ ಮುಟ್ಟುವೆವು. ನಾವು ಇನ್ನು ಮೇಲೆ ಹೊಂಚು ಹಾಕುವವರ ವಂಚನೆಗೂ ಮನುಷ್ಯರ ಕಪಟದಿಂದಲೂ ಮೋಸದ ಉಪಾಯ ಮಾಡುವ ತಂತ್ರದಿಂದಲೂ ಬೋಧನೆಯ ಪ್ರತಿಯೊಂದು ಗಾಳಿಯಿಂದಲೂ ಬಡಿಯಲ್ಪಟ್ಟು ಅತ್ತಿತ್ತ ನೂಕಾಡಲ್ಪಡುವ ಬಾಲಕರಂತೆ ಇರಬಾರದು."

ರೋಮ 16 : 17 "...ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಬೇಧಗಳನ್ನೂ ವಿಘ್ನಗಳನ್ನೂ ನಿಮ್ಮಲ್ಲಿ ಉಂಟು ಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿ ಹೋಗಿರಿ ಎಂದು ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ."

2 ತಿಮೋ 4 : 3, 4 "ಯಾಕೆಂದರೆ ಜನರು ಸ್ವಸ್ಥ ಬೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ ; ಅದರಲ್ಲಿ ಅವರು ತೀಟೆ ಕಿವಿಯುಳ್ಳವರಾಗಿ ತಮ್ಮ ದುರಾಸೆಗಳಿಗೆ ಅನುಕೂಲಕರವಾದ ಉಪದೇಶಕರನ್ನು ಇಟ್ಟುಕೊಳ್ಳುವರು. ಅವರು (ಉಪದೇಶಕರು) ಸತ್ಯಕ್ಕೆ ಕಿವಿಗೊಡದೆ ಕಲ್ಪನಾ ಕಥೆಗಳನ್ನು ಕೇಳುವುದಕ್ಕೆ ತಿರುಗಿಕೊಳ್ಳುವರು."

2 ತಿಮೋ 2 : 15 "ನೀನು ದೇವರಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವುದಕ್ಕೆ ಅಭ್ಯಾಸಿಸು ; ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ವಿಭಾಗಿಸುವವನೂ ಆಗಿರು."
**ಗಮನಿಸು :** ಸತ್ಯವಾಕ್ಯವನ್ನು ಸರಿಯಾಗಿ ವಿಭಾಗಿಸಬೇಕಾದರೆ, ಒಬ್ಬ ವಿಶ್ವಾಸಿಯು ಅರ್ಥ ಮಾಡಿಕೊಳ್ಳಬೇಕಾಗಿರುವುದೇನೆಂದರೆ, ಒಂದು ನಿಷ್ಚಿತವಾದ ವೇದ ಭಾಗವು ಬೋಧನೆಯ (ಚಿತ್ರ 1, 2 ಅಥವಾ 3) ಯಾವ ಬೆಳವಣಿಗೆಯ ಸ್ಥಿತಿಯಲ್ಲಿದೆ ಎಂಬುದೇ.

**ಸತ್ಯವಾಕ್ಯವನ್ನು ಹೇಗೆ ವಿಭಾಗಿಸಿ ಸರಿಯಾಗಿ ಓದುವುದು ಎಂಬುದಕ್ಕೆ ನಿದರ್ಶನ :**
1 ಯೋಹಾ 3 : 1 "ಇಗೋ ತಂದೆಯು ಎಂತಹ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನಲ್ಲಾ..."
ಮಾನವನ ಪಾಪದಿಂದ ಬಿಡುಗಡೆ ಮಾಡುವುದಕ್ಕಾಗಿ ದೇವರುಕೊಟ್ಟ ದೇವಕುಮಾರನಿಗೆ ಅನ್ವಯಿಸುತ್ತದೆ. ಇದನ್ನು ಚಿತ್ರ 1 ರಲ್ಲಿ ದೃಷ್ಟಾಂತ ಕೊಡಲಾಗಿದೆ.
1 ಯೋಹಾ 3 : 2 "...ನಾವು ಈಗ ದೇವರ ಪುತ್ರರಾಗಿದ್ದೇವೆ..."
ಮನುಷ್ಯನಲ್ಲಿರುವ ಪವಿತ್ರಾತ್ಮವು ಈ ಒಬ್ಬ ವಿಶ್ವಾಸಿಯನ್ನು ದೇವರ ಮಗನನ್ನಾಗಿ ಮಾಡುತ್ತದೆ, ಮತ್ತು ಯೇಸು ಪ್ರತ್ಯಕ್ಷನಾದಾಗ ಮರ್ತ್ಯ ದೇಹವು ನೂತನ

ಯಾರಿಂದಲೂ ಸಾಧ್ಯವಿಲ್ಲ. (ಇಬ್ರಿ 12 : 14).

1 ತಿಮೋ 6 : 3, 4 "ಯಾವನಾದರೂ ಬೇರೆ ವಿಧವಾದ ಉಪದೇಶವನ್ನು ಮಾಡಿ, ಅಂದರೆ ನಮ್ಮ ಕರ್ತನಾದ ಯೆಸು ಕ್ರಿಸ್ತನ ಸ್ವಸ್ಥವಾದ ಮಾತುಗಳಿಗೂ ಭಕ್ತ್ಯಾನುಸಾರವಾದ ಬೋಧನೆಗೂ ಸಮ್ಮತಿಸದೇ ಹೋದರೆ, ಅಂಥವನು ಒಂದನ್ನೂ ತಿಳಿಯದೆ ಕುತರ್ಕ ವಾಗ್ವಾದಗಳನ್ನು ಮಾಡುವ ಭ್ರಾಂತಿಯಲ್ಲಿದ್ದು, ಅಹಂಕಾರಿಯಾಗಿದ್ದಾನೆ..."

**ಬೇರೊಂದು ನಿಯಮ :**

ಹೊಸ ಒಡಂಬಡಿಕೆಯಲ್ಲಿ ನಾವು ಈ ನಿಯಮಗಳ ಬಗ್ಗೆ ಓದುತ್ತೇವೆ : ಪಾಪದ ನಿಯಮ (ಪಾಪದ ಸ್ವಭಾವ) ; ದೇವರ ನಿಯಮ (ಅಕ್ಷರತಃ ನಿಯಮ) ಆತ್ಮದ ನಿಯಮ (ಆತ್ಮದ ಸ್ವಭಾವ) ; ಬಿಡುಗಡೆಯ ನಿಯಮ (ಪಾಪ ರಹಿತವಾದ ನೂತನ ದೇಹ). ಈ ಎಲ್ಲಾ ನಿಯಮಗಳು ಹೊರ ಮನುಷ್ಯನಲ್ಲಿ ಮಾತ್ರ ಅಸ್ತಿತ್ವದಲ್ಲಿವೆ. ಆದರೆ ರೋಮ 7 : 23 ರಲ್ಲಿ ನಾವು ಹೀಗೆ ಓದುತ್ತೇವೆ. "ಆದರೆ ನನ್ನ ಅಂಗಗಳಲ್ಲಿ ಬೇರೊಂದು ನಿಯಮ ಉಂಟೆಂದು ನಾನು ನೋಡುತ್ತೇನೆ ; ಅದು ನನ್ನ ಮನಸ್ಸಿನಲ್ಲಿರುವ ನಿಯಮಕ್ಕೆ ವಿರೋಧವಾಗಿ ಕಾದಾಡಿ, ನನ್ನನ್ನು ಸೆರೆ ಹಿಡಿದು, ನನ್ನ ಅಂಗಗಳಲ್ಲಿರುವ ಪಾಪದ ನಿಯಮಕ್ಕೆ ವಶಮಾಡುವಂಥದ್ದಾಗಿದೆ." ಈ 'ಬೇರೊಂದು ನಿಯಮ' ವಾಸ್ತವವಾಗಿ ಆತ್ಮದ ಭಕ್ತಿಹೀನ ಸ್ವಭಾವವಾಗಿದೆ. ಇದು ಪ್ರಾಣದ ತರ್ಕದ ಮೇಲೆ ದೊರೆತನ ಮಾಡುತ್ತದೆ.

ಈ ಬೋಧನೆಯಲ್ಲಿ ನಮ್ಮ ಗುರಿ 'ಬೇರೊಂದು ನಿಯಮ'ದ ಮೇಲಾಗಿದೆ. ಮತ್ತು ಪ್ರಾಣದ ಮೇಲೆ ಅದರ ಪರಿಣಾಮವೇನು ಎಂಬುದು.

ನೋಡಿ ಕಲಿಯಿರಿ !




"ಬೇರೊಂದು ನಿಯಮ"
(ದೇವರಿಗೆ ವಿಧೇಯನಾಗುವುದನ್ನು ತಡೆಯುತ್ತದೆ)
(ಇದು ದೇವರ ಸೃಷ್ಟಿಕ್ರಮಕ್ಕೆ ವ್ಯತಿರಿಕ್ತವಾಗಿದೆ)

ದೇಹವಾಗಿ ರೂಪಾಂತರ ಗೊಳ್ಳುತ್ತದೆ. ಇದನ್ನು ಚಿತ್ರ 2 ರಲ್ಲಿ ದೃಷ್ಟಾಂತ ಕೊಡಲಾಗಿದೆ.

1 ಯೋಹಾ 3 : 3 "ಆತನಲ್ಲಿ ಈ ನಿರೀಕ್ಷೆಯನ್ನು ಇಟ್ಟಿರುವ ಪ್ರತಿಯೊಬ್ಬನು ಆತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧ ಮಾಡಿಕೊಳ್ಳುತ್ತಾನೆ."
ಈ ಸತ್ಯವಾಕ್ಯವು ಒಳ ಮನುಷ್ಯನ ಶುದ್ಧೀಕರಣಕ್ಕೆ ಅನ್ವಯಿಸುತ್ತದೆ. ಅದನ್ನು ಮಾಡಬೇಕಾಗಿದೆ. ಮತ್ತು ಚಿತ್ರ 3 ರಲ್ಲಿ ದೃಷ್ಟಾಂತ ಕೊಡಲಾಗಿದೆ.

**ಗಮನಿಸಬೇಕಾದ ಮುಖ್ಯಾಂಶ :** ರೋಮ 7 : 22, 23 ದೇವರ ನಿಯಮದ ಕೆಳಗಿರುವ ಒಬ್ಬ ಯೆಹೋದ್ಯನ ವಿಷಯವಾಗಿ ಹೇಳುತ್ತದೆ. ಅಂದರೆ ಈ ವ್ಯಕ್ತಿಯು ತಿರುಗಿ ಹುಟ್ಟಲಿಲ್ಲ ಯಾಕೆಂದರೆ ವಚನ 24, 25 ರಲ್ಲಿ ಅವನು ಪಾಪದ ದೇಹದಿಂದ ಬಿಡುಗಡೆಯಾಗಬೇಕೆಂದು ಹೇಳುತ್ತದೆ. ರೋಮ 8 : 2 ರಲ್ಲಿ ತಿರಿಗಿ ಹುಟ್ಟಿದ ಒಬ್ಬ ವ್ಯಕ್ತಿಯ ಬಗ್ಗೆ ಹೇಳುತ್ತದೆ, ಯಾಕೆಂದರೆ, ಅವನು ಇನ್ನು ಮೇಲೆ ಪಾಪದ ನಿಯಮದ ಕೆಳಗೆ ಇಲ್ಲ, ಆದರೆ, ಆತ್ಮದ ನಿಯಮದ ಕೆಳಗೆ.

ರೋಮ 7 : 22, 23 "ಹೀಗಿದ್ದಾಗ್ಯೂ ಒಳಮನುಷ್ಯನಿಗನುಗುಣವಾಗಿ ದೇವರ (ಅಕ್ಷರತಃ ನಿಯಮ) ನಿಯಮದಲ್ಲಿ ಆನಂದ ಪಡುವವನಾಗಿದ್ದೇನೆ. ಆದರೆ, ನನ್ನ ಅಂಗಗಳಲ್ಲಿ (ಪ್ರಾಣ, ಆತ್ಮ, ದೇಹ) ಬೇರೊಂದು ನಿಯಮ ಉಂಟೆಂದು ನಾನು ನೋಡುತ್ತೇನೆ. (?) ಅದು ನನ್ನ ಮನಸ್ಸಿನಲ್ಲಿರುವ ನ್ಯಾಯ ಪ್ರಮಾಣದ (ತಿಳುವಳಿಕೆ) ನಿಯಮಕ್ಕೆ ವಿರೋಧವಾಗಿ ಕಾದಾಡಿ ನನ್ನನ್ನು ಸೆರೆಹಿಡಿದು, ನನ್ನ ಅಂಗಗಳಲ್ಲಿರುವ ಪಾಪದ ನಿಯಮಕ್ಕೆ ವಶಮಾಡುವಂತಹದ್ದಾಗಿದೆ."
**ಗಮನಿಸು :** ಪಾಪದ ದೇಹಕ್ಕೆ ಒಂದು ಸ್ವಭಾವವಿದ್ದರೆ / ನಿಯಮ ಮತ್ತು ಪ್ರಾಣಕ್ಕೆ ತಿಳುವಳಿಕೆ ಇದ್ದರೆ, ಆಗ 'ಬೇರೊಂದು ನಿಯಮ' ಆತ್ಮದ ಸ್ವಭಾವಕ್ಕೆ / ನಿಯಮಕ್ಕೆ ಅನ್ವಯಿಸಬೇಕು. ವಾಕ್ಯವು ವಾಸ್ತವವಾಗಿ ತೋರಿಸುವುದೇನೆಂದರೆ ಕೆಟ್ಟ ಸ್ವಭಾವದ ಆತ್ಮನು ಪ್ರಾಣವನ್ನು ಸೆರೆಹಿಡಿದು, ದೇಹದಲ್ಲಿ ಪಾಪವನ್ನ ಸೇವಿಸುವಂತೆ ಮಾಡುತ್ತದೆ.

ಯಾಕೋ 1 : 13, 14 "ಯಾವನಾದರೂ (ವಿಶ್ವಾಸಿ) ಶೋಧನೆಗೆ ಪ್ರೇರೇಪಿಸಲ್ಪಡುವಾಗ – ಈ ಪ್ರೇರಣೆಯು ನನಗೆ ದೇವರಿಂದ ಉಂಟಾಯಿತೆಂದೆ ಹೇಳಬಾರದು ; ಯಾಕೆಂದರೆ ದೇವರು ಕೆಟ್ಟದ್ದರಿಂದ ಶೋಧಿಸಲಾರನು. ಆತನು ಯಾರನ್ನೂ ಶೋಧಿಸುವುದೂ ಇಲ್ಲ. ಆದರೆ ಪ್ರತಿಯೊಬ್ಬನೂ (ವಿಶ್ವಾಸಿ) ತನ್ನ (ಅವನ ಪ್ರಾಣ) ಸ್ವಂತ ದುರಾಶೆಯಿಂದ (ಆತ್ಮ) ಎಳೆಯಲ್ಪಟ್ಟು ಮರುಳು ಗೊಂಡವನಾಗಿ ಪಾಪ ಮಾಡುವುದಕ್ಕೆ ಶೋಧಿಸಲ್ಪಡುತ್ತಾನೆ."

ವಿಶ್ವಾಸಿಯು ವಾಕ್ಯನ್ನು ತಿಳಿದು ಒಪ್ಪಿಕೊಂಡರೂ ಆತ್ಮದ ಶರೀರಾಧೀನ ಸ್ವಭಾವವೂ ಅವನ ತಿಳುವಳಿಕೆಗೆ ವಿರುದ್ಧವಾಗಿ ಕಾದಾಡಿ, ಪ್ರಾಣವು ವಾಕ್ಯಕ್ಕೆ ವಿಧೇಯನಾಗದಂತೆ ತಡೆಯುತ್ತದೆ. ದೇವರಿಗೆ ವಿಧೇಯನಾಗುವುದನ್ನು ಸಾಧಿಸಬೇಕಾದರೆ, ಆತ್ಮನ ಸ್ವಾಭವವು ಬದಲಾಗಿ ದೈವ ಭಕ್ತಿಯುಳ್ಳದ್ದಾಗಬೇಕು. ಆತ್ಮವು ಆಗ ತಲೆಯಾಗಿರುವ ಪ್ರಾಣಕ್ಕೆ ಅಧೀನವಾಗುತ್ತದೆ.

ಹಿಂದಿನ ಅಧ್ಯಾಯಗಳಿಂದ ನಮಗೆ ಈಗಾಗಲೇ ತಿಳಿದಿರುವುದು ಸ್ವಭಾವ ತಿಳುವಳಿಕೆಗಿಂತ ಬಲವಾಗಿದೆ. ಹಳೆ ಒಡಂಬಡಿಕೆಯಲ್ಲಿ ಮಾನವನು ತನಗೆ ವಿಧೇಯನಾಗಲು ಸಾಧ್ಯವಿಲ್ಲವೆಂದು ದೇವರು ಕಂಡುಕೊಂಡನು. ಯಾಕೆಂದರೆ ಪಾಪದ ಸ್ವಭಾವವು ನ್ಯಾಯ ಪ್ರಮಾಣದ ತಿಳುವಳಿಕೆಗಿಂತ ಬಲವಾಗಿದೆ. ಪಾಪದ ಸ್ವಭಾವ ದೇಹದಲ್ಲಿ ಕೆಟ್ಟದ್ದಾಗಿರುವುದರಿಂದ ಮಾನವನ ಆತ್ಮ ಕೂಡ ಕೆಟ್ಟ ಸ್ವಭಾವ ಉಳ್ಳದ್ದಾಯಿತು ; ತಿಳುವಳಿಕೆಗಿಂತ ಸ್ವಾಭವವು ಬಲವಾಗಿರುವುದರಿಂದ ಆತ್ಮನ ಭಕ್ತಿಹೀನ ದುರಾಶೆಗಳು ಪ್ರಾಣದ ತಿಳುವಳಿಕೆಯ ಮೇಲೆ ದೊರೆತನ ಮಾಡುತ್ತವೆ. ಪಾಪದ ಆತ್ಮನಿಂದ ಪ್ರಾಣದ ಮೇಲಾಗುವ ದೊರೆತನವೇ ರೋಮ 7 : 23 ರಲ್ಲಿ ಬೇರೊಂದು ನಿಯಮವೆಂದು ಕರೆಯಲ್ಪಟ್ಟಿದೆ.

ಒಳ ಮನುಷ್ಯನಾದ ಆತ್ಮವು, ಪರಿಶುದ್ಧಾತ್ಮನ ಸ್ವಭಾವದ ಕೆಳಗೆ ತನ್ನ ಸ್ವಂತ ಆತ್ಮನ ಶರೀರಾಧೀನ ದುರಾಶೆಗಳು ತನ್ನ ಪ್ರಾಣದ ಮೇಲೆ ದೊರೆತನ ಮಾಡುತ್ತವೆಂದು ಕಂಡುಕೊಳ್ಳುತ್ತಾನೆ. ಅವನ ಪ್ರಾಣವು ವಾಕ್ಯದ ತಿಳುವಳಿಕೆಯಲ್ಲಿ ಆನಂದಿಸಿದಾಗ್ಯೂ, ತನ್ನ ಆತ್ಮದ ಭಕ್ತಿಹೀನತೆಯೂ ಭಕ್ತನನ್ನು ಪಾಪಿಯಹಾಗೆ ಜೀವಿಸುವಂತೆ ಮಾಡುತ್ತದೆ. ಒಳ ಮನುಷ್ಯನ ಈ ಅಪವಿತ್ರ ಸ್ಥಿತಿ ತನ್ನ ಆತ್ಮನ ಶುದ್ಧೀಕರಣದ ಮೂಲಕ ಮಾತ್ರವೇ ಬದಲಾಗುತ್ತದೆ.

ಆತ್ಮನ ಭಕ್ತಿಹೀನತೆಯು ಪರಿಶುದ್ಧಾತ್ಮನ ದೇವಭಕ್ತಿಯ ಸ್ವಾಭವವನ್ನು ಎದುರಿಸುವುದರಿಂದ ಪ್ರಾಣವು ತನ್ನ ಸ್ವಂತ ಚಿತ್ತವನ್ನೇ ಆಗಲೀ ದೇವರ ಚಿತ್ತವೇ ಆಗಲೀ ನೆರವೇರಿಸುವುದಕ್ಕೆ ಆಗುವುದಿಲ್ಲ. ಆತ್ಮನು ಪ್ರಾಣದ ಮೇಲೆ ದೊರೆತನ ಮಾಡುತ್ತಾನೆ. ಮತ್ತು 'ಅವಳ' ದುರಾಶೆಗಳನ್ನು ಈಡೇರಿಸಲು ಸೆರೆಹಿಡಿಯುತ್ತಾನೆ. ಹವ್ವಳು ತನ್ನ ಆಶೆಗಳನ್ನು ನೆರವೇರಿಸಲು ಆದಮನನ್ನು ಸೆರೆಹಿಡಿದಂತೆಯೇ. ಆದಮನು ದೇವರಿಗೆ ಅವಿಧೇಯನಾದನು ಯಾಕೆಂದರೆ ಹಾಗೆ ಮಾಡೆಂದವಳು ಹವ್ವಳು. ಅವನ ಆತ್ಮನಿಂದ ದೊರೆತನ ಮಾಡಿಸಿಕೊಳ್ಳುವ ಪ್ರಾಣವು 'ಬೇರೊಂದು ನಿಯಮದ' ಕೆಳಗೆ. (ಹೆಂಡತಿಯ ನಿಯಮ) ಮತ್ತು ದೇವರಿಗೆ ವಿಧೇಯನಾಗಿರುವುದು ಅವನಿಗೆ ಕಷ್ಟ. ಪ್ರಾಣವು ದೇವರಿಗೆ ವಿಧೇಯನಾಗಲೊಲ್ಲದು ಯಾಕೆಂದರೆ ಅವನು ಮಾಡಬೇಕೆಂದಿರುವ ಒಳ್ಳೆಯದನ್ನು ಅವನು ಮಾಡುವುದಿಲ್ಲ. ಮತ್ತು ಅವನು ಮಾಡಲೊಲ್ಲದ ಕೆಟ್ಟದ್ದನ್ನು ಮಾಡುತ್ತಾನೆ. ಯಾಕೆಂದರೆ 'ಅವಳ' ಸ್ವಭಾವವನ್ನು ಮೆಚ್ಚಿಸಬೇಕು.

ಮನುಷ್ಯನಿಗಾಗಿ ದೇವರು ಉಂಟು ಮಾಡಿರುವ ಕ್ರಮ ಏನೆಂದರೆ, ಪ್ರಾಣವು ಆತ್ಮನ ಮೇಲೆ ಪ್ರಭುತ್ವ ಮಾಡುವುದೇ. ಪ್ರಾಣವನ್ನು ದುರಾಡಳಿತ ಮಾಡುವ ಆತ್ಮನಿಂದ ರಕ್ಷಿಸಬೇಕಾದರೆ, ಆತ್ಮನ ಭಕ್ತಿಹೀನ ಸ್ವಭಾವವು ಬದಲಾಗಿ ದೈವ ಭಕ್ತಿಯುಳ್ಳದ್ದಾಗಬೇಕು. ಈ ಕಾರ್ಯವು ಆತ್ಮನು ಪ್ರಾಣಕ್ಕೆ ತಲೆಯಾಗಲು ಅನುಮತಿ

ರೋಮ 3 : 12 "ಎಲ್ಲರೂ ದಾರಿತಪ್ಪಿದವರಾಗಿ ಕೆಲಸಕ್ಕೆ ಬಾರದವರಾದರು ; ಒಳ್ಳೆಯದನ್ನು ಮಾಡುವುದೂ ಇಲ್ಲ. ಒಬ್ಬನಾದರೂ ಇಲ್ಲ."

**ಹಳೇ ಒಡಂಬಡಿಕೆಯಲ್ಲಿ ಬೇರೊಂದು ನಿಯಮ ಇರುವುದಕ್ಕೆ ನಿದರ್ಶನಗಳು :**

* ಹವ್ವಳು ಆದಮನ ಮೇಲೆ ದೊರೆತನ ಮಾಡುತ್ತಾಳೆ.
* ಸರಯಳು ಅಬ್ರಾಮನ ಮೇಲೆ ಹಾಗರಳಿಂದ ಮಗುವನ್ನು ಪಡೆಯಲು ದೊರೆತನ ಮಾಡುತ್ತಾಳೆ.
* ಲೋಟನ ಹೆಂಡತಿ ಅವನಿಗೆ ಅವಿಧೇಯಳಾಗಿ ಹಿಂದಕ್ಕೆ ನೋಡುತ್ತಾಳೆ.
* ಯೆಹೂದ್ಯರು ಕಾನಾನ್ ಪುತ್ರಿಯರನ್ನು ಮದುವೆಯಾಗಲು ನಿಶೇಧಿಸುತ್ತಾರೆ, ಯಾಕೆಂದರೆ, ಅವರು ತಮ್ಮ ಮಕ್ಕಳು ವಿಗ್ರಹಾರಾಧನೆ ಮಾಡುವಂತೆ ಪ್ರೋತ್ಸಾಹಿಸುತ್ತಾರೆ.
* ಸಂಸೋನನು ದಲ್ಯೆಲಳಿಂದ ಶೋಧಿಸಲ್ಪಡುತ್ತಾನೆ.
* ಹೆಂಡತಿಯಾದ ಜಸಬೇಲಳು ತನ್ನ ಗಂಡ ಆಹಾಬನಿಗಾಗಿ ನಾಬೋತನ ದ್ರಾಕ್ಷಾ ತೋಟವನ್ನು ಅಪಹರಿಸಲು ಸಂಚು ಹೂಡುತ್ತಾಳೆ.
* ಎಲೈಜನು ಜಜೆಬೇಲಳಿಗೆ ಹೆದರಿ ಓಡಿಹೋಗುತ್ತಾನೆ.
* ಯೋಬನ ಹೆಂಡತಿ ಅವನಿಗೆ ದೇವರನ್ನು ಶಪಿಸಿ ಸಾಯಿ ಎಂದು ಹೇಳುತ್ತಾಳೆ.

**ಹೊಸ ಒಡಂಬಡಿಕೆಯಲ್ಲಿ 'ಬೇರೊಂದು ನಿಯಮ'ವನ್ನು ಅನುಮತಿಸಿಲ್ಲ.**
ಎಫೆ 5 : 22, 23 "ಸ್ತ್ರೀಯರೇ (ಆತ್ಮ), ನೀವು ಕರ್ತನಿಗೆ ಹೇಗೋ ಹಾಗೆ ನಿಮ್ಮ ನಿಮ್ಮ ಗಂಡಂದಿರಿಗೆ (ಪ್ರಾಣ) ಸ್ವಲ್ಪ ಅಧೀನರಾಗಿರಿ, ಯಾಕೆಂದರೆ, ಕ್ರಿಸ್ತನು ಸಭೆಗೆ (ಆತನ ಮೊದಲಗಿತ್ತಿ) ತಲೆಯಾಗಿರುವ ಪ್ರಕಾರವೇ ಗಂಡನು (ಪ್ರಾಣ) ಹೆಂಡತಿಗೆ (ಆತ್ಮ) ತಲೆಯಾಗಿದ್ದಾನೆ. ಆತನು (ಕ್ರಿಸ್ತನು) ದೇಹಕೆ ರಕ್ಷಕನಾಗಿದ್ದಾನೆ.

ಪುರುಷರು ಪ್ರಾಮುಖ್ಯವಾಗಿ ಪ್ರಾಣವಾಗಿಯೂ ಮತ್ತು ಸ್ತ್ರೀಯರು ಪ್ರಾಮುಖ್ಯವಾಗಿ ಆತ್ಮವಾಗಿದ್ದರೂ ಪ್ರತಿ ಮನುಷ್ಯನ ಒಳ ಮನುಷ್ಯನಿಗೆ ಒಂದು ಪ್ರಾಣ, ಒಂದು ಆತ್ಮ ಇದೆ. ಪುರುಷ ಸ್ತ್ರೀಯರಿಬ್ಬರೂ ತಾವು ಬೇರೊಂದು ನಿಯಮದ ಕೆಳಗೆ ಇದ್ದಾರೆಂದು ಅರಿತಿದ್ದಾರೆ. ಅದು ಆತ್ಮನ ಶರೀರಾಧಿನ ಸ್ವಭಾವ. ಇದು ಪ್ರಾಣದ ಚಿತ್ತಕ್ಕೆ ವಿರೋಧವಾಗಿ ಕಾದಾಡಿ ಜಯಿಸುತ್ತದೆ. ಆದುದರಿಂದ ಮದುವೆಯಲ್ಲಿ ಪುರುಷ ಸ್ತ್ರೀಯರಿಬ್ಬರಿಗೂ ಒಂದೇ ತರಹದ ಸವಾಲು ಇದೆ. ಅದೇನಂದರೆ ಅವನ ಅಥವಾ ಅವಳ ಆತ್ಮದ ಮೇಲೆ ಹಿಡಿತ ಪಡೆಯುವುದಕ್ಕೆ. ತನ್ನ ಅತ್ಮನ ಮೇಲೆ ಹಿಡಿತವಿರುವ ಪ್ರಾಣಕ್ಕೆ ತನ್ನದೇ ಆದ ಹಿಡಿತ ಇದೆ. ಅದೇ ಆತ್ಮನು ಕೊಡುವ ಫಲ.


ಒಳ ಮನುಷ್ಯನ ಪ್ರಾಣವೂ ಮತ್ತು ಆತ್ಮವೂ ಒಂದಕ್ಕೊಂದು ಸಮನಾದ ಸಂಬಂಧವನ್ನು ಹೊಂದಿವೆ. ಇದು ಪುರುಷ ಸ್ತ್ರೀಯರ ಸಂಬಂಧದಂತಿದೆ. ಪುರುಷನು ಮತ್ತು ಸ್ತ್ರೀಯು ಅವರ ಒಳ ಮನುಷ್ಯನಲ್ಲಿ 'ಬೇರೊಂದು ನಿಯಮ'ದಿಂದ ಬೇರ್ಪಡಿಸಿದ ಕೂಡಲೇ ಮದುವೆಯು ಕಾಪಾಡಲ್ಪಟ್ಟಿತು. ಆತ್ಮನ ಶರೀರಾಧೀನ ಸ್ವಭಾವವನ್ನು ಸರಿಪಡಿಸದ ಹೊರತು. ಮದುವೆಯಲ್ಲಿ ಶಾಂತಿ ಸಿಗಲಾರದು. ಇದು ಪುರುಷ ಮತ್ತು ಸ್ತ್ರೀ ಇಬ್ಬರಲ್ಲಿ ನಡೆಯಬೇಕಾದ ಕೆಲಸ.

ಯಾಕೊ 4 : 17 "ಹೀಗಿರುವುದರಿಂದ ಒಳ್ಳೇದನ್ನು ಮಾಡಬೇಕೆಂದು ತಿಳಿದು (ಪ್ರಾಣ), ಅದನ್ನು ಮಾಡದೇ ಇರುವವನಿಗೆ (ಪ್ರಾಣ), ಅದು ಪಾಪವಾಗಿದೆ."

ಒಳ ಮನುಷ್ಯನ ಶಿರಸ್ಸು ಪ್ರಾಣವಾಗಿರುವುದರಿಂದ ಅವನ ರಕ್ಷಣೆಗೆ ಅದು ಜವಾಬ್ದಾರಿ. ಅದೇ ರೀತಿಯಾಗಿ ಗಂಡನು ಹೆಂಡತಿಗೆ ತಲೆಯಾಗಿರುವುದರಿಂದ ಮದುವೆಯನ್ನು ರಕ್ಷಿಸಿಕೊಳ್ಳುವ ಬಾಧ್ಯತೆ ಅವನದು.

ರೋಮ 12 : 2 "ಮತ್ತು ಇಹ ಲೋಕವನ್ನು ಅನುಸರಿಸದೇ

ಕೊಡುವುದಕ್ಕೆ ಮುಂಚೆ ಆಗಬೇಕು. ಇಂತಹ ಒಳ ಮನುಷ್ಯನು ಪರಿಪೂರ್ಣನು ಯಾಕೆಂದರೆ ಪ್ರತಿಯೊಂದು ಅಂಗ, ಪ್ರಾಣ ಮತ್ತು ಆತ್ಮ ಗುಣಹೊಂದಿ ಮೊದಲಿನ ಸೃಷ್ಟಿ ಕ್ರಮದಂತಾಯಿತು.





ದೇವರ ಸೃಷ್ಟಿ ಕ್ರಮ
(ಪ್ರಾಣವು ತನ್ನ ಆತ್ಮನ ಶಿರಸ್ಸು)
(ಆತ್ಮನು ಪ್ರಾಣಕ್ಕೆ ಆಧಾರ ಕೊಡುತ್ತದೆ)

ತಿಳುವಳಿಕೆಯು ಮನಸ್ಸಿನ ನಿಯಮವೆಂಬುದನ್ನು ಅರ್ಥ ಮಾಡಿಕೊಳ್ಳುವುದು ಅವಶ್ಯ. ತಿಳುವಳಿಕೆಯಿಲ್ಲದೇ ಪ್ರಾಣವು ಯಾವ ತೀರ್ಮಾನವನ್ನೂ ಮಾಡಲಾರದು. ಆದುದರಿಂದ ಪ್ರಾಣವು ಸತ್ಯದ ಬಗ್ಗೆ ತನ್ನ ತಿಳುವಳಿಕೆಗೆ ಅನುಸಾರವಾಗಿ ತನ್ನ ಆತ್ಮವನ್ನು ನಡೆಸುತ್ತದೆ. ಮತ್ತು ತನ್ನ ಆತ್ಮವು ದೈವ ಭಕ್ತಿಯುಳ್ಳದ್ದಾದರೆ, ಅದು ಪ್ರಾಣದ ಚಿತ್ತಕ್ಕೆ ಅಧೀನವಾಗುತ್ತದೆ. ವಿಶ್ವಾಸಿಯು ಆಗ ಮಾತ್ರ ದೇವರಿಗೆ ವಿಧೇಯನಾಗಬಲ್ಲನು. ಅವನ ಆತ್ಮವು ಸತ್ಯವನ್ನು ನಂಬಿ ಅದಕ್ಕೆ ಅಧೀನನಾದಾಗ ಪ್ರಾಣವು ವಿಶ್ರಮಿಸುತ್ತದೆ.

ಆದಮನು ಮೊದಲು ಸೃಷ್ಟಿಯಾದನೆಂಬುದು ನೆನಪಿನಲ್ಲಿಡಬೇಕು, ನಂತರ ದೇವರು ಅವನಿಗೆ ಹೊಂದಿಕೆಯಾಗುವ ಸಹಾಯಕಳಂತೆ ಹವ್ವಳನ್ನು ಸೃಷ್ಟಿಸಿದನು.

ಇಲ್ಲಿ ಒಂದು ಪ್ರಶ್ನೆಯನ್ನು ಕೇಳಬಹುದು “ಒಬ್ಬನು 'ಬೇರೊಂದು ನಿಯಮ'ವನ್ನು ತೆಗೆದು ಹಾಕಿ ಹೇಗೆ ದೇವರ ವಿಶ್ರಾಂತಿಯಲ್ಲಿ ಸೇರಬಹುದು ?”

ಕೆಳಗೆ ಬರುವ ಚಿತ್ರದಲ್ಲಿ ಪ್ರಾಣವು ತನ್ನ ಮೇಲೆ ದೊರೆತನ ಮಾಡುವ ಭಕ್ತಿಹೀನತೆಯ ಆತ್ಮನಿಂದ ಶುದ್ಧೀಕರಣದ ಮೂಲಕ ಕಾಪಾಡಲ್ಪಡುವ ವಿಧಾನವನ್ನು ತೋರಿಸಲಾಗಿದೆ.




ಉತ್ತಮವಾದದ್ದೂ, ಮೆಚ್ಚಿಗೆಯಾದದ್ದೂ, ಪರಿಪೂರ್ಣವಾದದ್ದೂ ಆಗಿರುವ ದೇವರ ಚಿತ್ತವೇನೆಂದು ವಿವೇಚಿಸಿ, ತಿಳಿದುಕೊಳ್ಳುವಂತೆ ನೂತನ ಮನಸ್ಸನ್ನು (ಪ್ರಾಣ) ಹೊಂದಿಕೊಂಡು ರೂಪಾಂತರಗೊಂಡವರಾಗಿರ್ರಿ (ಆತ್ಮನಲ್ಲಿ)”

2 ತಿಮೋ 3 : 5, 7 “ಭಕ್ತಿಯ ವೇಷವಿದ್ದು, ಅದರ ಬಲವನ್ನು (ಪರಿಶುದ್ಧಾತ್ಮ) ಅಲ್ಲಗಳೆಯುವವರು ಆಗಿರುವರು. ಇಂಥವರಿಂದ (ವಿಶ್ವಾಸಿಗಳು) ಪ್ರತ್ಯೇಕವಾಗಿರು, ಇವರು ಯಾವಾಗಲೂ ಕಲಿಯುತ್ತಿದ್ದರೂ, ಸತ್ಯದ ಪರಿಜ್ಞಾನವನ್ನು ಹೊಂದಲಾರದವರು.”

**ಸತ್ಯ ಇದು :**
ಒಬ್ಬ ದೇವರ ಮಗನು ಪಾಪ ಮಾಡುವುದಿಲ್ಲ. ಎಲ್ಲಾ ಕ್ರೈಸ್ತರ ಪುಸ್ತಕಗಳೂ, ವ್ಯಖ್ಯಾನಗಳೂ ಬೈಬಲ್ ಅಧ್ಯಯನಗಳು ಮತ್ತು ಪ್ರಸಂಗಗಳು ಬೋಧಿಸುವುದೇನೆಂದರೆ, ವಿಶ್ವಾಸಿಗಳು ಪಾಪ ಮಾಡಬಾರದು ಎಂದು, ಹಾಗಾದರೆ, ತಿರಿಗಿ ಹುಟ್ಟಿದ ವಿಶ್ವಾಸಿಗಳು ಯಾಕೆ ಪಾಪದಲ್ಲಿ ಮುಂದುವರೆದಿದ್ದಾರೆ?

**ಪಾಪ ಮಾಡುವುದಕ್ಕೆ ಕಾರಣ ಇದೇ :**
ವಾಕ್ಯದ ತಿಳುವಳಿಕೆ ಅವರಿಗಿದ್ದರೂ ಅವರು ಸತ್ಯವನ್ನು ತಿಳಿಯುವುದೂ ಇಲ್ಲ, ನಂಬುವುದೂ ಇಲ್ಲ. ಸತ್ಯವನ್ನು ಎದುರಿಸುವ ಯಾರೇ ಆಗಲಿ ಪರಿಶುದ್ಧಾತ್ಮನನ್ನು ಎದುರಿಸುತ್ತಾರೆ, ಆದರೆ ಪವಿತ್ರಾತ್ಮನ ಸಹಾಯದಿಂದಲ್ಲದೆ ಅವನು ಪಾಪವನ್ನು ನಿಲ್ಲಿಸಲುಸಾಧ್ಯ.

2 ಕೊರಿ 4 : 3, 4 “ನಮ್ಮ ಸುವಾರ್ತೆಯು ಮರೆಯಾಗಿರುವುದಾದರೆ, ಅದು ತಪ್ಪಿಹೋದವರಿಗೆ ಮರೆಯಾಗಿದೆ. ದೇವರ ಪ್ರತಿ ರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಮಹಿಮೆಯ ಸುವಾರ್ತೆಯು ಇವರಲ್ಲಿ ಪ್ರಕಾಶಿಸಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಕುರುಡು ಮಾಡಿದ್ದಾನೆ.”

ಒಬ್ಬ ಪಾಪಿಯು ತಿರಿಗಿ ಹುಟ್ಟುವುದಕ್ಕಿಂತ ಮುಂಚೆ, ಸತ್ಯವು ಮೊಬ್ಬಾಗಿದೆ, ಯಾಕೆಂದರೆ ಅವನ ಮನಸ್ಸು ಸೈತಾನನಿಂದ ಮತ್ತು ಅವನ ದೇಹದಲ್ಲಿನ ಪಾಪ ಸ್ವಭಾವದಿಂದ ಕುರುಡಾಗಿದೆ. ಈಗ ಅವನು ತಿರಿಗಿ ಹುಟ್ಟಿರುವುದರಿಂದ ಸತ್ಯವು ಈಗಲೂ ಮರೆಯಾಗಿದೆ. ಯಾಕೆಂದರೆ ಅವನ ಮನಸ್ಸು ಆತ್ಮನ ಶರೀರಾಧೀನ ಭಾವದಿಂದ ಕುರುಡಾಗಿದೆ. ಇದೇ ಬೇರೊಂದು ನಿಯಮ, ಆದ್ದರಿಂದಲೇ ಪೌಲನು ಎಫೆ 1 : 18 ರಲ್ಲಿ ಹೀಗೆ ಪ್ರಾರ್ಥಿಸುತ್ತಾನೆ. “ಆತನು ನಿಮ್ಮ ಮನೋ ನೇತ್ರಗಳನ್ನು ಬೆಳಗಿಸಿ, ಆತನ ಕರೆಯುವಿಕೆಯ ನಿರೀಕ್ಷೆಯು ಎಂಥದೆಂಬುದನ್ನು ಪರಿಶುದ್ಧರಲ್ಲಿರುವ ಆತನ ಸ್ವಾಸ್ಥ್ಯದ ಮಹಿಮಾತಿಷಯವು ಎಂಥದೆಂಬುದನ್ನು...”

ನೂತನ ಗೊಳಿಸಿದ ಮನಸ್ಸು, ವಿಶ್ವಾಸಿಯು ಶರೀರಾಧೀನದ ಮತ್ತು ಅಪನಂಬಿಕೆಯ ಆತ್ಮದ ಶುದ್ಧೀಕರಣದ ಮೂಲಕ ತನ್ನ ಸ್ವಂತ ರಕ್ಷಣೆಯನ್ನು ಸಾಧಿಸಿಕೊಳ್ಳಲು ಶಕ್ತನು.

ಫಿಲಿ 2 : 12 “...ಭಯದಿಂದ ನಡುಗುತ್ತಾ ನಿಮ್ಮ ಸ್ವಂತ ರಕ್ಷಣೆಯನ್ನು (ಪಾಪವನ್ನು ನಿಲ್ಲಿಸಿ) ಸಾಧಿಸಿಕೊಳ್ಳಿರಿ.”

ಸತ್ಯವನ್ನು ತಿಳಿದ ಪ್ರಾಣವು ವಿಧೇಯನಾಗಲು ಸಮ್ಮತಿಸುವುದರಿಂದ, ಅವನ ಆತ್ಮವು ಸತ್ಯಕ್ಕೆ ಅಧೀನವಾಗುವುದಕ್ಕೆ ಸಮ್ಮತಿಸುವುದಿಲ್ಲವೆಂದು, ಅವನು ಕಂಡುಕೊಳ್ಳುತ್ತಾನೆ. ಇದು ಒಳಮನುಷ್ಯನಲ್ಲಿ ತಿಕ್ಕಾಟವನ್ನುಂಟುಮಾಡುತ್ತದೆ.

ವಿಶ್ವಾಸಿಯು ಪಾಪದ ನಿಯಮದಿಂದ ಬಿಡುಗಡೆ ಹೊಂದಿದಾಗಲೇ ಮತ್ತು ಆತ್ಮದ ನಿಯಮದ ಕೆಳಗೆ ಬರುವಾಗ ಪ್ರಾಣಕ್ಕೆ 'ಬೇರೊಂದು ನಿಯಮ'ವಿದೆ ಎಂದು ಗೊತ್ತಾಗುತ್ತದೆ ; ಅದು ಅವನನ್ನು ಪಾಪ ಮಾಡುವಂತೆ ಒತ್ತಾಯಿಸುತ್ತದೆ. ಈ 'ಬೇರೊಂದು ನಿಯಮ' ಶರೀರಾಧೀನ ಸ್ವಭಾವದ ಅವನ ಆತ್ಮನ ದುರಾಶೆಗಳನ್ನೊಳಗೊಂಡಿದೆ. ಇದು ಅವನು ಶರೀರಾಧೀನ ಕ್ರಿಯೆಗಳನ್ನು ಮಾಡುತ್ತಾ ಇರುವಂತೆ ಪ್ರೋತ್ಸಾಹಿಸುತ್ತಾ ಇರುತ್ತದೆ. ಐಗುಪ್ತದಿಂದ ಹೊರಬಂದ ಯೆಹೂದ್ಯರಿಗೂ ಇದೇ ಸಂಭವಿಸಿತು. ಅವರು ದೇವರ ನಿಯಮದ ಕೆಳಗೆ ಇದ್ದರೂ ಪುರುಷರು ಕಾನಾನ್ ಪ್ರವೇಶ ಮಾಡಲು ಹಿಂತೆಗೆದರು, ಯಾಕೆಂದರೆ ಅವರ ಹೆಂಡಿರು ಮತ್ತು ಮಕ್ಕಳಿಗೋಸ್ಕರವಾಗಿ. ಕ್ರೈಸ್ತರೂ ಕೂಡ ತಮ್ಮ ಅಪನಂಬಿಕೆಯ ಆತ್ಮಗಳ ದುರಾಶೆಗಳನ್ನು ಮತ್ತು ಅವರ ಪ್ರಾಣ ಭಯವನ್ನು ತೃಪ್ತಿಪಡಿಸುವದಕ್ಕೋಸ್ಕರ ದೇವರಿಗೆ ಅವಿಧೇಯರಾಗಿರುವುದನ್ನು ಆರಿಸಿಕೊಳ್ಳುತ್ತಾರೆ.

ಹೊಸದಾಗಿ ಹುಟ್ಟಿದ ವಿಶ್ವಾಸಿಯು ತಾನು ಯೇಸುವಿನಲ್ಲಿ ವಿಶ್ವಾಸವಿಟ್ಟಿದ್ದಾನೆಂದೂ ಒಪ್ಪಿಕೊಂಡಾಗ್ಯೂ ಅವನು ಪಾಪದಲ್ಲಿ ಮುಂದುವರೆಯುತ್ತಾನೆ. ಯಾಕೆಂದರೆ, ಅವನ ಆತ್ಮವು ಶರೀರಾಧೀನ ಸ್ವಭಾವವುಳ್ಳದ್ದು ಮತ್ತು ಇನ್ನೂ ಅಪನಂಬಿಕೆಯಲ್ಲಿದೆ. ಆತ್ಮವು ಸತ್ಯವನ್ನು ಎಷ್ಟುಕಾಲ ನಂಬದೇ ಇರುತ್ತದೆಯೋ ಅಷ್ಟುಕಾಲ ಅದು ವಾಕ್ಯಕ್ಕೆ ಅಧೀನವಾಗುವುದಿಲ್ಲ. ನಿಜವೇನೆಂದರೆ ಪ್ರಾಣಕ್ಕೆ ಸತ್ಯದ ಅರಿವಿದ್ದಾಗ್ಯೂ ಅಪನಂಬಿಕೆಯ ಆತ್ಮವು ಅವನು ವಿಧೇಯನಾಗುವುದರಿಂದ ತಪ್ಪಿಸುತ್ತದೆ. ಸರಿಯಾದದ್ದನ್ನು ಮಾಡುವ ಚಿತ್ತವು ಇರಬಹುದು, ಆದರೆ ಸರಿಯಾದದ್ದನ್ನು ಮಾಡುವುದು ಕಡಿಮೆಯಾಗಿದೆ. ಆತ್ಮದ ಈ ಅಪವಿತ್ರ ಸ್ಥಿತಿ ಅದು ಸತ್ಯವನ್ನು ನಂಬುವವರೆವಿಗೆ ಮತ್ತು ಪವಿತ್ರಾತ್ಮನ ದೈವಭಕ್ತಿ ಸ್ವಭಾವದಲ್ಲಿ ಭಾಗಿಯಾಗುವವರೆವಿಗೆ ಮುಂದುವರೆಯುತ್ತದೆ.

ಎಲ್ಲರಿಗೂ ತಿಳಿದಿರುವ ವಿಷಯವೇನೆಂದರೆ, ಅಯೋಗ್ಯವಾದ ದೇಹವನ್ನು ಯೋಗ್ಯವಾಗಿ ಮಾಡಬೇಕೆಂದರೆ. ಕಸರತ್ತು ಮತ್ತು ಹೆಚ್ಚು ಶ್ರಮೆ ಬೇಕಾಗುತ್ತದೆ. ಅದೇ ರೀತಿಯಲ್ಲಿ ಭಕ್ತಿ ಹೀನ ಸ್ವಭಾವದ ಆತ್ಮ ದೈವ ಭಕ್ತಿಯುಳ್ಳ ಸ್ವಭಾವವನ್ನು ಹೊಂದಬೇಕಾದರೆ, ಆತ್ಮವು ಸತ್ಯದಲ್ಲಿ ಅಪನಂಬಿಕೆಯಿಂದ ನಂಬಿಕೆಗೆ ಸಾಗುತ್ತಾ ಶ್ರಮೆಯನ್ನನುಭವಿಸ ಬೇಕಾಗುತ್ತದೆ.

ಪ್ರಾಣಕ್ಕೆ ಸತ್ಯದ ತಿಳುವಳಿಕೆ ಸಿಕ್ಕಾಗ – ತನ್ನ ಇಂದ್ರೀಯ ಜ್ಞಾನಕ್ಕೆ ಬಂದಾಗ ಮತ್ತು ಮನಸ್ಸು ಬದಲಾವಣೆಯಾದಾಗ – ಸಹಾಯಕನಾದ ಪರಿಶುದ್ಧಾತ್ಮನು ಆತ್ಮಕ್ಕೆ ಸತ್ಯವನ್ನು ನಂಬುವಂತೆ ಮತ್ತು ವಿಧೇಯನಾಗುವಂತೆ ಸಹಾಯ ಮಾಡುತ್ತದೆ. ಮನಸ್ಸು

ಆದುದರಿಂದಲೇ ಪೌಲನು ಎಫೇ 3 : 16, 17 ರಲ್ಲಿ ಹೀಗೆ ಪ್ರಾರ್ಥಿಸುವುದು; **"...ಆತನ ಆತ್ಮನ ಮೂಲಕ ಅಂತರ್ಯದಲ್ಲಿ ವಿಶೇಷ ಬಲವನ್ನು ಅನುಗ್ರಹಿಸುವ** ಹಾಗೆಯೂ ಕ್ರಿಸ್ತನು (ಆತನ ದೈವ ಭಕ್ತಿಯ ಸ್ವಭಾವ) ನಿಮ್ಮ ಹೃದಯಗಳಲ್ಲಿ ನಂಬಿಕೆಯ ಮೂಲಕ ವಾಸಿಸುವಂತೆಯೂ..."

ತನ್ನ ಮೇಲೆ ದೊರೆತನ ಮಾಡುವ ಆತ್ಮನ ಶರೀರಾಧೀನ ಸ್ವಭಾವದಿಂದ ಕಾಪಾಡಲು ಪ್ರಾಣವು ದೇವರಲ್ಲಿ ಮೊರೆಹೋಗುವಾಗ, ಪರಿಶುದ್ಧಾತ್ಮವು ಆತ್ಮನಲ್ಲಿ ನಂಬಿಕೆಯನ್ನು ಹುಟ್ಟಿಸುತ್ತದೆ. ಆತ್ಮನು ಆಗ ದೇವ ಭಕ್ತಿಯುಳ್ಳದ್ದಾಗಿ ಸತ್ಯಕ್ಕೆ ಅಧೀನವಾಗುತ್ತದೆ.

1 ಪೇತ್ರ 1 : 9 "ಮತ್ತು ನಿಮ್ಮ ನಂಬಿಕೆಯ ಅಂತ್ಯಫಲವಾಗಿರುವ ಆತ್ಮಗಳ ರಕ್ಷಣೆಯನ್ನು ಹೊಂದುವವರಾಗಿದ್ದೀರಿ. (ನಿಮ್ಮ ಮೇಲೆ ದೊರೆತನ ಮಾಡುವ ಆತ್ಮನಿಂದ)"

**ಗಮನಿಸು :** ಪ್ರಾಣವು 'ಬೇರೊಂದು ನಿಯಮ'ದ ಕೆಳಗೆ ಇರುವಾಗ ಅದು ರಕ್ಷಣೆ ಹೊಂದಿಲ್ಲ. ಇನ್ನೊಂದು ಕಡೆ ಆತ್ಮನಿಂದ ದೊರೆತನ ಮಾಡಿಸಿಕೊಳ್ಳದೇ ಇರುವ ಪ್ರಾಣವು ಸ್ವತಂತ್ರತೆಯಲ್ಲಿದ್ದು, ವಿಶ್ರಾಂತಿ ಹೊಂದುತ್ತದೆ. ವಿಶ್ವಾಸಿಯು ರಕ್ಷಣೆ ಹೊಂದುವುದು ಪರಿಶುದ್ಧಾತ್ಮನು ದೇಹದಲ್ಲಿ ನೆಲೆಗೊಂಡಾಗ. ಪ್ರಾಣವು ಆಗ ಸತ್ಯವನ್ನು ತಿಳಿದುಕೊಳ್ಳುತ್ತದೆ, ಮತ್ತು ಆತ್ಮವು ಸತ್ಯವನ್ನು ನಂಬುತ್ತದೆ.

**ಮುಖ್ಯಾಂಶಗಳು :** ಮನುಷ್ಯನ ಬೀಳುವಿಕೆ ಆತ್ಮನೊಂದಿಗೆ (ಹವ್ವಳು) ಶುರುವಾಯಿತು. ನಂತರ ಪ್ರಾಣ (ಆದಮನು) ನಂತರ ದೇಹ (ಪಾಪವು ಪ್ರವೇಶಿಸಿದಾಗ). ಮನುಷ್ಯನನ್ನು ತಿರಿಗಿ ಯಥಾ ಸ್ಥಾನಕ್ಕೆ ತರುವುದು ಮಾರ್ಪಾಟಿನ ಕ್ರಮದಲ್ಲಿ ನಡೆಯುತ್ತದೆ. ಮೊದಲು ದೇಹ (ಪವಿತ್ರಾತ್ಮನು ಪ್ರವೇಶಿಸುತ್ತಾನೆ) ನಂತರ ಪ್ರಾಣ (ಸತ್ಯವನ್ನು ನೂತನಪಡಿಸುವಿಕೆ) ನಂತರ ಆತ್ಮ (ನಂಬುತ್ತದೆ).

ಯಾಕೋ 1:14,15 "ಆದರೆ ಪ್ರತಿಯೊಬ್ಬನು (ತಿರಿಗಿ ಹುಟ್ಟಿದ ವಿಶ್ವಾಸಿ) ತನ್ನ ಸ್ವಂತ (ಪ್ರಾಣ) ದುರಾಶೆ (ಆತ್ಮ) ಇಂದ ಎಳೆಯಲ್ಪಟ್ಟು (ಸೆರೆಹಿಡಿಯಲ್ಪಟ್ಟು) ಮರುಳುಗೊಂಡವನಾಗಿ ಶೋಧಿಸಲ್ಪಡುತ್ತಾನೆ. ಆಮೇಲೆ ದುರಾಶೆಯು (ಆತ್ಮ) ಗರ್ಭಧರಿಸಿ ಪಾಪವನ್ನು ಹೆರುತ್ತದೆ ; ಪಾಪವು ಸಂಪೂರ್ಣವಾದ ಮೇಲೆ ಮರಣವನ್ನು (ಆತ್ಮನು)ಹಡೆಯುತ್ತದೆ."

**ಗಮನಿಸು :** ಈ ವಾಕ್ಯವು ಬೇರೊಂದು ನಿಯಮ'ದ ಕಾರ್ಯಗಳನ್ನು ಸ್ಪಷ್ಟವಾಗಿ ವಿವರಿಸುತ್ತದೆ.

**ಕೆಳಗಣ ಮೂರು ವಾಕ್ಯಗಳು** ಅಬ್ರಹಾಮನು ದಾಸಿಯಿಂದ ಮಗನನ್ನು ಹೊಂದಲು ಸರಾಯಳು ಹೇಗೆ ಅವನ ಮೇಲೆ ದೊರೆತನ ನಡೆಸಿದಳೆಂಬದಕ್ಕೆ ನಿದರ್ಶನಗಳಾಗಿವೆ, ಆದರೆ ಅಂತ್ಯದಲ್ಲಿ ಅವಳು ದೇವರನ್ನು ನಂಬಿದಾಗ ಅಬ್ರಹಾಮನಿಗೆ ಅದೀನಳಾಗಿ ಆತನನ್ನು ಯಜಮಾನನೆಂದು ಕರೆದಳು.

ಆದಿ 15 : 1, 2 "ಅಬ್ರಹಾಮನ ಹೆಂಡತಿಯಾದ ಸರಾಯಳು ಅವನಿಂದ ಮಕ್ಕಳನ್ನು ಪಡೆಯಲಿಲ್ಲ" ಆಕೆಗೆ ಹಾಗರಳೆಂಬ ಐಗುಪ್ತ ದೇಶದ ದಾಸಿಯು ಇದ್ದಳು. ಆಗ ಸರಾಯಳು ಅಬ್ರಾಮನಿಗೆ – ಇಗೋ, ಮಕ್ಕಳನ್ನು ಹೆರದಂತೆ ಕರ್ತನು ನನಗೆ ಅಡ್ಡಿ ಮಾಡಿದ್ದಾನೆ. ಆದ್ದರಿಂದ ನೀನು ನನ್ನ ದಾಸಿಯ ಬಳಿಗೆ ಹೋಗು ; ಒಂದು ವೇಳೆ ಅವಳಿಂದ ನಾನು ಮಕ್ಕಳನ್ನು ಪಡೆಯ ಬಹುದು ಎಂದು ಬೇಡಿಕೊಂಡಳು. ಅಬ್ರಾಮನು ಸರಾಯಳ ಮಾತನ್ನು ಕೇಳಿದನು."

ಇಬ್ರಿ 11 : 11 "ಇದಲ್ಲದೇ ಸಾರಳು ಸಹ ವಾಗ್ದಾನ ಮಾಡಿದಾತನನ್ನು ನಂಬತಕ್ಕವನೆಂದು ತೀರ್ಮಾನಿಸಿ ತಾನು ಪ್ರಾಯ ಮೀರಿದವಳಾಗಿದ್ದರೂ

ಬದಲಾವಣೆಗೂ ಮತ್ತು ಹೃದಯ (ಆತ್ಮ) ಬದಲಾವಣಗೂ ಮಧ್ಯೆ ಹೆಚ್ಚು ಶ್ರಮೆಯಿರುತ್ತದೆ.


ಪ್ರಾಣವು ಅವನ ಮನಸ್ಸಿನಲ್ಲಿ ಬಲಹೀನವಾಗದಿದ್ದರೆ, ಆತ್ಮನ ಸ್ವಭಾವ ರೂಪಾಂತರಗೊಳ್ಳುವವರೆವಿಗೆ ಶ್ರಮೆ ಮುಂದುವರೆಯುತ್ತದೆ. ಆತ್ಮವು ದೈವಭಕ್ತಿಯ ಸ್ವಭಾವಕ್ಕೆ ಬಂದಕೂಡಲೇ ಮತ್ತು ಪ್ರಾಣಕ್ಕೆ ಅಧೀನವಾದಾಗ ಒಳ ಮನುಷ್ಯನು ಪರಿಶುದ್ಧನು. ಪ್ರಾಣಕ್ಕೆ ಸತ್ಯವುಗೊತ್ತಾದಾಗ, ಮತ್ತು ಆತ್ಮವು ಸತ್ಯವನ್ನು ನಂಬಿದಾಗ, ಒಳ ಮನುಷ್ಯನು ದೈವಭಕ್ತನಾಗಿದ್ದಾನೆ, ಮತ್ತು ಸ್ವತಂತ್ರತೆಯನ್ನು, ಶಾಂತಿ ಮತ್ತು ಸಂತೋಷಗಳನ್ನು ಪರಿಶುದ್ಧಾತ್ಮನಲ್ಲಿ ಅನುಭವಿಸುತ್ತಾನೆ.

**ಮನಸ್ಸಿನ ನಿಯಮ :**

ಮನಸ್ಸಿನಲ್ಲಿರುವ ತಿಳುವಳಿಕೆ ಆ ಮನಸ್ಸಿನ ನಿಯಮವಾಗಿದೆ. ಸತ್ಯದ ತಿಳುವಳಿಕೆಯನ್ನು ಹೊಂದಿರುವ ಪ್ರಾಣ ನೀತಿವಂತಿಕೆಯಲ್ಲಿದೆ, ಮತ್ತು ಒಳ್ಳೇ ಕೆಟ್ಟದ್ದರ ತಿಳುವಳಿಕೆ ಇರುವ ಪ್ರಾಣದ ಮನಸ್ಸು ಅನೀತಿಯಲ್ಲಿದೆ.

ಸತ್ಯದ ತಿಳುವಳಿಕೆಯಿರುವ ಮನಸ್ಸಿನ ವಿಶ್ವಾಸಿಯ ಪ್ರಾಣವು ಒಂಟಿಯಾಗಿದೆ, ಯಾಕೆಂದರೆ ಸತ್ಯವು ಬದಲಾಗುವುದಿಲ್ಲ. ಪ್ರಾಣದ ಏಕ ಮನಸ್ಸು, ಆತ್ಮವು ಸತ್ಯವನ್ನು ನಂಬುವಂತೆ ಮಾಡುತ್ತದೆ.

ವಿಶ್ವಾಸಿಯ ಪ್ರಾಣದ ಒಳ್ಳೇ ಕೆಟ್ಟದ್ದರ ತಿಳುವಳಿಕೆಯುಳ್ಳ ಮನಸ್ಸು ಎರಡಾಗಿರುತ್ತದೆ, ಆದುದರಿಂದ ಅದು ತೀರ್ಪು ಮಾಡುವಂತದ್ದಾಗಿದೆ ಪ್ರಾಣದ ಎರಡು ಮನಸ್ಸುಳ್ಳ ಸ್ವಭಾವ ತಾನು ಒಳ್ಳೆಯದೆಂದು ಅಂದುಕೊಂಡದ್ದರ ಪ್ರಕಾರ, ಮತ್ತು ತಾನು ಕೆಟ್ಟದ್ದೆಂದು ಅಂದುಕೊಂಡ ಪ್ರಕಾರ ತೀರ್ಪು ನಡೆಸುತ್ತದೆ, ಯಾಕೆಂದರೆ ಅವನಿಗೆ ಸತ್ಯವು ತಿಳಿದಿಲ್ಲ.
**ಗಮನಿಸು :** ಎರಡು ಮನಸ್ಸುಳ್ಳವರು **ಒಂದಾಗುವುದಿಲ್ಲ** ಯಾಕೆಂದರೆ ಅವರು ಒಳ್ಳೆಯದ್ಯಾವುದು, ಕೆಟ್ಟದ್ಯಾವುದೆಂದು ತೀರ್ಮಾನಿಸಲಾಗದೇ ಇರುವವರು.




ನಂಬಿಕೆಯಿಂದಲೇ ಗರ್ಭವತಿಯಾಗುವುದಕ್ಕೆ ಶಕ್ತಿಯನ್ನು ಹೊಂದಿ ಒಂದು ಮಗುವನ್ನು ಹೆತ್ತಳು"
1 ಪೇತ್ರ 3 : 5, 6 "ಯಾಕೆಂದರೆ, ಪೂರ್ವಕಾಲದಲ್ಲಿ ದೇವರ ಮೇಲೆ ನಂಬಿಕೆಯಿಟ್ಟು, ಪರಿಶುದ್ಧ ಸ್ತ್ರೀಯರೂ ಸಹ ಹೀಗೆಯೇ ತಮ್ಮನ್ನು ಅಲಂಕರಿಸಿಕೊಂಡರು ; ಅವರು ತಮ್ಮ ತಮ್ಮ ಗಂಡಂದಿರಿಗೆ ಅಧೀನರಾಗಿದ್ದರು, ಹಾಗೆಯೇ ಸಾರಳು ಅಬ್ರಹಾಮನಿಗೆ ವಿಧೇಯಳಾಗಿದ್ದು, ಅವನನ್ನು ಯಜಮಾನ ಎಂದು ಕರೆದಳು. ನೀವು ಸಾರಳ ಕುಮಾರ್ತೆಯರಾಗಿದ್ದೀರಲ್ಲಾ ; ನೀವು ಒಳ್ಳೆಯದನ್ನು ಮಾಡುವುದಾದರೆ ಯಾವ ಭೀತಿಗೂ ಗಾಬರಿಪಡುವುದಿಲ್ಲ."
ರೋಮ 14 : 17, 18 "ಯಾಕೆಂದರೆ, ತಿನ್ನುವುದೂ ಕುಡಿಯುವುದೂ ದೇವರ ರಾಜ್ಯವಲ್ಲ ; ಆದರೆ, ನೀತಿಯೂ ಸಮಾಧಾನವೂ ಪವಿತ್ರಾತ್ಮನಲ್ಲಿರುವ ಆನಂದವೂ ಆಗಿದೆ. ಕ್ರಿಸ್ತನ ಸೇವೆಯನ್ನು ಮಾಡುವವನು ಈ ವಿಷಯಗಳಲ್ಲಿ ದೇವರಿಗೆ ಮೆಚ್ಚುಗೆ ಯಾದವನಾಗಿಯೂ ಮನುಷ್ಯರಿಗೆ ಸಂಭಾವಿತನಾಗಿಯೂ ಇರುವನಷ್ಟೇ"
ಇಬ್ರಿ 10 : 38, 39 "ನೀತಿವಂತನು ನಂಬಿಕೆಯಿಂದಲೇ ; ಅವನು ಹಿಂದೆಗೆದರೆ ಅವನಲ್ಲಿ ನನ್ನ ಆತ್ಮವು ಸಂತೋಷಿಸುವುದಿಲ್ಲ. ನಾವಾದರೂ ಹಿಂದೆಗೆದವರಾಗಿ ನಾಶವಾಗುವವರಲ್ಲಿ ಅಲ್ಲ. ನಂಬುವವರಾಗಿ ಆತ್ಮ ರಕ್ಷಣೆಯನ್ನು ಹೊಂದುವವರಾಗಿದ್ದೇವೆ."

ಆದಮನು ಮತ್ತು ಹವ್ವಳು ದೇವರಿಂದ ಸತ್ಯದ ತಿಳುವಳಿಕೆಯನ್ನು ಹೊಂದಿದರು. ಆದರೆ, ಯಾವಾಗ ಅವರು ಸೈತಾನನಿಗೆ ಕಿವಿಗೊಟ್ಟರೋ ಆಗ ಒಳ್ಳೇ ಕೆಟ್ಟದ್ದರ ತಿಳುವಳಿಕೆ ಅವರಿಗಾಯಿತು. ಒಳ್ಳೇ ಕೆಟ್ಟದ್ದರ ತಿಳುವಳಿಕೆ ಮನಸ್ಸಿನ ನಿಯಮವಾಯಿತು, ಮತ್ತು ಮನುಷ್ಯನ ಆತ್ಮ ಕೆಟ್ಟಸ್ವಭಾವವುಳ್ಳದ್ದಾಯಿತು.

1 ಕೊರಿ 1 : 10 "...ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು ; ನಿಮ್ಮಲ್ಲಿ ಭೇದಗಳಿರಬಾರದು, ನೀವು ಒಂದೇ ಮನಸ್ಸು ಒಂದೇ ಅಭಿಪ್ರಾಯವುಳ್ಳವರಾಗಿದ್ದು, ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನನ್ನ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ."

ಯಾಕೋ 3 : 17, 18 "ಆದರೆ ಮೇಲಣಿಂದ ಬರುವ ಜ್ಞಾನವು ಮೊದಲು ನಿರ್ಮಲವಾದದ್ದು, ಆಮೇಲೆ ಸಮಾಧಾನಕರವಾದದ್ದು, ವಿನಯವುಳ್ಳದ್ದು, ಸುಲಭವಾಗಿ ಒಪ್ಪಿಕೊಳ್ಳುವಂತದ್ದು, ಕರುಣೆಯಿಂದಲೂ ಒಳ್ಳೇ ಫಲಗಳಿಂದಲೂ ತುಂಬಿರುವಂತದ್ದು ಆಗಿದೆ ; ಅದರಲ್ಲಿ ಪಕ್ಷಪಾತವೂ ಕಪಟವೂ ಇಲ್ಲ. ಸಮಾಧಾನ ಪಡಿಸುವವರಿಗೆ ಸಮಾಧಾನದಲ್ಲಿ ನೀತಿಯ ಫಲವು ಬಿತ್ತಲ್ಪಡುತ್ತದೆ."
ಯಾಕೋ 3 : 14–16 "ನಿಮ್ಮ ಹೃದಯದಲ್ಲಿ ಮರ್ಮ ಮತ್ಸರವು ಸ್ವಾರ್ಥಾಭಿಲಾಷೆಯೂ ತುಂಬಿರುವಾಗ ಜ್ಞಾನಿಗಳೆಂದು ಕೊಚ್ಚಿಕೊಳ್ಳಬೇಡಿ ; ಸತ್ಯಕ್ಕೆ ವಿರುದ್ಧವಾಗಿ ಸುಳ್ಳಾಡಬೇಡಿ ಅಂತ ಜ್ಞಾನ ದೇವರಿಂದ ಬಂದ ಜ್ಞಾನವಲ್ಲ ; ಅದು ಪ್ರಾಪಂಚಿಕವಾದುದು, ಪ್ರಾಕೃತವಾದುದು, ಪೈಶಾಚಿಕವಾದುದು. ಮರ್ಮ ಮತ್ಸರವೂ ಸ್ವಾರ್ಥಾಭಿಲಾಷೆಯೂ ಇರುವ ಕಡೆಗಳಲ್ಲೆಲ್ಲಾ ನಾನಾ ವಿಧವಾದ ಅಕ್ರಮಗಳೂ ದುಶ್ಚಟಗಳೂ ಇರುತ್ತವೆ.
ಮತ್ತ 5:37 "ಆದರೆ ನಿಮ್ಮ ಮಾತು ಹೌದಾಗಿದ್ದರೆ ಹೌದು, ಅಲ್ಲವಾಗಿದ್ದರೆ ಅಲ್ಲ ಎಂದಿರಲಿ ; ಯಾಕೆಂದರೆ ಇವುಗಳಿಗಿಂತ ಹೆಚ್ಚಾಗಿದದ್ದು ಕೆಟ್ಟದ್ದರಿಂದ (ಸೈತಾನನಿಂದ) ಬರುವಂತದ್ದು."
ಇಬ್ರಿ 5:12–14 "ನೀವು ಇಷ್ಟರೊಳಗೆ ಬೋಧಕರಾಗಿರಬೇಕಾಗಿದ್ದರೂ ಒಬ್ಬನು ನಿಮಗೆ ದೈವೋಕ್ತಿಗಳ ಮೂಲಪಾಠಗಳನ್ನು ತಿರಿಗಿ ಕಲಿಸಿ ಕೊಡಬೇಕಾಗಿದೆ ; ನೀವು ಹಾಲು ಕುಡಿಯ ತಕ್ಕವರೇ ಹೊರತು ಗಟ್ಟಿಯಾದ ಆಹಾರವನ್ನು ತಿನ್ನತಕ್ಕವರಲ್ಲ ಹಾಲು ಕುಡಿಯುವವನು ಕೂಸಿನಂತಿದ್ದು, ನೀತಿವಾಕ್ಯದಲ್ಲಿ

ಒಳ್ಳೇ ಕೆಟ್ಟದ್ದರ ಬೇಧವನ್ನು ಕಲಿತುಕೊಳ್ಳುವುದು ವಿಶ್ವಾಸಿಗೆ ಅಗತ್ಯ. ಒಳ್ಳೇದು ದೇವರಿಂದಾಗಿದೆ ಮತ್ತು ಕೆಟ್ಟದ್ದು ಪಿಶಾಚನಿಂದಾಗಿದೆ. ದೇವರು ಸತ್ಯವನ್ನು ತಿಳಿಸುತ್ತಾನೆ, ಪಿಶಾಚನು ಒಳ್ಳೇದು ಮತ್ತು ಕೆಟ್ಟದ್ದನ್ನು ತಿಳಿಸುತ್ತಾನೆ. ಸತ್ಯಕ್ಕೆ ಮನಸ್ಸನ್ನು ನೂತನಗೊಂಡಿರಿಸಿರುವ ವಿಶ್ವಾಸಿಯು ದೇವರಂತೆ ಒಳ್ಳೇ ಮನಸ್ಸನ್ನು ಹೊಂದಿದ್ದಾನೆ. ಒಳ್ಳೇ ಕೆಟ್ಟದ್ದರ ಮನಸ್ಸನ್ನು ಈಗಲೂ ಹೊಂದಿರುವ ವಿಶ್ವಾಸಿಯು ಪಿಶಾಚನಂತೆ ಕೆಟ್ಟ ಮನಸ್ಸನ್ನು ಹೊಂದಿದ್ದಾನೆ.

ವಿಶ್ವಾಸಿಯ ಮನಸ್ಸಿನ ಸ್ಥಿತಿ ಅವನ ಆತ್ಮನ ಸ್ಥಿತಿಯನ್ನು ತೀರ್ಮಾನಿಸುತ್ತದೆ. ಸತ್ಯವು ಅವನ ಮನಸ್ಸಿನ ನಿಯಮವಾಗಿದ್ದರೆ, ಆಗ ಸತ್ಯವನ್ನು ನಂಬುವ ಅವನ ಆತ್ಮ ಸರಿಯಾದುದ್ದನ್ನೇ ಮಾಡುತ್ತದೆ. ಇಂತ ವಿಶ್ವಾಸಿಯು ಯಾವಾಗಲೂ ಸತ್ಯವನ್ನೇ ಮಾತಾಡುತ್ತಾನೆ ಮತ್ತು ಮಾಡುತ್ತಾನೆ. ಹೇಗಾದರೂ ಒಳ್ಳೇ ಮತ್ತು ಕಟ್ಟದ್ದರ ತಿಳುವಳಿಕೆ ಈಗಲೂ ಅವನ ಮನಸ್ಸಿನ ನಿಯಮವಾಗಿದ್ದರೆ, ಆಗ ಒಳ್ಳೇದು ಮತ್ತು ಕೆಟ್ಟದ್ದನ್ನು ನಂಬುವ ಅವನ ಆತ್ಮ, ಒಳ್ಳೇದು ಮತ್ತು ಕೆಟ್ಟದ್ದು ಎರಡನ್ನೂ ಮಾಡುತ್ತದೆ. ಇಂತ ವಿಶ್ವಾಸಿಯು ಕಪಟಿಯಾಗಿದ್ದಾನೆ. ಯಾಕೆಂದರೆ, ಅವನು ಒಳ್ಳೇದನ್ನು ಮಾತಾಡಿ ಮಾಡಲೂ ಬಲ್ಲನು. ಹಾಗೆಯೇ ಕೆಟ್ಟದ್ದನ್ನೂ ಕೂಡ ಉದಾ : ಅವನು ಒಬ್ಬನ ವಿಷಯವಾಗಿ ಒಳ್ಳೇದನ್ನು ಹೇಳುತ್ತಾನೆ. ಮತ್ತು ಇನ್ನೊಬ್ಬರ ವಿಷಯಾವಾಗಿ ಕೆಟ್ಟದ್ದು ಹೇಳುತ್ತಾನೆ.

ವಾಕ್ಯದಲ್ಲಿ ಅಡಗಿರುವ ಸತ್ಯವು ಶಾರೀರಿಕ ಮನಸ್ಸುಳ್ಳ ವಿಶ್ವಾಸಿಗೆ ಆಗಲೇ ತಿಳಿದಿರುತ್ತದೆ. ಆದರೆ ಅವನು ಇನ್ನೂ ಒಳ್ಳೆ ಕೆಟ್ಟದರ ಬಗ್ಗೆ ಯೋಚಿಸುವುದರಿಂದ ಅವನ ಶಾರೀರಿಕ ಆತ್ಮ ಸತ್ಯಕ್ಕೆ ಅಧೀನವಾಗಲಾರದು. ಒಬ್ಬ ವಿಶ್ವಾಸಿಯು ಆತ್ಮೀಕ ಮನಸ್ಸುಳವನಾಗ ಬೇಕಾಗಿದ್ದರೆ ಒಂದೇ ಮಾರ್ಗ ; ಸತ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಅವನ 'ಒಳ್ಳೆ ಮತ್ತು ಕೆಟ್ಟ' ಯೋಚನೆಗಳನ್ನು ನಿಲ್ಲಿಸುವುದೇ. ಯಾವ ವ್ಯಕ್ತಿಯ ಪರಿಸ್ಥಿತಿಯ ಬಗ್ಗೆ ಅಥವಾ ಸುದ್ದಿಯ ಬಗ್ಗೆ ವಿಷಯವಾಗಿಯೇ ಆಗಲಿ ಒಳ್ಳೇಯದನ್ನಾದರೂ, ಕೆಟ್ಟದನ್ನಾದರೂ, ಯೋಚಿಸ ಬೇಡ. ಅದರ ಬಗ್ಗೆ 'ಏನೂ ಯೋಚಿಸಬೇಡ'. ಆದರೆ ಯಾವುದು ಸತ್ಯವೋ, ಪ್ರಾಮಾಣಿಕತೆಯುಳ್ಳದ್ದೋ, ಮತ್ತು ನ್ಯಾಯವೋ ಅದನ್ನು ಮಾತ್ರ ಯೋಚಿಸು. ನಂತರ ದೇವರ ವಾಕ್ಯಕ್ಕೆ ವಿರೋಧವಾದ ಎಲ್ಲಾ ಒಳ್ಳೆ ಮತ್ತು ಕೆಟ್ಟ ಯೋಚನೆಗಳನ್ನು ಬಿಸಾಡು. ಇದು ಮಾಡಿದರೆ ಪ್ರಾಣವು ಗೇಟು ಕಾಯುವವನ ಹಾಗೆ ಅವನ ಆತ್ಮವನ್ನು ಶಾರೀರಿಕ ಕ್ರಿಯೆಗಳಿಗೆ ಕಿವಿಗೊಡದ ಹಾಗೆ ಕಾಯುತ್ತದೆ. ಈ ಕಸರತ್ತು ಸಮಯ ಮತ್ತು ಸತತ ಪ್ರಯತ್ನವನ್ನು ತೆಗೆದುಕೊಳ್ಳ ಬಹುದು, ಆದರೆ ಒಬ್ಬ ವಿಶ್ವಾಸಿಯು ಎಚ್ಚರವಾಗಿ, ಚುರುಕಾಗಿ ಮತ್ತು ಬಿಡದೆ ಮುಂದುವರೆದರೆ, ಅವನ ಆತ್ಮವು ಪ್ರಶಾಂತವಾಗಿರುವುದನ್ನೂ ಸತ್ಯಕ್ಕೆ ಅಧೀನವಾಗಿರುವುದನ್ನೂ ಅನುಭವಿಸುತ್ತಾನೆ.
ವಿಶ್ವಾಸಿಯ ಮನಸ್ಸಿನಲ್ಲಿ ಯೋಚನೆಗಳು ಏಳಬಹುದು :

ಅನುಭವವಿಲ್ಲದವನಾಗಿದ್ದಾನೆ. ಹಾಗಾದರೆ ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಅಂದರೆ, ತಮ್ಮ ಜ್ಞಾನೇಂದ್ರಿಯವನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಒಳ್ಳೇದನ್ನು ಕೆಟ್ಟದ್ದನ್ನೂ ತಿಳಿದವರಿಗೋಸ್ಕರವಾಗಿದೆ."
ರೋಮ 8:6,7 "ಆದರೆ, ಶರೀರಕ್ಕನುಸಾರವಾದ ಮನಸ್ಸು ಮರಣ; ಆತ್ಮೀಕವಾದ ಮನಸ್ಸು, ಜೀವವು ಸಮಾಧಾನವೂ ಆಗಿದೆ. ಯಾಕೆಂದರೆ ಶರೀರಸಂಬಂಧವಾದ ಮನಸ್ಸು ದೇವರಿಗೆ ಶತ್ರುತ್ವವು. ಕಾರಣವೇನೆಂದರೆ, ಅಂತಹ ಮನಸ್ಸು ದೇವರ ನಿಯಮಕ್ಕೆ ಒಳಪಡುವುದಿಲ್ಲ; ಒಳಪಡುವುದಕ್ಕಾಗುವುದೂ ಇಲ್ಲ."
1 ಪೇತ್ರ 2:11 "... ನೀವು ನಿಮ್ಮ ಆತ್ಮಕ್ಕೆ (ತಿಳುವಳಿಕೆ) ವಿರೋಧವಾಗಿ ಯುದ್ಧ ಮಾಡುವ ಶಾರೀರಿಕ ದುರಾಶೆಗಳಿಗೆ (ಸ್ವಭಾವ) ದೂರವಾಗಿರಬೇಕೆಂದು. ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ."
ರೋಮ 1:18 "ಯಾಕೆಂದರೆ, ಸತ್ಯವನ್ನು ಅನೀತಿಯಲ್ಲಿ ತಡೆಹಿಡಿದ ಮನುಷ್ಯರ ಎಲ್ಲಾ ಭಕ್ತಿಹೀನತೆಗೆ (ಆತ್ಮದ) ಮತ್ತು ಅನೀತಿಗೆ (ಪ್ರಾಣ) ವಿರೋಧವಾಗಿ ದೇವರ ಕೋಪವು ಸ್ವರ್ಗದಿಂದ ತೋರಿಬರುತ್ತದೆ."
**ಗಮನಿಸು :** ಒಬ್ಬನು ಸುಳ್ಳು ಹೇಳಬಾರದೆಂದು ಮತ್ತು ಕಳ್ಳತನ, ಮೋಸ ಅಥವಾ ಹಾದರ ಮಾಡಬರದೆಂದು ಕೂಡ ಗೊತ್ತು. ಕ್ರೈಸ್ತರು ಇವುಗಳನ್ನು ಮಾಡಬಾರದೆಂದು ಬೈಬಲ್ ಹೇಳುವ ಅವಶ್ಯಕತೆಯಿದೆಯೇ ? ಹೌದು ಯಾಕೆಂದರೆ, ವಿಶ್ವಾಸಿಗಳು 'ಶಾರೀರಕ'ವಾಗಿ ಜೀವಿಸುವುದನ್ನು ಮುಂದುವರೆಸಿದರೆ, ನಿತ್ಯ ಜೀವವನ್ನು ಕಳೆದುಕೊಳ್ಳುತ್ತಾರೆ.
1 ಕೊರಿ 3 : 1–3 "ಸಹೋದರರೇ ನಾನಂತೂ ಆತ್ಮನಿಂದ ನಡೆಸಿಕೊಳ್ಳುವವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತನಾಡಲಾರದೆ ಪ್ರಾಪಂಚಿಕರೂ ಕ್ರಿಸ್ತನಲ್ಲಿ ಎಳೇ ಕೂಸುಗಳು ಆಗಿರುವಂತವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತನಾಡಬೇಕಾಯಿತು. ನಿಮಗೆ ಹಾಲು ಕುಡಿಸಿದೆನು, ಅನ್ನ ಕೊಡಲಿಲ್ಲ; ಯಾಕೆಂದರೆ ನಿಮಗೆ ಅನ್ನ ತಿನ್ನಲು ಶಕ್ತಿಯಿರಲಿಲ್ಲ, ಇಲ್ಲವೇ ಈಗಲಾದರೂ ಶಕ್ತಿಯಿಲ್ಲ, ಯಾಕೆಂದರೆ ನೀವು ಇನ್ನೂ ಪ್ರಾಪಂಚಿಕರಾಗಿದ್ದೀರಿ. ನಿಮ್ಮೊಳಗೆ ಹೊಟ್ಟೆ ಕಿಚ್ಚು, ಜಗಳ, ಭೇದಗಳು ಇರುವಲ್ಲಿ ನೀವು ಪ್ರಾಪಂಚಿಕರಾಗಿದ್ದು, ಮನುಷ್ಯರಂತೆ ನಡೆಯುತೀರಲ್ಲವೇ (ಪಾಪಿಗಳ ಹಾಗೆ) ?"
ಅನೇಕ ವಿಶ್ವಾಸಿಗಳು ತಾವು ಶಾರೀರಿಕ ಮತ್ತು ಆತ್ಮೀಯರಲ್ಲ ಎಂಬುದನ್ನು ಇನ್ನೂ ಅರಿಯದವರಾಗಿದ್ದಾರೆ. ಅವರು ಬೇರೆಯವರನ್ನು ತೀರ್ಪು ಮಾಡುವಾಗ ತಮ್ಮನ್ನು ತಾವೇ ತೀರ್ಪು ಮಾಡಿಕೊಳ್ಳುವುದರ ಬಗ್ಗೆ ಉದಾಸೀನರಾಗಿದ್ದಾರೆ, ಯಾಕೆಂದರೆ ಅವರೂ ಅದೇ ಪಾಪದಿಂದ ಅಪರಾಧಿಗಳಾಗಿದ್ದಾರೆ.
ಕೀರ್ತ 50 : 16, 17 "ಆದರೆ ಮನುಷ್ಯನಿಗೆ (ಶಾರೀರಿಕ ವಿಶ್ವಾಸಿ) ದೇವರು ಹೇಳುವುದೇನೆಂದರೆ – ನನ್ನ ನಿಯಮಗಳನ್ನು ಪ್ರಕಟಿಸುವುದು ನಿನಗೇನು ? ಇಲ್ಲವೇ ನನ್ನ ಒಡಂಬಡಿಕೆಯನ್ನು ನಿನ್ನ ಬಾಯಲ್ಲಿ ಉಚ್ಚರಿಸುವುದೇಕೆ ? ನೀನು ಶಿಕ್ಷಣವನ್ನು ಹಗೆ ಮಾಡಿ ನನ್ನ ವಾಕ್ಯಗಳನ್ನು ನಿನ್ನ ಹಿಂದೆ ಹಾಕುತ್ತೀಯಲ್ಲಾ."
ಲೂಕಾ 6 : 46 "ನನ್ನನ್ನು ನೀನು ಕರ್ತನೇ ಕರ್ತನೇ ಎಂದು ಕರೆದು ನಾನು ಹೇಳುವವುಗಳನ್ನು ನೀವು ಮಾಡದೇ ಇರುವುದು ಯಾಕೆ ?"
ಒಬ್ಬ ವಿಶ್ವಾಸಿಯ ಆಲೋಚನೆಗಳು ಸತ್ಯದ ಮೇಲೆ ಆಧಾರವಾಗಿಲ್ಲದಿರುವವರೆಗೂ ಆದರೆ ಒಳ್ಳೆಯದು ಮತ್ತು ಕೆಟ್ಟದರ ಮಧ್ಯೆ ತೂಗಾಡುತ್ತಿದ್ದರೆ, ಅವನ ಆತ್ಮ ಭಕ್ತಿಹೀನವಾಗಿಯೇ ಉಳಿಯುವುದು. ಉದಾ : ಶಾರೀರಿಕ ವಿಶ್ವಾಸಿಯು ಪ್ರಾಮಾಣಿಕನಾಗಿಯೂ (ಒಳ್ಳೆಯವ), ಅಪ್ರಮಾಣಿಕನಾಗಿಯೂ (ಕೆಟ್ಟವ) ಇರುತ್ತಾನೆ. ಅವನು ತನ್ನನ್ನು ತಾನೇ ನಂಬುವುದಿಲ್ಲ. ಮತ್ತು ಅವನನ್ನು ನಂಬುವಹಾಗಿಲ್ಲ.
**ಗಮನಿಸು :** ದೇವರಿಗೆ ಒಬ್ಬ ಒಳ್ಳೆಯವನೂ ಮತ್ತು ಕೆಟ್ಟವನೂ ಆಗಿರುವುದು ಒಪ್ಪುವುದಿಲ್ಲ.
ಪ್ರಕಾ 3 : 15, 16 "ನೀನು ತಣ್ಣಗೂ ಬೆಚ್ಚಗೂ ಅಲ್ಲದಿರುವ ನಿನ್ನ ಕ್ರಿಯೆಗಳನ್ನು ನಾನು ಬಲ್ಲೆನು ; ನೀನು ತಣ್ಣಗಾಗಲೀ (ಪಾಪಿ) ಇಲ್ಲವೇ ಬೆಚ್ಚಗಾಗಲೀ (ಆತ್ಮೀಕ) ಇರಬೇಕೆಂಬುದು ನನ್ನ ಇಷ್ಟವಾಗಿತ್ತು. ಆದರೆ ನೀನು ತಣ್ಣಗಾಗಲೀ (ಪಾಪಿ)

**ತನ್ನ ಸ್ವಂತ ಆತ್ಮನಿಂದ :**
ವಿಶ್ವಾಸಿಯ ಆತ್ಮದ ಸ್ವಭಾವವು ಅನೇಕ ವರ್ಷಗಳಲ್ಲಿ ಪಾಪದ ನಿಯಮದ ಕೆಳಗೆ ರಚಿಸಲ್ಪಟ್ಟಿತ್ತು. ಇದೇ ಒಳ್ಳೇ ಕೆಟ್ಟದರ ತಿಳುವಳಿಕೆ. ಅವನ ಆತ್ಮದ ಕೆಟ್ಟತನ, ಒಳ್ಳೆ ಮತ್ತು ಕೆಟ್ಟ ಯೋಚನೆಗಳನ್ನು ಅವನ ಪ್ರಾಣದಲ್ಲಿ ಎಬ್ಬಿಸುತ್ತದೆ. ಯೋಚನೆಗಳನ್ನು ಭೇದಿಸಿ, ಮತ್ತು ಹತೋಟಿಯಲ್ಲಿಟ್ಟುಕೊಳ್ಳುವುದು ಪ್ರಾಣಕ್ಕೆ ಸಾಧ್ಯವಾಗದಿದ್ದಲ್ಲಿ, ಹೆಚ್ಚು ಬಲವಂತನಾಗಿರುವ ಆತ್ಮನು ಪ್ರಾಣದ ಒಪ್ಪಿಗೆ ಇಲ್ಲದೆ ಅವುಗಳ ಮೇಲೆ ಕಾರ್ಯ ನಡೆಸುತ್ತಾನೆ.

**ವಾಯು ಮಂಡಲದ ದುರಾತ್ಮಗಳಿಂದ :**
ಈ ಯೋಚನೆಗಳನ್ನು ವಿಶ್ವಾಸಿಯ ಪ್ರಾಣದಲ್ಲಿ ಚಿತ್ರಗಳ ಮತ್ತು ಸಲಹೆಗಳ ರೂಪದಲ್ಲಿ ನೂಕಲಾಗುತ್ತದೆ. ನೂತನ ಗೊಳಿಸಿದ ಮನಸ್ಸಿನ ವಿಶ್ವಾಸಿಯು ದುರಾತ್ಮನ ಸಲಹೆಗಳಲ್ಲಿ ಸುಲಭವಾಗಿ ಸೇರಿಕೊಳ್ಳುವ ಸಂಭವವಿದೆ. ಪ್ರಾಣವು ಈ ಯೋಚನೆಗಳನ್ನು ಹತೋಟಿಯಲ್ಲಿಡದಿದ್ದರೆ, ಅವನ ಆತ್ಮವು ಪಾಪದ ಕಡೆಗೆ ಜಾರುತ್ತದೆ.

**ದೇವರ ವಾಕ್ಯದಿಂದ :**
ಈ ಯೋಚನೆಗಳು ಒಬ್ಬ ವಿಶ್ವಾಸಿಯ ಮನಸ್ಸನ್ನು ನೂತನ ಗೊಳಿಸಿ ಸತ್ಯದ ತಿಳುವಳಿಕೆಯನ್ನು ಹೊಂದುವಂತೆ ಮಾಡುತ್ತವೆ. ಸತ್ಯದ ತಿಳುವಳಿಕೆ ಪರಿಶುದ್ಧಾತ್ಮನಿಂದ ಪ್ರಕಟವಾದ ಹಾಗೆ ಇರುತದೆ. ನಂತರ ಆತ್ಮನನ್ನು ವಿಶ್ರಾಂತಿ ಮತ್ತು ಆನಂದದ ಕಡೆಗೆ ನಡೆಸುತ್ತದೆ.

**ದೇವರ ವಾಕ್ಯದಲ್ಲಿ ನಂಬಿಕೆ :**

ಯೇಸುವನ್ನು ತಮ್ಮ ಕರ್ತನನ್ನಾಗಿ ಒಪ್ಪಿಕೊಂಡ ಅನೇಕ ವಿಶ್ವಾಸಿಗಳು ಪರಿಶುದ್ಧಾತ್ಮನನ್ನು ಸ್ವೀಕರಿಸಿದಾಗ ಪಾಪದಿಂದ ಬಿಡುಗಡೆ ಹೊಂದಿದರು. ಪರಿಶುದ್ಧಾತ್ಮನು ಅವರಲ್ಲಿ ನೆಲೆಗೊಂಡಿರುವುದರಿಂದ ಅವರ ದೇಹಗಳು ದೇವರ ರಾಜ್ಯವಾದವು. ಮತ್ತು ಪಾಪದಲ್ಲಿದ್ದ ಒಳಮನುಷ್ಯರು ಈಗ ಆತ್ಮನಲ್ಲಿದ್ದಾರೆ. ಆದರೆ ಸ್ವಲ್ಪ ಕಾಲದ ನಂತರ "3 ರಿಂದ 4 ವರ್ಷಗಳು" ಹೆಚ್ಚು ಒಳಮನುಷ್ಯರು ಕ್ರಿಸ್ತನಲ್ಲಿ ಇನ್ನೂ ಎಳೇ ಕೂಸುಗಳಾಗಿದ್ದು, ಪಾಪ ಮಾಡುವವರಾಗಿದ್ದಾರೆ. ಅವರು ಪರಿಪಕ್ವವಾಗಿ ಪಾಪ ಮಾಡದ ದೇವರ ಪುತ್ರರಂತಾಗಿರಬೇಕಾಗಿದೆ. (ಲೂಕ 13 : 6–9 ರಲ್ಲಿ ಬರುಡಾದ ಅಂಜೂರದ ಮರದ ಸಾಮ್ಯವನ್ನು ಓದಿರಿ)

ನಂಬಿಕೆಯು ಆತ್ಮನ ಮೂಲವಾದದ್ದು (ಹೃದಯ ಮೂಲ) ಮತ್ತು ಮನಸ್ಸಿನ ಮೂಲವಾದದ್ದಲ್ಲ. ವಾಕ್ಯಗಳೊಂದಿಗೆ ಮಾನಸೀಕವಾಗಿ ಒಪ್ಪುವುದು ನಂಬಿಕೆಯಲ್ಲ. ಮತ್ತ 12 : 34, 35 ರಲ್ಲಿ "...

ಇಲ್ಲವೇ ಬಿಸಿಯಾಗಲೀ (ಆತ್ಮೀಕ) ಇಲ್ಲದೆ ಉಗುರುಬೆಚ್ಚಗಿರುವುದರಿಂದ (ಶಾರೀರಿಕ) ನಿನ್ನನ್ನು ಬಾಯೊಳಗಿನಿಂದ ಕಾರುವೆನು. (ನಿರಾಕರಿಸುವೆನು)."

ಜ್ಞಾನೋ 4 : 20 – 23 "ನನ್ನ ಮಗನೇ, ನನ್ನ ಮಾತುಗಳನ್ನು ಆಲಿಸು ; ನನ್ನ ನುಡಿಗಳಿಗೆ ಕಿವಿಗೊಡು. ಅವುಗಳು ನಿನ್ನ ಕಣ್ಣುಗಳಿಗೆ (ನಿನ್ನ ಮನಸ್ಸು) ತಪ್ಪಿಹೋಗದೇ ಇರಲಿ ; ಅವುಗಳು ನಿನ್ನ ಹೃದಯದ (ಆತ್ಮ) ಮಧ್ಯದಲ್ಲಿಟ್ಟುಕೋ. ಯಾಕೆಂದರೆ ಅವುಗಳನ್ನು ಕಂಡುಕೊಳ್ಳುವವರಿಗೆ ಅವು ಜೀವವೂ ದೇಹಕ್ಕೆಲ್ಲಾ ಆರೋಗ್ಯವೂ ಆಗಿವೆ. ಎಲ್ಲಾ ಜಾಗ್ರತೆಯಿಂದ (ಮನಸ್ಸಿನ) ನಿನ್ನ ಹೃದಯವನ್ನು (ಆತ್ಮ) ಕಾಪಾಡಿಕೋ ; ಯಾಕೆಂದರೆ ಜೀವ ಧಾರೆಗಳು ಅದರೊಳಗಿನಿಂದ ಹರಡುವವು."

ಜ್ಞಾನೋ 16 : 32 "ಧೀರ್ಘಶಾಂತನು ಶೂರರಿಗಿಂತಲೂ ತನ್ನ ಮನಸ್ಸನ್ನು ಆಳುವವನು (ಪ್ರಾಣ) ; ಪಟ್ಟಣವನ್ನು ಗೆದ್ದವನಿಗಿಂತಲೂ ಉತ್ತಮನು"

ಮಾರ್ಕ 7 : 21 – 23 "ಯಾಕೆಂದರೆ ಮನುಷ್ಯರ ಹೃದಯದೊಳಗಿನಿಂದ (ಆತ್ಮ) ಹೊರಡುವಂಥದ್ದು, ಅಂದರೆ ಕೆಟ್ಟ ಆಲೋಚನೆಗಳು ವ್ಯಭಿಚಾರಗಳು, ಹಾದರಗಳು, ಕೊಲೆಗಳು, ಕಳ್ಳತನಗಳು, ದುರಾಶೆ, ಕೆಟ್ಟತನ, ಮೋಸ, ಕಾಮಾಭಿಲಾಷೆ, ಕೆಟ್ಟದೃಷ್ಟಿ, ದೇವದೂಷಣೆ, ಗರ್ವ, ಬುದ್ಧಿಗೇಡಿತನ. ಈ ಎಲ್ಲಾ ಕೆಟ್ಟವುಗಳು ಒಳಗಿನಿಂದ (ಆತ್ಮ) ಬಂದು, ಮನುಷ್ಯನನ್ನು ಹೊಲೆ ಮಾಡುತ್ತವೆ ಅಂದನು."

1 ಪೇತ್ರ 5 : 8, 9 "ಸ್ವಸ್ಥ ಚಿತ್ತರಾಗಿರ್ರಿ, ಎಚ್ಚರವಾಗಿರ್ರೀ ಯಾಕೆಂದರೆ ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹನಂತೆ ಯಾರನ್ನು ನುಂಗಲಿ ಎಂದು ಹುಡುಕುತ್ತಾನೆ. ನೀವು ನಂಬಿಕೆಯಲ್ಲಿ (ಅದನ್ನು ಸತ್ಯಕ್ಕೆ ಅಧೀನ ಮಾಡಿರಿ) ದೃಢವಾಗಿದ್ದು, ಅವನನ್ನು ಎದುರಿಸಿರಿ. (ಪ್ರತಿಯೊಂದು ಆಲೋಚನೆಯನ್ನು ಸೆರೆಯಾಗಿಸಿರಿ) ಲೋಕದಲ್ಲಿರುವ ನಿಮ್ಮ ಸಹೋದರರಿಗೂ ಅಂತಹ ಬಾಧೆಗಳೇ ಸಂಭವಿಸುತ್ತದೆ ಎಂದು ನಿಮಗೆ ತಿಳಿದಿದೆಯಲ್ಲಾ."

2 ತಿಮೋ 2:25,26 "ಎದುರಿಸುವವರನ್ನು ಸಾತ್ವೀಕತ್ವದಿಂದ ತಿದ್ದುವವನು ಆಗಿರಬೇಕು. ಒಂದು ವೇಳೆ ದೇವರು ಆ ಎದುರಿಸುವವರಲ್ಲಿ ಪಶ್ಚಾತ್ತಾಪವನ್ನುಂಟು ಮಾಡಿ, ಸತ್ಯದ ತಿಳುವಳಿಕೆಯನ್ನು ಅವರಿಗೆ ಕೊಟ್ಟಾನು, ಮತ್ತು ಸೈತಾನನ ಉರ್ಲಿಗೆ ಬಿದ್ದು, ಅವನ ಇಷ್ಟದಿಂದ ಸೆರೆ ಒಯ್ಯಲ್ಪಟ್ಟವರಾದ ಇವರು ಒಂದುವೇಳೆ ಎಚ್ಚೆತ್ತಾರು."

ಯಾಕೋ 1:26 "ನಿಮ್ಮಲ್ಲಿ ಭಕ್ತನೆಂದೆನಿಸಿಕೊಳ್ಳುವ ಯಾವನಾದರೂ (ಪ್ರಾಣ) ತನ್ನ ನಾಲಿಗೆಗೆ ಕಡಿವಾಣ ಹಾಕದೇ ತನ್ನ ಹೃದಯವನ್ನು (ತನ್ನ ಆತ್ಮ) ಮೊಸಗೊಳಿಸುವವನಾದರೆ, ಅವನ ಭಕ್ತಿ ನಿಷ್ಪ್ರಯೋಜನವಾಗಿದೆ."


**ಉದಾಹರಣೆ :** ದೇವರ ವಾಕ್ಯವು ಹೇಳುವುದೇನೆಂದರೆ, ವಿಶ್ವಾಸಿಗಳು ಪಾಪ ಮಾಡಬಾರದು ಎಂದು, ಆದರೆ, ಅವರು ಹೇಳುವುದು "ಪಾಪ ಮಾಡದೇ ಇರುವುದು ಅಸಾಧ್ಯ." ಇಂತ ಪ್ರಾಣವು ಸುಳ್ಳನ್ನು ಹೇಳುವುದಕ್ಕಾಗಿ ತನ್ನ ಸ್ವಂತ ಆತ್ಮವನ್ನು ಮೋಸಪಡಿಸಿಕೊಳ್ಳುತ್ತದೆ. ಪ್ರಾಣಕ್ಕೆ ದೇವರೊಂದಿಗೆ ಇಲ್ಲದಿರುವುದರಿಂದ ದೇವರ ವಾಕ್ಯಕ್ಕೆ ಅವನ ಆತ್ಮನ ಮೇಲೆ ಪ್ರಭಾವ ಇಲ್ಲದೇ ಹೋಗುತ್ತದೆ. (ಮಾರ್ಕ 7:13).

ರೋಮ 8:1,2 "ಆದ್ದರಿಂದ ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ. ಇವರು ಶರೀರಕ್ಕನುಸಾರವಾಗಿ ಅಲ್ಲ. ಆತ್ಮನಿಗನುಸಾರವಾಗಿಯೇ ನಡೆಯುವವರಾಗಿದ್ದಾರೆ. ಯಾಕೆಂದರೆ ಜೀವವನ್ನುಂಟು ಮಾಡುವ ಆತ್ಮನ ನಿಯಮವು ಕ್ರಿಸ್ತ ಯೇಸುವಿನಲ್ಲಿ ನನ್ನನ್ನು ಪಾಪ ಮತ್ತು ಮರಣದ ನಿಯಮದಿಂದ ಬಿಡಿಸಿತು."

**ಕ್ರಿಸ್ತನಲ್ಲಿ ಎಳೆ ಕೂಸು**
1 ಕೊರಿ 3 : 1–3 "ಸಹೋದರರೇ, ನಾನಂತೂ ಆತ್ಮನಿಂದ ನಡೆಸಿಕೊಳ್ಳುವವರಿಗೆ

ಹೃದಯದಲ್ಲಿ ಸಮೃದ್ಧೀಯಾಗಿರುವುದನ್ನೇ ಬಾಯಿ ಮಾತನಾಡುತ್ತದೆ. ಒಳ್ಳೇ ಮನುಷ್ಯನು ಹೃದಯದ ಬೊಕ್ಕಸದಿಂದ ಒಳ್ಳೇಯವುಗಳನ್ನುತರುತ್ತಾನೆ ;"

ನೋಡಿ ಕಲಿಯಿರಿ !




ದೇವರ ರಾಜ್ಯದಲ್ಲಿ ಕ್ರಿಸ್ತನಲ್ಲಿನ ಎಳೇ ಕೂಸು ದೇವರ ವಾಕ್ಯದಲ್ಲಿ ನಂಬಿಕೆಯಿಟ್ಟು ಜೀವಿಸಬೇಕು. ಇದು ಪರಿಶುದ್ಧಾತ್ಮನ ಸಹಾಯದಿಂದ ಸಂಪೂರ್ಣವಾಗಿ ಸಾಧ್ಯ. ಕ್ರಿಸ್ತನಲ್ಲಿ ಎಳೇ ಕೂಸು ಅನೇಕ ವಾಕ್ಯಗಳನ್ನು ತಿಳಿದಾಗ್ಯೂ ಅವನಿಗೆ ವಿಧೇಯನಾಗಲು ನಂಬಿಕೆಯಿಲ್ಲ, ಅವನ ನಾಲಿಗೆಯನ್ನು ಅವನು ಹತೋಟಿಯಲ್ಲಿಡಲಾರನು.

**ಉದಾ :** ವಾಕ್ಯವು ಅವನಿಗೆ ಸುಳ್ಳು ಹೇಳಬೇಡ ಎಂದು ಹೇಳಿದರೂ ಅವನು ಸುಳ್ಳು ಹೇಳುವುದನ್ನು ಬಿಡುವುದಿಲ್ಲ. ಅವನು ಸುಳ್ಳು ಹೇಳುವುದಕ್ಕೆ ಕಾರಣವೇನೆಂದರೆ, ಅವನಲ್ಲಿ ದೇವರು ಹೇಳಿದುದನ್ನು ನಂಬುವಷ್ಟು ದೇವರನ್ನು ನಂಬಿಲ್ಲ. ಕ್ರಿಸ್ತನಲ್ಲಿನ ಎಳೇ ಕೂಸು ವಾಕ್ಯಗಳನ್ನು ಮಾತನಾಡಬಹುದು. ಮತ್ತು ಇತರರಿಗೆ ಬೋಧಿಸಬಹುದು. ಆದರೆ ಅವನು ತಾನೇ ದೇವರ ವಾಕ್ಯವನ್ನು ಅನುಮಾನಿಸುತ್ತಾ ಇರಬಹುದು. ಇಂತಹ ವಿಶ್ವಾಸಿಯು ವಾಸ್ತವವಾಗಿ ಒಬ್ಬ ಕಪಟಿ. ಯಾಕೆಂದರೆ ಅವನ ಆತ್ಮವು ನಂಬಿಕೆಗೂ ಅಪನಂಬಿಕೆಗೂ ಮಧ್ಯ ಓಲಾಡುತ್ತದೆ.

ಕ್ರಿಸ್ತನಲ್ಲಿನ ಎಳೇ ಕೂಸು ಒಳ್ಳೇ ಕೆಟ್ಟದರ ಬಗ್ಗೆ ಈಗಲೂ ಎಚ್ಚರವಾಗಿರುವುದರಿಂದ ಅವನು ಎರಡು ಮನಸ್ಸುಳ್ಳವನಾಗಿದ್ದಾನೆ, ಮತ್ತು ಅವನ ಆತ್ಮವು ಅನುಮಾನದಿಂದ ತುಂಬಿದೆ. ಉದಾ : ಯಾರಾದರೂ ಅವನಿಗೆ ಸುಳ್ಳು ಹೇಳಿದರೆ, ಅವನು ಉದ್ರೇಕ ಗೊಳ್ಳುತ್ತಾನೆ, ಆದರೆ ಅದೇ ತರಃ ಸಂದರ್ಭದಲ್ಲಿ ಅವನೂ ಕೂಡ

ತಕ್ಕಂತೆ ನಿಮ್ಮ ಸಂಗಡ ಮಾತನಾಡದೇ ಪ್ರಾಪಂಚಿಕರು, ಕ್ರಿಸ್ತನಲ್ಲಿ ಎಳೆ ಕೂಸು ಆಗಿರುವಂತವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತನಾಡ ಬೇಕಾಯಿತು. ನಿಮಗೆ ಹಾಲು ಕುಡಿಸಿದೆನು, ಅನ್ನ ಕೊಡಲಿಲ್ಲ ; ಯಾಕೆಂದರೆ ಅನ್ನ ತಿನ್ನುವುದಕ್ಕೆ ನಿಮಗೆ ಶಕ್ತಿಯಿರಲಿಲ್ಲ. ಇಲ್ಲವೇ ಈಗಲಾದರೂ ಶಕ್ತಿ ಇಲ್ಲ ; ಯಾಕೆಂದರೆ ನೀವು ಇನ್ನೂ ಪ್ರಾಪಂಚಿಕರಾಗಿದ್ದೀರಿ. ನಿಮ್ಮೊಳಗೆ ಹೊಟ್ಟೆ ಕಿಚ್ಚು, ಜಗಳ, ಬೇಧಗಳು ಇರುವರಲ್ಲಿ ನೀವು ಪ್ರಾಪಂಚಿಕರಾಗಿದ್ದು, ಮನುಷ್ಯರಂತೆ (ಪಾಪಿಗಳಂತೆ) ನಡೆಯುತ್ತೀರಲ್ಲವೇ?
1 ತಿಮೋ 3 : 6 "ಅವನು ಹೊಸಬನಾಗಿರಬಾರದು (ಕೂಸು); ಅಂತವನಾದರೆ ಉಬ್ಬಿಕೊಂಡು ಸೈತಾನನ ಶಿಕ್ಷಾವಧಿಗೆ ಒಳಗಾಗುವನು"
ಕೀರ್ತ 119 : 113 "ವ್ಯರ್ಥವಾದ ಯೋಚನೆಗಳನ್ನು (ಎರಡು ಮನಸ್ಸು) ಹಗೆ ಮಾಡುತ್ತೇನೆ ; ಆದರೆ ನಿನ್ನ ನ್ಯಾಯ ಪ್ರಮಾಣವನ್ನು ಪ್ರೀತಿ ಮಾಡುತ್ತೇನೆ."

**ಕ್ರಿಸ್ತನಲ್ಲಿ ಎಳೆ ಕೂಸಾಗಿರುವವನು ಬದಲಾವಣೆಹೊಂದಿ ದೇವರ ಪುತ್ರನಾಗಬೇಕು**
ರೋಮ 12 : 2 "ಮತ್ತು ಇಹಲೋಕವನ್ನು ಅನುಸರಿಸದೇ, ಉತ್ತಮವಾದದ್ದೂ, ಮೆಚ್ಚಿಗೆಯಾದದ್ದೂ, ಪರಿಪೂರ್ಣವಾದದ್ದೂ ಆಗಿರುವ ದೇವರ ಚಿತ್ತವೇನೆಂದು ನೀವು ವಿಚಾರಿಸಿ ತಿಳಿದುಕೊಳ್ಳುವಂತೆ ನೂತನ ಮನಸ್ಸನ್ನು (ಪ್ರಾಣ) ಹೊಂದಿಕೊಂಡು, ರೂಪಾಂತರ (ಆತ್ಮನಲ್ಲಿ) ಗೊಂಡವರಾಗಿರ್ರಿ."
ಇಬ್ರಿ 11 : 6 "ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ ; ಯಾಕೆಂದರೆ ದೇವರ ಬಳಿಗೆ ಬರುವವನು ದೇವರು ಇದ್ದಾನೆ ಮತ್ತು ತನ್ನನ್ನು ಜಾಗ್ರತೆಯಾಗಿ ಹುಡುಕುವವನಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ."
ಇಬ್ರಿ 12 : 14 "ಎಲ್ಲರ ಸಂಗಡ ಸಮಾಧಾನದಿಂದಿರುವುದನ್ನೂ, ಪರಿಶುದ್ಧತೆಯನ್ನೂ ಅನುಸರಿಸಿರಿ ; ಪರಿಶುದ್ಧತೆ ಇಲ್ಲದೆ ಯಾವನೂ ಕರ್ತನನ್ನು ಕಾಣುವುದಿಲ್ಲ."
ಇಬ್ರಿ 3 : 19 "ಅವರು ಸೇರಲಾರದೆ ಹೋದದ್ದು (ಆತನ ವಿಶ್ರಾಂತಿಯಲ್ಲಿ) ಅಪನಂಬಿಕೆಯಿಂದಲೇ (ಅನುಮಾನ) ಎಂದು ತಿಳಿದುಕೊಳ್ಳುತ್ತೇವೆ."

**ಒಬ್ಬ ದೇವರ ಪುತ್ರನು**
ರೋಮ 14 : 17 "ಯಾಕೆಂದರೆ ತಿನ್ನುವುದೂ, ಕುಡಿಯುವುದೂ (ಭೌತಿಕ ಸಾಮಗ್ರಿಗಳು) ದೇವರ ರಾಜ್ಯವಲ್ಲ ; ಆದರೆ ನೀತಿಯೂ, ಸಮಾಧಾನವೂ, ಪವಿತ್ರಾತ್ಮನಲ್ಲಿರುವ ಆನಂದವೂ ಆಗಿದೆ."
1 ಯೋಹಾ 2 : 5 "ಯಾವನಾದರೂ ಆತನ ವಾಕ್ಯವನ್ನು ಕೈಗೊಂಡು ನಡೆದರೆ, ಅವನಲ್ಲಿ ನಿಜವಾಗಿ ದೇವರ ಪ್ರೀತಿಯು ಪರಿಪೂರ್ಣವಾಗಿದೆ. ಇದರಿಂದಲೇ ನಾವು ಆತ್ಮನಲ್ಲಿದ್ದೇವೆಂಬುದನ್ನು (ಕ್ರಿಸ್ತನಲ್ಲಿ) ತಿಳಿದುಕೊಳ್ಳುತ್ತೇವೆ."
1 ಯೋಹಾ 3 : 7 "ಚಿಕ್ಕಮಕ್ಕಳೇ ಯಾರೂ ನಿಮ್ಮನ್ನ ಮೋಸ ಗೊಳಿಸದೇ ಇರಲಿ. ಆತನು (ದೇವರು) ಹೇಗೆ ನೀತಿವಂತನಾಗಿದ್ದಾನೋ (ಪಾಪ ಮಾಡದವನು) ಹಾಗೆಯೇ ನೀತಿಯನ್ನನುಸರಿಸುವವನು ನೀತಿವಂತನಾಗಿದ್ದಾನೆ."
ಎಫೆ 4 : 13 "ಹೀಗೆ ನಾವೆಲ್ಲರೂ ನಂಬಿಕೆ ಅನ್ಯೋನ್ಯತೆಯಲ್ಲಿಯೂ ದೇವ ಕುಮಾರನ ಜ್ಞಾನದಲ್ಲಿಯೂ ಪರಿಪೂರ್ಣ ಮನುಷ್ಯನಾಗುವುದಕ್ಕೆ ಕ್ರಿಸ್ತನ ಪರಿಪೂರ್ಣತೆಯ ನೀಳದ ಪ್ರಮಾಣಕ್ಕೆ ಮುಟ್ಟುವೆವು."

**ಕ್ರಿಸ್ತನ ದೇಹವು :**
ಎಫೆ 1 : 13, 14 "...ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆ ಎಂಬ ಸತ್ಯವಾಕ್ಯವನ್ನು ಕೇಳಿ, ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು, ಸಹಾ ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು (ಖಚಿತ ಪಡಿಸುವಿಕೆ) ಹೊಂದಿದಿರಿ. ಆತನ ಮಹಿಮೆಯ ಸ್ತುತಿಗೋಸ್ಕರ, ಕೊಂಡುಕೊಂಡ ಸ್ವಾಸ್ಥ್ಯದವರಿಗೆ (ಹಳೇ ದೇಹ) ವಿಮೋಚನೆಯಾಗುವತನಕ ಆತನು (ಪವಿತ್ರಾತ್ಮನು) ನಿಮ್ಮ ಬಾಧ್ಯತೆಗೆ (ಹೊಸದೇಹ) ಸಂಚಕಾರನಾಗಿದ್ದಾನೆ."

ಸುಳ್ಳು ಹೇಳುತ್ತಾನೆ. ಈ ಎರಡೂ ಗುಣಗಳ ಸ್ವಭಾವ (ಒಳ್ಳೇಯದ್ದು ಮತ್ತು ಕೆಟ್ಟದ್ದು) ಪ್ರಾಣದಲ್ಲಿದ್ದು ಅವನ ಆತ್ಮವನ್ನು ಅಪನಂಬಿಕೆಯಲ್ಲಿ ಇರಿಸುತ್ತದೆ. ಕ್ರಿಸ್ತನಲ್ಲಿರುವ ಎಳೇ ಕೂಸು ಸುಳ್ಳು ಹೇಳಬಲ್ಲದು. ಹಾಗೆಯೇ ಸತ್ಯವನ್ನು ಮಾತನಾಡಬಲ್ಲದು, ಇದು ಸಮ್ಮತವಲ್ಲ.

ಅಪನಂಬಿಕೆ ಇರುವುದರಿಂದ, ಕ್ರಿಸ್ತನಲ್ಲಿನ ಎಳೆ ಕೂಸುಗಳು, ಶೋಧನೆಗೆ ವಿರುದ್ಧವಾಗಿ ಬಲಹೀನರಾಗಿದ್ದಾರೆ. ಅವರು ಆತ್ಮನಲ್ಲಿದ್ದಾಗ್ಯೂ ಪಾಪಿಗಳಂತೆ ಜೀವಿಸುತ್ತಾರೆ. ಮತ್ತು ದೇವಪುತ್ರರಂತೆ ಅಲ್ಲ. ಪಾಪಿಗಳಂತೆಯೇ ಅವರು ಕೂಡ ಶರೀರಾಧೀನ ಕ್ರಿಯೆಗಳನ್ನು ಮಾಡುತ್ತಾರೆ, ಯಾಕೆಂದರೆ ಸತ್ಯವು ವಾಕ್ಯದಲ್ಲಿ ಪ್ರಕಟವಾಗಿರುವಂತೆ ಅವರು ಅದನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಬೈಬಲ್ ಅವರಿಗೆ ಸುಳ್ಳು ಹೇಳುವುದನ್ನೂ ಮೋಸ ಮಾಡುವುದನ್ನೂ, ಪಿಸುಗುಟ್ಟುವುದನ್ನೂ ಮತ್ತು ಒಡಕು ಹುಟ್ಟಿಸುವುದನ್ನೂ ನಿಲ್ಲಿಸೆಂದು ಹೇಳುತ್ತದೆ, ಆದರೆ, ಯಾವುದೋ ಕಾರಣದಿಂದ ಬಹುಭಾಗ ವಿಶ್ವಾಸಿಗಳು ದೇವರ ಚಿತ್ತ ನಿಜವಾಗಿ ಏನೆಂಬುದನ್ನು ಅರಿಯದೇ ಹೋಗುತ್ತಾರೆ. ಅವರು ತಮ್ಮ ಇಡೀ ಜೀವನವನ್ನು ನಿದ್ರಾವಸ್ತೆಯಲ್ಲಿ ಕಳೆಯುತ್ತಾರೆ. ಅವರ ಅಪನಂಬಿಕೆಯ ಆತ್ಮದ ಆಶೆಗಳನ್ನು ನೆರವೇರಿಸುತ್ತಾರೆ, ಮತ್ತು ಈ ಪಾಪಗಳನ್ನು ಸಾಯಿಸುವುದಕ್ಕಾಗಿ ಪಶ್ಚಾತ್ತಾಪ ಪಡುವುದೇ ಇಲ್ಲ.

ವಾಕ್ಯದ ಸುಳ್ಳು ಬೋಧನೆಗಳ ಮೂಲಕ ಮತ್ತು ತಪ್ಪು ವ್ಯಾಕ್ಯಾನಗಳ ಮೂಲಕ ಕ್ರಿಸ್ತನಲ್ಲಿನ ಎಳೇ ಕೂಸು ಪಾಪವನ್ನು ನಿಲ್ಲಿಸಿಬಿಡುವುದು ಅಸಾಧ್ಯವೆಂದು ನಂಬುತ್ತದೆ. ಸತ್ಯವು ನೋವನ್ನುಂಟು ಮಾಡಬಹುದು, ಆದರೆ ಅದು ಸ್ವತಂತ್ರರನ್ನಾಗಿ ಮಾಡುತ್ತದೆ ! ಸತ್ಯವನ್ನು ಎದುರಿಸಿದಾಗಲೇ – ದೇವರ ಮಕ್ಕಳು ಪಾಪ ಮಾಡುವುದಿಲ್ಲ – ಪ್ರಾಣವು ಆತ್ಮದ ಅಪನಂಬಿಕೆಯನ್ನು ಕಂಡುಹಿಡಿಯುತ್ತದೆ.

ಈ ಅಂಶವನ್ನು ದೃಢಪಡಿಸುವುದಕ್ಕಾಗಿ ಕೆಳಗಿರುವ ಪ್ರಶ್ನೆಯನ್ನು ಉತ್ತರಿಸಿರಿ : ಒಬ್ಬ ಪಾಪಿಯು ಪಾಪ ಮಾಡುತ್ತಾನೆ, ಒಬ್ಬ ದೇವರ ಪುತ್ರನು ಏನು ಮಾಡುತ್ತಾನೆ ?

**ನಿನ್ನ ಉತ್ತರಕ್ಕೆ ಸರಿ ಹಾಕು,**

**ಅವನೂ ಕೂಡ ಪಾಪ ಮಾಡುತ್ತಾನೆ ......** ☐

**ಅವನು ಪಾಪ ಮಾಡುವುದಿಲ್ಲ ......** ☐

1 ಯೋಹಾ 3:6 "ಆತನಲ್ಲಿ ನೆಲೆಗೊಂಡಿರುವವನು ಪಾಪ ಮಾಡನು; ಪಾಪ ಮಾಡುವವನು ಆತನನ್ನು ಕಂಡವನೂ ಅಲ್ಲ, ತಿಳಿದವನೂ ಅಲ್ಲ."

1 ಪೇತ್ರ 1 : 4, 5 "ಲಯ ಕಳಂಕ ಕ್ಷಯಗಳಿಲ್ಲದ ಬಾಧ್ಯತೆಗೂ ನಮ್ಮನ್ನು ತಿರುಗಿ ಹುಟ್ಟಿಸಿದ್ದಾನೆ. ಈ ಬಾಧ್ಯತೆಯು ನಿಮಗೋಸ್ಕರ ಸ್ವರ್ಗದಲ್ಲಿ ಇಟ್ಟಿದೆ. ಅಂತ್ಯ ಕಾಲದಲ್ಲಿ ಪ್ರಕಟವಾಗುವುದಕ್ಕೆ ಸಿದ್ಧವಾಗಿರುವ ರಕ್ಷಣೆಗೆ, ನಂಬಿಕೆಯ ಮುಖಾಂತರ ದೇವರು ನಿಮ್ಮನ್ನು ಬಲದಿಂದ ಕಾಯುತ್ತಾನೆ."

1 ಕೊರಿ 15:34 "ನೀತಿಗಾಗಿ ಎಚ್ಚರಗೊಳ್ಳಿರಿ, ಪಾಪ ಮಾಡಬೇಡಿರಿ ; ಯಾಕೆಂದರೆ, ಕೆಲವರಿಗೆ ದೇವರ ವಿಷಯವಾದ ಜ್ಞಾನವೇ ಇಲ್ಲ ; ನಾನು ಇದನ್ನು ನಾಚಿಕೆಪಡಿಸುವುದಕ್ಕಾಗಿ ಹೇಳುತ್ತೇನೆ."
ಎಫೆ 5:14 "ಆದ್ದರಿಂದ – ನಿದ್ರೆ ಮಾಡುವವನೇ ಎಚ್ಚರವಾಗು, ಸತ್ತವರಿಂದ ಎದ್ದೇಳು ; ಕ್ರಿಸ್ತನು ನಿನಗೆ ಪ್ರಕಾಶಕೊಡುವನು ಎಂದು ಆತನು ಹೇಳುತ್ತಾನೆ."
ಲೂಕ 24 : 45 "ತರುವಾಯ (ಯೇಸು) ಅವರು ಬರಹಗಳನ್ನು ಅರ್ಥಮಾಡಿಕೊಳ್ಳುವಂತೆ ಆತನು ಅವರ ಬುದ್ಧಿಯನ್ನು ತೆರೆದನು."
ಯಾಕೋ 4:8 "ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು. ಪಾಪಿಗಳೇ, ನಿಮ್ಮ ಕೈಗಳನ್ನು ಶುಚಿ ಮಾಡಿಕೊಳ್ಳಿರಿ ; ಎರಡು ಮನಸ್ಸುಳ್ಳವರೇ, ನಿಮ್ಮ ಹೃದಯಗಳನ್ನು ನಿರ್ಮಲ ಮಾಡಿಕೊಳ್ಳಿರಿ."
**ಗಮನಿಸು :** ಮನಸ್ಸನ್ನು ನೂತನಗೊಳಿಸಿ ಆತ್ಮನನ್ನು ಶುದ್ಧೀಕರಿಸುವುದೇ ದೇವರ ಸಮೀಪಕ್ಕೆ ಸರಿಯುವುದು. ಈ ಪುಸ್ತಕದ ಆದ್ಯಂತವಾಗಿ ಈ ಸತ್ಯವನ್ನು ವಿವರಿಸಲಾಗಿದೆ.

2 ತಿಮೋ 3:5 "ಭಕ್ತಿಯ ವೇಷವಿದ್ದು, ಅದರ ಬಲವನ್ನು ಅಲ್ಲಗಳೆಯುವವರು ಆಗಿರುವರು ; ಇಂತವರಿಂದ ಪ್ರತ್ಯೇಕವಾಗಿರು."
2 ಯೋಹಾ 1:8,9 "ನಾವು ಪ್ರಯಾಸಪಟ್ಟು ಮಾಡಿದವುಗಳನ್ನು ಕಳೆದುಕೊಳ್ಳದೇ ಪ್ರತಿಫಲವನ್ನು ಹೊಂದುವಂತೆ ನಿಮ್ಮನ್ನು ನೀವೇ ನೋಡಿಕೊಳ್ಳಿರಿ. ಕ್ರಿಸ್ತನ ಬೋಧನೆಯಲ್ಲಿ ನೆಲೆಗೊಳ್ಳದೇ ಅದನ್ನು ಅತಿಕ್ರಮಿಸುವವನಿಗೆ ದೇವರಿಲ್ಲ; ಕ್ರಿಸ್ತನ ಬೋಧನೆಯಲ್ಲಿ ನೆಲೆಗೊಂಡಿರುವವನಿಗೆ ತಂದೆಯು ಮಗನೂ ಇದ್ದಾರೆ."
ಎಫೆ 5:14 "...ನಿದ್ರೆ ಮಾಡುವವನೇ, ಎಚ್ಚರವಾಗು, ಸತ್ತವರೊಳಗಿಂದ ಎದ್ದೇಳು ; ಕ್ರಿಸ್ತನು ನಿನಗೆ ಪ್ರಕಾಶಕೊಡುವನು..."

1 ತಿಮೋ 6:3,4 "ಯಾವನಾದರೂ ಬೇರೆ ವಿಧವಾದ ಉಪದೇಶವನ್ನು ಮಾಡಿ ಅಂದರೆ, ನಮ್ಮ ಕರ್ತನಾದ ಯೇಸುಕ್ರಿಸ್ತನ ಸ್ವಸ್ತವಾದ ಮಾತುಗಳಿಗೂ, ಭಕ್ತ್ಯನುಸಾರವಾದ ಬೋಧನೆಗೂ ಸಮ್ಮತಿಸದೇ ಹೋದರೆ, ಅಂತವನು ಒಂದನ್ನೂ ತಿಳಿಯದೆ ಕುತರ್ಕ ವಾಗ್ವಾದಗಳನ್ನು ಮಾಡುವ ಬ್ರಾಂತಿಯಲ್ಲಿದ್ದು, ಅಹಂಕಾರಿಯಾಗಿದ್ದಾನೆ."

ತಿರುಗಿ ಹುಟ್ಟಿದ ಯಾವ ವಿಶ್ವಾಸಿಯೇ ಆಗಲೀ, ಪಾಪ ಮಾಡುವುದನ್ನು ನಿಲ್ಲಿಸುವುದು ಸಾಧ್ಯವಿಲ್ಲ ಎಂದು ಹೇಳುವುದಾದರೆ, ಅವನು ಅಪನಂಬಿಕೆಯಲ್ಲಿದ್ದಾನೆ, ಮತ್ತು ಸುಳ್ಳನ್ನು ನಂಬುವುದರಿಂದ ಮೋಸ ಹೋಗಿದ್ದಾನೆ. ಪಾಪವನ್ನು ಕಾಪಾಡಿಕೊಳ್ಳುವುದು ದೇವರನ್ನು ತಿರಸ್ಕರಿಸುವುದೂ ಮಾತ್ರವಲ್ಲ, ಅದರೆ ಆತನ ಪವಿತ್ರಾತ್ಮವನ್ನು ಆತಂಕಪಡಿಸುತ್ತಾನೆ. ತಿರಿಗಿ ಹುಟ್ಟಿದ ಒಬ್ಬ ವಿಶ್ವಾಸಿಯು ಪಾಪದಿಂದ ಬಿಡುಗಡೆ ಹೊಂದಿದ್ದಾನೆಂದು ಸಾಧಿಸಿದರೆ, ಸತ್ಯವನ್ನು ನಂಬಿ ಪಾಪ ಮಾಡುವುದನ್ನು ಏಕೆ ನಿಲ್ಲಿಸಬಾರದು? ಅವನು ನಿಷ್ಪ್ರಯೋಜಕವಾಗಿ ಪವಿತ್ರಾತ್ಮನನ್ನು ಹೊಂದಿದನೇನೋ?

1 ಯೋಹ 3:8 "ಪಾಪಮಾಡುವವನು ಸೈತಾನನಿಗೆ ಸಂಬಂಧಪಟ್ಟವನಾಗಿದ್ದಾನೆ ; ಯಾಕೆಂದರೆ ಆದಿಯಿಂದಲೂ ಸೈತಾನನು ಪಾಪ ಮಾಡುವವನಾಗಿದ್ದಾನೆ. ಆದ್ದರಿಂದ ದೇವಕುಮಾರನು ಸೈತಾನನ ಕೆಲಸಗಳನ್ನು ಲಯ ಮಾಡುವುದಕ್ಕೋಸ್ಕರವೇ ಪ್ರತ್ಯಕ್ಷನಾದನು."

1 ಯೋಹಾ 3:9 "ದೇವರಿಂದ ಹುಟ್ಟಿದವನು ಪಾಪ ಮಾಡುವವನಾಗಿರಲಾರನು ; ಯಾಕೆಂದರೆ ಅವನ ಬೀಜವು ಅವನಲ್ಲಿ ನೆಲೆಗೊಂಡಿದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡಲಾರನು."
ಮತ್ತ 7:18 "ಒಳ್ಳೆ ಮರವು ಕೆಟ್ಟ ಫಲವನ್ನು ಕೊಡಲಾರವು ; ಇಲ್ಲವೇ ಕೆಟ್ಟ ಮರವು ಒಳ್ಳೇ ಫಲವನ್ನು ಕೊಡಲಾರದು."

**ಗಮನಿಸು** : ಮೇಲೆಕಂಡ ವಾಕ್ಯಗಳನ್ನು ಯಾರಾದರೂ ಒಪ್ಪದೇ ಎದುರಿಸುವುದಾದರೆ, ಅವನಲ್ಲಿ 'ಬೇರೊಂದು ಆತ್ಮವಿದೆ' ಮತ್ತು ದೇವಪುತ್ರನ ಆತ್ಮವಲ್ಲ.

ದೇವರ ವಾಕ್ಯದಲ್ಲಿರುವ ಸತ್ಯದ ವಿಷಯವಾಗಿ ಮನಸ್ಸನ್ನು ನೂತನಗೊಳಿಸಿದರೆ ಮಾತ್ರ ಅತ್ಮನು ಸತ್ಯವನ್ನು ನಂಬಲು ಬದಲಾವಣೆ ಹೊಂದುತ್ತದೆ. ಹಿಂದಿನ ಅಧ್ಯಾಯಗಳಲ್ಲಿ ಬೈಬಲ್‌ನಲ್ಲಿರುವ ದೈವ ಭಕ್ತಿಯ ಬೋಧನೆಗಳನ್ನು ಪ್ರಕಟಿಸಲಾಯಿತು. ಅಧ್ಯಯನ ಮಾಡುವುದು ಪ್ರಾಣದ ಜವಾಬ್ದಾರಿಕೆ. ಅವನ ಆತ್ಮನಲ್ಲಿ ನಂಬಿಕೆ ಬಂದು ಶಾರೀರಿಕ ಸ್ವಭಾವದ ಪ್ರತಿಯೊಂದು ಕ್ರಿಯೆಯನ್ನು ನಿಲ್ಲಿಸುವವರೆಗೆ ದೇವರೊಂದಿಗೆ ಮಾತನಾಡುವುದು ಮತ್ತು ತತ್ವಗಳನ್ನು ಧ್ಯಾನ ಮಾಡುವುದು, ಇವುಗಳನ್ನು ಪ್ರಾಣವೂ ಮಾಡಬೇಕು. ಸ್ಥಿರಚಿತ್ತರಾಗಿರುವುದರ ಮೂಲಕ, ಪ್ರಾರ್ಥನೆ ಮತ್ತು ವಿಜ್ಞಾಪನೆಗಳೊಂದಿಗೆ ಆತ್ಮನ ಶುದ್ಧೀಕರಣವನ್ನು ಪರಿಶುದ್ಧಾತ್ಮನ ನಡೆಸುವಿಕೆಯಿಂದ ಸಾಧಿಸಬಹುದು. ಒಂದು ಪ್ರಾಣವನ್ನು ನಿಲ್ಲಿಸಬೇಕಾದರೆ, ವಿಶ್ವಾಸಿಯ ಪ್ರಯತ್ನವಿಲ್ಲದೇ ಪ್ರಾರ್ಥನೆಯೊಂದೇ ಮಾಡಿದರೆ ಸಾಲದು. ಯಾಕೆಂದರೆ, ಅಲ್ಲಿ ಪಶ್ಚಾತ್ತಾಪವಿಲ್ಲ.

ಒಳ ಮನುಷ್ಯನು ದೇವಪುತ್ರನಾಗ ಬೇಕಾದರೆ, ಅವನ ಪ್ರಾಣವು ಕ್ರಿಸ್ತನ ಮನಸ್ಸನ್ನು ಹೊಂದಬೇಕು. ಮತ್ತು ಅವನ ಆತ್ಮವು ಕ್ರಿಸ್ತನ ದೈವಭಕ್ತ ಸ್ವಭಾವವನ್ನು ಹೊಂದಿದಾಗ ಅವನು ಕ್ರಿಸ್ತನ ಹೋಲಿಕೆಗೆ ಸಮನಾಗಿರುವುದರಿಂದ ಅವನ ಆತ್ಮನಲ್ಲಿ ನಂಬಿಕೆ ಇದೆ – ಶೋಧನೆಗಳನ್ನು ತಡೆಗಟ್ಟುವ ಶಕ್ತಿ.

2 ಕೊರಿ 3:16,17 "ಆದಾಗ್ಯೂ ಅವರ ಹೃದಯವು ಕರ್ತನ ಕಡೆಗೆ ತಿರುಗಿಕೊಂಡಾಗಲೇ ಆ ಮುಸುಕು ತೆಗೆಯಲ್ಪಡುವುದು. ಕರ್ತನು ಆ ಆತ್ಮನೇ ಆಗಿದ್ದಾನೆ ; ಕರ್ತನ ಆತ್ಮನು ಯಾರಲ್ಲಿದ್ದಾನೋ ಅವರಿಗೆ ಬಿಡುಗಡೆಯುಂಟು."

1 ಯೋಹಾ 5:18–20 "ದೇವರಿಂದ ಹುಟ್ಟಿದವನು ಪಾಪಮಾಡುವವನಲ್ಲವೆಂಬುದು ನಮಗೆ ಗೊತ್ತಿದೆ. ದೇವರಿಂದ ಹುಟ್ಟಿದವನು ತನ್ನನ್ನು ತಾನು ಕಾಪಾಡಿಕೊಳ್ಳುವನು ; ಕೆಡುಕನು ಅವನನ್ನು ಮುಟ್ಟುವುದಿಲ್ಲ. ನಾವು ದೇವರಿಗೆ

ಯೋಹ 7:17 "ಯಾವನಾದರೂ ಆತನ ಚಿತ್ತದಂತೆ ಮಾಡಿದರೆ, ಈ ಬೋಧನೆಯು ದೇವರದೋ ಅಥವಾ ನನ್ನಷ್ಟಕ್ಕೆ ನಾನೇ ಹೇಳುತ್ತೇನೆ ಎಂಬುದು ಅವನಿಗೆ ತಿಳಿಯುವುದು."
ಯೋಹ 8:31–34 "...ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡಿದ್ದರೆ, ನಿಜವಾಗಿಯೂ ನೀವು ನನ್ನ ಶಿಷ್ಯರಾಗಿರುವಿರಿ... ನೀವು ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು... ಪಾಪ ಮಾಡುವವನು ಪಾಪಕ್ಕೆ ಗುಲಾಮನಾಗಿದ್ದಾನೆ."

**ಗಮನಿಸು** : ಪ್ರತಿ ಬೀಜವು ತನ್ನ ಸ್ವಭಾವಕ್ಕೆ ತಕ್ಕಂತೆ ಫಲಕೊಡುತ್ತದೆ. ಹಾಗೆಯೇ ದೇವರ ಬೀಜವಾದ ದೇವರ ವಾಕ್ಯಕೂಡ ದೇವರ ಪುತ್ರರನ್ನು ಉಂಟು ಮಾಡುತ್ತದೆ.

2 ಕೊರಿ 11:4 "ಯಾಕೆಂದರೆ ನಿಮ್ಮ ಬಳಿಗೆ ಬರುವವನು (ಸೈತಾನನಾಗಲೀ ಅಥವಾ ವಿಶ್ವಾಸಿಯಾಗಲಿ) ನಾವು ಸಾರದಿದ್ದ ಬೇರೊಬ್ಬ ಯೇಸುವನ್ನು ಪ್ರಕಟಿಸುವಾಗಲೂ ನೀವು ಹೊಂದದೇ ಇದ್ದ ಬೇರೊಂದು ಆತ್ಮವನ್ನು ಹೊಂದುವಾಗಲೂ ಅಂಗೀಕರಿಸದಿದ್ದ ಬೇರೊಂದು ಸುವಾರ್ತೆಯನ್ನು ಸ್ವೀಕರಿಸುವಾಗಲೂ ನೀವು ಚೆನ್ನಾಗಿ ಸಹಿಸಿಕೊಳ್ಳುತ್ತಿದ್ದೀರಿ."

**ಗಮನಿಸು** : ಇಂತಹ ಸುವಾರ್ತೆಗಳೊಂದಿಗೂ ಮತ್ತು ಬೋಧನೆಗಳೊಂದಿಗೂ ನೀವು ಹೋಗಬಾರದು !

ಯಹೋ 1:8 "ಈ ಪುಸ್ತಕದಲ್ಲಿ ಬರೆದಿರುವ (ದೇವರ ವಾಕ್ಯ) ನ್ಯಾಯ ಪ್ರಾಮಣವು ನಿನ್ನ ಬಾಯಿಂದ ಹೋಗಬಾರದು ; ಅದರಲ್ಲಿ ಬರೆದಿರುವ ಪ್ರಕಾರವೇ ಕೈಗೊಂಡು ನಡೆಯುವ ಹಾಗೆ (ಮಾಡುವ ಹಾಗೆ) ರಾತ್ರಿ ಹಗಲು (ಯಾವಾಗಲೂ) ಅದನ್ನು ಧ್ಯಾನಿಸಬೇಕು. ಆಗ ನಿನ್ನ ಮಾರ್ಗವನ್ನು ಸಫಲ ಮಾಡಿಕೊಂಡು ಮಹಾ ಜಯಶಾಲಿಯಾಗುವಿ."
ಜ್ಞಾನೋ 4:20–24 "ನನ್ನ ಮಗನೇ (ಪ್ರಾಣ) ನನ್ನ ಮಾತುಗಳನ್ನು ಆಲಿಸು ; ನನ್ನ ನುಡಿಗಳಿಗೆ ಕಿವಿಗೊಡು. ಅವುಗಳು ನಿನ್ನ ಕಣ್ಣುಗಳಿಗೆ ತಪ್ಪಿಹೋಗದೇ ಇರಲಿ! ಅವುಗಳನ್ನು ನಿನ್ನ ಹೃದಯದ (ಆತ್ಮ) ಮಧ್ಯದಲ್ಲಿ ಇಟ್ಟುಕೋ ಯಾಕೆಂದರೆ ಅವುಗಳನ್ನು ಕಂಡುಕೊಳ್ಳುವವರಿಗೆ ಅವು ಜೀವವೂ ಅವರ ದೇಹಕ್ಕೆಲ್ಲಾ (ದೇಹ) ಅವು ಆರೋಗ್ಯವೂ ಆಗಿವೆ. ಎಲ್ಲಾ ಜಾಗ್ರತೆಯಿಂದ ನಿನ್ನ ಹೃದಯವನ್ನು ಕಾಪಾಡಿಕೋ ; ಯಾಕೆಂದರೆ ಜೀವಧಾರೆಗಳು ಅದರೊಳಗಿನಿಂದ ಹೊರಡುವವು. ವಕ್ರಬಾಯನ್ನು ನಿನ್ನಿಂದ ತೆಗೆದು ಬಿಡು ; ಕೆಟ್ಟ ತುಟಿಗಳನ್ನು ನಿನ್ನಿಂದ ದೂರ ಇಡು."

**ಗಮನಿಸು** : ಪ್ರಾರ್ಥನೆಯು ಒಬ್ಬ ದೇವರಿಗೆ ಆತನ ಸಹಾಯವನ್ನು ಕೋರುವಾಗ ಮಾಡುವ ಪ್ರಮಾಣ. ಇದರ ಅರ್ಥವೇನೆಂದರೆ ವಿಶ್ವಾಸಿಯು ಕೂಡ ಅವನು ಕೇಳಿದ್ದನ್ನು ನೆರವೇರಿಸಲು ತನಗೆ ಸಾಧ್ಯವಾದದ್ದನ್ನು ಮಾಡುತ್ತಾನೆ.

ಎಫೆ 3:16,17 "...ನಿಮಗೆ ತನ್ನ ಮಹಿಮೆಯ ಐಶ್ವರ್ಯಕ್ಕನು ಸಾರವಾಗಿ ಆತನ ಆತ್ಮನ ಮೂಲಕ ಆಂತರ್ಯದಲ್ಲಿ ವಿಶೇಷ ಬಲವನ್ನು ಅನುಗ್ರಹಿಸುವ ಹಾಗೆಯೂ ಕ್ರಿಸ್ತನು (ಸ್ವಾಭವ) ನಿಮ್ಮ ಹೃದಯಗಳಲ್ಲಿ (ಆತ್ಮ) ನಂಬಿಕೆಯ ಮೂಲಕ ವಾಸಿಸುವಂತೆಯೂ ..."
ಎಫೆ 6:10,11 "...ಕರ್ತನಲ್ಲಿಯೂ ಆತನ ಅತ್ಯಧಿಕವಾದ ಶಕ್ತಿಯಲ್ಲಿಯೂ ಬಲಗೊಳ್ಳಿರಿ. ನೀವು ಸೈತಾನನ ತಂತ್ರೋಪಾಯಗಳನ್ನು ಎದುರಿಸಿ ನಿಲ್ಲುವುದಕ್ಕೆ ಶಕ್ತರಾಗುವಂತೆ ದೇವರ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ."


ಸಂಬಂಧಪಟ್ಟವರಾಗಿದ್ದೇವೆಂದು ಲೋಕವೆಲ್ಲವೂ ಕೆಟ್ಟತನದಲ್ಲಿ ಬಿದ್ದಿದೆ ಎಂದೂ ನಮಗೆ ಗೊತ್ತಿದೆ. ದೇವರ ಮಗನು ಬಂದು, ನಾವು ಸತ್ಯವಾಗಿರುವಾತನನ್ನು ಅರಿತುಕೊಳ್ಳುವ ಹಾಗೆ ನಮಗೆ ತಿಳುವಳಿಕೆಯನ್ನು ಕೊಟ್ಟಿದ್ದಾನೆಂಬುದು ನಮಗೆ ಗೊತ್ತದೆ, ಮತ್ತು ನಾವು ಆತನ ಮಗನಾದ ಯೇಸು ಕ್ರಿಸ್ತನಲ್ಲಿ ಇರುವವರಾಗಿ ಸತ್ಯವಾಗಿರುವಾತನಲ್ಲಿದ್ದೇವೆ. ಈತನೇ ಸತ್ಯದೇವರು ನಿತ್ಯ ಜೀವವು ಆಗಿದ್ದಾನೆ."

ಎಫೆ 4:13,14 "ಹೀಗೆ ನಾವೆಲ್ಲರೂ ನಂಬಿಕೆಯ ಅನ್ಯೋನ್ಯತೆಯಲ್ಲಿಯೂ ದೇವಕುಮಾರನ ಜ್ಞಾನದಲ್ಲಿಯೂ ಪರಿಪೂರ್ಣ ಮನುಷ್ಯನಾಗುವುದಕ್ಕೆ ಕ್ರಿಸ್ತನ ಪರಿಪೂರ್ಣತೆಯ ನೀಳದ ಪ್ರಮಾಣಕ್ಕೆ ಮುಟ್ಟುವೆವು. ನಾವು ಇನ್ನು ಮೇಲೆ ಹೊಂಚು ಹಾಕುವವರ ವಂಚನೆಗೂ ಮನಷ್ಯನ ಕಪಟದಿಂದಲೂ, ಮೋಸದ ಉಪಾಯ ಮಾಡುವ ತಂತ್ರದಿಂದಲೂ ಬೋಧನೆಯ ಪ್ರತಿಯೊಂದು ಗಾಳಿಯಿಂದಲೂ ಬಡಿಯಲ್ಪಟು ಅತ್ತಿತ್ತ ನೂಕಾಡಲ್ಪಡುವ ಬಾಲಕರಂತೆ ಇರಬಾರದು."

1 ಯೋಹಾ 3:7 "ಚಿಕ್ಕಮಕ್ಕಳೇ ಯಾರೂ ನಿಮ್ಮನ್ನು ಮೋಸ ಗೊಳಿಸದೇ ಇರಲಿ. ಆತನು (ದೇವರು) ಹೇಗೆ ನೀತಿವಂತನಾಗಿದ್ದಾನೋ ಹಾಗೆಯೇ ನೀತಿಯನ್ನನುಸರಿಸುವವನು (ಒಬ್ಬ ದೇವರ ಮಗನು) ನೀತಿವಂತನಾಗಿದ್ದಾನೆ"


# ಸಾರಂಶ

## ಕ್ರಿಸ್ತನ ಸುವಾರ್ತೆ





**ಕ್ರಿಸ್ತನ ಸುವಾರ್ತೆ**
ಯೇಸು ಪಾಪದ ದೇಹದಲ್ಲಿ ಹುಟ್ಟಿದನು. ಆತನು ಸೈತಾನನ್ನೂ, ಪಾಪವನ್ನೂ ಜಯಿಸಿದನು, ಮತ್ತು ಶಿಲುಬೆಗೇರಿಸಲ್ಪಟ್ಟನು. ಶಿಲುಬೆಯ ಮೇಲೆ ಸೈತಾನನೂ ಮತ್ತು ಪಾಪವು ತೀರ್ಪು ಹೊಂದಿದವು. ಯೇಸು ಸತ್ತವರೊಳಗಿನಿಂದ ಎದ್ದಾಗ ಮರಣವೂ ಕೂಡ ಜಯಿಸಲ್ಪಟ್ಟಿತು. ಕ್ರಿಸ್ತನು ಈಗ ಹೊಸದೇಹದಲ್ಲಿ ಜೀವಿಸುತ್ತಾನೆ. ಅದರಲ್ಲಿ ಪಾಪ ಮತ್ತು ಮರಣಗಳಿಲ್ಲ.

## ರಕ್ಷಣೆಯ ಮಾದರಿ





**ರಕ್ಷಣೆಯ ಮಾದರಿ :**
ಯೇಸುವಿನ ರಕ್ತದಿಂದಾಗಿ ಒಳ ಮನುಷ್ಯನು ಪಾಪಗಳ ಕ್ಷಮಾಪಣೆ ಹೊಂದುತ್ತಾನೆ, ಮತ್ತು ಯೇಸುವಿನ ದೇಹದಿಂದಾಗಿ ಪರಿಶುದ್ಧಾತ್ಮನು ಒಬ್ಬ ವಿಶ್ವಾಸಿಯ ದೇಹದಲ್ಲಿ ಪ್ರವೇಶಿಸುತ್ತಾನೆ. ಮತ್ತು ಅವನು ನೂತನ ಮನುಷ್ಯನಾಗುತ್ತಾನೆ. ಒಳ ಮನುಷ್ಯನು ಈಗ ಹಳೆಯ ಪಾಪದ ಜೀವನವನ್ನು ಬಿಟ್ಟು ಬಿಡಬೇಕು, ಮತ್ತು ತನ್ನನ್ನು ತಾನು ಪಾಪ ವಿಲ್ಲದ ನೂತನ ಜೀವನವನ್ನು ಧರಿಸಿಕೊಳ್ಳಬೇಕು.

## ಶುದ್ಧೀಕರಣ




**ಶುದ್ಧೀಕರಣ :**
ದೈವಭಕ್ತಿಯಿಲ್ಲದ ಆತ್ಮ ಪ್ರಾಣದ ಮೇಲೆ ದೊರೆತನ ನಡೆಸುವುದರಿಂದ, ಪ್ರಾಣವು ವಾಕ್ಯಕ್ಕೆ ವಿಧೇಯನಾಗಲು ಸಾಧ್ಯವಿಲ್ಲ. ಪರಿಶುದ್ಧಾತ್ಮವು ವಾಕ್ಯಕ್ಕೆ ವಿಧೇಯನಾಗುವ ಇಚ್ಛೆಯನ್ನು ಪ್ರಾಣಕ್ಕೆ ಕೊಡುತ್ತದೆ. ನಂಬಿಕೆಯು ಆತ್ಮನಲ್ಲಿ ಪ್ರವೇಶಿಸಿ ಪ್ರಾಣಕ್ಕೆ ಅಧೀನನಾಗುವಂತೆ ಮಾಡುವವರೆವಿಗೆ ಆತ್ಮಕ್ಕೆ ಶ್ರಮೆಯಾಗುತದೆ. ಆತ್ಮವು ದೈವ ಭಕ್ತಿಯನ್ನು ಹೊಂದಿದ ಕೂಡಲೇ ಪ್ರಾಣವು ವಾಕ್ಯಕ್ಕೆ ವಿಧೇಯನಾಗಲು ಸ್ವತಂತ್ರವಾಗಿದೆ.

## ಸುವಾರ್ತೆಯ ಶಕಿ




**ಸುವಾರ್ತೆಯ ಶಕ್ತಿ :**
ಸುವಾರ್ತೆಯನ್ನು ಸಾರುವುದರಲ್ಲಿ ಮನುಷ್ಯನನ್ನು ಪಾಪದಿಂದ ಬಿಡುಗಡೆ ಮಾಡುವ ಶಕಿಯಿದೆ. ನಂಬುವವನು ಪಾಪ ಮಾಡುವ ಹಳೇ ಮನುಷ್ಯನಿಂದ ಪಾಪ ಮಾಡದ ಹೊಸಮನುಷ್ಯನಿಗೆ ರೂಪಾಂತರಗೊಳ್ಳುತ್ತಾನೆ.

**ಸಮಾಪ್ತಿ :**

**ಜಯಪ್ರದ ಜೀವನ ನಡೆಸಿರಿ :**

ಈ ಪುಸ್ತಕದ ಉದ್ದೇಶ ಪರಿಶುದ್ಧರನ್ನು ಪರಿಪೂರ್ಣಗೊಳಿಸುವುದೇ ಆಗಿದೆ – ದೇವರಂತಿದ್ದು, ದೇವರಂತೆ ವರ್ತಿಸುವುದು. 'ಶರೀರದ' ಕ್ರಿಯೆಗಳನ್ನು ಸಾಯಿಸುವುದು, ನಿಮ್ಮ ದುರಾಶೆಗಳು ಮತ್ತು ಭಕ್ತಿಹೀನ ಮನೋವೃತ್ತಿಗಳು. ನೀನು ಪರಿಪೂರ್ಣನಾಗುವ ವಿಧಾನ ಇದೇ.

ಸಾಯಿಸುವುದರಲ್ಲಿ ಮೊದಲನೇ ಹೆಜ್ಜೆಯೇನೆಂದರೆ, ಒಬ್ಬ ದೇವರ ಮಗನು ಪಾಪ ಮಾಡುವುದಿಲ್ಲ ಎಂಬ ಸತ್ಯಾಂಶವನ್ನು ಒಪ್ಪಿಕೊಳ್ಳುವುದೇ. ಈ ಸತ್ಯಾಂಶವನ್ನು ಅರಿತ ಕೂಡಲೇ ಪರಿಶುದ್ಧಾತ್ಮವು ನಿನ್ನ ಶುದ್ಧೀಕರಣ ವಿಧಾನವನ್ನು ತತ್‌ಕ್ಷಣದಲ್ಲಿ ಶುರು ಮಾಡುತ್ತಾನೆ ಮತ್ತು ದೇವರ ಬಗ್ಗೆ ನಿನ್ನ ತಿಳುವಳಿಕೆಯು ಹೆಚ್ಚುತ್ತದೆ. ಈ ಮೂಲ ತತ್ವದ ಹೊರತು, ನಿನ್ನ ಆತ್ಮನ ಪರಿಶುದ್ಧತೆಯ ಪರಿಪೂರ್ಣತೆ ನೆರವೇರಲು ಸಾಧ್ಯವಿಲ್ಲ. ಮತ್ತು ಆಗುವುದೂ ಇಲ್ಲ.

ನೀನು (ನಿನ್ನ ಪ್ರಾಣ) ಪಶ್ಚಾತ್ತಾಪ ಪಟ್ಟು ಶರೀರಭಾವವನ್ನು ಎದುರಿಸಿದ ತ್‌ಕ್ಷಣವೇ, ದುರಾಶೆಗಳನ್ನೂ ಮತ್ತು ಭಕ್ತಿಹೀನ ಮನೋವೃತ್ತಿಗಳನ್ನೂ ಕೂಡಾ ನೀನು ನಿನ್ನ ಶರೀರಭಾವದ ಆತ್ಮನಿಂದ ತಡೆಯನ್ನನುಭವಿಸುವೀ ಮಾತ್ರವಲ್ಲದೇ ಹೊರಗಣ ದೆವ್ವದ ಪ್ರಭಾವದಿಂದಲೂ ಕೂಡ. ಆತ್ಮನ ಸ್ವಭಾವವು ಪ್ರಾಣದ ತಿಳುವಳಿಕೆಗಿಂತ ಬಲವಾಗಿರುವುದರಿಂದ ಪರಿಶುದ್ಧಾತ್ಮನ ಅಭಿಷೇಕವು ಬೋಧಿಸುತ್ತಾ ಪ್ರಕಟಿಸುತ್ತಾ ಪ್ರಾಣವು ಸತ್ಯವನ್ನು ತಿಳಿಯುವುದಕ್ಕೆ ಸಹಾಯ ಮಾಡುತ್ತದೆ. ಸತ್ಯದ ಅರಿವು ಆತ್ಮನ ಶರೀರ ಭಾವದ ಒತ್ತಡಗಳಿಗೆ ವಿರುದ್ಧವಾಗಿ ಪ್ರಾಣವು ಪ್ರಯತ್ನಿಸುವಂತೆ ಮಾಡುತ್ತದೆ, ಮತ್ತು ದೆವ್ವಗಳ ಪ್ರಭಾವವೂ ಕೂಡ ತಡೆಗಟ್ಟಲು ಸಹಾಯ ಮಾಡುತ್ತವೆ.

**ಎಚ್ಚರವಾಗಿರಿ !** ಶುದ್ಧೀಕರಣವಾಗುವಾಗ ನೀವು ಶ್ರಮೆಯನ್ನನುಭವಿಸುವಿರಿ, ಶಿಕ್ಷೆ, ತಗ್ಗಿಸಲ್ಪಡುವಿಕೆ, ವ್ಯಥೆ, ನೋವು ಮತ್ತು ಅನೇಕ ವೇಳೆ ಅಭ್ಯಂತರಕ್ಕೊಳಗಾಗುವಿರಿ. ಹೇಗಾದರೂ ನಿಮ್ಮ ಸ್ಥಿರ ಚಿತ್ತತೆಯಿಂದಾಗಿ, ನಿಮ್ಮ ಆತ್ಮವು ಅಂತ್ಯದಲ್ಲಿ ಬದಲಾಗುತ್ತದೆ, ಯಾಕೆಂದರೆ ಪರಿಶುದ್ಧಾತ್ಮನ ಅಭಿಷೇಕದಿಂದಾಗಿ.

ಮನಸ್ಸನ್ನು ನೂತನಗೊಳಿಸುವುದರಿಂದ ಆತ್ಮವು ಬದಲಾವಣೆ ಹೊಂದುತ್ತದೆ. ನಿಮ್ಮ ಮನಸ್ಸನ್ನು ನೂತನಗೊಳಿಸದ ಹೊರತು ನಿಮ್ಮ ಅತ್ಮವು ಬದಲಾವಣೆ ಹೊಂದುವುದಿಲ್ಲ. ನೂತನಗೊಳಿಸಿದ ಮನಸ್ಸು ಒಳ್ಳೇ ಕೆಟ್ಟದ್ದರ ಬಗ್ಗೆ ಎಚ್ಚರವಾಗಿರುವುದಿಲ್ಲ ಮತ್ತು ಎಲ್ಲಾ ತರಹದ ಉದ್ರೇಕಗಳಿಗೂ ಮತ್ತು ಆತ್ಮನಲ್ಲಿನ ಮನೋಭಾವಗಳಿಗೂ

**ವಚನಗಳು ಮತ್ತು ವ್ಯಾಖ್ಯಾನಗಳು :**

ಈ ಅಧ್ಯಯನ ಮಾರ್ಗದರ್ಶಿಯ ಉದ್ದೇಶವೇನೆಂದರೆ ಕರ್ತನ ಎರಡನೇ ಬರೋಣಿಕೆಗಾಗಿ ಜನರನ್ನು ಸಿದ್ಧಮಾಡುವುದೇ.

ಲೂಕಾ 1 : 17 "ಅವನು (ಸ್ನಾನೀಕನಾದ ಯೋಹಾನನು) ತಂದೆಗಳ ಹೃದಯಗಳನ್ನು ಮಕ್ಕಳ ಕಡೆಗೂ, ಅವಿಧೇಯರನ್ನು ನೀತಿವಂತರ ಜ್ಞಾನಕ್ಕೂ ತಿರುಗಿಸಿ, ಕರ್ತನಿಗೋಸ್ಕರ ಜನರನ್ನು ಸಿದ್ಧ ಮಾಡುವುದಕ್ಕೆ ಎಲೀಯನ ಆತ್ಮದಲ್ಲಿಯೂ ಆತನ ಮುಂದೆ ಹೋಗುವವನು ಎಂದು ಹೇಳಿದನು."

1 ಯೋಹ 1 : 5, 6 "ನಾವು ಆತನಿಂದ ಕೇಳಿ ತಿಳಿಸುವ ವಾರ್ತೆ ಯಾವುದೆಂದರೆ, ದೇವರು ಬೆಳಕಾಗಿದ್ದಾನೆ ; ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ ಎಂಬುದೇ. ನಾವು ಆತನ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವವರಾಗಿದ್ದೇವೆ, ಸತ್ಯವನ್ನನುಸರಿಸುವವರಲ್ಲ."

2 ಪೇತ್ರ 3 : 13, 14 "ಆದಾಗ್ಯೂ ನಾವು ಆತನ ವಾಗ್ದಾನದ ಪ್ರಕಾರ ನೂತನ ಆಕಾಶಗಳನ್ನು ನೂತನ ಭೂಮಿಯನ್ನೂ ಎದುರು ನೋಡುತ್ತಾ ಇದ್ದೇವೆ ; ಅವುಗಳಲ್ಲಿ ನೀತಿ ವಾಸವಾಗಿರುವುದು. ಆದಕಾರಣ ಪ್ರಿಯರೇ ನೀವು ಇಂಥವುಗಳನ್ನು ಎದುರು ನೋಡುವವರಾಗಿರುವುದರಿಂದ ಸಮಾಧಾನದಲ್ಲಿದ್ದು, ನಿರ್ಮಲರಾಗಿಯೂ ನಿರ್ದೋಷಿಗಳಾಗಿಯೂ ಆತನಿಗೆ ಕಾಣಿಸಿಕೊಳ್ಳುವಂತೆ ಜಾಗ್ರತಿಯುಳ್ಳವರಾಗಿರ್ರಿ."

ಯಾಕೋಬ 1 : 12 – 15 "ಕಷ್ಟಗಳನ್ನು ಸಹಿಸಿಕೊಳ್ಳುವವನು ಧನ್ಯನು ; ಅವನು ಪರಿಶೋಧಿತನಾದ ಮೇಲೆ ಕರ್ತನು ತನ್ನನ್ನು ಪ್ರೀತಿಸುವವರಿಗೆ ವಾಗ್ದಾನ ಮಾಡಿದ ಜೀವದ ಕಿರೀಟವನ್ನು ಹೊಂದುವನು ; ಯಾವನಾದರೂ ಶೋಧನೆಗೆ ಪ್ರೇರೇಪಿಸಲ್ಪಡುವಾಗ ಈ ಪ್ರೇರಣೆಯು ನನಗೆ ದೇವರಿಂದ ಉಂಟಾಯಿತೆಂದು ಹೇಳಬಾರದು. ಯಾಕೆಂದರೆ ದೇವರು ಕೆಟ್ಟದ್ದರಿಂದ ಶೋಧಿಸಲಾರನು ; ಆತನು ಯಾರನ್ನೂ ಶೋಧಿಸುವುದೂ ಇಲ್ಲ. ಆದರೆ ಪ್ರತಿಯೊಬ್ಬನೂ ತನ್ನ ಸ್ವಂತ ದುರಾಶೆಯಿಂದ ಎಳೆಯಲ್ಪಟ್ಟು ಮರಳುಗೊಂಡವನಾಗಿ ಶೋಧಿಸಲ್ಪಡುತ್ತಾನೆ. ಆಮೇಲೆ ದುರಾಶೆಯು ಗರ್ಭಧರಿಸಿ ಪಾಪವನ್ನು ಹೆರುತ್ತದೆ. ಪಾಪವು ಸಂಪೂರ್ಣವಾದ ಮೇಲೆ ಮರಣವನ್ನು ಹಡಿಯುತ್ತದೆ."

1 ಯೋಹ 2 : 20 "ಆದರೆ ನೀವು ಪವಿತ್ರಾತ್ಮನಾಗಿರುವಾತನಿಂದ ಅಭಿಷೇಕವನ್ನು ಹೊಂದಿದವರಾಗಿದ್ದು, ತಿಳಿದವರಾಗಿದ್ದೀರಿ."


1 ಪೇತ್ರ 5 : 6 – 10 "ಹೀಗಿರುವುದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಪ್ಪಿಸಿಕೊಳ್ಳಿರಿ ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು, ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ ಯಾಕೆಂದರೆ ಆತನು ನಿಮಗೋಸ್ಕರ ಚಿಂತಿಸುತ್ತಾನೆ. ಸ್ವಸ್ಥಚಿತ್ತರಾಗಿರ್ರಿ, ಎಚ್ಚರವಾಗಿರಿ, ಯಾಕೆಂದರೆ ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದಂತೆ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗಾಡುತ್ತಾನೆ. ನೀವು ನಂಬಿಕೆಯಲ್ಲಿ ದೃಢವಾಗಿದ್ದು, ಅವನನ್ನು ಎದುರಿಸಿರಿ ; ಲೋಕದಲ್ಲಿರುವ ನಿಮ್ಮ ಸಹೋದರರಿಗೂ ಅಂಥಹ ಬಾಧೆಗಳೇ ಸಂಭವಿಸುತ್ತವೆ ಎಂದು ನಿಮಗೆ ತಿಳಿದಿವೆಯಲ್ಲ. ಆದರೆ ಕ್ರಿಸ್ತ ಯೇಸುವಿನ ಮೂಲಕ ನಿಮ್ಮನ್ನು ನಿತ್ಯ ಪ್ರಭಾವಕ್ಕೆ ಕರೆದ ಕೃಪಾಪೂರ್ಣನಾದ ದೇವರು ತಾನೇ ನೀವು ಸ್ವಲ್ಪಕಾಲ ಬಾಧೆಪಟ್ಟ ಮೇಲೆ ನಿಮನ್ನು ಪರಿಪೂರ್ಣ ಮಾಡಿ, ಸ್ಥಿರಪಡಿಸಿ, ಬಲಪಡಿಸಿ, ನೆಲೆಗೊಳಿಸುವನು."

ಕಾರಣವಾಗುತ್ತದೆ. ಇನ್ನೊಂದು ಕಡೆ ನೂತನಗೊಳಿಸಿದ ಮನಸ್ಸು ಸತ್ಯದ ಬಗ್ಗೆ ಎಚ್ಚರವಾಗಿದೆ ಮತ್ತು ಆತ್ಮನಲ್ಲಿನ ಶಾಂತತೆಗೆ ಕಾರಣವಾಗುತ್ತದೆ. ಪ್ರಶ್ನೆ : ಯಾರಾದರೂ ನಿಮಗೆ ಹೀಗೆ ಹೇಳಿದರೆ ನಿಮ್ಮ ಪ್ರತಿಕ್ರಿಯೆ ಏನಾಗುವುದು, "ನಿನಗೆ ಕೆಟ್ಟ ವಾಸನೆ ಇದೆ" ಅದು ನಿಜವಾದರೆ ನಿಮ್ಮಲ್ಲಿ ತಗ್ಗಿಸಲ್ಪಡುವ ಮನೋಭಾವನೆ ಏಕೆ ? ನಿಮಗೆ ಯಾಕೆ ಸಂತೋಷವಾಗುವುದಿಲ್ಲ ಮತ್ತು ಅವನು ಸತ್ಯವನ್ನು ಹೇಳಿದ್ದಕ್ಕಾಗಿ ಅವನಿಗೇಕೆ ವಂದನೆ ಸಲ್ಲಿಸಬಾರದು ? ಇದು ಯಾಕೆಂದರೆ, ನಿಮ್ಮ ಪ್ರಾಣವು ಈಗಲೂ ಒಳ್ಳೇ ಕೆಟ್ಟದ್ದರ ತಿಳುವಳಿಕೆಗೆ ಅನುಸಾರವಾಗಿ ತೀರ್ಪು ಮಾಡುತ್ತದೆ.

**ಇನ್ನೊಂದು ಉದಾಹರಣೆ :** ನೀವು ಯೇಸುವನ್ನು ಇನ್ನೊಬ್ಬರೊಂದಿಗೆ ಹಂಚಿಕೊಂಡಾಗ ಅವರು ಯೇಸುವನ್ನು ಸ್ವೀಕರಿಸಿದರೆ ನಿಮಗೆ ಒಳ್ಳೇದೆನಿಸುತ್ತದೆ, ಇಲ್ಲದಿದ್ದರೆ ನಿಮಗೆ ಕೆಟ್ಟದ್ದೆನಿಸುತ್ತದೆ. ನಿಮ್ಮ ಆತ್ಮ ಹೀಗೆ ಪ್ರತಿಕ್ರಿಯೇ ನೀಡುವ ಕಾರಣವೇನೆಂದರೆ, ನಿಮ್ಮ ಮನಸ್ಸು ಈಗಲೂ ಒಳ್ಳೇ ಕೆಟ್ಟದ್ದರ ತಿಳುವಳಿಕೆಗೆ ಅನುಸಾರವಾಗಿ ಕೆಲಸ ಮಾಡುತ್ತದೆ. ಹೇಗಾದರೂ ಸತ್ಯವೇನೆಂದರೆ, ಪ್ರತಿಯೊಬ್ಬನಿಗೂ ತಾನಾಗಿ ತೀರ್ಮಾನ ತೆಗೆದುಕೊಳ್ಳುವ ಹಕ್ಕು ಇದೆ. ಈ ಎಲ್ಲಾ ಉದ್ರೇಕಗಳು ಮತ್ತು ನಿಮ್ಮ ಆತ್ಮನಲ್ಲಿನ ಮನೋಭಾವಗಳು ನಿಮ್ಮ ಮನಸ್ಸು ನೂತನಗೊಂಡಿಲ್ಲವೆಂಬುವುದಕ್ಕೆ ಗುರುತಾಗಿವೆ.

ವಾಕ್ಯದ ತಿಳುವಳಿಕೆಯಿರುವ ಒಂದು ಮನಸ್ಸು ಇನ್ನೂ ನೂತನ ಗೊಂಡಿಲ್ಲ. ಮನಸ್ಸಿಗೆ ಅನೇಕ ವಚನಗಳು ಗೊತ್ತಿದ್ದರೂ ಪ್ರಾಣವು ಈಗಲೂ ಒಳ್ಳೇ ಕೆಟ್ಟದ್ದನ್ನು ಅನುಸರಿಸಿ ತೀರ್ಪು ಮಾಡುತ್ತದೆ, ಸತ್ಯಕ್ಕನುಸಾರವಾಗಿ ಅಲ್ಲ. ನೀನು ನಿನ್ನ ಮನಸ್ಸನ್ನು ನೂತನಗೊಳಿಸಿಕೊಳ್ಳ ಬೇಕಾದರೆ, ಒಳ್ಳೇ ಕೆಟ್ಟದ್ದರ ಬಗ್ಗೆ ಯೋಚನೆ ಮಾಡುವುದನ್ನು ನಿಲ್ಲಿಸಬೇಕು. ನೀನು ಒಳ್ಳೇ ಕೆಟ್ಟದ್ದರ ಯೋಚನೆಗಳನ್ನು ಬಿಟ್ಟು ಬಿಡುತ್ತಾ ಹೋಗುವುದಾದರೆ, ನಿನ್ನ ಆತ್ಮ ಬದಲಾವಣೆ ಹೊಂದುತ್ತದೆ, ಮತ್ತು ಪ್ರಶಾಂತವಾಗುತ್ತಾ ದೈವ ಭಕ್ತಿಯ ಸ್ವಭಾವವನ್ನು ಪರಿಶುದ್ಧಾತ್ಮನ ಶಕ್ತಿಯ ಮೂಲಕ ಹೊಂದುತ್ತದೆ.

ಒಳ್ಳೇ ಕೆಟ್ಟ ಯೋಚನೆಗಳ ದೆಸೆಯಿಂದ ಪ್ರಾಣವು ಎರಡು ಮನಸ್ಸುಳ್ಳವನಾಗಿರುವವರೆಗೆ ಆತ್ಮಕ್ಕೆ ಏನನ್ನು ನಂಬಬೇಕೋ ತಿಳಿಯದಾಗಿರುವುದರಿಂದ ದೈವಭಕ್ತಿಯಿಲ್ಲದವನಾಗಿ ಉಳಿಯುತ್ತಾನೆ. ಆತ್ಮನು 'ಯೋಚನೆ' ಮಾಡುವುದಿಲ್ಲ, ಆದರೆ, ತನ್ನ ಭಕ್ತಿಹೀನ ಸ್ವಭಾವಕ್ಕನುಸಾರವಾಗಿ ವರ್ತಿಸುವುದರಿಂದ ಅದರ ಕಾರ್ಯಗಳು ಮುಂಜಾಗ್ರತೆಯಿಲ್ಲದವುಗಳಾಗಿರುತ್ತದೆ. ಇಂತಹ ವಿಶ್ವಾಸಿ ಕೆಲವು ವೇಳೆ ಸತ್ಯವಂತನಾಗಿರುತ್ತಾನೆ. ಇನ್ನೂ ಕೆಲವು ವೇಳೆ ಮೋಸಗಾರನಾಗಿರುತ್ತಾನೆ, ಇದನ್ನು ಸಂದರ್ಭಗಳಿಗನು ಸಾರವಾಗಿ ಮಾಡುತ್ತಾನೆ.




ಮಾರ್ಕ 6:11 "ಯಾರಾದರೂ ನಿಮ್ಮನ್ನು ಅಂಗೀಕರಿಸದೆಯೂ ಇಲ್ಲವೆ ನಿಮ್ಮ ಮಾತನ್ನು ಕೇಳದೆಯು ಇದ್ದರೆ ನೀವು ಅಲ್ಲಿಂದ ಹೊರಡುವಾಗ ಅವರಿಗೆ ವಿರುದ್ಧವಾಗಿ ಸಾಕ್ಷಿಯಾಗಿರುವಂತೆ ನಿಮ್ಮ ಪಾದಗಳಿಗೆ ಹತ್ತಿದ ದೂಳನ್ನು ಝಾಡಿಸಿಬಿಡಿರಿ. ಮತ್ತು ನಾನು ನಿಮಗೆ ನಿಜವಾಗಿ ಹೇಳುವುದೆನೆಂದರೆ– ನ್ಯಾಯ ತಿರ್ಪಿನ ದಿನದಲ್ಲಿ ಆ ಪಟ್ಟಣಕಿಂತ ಸೊದೋಮ್ ಗೊಮೋರದ ಗತಿಯು ತಾಳಬಹುದಾಗಿರುವುದು. "

2 ಕೊರಿ 10 : 5 "ನಾವು ಊಹೆಗಳನ್ನೂ ದೇವಜ್ಞಾನವನ್ನೂ ವಿರೋಧಿಸುವುದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದವುಗಳೆಲ್ಲವನ್ನೂ ಕೆಡಿವಿ ಹಾಕಿ, ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸರೆ ಹಿಡಿದು (ನಿಲ್ಲಿಸು)"

1 ಯೋಹಾ 2 : 27 "ಆದರೆ ಆತನಿಂದ ನೀವು ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವುದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವುದು ಅಗತ್ಯವಲ್ಲ. ಆ ಅಭಿಷೇಕವೇ ಎಲ್ಲಾ ವಿಷಯಗಳಲ್ಲಿ ನಿಮಗೆ ಉಪದೇಶ ಮಾಡುವಂಥದ್ದಾಗಿದ್ದು, ಸತ್ಯವಾಗಿದೆ. ಸುಳ್ಳಲ್ಲ. ಮತ್ತು ಅದು ನಿಮಗೆ ಉಪದೇಶ ಮಾಡಿದ ಪ್ರಕಾರವೇ ಆತನಲ್ಲಿ ನೀವು ನೆಲೆಗೊಂಡಿರ್ರಿ."

ಯಾಕೋ 4 : 8 "ದೇವರ ಸಮೀಪಕ್ಕೆ ಬನ್ನಿರಿ. ಆಗ ಆತನು ನಿಮ್ಮ ಸಮೀಪಕ್ಕೆ ಬರುವನು. ಪಾಪಿಗಳೇ. ನಿಮ್ಮ ಕೈಗಳನ್ನು ಶುಚಿಮಾಡಿಕೊಳ್ಳಿರಿ. ಎರಡು ಮನಸ್ಸುಳ್ಳವರೇ, (ಪ್ರಾಣ) ನಿಮ್ಮ ಹೃದಯಗಳನ್ನು (ಆತ್ಮ) ನಿರ್ಮಲ ಮಾಡಿಕೊಳ್ಳಿರಿ."

ಫಿಲಿ 2 : 12, 13 "ಹೀಗಿರುವಲ್ಲಿ ನನ್ನ ಪ್ರಿಯರೇ ನೀವು ಯಾವಾಗಲೂ ವಿಧೇಯರಾದಂತೆ ಈಗಲೂ ವಿಧೇಯರಾಗಿ ನಿಮ್ಮಲ್ಲಿರುವಾಗ ಮಾತ್ರವಲ್ಲದೇ ನಾನಿಲ್ಲದಿರುವಾಗಲೂ ಬಹುಹೆಚ್ಚಾಗಿ ಭಯದಿಂದ ನಡುಗುತ್ತಾ ನಿಮ್ಮ ಸ್ವಂತ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ, ಯಾಕೆಂದರೆ ತನ್ನ ಸ್ವಚಿತ್ತದ ಪ್ರಕಾರ ನಿಮ್ಮಲ್ಲಿ ಉದ್ದೇಶವನ್ನೂ (ಪ್ರಾಣ) ಕಾರ್ಯವನ್ನೂ ಸಾಧಿಸುವಾತನೂ (ಆತ್ಮ) ದೇವರೇ"

ಬದಲಾವಣೆಯಾದ ಒಳಮನುಷ್ಯನು ಅವನ ಹೊರಗಡೆಯ ಜೀವನವು ಅಭಿವೃದ್ಧಿಯಾಗುವುದನ್ನು ಅನುಭವಿಸುತ್ತಾನೆ. ಒಬ್ಬ ದೈವೀಕ ವಿಶ್ವಾಸಿಯು ಅನುಭವಿಸುವುದೇನೆಂದರೆ, ಅವನ ಬಾಂಧವ್ಯಗಳು, ಅವನ ಮದುವೆ ಮತ್ತು

ನೆನಪಿನಲ್ಲಿಡಿ, ನಾವು ಕಲೆತಿರುವುದೇನೆಂದರೆ, ನಂಬುವುದು, ನಂಬದೇ ಇರುವುದು ಆತ್ಮವೇ. ಪ್ರಾಣವು ಆತ್ಮನಿಂದ ತಡೆಯನ್ನನುಭವುಸುವಷ್ಟು ಕಾಲವೂ, ಆತ್ಮನು ಇನ್ನೂ ಅಪನಂಬಿಕೆಯಲ್ಲಿರುವುದಕ್ಕೆ ಸಾಕ್ಷಿಯಾಗಿ. ಆತ್ಮನು ಅದೀನನಾಗುತ್ತಲೆ, ಅದು ಸತ್ಯವನ್ನು ನಂಬುವಂಥದ್ದಾಗಿದೆ.

ನಿನ್ನ ಅತ್ಮನ ಸ್ವಭಾವವನ್ನು ಬದಲಾವಣೆ ಮಾಡಬೇಕಾದರೆ, ನಿನ್ನ ಪ್ರಾಣವು ಏಕ ಮನಸ್ಸುಳ್ಳದಾಗಬೇಕು. ನೀನು ಒಳ್ಳೇ ಕೆಟ್ಟದ್ದರ ಯೋಚನೆಗಳನ್ನು ಬಿಟ್ಟು ಬಿಡುತ್ತಾ, ಸತ್ಯ , ಪ್ರಾಮಾಣಿಕತೆ ಮತ್ತು ನ್ಯಾಯವನ್ನೇ ಯೋಚಿಸುವಾಗ ನಿನ್ನ ಆತ್ಮ ಸತ್ಯವನ್ನು ನಂಬುವಂತಾಗುತ್ತದೆ ಮತ್ತು ದೈವಭಕ್ತಿಯ ಸ್ವಭಾವವನ್ನು ಹೊಂದುತ್ತದೆ. ಆತ್ಮವು ದೈವಭಕ್ತಿಯಿಳ್ಳದ್ದಾದ ಕೂಡಲೇ ನಿನ್ನ ಪ್ರಾಣವು ವಿಶ್ರಾಂತಿಯನ್ನನುಭವಿಸುತ್ತದೆ ಮತ್ತು ಜೀವನದ ಮೇಲೆ ಹತೋಟಿಯನ್ನಿಡುತ್ತದೆ.

**ಶುದ್ಧೀಕರಣವಾಗುವಾಗ ನೀನು ನಿರೀಕ್ಷಿಸಬಹುದಾದ ಅನುಭವಗಳು :**
ವಿಶ್ವಾಸಿಯಾಗಿರುವುದರಿಂದ ನೀನು ನಿನ್ನ ಆತ್ಮನ ಇಚ್ಛೆಗಳಿಗನುಸಾರವಾಗಿ ಜೀವಿಸುವುದನ್ನು ಅನುಭವಿಸುತ್ತಿ ಮತ್ತು ವಾಕ್ಯದ ತಿಳುವಳಿಕೆಯಿಂದಲ್ಲ. ದೇವರ ಮಗನು ಪಾಪ ಮಾಡುವುದಿಲ್ಲ ಎಂಬ ಸತ್ಯಾಂಶವನ್ನು ನೀವು ಒಪ್ಪಿಕೊಂಡ ಕೂಡಲೇ, ನಿನಗೆ ಸುಳ್ಳು ಹೇಳುವುದು, ಮೋಸಮಾಡುವುದ, ಹರಟೇ ಹೊಡೆಯುವುದು, ಕೋಪ, ಅತಿಖರ್ಚು ಮತ್ತು ಶರೀರಭಾವದ ಎಲ್ಲಾ ಕಾರ್ಯಗಳು ದೆವ್ವದಿಂದಾಗಿವೆ ಎಂದು ತಿಳಿದು ಅವುಗಳನ್ನು ನಿಲ್ಲಿಸಬೇಕು.

ಪಾಪವನ್ನು ನಿಲ್ಲಿಸುವುದು ಅಸಾಧ್ಯ ಎಂದು ನೀನು ಅಂದುಕೊಳ್ಳಬಹುದು ಆದರೆ, ಪರಿಶುದ್ಧಾತ್ಮನ ಸಹಾಯದಿಂದ ಅದು ಸಾಧ್ಯ, ಏಕೆಂದರೆ ದೇವರೊಂದಿಗೆ ಎಲ್ಲವೂ ಸಾಧ್ಯ. ನೀನು ಒಂದು ಪಾಪವನ್ನು ನಿಲ್ಲಿಸಿದರೆ. ಎಲ್ಲ ಪಾಪಗಳನ್ನೂ ನಿಲ್ಲಿಸಲು ಸಾಧ್ಯ !

ಕೆಳಗಿರುವ ವಿಷಯಗಳನ್ನು ನೀನು ಮನಸ್ಸಿನಲ್ಲಿಡುವುದಾದರೆ, ನಿನ್ನ ಎಲ್ಲಾ ಪಾಪಗಳನ್ನು ಸಾಯಿಸಲು ಸಾಧ್ಯವಾಗುತ್ತದೆ. ನೀನೇನೂ ಮಾಡದಿದ್ದರೆ, ಪರಿಶುದ್ಧಾತ್ಮನೂ ಏನೂ ಮಾಡಲಾರನು ! ನೀನು ನಿನ್ನ ಪಾಪಗಳಿಗೆ ವಿರುದ್ಧವಾಗಿ ಏಳದಿದ್ದರೆ, ಅದು ನಿನ್ನ ಜೀವನದ ಭಾಗವಾಗಿ ಉಳಿಯುತ್ತದೆ. ಯಾಕೆಂದರೆ ಪರಿಶುದ್ಧಾತ್ಮನು ತಾನೇ ಸ್ವಂತವಾಗಿ ಕಾರ್ಯ ಮಾಡುವುದಿಲ್ಲ.

**ನಿನ್ನ ಪಾಪಗಳನ್ನು ಗುರುತಿಸಿ ಒಪ್ಪಿಕೋ !**
ನೀನು ನಂಬಿಗಸ್ತನಾಗಿ ಬೈಬಲ್ ಓದುತ್ತಾ ಇರಬಹುದು, ಆದರೆ ನೀನು ನಿನ್ನ ಸ್ವಂತ ಪಾಪಗಳನ್ನು ಗುರುತಿಸುವುದಿಲ್ಲ ಮತ್ತು ಸ್ಪಷ್ಟವಾಗಿ ಗ್ರಹಿಸುವುದಿಲ್ಲ.

ಅವನ ಆರ್ಥಿಕ ಸ್ಥಿತಿ ಅಭಿವೃದ್ಧಿಗೆ ಬರುತ್ತದೆ. ಯಾಕೆಂದರೆ ಅವನ ಪ್ರಾಣವು ಅವನ ಆತ್ಮದ ಹತೋಟಿಯಲ್ಲಿದೆ.

3 ಯೋಹಾ 1 : 2 – 5 "ಪ್ರಿಯನೇ, ನಿನ್ನ ಆತ್ಮವು ಅಭಿವೃದ್ಧಿಹೊಂದಿರುವ ಪ್ರಕಾರವೇ ಎಲ್ಲಾ ವಿಷಯಗಳಿಗಿಂತ ನೀನು ಸ್ವಸ್ಥನಾಗಿದ್ದು, ಕ್ಷೇಮಹೊಂದಿ ಅಭಿವೃದ್ಧಿ ಹೊಂದಬೇಕೆಂದು ನಾನು ಅಪೇಕ್ಷಿಸುತ್ತೇನೆ, ಯಾಕೆಂದರೆ ಸಹೋದರರು ಬಂದಾಗ ನಿನ್ನಲ್ಲಿರುವ ಸತ್ಯವನ್ನು ಸಾಕ್ಷೀಕರಿಸಿದ್ದರಿಂದ ನಾನು ಬಹಳವಾಗಿ ಸಂತೋಷಪಟ್ಟೆನು. ನನ್ನ ಮಕ್ಕಳು ಸತ್ಯವನ್ನನುಸರಿಸಿ, ನಡೆಯುವವರಾಗಿದ್ದಾರೆಂದು ಕೇಳುವುದಕ್ಕಿಂತ ಹೆಚ್ಚಾದ ಸಂತೋಷವು ನನಗಿಲ್ಲ. ಪ್ರಿಯನೇ, ಸಹೋದರರಿಗೂ ಪರಿಚಯವಿಲ್ಲದವರಿಗೂ ನೀನು ಮಾಡುವುದನ್ನೆಲ್ಲಾ ನಂಬಿಗಸ್ತನಾಗಿ ಮಾಡುತ್ತೀ."

2 ಪೇತ್ರ 1 : 3 "ತನ್ನ ಮಹಿಮೆಗಾಗಿಯೂ ಗುಣಾತಿಶಯಕ್ಕಾಗಿಯೂ ನಮ್ಮನ್ನು ಕರೆದಾತನ ವಿಷಯವಾದ ಪರಿಜ್ಞಾನದ ಮೂಲಕವಾಗಿ, ಅತನ ದೈವಶಕ್ತಿಯು ಜೀವಕ್ಕೂ, ಭಕ್ತಿಗೂ, ಬೇಕಾದದ್ದೆಲ್ಲವುಗಳನ್ನೂ ನಮಗೆ ದಯಪಾಲಿಸಿತು."

ದೇವರು ನಿನ್ನನ್ನು ಶುದ್ಧೀಕರಿಸುತ್ತಾ ಇರುವನೆಂದು ನೀನು ಯೋಚಿಸಬಹುದು ಅಥವಾ ಹೇಳಲೂ ಬಹುದು. ಹಾಗಾದರೆ ಯಾಕೆ ತಿರಿಗಿ ಹುಟ್ಟಿದ 5, 10 ಅಥವ 30 ವರ್ಷಗಳಾದ ನಂತರವೂ ಪರಿಶುದ್ಧಾತ್ಮನು ನಿನ್ನ ಜೀವನದಲ್ಲಿ ಪರಿಶುದ್ಧತೆಯನ್ನು ಪರಿಪೂರ್ಣಮಾಡಲಿಲ್ಲ ? ವಾಸ್ತವವೇನೆಂದರೆ ಪರಿಶುದ್ಧಾತ್ಮನು ಗೂಢವಾಗಿದ್ದಾನೆ, ನೀನು ನಿನ್ನ ಪಾಪಗಳಿಗೂ, ಸಂದರ್ಭಗಳಿಗೂ ವಿರುದ್ಧವಾಗಿ ಏಳುವವರೆವಿಗೂ. ನೀನು ಯಾವುದೇ ಪಾಪಕ್ಕೆ ವಿರುದ್ಧವಾಗಿ ಏಳುವುದಾದರೆ, ಆತನು ಸಹಾಯ ಮಾಡಿ ಜಯಕ್ಕೆ ಸಾಗಿಸುತ್ತಾನೆ.

1 ಕೊರಿ 15 : 57 "ಆದರೆ ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ, ನಮಗ ಜಯವನ್ನು ಕೊಡುವ ದೇವರಿಗೆ ಸ್ತೋತ್ರ."

ರೋಮ 1 : 18 "ಯಾಕೆಂದರೆ ಸತ್ಯವನ್ನು ಅನೀತಿಯಲ್ಲಿ ತಡೆಹಿಡಿದ ಮನುಷ್ಯರ ಎಲ್ಲಾ ಭಕ್ತಿಹೀನತೆಗೆ ಮತ್ತು ಅನೀತಿಗೆ ವಿರೋಧವಾಗಿ ದೇವರ ಕೋಪವು ಸ್ವರ್ಗದಿಂದ ತೋರಿ ಬರುತ್ತದೆ."

ಜ್ಞಾನೋ 1 : 7 "ಕರ್ತನ ಭಯವೇ ಜ್ಞಾನದ ಮೂಲವಾಗಿದೆ. ಆದರೆ ಮೂರ್ಖರು ಜ್ಞಾನವನ್ನೂ ಶಿಕ್ಷಣವನ್ನೂ ಅಸಡ್ಡೆ ಮಾಡುತ್ತಾರೆ."

ಯಾಕೋ 4 : 8 "ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು. ಪಾಪಿಗಳೇ, ನಿಮ್ಮ ಕೈಗಳನ್ನು ಶುಚಿ ಮಾಡಿಕೊಳ್ಳಿರಿ ; ಎರಡು ಮನಸ್ಸುಳ್ಳವರೇ, ನಿಮ್ಮ ಹೃದಯಗಳನ್ನು ನಿರ್ಮಲ ಮಾಡಿಕೊಳ್ಳಿರಿ."

ಎಫೆ 5 : 14 "ಆದ್ದರಿಂದ ನಿದ್ರೆ ಮಾಡುವವನೇ, ಎಚ್ಚರವಾಗು, ಸತ್ತವರಿಂದ ಎದ್ದೇಳು ; ಕ್ರಿಸ್ತನು ನಿನಗೆ ಪ್ರಕಾಶವನ್ನು ಕೊಡುವನು ಎಂದು ಆತನು ಹೇಳುತ್ತಾನೆ."
**ಗಮನಿಸು :** ಕ್ರೈಸ್ತರು ಸತತವಾಗಿ ಪಾಪ ಮಾಡುತ್ತಾರೆ. ಮತ್ತು ಅವರಿಗೆ ಅವರ ಪಾಪಗಳ ಬಗ್ಗೆ ಎಚ್ಚರಿಕೆ ಇಲ್ಲ ; ಯಾಕೆಂದರೆ ಪಾಪಗಳು ತಮ್ಮಷ್ಟಕ್ಕೆ ತಾವೇ ಕ್ಷಮಾಪಣೆಯಾಗುತ್ತವೆಂದು ಅವರನ್ನು ತಪ್ಪುದಾರಿ ಹಿಡಿಸಿದ್ದಾರೆ.
1 ಯೋಹ 2 : 1 " ನನ್ನ ಚಿಕ್ಕ ಮಕ್ಕಳೇ, ನೀವು ಪಾಪ ಮಾಡದಂತೆ ನಾನು ಇವುಗಳನ್ನು ಬರೆಯುತ್ತೇನೆ. ಯಾವನಾದರೂ ಪಾಪ ಮಾಡಿದರೆ, ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನು ನಮಗೆ ಪಕ್ಷವಾದಿಯಾಗಿದ್ದಾನೆ.

**ಪಶ್ಚಾತ್ತಾಪ ಪಡು ಮತ್ತು ದೇವರನ್ನು ಕ್ಷಮಾಪಾಣೆಗಾಗಿಯೂ ಗುಣಹೊಂದುವುದಕ್ಕಾಗಿಯೂ ಬೇಡಿಕೋ !**

ನೀನು ಒಂದು ಸಾರ್ತಿ ಪಾಪವನ್ನು ಒಪ್ಪಿಕೊಂಡ ಮೇಲೆ ಆ ಪಾಪವನ್ನು ಜಯಿಸುವುದಕ್ಕೆ ನಿನ್ನ ಕೈಲಾದಷ್ಟು (ಅದೇನು ಹೆಚ್ಚಲ್ಲ) ಮಾಡಲು ಬಲವಂತ ಪಡಿಸಲಾಗುತ್ತದೆ. ನೀನು 100% ಕೊಟ್ಟರೆ ಆತನೂ 100% ಕೊಡುತ್ತಾನೆ.

**ಪರಿಸ್ಥಿತಿ ಸುಧಾರಿಸುವುದಕ್ಕೆ ಮುಂಚೆ ಹದಗೆಡುತ್ತದೆ !**

ವಿಷಯಗಳು ಹದಗೆಡುತ್ತವೆ ಮತ್ತು ನೀನು ಶ್ರಮೆ ಹೊಂದುತ್ತೀ. ಯಾಕೆಂದರೆ, ನಿನ್ನ ಆತ್ಮವು ಬದಲಾವಣೆಯನ್ನು ತಡೆಯುವುದರಿಂದ ದೆವ್ವಗಳು ನಿನ್ನನ್ನು ಆಶಾ ಭಂಗ ಪಡಿಸುವುದಕ್ಕಾಗಿ ಮೇಲೆ ಬೀಳುತ್ತವೆ.

**ಪರಿಶುದ್ಧಾತ್ಮನ ಕಾರ್ಯಗಳಿಗೆ ಎಚ್ಚರವಾಗಿರು !**

ಅನೇಕ ಘಟನೆಗಳ ಮೂಲಕ ಮತ್ತು ವಾಕ್ಯದ ಮೂಲಕ ಪರಿಶುದ್ಧಾತ್ಮವು ಎಚ್ಚರಗೊಳಿಸುತ್ತಾ ಪ್ರಕಟಗೊಳಿಸುತ್ತಾ ಮತ್ತು ಬೋಧಿಸುತ್ತಾ ನಿನಗೆ ಬುದ್ಧಿ ಬರುವಂತೆ ಮಾಡುತ್ತದೆ. ಈ ಒಂದು ಹಂತದಲ್ಲಿಯೇ ನಿನ್ನ ಆತ್ಮದೊಳಗೆ ದೈವಭಕ್ತಿಯ ದುಃಖ ಬರುವುದು.

**ಹಿಂಜರಿಯ ಬೇಡಿರಿ ಆದರೆ ಸ್ಥಿರಚಿತ್ತರಾಗಿರ್ರಿ !**

ನೀನು ಅನೇಕಸಾರಿ ಬೀಳಬಹುದು ಆದರೆ ಪರಿಶುದ್ಧಾತ್ಮವು ನೀನು ಮುಂದುವರೆಯಲು ಪ್ರೋತ್ಸಾಹಿಸುತ್ತದೆ. ನಿನ್ನ ಮನಸ್ಸಿನಲ್ಲಿ ನೀನು ಸೋಲದಿದ್ದರೆ, ನಂಬಿಕೆಯು ನಿಧಾನವಾಗಿ ನಿನ್ನ ಆತ್ಮದೊಳಗೆ ಬರುತ್ತದೆ.

**ಸತ್ಯವನ್ನೇ ಹೇಳು ಮತ್ತು ಒಳ್ಳೆ ಮತ್ತು ಕೆಟ್ಟ ಯೋಚನೆಗಳನ್ನು ಹೊಂದಿರಬೇಡ !**

ನೀತಿಯನ್ನು ಅಭ್ಯಸಿಸು, ಅನೀತಿಯನ್ನಲ್ಲ. "ಇತರರು ನಿನಗೇನು ಮಾಡಬೇಕೆಂದು ಬಯಸುತ್ತೀಯೋ ಅದನ್ನೇ ಅವರಿಗೆ ಮಾಡು." ಇದೇ ಸತ್ಯವಾದರೆ ಒಳ್ಳೇ ಕೆಟ್ಟದರ ಯೋಚನೆಗಳು ನಿನ್ನ ಆತ್ಮವನ್ನು ಸತ್ಯವನ್ನು ನಂಬುವುದರಿಂದ ತಡೆಗಟ್ಟುತ್ತದೆ.

**ನಂಬಿಕೆ ಬಂದಾಗ ಪಾಪಗಳು ನಿಲ್ಲುತ್ತವೆ !**

ನಂಬಿಕೆಯು ಬಂದ ಮೇಲೆ ವಿಧೇಯತೆ ಮಾತ್ರ ಉಳಿಯುತ್ತದೆ.

**ಕರ್ತನಿಗೆ ವಂದಿಸು ಮತ್ತು ಸ್ತೋತ್ರ ಸಲ್ಲಿಸು !**

ನಿನ್ನ ರಕ್ಷಣೆಗಾಗಿ ಕರ್ತನಿಗೆ ಸೋತ್ರ ಸಲ್ಲಿಸು. ಮತ್ತು ಆತನ ನಂಬಿಗಸ್ಥತೆಗಾಗಿ ಆತನಿಗೆ ಸ್ತೋತ್ರ ಸಲ್ಲಿಸು. ದೇವರ ಎದುರಿನಲ್ಲಿ ದೋಷಾರೋಪಣೆ ಇಲ್ಲದಿರುವುದಕ್ಕಾಗಿ ಪ್ರಯಾಸ ಪಡುವವನು ಆತನ

(ಇದು ಬಹು ಗಂಭೀರವಾದ ನ್ಯಾಯಾಲಯದ ವ್ಯವಹಾರ)."

**ಗಮನಿಸು :** ಕ್ರೈಸ್ತರು ತಮ್ಮ ಪಾಪಗಳನ್ನು ಒಪ್ಪಿಕೊಳ್ಳದೇ ಇರುವುದಕ್ಕೆ ಕಾರಣ ಅವರ ಗರ್ವವೇ, ಮತ್ತು ಅದನ್ನು ನಿಲ್ಲಿಸಲು ಅವರಿಗೆ ಮನಸ್ಸು ಇಲ್ಲದೇ ಇರುವುದು, ನೀನು ಒಪ್ಪಿಕೊಂಡರೆ ನಿನ್ನ ಪಾಪವನ್ನು ನಿಲ್ಲಿಸಬಹುದು.

ಇಬ್ರಿ 5 : 8, 9 "ಹೀಗೆ ಆತನು ಮಗನಾಗಿದ್ದರೂ ತಾನು ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. ಇದಲ್ಲದೆ ಸಿದ್ಧಿಗೆ ಬಂದು ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಆತನು ಕರ್ತನಾದನು."

2 ಕೊರಿ 7 : 10 "ದೇವರ ಚಿತ್ತಾನುಸಾರವಾಗಿರುವ ದುಃಖವೂ, ರಕ್ಷಣೆಗಾಗಿ ಮಾನಸಾಂತರವನ್ನುಂಟು ಮಾಡುತ್ತದೆ. ಮಾನಸಾಂತರದಲ್ಲಿ ಪಶ್ಚಾತ್ತಾಪಕ್ಕೆ ಆಸ್ಪದವಿಲ್ಲ; ಆದರೆ ಲೋಕ ಸಂಬಂಧವಾದ ದುಃಖವು ಮರಣವನ್ನುಂಟು ಮಾಡುತ್ತದೆ."

**ಉದಾ :** ಅನೇಕ ಮದುವೆಗಳು ಸಂತೋಷವಿಲ್ಲದೆ ಹೋಗುತ್ತವೆ. ಮತ್ತು ಸೋತು ಹೋಗುತ್ತವೆ. ಯಾಕೆಂದರೆ ಗಂಡ ಹೆಂಡಿರು ವ್ಯಾಜ್ಯ ಮಾಡುತ್ತಾರೆ. ಅವರು ಸತತವಾಗಿ ಜಗಳ ಮಾಡುತ್ತಾ, ಒಂದಾಗುತ್ತಾರೆ. ಯಾಕೆಂದರೆ ಅವರಿಗೆ ಪ್ರಪಂಚದ ದುಃಖ ಮಾತ್ರ ಇದೆ. ಆದರೆ ಅವರು ಪರಿಶುದ್ಧಾತ್ಮನನ್ನು ಮಾತ್ರ ತಮ್ಮನ್ನು ಬದಲಾವಣೆ ಮಾಡಲು ಅನುಮತಿಸಿದರೆ, ಅವರು ದೇವರ ದುಃಖವನ್ನು ಬೆಳೆಸಿಕೊಳ್ಳುತ್ತಾರೆ ಮತ್ತು ಜಗಳ ನಿಲ್ಲಿಸುತ್ತಾರೆ.

ಇಬ್ರಿ 10 : 38, 39 "ನೀತಿವಂತನು ನಂಬಿಕೆಯಿಂದಲೇ ಬದುಕುವನು ; ಅವನು ಹಿಂದೆಗೆದರೆ, ಅವನಲ್ಲಿ ನನ್ನ ಆತ್ಮವು ಸಂತೋಷಿಸುವುದಿಲ್ಲ. ನಾವಾದರೂ ಹಿಂದೆಗೆದವರಾಗಿ ನಾಶವಾಗುವವರಲ್ಲಿ ಅಲ್ಲ, ನಂಬುವವರಾಗಿ ಆತ್ಮರಕ್ಷಣೆಯನ್ನು ಹೊಂದುವವರಾಗಿದ್ದೇವೆ."

ಕೀರ್ತ 4 : 3, 4 "ಆದರೆ ಕರ್ತನು ಭಕ್ತನನ್ನು ತನಗಾಗಿ ಪ್ರತ್ಯೇಕಿಸಿದ್ದಾನೆಂದು ತಿಳಿದುಕೊಳ್ಳಿರಿ, ನಾನು ಕರ್ತನನ್ನು ಕೂಗಲು ಆತನು ಕೇಳುವನು. ಭಯ ಭಕ್ತಿಯಿಂದಿರ್ರಿ. (ಪ್ರಾಣ) ; ಪಾಪ ಮಾಡಬೇಡಿರಿ ; ನಿಮ್ಮ ಹಾಸಿಗೆಗಳ ಮೇಲೆ ನಿಮ್ಮ ಸ್ವಂತ ಹೃದಯಗಳಲ್ಲಿ (ಆತ್ಮ) ಮಾತನಾಡಿ ಮೌನವಾಗಿರ್ರಿ."

**ಗಮನಿಸು :** ನೀನು ಕರ್ತನನ್ನು ಆತನ ರಕ್ಷಣೆಗಾಗಿ ವಂದಿಸಿ ಸ್ತೋತ್ರ ಮಾಡಬೇಕು. ಮತ್ತು ಸರಿಯಾಗಿ ಒಗ್ಗುವ ವಚನಗಳನ್ನು ಒಪ್ಪಿಕೊಳ್ಳಬೇಕು.

ಇಬ್ರಿ 3 : 19 "ಅವರು ಸೇರಲಾರದೇ ಹೋದದ್ದು, ಅಪನಂಬಿಕೆಯಿಂದಲೇ ಎಂದು ತಿಳಿದುಕೊಳ್ಳುತ್ತೇವೆ."

**ಗಮನಿಸು :** ನೀನು ಮೊದಲು ದೇವರಲ್ಲಿ ನಂಬಿಕೆ ಇಡಬೇಕು, ಇದು ದೇವರಿಗೆ ವಿಧೇಯನಾಗುವುದಕ್ಕೆ ಮುಂಚೆ.

1 ಯೋಹಾ 5 : 4 "ಯಾಕೆಂದರೆ ದೇವರಿಂದ ಹುಟ್ಟಿದ್ದೆಲ್ಲವೂ ಲೋಕವನ್ನು ಜೈಸುತ್ತದೆ ; ಮತ್ತು ಲೋಕವನ್ನು (ಪಾಪ) ಜೈಸಿದಂತಹ ಆ ಜಯವು ನಂಬಿಕೆಯೇ."

ಕೀರ್ತ 50 : 23 "ಸ್ತೋತ್ರವನ್ನು ಅರ್ಪಿಸುವವನು ನನ್ನನ್ನು ಘನ ಪಡಿಸುತ್ತಾನೆ ; ತನ್ನ ನಡವಳಿಕೆಯನ್ನು ಕ್ರಮ ಪಡಿಸುವವನಿಗೆ ದೇವರ ರಕ್ಷಣೆಯನ್ನು ತೋರಿಸುವೆನು."

2 ಯೋಹಾ 1 : 9 "ಕ್ರಿಸ್ತನ ಬೋಧನೆಯಲ್ಲಿ (ಬೋಧನೆಯನ್ನು

ರಕ್ಷಣೆಯನ್ನು ಅನುಭವಿಸುವನು. ಅಭಿವೃದ್ಧಿ ಅಭಿವೃದ್ಧಿಯನ್ನು ಬೆಳೆಸುತ್ತದೆ.

**ದೋಷಾರೋಪಣೆಯಿಂದ ಕಾಪಾಡಿಕೋ !**
ಜಯವನ್ನು ಕಳೆದುಕೊಳ್ಳದಂತೆ ಜಾಗ್ರತೆಯಿಂದಿರು. ನೀನು ಪರಿಶುದ್ಧಾತ್ಮನ ಮೂಲಕವೂ ಶ್ರಮೆಯ ಮೂಲಕವೂ ಸಾಧಿಸಿದ್ಧೀ.

**ನೆನಪಿನಲ್ಲಿಡು !**
ದೇವರು ನಿನ್ನಲ್ಲಿದ್ದಾನೆ ಮತ್ತು ನಿನಗಾಗಿ ಇದ್ದಾನೆ. ಆತನು ನಿನಗೆ ವಿರೋಧಿಯಾಗಿಲ್ಲ. ಜಾಗೃತೆಯಾಗಿ ಜೀವಿಸು ; ಪ್ರತಿಯೊಂದು ಸ್ಥಿತಿಯಲ್ಲಿಯೂ ದೇವರ ಚಿತ್ತವು ಏನೆಂದು ಗ್ರಹಿಸು. ಮತ್ತು ಶಾಂತಿ ಕೊಡಲು ದೇವರು ನಿನ್ನನ್ನು ಕಾಪಾಡುವನು. ರಕ್ಷಿಸುವನು.

**ಕೆಲಸವನ್ನು ಮಾಡುವವನಾಗು.**

ಈ ಪುಸ್ತಕದಲ್ಲಿ ನಾವು ಪದೇ ಪದೇ ದೇವರ ವಾಕ್ಯದಿಂದ ತೋರಿಸಿರುವುದೇನೆಂದರೆ, ಕ್ರಿಸ್ತನು ನಮ್ಮನ್ನು ಸ್ವತಂತ್ರರನ್ನಾಗಿ ಮಾಡಿದ್ದಾನೆ. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ. ನೀವೂ ಕೂಡಾ ನಿಮ್ಮ ಪಾಪಗಳನ್ನೂ ಕೊರತೆಗಳನ್ನೂ ನೋಡಿದ್ದೀರೆಂದು ನಂಬುತ್ತೇವೆ. ವಾಕ್ಯವನ್ನು ಮುರಿಯುವವರಾಗಿರ ಬೇಡಿರಿ. ಎಂದು ನಿಮ್ಮೊಂದಿಗೆ ನಾವು ಬೇಡಿಕೊಳ್ಳುತ್ತೇವೆ. ತನ್ನನ್ನು ತಾನು ಮೋಸ ಪಡಿಸಿಕೊಳ್ಳುವವನು – ಆದರೆ ಈ ಪುಸ್ತಕದಾದ್ಯಂತ ವಿವರಿಸಿದ ಹಾಗೆ ಕೆಲಸ ಮಾಡುವವನಾಗಿರು.

**ಕೆಲಸ ಮಾಡುವವನು ಎಂದರೆ ನಿಜವಾಗಿ ಏನು ?**

ದೇವರ ವಾಕ್ಯ ಹೇಳುವುದು : "ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ. ನೀವು ಹಳೇ ಮನುಷ್ಯನನ್ನು ಅವನ ಕೃತ್ಯಗಳ ಕೂಡ ತೆಗೆದುಹಾಕಿದ್ದೀರಲ್ಲವೇ ? (ಕೊಲೋ 3 : 9)"
ನಿನ್ನ ಕೆಲಸ ಸುಳ್ಳು ಹೇಳುವುದನ್ನು ನಿಲ್ಲಿಸುವುದು. ನಿನ್ನ ಪ್ರಾಣವು ಅರ್ಥ ಮಾಡಿಕೊಳ್ಳುತ್ತದೆ ಆದರೆ ಆತ್ಮನು ಭಯಗ್ರಸ್ತನಾಗಿದೆ, ಮತ್ತು ಅಧೀನನಾಗಲಾರನು. ಪರಿಶುದ್ಧಾತ್ಮನ ಸಹಾಯದಿಂದ ಸತ್ಯವನ್ನು ನಂಬಿ ಬದಲಾವಣೆ ಹೊಂದುವುದು ನಿನಗೆ ಬಿಟ್ಟ ಕೆಲಸ. ಆಗ ಮಾತ್ರ ನೀನು ವಾಕ್ಯವನ್ನು ಮಾಡುವವನಾಗುವಿ.

**ಇನ್ನು ಹೆಚ್ಚು ಸ್ಪಷ್ಟೀಕರಣೆ0ಯು ಅಥವಾ ವಿವರಣೆ0ಯು**
**ನಮ್ಮ ವೆಬ್‌ಸೈಟ್ ಮೂಲಕವಾಗಿ ಮಾಡಲಾಗುವುದು**
www.sinnot.org

ಕೇಳಿಸಿಕೊಳ್ಳುವವನಿಗೆ) ನೆಲೆಗೊಳ್ಳದೆ, ಅದನ್ನು ಅತಿಕ್ರಮಿಸುವವನಿಗೆ ದೇವರಿಲ್ಲ. ಕ್ರಿಸ್ತನ ಬೋಧನೆಯಲ್ಲಿ ನೆಲೆಗೊಂಡಿರುವವನಿಗೆ (ಅಂಥ ವಿಶ್ವಾಸಿಗೆ ತಂದೆಯೂ ಮಗನೂ ಇದ್ದಾರೆ.)"

ಯಾಕೋ 1 : 21 – 25 "ಆದ ಕಾರಣ ಎಲ್ಲಾ ಮಲಿನತೆಯನ್ನೂ ಅಧಿಕವಾದ ದುಷ್ಟತನವನ್ನೂ ತೆಗೆದುಹಾಕಿ ಒಳಗೆ ಬೇರೂರಿರುವ ವಾಕ್ಯಕ್ಕೆ ನಮ್ರತೆಯಿಂದ ಎಡೆಕೊಡಿರಿ ; ಅದು ನಿಮ್ಮ ಆತ್ಮಗಳನ್ನು ರಕ್ಷಿಸಿಕೊಡುವುದಕ್ಕೆ ಸಾಮರ್ಥ್ಯ ಉಳ್ಳದ್ದಾಗಿದೆ. ನೀವು ವಾಕ್ಯದ ಪ್ರಕಾರ ನಡೆಯುವವರಾಗಿರ್ರಿ. ಅದನ್ನು ಕೇಳುವವರು ಮಾತ್ರವೇ ಆಗಿದ್ದು, ನಿಮ್ಮನ್ನು ನೀವೇ ಮೋಸಗೊಳಿಸದಿರಿ. ಯಾವನಾದರೂ ವಾಕ್ಯವನ್ನು ಕೇಳುವವನಾಗಿದ್ದು, ಅದರ ಪ್ರಕಾರ ನಡೆಯದಿದ್ದರೆ, ಅವನು ಕನ್ನಡಿಯಲ್ಲಿ ತನ್ನ ಹುಟ್ಟು  ಮಖವನ್ನು ನೋಡಿದ ಮನುಷ್ಯನಂತಿರುವನು. ಯಾಕೆಂದರೆ ಇವನು ತನ್ನನ್ನು ನೋಡಿಕೊಂಡು ಹೋಗಿ, ತಾನು ಹೀಗಿದ್ದೇನೆಂಬುದನ್ನು ಆ ಕ್ಷಣವೇ ಮರೆತುಬಿಡುವನು. ಆದರೆ, ಬಿಡುಗಡೆಯನ್ನುಂಟು ಮಾಡುವ ನಿಯಮವನ್ನು ಲಕ್ಷ್ಯ ಕೊಟ್ಟು ನೋಡಿ ಇನ್ನೂ ನೋಡುತ್ತಲೇ ಇರುವವನು (ವಾಕ್ಯವನ್ನು) ಕೇಳಿ ಮರೆತುಹೋಗುವವನಾಗಿರದೇ, ಅದನ್ನು ಅನುಸರಿಸುವವನಾಗಿದ್ದು, ತನ್ನ ಕ್ರಿಯೆಯಿಂದ ಧನ್ಯನಾಗುವನು."

2 ಥೆಸಾ 1:11,12 "ಹೀಗಿರುವುದರಿಂದ ನಾವು ಯಾವಾಗಲೂ ನಿಮಗೋಸ್ಕರ ಪ್ರಾರ್ಥನೆ ಮಾಡಿ, ಈ ಕರೆಯುವಿಕೆಗೆ ದೇವರು ನಿಮ್ಮನ್ನು ಯೋಗ್ಯರೆಂದು ಎಣಿಸುವಂತೆಯೂ ತನ್ನ ಒಳ್ಳೇತನದ ಒಳ್ಳೇ ಸಂತೋಷವನ್ನು ಮತ್ತು ಬಲದಿಂದಾದ ನಂಬಿಕೆಯ ಕಾರ್ಯವನ್ನು ಪೂರೈಸುವ ಹಾಗೆಯೂ ಬೇಡಿಕೊಳ್ಳುತ್ತೇವೆ. ಹೀಗಾದರೆ ನಮ್ಮ ದೇವರ ಮತ್ತು ಕರ್ತನಾದ ಯೇಸು ಕ್ರಿಸ್ತನ ಕೃಪೆಗನುಸಾರವಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರು ನಿಮ್ಮಲ್ಲಿ ಮಹಿಮೆ ಹೊಂದುವುದು, ಆತನಲ್ಲಿ ನೀವೂ ಮಹಿಮೆಹೊಂದಿರಿ."

ಯೋಹಾ 6:27 "ನಾಶವಾಗುವ ಆಹಾರಕ್ಕಾಗಿ ಅಲ್ಲ, ನಿತ್ಯ ಜೀವವನ್ನುಂಟು ಮಾಡುವ ಆಹಾರಕ್ಕೋಸ್ಕರ ದುಡಿಯಿರಿ ; ಅದನ್ನು ಮನುಷ್ಯ ಕುಮಾರುನು ನಿಮಗೆ ಕೊಡುವನು ; ಯಾಕೆಂದರೆ ತಂದೆಯಾದ ದೇವರು (ಇದಕ್ಕಾಗಿ) ಆತನಿಗೆ ಮುದ್ರೆ ಹಾಕಿದ್ದಾನೆ ಅಂದನು."

1 ಕೊರಿ 9:25 "ಪ್ರವೀಣತೆಗಾಗಿ ಹೋರಾಡುವ ಪ್ರತಿಯೊಬ್ಬನು ಎಲ್ಲಾ ವಿಷಯಗಳಲ್ಲಿ ಮಿತವಾಗಿರುತ್ತಾನೆ ; ಅವರಾದರೋ ನಾಶವಾಗುವ ಕಿರೀಟವನ್ನು ಹೊಂದಿಕೊಳ್ಳುವುದಕ್ಕಾಗಿ ಹೋರಾಡುತ್ತಾರೆ ! ನಾವಾದರೋ ನಾಶವಾಗದ ಕಿರೀಟಕ್ಕಾಗಿಯೇ ಹೋರಾಡುತ್ತೇವೆ."

ಫಿಲಿ 3:14,15 "ಕ್ರಿಸ್ತ ಯೇಸುವಿನಲ್ಲಿ ದೇವರ ಉನ್ನತವಾದ ಕರೆಯುವಿಕೆಯ ಬಹುಮಾನವನ್ನು ಗುರಿ ಮಾಡಿಕೊಂಡು ಓಡುತ್ತಾ ಇದ್ದೇನೆ. ಆದ್ದರಿಂದ ನಮ್ಮಲ್ಲಿ ಪರಿಪೂರ್ಣರಾದವರು ಇದೇ ಅಭಿಪ್ರಾಯ ಉಳ್ಳವರಾಗಿರೋಣ ; ಯಾವುದಾದರೂ ಒಂದು ವಿಷಯದಲ್ಲಿ ನೀವು ಬೇರೆ ಅಭಿಪ್ರಾಯವುಳ್ಳವರಾಗಿದ್ದರೆ, ಅದನ್ನು ದೇವರು ನಿಮಗೆ ತೋರಿಸಿಕೊಡುವನು."

# ಯೇಸು ಕ್ರಿಸ್ತನು ಅಸ್ತಿವಾರವಾಗಿದ್ದಾನೆ

**"**ದೇವರು ನನಗೆ ಕೃಪೆಯನ್ನು ಕೊಟ್ಟ ಪ್ರಕಾರ ನಾನು ಪ್ರವೀಣ ಶಿಲ್ಪಿಯಂತೆ ಅಸ್ತಿವಾರ ಹಾಕಿದೆನು, ಮತ್ತೊಬ್ಬನು ಅದರ ಮೇಲೆ ಕಟ್ಟುತ್ತಾನೆ ; ಪ್ರತಿಯೊಬ್ಬನು ತಾನು ಅದರ ಮೇಲೆ ಹೇಗೆ ಕಟ್ಟುತ್ತಾನೋ ಎಚ್ಚರಿಕೆಯಾಗಿರಬೇಕು, ಯಾಕೆಂದರೆ ಹಾಕಿರುವ ಅಸ್ತಿವಾರವು ಯೇಸುಕ್ರಿಸ್ತನೇ ; ಆ ಅಸ್ತಿವಾರವನ್ನಲ್ಲದೇ ಮತ್ತೊಂದು ಅಸ್ತಿವಾರವನ್ನು ಯಾರೂ ಹಾಕಲಾರರಷ್ಟೇ. ಈ ಅಸ್ತಿವಾರದ ಮೇಲೆ ಚಿನ್ನ, ಬೆಳ್ಳಿ, ಅಮೂಲ್ಯವಾದ ಕಲ್ಲುಗಳು, ಕಟ್ಟಿಗೆ, ಹುಲ್ಲು ಮತ್ತು ಆಪು ಇವುಗಳಲ್ಲಿ ಯಾವುದರಿಂದ ಕಟ್ಟಿದರೂ ಅವನವನ ಕೆಲಸಗಳು ವ್ಯಕ್ತವಾಗುವುದು ; ಯಾಕೆಂದರೆ ಆ ದಿನವು ಬೆಂಕಿಯೊಡನೆ ಪ್ರತ್ಯಕ್ಷವಾಗಿ ಆ ಕೆಲಸವನ್ನು ಸ್ಪಷ್ಟವಾಗಿ ತೋರಿಸುವುದು. ಅವನವನ ಕೆಲಸವೆಂಥದೋ ಆ ಬೆಂಕಿ ಶೋಧಿಸುವುದು. ಒಬ್ಬನು ಆ ಅಸ್ತಿವಾರದ ಮೇಲೆ ಕಟ್ಟಿದ್ದು ಉಳಿದರೆ, ಅವನಿಗೆ ಪ್ರತಿಫಲ ದೊರೆಯುವುದು ; ಒಬ್ಬನು ಕಟ್ಟಿದ್ದು ಸುಟ್ಟುಹೋದರೆ, ಅವನಿಗೆ ನಷ್ಟವಾಗುವುದು ; ಆದರೆ ತಾನಾದರೋ ರಕ್ಷಣೆ ಹೊಂದುವರು. ಆದರೂ ಬೆಂಕಿಯೊಳಗಿನಿಂದ ತಪ್ಪಿಸಿಕೊಂಡವನ**"**

(1 ಕೊರಿ 3 : 10–15)

ಮುಂದಿನ ಪುಟಗಳಲ್ಲಿ ನೀವು ಒಂದು ಕರಪತ್ರವನ್ನು ಕಾಣುವಿರಿ. ಅದನ್ನು ಉಪಯೋಗಿಸಿಕೊಂಡು ನೀವು ವಿಶ್ವಾಸಿಗಳೊಂದಿಗೂ ಅವಿಶ್ವಾಸಿಗಳೊಂದಿಗೂ ಸುವಾರ್ತೆಯನ್ನು ಹಂಚಿಕೊಳ್ಳಬಹುದು. ಸುವಾರ್ತಾ ಸಂದೇಶದ ಅಸ್ತಿವಾರವು ಇದೇ. ಯೇಸು ಹಳೆಯ ಮನುಷ್ಯನಾದ ಆದಮನ ದೇಹದಲ್ಲಿ ಈ ಲೋಕಕ್ಕೆ ಬಂದನು. ಆತನೂ ಸಹಾ ಸೈತಾನನ್ನು ಪಾಪವನ್ನು ಜಯಿಸಿದ ನಂತರ ಯೇಸು ಬಲಿ ಅರ್ಪಿತನಾದನು ; ಇದರಿಂದ ದೇವರು ಪಾಪಿಗಳ ಪಾಪವನ್ನು ಕ್ಷಮಿಸಿ ಬಿಡುಗಡೆ ಮಾಡಲಾಯಿತು. ಆದರೆ ಆತನು ಪಾಪ ಮಾಡದೇ ಇದ್ದದರಿಂದ ದೇವರು ಯೇಸುವನ್ನು ಸಮಾಧಿಯಿಂದ ಹೊಸ ದೇಹದಲ್ಲಿ ಕ್ರಿಸ್ತನಂತೆ ಎಬ್ಬಿಸಿದನು, ಇದೇ ಹೊಸ ಮನುಷ್ಯನು. ನಿನ್ನನ್ನು ಆಳಿಸುವವನು ಯೇಸು ಕ್ರಿಸ್ತನು ಕರ್ತನು ರಕ್ಷಕನೂ ಎಂದು ನಂಬುವುದಾದರೆ, ದೇವರು ನಿನ್ನ ಪೂರ್ವ ಕಾಲದ ಎಲ್ಲಾ ಪಾಪಗಳನ್ನು ಕ್ಷಮಿಸುವುದಕ್ಕೆ ನಂಬಿಗಸ್ತನಾಗಿದ್ದಾನೆ. ಮತ್ತು ನಿನ್ನನ್ನು ನೂತನ ಮನುಷ್ಯನನ್ನಾಗಿ ರೂಪಾಂತರಗೊಳಿಸಲು ಪರಿಶುದ್ಧಾತ್ಮನನ್ನು ಕೊಡುತ್ತಾನೆ.

ಇದು ಬಹು ಮುಖ್ಯ : ವಿಶ್ವಾಸಿಯ ಹಳೇ ಮನುಷ್ಯನು ಪಾಪ ಮಾಡುತ್ತಾನೆ. ಮತ್ತು ಹೊಸ ಮನುಷ್ಯನು ಪಾಪ ಮಾಡುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇದೇ ಕಾರಣದಿಂದಾಗಿ ದೇವರು ಒಳ ಮನುಷ್ಯನನ್ನು ಪರಿಪೂರ್ಣ ಪರಿಶುದ್ಧತೆಗೆ ಆಜ್ಞಾಪಿಸುತ್ತಾನೆ. ರಕ್ಷಣೆಯ ಉದ್ದೇಶವೇ ಕ್ರಿಸ್ತನ ಹಾಗಿರಬೇಕೆಂದು !

ಕರಪತ್ರವನ್ನು ಮುಚ್ಚಿದ ಕೂಡಲೆ ರಕ್ಷಣೆಯನ್ನು ನೋಡಬಹುದು. ಮತ್ತು ಕರಪತ್ರವನ್ನು ತೆರೆದ ಕೂಡಲೆ ಶುದ್ಧೀಕರಣದ ವಿಧಾನವನ್ನು ಕಾಣಬಹುದು. ಪರಿಶುದ್ಧಾತ್ಮನ ಸಹಾಯದಿಂದ ಒಳ ಮನುಷ್ಯನು 'ಶರೀರಭಾವದ' ಕ್ರಿಯೆಗಳನ್ನು ಸಾಯಿಸಬೇಕು. ಮತ್ತು ಆತ್ಮನ ದೈವೀಕ ಸ್ವಭಾವದೊಂದಿಗೆ ಪಾಲು ತೆಗೆದುಕೊಳ್ಳಬೇಕು. ಈ ಕರ ಪತ್ರವು ಈ ಪುಸ್ತಕದ ತತ್ವಗಳನ್ನೂ ಕೂಡ ವಿವರಿಸಲು ಸಹಾಯ ಮಾಡುತ್ತದೆ. ವಿಶ್ವಾಸಿಯು ಇದನ್ನು ಅರ್ಥಮಾಡಿಕೊಂಡು ಅನ್ವಯಿಸಿಕೊಳ್ಳಬೇಕು. ಹೀಗೆ ಅವನು ಕ್ರಿಸ್ತನಂತೆ ದೈವ ಕುಮಾರನಾಗಲು ಸಾಧ್ಯ.

**ಕರಪತ್ರವು ಇದನ್ನೂ ಕೂಡ ವಿವರಿಸುವುದು ನಿಮಗೆ ಉಪಯೋಗವಾಗಬಹುದು :**

* ಮಾನವನ ದೇಹವನ್ನು ಪಾಪ ಹೇಗೆ ಪ್ರವೇಶಿಸಿತು ; ಮತ್ತು ಒಳ ಮನುಷ್ಯನ ಮೇಲೆ ಅದರ ಪ್ರಭಾವ ;

* ಯೇಸು ಹೇಗೆ ಪಾಪದ ದೇಹವನ್ನು ನಾಶಗೊಳಿಸಿದನು ಮತ್ತು ಹೊಸ ದೇಹದಲ್ಲಿ ಎಬ್ಬಿಸಲ್ಪಟ್ಟನು ;

* ಒಬ್ಬ ಪಾಪಿಯು ಹೇಗೆ ಭಕ್ತನಾಗಬಹುದು ;

* ಒಬ್ಬ ಪಾಪಿಯನ್ನು ದೇವರು ರಕ್ಷಿಸುವ ವಿಧಾನ ;

* ದೇವರು ಅನುಸರಿಸುವ ಮಾದರಿ ;

* ನಂಬಿಕೆ ಮತ್ತು ವಿಧೇಯತೆ ರಕ್ಷಣೆಗೆ ಅಗತ್ಯವಾಗಿ ಬೇಕು ;

* ದೇವರಂತೆ ಮಾನವನೂ ಒಂದು ತ್ರಿತ್ವ ;

* ಆತ್ಮವು ಪ್ರಾಣದ ಅಧಿಕಾರವನ್ನು ಹೇಗೆ ಸ್ವಾಧೀನಪಡಿಸಿಕೊಂಡಿತು ;


* ಯೇಸು ಕ್ರಿಸ್ತನು ಈ ಲೋಕದ ಕರ್ತನು ;

* ದೇವರು ದೇಹವನ್ನು ಮೊದಲು ರಕ್ಷಿಸುತ್ತನೆ

* ಯೇಸುವಿನಲ್ಲಿ ಇಡುವ ನಂಬಿಕೆ ನಿನ್ನನ್ನು ಪಾಪದಿಂದ ರಕ್ಷಿಸುತ್ತದೆ ;

* ಸತ್ಯದಲ್ಲಿಡುವ ನಂಬಿಕೆ ಪಾಪ ಮಾಡುವುದರಿಂದ ನಿನ್ನನ್ನು ರಕ್ಷಿಸುತ್ತದೆ ;

ಸಮಂಜಸವಾದ ವಾಕ್ಯಗಳನ್ನು ರಕ್ಷಣೆಯ ಸರಿಯಾದ ಬೆಳವಣಿಗೆಯ ಸ್ಥಿತಿಯಲ್ಲಿಡುವುದು ವಿಶ್ವಾಸಿಗಳಿಗೆ ಕಲಿಸಿಕೊಡಬೇಕು. ತಪ್ಪರ್ಥ ಮಾಡಿಕೊಳ್ಳುವುದು ಮತ್ತು ವಾಕ್ಯಗಳನ್ನು ತಪ್ಪಾಗಿ ಉಪಯೋಗಿಸುವುದು ರಕ್ಷಣೆಯ ಬೆಳವಣಿಗೆ ಸ್ಥಿತಿಯಲ್ಲಿ ವಿಶ್ವಾಸಿಗಳು ಸುಳ್ಳನ್ನು ನಂಬುವ ಹಾಗೆ ಮಾಡುತ್ತದೆ. ಈ ಕಾರಣದಿಂದಲೇ ಅವರ ನಂಬಿಕೆಯು ತಪ್ಪು ಸ್ಥಳದಲ್ಲಿ ಇಡಲಾಗುವುದು. ಮತ್ತು ಅವರು ಪಾಪ ಮಾಡುವುದನ್ನು ನಿಲ್ಲಿಸಲಾಗುವುದಿಲ್ಲ.




A ಮಡಕೆ    ಮಡಕೆಯನ್ನು ಇಲ್ಲಿ ಹಾಕು    B


ಎ ಬಿಂದುವಿನಲ್ಲಿ ಕರಪತ್ರ ಮಡಚು
ನಂತರ ಕೆಂಪು ಸಮುದ್ರವು ಯೊರ್ದಾನ್ ಹೊಳೆಯನ್ನು
ಮರೆಮಾಡುವಂತೆ ಕರಪತ್ರವನ್ನು ಮಡಚು
ಒಂದು ಸಾರಿ ಮುಚ್ಚಿದ ಕೊಡಲೆ ಕೆಳಗಿರುವಂತೆ ಕಾಣುತ್ತದೆ


**ಗಮನಿಸು :**


**ಮುಂದಿನ ಪುಟದಲ್ಲಿ ಎರಡು ಕರಪತ್ರಗಳಿವೆ, ಅವುಗಳನ್ನು ನೀನು ಕತ್ತರಿಸಿ ಮಡಚಿಡು, ಇದನ್ನು ಮೇಲ್ಕಂಡ ಚಿತ್ರದಲ್ಲಿ ವಿವರಿಸಲಾಗಿದೆ.**

ದೇವರು ಯಹೂದ್ಯರಿಗೆ ಹೇಳುವುದೇನೆಂದರೆ, ತಾನು ಅವರನ್ನು ಐಗುಪ್ತದ ಬಂಧನದಿಂದ ಬಿಡಿಸಿ ಹಾಲು ಜೇನು ಹರಿಯುವ ದೇಹಕ್ಕೆ ಕರೆತರುವೆನೆಂದು. ಅವರು ಕೆಂಪು ಸಮುದ್ರವನ್ನು ದಾಟಿದ ಕೂಡಲೆ ಅವರು ಸಿನ್ ಅರಣ್ಯದಲ್ಲಿದ್ದರೆಂಬುದು ಅರಿವಾಯಿತು, ಅದು ಕಾನಾನ್ ಆಗಿರಲಿಲ್ಲ. ದೇವರ ನ್ಯಾಯ ಪ್ರಮಾಣವನ್ನು ಹೊಂದಿದ ಮೇಲೆ ಮಾತ್ರ ದೇವರಿಂದ ಯೋರ್ದಾನಿಗೆ ನಡೆಸಲ್ಪಟ್ಟರು. ಅಲ್ಲಿ ಅವರು ವಾಗ್ದಾನದ ದೇಶವನ್ನು ಪ್ರವೇಶಿಸುವುದಿತ್ತು, ಆದರೆ ಅಪನಂಬಿಕೆಯ ದೆಸೆಯಿಂದ ಕೆಲವರು ದೇವರಿಗೆ ವಿಧೇಯಾರಾಗಲಿಲ್ಲ ಮತ್ತು ಸಿನ್ ಅರಣ್ಯದಲ್ಲಿ ಸತ್ತು ಹೋದರು, ಇತರರು ದೇವರನ್ನು ನಂಬಿದಾಗ ವಾಗ್ದಾನದ ದೇಶವನ್ನು ಪ್ರವೇಶಿಸಿದರು.

ಯೇಸುವನ್ನು ನಂಬುವ ವಿಶ್ವಾಸಿಗಳಿಗೆ ಕೂಡ ಇದೇ ಆಗುವುದು. ಅವರು ಪಾಪದ ದೇಹದಿಂದ ವಿಮುಕ್ತರಾಗಿ ಪಾಪರಹಿತ ದೇಹಕ್ಕೆ ರೂಪಾಂತರವಾದದ್ದು. ಇದನ್ನು ಕರಪತ್ರವನ್ನು ಮುಚ್ಚಿದಾಗ ಕಾಣಬಹುದು. ಆದರೆ ಕರಪತ್ರವನ್ನು ತೆರೆದಾಗ ಅವರು ಸಿನ್ ಅರಣ್ಯದಲ್ಲಿದ್ದಾರೆಂದು ತಿಳಿದುಕೊಳ್ಳುತ್ತಾರೆ. ಅವರು ಆತ್ಮದ ನಿಯಮದ ಕೆಳಗೆ ಇದ್ದು, ಅವರು ಯೋಚಿಸಿದಂತೆ ಇನ್ನು ಪರಿಪೂರ್ಣರಾಗಿರಲಿಲ್ಲ. ದೇವರು ಒಳ ಮನುಷ್ಯನನ್ನು ಪರಿಪೂರ್ಣನಾಗಲು ಆಜ್ಞಾಪಿಸುತ್ತಾನೆ. ದೇವರನ್ನು ನಂಬಿ ಪರಿಶುದ್ಧತೆಯನ್ನು ಪರಿಪೂರ್ಣಗೊಳಿಸಿದವರೆಲ್ಲರೂ ಪ್ರವೇಶಿಸಬಹುದು. ಆದರೆ ದೇವರನ್ನು ನಂಬದೇ ಇರುವವರು ಅವರ ಪಾಪಗಳಲ್ಲಿ ಸಾಯುವರು.




ದೇವರ ನಿಯಮ
ಪಾಪದ ಅರಣ್ಯ
ಆತ್ಮನ ನಿಯಮ
ಪಾಪ ಆತ್ಮ
ಪರಿಶುದ್ಧ ಆತ್ಮ
ಪಾಪದ ಅರಣ್ಯಗಳಲ್ಲಿ


ದೇವರ ನಿಯಮ
ಪಾಪದ ಅರಣ್ಯ
ಆತ್ಮನ ನಿಯಮ
ಪಾಪ ಆತ್ಮ
ಪರಿಶುದ್ಧ ಆತ್ಮ
ಪಾಪದ ಅರಣ್ಯಗಳಲ್ಲಿ

# ದೇವರ ಪುತ್ರರೇ
# ಪಾಪ ಮಾಡಬೇಡಿರಿ

ಈ ವೈಯಕ್ತಿಕ ಅಧ್ಯಯನ ಮಾರ್ಗದರ್ಶಿ ನೀನು ಕಲಿಯಬೇಕಾದ ಮತ್ತು ಒಪ್ಪಿಕೊಳ್ಳಬೇಕಾದ ಮೂಲಭೂತ ತತ್ವಗಳನ್ನೂ ಮತ್ತು ಸತ್ಯಗಳನ್ನೂ ಬಿಚ್ಚಿಡುವುದಕ್ಕೋಸ್ಕರ ಪ್ರತ್ಯೇಕವಾದ ಎರಡು ಸ್ಥಂಬಗಳ ಪದ್ದತಿಯನ್ನು ಅನುಸರಿಸಿದೆ. ಇದರಿಂದ ನೀನು ನಂಬಿಕೆಯಲ್ಲಿ ಬೆಳೆದು, ಪರಿಶುದ್ಧತೆಯನ್ನು ಸಾಧಿಸಬೇಕು : ಎಡಭಾಗದಲ್ಲಿ ಚಿತ್ರಗಳನ್ನು ಕಾಣುವಿ. ಅದರೊಂದಿಗೆ ವಿವರಗಳನ್ನೂ ಹೇಳಿದೆ. ಬಲಗಡೆಯಲ್ಲಿ ವಾಕ್ಯಗಳಿವೆ. ಅವು ಎಡಗಡೆಯ ಸಂದೇಶಕ್ಕೆ ಸಂಬಂಧಿಸಿವೆ. ಈ ಪರಸ್ಪರ ವರ್ತನೆ ಕೆಳಗೆ ಕಾಣುವ ವಿಷಯಗಳನ್ನೊಳಗೊಂಡಿವೆ :

- ✝ ಪಾಪ ಎಂದರೇನು ; ಅದು ಎಲ್ಲಿ ನಿವಸಿಸುತ್ತದೆ ; ಪಾಪದ ನಿಯಮ ಎಂದರೇನು ; 'ಶರೀರಾವ' ಎಂದರೇನು ?
- ✝ ತಿರಿಗಿ ಹುಟ್ಟುವುದೆಂದರೇನು ?
- ✝ ಎರಡು ಬಾಪ್ತಿಸ್ಮಗಳು ; ಎರಡು ಸುನ್ನತಿಗಳೆಂದರೇನು ?
- ✝ ಶುದ್ಧೀಕರಣ ಮತ್ತು ಪರಿಪೂರ್ಣತೆ ಎಂದರೇನು ?
- ✝ ಮನುಷ್ಯನ ಪ್ರಾಣ ಮತ್ತು ಆತ್ಮ ಎಲ್ಲಿ ನಿವಸಿಸುತ್ತವೆ ?
- ✝ ಪರಿಶುದ್ಧಾತ್ಮನು ಎಲ್ಲಿ ನಿವಸಿಸುತ್ತಾನೆ ?
- ✝ ರಕ್ಷಣೆಯ ಮಾರ್ಗ ಮತ್ತು ಮಾದರಿ – ಯೇಸು ಹೇಗೆ ಈ ಲೋಕವನ್ನು ರಕ್ಷಿಸಿದನು ?
- ✝ ಮತ್ತು ಇನ್ನೂ ಅನೇಕ ಸಮಂಜಸವಾದ ವಿಷಯಗಳು.

ಈ ಮಾರ್ಗದರ್ಶಿಯ ಪ್ರತಿಯೊಂದು ಭಾಗವನ್ನು ಶ್ರದ್ಧೆಯಿಂದ ದ್ಯಾನಮಾಡತಕ್ಕದ್ದು ಮತ್ತು ನಂಬಿಕೆಯಿಂದ ತುಂಬುವವರೆವಿಗೆ ಶಾಸ್ತ್ರೋಕ್ತವಾದ ಪ್ರಾರ್ಥನೆಯೊಂದಿಗಿರಬೇಕು. ಆಗ ಮಾತ್ರ ನೀನು ಸಂಪೂರ್ಣ ಅರ್ಥದ ಬಗ್ಗೆ ಸ್ಥಿರವಾಗಿರಬಹುದು ; ದೇವರ ಮಕ್ಕಳೆ ಪಾಪ ಮಾಡಬೇಡಿರಿ.

ಈ ದಿವ್ಯಸಂದೇಶವನ್ನು ಎಲ್ಲರಿಗೂ ಸರಿರಿ !

**ವಚನ : ಅನೇಕ ಸಾಕ್ಷಿಗಳ ಮುಂದೆ ನೀನು ನನ್ನಿಂದ ಕೇಳಿದವುಗಳನ್ನೇ ಇತರರಿಗೆ ಸಹಾ ಬೋಧಿಸಲು ಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು.**
**2 ತಿಮೋ 2 : 2**

ಅಲೆಕ್ಸ್ ಮತ್ತು ರಿಕ್ಕೀ 42 ವರ್ಷಗಳಿಂದಾ ಮದುವೆಯಾಗಿದ್ದಾರೆ. ಮತ್ತು ದೇವರು ಅವರಿಗೆ 4 ಮಕ್ಕಳನ್ನೂ ಮತ್ತು 4 ಮೊಮ್ಮಕ್ಕಳನ್ನೂ ಕೊಟ್ಟು ಆಶೀರ್ವಧಿಸುತ್ತಾನೆ. ಅವರಿಬ್ಬರು ಔಷಧಿ ಶಾಸ್ತ್ರವನ್ನು ಕಲಿತು ಒಂದು ಸಫಲವಾದ ಔಷಧಿಯ ಅಂಗಡಿಯ ಎಜಮಾನರಾದರು. ನಿವೃತ್ತರಾದ ಕೂಡಲೆ ಅವರು ದಕ್ಷಣಿ ಆಫ್ರೀಕಾದ ಜಾರ್ಜ್‌ಗೆ ಸ್ಥಳಾಂತರಿಸಿದರು.

ಬೆಂಜಮಿನ್ ಟ್ರುಜಿಟ್ ಜಿ ಇವತನನು ಮದುವೆಯಾದರು. ಅವರು ನಿವೃತ್ತರಾಗಿ ದಕ್ಷಿಣ ಆಫ್ರೀಕಾದ ಬ್ಲೂಮ್ ಫಾಂಟೀನ್‌ನಲ್ಲಿ ಜೀವಿಸುತ್ತಿದ್ದಾರೆ. ಬೆನ್ ಇ.ಕಾಂ ಆನರ್ಸ್‌ನ್ನಲ್ಲಿ ಪಾಸಾಗಿದ್ದಾನೆ. ಮತ್ತು ಅವರದ್ದೂ ಕೂಡ ಸಫಲವಾದ ವ್ಯಾಪಾರ. ಅವರ ಇಬ್ಬರ ಮಕ್ಕಳು ಮತ್ತು ಮೂವರು ಮೊಮ್ಮಕ್ಕಳು ಆಸ್ಟ್ರೇಲಿಯಾದಲ್ಲಿ ಜೀವಿಸುತ್ತಾರೆ.

ತಿರುಗಿ ಹುಟ್ಟಿದ ನಂತರ ಅಲೆಕ್ಸ್ ಬೈಬಲ್ ಶಾಲೆಗೆ ಹೋದರು. ಮತ್ತು ಒಂದು ಚರ್ಚಿನಲ್ಲಿ ಆಧಾರವಾದಂಥ ಸೇವೆಯನ್ನು ಮಾಡತೊಡಗಿದರು. ಅದೇ ಸಮಯದಲ್ಲಿ ಬೆನ್ ಸ್ಥಳೀಯ ಸಮಾಜಗಳಲ್ಲಿ ಸೇವೆ ಸಲ್ಲಿಸಿದರು. ದೇವರು ಅವರ ಜೀವನದಲ್ಲಿ ನಡುವೆ ಬಂದನು. ಮತ್ತು 14 ವರ್ಷಗಳ ಪರಿಯಂತರದಲ್ಲಿ ಪರಿಶುದ್ಧಾತ್ಮನು ಈ ಪುಸ್ತಕದಲ್ಲಿ ತೋರಿಸಿರುವ ತತ್ವಗಳನ್ನು ಪ್ರಕಟಿಸಿದ್ದಾನೆ. ಅವರ ವೈಯಕ್ತಿಕ ಅನುಭವಗಳು ವಾಕ್ಯದೊಂದಿಗೆ ಅನುಗುಣವಾಗಿರುವುದು ಅವರಿಗೆ ಗೊತ್ತಾಯಿತು. ಮತ್ತು ದೇವರು ತನ್ನ ವಾಕ್ಯವನ್ನು ಅವರಲ್ಲಿ ತೋರ್ಪಡಿಸುತ್ತಾ ಇದ್ದನು.
ಕ್ರೈಸ್ತರು 1 ಯೋಹ 3 ರಲ್ಲಿ ನಂಬಿಕೆ ಇಡುವುದಿಲ್ಲ ಎಂಬುದು ನಮಗೆ ಗೊತ್ತಾಯಿತು. ಒಬ್ಬ ಪಾಪಿಯು ಪಾಪ ಮಾಡಿದರೆ, ಆಗ ಒಬ್ಬ ಭಕ್ತನು ಪಾಪ ಮಾಡುವುದಿಲ್ಲ – ಅದು ಅಷ್ಟು ಸುಲಭ. ದೇವರು ತನ್ನ ಮಗನನ್ನು ವಿಶ್ವಾಸಿಗಳ ಪಾಪದಿಂದ ಬಿಡುಗಡೆ ಮಾಡಲು ಕಳುಹಿಸಿದನು. ಮತ್ತು ತಿರುಗಿ ಹುಟ್ಟುವ ಅನುಭವ ಎಲ್ಲೆಲ್ಲಿಯೂ ಆಗುತ್ತಿರುವುದರಿಂದ ಅದೇ ರುಜುವಾತಾಗಿದೆ. ಈ ಪುಸ್ತಕಕ್ಕೆ ಒಂದೇ ಝರಿ ಮೂಲ ದೇವರ ವಾಕ್ಯವಾಗಿದೆ. ಮತ್ತು ಹೆಚ್ಚು ವಿವರಗಳಿಗಾಗಿ ನಮ್ಮ ವೆಬ್‌ಪೇಜ್ (www.sinnot.org)

9 780639 990101